
ಸಮಗ್ರ ದಾಸ ಸಾಹಿತ್ಯ

ಸಂಪುಟ : ೨೨



ಶ್ರೀ ಪ್ರಸನ್ನ ಶ್ರೀನಿವಾಸದಾಸರ ಕೀರ್ತನೆಗಳು

ಸಮಗ್ರ ದಾಸ ಸಾಹಿತ್ಯ
ಸಂಪುಟ : ೨೨

ಶ್ರೀ ಪ್ರಸನ್ನ ಶ್ರೀನಿವಾಸದಾಸರ ಕೀರ್ತನೆಗಳು

ಸಂಪಾದಕರು
ಪ್ರೊ. ಜಿ. ಅಶ್ವತ್ಥನಾರಾಯಣ

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂಗಳೂರು

SAMAGRA DASA SAHITYA VOLUME - 22 :

Shri Prasanna Srinivasadasara Keerthanegalu, Edited by Prof. G. Aswathanarayana and published by Sri. Y. K. Muddukrishna, Director, Directorate of Kannada and Culture, Kannada Bhavana, J.C. Road, Bangalore - 560 002.

ಪುಟಗಳು : 69 + ೬೫೧

ಪ್ರಥಮ ಮುದ್ರಣ : ೨೦೦೩
ಪ್ರತಿ : ೧೨೫೦.

ಬಿಡಿ ಪ್ರತಿ ಬೆಲೆ : ರೂ. ೬೦=೦೦
ಸಮಗ್ರ ಸಂಪುಟಗಳ ಬೆಲೆ : ರೂ. ೨೪೦೦=೦೦

ಮುದ್ರಣ ನಿರ್ವಹಣೆ :

ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
೩೬, ಕನ್ನಿಂಗ್‌ಹ್ಯಾಮ್ ರಸ್ತೆ
ಬೆಂಗಳೂರು - ೫೬೦ ೦೫೨.

ಮುದ್ರಕರು :

ಮೆ. ಡಾಟ್ಸ್
೧೨೪, ಸುಲ್ತಾನ್‌ಪೇಟೆ
ಬೆಂಗಳೂರು - ೫೬೦ ೦೫೩

ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆ

ಸಂಪಾದಕ ಮಂಡಳಿ

ಕಾರ್ಯನಿರ್ವಾಹಕ ಸಂಪಾದಕರು

ಡಾ. ಶ್ರೀನಿವಾಸ ಹಾವನೂರ

ಡಾ. ಟಿ. ಎನ್. ನಾಗರತ್ನ

ಪ್ರೊ. ವಸಂತ ಕುಷ್ಟಗಿ

ಸದಸ್ಯರು

ಡಾ. ಎಂ. ಎಂ. ಕಲಬುರ್ಗಿ

ಪ್ರೊ. ಎಂ. ರಾಜಗೋಪಾಲಾಚಾರ್ಯ (ಫೆಬ್ರವರಿ '೯೮ ರವರೆಗೆ)

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಮಂದಾಕಿನಿ

ಪ್ರೊ. ಸುಧಾಕರ

ಡಾ. ಬಸವರಾಜ ಸಬರದ

ಸದಸ್ಯ ಕಾರ್ಯದರ್ಶಿ

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುನ್ನುಡಿ

ಹರಿದಾಸ ಸಾಹಿತ್ಯ ಕನ್ನಡ ಸಂಸ್ಕೃತಿ ಪರಂಪರೆಯ ಮಹತ್ವಪೂರ್ಣ ಭಾಗವಾಗಿದೆ. ದೇಶೀಯತೆ ಹಾಗೂ ಗೇಯತೆಗಳೆರಡನ್ನೂ ಮೇಳವಿಸಿಕೊಂಡು, ಕನ್ನಡ ಸಾಹಿತ್ಯವಾಹಿನಿಗೆ ಇದು ಹೊಸತನವನ್ನು ನೀಡಿದೆ. ಮನುಜಮತ, ಸಾಹಿತ್ಯಪಥ ಹಾಗೂ ಭಕ್ತಿಸಿದ್ಧಾಂತದ ತ್ರಿವೇಣಿಯಾಗಿರುವ ಈ ಪ್ರಜಾಸಾಹಿತ್ಯವನ್ನು ಪ್ರಜೆಗಳಿಗೆ ಮುಟ್ಟಿಸುವುದು ಪ್ರಜಾಸತ್ತಾತ್ಮಕ ಸರಕಾರದ ಆದ್ಯ ಕರ್ತವ್ಯವಾಗಿದೆ.

ಕನ್ನಡ ಭಾಷಿಕಶಕ್ತಿಯ ವಿವಿಧ ಆಯಾಮಗಳನ್ನು ಸೆಳೆದು ತೋರಿರುವ, ಸಾಹಿತ್ಯ–ಸಂಗೀತಗಳ ಸಾಮರಸ್ಯವನ್ನು ಮೆರೆದಿರುವ ಈ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ಜಾಗತಿಕ ಮಹತ್ವವನ್ನು ತಂದುಕೊಟ್ಟಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಮಾನವಾನುಕಂಪ, ಸಮಾಜಸುಧಾರಣೆ, ಲೋಕದ ಡೊಂಕುಗಳನ್ನು ನಗೆ ವಿಡಂಬನೆಗಳ ಮೂಲಕ ತಿದ್ದುವ ಕೌಶಲ ದಾಸಸಾಹಿತ್ಯದ ಪ್ರಮುಖ ಲಕ್ಷಣವಾಗಿದೆ.

ಆಧ್ಯಾತ್ಮಿಕ ಸಾಧನೆ, ಅನುಭವ – ಅನುಭಾವಗಳು ದಾಸಸಾಹಿತ್ಯದ ಪ್ರಮುಖ ಅಂಶವಾದರೂ, ಸುತ್ತಮುತ್ತಲಿರುವ ಜೀವನದ ಕಡೆಗೆ, ಮಾನವ ಸ್ವಭಾವದ ಕಡೆಗೆ ಕಣ್ಣು ಹರಿಸಿದ ಹರಿದಾಸರು ಸಾತ್ತ್ವಿಕ ಜೀವನ ನಿರ್ವಹಣೆಗೆ, ಮಾನವನ ಮೇಲ್ಮೆಗೆ, ನೈತಿಕ ಆಚರಣೆಗೆ ಒತ್ತು ನೀಡಿದವರು.

ಹರಿದಾಸ ಸಾಹಿತ್ಯ ಅಪಾರವಾದುದು ಹಾಗೂ ವೈವಿಧ್ಯವಾದುದು. ಈ ವಿಪುಲ ಸಾಹಿತ್ಯರಾಶಿಯನ್ನು ಒಂದೆಡೆ ಕ್ರೋಡೀಕರಿಸಿ, ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಕನ್ನಡ ಜನತೆಗೆ ನೀಡುತ್ತಿದೆ.

ಈ ಯೋಜನೆಗೆ ದುಡಿದ ಸಂಪಾದಕ ಮಂಡಳಿಯ ಶ್ರದ್ಧೆ ಹಾಗೂ ಮಾರ್ಗದರ್ಶನವನ್ನು, ವಿವಿಧ ಸಂಪುಟಗಳ ಸಂಪಾದಕರಾಗಿ ನಾಡಿನ ಅನೇಕ ವಿದ್ವಾಂಸರು ತೋರಿರುವ ಆಸಕ್ತಿ ಹಾಗೂ ನೆರವನ್ನು ಮತ್ತು ಈ ಸಂಪುಟದ ಸಂಪಾದಕರ ಶ್ರಮವನ್ನು ಸ್ಮರಿಸುತ್ತ ಕನ್ನಡ ಜನತೆಯ ಕೈಗೆ ಈ ಮೌಲಿಕ ಪ್ರಕಟಣೆಗಳನ್ನು ಸಂತೋಷದಿಂದ ಅರ್ಪಿಸುತ್ತೇನೆ.

ಎಸ್. ಎಂ. ಕೃಷ್ಣ
ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಎರಡು ಮಾತು

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಕರ್ನಾಟಕದ ಸಾಹಿತ್ಯ, ಸಂಗೀತ, ಸಂಸ್ಕೃತಿಗಳನ್ನು ಪ್ರಭಾವಪೂರ್ಣವಾಗಿ ಸಮೃದ್ಧಿಗೊಳಿಸಿದವರು ಹರಿದಾಸರು. ಬದುಕಿನಲ್ಲಿ ನಿಷ್ಠೆ, ಸಾಹಿತ್ಯದಲ್ಲಿ ಬದುಕಿನ ತತ್ತ್ವಗಳನ್ನು ಅಡಗಿಸಿ ಜನಸಾಮಾನ್ಯರನ್ನು ಉನ್ನತ ಜೀವನದತ್ತ ಉದ್ದೀಪಿಸುವ ಮಹಾಕಾಯಕದಲ್ಲಿ ತೊಡಗಿದವರು ಹರಿದಾಸರು. ಕನ್ನಡ ಸಾಹಿತ್ಯಕ್ಕೆ ಅಪೂರ್ವ ಕೊಡುಗೆಯಾಗಿರುವ ಹರಿದಾಸ ಸಾಹಿತ್ಯ ಸಮಾಜದ ಮೌಢ್ಯವನ್ನು ಬಯಲಿಗೆಳೆದು, ಜಾತಿ, ಮತ, ಪಂಥಗಳನ್ನು ಮೀರಿ ನಿಂತ ಮಾನವೀಯ ಮೌಲ್ಯಗಳನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಿಸಿತು.

ಹರಿದಾಸ ಸಾಹಿತ್ಯಕ್ಕೆ ಪ್ರೇರಣೆ ಭಕ್ತಿಯಾದರೂ, ಕರ್ನಾಟಕ ಸಂಗೀತಕ್ಕೆ ಸಮೃದ್ಧಿಯನ್ನು ನೀಡಿದವರು ಹರಿದಾಸರು. ಗ್ರಾಮ್ಯ ಮತ್ತು ದೇಶ್ಯ ಶಬ್ದಗಳಿಗೆ ಸಾಹಿತ್ಯದ ಮುದ್ರೆಯನ್ನು ಒತ್ತಿ, ಭಾಷೆಗೊಂದು ಪರಿಪಕ್ವತೆಯನ್ನೂ ತಂದುಕೊಟ್ಟರು. ಇಂಥ ಸಾಹಿತ್ಯ ಸಂಪತ್ತನ್ನು ರಕ್ಷಿಸುವುದು ಮತ್ತು ಪ್ರಸಾರ ಮಾಡುವುದು ನಮ್ಮ ಕರ್ತವ್ಯ. ಈ ದೃಷ್ಟಿಯಿಂದ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆಗೆ ಸಮಿತಿಯೊಂದನ್ನು ರಚಿಸಿದ್ದು, ಇದರಲ್ಲಿ ನಾಡಿನ ಅನೇಕ ವಿದ್ವಾಂಸರು ಸಂಪುಟ ಸಂಪಾದಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಸಂಪುಟಗಳು ಹೊರಬರಲು ಕಾರಣರಾದ ಸಂಪಾದಕ ಮಂಡಳಿಯ ಸದಸ್ಯರಿಗೆ ಹಾಗೂ ಈ ಸಂಪುಟದ ಸಂಪಾದಕರಿಗೆ ನನ್ನ ಕೃತಜ್ಞತೆಗಳು.

ದಾಸರು ತಮ್ಮ ಸಾಹಿತ್ಯದಲ್ಲಿ ಸಾರ್ವಕಾಲಿಕ ಮೌಲ್ಯಗಳನ್ನು ಉಳಿಸಿ ಹೋಗಿದ್ದಾರೆ. ನಮ್ಮ ಸಾಮಾಜಿಕ ಜೀವನವನ್ನು ರೂಪಿಸುವಲ್ಲಿ ಈ ಕೀರ್ತನೆಗಳು ಮೌಲಿಕವಾದುವು. ಕನ್ನಡ ಜನತೆ ಈ ಕೃತಿಯ ಪ್ರಯೋಜನವನ್ನು ಪಡೆದರೆ ಪಟ್ಟ ಶ್ರಮ ಸಾರ್ಥಕವಾಗುತ್ತದೆ.

ರಾಣಿ ಸತೀಶ್

ಕನ್ನಡ ಮತ್ತು ಸಂಸ್ಕೃತಿ ಸಚಿವರು

ಯೋಜನೆಯನ್ನು ಕುರಿತು

ಕನ್ನಡ ಸಾಹಿತ್ಯ ಚರಿತ್ರೆಯ ಸಿರಿವಂತಿಕೆಯಲ್ಲಿ ಕೀರ್ತನ ಸಾಹಿತ್ಯದ ಕೊಡುಗೆ ವಿಪುಲವಾದುದು; ವೈಶಿಷ್ಟ್ಯಪೂರ್ಣವಾದುದು. ಈ ಸಮಗ್ರ ಸಾಹಿತ್ಯದ ಸಂಗ್ರಹ ಮತ್ತು ಪ್ರಕಾಶನದ ಕಾರ್ಯ ಪೂರ್ಣವಾಗಿ ಆಗಿರಲಿಲ್ಲ. ಇದನ್ನು ಮನಗಂಡ ಸರ್ಕಾರ ಸಮಗ್ರ ದಾಸ ಸಾಹಿತ್ಯ ಪ್ರಕಟಣೆಯ ಕಾರ್ಯವನ್ನು ಕೈಗೆತ್ತಿಕೊಂಡಿತು.

ಸುಮಾರು ಒಂದು ನೂರ ಮೂವತ್ತೊಂಬತ್ತು ಜನ ದಾಸರ ಸುಮಾರು ಹದಿನಾರು ಸಾವಿರ ಕೀರ್ತನೆಗಳ ಬೃಹತ್ ಸಾಹಿತ್ಯ ಸಾಮಗ್ರಿ ದೊರಕಿತು. ಹೀಗೆ ಸಾಂಪ್ರದಾಯಿಕ ರೀತಿಯಲ್ಲಿ ಸಂಗ್ರಹಿಸಿ, ಸಂಪಾದಿಸಿದ ಕೀರ್ತನ ಸಾಹಿತ್ಯವನ್ನು ಸಂಪುಟಗಳಲ್ಲಿ ಮುದ್ರಿಸುವುದು ಕಷ್ಟವೇನಾಗಿರಲಿಲ್ಲ. ಆದರೆ, ಅದನ್ನು ಮಾಹಿತಿ ತಂತ್ರಜ್ಞಾನದ ಇವತ್ತಿನ ಸಂದರ್ಭದಲ್ಲಿ ಬಹು ಉಪಯೋಗಿ ನೆಲೆಯಲ್ಲಿ ಬಹುಮಾಧ್ಯಮದಲ್ಲಿ ಹೊರತರಬೇಕೆಂಬ ಕನಸು ರೋಮಾಂಚಕಾರಿ ಅನುಭವವೇ ಸರಿ. ಇದನ್ನು ಕೃತಿ ರೂಪಕ್ಕಿಳಿಸುವ ಹಾದಿಯಲ್ಲಿ ಎದುರಾದ ತಾಂತ್ರಿಕ ಸವಾಲು ಬಹು ಕ್ಲಿಷ್ಟಕರವಾಗಿಯೇ ಕಂಡಿತು.

ದಿಟ, ಈ ಸಮಗ್ರ ಸಾಹಿತ್ಯವನ್ನು ಕೇವಲ ಮುದ್ರಣದಲ್ಲಷ್ಟೇ ಅಲ್ಲ, ಆಯ್ದ ಕೀರ್ತನೆಗಳನ್ನು ಗಾಯನಕ್ಕೆ ಅಳವಡಿಸಿ, ಸಿ.ಡಿ. ಮತ್ತು ಅಂತರ್ಜಾಲದಲ್ಲಿ ಹೊರತರ ಬೇಕೆಂದಾಗ ಬಳಕೆದಾರರ ಆವಶ್ಯಕತೆಯನ್ನು ಆಧರಿಸಿ ತಯಾರಿಸುವ ಅಗತ್ಯ ಇತ್ತು. ಆದರೆ ಇವುಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಸರ್ಚ್ ಎಂಜಿನ್ (ಹುಡುಕುವಿಕೆ) ಇಲ್ಲದಿರುವುದು ಒಂದು ತಾಂತ್ರಿಕ ಸಮಸ್ಯೆಯೇ ಆಯಿತು.

ಈ ರೀತಿಯ ಪ್ರಯತ್ನ ಕನ್ನಡ ಭಾಷೆಯಲ್ಲಿ ಹಿಂದೆಂದೂ ಆಗದಿದ್ದುದರಿಂದ ತಂತ್ರಾಂಶವನ್ನು ಹೊಸದಾಗಿಯೇ ಅಭಿವೃದ್ಧಿ ಪಡಿಸಬೇಕಾದ ಸವಾಲನ್ನು ಕೈಗೆತ್ತಿ ಕೊಳ್ಳಲಾಯಿತು. ಇದಕ್ಕಾಗಿ ಕನ್ನಡ ಗಣಕ ಪರಿಷತ್ತು, ರಾಷ್ಟ್ರೀಯ ಮಾಹಿತಿ ಕೇಂದ್ರ (ಎನ್ಐಸಿ), ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ, ಮಹಾಭಾರತ ಸಂಶೋಧನಾ ಪ್ರತಿಷ್ಠಾನ ಮುಂತಾದ ಹಲವಾರು ತಂತ್ರಾಂಶ ಸಂಸ್ಥೆಗಳೊಂದಿಗೆ ನಿರಂತರ ಸಮಾಲೋಚನೆ, ಚಿಂತನೆಗಳನ್ನು ನಡೆಸಲಾಯಿತು.

ಹೀಗೆ ಸಾಹಿತ್ಯ ಸಂಗ್ರಹ, ಸಂಪಾದನೆ, ಸಂಗೀತ ಸಂಯೋಜನೆ, ಧ್ವನಿಮುದ್ರಣ, ಬಹುಮಾಧ್ಯಮಕ್ಕೆ ಅಳವಡಿಸುವ ತಾಂತ್ರಿಕ ಕುಶಲತೆಯ ನಿರಂತರ ಕಾರ್ಯಾನುಷ್ಠಾನಕ್ಕೆ ಸಂಪಾದಕ ಮಂಡಳಿ ಸದಸ್ಯರು, ಸಂಪುಟ ಸಂಪಾದಕರು, ಇಲಾಖಾ ಅಧಿಕಾರಿಗಳು, ತಂತ್ರಜ್ಞರು, ಕೋರ್ ಸಮಿತಿ ಸದಸ್ಯರು, ಸಂಗೀತ ನಿರ್ದೇಶಕರು, ಗಾಯಕರು – ಈ ಎಲ್ಲರ ಪರಿಶ್ರಮ ಅಗಾಧವಾಗಿ ದೊರಕಿದೆ. ಈ ಶ್ರಮದ ಫಲವಾಗಿ ಬಹುಮಾಧ್ಯಮದಲ್ಲಿ ಸಮಗ್ರ ದಾಸ ಸಾಹಿತ್ಯ ಯೋಜನೆಯ ಬೃಹತ್ ಕಾರ್ಯ ಸಾಕಾರಗೊಂಡಿದೆ.

ಈ ವಿಪುಲ ಸಾಹಿತ್ಯವನ್ನು ಕನ್ನಡ ಅಕ್ಷರಜ್ಞಾನಿಗಳು ಪುಸ್ತಕ ರೂಪದಲ್ಲಿಯೂ ಬಹುಗಾತ್ರದ ಸಾಹಿತ್ಯವನ್ನು ಕೈ ಅಳತೆಯ ಸಿ.ಡಿ. ರೂಪದಲ್ಲಿಯೂ ಈಗ ಪಡೆಯಬಹುದಾಗಿದೆ. ಅಲ್ಲದೆ, ಅಂತರ್ಜಾಲದ ಮೂಲಕ ವಿಶ್ವದ ಯಾವುದೇ ಮೂಲೆಯಲ್ಲಿರುವ ಆಸಕ್ತ ಜನತೆ ಕುಳಿತಲ್ಲಿಯೇ ಆರಾಮವಾಗಿ ವೀಕ್ಷಿಸುವ, ಕೇಳುವ ಹಾಗೂ ಕನ್ನಡ ಅಕ್ಷರ ಜ್ಞಾನವಿರದ ಭಾಷಿಕರು ಸಹಿತ ಸಂಗೀತವನ್ನು ಕೇಳಿ ಆಸ್ವಾದಿಸುವ ಅವಕಾಶವನ್ನು ಏಕಕಾಲದಲ್ಲಿ ಕಲ್ಪಿಸಲಾಗಿದೆ. ಪ್ರಕಾಶನದ ಇತಿಹಾಸದಲ್ಲಿಯೇ ದಾಖಲನೀಯವಾದ ಈ ಕಾರ್ಯ ಮುಂದೆ ಸರ್ಕಾರಿ ಸಂಸ್ಥೆಗಳಿಗಾಗಲಿ, ಖಾಸಗಿ ಸಂಸ್ಥೆಗಳಿಗಾಗಲಿ ಮಾದರಿಯಾಗಬಹುದೆಂದು ನಂಬಲಾಗಿದೆ.

ನಮ್ಮ ಸಂಸ್ಕೃತಿಯನ್ನು ಬಿತ್ತರಿಸಲು ನಾಲ್ಕು ಗೋಡೆಗಳೊಳಗಿನ ರಂಗ ಮಂದಿರಗಳು, ವೇದಿಕೆಗಳು ಅಗತ್ಯವಿದೆ ದಿಟ. ಆದರೆ ಭವಿತವ್ಯದಲ್ಲಿ ವಿಶ್ವದ ಜನರನ್ನು ತಲಪಲು ಮತ್ತು ಮುಖ್ಯವಾಗಿ ಯುವಜನಾಂಗಕ್ಕೆ ನಮ್ಮ ಸಾಂಸ್ಕೃತಿಕ ಕ್ಷಿತಿಜದ ವಿಸ್ತಾರವನ್ನು ಪರಿಚಯಿಸಲು ಸೂಕ್ಷ್ಮ ಸಂವೇದನಾಶೀಲವಾದ ಸಾಹಿತ್ಯವನ್ನು ಬಹುಮಾಧ್ಯಮದಲ್ಲಿ ಅಳವಡಿಸುವುದು ಅತ್ಯಾವಶ್ಯಕ. ಈ ನಿಟ್ಟಿನಲ್ಲಿ ಇದೊಂದು ವಿನೂತನ ಪ್ರಯೋಗ; ಈ ಪ್ರಯೋಗದ ಫಲ ಎಲ್ಲರಿಗೂ ಲಭ್ಯವಾಗಲೆಂಬುದು ನಮ್ಮ ಆಶಯ.

ಸಿ. ಎಸ್. ಕೇದಾರ್

ಸರ್ಕಾರದ ಕಾರ್ಯದರ್ಶಿ

ಪ್ರಕಾಶಕರ ಮಾತು

ಕರ್ನಾಟಕದ ಧಾರ್ಮಿಕ, ಸಾಂಸ್ಕೃತಿಕ ಇತಿಹಾಸದಲ್ಲಿ ಹರಿದಾಸರ ಸ್ಥಾನ ವಿಶಿಷ್ಟವಾದದ್ದು. ಸಾವಿರಾರು ವರ್ಷಗಳಿಂದ ಭಾರತದಲ್ಲಿ ಅವಿರತವಾಗಿ ಹರಿದುಬಂದ ಜೀವನಮೌಲ್ಯಗಳನ್ನು ಜನಸಾಮಾನ್ಯರ ಆಡುಭಾಷೆಯಲ್ಲಿ ಮುಟ್ಟಿಸಿ, ಲೌಕಿಕ ವಿಡಂಬನೆಯ ಮೂಲಕ ಅವರ ಮಾನಸಿಕ ವಿಕಾಸವನ್ನು ಯಶಸ್ವಿಯಾಗಿ ಸಾಧಿಸಿದವರು ಹರಿದಾಸರು. ಪಾಂಡಿತ್ಯ, ಲೋಕಾನುಭವಗಳ ಹಿನ್ನೆಲೆಯಿಂದಾಗಿ, ಆಡುಭಾಷೆಯ ಸೊಗಡಿನಿಂದಾಗಿ ಇವರು ಹಾಡಿದ್ದೆಲ್ಲ ಸಾಹಿತ್ಯವಾಯಿತು, ಕಾವ್ಯವಾಯಿತು, ಕೇಳುಗರನ್ನು ಸೆರೆಹಿಡಿಯಿತು. ಗೇಯಗುಣವುಳ್ಳ, ನೃತ್ಯಕ್ಕೆ ಅಳವಡುವ, ಛಂದೋಬದ್ಧವಾದ, ಜನತೆಯ ಮಧ್ಯದಲ್ಲಿಯೇ ಸಂದರ್ಭಾನುಸಾರ ಹುಟ್ಟಿದ ಹರಿದಾಸ ಸಾಹಿತ್ಯ ವೈಶಿಷ್ಟ್ಯಪೂರ್ಣವೆನಿಸಿತು. ಕನ್ನಡ ವಾಙ್ಮಯದಲ್ಲಿ ದಾಸಸಾಹಿತ್ಯ ಒಂದು ವಿಶೇಷ ಸ್ಥಾನ ಪಡೆಯಿತು. ಹೀಗೆ ಸಾಹಿತ್ಯ, ಸಂಗೀತ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ದಾಸಸಾಹಿತ್ಯದ ಕೊಡುಗೆ ಗಣನೀಯವಾದುದು.

ಸುಮಾರು ನೂರಮೂವತ್ತೊಂಬತ್ತು ಜನ ದಾಸರು ಆಗಿಹೋಗಿದ್ದು, ಅವರ ಕೀರ್ತನೆಗಳ ಸಂಖ್ಯೆ ಸುಮಾರು ಹದಿನಾರು ಸಾವಿರಕ್ಕೂ ಅಧಿಕ. ಈವರೆಗೆ ಕೆಲವು ದಾಸರ ಕೀರ್ತನೆಗಳು ಬಿಡಿ ಬಿಡಿಯಾಗಿ ಪ್ರಕಟವಾಗಿವೆಯಾದರೂ, ಇನ್ನೂ ಅನೇಕ ದಾಸವರೇಣ್ಯರ ಕೀರ್ತನೆಗಳು ಹಸ್ತಪ್ರತಿ ರೂಪದಲ್ಲಿಯೇ ಉಳಿದುಕೊಂಡಿವೆ. ಅವುಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸಿ, ಸಮಗ್ರ ದಾಸಸಾಹಿತ್ಯವು ಕನ್ನಡಿಗರಿಗೆ ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಸಮಗ್ರ ದಾಸಸಾಹಿತ್ಯ ಪ್ರಕಟಣೆಯ ಬೃಹತ್ ಯೋಜನೆಯನ್ನು ಹಾಕಿಕೊಂಡಿದೆ. ಈ ಉದ್ದೇಶಕ್ಕಾಗಿ ಕಾರ್ಯನಿರ್ವಾಹಕ ಸಂಪಾದಕರಾದ ಡಾ. ಶ್ರೀನಿವಾಸ ಹಾವನೂರ, ಡಾ. ಟಿ. ಎನ್. ನಾಗರತ್ನ, ಪ್ರೊ. ವಸಂತ ಕುಷ್ಟಗಿ, ಸದಸ್ಯರಾದ ಡಾ. ಎಂ. ಎಂ. ಕಲಬುರ್ಗಿ, ಡಾ. ಬಸವರಾಜ ಸಬರದ, ಪ್ರೊ. ಸುಧಾಕರ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ಡಾ. ಮಂದಾಕಿನಿ (ಈಗ ದಿವಂಗತರು) ಹಾಗೂ ಪ್ರೊ. ಎಂ. ರಾಜಗೋಪಾಲಾಚಾರ್ಯ (ಈಗ ದಿವಂಗತರು) ಅವರನ್ನೊಳಗೊಂಡಂತೆ ಸಂಪಾದಕ ಸಮಿತಿಯನ್ನು ರಚಿಸಲಾಯಿತು. ಇಲಾಖಾ ನಿರ್ದೇಶಕರು ಸಮಿತಿಯ ಸದಸ್ಯ-ಕಾರ್ಯದರ್ಶಿಗಳಾಗಿರುತ್ತಾರೆ. ಇದರಲ್ಲಿ ನಾಡಿನ ಅನೇಕ ವಿದ್ವಾಂಸರ ನೆರವನ್ನು ಬಳಸಿಕೊಳ್ಳಲಾಗುತ್ತಿದೆ.

ಈ ಯೋಜನೆಯನ್ವಯ 'ಸಮಗ್ರ'ವಾಗಿ ದಾಸರ ಕೀರ್ತನೆಗಳನ್ನು ಸಂಗ್ರಹಿಸಿ ಪ್ರಕಟಿಸುವುದಿದ್ದರೂ ಕೆಲವು ಹರಿದಾಸರ ರಚನೆಗಳು ಬಿಟ್ಟು ಹೋಗಿರುವ ಸಾಧ್ಯತೆ ಇರುತ್ತದೆ. ಅಂಥ ಹರಿದಾಸರ ಕೀರ್ತನೆಗಳು ದೊರೆತಲ್ಲಿ ಮುಂದೆ ಪರಿಷ್ಕರಣ ಸಂದರ್ಭದಲ್ಲಿ ಪ್ರಕಟಿಸಲು ಕ್ರಮಕೈಗೊಳ್ಳಲಾಗುವುದು.

ಸಮಗ್ರ ದಾಸಸಾಹಿತ್ಯ ಯೋಜನೆಯಡಿ ಪ್ರಕಟವಾಗುತ್ತಿರುವ ಆಯಾ ಸಂಪುಟಗಳ ಸಂಪಾದಕರಿಗೆ ಹಾಗೂ ಈ ಕಾರ್ಯದಲ್ಲಿ ನಮ್ಮೊಡನೆ ಸಹಕರಿಸಿದ ಸಂಪಾದಕ ಮಂಡಳಿಯವರಿಗೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ, ಶ್ರೀ ಸಿ. ಸೋಮಶೇಖರ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ ಅವರಿಗೆ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ. ಎಸ್. ವಿಜಯಲಕ್ಷ್ಮಿ ಹಾಗೂ ಡಾ. ಮಂಜುಳ ಅವರಿಗೆ ಕೃತಜ್ಞತೆಗಳು.

ಹರಿದಾಸರ ಕೀರ್ತನೆಗಳನ್ನು ಆಯ್ದು ಸಂಗೀತಕ್ಕೆ ಆಯ್ಕೆ ಮಾಡಲು ನೆರವಾದ ಶ್ರೀ ವಿನಾಯಕ ತೊರವಿ, ಶ್ರೀ ಮೈಸೂರು ವಿ. ಸುಬ್ರಹ್ಮಣ್ಯ, ಶ್ರೀ ಆರ್. ಕೆ. ಪದ್ಮನಾಭ, ಶ್ರೀ ಬಾನಂದೂರು ಕೆಂಪಯ್ಯ ಹಾಗು ಶ್ರೀಮತಿ ಮಾಲತಿ ಶರ್ಮರವರಿಗೆ, ಮತ್ತು ಈ ಯೋಜನೆಯಲ್ಲಿ ಪಾಲ್ಗೊಂಡ ಎಲ್ಲ ಸಂಗೀತ ನಿರ್ದೇಶಕರಿಗೆ ಹಾಗೂ ಗಾಯಕರಿಗೆ ಕೃತಜ್ಞತೆಗಳು.

ಸಂಪುಟಗಳನ್ನು ಮುದ್ರಣಕ್ಕೆ ಅನುಗೊಳಿಸುವ ಕಾರ್ಯ ನಿರ್ವಹಿಸಿದ ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಅನಂತ ಪದ್ಮನಾಭರಾವ್ ಮತ್ತು ಪ್ರೊ. ನಾ. ಗೀತಾಚಾರ್ಯ ಇವರಿಗೂ ಸಹ ಕೃತಜ್ಞತೆಗಳು.

ಈ ಸಮಗ್ರ ದಾಸಸಾಹಿತ್ಯ ಸಂಪುಟಗಳ ಮುದ್ರಣ ಕಾರ್ಯವನ್ನು ನಿರ್ವಹಿಸಿದ ಎಂ.ಎಸ್.ಐ.ಎಲ್. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಅಶೋಕ್ ವಿ. ಡೇವಿಡ್ ಹಾಗೂ ವಿಶೇಷಾಧಿಕಾರಿಗಳಾದ ಶ್ರೀ ಎಂ. ರವಿಶಂಕರ್ ಅವರಿಗೆ ನನ್ನ ಕೃತಜ್ಞತೆಗಳು. ಸಮಗ್ರ ದಾಸಸಾಹಿತ್ಯವನ್ನು ಪ್ರಕಟಿಸುವುದು ಹರಿದಾಸರಿಗೂ ಕನ್ನಡ ಜನತೆಗೂ ನಾವು ಸಲ್ಲಿಸಬೇಕಾದ ಸೇವೆಯೆಂದು ಭಾವಿಸಿದ್ದೇನೆ. ಪಂಡಿತ–ಪಾಮರರನ್ನು ಏಕಕಾಲಕ್ಕೆ ಆಕರ್ಷಿಸಬಲ್ಲ ವಿಶಿಷ್ಟ ಸಾಮರ್ಥ್ಯ ದಾಸಸಾಹಿತ್ಯದ್ದು ಎಂದರೆ ತಪ್ಪಾಗಲಾರದು. ಕನ್ನಡ ಜನತೆಯು ಈ ಪ್ರಕಟಣೆಯ ಸದುಪಯೋಗ ಪಡೆದುಕೊಂಡೀತು ಎಂದು ಆಶಿಸಿದ್ದೇನೆ.

ವೈ. ಕೆ. ಮುದ್ದುಕೃಷ್ಣ

ನಿರ್ದೇಶಕರು

ಸಂಪಾದಕ ಮಂಡಳಿಯ ನುಡಿ

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಕನ್ನಡಜನಕ್ಕೆ ಪಂಪನಂತಹ ಪ್ರೌಢಕವಿಗಳು ಗೊತ್ತಿರಲಿ ಬಿಡಲಿ, ದಾಸರ ಹಾಡುಗಳು ಗೊತ್ತಿಲ್ಲದವರು ಮಾತ್ರ ಅಪರೂಪ. ಜನರ ಮೇಲೆ ನಿರಂತರ ಪ್ರಭಾವವನ್ನು ಬೀರುವ ಜನಸಮ್ಮುಖತೆ ದಾಸಸಾಹಿತ್ಯದ ಪ್ರಮುಖ ಲಕ್ಷಣಗಳಲ್ಲಿ ಒಂದು. ಇಂತಹ ದಾಸರ ಹಾಡುಗಳು ಜ್ಞಾನಸಂಪದ ಹಾಗೂ ಭಕ್ತಿಸಂಪದಗಳ ಸಾರ್ವತ್ರಿಕ ಹಬ್ಬುಗೆಗೆ ಸಾಧನವಾಗಿ ಪರಿಣಮಿಸಿವೆ.

ಕನ್ನಡ ನಾಡಿನಾದ್ಯಂತ ಎಲ್ಲ ಸ್ತರಗಳಲ್ಲಿ ವರ್ಗ-ವರ್ಣಗಳ ಭೇದವಿಲ್ಲದೆ, ಜನರ ಬಾಯಲ್ಲಿ ಉಳಿದುಕೊಂಡು ಬಂದ ಈ ಸಾಹಿತ್ಯವನ್ನು ಮೊಟ್ಟಮೊದಲಿಗೆ ಪ್ರಕಟಿಸಿದ ಶ್ರೇಯಸ್ಸು ಬಾಸೆಲ್ ಮಿಶನ್ನಿನ ರೆ. ಹರ್ಮನ್ ಮೊಗ್ಲಿಂಗ್‌ರಿಗೆ ಸೇರುತ್ತದೆ. ಇವರು ತಮ್ಮ ಇಲ್ಲಿಯ ವಾಸ್ತವ್ಯದಲ್ಲಿ (೧೮೩೬ರಿಂದ) ನಾಲ್ಕುನೂರಕ್ಕೂ ಮೀರಿದ ದಾಸರಪದಗಳನ್ನು ಸಂಗ್ರಹಿಸಿದ್ದರು. ಅವುಗಳಲ್ಲಿಯ ಒಂದು ನೂರು ಪದಗಳ ಸಂಗ್ರಹವನ್ನು 'ದಾಸರ ಪದಗಳು' ಎಂಬ ಹೆಸರಿನಿಂದ ಕ್ರಿ. ಶ. ೧೮೫೦ರಲ್ಲಿ, ಮತ್ತೆ ಕ್ರಿ.ಶ. ೧೮೫೨ರಲ್ಲಿ ೧೭೪ ಪದಗಳುಳ್ಳ ಸಂಕಲನವನ್ನು ಮಂಗಳೂರಿನಲ್ಲಿ ಕಲ್ಲಚ್ಚಿನಲ್ಲಿ ಛಾಪಿಸಿ ಪ್ರಕಟಿಸಿದರು. ಈ ವಿಷಯವನ್ನು ೧೮೭೫ರಲ್ಲಿ ಪ್ರಕಟವಾದ ಇಂಡಿಯನ್ ಎಂಟಿಕ್ವೆರಿಯ 'On the Karnataka Vaishnava Dasas' - ಎಂಬ ತಮ್ಮ ಲೇಖನದಲ್ಲಿ ರೆ. ಕಿಟೆಲ್ಲರು ಕಾಣಿಸಿದ್ದಾರೆ. ಇದರಿಂದ ಕಿಟೆಲ್‌ರಂಥವರು ಕೂಡ ದಾಸರ ಪದಗಳ ಮಹತ್ವವನ್ನು ಮತ್ತು ಜನಪ್ರಿಯತೆಯನ್ನು ಗುರುತಿಸಿದ್ದರು ಎಂಬುದು ಗೊತ್ತಾಗುತ್ತದೆ. ಪ್ರಾಸಂಗಿಕವಾಗಿ ಇದುವೇ ದಾಸಸಾಹಿತ್ಯದ ಕುರಿತಾದ ಮೊದಲ ಲೇಖನವೂ ಆಗಿದೆ.

ಆ ನಂತರದ ದಿನಗಳಲ್ಲಿ ಈ ಕ್ಷೇತ್ರದಲ್ಲಿ ಹಲವಾರು ಜನರು ಕೆಲಸವನ್ನು ಮುಂದುವರಿಸಿದರು. ರೆ. ಮೊಗ್ಲಿಂಗರ 'ದಾಸರ ಪದಗಳು' ಇದರ ದ್ವಿತೀಯ ಆವೃತ್ತಿಯನ್ನು ೧೮೭೧ರಲ್ಲಿ ಜಾನ್ ಗ್ಯಾರೆಟರ ಸೂಚನೆಯ ಮೇರೆಗೆ ಹೊಳಕಲ್ಲು ನರಸಿಂಹಯ್ಯನವರು ಬೆಂಗಳೂರಿನಿಂದ ಪ್ರಕಟಿಸಿದರು. ೧೮೭೩ರಲ್ಲಿ ಹಿಂದೂ ಭಾಷಾ ಸಂಜೀವಿನೀ ಮುದ್ರಣ ಶಾಲೆಯಲ್ಲಿ 'ಹರಿಭಜನೆ, ಕೀರ್ತನೆ' ಎಂಬ ಸಂಗ್ರಹ ಪ್ರಕಟವಾಯಿತು. ೧೮೯೦ನೆಯ ದಶಕದಲ್ಲಿ ಬೆಳಗಾವಿಯ ಆಬಾಜಿ ರಾಮಚಂದ್ರ ಸಾವಂತ ಇವರು ದೇವನಾಗರಿ ಲಿಪಿಯಲ್ಲಿ "ದಾಸರ ಪದಗಳ ಸಂಗ್ರಹವು" ಎಂಬುದಾಗಿ ಎರಡು ಭಾಗಗಳಲ್ಲಿ ಪ್ರಕಟಿಸಿದರು. ಆ ದಶಕದಲ್ಲಿಯೇ ಮಡಕಶಿರಾದ ಬಾಲಕೃಷ್ಣರಾಯರು ೧೮೯೪ರಲ್ಲಿ 'ಪುರಂದರ ದಾಸರು ಮೊದಲಾದ ಅಪರೋಕ್ಷ ಜ್ಞಾನಿಗಳ ಪದಗಳು' ಎಂಬ ಪುಸ್ತಕವನ್ನು ತೆಲುಗು ಲಿಪಿಯಲ್ಲಿ ಮುದ್ರಿಸಿದ್ದು ಗಮನಾರ್ಹವಾಗಿದೆ. ಮತ್ತೆ ೧೯೦೮ರಲ್ಲಿ ಅವರೇ ಇನ್ನೊಂದು ಸಂಕಲನವನ್ನೂ ಪ್ರಕಟಿಸಿದ್ದಾರೆ.

ಹೀಗೆ ೧೮೫೦ರಷ್ಟು ಹಿಂದೆಯೇ ಪ್ರಾರಂಭವಾದ ದಾಸರ ಪದಗಳ ಸಂಗ್ರಹ ಹಾಗೂ ಪ್ರಕಟಣೆಯ ಕಾರ್ಯಕ್ಕೆ ಒಂದು ವ್ಯವಸ್ಥಿತ ರೂಪವನ್ನು ಕೊಟ್ಟು, ನಾಡಿನಾದ್ಯಂತ ಹರಿದು ಹಂಚಿಹೋದ, ಜನರ ಬಾಯಲ್ಲಿ ಉಳಿದುಕೊಂಡು ಬಂದ ವಿವಿಧ ದಾಸರ ಪದಗಳನ್ನು ಸಂಗ್ರಹಿಸಿ ಪ್ರಕಟಿಸಲು ಪ್ರಾರಂಭಿಸಿದವರು ಉಡುಪಿಯ ಪಾವಂಜೆ ಗುರುರಾಯರು. ಅವರು ೧೯೧೪ರಲ್ಲಿ ಪ್ರಕಟಿಸಿದ ಮೊದಲ ಸಂಕಲನದ ಹೆಸರು 'ಉದಯರಾಗವು' ಎಂಬುದು. ಅನಂತರದ ದಿನಗಳಲ್ಲಿ ಪುರಂದರದಾಸರ ಕೀರ್ತನೆಗಳನ್ನು ಐದು ಸಂಪುಟಗಳಲ್ಲಿ ಮತ್ತು ಉಳಿದ ದಾಸರ ಕೃತಿಗಳನ್ನು ಬಿಡಿಬಿಡಿಯಾಗಿ ಪ್ರಕಟಿಸಿದರು. ಹೀಗೆ ನಾಡಿನ ದಕ್ಷಿಣದ ಅಂಚಿನ ಉಡುಪಿಯಲ್ಲಿ ಪ್ರಾರಂಭವಾದ ಕೆಲಸವನ್ನು ಉತ್ತರದ ಅಂಚಿನ ಲಿಂಗಸುಗೂರಿನಲ್ಲಿ ಗೊರಾಬಾಳ ಹಣಮಂತರಾಯರು 'ವರದೇಂದ್ರ ಸಾಹಿತ್ಯ ಮಾಲೆ'ಯನ್ನು ಪ್ರಾರಂಭಿಸಿ ತಮ್ಮ ಇಡೀ ಜೀವನವನ್ನೇ ಹರಿದಾಸ ಸಾಹಿತ್ಯದ ಸಂಗ್ರಹ ಮತ್ತು ಪ್ರಕಟಣೆಗೆ ಮೀಸಲಾಗಿರಿಸಿದರು. ಇತ್ತ ಮೈಸೂರು ಭಾಗದಲ್ಲಿ ಸುಪ್ರಸಿದ್ಧ ದಾಸರ ಹಾಡುಗಳನ್ನು ತಕ್ಕಮಟ್ಟಿಗೆ ಶಾಸ್ತ್ರಶುದ್ಧವಾಗಿ ಪ್ರಕಟಿಸಲು

ಸುಬೋಧ ರಾಮರಾಯರು ಮುಂದಾದರು. ಇದೇ ಬಗೆಯ ಕೆಲಸವನ್ನು ಧಾರವಾಡ ಪ್ರದೇಶದಲ್ಲಿ ನಾರಾಯಣರಾವ ಕಲಮದಾನಿ, ಹುಚ್ಚರಾವ ಬೆಂಗೇರಿ ಹಾಗೂ ಬೆಟಗೇರಿ ಕೃಷ್ಣಶರ್ಮರು ಮಾಡಿದರು. ಇದರೊಂದಿಗೆ, ಭಜನೆಯ ದೃಷ್ಟಿಯಿಂದ ಅನುಕೂಲವಾಗುವಂತೆ ನಾಡಿನ ವಿವಿಧ ಭಾಗಗಳಲ್ಲಿ ದಾಸಸಾಹಿತ್ಯಾಸಕ್ತರು ತಮತಮಗೆ ಬೇಕಾದ ಪದಗಳ ಸಂಗ್ರಹವನ್ನು ಪ್ರಕಟಿಸತೊಡಗಿದರು. ಇದರಿಂದಾಗಿ ನಾಡಿನ ಬಹುತೇಕ ಭಾಗಗಳಲ್ಲಿ ಬೇರೆ ಬೇರೆ ದಾಸರು ಇದ್ದುದು ಮತ್ತು ಅವರು ಹಾಡುಗಳನ್ನು ಬರೆದಿದ್ದಾರೆ ಎಂಬುದು ಗಮನಕ್ಕೆ ಬಂದಿತು. ಅದು 'ದಾಸ–ಪೀಳಿಗೆ'ಯನ್ನು ಗುರುತಿಸಲು ಸಹಾಯವಾಯಿತು.

ಶ್ರೀಪಾದರಾಜರಿಂದ ಪ್ರಾರಂಭವಾದ ಕೀರ್ತನೆಗಳ ರಚನೆಯ ಸಂಪ್ರದಾಯದಲ್ಲಿ ಈ ಐದುನೂರು ವರ್ಷಗಳಲ್ಲಿ ಸುಮಾರು ಮುನ್ನೂರು ಜನ ಹರಿದಾಸರು ಹುಟ್ಟಿ ಮೂವತ್ತು ಸಾವಿರಕ್ಕೂ ಮಿಕ್ಕ ಕೀರ್ತನೆಗಳನ್ನು ರಚಿಸಿದ್ದಾರೆಂದರೆ ಅವುಗಳ ಮಹತ್ವ ಗೊತ್ತಾಗದೇ ಇರದು.

ಇಡಿಯಾಗಿ–ಬಿಡಿಬಿಡಿಯಾಗಿ ವ್ಯಕ್ತಿಗಳಿಂದ, ಸಂಘ ಸಂಸ್ಥೆಗಳಿಂದ ದಾಸರ ಪದಗಳು ಪ್ರಕಟವಾಗುತ್ತ ಬರುತ್ತಿರುವಾಗಲೇ ಪುರಂದರ ಕನಕದಾಸರ ಚತುಃಶತಮಾನೋತ್ಸವ ಸಂದರ್ಭಗಳಲ್ಲಿ ಅವರ ಸಮಗ್ರ ಕೃತಿಗಳು ಸರ್ಕಾರದಿಂದ ಹಾಗೂ ವಿವಿಧ ಸಂಘ ಸಂಸ್ಥೆಗಳಿಂದ ಪ್ರಕಟವಾದವು. ಆದರೆ ಸಮಗ್ರ ದಾಸಸಾಹಿತ್ಯದ ಪ್ರಕಟಣೆ ಈವರೆಗೆ ಆಗಲೇ ಇಲ್ಲವೆಂದು ಹೇಳಬಹುದು. ಇಂಥದೊಂದು ಪ್ರಯತ್ನವನ್ನು ಮೂರು ದಶಕಗಳ ಹಿಂದೆ ಮೈಸೂರು ವಿಶ್ವವಿದ್ಯಾನಿಲಯವು ಕೈಗೊಂಡಿತು. ವೈಜ್ಞಾನಿಕ ರೀತಿಯಲ್ಲಿ ಶಾಸ್ತ್ರಶುದ್ಧವಾಗಿ ದಾಸಸಾಹಿತ್ಯವನ್ನು ಪ್ರಕಟಿಸುವುದರ ಅಡಿಗಲ್ಲನ್ನು ಹಾಕಿದ ಶ್ರೇಯಸ್ಸು ಆ ಮಾಲೆಯ ಸಂಪಾದಕರಾಗಿದ್ದ ಡಾ. ಜಿ. ವರದರಾಜರಾವ್ ಅವರಿಗೆ ಸಲ್ಲಬೇಕು. ಇದುವರೆಗೆ ಕೆಲವು ಸಂಪುಟಗಳು ಮಾತ್ರ ಬಂದಿವೆ. ಆದರೆ ಹಸ್ತಪ್ರತಿಗಳಲ್ಲಿ ವಿಪುಲ ದಾಸಸಾಹಿತ್ಯವನ್ನು ಸಂಗ್ರಹಿಸಲಾಗಿದೆ. ಅದೇ ರೀತಿಯಲ್ಲಿ ಲಿಂಗಸುಗೂರಿನಲ್ಲಿ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹಾಗೂ ತಿರುಪತಿಯ ದಾಸಸಾಹಿತ್ಯ ಪ್ರೊಜೆಕ್ಟದಲ್ಲಿ ಕೂಡ ವಿಪುಲ ಹಸ್ತಪ್ರತಿಗಳ ಸಂಗ್ರಹವಿದೆ. ಇವರೆಲ್ಲರ ಸಹಕಾರದಿಂದ ಈಗ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸಿ ಪ್ರಕಟಿಸುವ ಸಾಹಸದ ಕಾರ್ಯವನ್ನು ಮಾಡುತ್ತಿದೆ.

ಸಂಪುಟ ಯೋಜನೆ

ದಾಸಸಾಹಿತ್ಯದ ಪರಿಷ್ಕರಣ ಕಾರ್ಯ ತುಂಬ ಜಟಿಲವಾದುದೆಂಬುದು ಸಂಪಾದಕ ಮಂಡಳಿಯ ಪ್ರಥಮ ಸಭೆಯಲ್ಲಿಯೇ ಅನುಭವಕ್ಕೆ ಬಂದಿತು. ಕಳೆದ ಐದು ಶತಮಾನಗಳಿಂದ ನಿರಂತರ ಹರಿದುಬಂದ ದಾಸಸಾಹಿತ್ಯ ರಚನೆಯಲ್ಲಿಯ ದಾಸರ ಹಾಗೂ ದಾಸರ ಪದಗಳ ಸಂಖ್ಯಾಬಾಹುಳ್ಯವನ್ನು ಗಮನಿಸಿ ಅದಕ್ಕೊಂದು ಕಾಲಮಿತಿಯನ್ನು ಹಾಕಿಕೊಳ್ಳುವುದು ಅನಿವಾರ್ಯವಾಯಿತು. ಹಾಗೆ ದಾಸಸಾಹಿತ್ಯದ ಪ್ರಾರಂಭ ಕಾಲದಿಂದ ೧೯ನೆಯ ಶತಮಾನದ ಅಂತ್ಯದವರೆಗೆ ರಚಿತಗೊಂಡ ವೈದಿಕ ಪರಂಪರೆಯ ದಾಸರ ಪದಗಳನ್ನು ಸಂಗ್ರಹಿಸುವುದೆಂದೂ, ಅದರಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಪರಂಪರೆಯ ಲಭ್ಯವಿದ್ದ ಹಾಡುಗಳನ್ನು ಸೇರಿಸಿಕೊಂಡು ೩೫ ಸಂಪುಟಗಳಲ್ಲಿ ಪ್ರಕಟಿಸುವುದೆಂದೂ ನಿರ್ಧರಿಸಲಾಯಿತು.

ಈ ೩೫ ಸಂಪುಟಗಳನ್ನು* ಸಂಪಾದಕ ಮಂಡಳಿಯ ಸದಸ್ಯರಲ್ಲದೆ ನಾಡಿನ ಹಲವಾರು ವಿದ್ವಾಂಸರನ್ನು ಸಂಪಾದಿಸಿಕೊಡಲು ಕೇಳಿಕೊಳ್ಳಲಾಯಿತು.

ಇಂಥದೊಂದು ಬೃಹತ್ ಕಾರ್ಯವನ್ನು ಕೈಗೊಂಡಾಗ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸುವುದು ಅನಿವಾರ್ಯವಾಗುತ್ತದೆ. ಅನ್ಯ ಮತ-ಪಂಥಗಳ ಟೀಕೆಗಳು ಬಂದಿದ್ದರೆ ಅಂಥ ಹಾಡುಗಳನ್ನು ಕೈಬಿಡಬೇಕು. ಒಂದೇ ಹಾಡು ಇಬ್ಬರು ದಾಸರ ಅಂಕಿತದಲ್ಲಿ ಪ್ರಚಲಿತದಲ್ಲಿದ್ದರೆ, ಎರಡೂ ಕಡೆಗೆ ಅವುಗಳನ್ನು ಕೊಟ್ಟು, ಕೆಳಗೆ 'ಈ ಕೀರ್ತನೆ . . . . ದಾಸರ ಅಂಕಿತದಲ್ಲೂ ಇದೆ' ಎಂದೂ ಸೂಚಿಸಬೇಕು. ದ್ವೈತ ಸಂಪ್ರದಾಯದ ಕೀರ್ತನೆಗಳನ್ನು ಪ್ರಕಟಿಸುವಾಗ ದೇವ-ಗುರು ತಾರತಮ್ಯವನ್ನು ಪಾಲಿಸಬೇಕು ; ಉಳಿದೆಡೆ ಗಣೇಶ ಪ್ರಾರ್ಥನೆ, ಭಗವಂತನ ನಾಮಸಂಕೀರ್ತನೆ, ಆತ್ಮನಿವೇದನೆ, ಲೋಕನೀತಿ, ತಾತ್ವಿಕ, ಕಥನಾತ್ಮಕ, ಸಂಪ್ರದಾಯ ಹಾಗೂ ವಿಶೇಷ ಹಾಡುಗಳೆಂದು ಮುಂತಾಗಿ ವಿಂಗಡಿಸಿಕೊಡಬೇಕು- ಎಂಬುದಾಗಿ ನಿರ್ಧರಿಸಲಾಯಿತು.

---

*ಇವುಗಳಲ್ಲಿ ಕೆಲವುಗಳಿಗೆ ಎರಡು ಮೂರು ಭಾಗಗಳಿವೆ.

ಪ್ರತಿಯೊಂದು ಸಂಪುಟದ ಪ್ರಾರಂಭದಲ್ಲಿ ಹಾಡುಗಳ ಪರಿವಿಡಿಯನ್ನು ಕೊಟ್ಟು ಪ್ರಸ್ತಾವನೆಯಲ್ಲಿ ಆಯಾ ದಾಸರ ಸಂಕ್ಷಿಪ್ತ ಜೀವನ ಚರಿತ್ರೆ, ಕೃತಿಗಳ ಸಮೀಕ್ಷೆ, ಶೈಲಿ ಇತ್ಯಾದಿಗಳನ್ನು ವಿವರಿಸಿ, ಗ್ರಂಥಸಂಪಾದನೆಯ ಆಕರಗಳನ್ನೂ ಕೊಡಲು ಪ್ರಯತ್ನಿಸಲಾಗಿದೆ. ಕೊನೆಯಲ್ಲಿ ಬರುವ ಅನುಬಂಧಗಳಲ್ಲಿ ಕಠಿಣ ಶಬ್ದಗಳ ಅರ್ಥ, ಟಿಪ್ಪಣಿ ಮತ್ತು ವಿಶಿಷ್ಟ ಅಂಕಿತನಾಮಗಳ ಸೂಚಿ ಹಾಗೂ ಹಾಡುಗಳ ಅಕಾರಾದಿಯನ್ನು ಕೊಡಲಾಗಿದೆ.

ಈ ಸಂಪುಟಗಳು ಜನಪ್ರಿಯ ಆವೃತ್ತಿಗಳಾಗಿರುವುದರಿಂದ ಲಭ್ಯವಿರುವ ಪಾಠಾಂತರಗಳಲ್ಲಿ ಯೋಗ್ಯವಾದುದನ್ನು ಸ್ವೀಕರಿಸಿದೆ. ಅನ್ಯ ಪಾಠಗಳನ್ನು ಅಡಿಯಲ್ಲಿ ನಮೂದಿಸಿಲ್ಲ. ಆದರೂ ಇವು ವಿದ್ವಜ್ಜನಪ್ರಿಯ ಆವೃತ್ತಿಗಳೂ ಆಗಬೇಕೆಂಬ ರೀತಿಯಲ್ಲಿ ಈ ಸಂಪುಟಗಳನ್ನು ರೂಪಿಸಲು ಪ್ರಯತ್ನಿಸಿದ್ದೇವೆ.

ಕೃತಜ್ಞತೆಗಳು

ಕಳೆದ ನೂರೈವತ್ತು ವರ್ಷಗಳಿಂದ ಪಾಶ್ಚಾತ್ಯ ಮಿಶನರಿಗಳಿಂದ ಹಿಡಿದು ಈ ಮೊದಲು ಉಲ್ಲೇಖಿಸಿದ ನಾಡಿನ ಅನೇಕ ವಿದ್ವಜ್ಜನರು, ಸಂಘ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ದಾಸಸಾಹಿತ್ಯ ಕುರಿತು ನಿರಂತರ ದುಡಿದು ವಿಪುಲ ಸಾಮಗ್ರಿಯನ್ನು ಪ್ರಕಟಿಸಿದ್ದಾರೆ. ಈ ಎಲ್ಲ ವ್ಯಕ್ತಿಗಳಿಗೂ, ಸಂಘ ಸಂಸ್ಥೆಗಳಿಗೂ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಯೋಜನೆ ಅಸ್ತಿತ್ವಕ್ಕೆ ಬಂದುದೂ ಒಂದು ವಿಶಿಷ್ಟ ಸಂದರ್ಭದಲ್ಲಿ ಎಂಬುದನ್ನು ಇಲ್ಲಿ ನಮೂದಿಸಬೇಕು. ಕರ್ನಾಟಕ ಸರ್ಕಾರವು ನಾಡಿನ ಖ್ಯಾತ ಸಂಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ಸಮಗ್ರ ವಚನಸಾಹಿತ್ಯವನ್ನು ಪ್ರಕಟಿಸಿತಷ್ಟೇ. ಅವರೇ 'ದಾಸಸಾಹಿತ್ಯ' ಯೋಜನೆಯನ್ನು ರೂಪಿಸಿ ಶ್ರೀ ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶತೀರ್ಥರ ಮೂಲಕ ಈ ಯೋಜನೆಯತ್ತ ಸರ್ಕಾರದ ಗಮನ ಸೆಳೆದರು. ಇದನ್ನು ಅರಿತ ಅಂದಿನ ಮುಖ್ಯಮಂತ್ರಿಗಳೂ, ಅನಂತರ ಭಾರತದ ಪ್ರಧಾನಮಂತ್ರಿಗಳೂ ಆಗಿದ್ದ ಸನ್ಮಾನ್ಯ ಶ್ರೀ ಹೆಚ್. ಡಿ. ದೇವೇಗೌಡರು ಮುಧೋಳದಲ್ಲಿ (೧೯೯೫) ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ, "ಸರ್ಕಾರವು ಸಮಗ್ರ

ದಾಸಸಾಹಿತ್ಯವನ್ನು ಪ್ರಕಟಿಸಲು ಒಪ್ಪಿಕೊಂಡಿದೆ" ಎಂದು ಘೋಷಿಸಿದರು. ಅದರಂತೆ, ಸರ್ಕಾರವು ಒಂಬತ್ತು ಜನರ ಸಂಪಾದಕ ಮಂಡಳಿಯನ್ನು ರಚಿಸಿತು. ಅದರಲ್ಲಿ ಡಾ. ಶ್ರೀನಿವಾಸ ಹಾವನೂರ, ಡಾ. ಟಿ.ಎನ್. ನಾಗರತ್ನ ಮತ್ತು ಪ್ರೊ. ವಸಂತ ಕುಷ್ಟಗಿ ಅವರನ್ನು ಸಮಿತಿಯ ಕಾರ್ಯನಿರ್ವಾಹಕ ಸಂಪಾದಕರೆಂದು ನಿಯಮಿಸಿತು. ಜೊತೆಗೆ ಈ ಮೊದಲು ಇಂಥ ಕಾರ್ಯವನ್ನು ಯಶಸ್ವಿಯಾಗಿ ಮಾಡಿದ ಅನುಭವಿ ಡಾ. ಎಂ. ಎಂ. ಕಲಬುರ್ಗಿ, ದಾಸಸಾಹಿತ್ಯದಲ್ಲಿ ನುರಿತ ವಿದ್ವಾಂಸರುಗಳಾದ ಪ್ರೊ. ಎಂ. ರಾಜಗೋಪಾಲಾಚಾರ್ಯ, ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಡಾ. ಮಂದಾಕಿನಿ, ಪ್ರೊ. ಸುಧಾಕರ ಮತ್ತು ಡಾ. ಬಸವರಾಜ ಸಬರದ ಅವರನ್ನು ಸಂಪಾದಕ ಮಂಡಳಿಯ ಸದಸ್ಯರನ್ನಾಗಿ ನಿಯಮಿಸಿತು. ಅವರುಗಳ ನಿರಂತರ ಪರಿಶ್ರಮದ ಫಲವೇ ಈ ಸಮಗ್ರ ದಾಸಸಾಹಿತ್ಯದ ಪ್ರಕಟಣಾ ಕಾರ್ಯ. ಈ ಪ್ರಕಟಣಾ ಕಾರ್ಯದಲ್ಲಿ ಅವರುಗಳೊಂದಿಗೆ ೩೫ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಸರ್ವಶ್ರೀ ಡಾ. ಅರಳುಮಲ್ಲಿಗೆ ಪಾರ್ಥಸಾರಥಿ, ಡಾ. ಡಿ. ಆರ್. ಪಾಂಡುರಂಗ, ಡಾ. ಅನಂತಪದ್ಮನಾಭರಾವ್, ಪ್ರೊ. ಬಿ. ಆರ್. ಕುಲಕರ್ಣಿ, ಡಾ. ಕೆ. ಜಿ. ವೆಂಕಟೇಶ್, ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಕೆ. ಗೋಕುಲನಾಥ, ಡಾ. ಕೆ. ಎಂ. ಕೃಷ್ಣರಾವ್, ಶ್ರೀ ಹಣಮಂತ ತಾಸಗಾಂವಕರ್, ಪ್ರೊ. ನಾ. ಗೀತಾಚಾರ್ಯ, ಡಾ. ಸ್ವಾಮಿರಾವ್ ಕುಲಕರ್ಣಿ, ಶ್ರೀ ಹನುಮನಗೌಡ, ಶ್ರೀ ಎ. ಎನ್. ಅನಂತಸ್ವಾಮಿರಾವ್, ಡಾ. ನಾರಾಯಣಾಚಾರ್ಯ ಧೂಳಖೇಡ, ಶ್ರೀ ಶಾಶ್ವತಸ್ವಾಮಿ ಮುಕ್ಕುಂದಿಮಠ, ಶ್ರೀ ಕೆ. ಎಸ್. ವೆಂಕಟೇಶ್ ಮತ್ತು ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ ಅವರುಗಳು ಹಾಗೂ ಶ್ರೀಮತಿಯರಾದ ನಳಿನಿ ವೆಂಕಟೇಶ್, ಮೀನಾರಾವ್, ಲೀಲಾವತಿ ಎಸ್. ರಾವ್, ಡಾ. ಜಯಲಕ್ಷ್ಮಿ ಮಂಗಳಮೂರ್ತಿ, ಡಾ. ಅಕ್ಕಮಹಾದೇವಿ, ಶೀಲಾ ದಾಸ್, ಡಾ. ರಮಾ ಕಲ್ಲೂರಕರ, ಡಾ. ಸೀತಾ ಗುಡೂರ ಕುಲಕರ್ಣಿ, ಹೆಚ್. ಎಸ್. ಪದ್ಮಾ ಮೂರ್ತಿ, ಮತ್ತು ರುಕ್ಮಿಣಿ ಗಿರಿಮಾಜಿ ಅವರುಗಳು ತುಂಬ ಶ್ರಮವಹಿಸಿ ಸಂಪುಟಗಳನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಅವರುಗಳಿಗೆ ಸಂಪಾದಕ ಮಂಡಳಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಈ ಮಧ್ಯೆ ಸಂಪಾದಕ ಸಮಿತಿಯ ಸದಸ್ಯರಲ್ಲೊಬ್ಬರಾದ ಪ್ರೊ. ಎಂ. ರಾಜಗೋಪಾಲಾಚಾರ್ಯರು ಮತ್ತು ಡಾ. ಮಂದಾಕಿನಿ ಹಾಗೂ ಸಂಪುಟ ಸಂಪಾದಕರಲ್ಲಿ ಒಬ್ಬರಾದ ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ, ಡಾ. ಕೆ.ಎಂ. ಕೃಷ್ಣರಾವ್, ಶ್ರೀಮತಿ ಪದ್ಮಾ ಮೂರ್ತಿ ಹಾಗೂ ಶ್ರೀ ಹನುಮನಗೌಡ ಮಾಲ್ವಿ ಅವರು ನಮ್ಮನ್ನು ಅಗಲಿದ್ದು ದುಃಖದ ವಿಷಯವಾಗಿದೆ.

ಆಯಾ ಕಾಲದಲ್ಲಿ ಈ ಯೋಜನೆಗೆ ಸಹಕರಿಸಿದ ಹಾಗೂ ಈ ಯೋಜನೆಯ ಪರಿಕಲ್ಪನೆ ಯಶಸ್ವಿಯಾಗಿ ಕಾರ್ಯಾನುಷ್ಠಾನಕ್ಕೆ ಬರುವ ದಿಸೆಯಲ್ಲಿ ಸಹಕರಿಸಿದ ಈ ಹಿಂದಿನ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ವಿಶೇಷವಾಗಿ ಇಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಶ್ರೀಮತಿ ರಾಣಿ ಸತೀಶ್ ಅವರಿಗೆ, ಇಲಾಖೆಯ ಹಿಂದಿನ ಕಾರ್ಯದರ್ಶಿಗಳಾದ ಶ್ರೀ ಚಂದ್ರಹಾಸ ಗುಪ್ತ ಮತ್ತು ಈಗಿನ ಕಾರ್ಯದರ್ಶಿಗಳಾದ ಶ್ರೀ ಸಿ. ಎಸ್. ಕೇದಾರ್ ಅವರಿಗೆ ನಮ್ಮ ನಮನಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ಈ ಯೋಜನೆಗೆ ನೆರವಾದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರುಗಳು ಹಾಗೂ ಈಗಿನ ನಿರ್ದೇಶಕರಾದ ಶ್ರೀ ವೈ. ಕೆ. ಮುದ್ದುಕೃಷ್ಣ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ.ಎಸ್. ವಿಜಯಲಕ್ಷ್ಮಿ ಮತ್ತು ಡಾ. ಮಂಜುಳಾ ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ನೆರವಾದ ಎಂ. ಎಸ್. ಐ. ಎಲ್. ಸಂಸ್ಥೆಯ ಅಧಿಕಾರಿ ಹಾಗೂ ಸಿಬ್ಬಂದಿವರ್ಗಕ್ಕೆ, ವಿಶೇಷವಾಗಿ ಶ್ರೀ ಎಂ. ರವಿಶಂಕರ್, ವಿಶೇಷಾಧಿಕಾರಿ, ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ.

ಇದು ಒಂದು ದೊಡ್ಡ ಯೋಜನೆ. ಇದರ ಸಂಪಾದನೆಯ ಸಮಸ್ಯೆಗಳು ದೊಡ್ಡವು. ಪಾಠಾಂತರ, ರೂಪಾಂತರ, ಪ್ರಕ್ಷಿಪ್ತತೆ ಇತ್ಯಾದಿಗಳ ಗೊಂದಲಕ್ಕೆ ಗುರಿಯಾಗುತ್ತ ಬಂದ ವ್ಯಾಪಕ ಪ್ರಮಾಣದ ಈ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸುವುದು, ಪುನರುಕ್ತಿಗಳನ್ನು ಗುರುತಿಸುವುದು, ಅಂಕಿತ ಪಲ್ಲಟಗಳನ್ನು ಸರಿಪಡಿಸುವುದು, ಪ್ರಕ್ಷಿಪ್ತಗಳನ್ನು ದೂರೀಕರಿಸುವುದು, ಕೊನೆಯದಾಗಿ ಕೀರ್ತನೆಗಳನ್ನು ಶುದ್ಧೀಕರಿಸುವುದು ಎಂಥವರನ್ನೂ ಧೈರ್ಯಗೆಡಿಸುವ ಕೆಲಸ. ಹೀಗಿದ್ದೂ ದಾಸಸಾಹಿತ್ಯದ ಮೇಲಿನ ಗೌರವ ಪ್ರೀತಿಗಳು ನಮ್ಮಿಂದ ಈ ಕೆಲಸ ಮಾಡಿಸಿವೆ. ನಮ್ಮ ಶಕ್ತಿಗೆ ಮೀರಿ ಉಳಿದಿರಬಹುದಾದ ದೋಷಗಳನ್ನು ಮನ್ನಿಸಬೇಕೆಂದು ಕೋರುತ್ತೇವೆ. ಈ ಮೂವತ್ತೈದು ಸಂಪುಟಗಳನ್ನು ಸಹೃದಯ ಲೋಕಕ್ಕೆ ಅರ್ಪಿಸುತ್ತಿದ್ದೇವೆ. ಸಮಗ್ರ ದಾಸಸಾಹಿತ್ಯವು ಸುಲಭ ಬೆಲೆಯಲ್ಲಿ ಕನ್ನಡಿಗರ ಮನೆ-ಮನಗಳಲ್ಲಿ ಬೆಳಗಲೆಂದು ಹಾರೈಸುತ್ತೇವೆ.

ಸಂಪಾದಕ ಮಂಡಳಿ

ಪರಿವಿಡಿ

ಪ್ರಸ್ತಾವನೆ

ಶ್ರೀ ಪ್ರಸನ್ನ ಶ್ರೀನಿವಾಸದಾಸರ ಜೀವನ-ಸಾಹಿತ್ಯ-ಸಾಧನೆ

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸ ಸಾಹಿತ್ಯವೂ ಒಂದು ಪ್ರಕಾರವಾಗಿದೆ. ಹಿಮಾಲಯದ ಎತ್ತರದಿಂದ ಹರಿದು ಬಂದ ಗಂಗೆ ಬಯಲಿನಲ್ಲಿ ಇಳಿದು ನೆಲವನ್ನೆಲ್ಲಾ ಫಲಪ್ರದವಾಗಿ ಮಾಡುವಂತೆ ಕನ್ನಡ ಸಾಹಿತ್ಯ ಶರಣರ ಮತ್ತು ದಾಸರ ಸಾಹಿತ್ಯಗಳಲ್ಲಿ ಜ್ಞಾನಗಂಗೆ ಬೆಟ್ಟದ ಎತ್ತರದಿಂದ ಜಿಗಿದು ಕೆಳಗಿನ ವರ್ಗದ ಎಲ್ಲ ಜನರಿಗೆ ತಲುಪಲು ಸಾಧ್ಯವಾಯಿತು. ಸಂಸ್ಕೃತ ಭಾಷೆಯಲ್ಲಿದ್ದ ಶ್ರೀಮಂತಿಕೆ ಯನ್ನು ತಿಳಿಯಲು ಮತ್ತು ಕನ್ನಡವಷ್ಟೇ ತಿಳಿದ ಜನತೆಯಲ್ಲಿ ಸಾಹಿತ್ಯ ಹಾಗೂ ಸಂಸ್ಕೃತಿಯನ್ನು ಬೆಳೆಸಲು ಪ್ರಭಾವಿ ಸಾಧನವಾಯಿತು ಎಂದು ವಿಮರ್ಶಕರೊಬ್ಬರು ಹೇಳಿದ್ದಾರೆ. ಸಾಹಿತ್ಯದ ದೃಷ್ಟಿಯಿಂದ ಉತ್ತಮವಾದದ್ದೆಲ್ಲಾ ದಾಸಸಾಹಿತ್ಯದಲ್ಲಿದೆ; ದಾಸ ಸಾಹಿತ್ಯ ಕನ್ನಡ ಸಾಹಿತ್ಯದ ಸಂಪತ್ತಾಗಿದೆ ಎಂದು ಹೇಳುವುದರಲ್ಲಿ ಉತ್ಪ್ರೇಕ್ಷೆ ಏನೂ ಇಲ್ಲ. ಕೇವಲ ಮತೀಯ ದೃಷ್ಟಿಕೋನದಿಂದ ನೋಡದೆ ದಾಸ ಸಾಹಿತ್ಯದ ಒಳಗೆ ಅಡಗಿರುವ ಹೂರಣವನ್ನು ತೆಗೆದು ನೋಡಿದಲ್ಲಿ ಕನ್ನಡ ಸಂಸ್ಕೃತಿಗೆ ಹಾಗೂ ಸಾಹಿತ್ಯಕ್ಕೆ ಅದು ನೀಡಿದ ಚೈತನ್ಯದ ದರ್ಶನವಾಗುತ್ತದೆ. ಜಗತ್ತಿನ ವಿವಿಧ ಭಾಗಗಳಲ್ಲಿ ಅನುಭಾವಿಗಳು ನಡೆಸಿದ ಆಂದೋಲನಗಳು, ನೆರವೇರಿಸಿದ ಸಾಮಾಜಿಕ ಕ್ರಾಂತಿ ಹಾಗೂ ಸಾಂಸ್ಕೃತಿಕ ಕಾರ್ಯವನ್ನೇ ಈ ನಮ್ಮ ಹರಿದಾಸ ಕೂಟವು ನೆರವೇರಿಸಿದೆ. ಮತೀಯ ಅಭಿಮಾನವಿಲ್ಲದ ಧಾರ್ಮಿಕ ಆಂದೋಲನ ಗಳು ಅಪರೂಪ. ಹರಿದಾಸರು ತಮ್ಮ ಕೃತಿಗಳಲ್ಲಿ ಶ್ರೀಹರಿಯ ಸರ್ವೋತ್ತಮತ್ವವನ್ನು ಎತ್ತಿ ಹಿಡಿಯುವುದರ ಮೂಲಕ ಶ್ರೀ ಮಧ್ವಾಚಾರ್ಯರು ಪ್ರತಿಪಾದಿಸಿದ

ದ್ವೈತಸಿದ್ಧಾಂತವನ್ನು ಒಪ್ಪಿಕೊಂಡರು. ಎಲ್ಲಾ ಹರಿದಾಸರುಗಳು ದ್ವೈತ ಸಿದ್ಧಾಂತದಲ್ಲಿ ಪೂರ್ಣ ವಿಶ್ವಾಸವನ್ನಿಟ್ಟು, ವೇದ ಪುರಾಣ, ಉಪನಿಷತ್ತು, ಪಾಂಚರಾತ್ರಾಗಮ, ಭಾರತ, ರಾಮಾಯಣ, ಭಾಗವತದಲ್ಲಿ, ಇರುವ ಹರಿಸರ್ವೋತ್ತಮತ್ವವನ್ನು ತಮ್ಮ ರಚನೆಗಳ ಮೂಲಕ ಜನತೆಗೆ ಮುಟ್ಟಿಸಿದರು.

ಎಲ್ಲಾ ಹರಿದಾಸರು ಬರೀ ಕೃತಿಗಳ ಮೂಲಕ ದ್ವೈತ ಸಿದ್ಧಾಂತವನ್ನಾಗಲೀ ಹರಿಯ ವಿಶೇಷಣಗಳನ್ನಾಗಲೀ ಅವಲಂಬಿಸಲಿಲ್ಲ. ಅವರು ಹರಿಭಕ್ತಿಯನ್ನೂ, ಭಾಗವತ ಧರ್ಮವನ್ನೂ ತಮ್ಮ ದೈನಂದಿನ ಜೀವನಕ್ಕೆ ಅಳವಡಿಸಿಕೊಂಡಿದ್ದು ಸದ್ಧರ್ಮಿಗಳಾಗಿ ಬಾಳಿದ ಸರಳ ಸುಜೀವಿಗಳು. ಇವರು ದೇವಾಂಶರೇ ಆಗಿದ್ದು, ತಮ್ಮ ಸಾಧನೆಯ ಬಲದಿಂದಲೇ ಅಪರೋಕ್ಷ ಜ್ಞಾನಿಗಳು ಆದರು. ಹರಿದಾಸರು ತಮ್ಮ ಕೃತಿಗಳಲ್ಲಿ ಹರಿಭಕ್ತಿಯನ್ನು ಪ್ರತಿಪಾದಿಸುವುದರ ಜೊತೆಗೆ ಬಾಳಿನಲ್ಲಿ ಬರುವ ಸುಖ ದುಃಖಗಳೆಲ್ಲಾ ದಿವ್ಯ ಜೀವನದ ಸಫಲತೆಗಾಗಿ ಬರುವ ಅನಿವಾರ್ಯ ಅನುಭವ ಎಂಬ ರಹಸ್ಯವನ್ನು ತಿಳಿಸಿ ಹೇಳಿದ್ದಾರೆ. ಹರಿದಾಸರು ಅವರ ಕೃತಿಗಳಲ್ಲಿ ಬೋಧಿಸಿದ ತತ್ವಗಳನ್ನು ತಾವು ಆಚರಿಸಿ ತೋರಿಸಿರುವುದರಿಂದ ಅವರು ಬಾಳಿದ ರೀತಿ ನೀತಿಗಳು ನುಡಿಗಳು, ಬೋಧಿಸಿದ ತತ್ವಗಳು ಅನುಕರಣೀಯವಾದವು. ಮಹಾತ್ಮರು ಬಾಳಿ ಸ್ವತಃ ಆಚರಿಸಿ ತೋರಿಸಿದಾಗಲೇ ಅವರ ಬಗ್ಗೆ ಗೌರವ ಮನ್ನಣೆ ಉಂಟಾಗುತ್ತದೆ.

ದಾಸರ ಕೃತಿಗಳಲ್ಲಿ ಕಂಡು ಬರುವ ಮನೋಜ್ಞವಾದ ಶೈಲಿ, ಅಪೂರ್ವವಾದ ಛಂದಸ್ಸಿನ ಕೌಶಲ್ಯ, ಸೊಗಸಾದ ಪದ ಸಂಯೋಜನೆ, ಆಡು ಭಾಷೆಯ ರೀತಿ ನೀತಿಗಳು ಇತ್ಯಾದಿಗಳನ್ನು ಗಮನಿಸಿ ನೋಡುವುದರ ಜೊತೆಗೆ ಅವುಗಳಲ್ಲಿ ಹುದುಗಿರುವ ಸತ್ಯ, ಧರ್ಮ, ಭಕ್ತಿ, ಶ್ರದ್ಧೆ, ವೈರಾಗ್ಯಗಳನ್ನು ಅರ್ಥಮಾಡಿಕೊಂಡಲ್ಲಿ ಹರಿದಾಸರು ನಮಗೆ ನೀಡಿರುವ ಕಾಣಿಕೆ ಎಂತಹುದು ಎಂದು ತಿಳಿಯುತ್ತದೆ. ಜಗತ್ತಿನಲ್ಲಿ ಏನೆಲ್ಲಾ ವೈಜ್ಞಾನಿಕ ಅತ್ಯುಚ್ಚ ಬೆಳವಣಿಗೆ ಆಗುತ್ತಿದ್ದರೂ ಈ ಜೀವನಿಗೆ ಸ್ವಯಂ ಪೂರ್ಣತ್ವವಿಲ್ಲ. ಜೀವನದ ಅಸ್ವತಂತ್ರತೆ, ಅಸಹಾಯಕತೆ, ಬದುಕಿನಲ್ಲಿ ಬರುವ ಅನಪೇಕ್ಷಿತ ಅಘಾತಗಳಿಂದ ತತ್ತರಿಸಿ, ಕೊನೆಗೊಮ್ಮೆ ಎಲ್ಲಾ ಕ್ರಿಯೆಗಳ

ಚೇತನಾ ಶಕ್ತಿಯಾದ ಭಾಗವತೋತ್ತಮರ ಕಡೆ ಹೊರಳುತ್ತಾನೆ ಆಗ ಜೀವಿ ಭಗವಂತನನ್ನೇ ಅನನ್ಯವಾಗಿ ಮೊರೆ ಹೊಗುತ್ತಾನೆ. ಎಂತಹುದೇ ಬದುಕಿಗೆ ಪರಿಪೂರ್ಣ ಅರ್ಥ ಬರುವುದು ಭಗವಂತನ ಪ್ರಸಾದದಿಂದಲೇ. ಅಂತಹ ಭಾಗವತೋತ್ತಮರ ಒಲುಮೆಯ ಸಾಧನೆಯ ಸುಲಭ ಉಪಾಯವನ್ನು ಶ್ರೀಹರಿಭಕ್ತಿ ಮೂಲಕ ಪಡೆಯಬಹುದೆಂದು ಹರಿದಾಸರು ತಿಳಿಸಿ ಹೇಳಿದ್ದಾರೆ. ಕಾಲಧರ್ಮಕ್ಕನುಗುಣವಾಗಿ, ಈ ಜೀವನಿಗೆ ಮರೆವು ಸಹಜ. ಶ್ರೀಹರಿ ಸರ್ವೋತ್ತಮನ ಪೂರ್ಣ ಅರಿವೂ ಇರುವುದಿಲ್ಲ. ತಮ್ಮ ತಮ್ಮ ಸಾಧನೆಗಳಿಗಾಗಿ ಅವತರಿಸುವ ಹರಿದಾಸರು ಎಲ್ಲ ಕಾಲಮಾನದಲ್ಲಿದ್ದು ಶ್ರೀಹರಿಯ ಭಕ್ತಿಯನ್ನು ಕೃತಿಮೂಲಕ, ತಮ್ಮ ನಡವಳಿಕೆ ಮೂಲಕ ಪದೇ ಪದೇ ಹೇಳುತ್ತಲೇ ಬಂದಿದ್ದಾರೆ.

ಶ್ರೀಹರಿಯ ಸರ್ವೋತ್ತಮತೆಯನ್ನು ವಿಶ್ಲೇಷಿಸಿದ ಮೂಲ ಪುರುಷರು ಎಂದರೆ ದ್ವೈತಮತ ಪ್ರತಿಪಾದ್ಯರೂ ಆದ ಶ್ರೀ ಮಧ್ವಾಚಾರ್ಯರು ಎಲ್ಲ ಹರಿದಾಸರು ಶ್ರೀಹರಿ ಸರ್ವೋತ್ತಮತೆಯನ್ನು ಸಾರಿದರು. ಹರಿದಾಸ ಸಾಹಿತ್ಯದ ಮೊದಲ ಕೃತಿ ಶ್ರೀನರಹರಿ ತೀರ್ಥರಿಂದ ರಚಿಸಲ್ಪಟ್ಟಿದೆ ಎಂದು ಕೆಲವರ ಅಭಿಪ್ರಾಯವಾಗಿದೆ. ಇದನ್ನು ಒಪ್ಪದೇ ಇರುವವರೂ ಇದ್ದಾರೆ. ಶ್ರೀಪಾದರಾಜರೇ ಪ್ರಥಮರೆಂದು ಎಲ್ಲರು ಅಭಿಪ್ರಾಯವಾಗಿದೆ. ಇವರು ಭಾಗವತದಲ್ಲಿರುವ ವಿಷಯಗಳಿಗೆ ಆದ್ಯತೆ ಕೊಟ್ಟರು. ಶ್ರೀಪಾದರಾಜರ ನಂತರ ಬಂದ ವ್ಯಾಸರಾಜರು, ಪುರಂದರದಾಸರು, ಕನಕದಾಸರು ಶ್ರೀಹರಿ ಹಿರಿಮೆಯನ್ನು ಹಾಡಿ ಹೊಗಳಿದ್ದಾರೆ. ವಿಜಯನಗರದ ಕಾಲದಲ್ಲಿ ಅತ್ಯಂತ ಉನ್ನತವಾಗಿದ್ದು ಹರಿದಾಸ ಸಾಹಿತ್ಯವು ಕೊಂಚಕಾಲ ಮಂದಗತಿಹೊಂದಿ, ಪುನಃ ಉನ್ನತವಾಗಿದ್ದು ಹರಿದಾಸ ಸಾಹಿತ್ಯವು ಹರಿಭಕ್ತಿಯು, ವಿಜಯದಾಸರಿಂದ ಮುಂದುವರೆಸಲ್ಪಟ್ಟಿತು. ವಿಜಯದಾಸರೇ ಹರಿದಾಸ ಕೂಟದ ಮುಖ್ಯ ಆಧಾರಸ್ತಂಭರು ಆಗಿದ್ದರು. ಇವರ ನಂತರ ಬಂದ ಕೆಲವು ಹರಿದಾಸರುಗಳು ಗುರುಪರಂಪರೆಯನ್ನು ಮರೆತರೂ, ಈ ವಿಜಯದಾಸರನ್ನು ಮಾತ್ರ ಮರೆಯಲಿಲ್ಲ. ಅವರು ತಮ್ಮ ಕೃತಿಗಳಲ್ಲಿ ವಿಜಯದಾಸರಿಗೆ ನಮನ ಸಲ್ಲಿಸಿದ್ದಾರೆ.

ಪ್ರಸನ್ನ ಶ್ರೀನಿವಾಸದಾಸರಂತೂ ತಮ್ಮ ಪ್ರತಿ ಕೃತಿ ರಚನೆಯಲ್ಲಿ ಗುರು–ಪರಂಪರೆಯನ್ನು ಮರೆತಿಲ್ಲ. ಇದು ದಾಸರ ವೈಶಿಷ್ಟ್ಯವಾಗಿದ್ದು, ಕೃತಿ ಪ್ರಾರಂಭದಲ್ಲಿ ದೇವತಾಕಕ್ಷದ ಅವರೋಹಣವನ್ನು ಹೇಳುತ್ತಾ, ಶ್ರೀ ಮಧ್ವಾಚಾರ್ಯರಿಗೆ ಹಾಗೂ ತದನಂತರ ಬಂದ ಗುರುವರೇಣ್ಯರಿಗೆ ನಮನ ಸಲ್ಲಿಸಿದನಂತರ, ಕೃತಿಯು ಕಥಾಭಾಗಕ್ಕೆ ತಕ್ಕ ನುಡಿಗಳನ್ನು ಹೇಳಿದ್ದಾರೆ.

ಶ್ರೀ ಪ್ರಸನ್ನ ಶ್ರೀನಿವಾಸದಾಸರ ಜೀವನ ವಿಚಾರ

ಶ್ರೀ ಪ್ರಸನ್ನ ಶ್ರೀನಿವಾಸದಾಸರು ಕಾವೇರಿ ತಾಮ್ರಪರ್ಣಿ ನದಿಗಳ ಮಧ್ಯ ಪ್ರದೇಶದಲ್ಲಿ ಕಾವೇರಿಯ ಒಂದು ಉಪನದಿಯ ತೀರದಲ್ಲಿರುವ ಸೂಲಪುರವೆಂಬ ಗ್ರಾಮದಲ್ಲಿ ದೊರಕಿದ ಮಾಹಿತಿ ಪ್ರಕಾರ ಸುಮಾರು ೧೯೦೦ನೇ ವರ್ಷದ ಆಚೀಚೆ ಜನಿಸಿದರು ಎಂದೂ ೯೦ ವರ್ಷಕಾಲ ಬದುಕಿದ್ದರೆಂದೂ ತಿಳಿದುಬಂದಿದೆ. ತಂದೆ ಸಾಮವೇದಿ ಮಾಧ್ವರಾದ ಶ್ರೀ ವೆಂಕಟ ಕೃಷ್ಣಾಚಾರ್ಯರು, ತಾಯಿ ಸೀತಮ್ಮ, ಇವರಿಗೆ ಪುತ್ರಭಾಗ್ಯ ಲಭಿಸಿದ್ದು ದಾಸರ ಚಿಕ್ಕಮ್ಮನು ಮಂತ್ರಾಲಯದ ಶ್ರೀ ರಾಘವೇಂದ್ರತೀರ್ಥರಲ್ಲಿ ಸೇವೆ ಮಾಡಿದ ಫಲವಾಗಿ ಎಂದು ತಿಳಿಯುತ್ತೆ. ದಾಸರು ರಚಿಸಿದ ಕೀರ್ತನೆ "ನಿನ್ನ ದಯದಿಂದಲೇ ನಿನ್ನ ಬಳಿ ಬಂದೆ ಘನ್ನ ದಯದಲಿ ಎನ್ನ ಉದ್ಧರಿಸೋ ಗುರುವೇ" ಈ ಸಂಗತಿಗೆ ಪುಷ್ಟಿ ಆಗಿದೆ.

ದಾಸರು ಬಾಲ್ಯದಲ್ಲಿ ಎಲ್ಲ ಮಕ್ಕಳಂತಿರದೆ ವಿಲಕ್ಷಣವಾಗಿದ್ದರು. ಮೂರು ನಾಲ್ಕು ವರ್ಷದ ಬಾಲಕನಿಗೆ ತನ್ನ ಓರಗೆಯ ಮಕ್ಕಳೊಡನೆ ಆಟ ಪಾಟಗಳು ಬೇಕಿರಲಿಲ್ಲ. ಸ್ವಭಾವತಃ ಹರಿಕಥೆ, ಪುರಾಣ ಶ್ರವಣ ಪ್ರಿಯವಾಗಿದ್ದವು. ಮನೆಯ ಹಿರಿಯರು ಸಂಸ್ಕೃತ ಲಿಪಿ ಕಲಿಸಿದರು. ಆನಂತರ ಇತರರಂತೆ ಲೌಕಿಕ ವಿದ್ಯಾಲಯ ಸೇರಿದರು. ಇವರ ಮನೆ ಮಾತು ತಮಿಳು ಬೆರಕೆಯ ಕನ್ನಡ. ಇವರಿಗೆ ಕನ್ನಡ ಓದುವುದಕ್ಕೂ ಬಾರದು ಬರೆಯುವುದಕ್ಕೂ ಬಾರದು. ಇವರಿಗೆ ಒಲಿದಿದ್ದು ಸಂಸ್ಕೃತ ವಿದ್ಯೆ. ಇವರಿಗೆ ಪರಿಚಿತವಾದದ್ದು ಬರೀ ಆಡುಗನ್ನಡ ಅಷ್ಟೇ. ಆದ್ದರಿಂದಲೇ ಇವರ ದೇವರನಾಮಗಳ ಹಸ್ತಪ್ರತಿಗಳು ಇರುವುದೆಲ್ಲಾ ದೇವನಾಗರಿ ಲಿಪಿಯಲ್ಲಿ. ಮನೆಯಲ್ಲಿ ಹಿರಿಯರಿಂದ ಶಿಕ್ಷಣ ದೊರೆತಿದ್ದು ಸಂಸ್ಕೃತದಲ್ಲಿ

ಮತ್ತು ಇಂಗ್ಲೀಷ್ ಭಾಷೆಯಲ್ಲಿ ಪ್ರೌಢಿಮೆ ಗಳಿಸಿದ್ದರು. ಈ ಪ್ರೌಢಿಮೆ ಹೇಗೆ ಗಳಿಸಿದರು ಎಂಬುದು ತಿಳಿದಿಲ್ಲ. ಲೌಕಿಕ ಜೀವನೋಪಾಯಕ್ಕಾಗಿ ಅಂಚೆ ಕಚೇರಿಯಲ್ಲಿ ಕೆಲಸ ಮಾಡುತಿದ್ದರು. ಹೊರಗೆ ಯಾರಿಗೂ ಹರಿದಾಸರಾಗಿ ಕಾಣಿಸಿಕೊಳ್ಳಲಿಲ್ಲ.

ಹೀಗೆ ಕನ್ನಡ ಓದುಬರಹ ತಿಳಿಯದೇ ಈ ಭಾಷೆ ಸಾಹಿತ್ಯಗಳ ಅಭ್ಯಾಸ ವಿಲ್ಲದೇ ಯಾರೇ ಆಗಲೀ ಕನ್ನಡದಲ್ಲಿ ಕೃತಿ ರಚನೆ ಮಾಡುತ್ತೇನೆ ಎನ್ನುವುದು ಚೋದ್ಯವೇ ಸರಿ. ಇವರ ದೇವರನಾಮಗಳನ್ನು ನೋಡಿದಾಗ ಕನ್ನಡ ತಿಳಿದವರಲ್ಲ ಎಂದು ಹೇಳಲಿಕ್ಕಾಗದು, ಸಂಸ್ಕೃತ ಜ್ಞಾನ ಎಷ್ಟೇ ಇದ್ದರೂ ಕನ್ನಡ ನುಡಿಕಟ್ಟು ಜಾಯಮಾನಗಳನ್ನು ತಿಳಿಯದೇ ಬರೀ ಆಡುಮಾತಿನ ರೂಢಿಯಿಂದ ಕನ್ನಡದಲ್ಲಿ ಬರೆಯುವುದು ಎಂತಹವರಿಗೂ ಕಷ್ಟಕರವಾದ ವಿಷಯ ಮತ್ತು ಆಶ್ಚರ್ಯದ ವಿಷಯವೂ ಹೌದು. ದಾಸರ ಬಾಲ್ಯ ಜೀವನದ ಒಂದೆರಡು ವಿಶೇಷ ಪವಾಡ ಸದೃಶ ಸಂಗತಿಗಳು ತಿಳಿದು ಬಂದಿವೆ. ದಾಸರಿಗೆ ಸುಮಾರು ೫ ವರ್ಷಗಳಾಗಿದಾಗ ವಿಪರೀತ ಜ್ವರದಿಂದ ಬಳಲುತ್ತಿದ್ದರು. ಕೊನೆಗೊಮ್ಮೆ ವೈದ್ಯರು ಎಲ್ಲಾ ಪರೀಕ್ಷಿಸಿ ಏನೂ ಮಾಡಲಿಕ್ಕಾಗದು ದೇವರನ್ನು ನಂಬಿ ಎಂದಿಷ್ಟೇ ಹೇಳಿ ಹೋದರು. ಅನಂತರ ದಾಸರ ತಂದೆತಾಯಿಗಳು ಮಗುವನ್ನು ಮನೆಯ ದೇವರ ಕೋಣೆಯ ಮುಂಭಾಗದಲ್ಲಿ ಮಲಗಿಸಿ ಪರಿಪರಿಯಾಗಿ ಶ್ರೀನಿವಾಸ ದೇವರನ್ನು ಹಾಗೂ ಶ್ರೀ ರಾಘವೇಂದ್ರಸ್ವಾಮಿಗಳ ಸ್ಮರಣೆ ಮಾಡಿದರು. ಇವರ ಜನನಕ್ಕಿಂತ ಮೊದಲೇ ಇವರ ಚಿಕ್ಕಮ್ಮನಿಗೆ ಮಗುವಿನ ಹುಟ್ಟು ಲಕ್ಷಣಗಳನ್ನು ಸ್ವಾಮಿಗಳು ಸ್ವಪ್ನದಲ್ಲಿ ತೋರಿಸಿದ್ದರಂತೆ. ಮಾರನೇ ದಿನ ಮಗು ಗುಣಮುಖವಾಗಿ ಓಡಾಡಿತು, ತದನಂತರ ತಕ್ಷಣವೇ ತಿರುಪತಿಗೆ ಹೋಗಿ ಸೇವೆ ಸಲ್ಲಿಸಿ ಬಂದರು.

ಒಮ್ಮೆ ದಾಸರ ತಾಯಿ, ಮನೆ ಮೂಲೆಯಲ್ಲಿ ಅಕ್ಕಿ ಹಿಟ್ಟು ಬೀಸುತ್ತಿರುವಾಗ ಶ್ರೀ ರಾಮಚರಿತಾಮೃತ ಕಥಾರೂಪವಾಗಿ ಹೇಳುತ್ತಿದ್ದರು. ಬಾಲಕ ಶ್ರದ್ಧೆ ಭಕ್ತಿಗಳಿಂದ ಕೇಳುತ್ತಿದ್ದ. ಶ್ರೀರಾಮನು ಸೀತೆಯನ್ನು ಅಡವಿಗೆ ಕಳಿಸಿದ ವಿಷಯ ತಾಯಿ ಹೇಳುತ್ತಿರುವಂತೆ ವಿಪರೀತವಾಗಿ ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸಿ ಆ ರಾಮ

ಬರಲಿ ಮರದ ಒರಳಿನಲಿ ಹಾಕಿ ಕುಟ್ಟುತ್ತೇನೆ ಎನ್ನುತ್ತಿದ್ದ. ತಾಯಿ ಹಿಟ್ಟು ಬೀಸುವುದಕ್ಕೆ ತೊಂದರೆ ಆಗುತ್ತಿದ್ದುದರಿಂದ ಹೀಗೆ ಅಳುತಿದ್ದ ಮಗುವನ್ನು ಪಕ್ಕದ ಗೋಡೆಗೆ ಕೂರಿಸಿದರು. ಹಳೇಕಾಲದ ಮನೆ ದೊಡ್ಡ ಪಡಸಾಲೆ ಮರೆಯಲ್ಲಿ ಅಳುತ್ತಿದ್ದ ಬಾಲಕ ದಾಸರಿಗೆ ದೊಡ್ಡ ವನದ ದರ್ಶನವಾಯಿತು. ಹಾಗೇ ನೋಡುತ್ತಿದ್ದಂತೆ ಶ್ರೀರಾಮ-ಲಕ್ಷ್ಮಣರನ್ನು ನೋಡಿದರು. ಇವರನ್ನು ನೋಡುತ್ತಿದ್ದಂತೆ ಬಾಲಕನ ದುಃಖ ಕಡಿಮೆ ಆಯಿತು. ಹೀಗೆ ದಾಸರು ಬಾಲ್ಯದಲ್ಲೇ ಶ್ರೀ ರಾಮ - ಲಕ್ಷ್ಮಣರ ದಿವ್ಯ ದರ್ಶನ ಕಂಡಿದ್ದಾರೆ.

ಇನ್ನೂ ಕೊಂಚ ದೊಡ್ಡವನಾದಮೇಲೆ ಬಾಲಕ ಅವರ ಹಿರಿಯರೊಂದಿಗೆ ಎತ್ತಿನಗಾಡಿಯಲ್ಲಿ ಶ್ರೀ ಸೋದೆ ಕ್ಷೇತ್ರಕ್ಕೆ ಹೋಗಿ ಶ್ರೀ ಗುರುರಾಜ ಸಾರ್ವಭೌಮವಾದಿರಾಜರ ದರ್ಶನ ಮಾಡಿ ಬಂದರು. ಆ ತರುವಾಯ ಮನೆಯಲ್ಲಿ ಪ್ರತಿ ನಿತ್ಯವೂ ಶ್ರೀವಾದಿರಾಜ ಕವಚ ಪಾರಾಯಣ ಮಾಡುತ್ತಾ ಇದ್ದರು. ಹೀಗೊಂದು ದಿನ ಅವರು ಏಕಾಂತವಾಗಿ ಮನೆಯಲ್ಲಿ ಇರುವಾಗ ಆ ಕ್ಷಣದಲ್ಲಿ ಸೋದೆಯಲ್ಲಿಯ ಶ್ರೀವಾದಿರಾಜರ ಬೃಂದಾವನದ ಮುಂದೆ ನಿಂತು ದರ್ಶನ ಮಾಡುತ್ತ ಹೊರಗೆ ಶ್ರೀ ಗುರು ಸಾರ್ವಭೌಮರು ಸಾಕ್ಷಾತ್ತಾಗಿ ಕುಳಿತಿರುವುದು ಕಂಡು, ನಮಿಸಿ, ಅನುಗ್ರಹ ಪಡೆದಂತೆ ಆಯಿತು. ಬಾಲಕ ತನ್ನೂರಿನಲ್ಲೇ ಇದ್ದು ಈ ಅಲೌಕಿಕ ಅನುಭವ ಪಡೆದದ್ದು ವಿಶೇಷವಲ್ಲವೇ ? ಈ ಪ್ರತ್ಯಕ್ಷ ದರ್ಶನ ಹಾಗೂ ಗುರುರಾಜರ ಅನುಗ್ರಹಾನಂತರ ಶ್ರೀವಾದಿರಾಜ ಸ್ವಾಮಿಗಳಲ್ಲಿ ನಿರಂತರ ಭಕ್ತಿ ದಾಸರಿಗೆ ಹೆಚ್ಚುತ್ತಾ ಹೋಯಿತು.

ದಾಸರು ಶ್ರೀ ರಾಘವೇಂದ್ರತೀರ್ಥಸ್ವಾಮಿಗಳಿಂದ ಅನುಗ್ರಹೀತರಾದ್ದರಿಂದ ಆಗಾಗ್ಗೆ ಮಂತ್ರಾಲಯ ಕ್ಷೇತ್ರಕ್ಕೆ ಹೋಗಿ ಬರುತ್ತಿದ್ದುದುಂಟು. ಒಮ್ಮೆ ಇವರಿಗೆ ಎದೆನೋವು ವಿಪರೀತವಾಗಿ ಪತ್ನಿ ಸಲಹೆಯ ಮೇರೆಗೆ ಮಂತ್ರಾಲಯಕ್ಕೆ ಹೋಗಿ ರಾಯರನ್ನು ಸೇವಿಸಿ ಬಂದು ದೇವರನಾಮವನ್ನು ರಚಿಸಿ ಸಮರ್ಪಣೆ ಮಾಡಿ, ರಾತ್ರಿ ಛತ್ರದಲ್ಲಿ ತಂಗಿದ್ದರು, ಬೆಳಿಗ್ಗೆ ಎದ್ದಾಗ ಯಾವವಿಧವಾದ ನೋವೂ, ಬಾಧೆಯೂ ಇರಲಿಲ್ಲ.

ತಿರುಪತಿಗೆ ಒಮ್ಮೆ ಪತ್ನಿ, ಪುತ್ರರೊಂದಿಗೆ ಹೋಗಿ ಅಲ್ಲಿ ಕೃಷ್ಣರಾಜ ಒಡೆಯರ್ ರವರು ಕಟ್ಟಿಸಿದ್ದ ಬ್ರಾಹ್ಮಣ ಛತ್ರದಲ್ಲಿ ಸ್ವಲ್ಪಕಾಲ ವಾಸ ಮಾಡಿದ್ದರು. ಆಗ ದಾಸರ ಕೈಗೆ ಶ್ರೀ ಗೋಪಾಲದಾಸರ ತಮ್ಮ ಶ್ರೀ ಗುರು ಗೋಪಾಲದಾಸರ ಕೃತಿ 'ಪಾಲಿಸೆನ್ನನು ದೇವ' ದೇವನಾಗರಿ ಲಿಪಿಯಲ್ಲಿ ಇದ್ದದ್ದು ಸಿಕ್ಕಿತು, ರಾತ್ರಿ ಹತ್ತು ಗಂಟೆ ಸುಮಾರಿಗೆ ಶ್ರೀ ಶ್ರೀನಿವಾಸನಲ್ಲಿ ತಮ್ಮ ಪ್ರಾರ್ಥನೆ ಈ ರೀತಿ ಸಲ್ಲಿಸಿದರು: ಸ್ವಾಮಿ, ಇಂತಹ ಒಳ್ಳೇಯ ದೇವರನಾಮವನ್ನು ಬರೆಯುವುದಕ್ಕೆ ಶ್ರೀ ಗುರು ಗೋಪಾಲದಾಸರಿಗೆ ಅನುಗ್ರಹಿಸಿದ್ದೀರಿ, ನನ್ನಿಂದ ನಿನ್ನನ್ನು ಹೊಗಳುವಂತಹ ಸ್ತುತಿಸುವಂತಹ ಕೃತಿ ರಚಿಸಲು ಸಾಧ್ಯವೇ ಎಂದು ಕೇಳಿದರು, ಹೀಗೆ ಮನಸ್ಸಿನಲ್ಲಿ ಚಿಂತಿಸುತ್ತಾ. ಪಾಲಿಸೆನ್ನನಾ ಶ್ರೀಹರಿಯೇ । ಸಿರಿದೇವ ದೊರೆಯೇ । ಸರಸಿಜಾಸನ ಪಿತನೇ । ಪಾರ್ಥಸೂತ । ಪನ್ನಗಗಿರಿ ನಿಲಯ । ಪವಮಾನ ವಂದ್ಯ । ಶ್ರೀ ಭೂ ರಮಣನೇ । ಸೃಷ್ಟಿ ಗೊಡೆಯನೇ । ಅದಿಕಾರಣ ಅತುಳ ಮಹಿಮನೇ । .... ಎನ್ನುವ ಪಲ್ಲವಿ ಹಾಗೂ ಮೊದಲ ನುಡಿಯನ್ನು ರಚಿಸಿದರು. ಹೀಗೆ ಚಿಂತಿಸುತ್ತಾ ಅವರ ಆರಾಧ್ಯ ದೈವವಾದ ಶ್ರೀನಿವಾಸನ ಪ್ರತಿಮೆಯನ್ನು ನೇರವಾಗಿ ನೋಡುತ್ತಾ ಇದ್ದು, ಆ ಶ್ರೀನಿವಾಸನ ಮುಖ ಅತ್ಯಂತ 'ಪ್ರಸನ್ನ' ವಾಗಿತ್ತು. ಆಗ ಶ್ರೀನಿವಾಸ ದೇವರು ಮತ್ತು ಇವರ ನಡುವಿನ ಸಂವಾದವೇ ಮುಂದಿನ ಸಾಲುಗಳಿಗೆ ನಾಂದಿಯಾಗಿರಬೇಕು. ಈ ಸಮಯದಲ್ಲಿ ಅಲ್ಲಿ ಉಪಸ್ಥಿತರಿದ್ದ ಯಾರೋ ದಾಸರಿಗೆ ವ್ಯಾಪ್ತೋಪಾಸನೆ ಮಾಡಲು ಸೂಚಿಸಿದರಂತೆ. ಸಂಕರ್ಷಣ ಮದ್ ದೋಷ ಪರಿಹರಿಸೋ (ಎನ್ನುವಾಗ ಪ್ರಯತ್ನ ಪೂರ್ವಕವಾದ ದೋಷಗಳುಳ್ಳವ ನಾನು _ ದೇವರು ನಿರ್ದೋಷ ಪೂರ್ಣ ಎನ್ನುವ ಭಾವ). ಹಾಗೆಯೇ ನಿತ್ಯ ನಿರ್ಮಲ (ದೇವರು) ನಿಗಮ ವೇದ (ವೇದಗಳಿಂದಲೇ ಗೋಚರ) ಎಂಬ ಕೀರ್ತನೆ ರಚಿಸಿದರು. ಈ ದಾಸರ ರಚನೆಯಲ್ಲಿ, ಇನ್ನು ಕೆಲವು ಕೃತಿಗಳಲ್ಲಿ ಈ ಪ್ರಶ್ನೋತ್ತರ ಭಾವ ಅಡಕವಾಗಿದೆ, ಹಾಗಾಗಿ ಈ ದಾಸರ ರಚನೆಗಳು ಮೇಲ್ನೋಟಕ್ಕೆ ಬಹು ಸರಳವಾಗಿ ಕಂಡರೂ ಹುಡುಕಿ ನೋಡಿದರೆ ಎಲ್ಲಾ ತತ್ವಶಾಸ್ತ್ರಗಳೂ ನಿಗೂಢ ಪ್ರಮೇಯಗಳೂ ಹಾಸು ಹೊಕ್ಕಾಗಿವೆ, ಶಬ್ದಗಳನ್ನೆ, ಕೆಲವೊಮ್ಮೆ ಹಿಂದು ಮುಂದಿನ ಅಕ್ಷರಗಳನು ಬಿಟ್ಟು ಅಥವಾ ಸೇರಿಸಿ ಅನುಸಂಧಾನ ಮಾಡಿದರೆ ಈ ದಾಸರ ರಚನಾ ವೈಶಿಷ್ಟ್ಯ ತಿಳಿಯುತ್ತದೆ. ಶಾಸ್ತ್ರ ಪ್ರಮೇಯಗಳನ್ನು

ಹೇಗೆ ಸರಳವಾಗಿ ತಿಳಿಸಿ ಹೇಳಬಹುದು ಎನ್ನುವುದಕ್ಕೆ ಈ ಸಂಕಲನದ ಕೊನೆಯಲ್ಲಿರುವ ಶ್ರೀ ವಾಮದೇವ ಅಂತರ್ಯಾಮಿ ಸ್ತೋತ್ರ ಒಂದು ನಿದರ್ಶನವಾಗಿದೆ.

ದಾಸರ ಅಂಕಿತ ನುಡಿ

ರಾಗ ರಹಿತ ರಾಘವೇಂದ್ರ ಸಂಸೇವ್ಯ ಹರಿಯೇ ಅಜನತಾತ ಪ್ರಸನ್ನ ಶ್ರೀನಿವಾಸ । ಲಕ್ಷ್ಮೀ ಈಶ । ಪ್ರಣತ ಅರ್ತಿಹರ । ಪ್ರಮೋದಿ ನೀನೇ । ಪಾಲಿಸೆನ್ನದು ಹರಿಯೇ । ಎಂಬುದಾಗಿ ಒಮ್ಮೆ ದಾಸರು ದಶಾವತಾರದ ವರ್ಣನೆಯ ನುಡಿಯನ್ನು ಅರ್ಧಕ್ಕೆ ಬರೆದು ನಿಲ್ಲಿಸಿದರು, ಅನಂತರ ದಾಸರ ಪತ್ನಿಗೆ ಪುನಃ ಸ್ವಪ್ನವಾಗಿ ಮಂತ್ರಾಲಯ ಕ್ಷೇತ್ರಕ್ಕೆ ಹೋಗಲು ಅಪ್ಪಣೆ ಆಯಿತು, ತಿರುಪತಿಯಿಂದ ಇವರು ಮಂತ್ರಾಲಯಕ್ಕೆ ಬಂದು ಸೇವೆ ಮಾಡುತ್ತಿದ್ದರು. ದಾಸರು ಮಂತ್ರಾಲಯದಲ್ಲಿ ತೀರ್ಥಸ್ನಾನ ದೇವರು ಗುರುಗಳ ದರ್ಶನ ಮಾಡಿಕೊಂಡು ತೀರ್ಥಸೇವನೆ ಮಾತ್ರ ಮಾಡಿಕೊಂಡು ಇದ್ದರು. ದಾಸರಿಗೆ ಹೆಚ್ಚಿನ ವಿದ್ಯಾಭ್ಯಾಸಗಳಿಲ್ಲ. ಎಂದೂ ರಾಘವೇಂದ್ರ ಸ್ತೋತ್ರವನ್ನು ಓದಿದವರಲ್ಲ, ಹಾಗಿದ್ದಾಗ ಒಂದು ದಿನ ದೇವರನಾಗರಿ ಲಿಪಿಯಲ್ಲಿದ್ದ ರಾಘವೇಂದ್ರ ಸ್ತುತಿಯನ್ನು ಪಾರಾಯಣ ಮಾಡಿ ತಲೆದಿಂಬಿನಡಿ ಇಟ್ಟುಕೊಂಡು ಮಲಗಿದರು, ಆ ದಿನ ಬೆಳಗಿನಜಾವ ಎಚ್ಚರಿಕೆ ಆಗಿ ಹಾಸಿಗೆಯಲ್ಲಿ ಕುಳಿತಿರುವಾಗ ಯಾರೋ ಕೈ ನೀಡಲು ಸೂಚಿಸಿದ ಪ್ರಕಾರ ಕೈ ನೀಡಿದಾಗ ಎರಡು ಅಂಗುಲ ಪ್ರಮಾಣದ ಚಿಕ್ಕ ಬಂಗಾರದ ಬೃಂದಾವನ ಹಾಗೂ ಗಜ್ಜುಗ ಗಾತ್ರದ ಸಾಲಿಗ್ರಾಮ ಇತ್ತು, ಅವುಗಳ ಅಲೌಕಿಕ ಸೌಂದರ್ಯವನ್ನು ದಾಸರು ಅನುಭವಿಸುತ್ತ, ಯಾರು ಇವುಗಳನ್ನು ನಮಗೆ ಕೊಟ್ಟರು ಎಂದು ಮುಖವೆತ್ತಿ ನೋಡಿದಾಗ ಕೈಯಲ್ಲಿದ್ದ ಬಂಗಾರದ ಬೃಂದಾವನ ಹಾಗೂ ಸಾಲಿಗ್ರಾಮ ಎರಡೂ ಅದೃಶ್ಯವಾಗಿದ್ದವು. ದಾಸರು ಪುನಃ ಚಿಂತೆಗೆ ಈಡಾದಾಗ ಅವು ನಿಮ್ಮ ಒಳಗೆ ಇವೆ ಎಂದು ಯಾರೋ ಹೇಳಿದಂತಾಯಿತು. ಈ ಘಟನೆ ' ಪ್ರಸನ್ನ ಶ್ರೀನಿವಾಸ' ಅಂಕಿತಕ್ಕಿಂತ ಮೊದಲೇ ಇಲ್ಲವೇ ಅನಂತರವೇ ಎಂಬುದು ಸ್ಪಷ್ಟವಿಲ್ಲ.

ದಾಸರ 8ನೇ ನುಡಿಯಲ್ಲಿ ದಶಾವತಾರ ವರ್ಣನೆ ಮಾಡುವಾಗ ಕುಬ್ಜೆ ವರದನೇ - ಪಾಲಿಸೆನ್ನನು ಹರಿಯೇ ಎಂದು ಹೇಳಿದ್ದಾರೆ. ಕುಬ್ಜೆಯ ಡೊಂಕನ್ನು ತಿದ್ದಿದ ಹಾಗೇ - ನನಗೆ ಇರತಕ್ಕಂತಹ ತಾಪವೆಲ್ಲಾ ನಂದೇ ಅಲ್ಲ _ ಆ ತಾಪಗಳು ನನಗೆ ಅಂಟಿಕೊಂಡೇ ಇವೆ ತಗಲಿರುವ ತಾಪಗಳ ತರಿದು - ಕುಬ್ಜೆ ವರದನೇ - ಪಾಲಿಸೆನ್ನನು ಹರಿಯೇ ಎಂದು ಮೊರೆಯಿಟ್ಟಿದ್ದಾರೆ.

ದಾಸರಿಗೆ ನಿರ್ಗುಣೋಪಾಸನೆ ಮಾಡಲು ಸೂಚನೆ ಆದಾಗ, ದಾಸರು ನಿರ್ಗುಣಭರಿತನೇ ನಿನ್ನ ಅಪರೋಕ್ಷ ಬೇಡುವೆ ಬಹುಹಿತದಿ ಭವದ ಕ್ಲೇಶವ ಬಿಡಿಸೋ ಎಂದು ಪ್ರಾರ್ಥಿಸಿದ್ದಾರೆ. ಭವದ ಕ್ಲೇಶಗಳು ಇರುವವರೆವಿಗೆ ಅಪರೋಕ್ಷ ತಿಳಿಯಲಾಗದು, ಹೀಗೆ ದಾಸರು ತಮ್ಮ ಮೊದಲ ಕೃತಿಯಲ್ಲಿಯೇ ಅತ್ಯಂತ ತತ್ವ ಜ್ಞಾನ ಯುಕ್ತವಾಗಿ ಭಕ್ತಿ ಪೂರ್ವಕವಾಗಿ ಶ್ರೀ ಹರಿಯನ್ನು ಸ್ತುತಿಸಿದ್ದಾರೆ.

ಹೀಗೆ ' ಪ್ರಸನ್ನ ಶ್ರೀನಿವಾಸ' ಎಂಬ ಮುದ್ರಿಕೆಯು ಜ್ಞಾನ ಜ್ಯೋತಿಯ ಪ್ರಭೆಯಿಂದ ಇವರಲ್ಲಿ ಸೇರಿ ಕೃತಿಗಳಿಗೆ ನಾಂದಿ ಆಯಿತು.

ದಾಸರ ಕೃತಿ ವೈಶಿಷ್ಟ್ಯಗಳು

ಪ್ರಸನ್ನ ಶ್ರೀನಿವಾಸ ದಾಸರು ಪ್ರಖ್ಯಾತರಾದ ಹರಿದಾಸ ಚತುಷ್ಟಯದಲ್ಲಿ ಒಬ್ಬರಾದ ಶ್ರೀಗೋಪಾಲದಾಸರ ಸ್ವಪ್ನ ಮೂಲಕ ಸಾಕ್ಷಾತ್ ಶಿಷ್ಯರೆಂದು ಪ್ರತೀತಿ ಇದೆ. ಇವರಿಬ್ಬರೂ ಸಮಕಾಲೀನರು ಅಲ್ಲದಿದ್ದರೂ ದಾಸರ ರಚಿತ ಶ್ರೀ ಗೋಪಾಲದಾಸರ ಸ್ತೋತ್ರ ಓದಿದಾಗ ಇವರು ಗೋಪಾಲದಾಸರು ಶಿಷ್ಯರೆಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಶ್ರೀ ಗೋಪಾಲದಾಸರ ಸರಳತೆ ಅರ್ಥವಂತಿಕೆಗಳೂ. ಜಗನ್ನಾಥ ದಾಸರ ಪದ ಸೌಷ್ಟವಗಳೂ ಜೊತೆಜೊತೆಯಾಗಿ ಸೇರಿಕೊಂಡಿವೆ, ಇತರ ದಾಸರ ರಚನೆಗಳಿಗಿಂತ ಈ ಪ್ರಸನ್ನ ಶ್ರೀನಿವಾಸ ದಾಸರ ರಚನೆಗಳು ಬಹಳ ಭಿನ್ನ. ಇವರು ತಮ್ಮ ಕೃತಿಗಳನ್ನು ಶಾಸ್ತ್ರ ಪ್ರಮೇಯಗಳಿಗೆ ತತ್ವ ನಿರ್ಣಯಕ್ಕೆ ಹಾಗೂ ದೇವರ ಅನುಪಮ ಸೌಂದರ್ಯವರ್ಣಿಸಲು ಮಾತ್ರ ಉಪಯೋಗಿಸಿದ್ದಾರೆ. ಎಲ್ಲೂ ನಿಂದಾಪರ ಸ್ತುತಿಗಳಿಲ್ಲ. ಕೆಲವು ವಿಷಯಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ

ದಾಸರ ಎಲ್ಲಾ ಕೃತಿ ಸ್ತೋತ್ರಗಳು ಅತ್ಯಂತ ವಿಶೇಷವಾಗಿದ್ದು ಪ್ರತಿಯೊಂದು ರಚನೆಯಲ್ಲಿ ಅವರು ಆಯಾ ಸ್ತುತಿಗಳಲ್ಲಿ ಇರುವ ಶಾಸ್ತ್ರ ವಿಷಯ ಸಂಶಯಗಳನ್ನು ನಿವಾರಣೆ ಮಾಡಿ ಯಥಾರ್ಥ ಜ್ಞಾನ ತೋರಿಸಿದ್ದಾರೆ ಮತ್ತು ಆ ಕೃತಿವಿಶೇಷಗಳನ್ನು ಹೇಳಿದ್ದಾರೆ.

೧. ದಶಾವತಾರ ವರ್ಣನೆ ಸಂದರ್ಭಗಳಲ್ಲಿ ಇವರು ಮೋದ ಕೊಡುವ ಮುದ್ದು ಬುದ್ಧ ಎಂದು ಹೇಳಿದ್ದಾರೆ. ಇತರ ದಾಸರಂತೆ ಮೋಹ ಕೊಡುವ ಮುದ್ದು ಬುದ್ಧ ಎಂದು ಹೇಳಿಲ್ಲ. ಪೂರ್ವಜನ್ಮದಲ್ಲಿ ತ್ರಿಪುರಾಸುರ ಅಸುರರಾಗಿದ್ದ ಜಿನಾದಿಗಳಿಗೆ ಅವರ ಯೋಗ್ಯತೆ ಅರಿತು ಶಿಶುರೂಪಿಯಾದಂತಹ ಬುದ್ಧ ರೂಪಿ (ಚರಿತ್ರೆಯಲ್ಲಿ ಬರುವ ಬುದ್ಧ ಬೇರೆ) ಪರಮಾತ್ಮ ಉಪದೇಶ ಮಾಡಿ. ಮೋಹಿಸಲ್ಪಟ್ಟಿದ್ದರು, ಧೇವತೆಗಳು ಪರಮಾತ್ಮನನ್ನು ಈ ಬಗ್ಗೆ ಪ್ರಶ್ನಿಸಿದಾಗ ಬುದ್ಧರೂಪದಲ್ಲಿ ಮಾಡಿದ ಉಪದೇಶವು ಆ ಜಿನಾದಿ ಅಸುರರು ತಮ್ಮ ತಮ್ಮ ಯೋಗ್ಯತೆಯಿಂದ ಮೋಹಿತರಾದ ಅರ್ಥಕ್ಕೆ ವಿರುದ್ಧವಾದ ಯಥಾರ್ಥ ಅರ್ಥವನ್ನು ತಿಳಿಸಿ ಕೊಟ್ಟಿದ್ದೇನೆ ಎಂದು ಹೇಳಿ ಶಬ್ದಗಳನ್ನು ಹೇಗೆ ಅರ್ಥಮಾಡಬೇಕು ಎನ್ನುವುದನ್ನು ದೇವತೆಗಳಿಗೆ ತಿಳಿಸಿ ಕೊಟ್ಟರು. ಅದ್ದರಿಂದ ಈ ದಾಸರು ತಮ್ಮ ಕೃತಿಗಳಲ್ಲಿ ವೇದ ಮಂತ್ರಗಳಿಗೂ ಪುರಾಣ ವಾಕ್ಯಗಳಿಗೂ ಅರ್ಥಮಾಡುವ ಬಗೆ ಅತ್ಯಂತ ವೈದಿಕ ವೈಷ್ಣವ ರೀತಿಯಲ್ಲೇ ಇದೆ.

೨. ಶ್ರೀ ವಾದಿರಾಜರು, ತಮ್ಮ ಒಂದು ಕೃತಿಯಲ್ಲಿ ಶಿವಪಂಚಾಕ್ಷರಿ ಮಂತ್ರ ವನ್ನು 'ಶಿವಾಯ ಶಿರಸಾ ನಮಃ' ಎಂದು ಅರ್ಥಪೂರ್ಣವಾಗಿ ಹೇಳಿದ್ದಾರೆ. ಪ್ರಸನ್ನ ಶ್ರೀನಿವಾಸದಾಸರು ತಮ್ಮ ಶಿವ ಸ್ತುತಿಗಳಲ್ಲಿ ಇನ್ನೂ ಜಾಣ್ಮೆಯಿಂದ ಅರ್ಥಪೂರ್ಣವಾಗಿ 'ಶಿವತೇ ನವೋ ನವೋ' ಎಂಬ ಶಬ್ದಗಳನ್ನು ಉಪಯೋಗಿಸಿ, ಹೀಗೆ ಭವಾನಿಪತಿಯಾದ ಶಂಕರನ್ನು ಸೂಕ್ಷ್ಮವಾಗಿ ಶಾಸ್ತ್ರಕ್ಕೆ ಸರಿಯಾಗಿ ಪ್ರಾರ್ಥಿಸಬಹುದು ಎಂದು ತೋರಿಸಿ ಕೊಟ್ಟಿದ್ದಾರೆ.

೩. ಕೆಲವು ದೇವರ ಸ್ತೋತ್ರಗಳಲ್ಲಿ ಏನೂ ಹೇಳದಿದ್ದರೂ, ಪ್ರಚಲಿತವಾಗಿರುವ ವಿಶೇಷ ಪ್ರಮಾಣಗಳೂ ಉಂಟು. ಈ ಸಂಕಲನದಲ್ಲಿರುವ ಶ್ರೀರಾಮ ಕಪಿಲ ಸ್ತುತಿಯನ್ನು ಪಾರಾಯಣ ಮಾಡಿದರೆ ಎಂತಹ ಅವೇಳೆಯಾದರೂ ದೇವತಾ

ಮೂರ್ತಿದರ್ಶನ ಆಗುತ್ತದೆ. (ಬಾಗಿಲು ಅದಾಗಿ ತೆಗೆಯುತ್ತೆ, ಇಲ್ಲ ಯಾರಾದರು ಬಂದು ದರ್ಶನ ಮಾಡಿಸುತ್ತಾರೆ). ಶ್ರೀರಾಮ ಕಪಿಲ ಸ್ತುತಿ ಬರದಿದ್ದರೂ ಸ್ತುತಿ ಬಗ್ಗೆ ಚಿಂತಿಸಿ ದಾಸರ ಸ್ಮರಣೆಯನ್ನು ಮಾಡಿದರೂ ದೇವತಾ ಮೂರ್ತಿ ದರ್ಶನ ಖಂಡಿತ ಆಗುತ್ತದೆ. ಶ್ರೀ ಸಂತಾನ ಗೋಪಾಲಕೃಷ್ಣ ಪಾರಾಯಣದಿಂದ ಸಂತಾನ ಭಾಗ್ಯ, ವೇದನಾಯಕಿ ಭವಾನಿ ಸ್ತೋತ್ರದಿಂದ ಉದ್ಯೋಗ ಪ್ರಾಪ್ತಿ, ರಾಜ ರಾಜೇಶ್ವರ ಸ್ತೋತ್ರದಿಂದ ವಿವಾಹ ಇತ್ಯಾದಿಗಳು ಹಲವರಿಗೆ ಆಗಿರುವ ಅನುಭವಗಳು.

ಹಾಗೆಯೇ ದಾಸರ ಶ್ರೀ ಧೀರೇಂದ್ರ ತೀರ್ಥರು ಸ್ತುತಿಯನ್ನು ಮನೆಯಲ್ಲಿ ದೇವರ ಮುಂದೆ ಇಲ್ಲವೇ ತುಳಸಿ ಸನ್ನಿಧಾನದಲ್ಲೋ, ಭಕ್ತಿ ಪೂರ್ವಕವಾಗಿ ಮಾಡಿದಲ್ಲಿ ದೇವರ ದೀಪದ ಪ್ರಕಾಶಕಿಂಚಿತ್ ಹೆಚ್ಚುತ್ತದೆ ಎಂದು ದಾಸರು ಹೇಳಿದ್ದಾರೆ. ಇದನ್ನು ಅನೇಕರು ಪರಿಶೀಲಿಸಿದ್ದಾರೆ.

ಈ ರೀತಿ ಕೃತಿ ವಿಶೇಷಗಳು ಇವರ ರಚನೆಯಲ್ಲಿ ಅಡಗಿವೆ. ಈ ಸಂಕಲನದಲ್ಲಿರುವ ಕೂಡಲ ಮಾಣಿಕ್ಯ ಭರತ ಸ್ತೋತ್ರದಲ್ಲಿ ದಾಸರು ' ನೀ ಎನ್ನ ಕಷ್ಟ ಪರಿಹರಿಸೋ' ಎಂದು ಪ್ರಾರ್ಥಿಸಿದ್ದಾರೆ. 'ಎನ್ನ' ಎನ್ನುವಾಗ ನಮ್ಮಗಳ ಕಷ್ಟ ಪರಿಹರಿಸೋ ಎಂದು ಅನುಸಂಧಾನ ಮಾಡುವುದು.

೪. ದಾಸರು ತಮ್ಮ ಕೃತಿಗಳಲ್ಲಿ ಕೆಲವಡೆ ತಾವು ಪಾಮರ, ನರಾಧಮ, ಮಂದ ಮತಿ ಇತ್ಯಾದಿ ಶಬ್ದಗಳನ್ನು ಉಪಯೋಗಿಸಿದ್ದಾರೆ. ಇದರಿಂದ ಇವರು. ನೈಚ್ಯಾನುಸಂಧಾನವನ್ನನುಸರಿಸಿದವರಾಗಿರಬೇಕು.

೫. ಅದೇ ರೀತಿ ದಾಸರು ಖಡಾ ಖಂಡಿತವಾಗಿ, ಯಾವ ಕೃತಿಗಳನ್ನು ಯಾರು ಪಾರಾಯಣ ಮಾಡಬಹುದು, ಯಾರು ಮಾಡಬಾರದು ಎನ್ನುವು ದನ್ನು ಹೇಳುತ್ತಾ. ಅವಾಂತರ ಫಲ, ಮುಖ್ಯಫಲಗಳನ್ನು ತಿಳಿಸಿದ್ದಾರೆ.

ಈ ರೀತಿಯ ರಚನಾ ವೈಶಿಷ್ಟ್ಯಗಳೂ ಇನ್ನೂ ಹೇಳಬೇಕಾದ್ದು ನಾವು ಅಭ್ಯಾಸ ಮಾಡಿ ಇನ್ನೂ ತಿಳಿಯ ಬೇಕಾದ್ದು ಬೇಕಾದಷ್ಟು ಇದೆ ಎಂದರೆ ತಪ್ಪಿಲ್ಲ.

ಇಷ್ಟೆಲ್ಲಾ ಹೇಳಿದನಂತರ ಅಪರೋಕ್ಷ ಜ್ಞಾನಿಗಳೂ ದೇವಾಂಶರೂ ಎಂದು ತಿಳಿಯಲ್ಪಟ್ಟಿರುವ ಈ ದಾಸರು ಯಾರಾಗಿರಬಹುದು ಎನ್ನುವ ಕುತೂಹಲ ಬಂದರೆ ಅಚ್ಚರಿ ಏನಿಲ್ಲ. ಅವುಗಳನ್ನು ಅವರ ಕೃತಿಗಳಿಂದಲೂ ಅವರ ವಿಷಯದಲ್ಲಿ ಸ್ವಪ್ನದಲ್ಲೊ ಜಾಗ್ರತವಸ್ಥೆಯಲ್ಲೋ, ಅನುಗ್ರಹೀತರಾದವರ ಘಟನೆಗಳೇ ಅವರು ದೇವಾಂಶ ಸಂಭೂತರೆಂಬ ಬಗ್ಗೆ ತಿಳಿಸಿ ಹೇಳಬಲ್ಲವು.

೧. ದಾಸರು ತಮ್ಮ ಪಾರ್ವತಿ ಕುರಿತ ಸ್ತುತಿಗಳಲ್ಲಿ ಪಾರ್ವತಿ ದೇವಿಯನ್ನು 'ಮನ್ಮಾತೆ' ಎಂದೇ ಸಂಬೋಧಿಸಿದ್ದಾರೆ.

೨. ಇವರ ಕೃತಿಗಳಲ್ಲಿ ದೇವರ ಪ್ರಕಾಶಮಾನತೆಯನ್ನು ಒಮ್ಮೆ ಚಂದ್ರನ ಪ್ರಕಾಶಕ್ಕೂ ಇನ್ನೊಮ್ಮೆ ಸೂರ್ಯನ ಪ್ರಕಾಶಕ್ಕೂ ಹೋಲಿಸಿದ್ದಾರೆ. ಇನ್ನೂ ಹುಡುಕಿ ನೋಡಿದಲ್ಲಿ ಇವರ ಉಪಾಸನಾ ವೈಶಿಷ್ಟ್ಯ ತಿಳಿಯಬಹುದೇನೋ.

೩. ದಾಸರ ಪುತ್ರಿಯೊಬ್ಬರು ಭಕ್ತಿ ಜ್ಞಾನ ಪೂರ್ಣರಾಗಿದ್ದವರು. ಅವರೂ ಸಹ ಶ್ರೀ ರಾಘವೇದ್ರತೀರ್ಥರಲ್ಲಿ ಪರಮ ಭಕ್ತಿ ಮಾಡುತ್ತಿದ್ದರು. ಶ್ರೀ ರಾಘವೇಂದ್ರ ತೀರ್ಥಸ್ವಾಮಿಗಳ ಸೂಚನೆಯನ್ನು ಗ್ರಹಿಸಿ ತನ್ನ ತಂದೆ ಯಾರಿರಬಹುದು ಎಂದು ಆಲೋಚಿಸುತ್ತಿರುವಾಗ ಸ್ವಪ್ನದಲ್ಲಿ ಹಿಮವತ್ಪರ್ವತ _ ದೈವಿಕ ಕ್ಷೇತ್ರದಲ್ಲಿ - ಅನೇಕ ಮಹಾತ್ಮರು, ದೇವತೆಗಳು ಅಸೀನರಾಗಿದ್ದರು. ಆದರೆ ಮೊದಲ ಸಾಲಿನಲಿ ಒಂದು ಸ್ಥಾನ ಖಾಲಿ ಇರುವುದನ್ನು ಕಂಡು ಇದೇನು ಎನ್ನುವಾಗ ಇದು ನಿಮ್ಮ ತಂದೆಯ ಸ್ಥಾನವೆಂದು ಯಾರೋ ಹೇಳಿದರು. ಇದರಿಂದ ಇವರು ದೈವಾಂಶರಾಗಿರಬೇಕು ಎನ್ನುವುದು ಸ್ಪಷ್ಟ.

೪. ಇವರು ದೇವಾಂಶರು ಮಹಾತ್ಮರು ಎನ್ನುವುದಕ್ಕೆ ಇನ್ನೊಂದು ಸ್ಪಷ್ಟ ನಿರೂಪಣೆ ಹೀಗಿದೆ :-

ಓರ್ವ ಗೃಹಸ್ಥನು ತನ್ನ ತಂಗಿಗಾಗಿ ಸೂಕ್ತವರನನ್ನು ಹುಡುಕುತ್ತಿದ್ದ ಸಮಯ. ಗೃಹಸ್ಥನು ವೈಷ್ಣವ ಧರ್ಮ ಅನುಯಾಯಿ ಆಗಿದ್ದು ದೇವರ ಗುರುಗಳಲ್ಲಿ ಭಕ್ತಿಭಾವ

ಇತ್ತು. ಅವರಿಗೆ ಒಮ್ಮೆ ಇದ್ದಕ್ಕಿದ್ದಂತೆ ಪ್ರೇರಣೆ ಆಗಿ ಲಿಂಗಸೂಗೂರು ಕ್ಷೇತ್ರಸ್ಥ ಶ್ರೀ ವರದೇಂದ್ರ ತೀರ್ಥಸ್ವಾಮಿಗಳ ವೃಂದಾವನಕ್ಕೆ ಹೋದರು. ಆ ದಿನ ಶ್ರೀ ಗುರುಗಳ ಆರಾಧನಾ ದಿನ ಆಗಿತ್ತು. ಹೀಗೆ ಶ್ರೀಗುರುಗಳ ದರ್ಶನ _ ಅನುಗ್ರಹ ಪಡೆದು ಬಂದ ನಂತರ ಒಮ್ಮೆ ಸ್ವಪ್ನದಲ್ಲಿ ಪೂರ್ಣ ಅಪರಂಜಿ ರೂಪದಲ್ಲಿ ತಮ್ಮ ಗುರುಗಳನ್ನು ಕಂಡರು ಹಾಗೂ ಸನಿಹದಲ್ಲಿ ಸರ್ವಾಲಂಕಾರ ಭೂಷಿತೆ ಆದ ಸ್ತ್ರೀಯೊಬ್ಬಳನ್ನು ಕಂಡರು. ಅನಂತರ ಅವರಿಗೆ ತಿಳಿದದ್ದು ಆಕೆ ಸಾಕ್ಷಾತ್ ಲಕ್ಷ್ಮಿ ಎಂದು. ಇದೇನು ಹೀಗೆ ಈ ತೇಜಃಪುಂಜ ರೂಪದಲ್ಲಿ ಶ್ರೀಗುರುಗಳು ಕಾಣಿಸಿ ಕೊಳ್ಳುತ್ತಿದ್ದಾರಲ್ಲ ಎನ್ನುತ್ತಿರುವಂತೆ ಬಲಭಾಗದಿಂದ ವರದೇಂದ್ರ ತೀರ್ಥರ ವೃಂದಾವನದ ಸನ್ನಿಧಾನದಿಂದ ದಿವ್ಯ ಧ್ವನಿಯೊಂದು ಮೂಡಿ ಬಂತು. ನಿಮ್ಮ ಗುರುಗಳು ಶ್ರೀನಿವಾಸ ದಾಸರಷ್ಟೇ ಅಲ್ಲ ಅವರು ನಮ್ಮ ಗುಂಪಿಗೇ ಸೇರಿದವರು. ಅವರೆ ನಾವೇ ಅವರಲ್ಲ ಅವರೂ ನಮ್ಮಂತೆ ಸ್ವಾಮಿಗಳ ಗುಂಪಿಗೆ ಸೇರಿದ ಶ್ರೀಸತ್ಯವರ ತೀರ್ಥರು. ಇಷ್ಟು ಆಗುತ್ತಿದ್ದಂತೆ ಇನ್ನೊಂದು ಭಾಗದಲ್ಲಿ ಒಂದು ಮನೆ – ಹಾಗೂ ಒಬ್ಬ ವ್ಯಕ್ತಿಯನ್ನು ತೋರಿಸಿ ಇವರೇ ನೋಡಿ ನಿಮ್ಮ ತಂಗಿಗೆ ಸೂಕ್ತ ವರ ಎಂದರು. ಮುಂದೆ ಯುಕ್ತ ಕಾಲದಲ್ಲಿ ಗೃಹಸ್ಥರು ತಂಗಿ ಮದುವೆ ನಿಶ್ಚಯಕ್ಕೆ ಹೋದಾಗ ವರ ಹಾಗೂ ಮನೆ ಎರಡೂ ಸ್ವಪ್ನದಲ್ಲಿ ಇದ್ದಂತೆ ಇತ್ತು. ಇದರಿಂದ ಶ್ರೀ ಪ್ರಸನ್ನ ಶ್ರೀನಿವಾಸರ ಹಿರಿಮೆಯನ್ನು ಸ್ವಲ್ಪ ಮಟ್ಟಿಗೆ ತಿಳಿಸಿ ಕೊಟ್ಟಂತಾಗಿದೆ.

ದಾಸರಾಯರ ಇನ್ನೊಬ್ಬರು ಶಿಷ್ಯರು ಇವರಲ್ಲಿ ಸಂಪರ್ಕ ಹೊಂದುವುದಕ್ಕೆ ಮುಂಚೆ ತಮ್ಮ ಊರಿನಲ್ಲಿರುವ ಒಂದು ದುರ್ಗಾದೇವಿ ಗುಡಿಗೆ ೨–೩ ಸಲ ಹೋಗಿರಲಾಗಿ ನಂತರ ಶ್ರೀಹರಿಕಥಾಮೃತಸಾರ ವಂಬ ಗ್ರಂಥವನ್ನು ಪಠಿಸ ಬೇಕೆಂಬ ಆಸೆ ಉಂಟಾಗಿ ಪಠಿಸಿ ಅದರ ಕರ್ತೃಗಳಾದ ಶ್ರೀ ಜಗನ್ನಾಥದಾಸ ರಾಯರನ್ನು ತಮ್ಮ ಗುರುಗಳಾಗಿ ಆಗಬೇಕೆಂದು ಪ್ರಾರ್ಥಿಸಿದರಂತೆ. ಅವರಿಗೆ ಒಂದು ದಿನ ಸ್ವಪ್ನದಲ್ಲಿ ಓರ್ವ ಬ್ರಾಹ್ಮಣನು ಬಂದು ಹಾಗೆ ಆಗಲಿ ನಿನಗೆ ಮುಂದೆ ಸಿಕ್ಕುತ್ತಾರೆಂದು ಹೇಳಿದ್ದರೆಂದು ತಿಳಿದುಬರುತ್ತೆ. ಇದು ನಡೆದ ಕೊಂಚ ಕಾಲದ ನಂತರ ಈ ಶಿಷ್ಯರು ಒಂದು ಪ್ರವಚನ ನಡೆಯುತ್ತಿದ್ದ ಸಭೆಯಲ್ಲಿ ಈ

ದಾಸರಾಯರನ್ನು ನೋಡಿ, ಮನಸ್ಸಿಗೆ ಏನೋ ಒಂದು ವಿಧವಾದ ಆನಂದ ಉಂಟಾಗಿ ಅನಂತರ ಇವರು ಬಹಳ ದೊಡ್ಡವರು ಮತ್ತು ನಮ್ಮ ಗುರುಗಳು ಎಂದು ಅವರ ಪಕ್ಕದಲ್ಲೇ ಇದ್ದ ಅವರ ಸ್ನೇಹಿತರೊಬ್ಬರಿಗೆ ಹೇಳಿದರಂತೆ. ಇದಾದ ನಂತರ ದಾಸರಾಯರನ್ನು ಈ ಶಿಷ್ಯರು ನೋಡಲಿಲ್ಲ. ಕೊಂಚ ಕಾಲದ ನಂತರ ಶ್ರೀದಾಸರು ಇರತಕ್ಕ ಮನೆಗೆ ಭೇಟಿ ಕೊಡಲು ದಾಸರಾಯರು ಬೇರಾವ ವಿಷಯವನ್ನು ಮಾತನಾಡದೆ ಮೊದಲು ಮಾತನಾಡುವಾಗಲೇ ಒಳ್ಳೇ ಸದುಪದೇಶ ಮಾಡಿ ಕಳುಹಿಸಿದರಂತೆ. ದಾಸರಾಯರಲ್ಲಿಗೆ ಇವರು ಅನೇಕ ವೇಳೆ ಪದೇ ಪದೇ ಹೋಗಿ ಬರುತ್ತಿದ್ದರು. ದಾಸರಾಯರ ಗೃಹದಲ್ಲಿ ಅನೇಕ ರಾತ್ರಿಯೆಲ್ಲಾ ಕುಳಿತಿರುವುದನ್ನು ಆಗೃಹದ ಸಮೀಪದಲ್ಲಿದ್ದ ಓರ್ವ ವೃದ್ಧ ಗೃಹಸ್ಥರು ಪ್ರತ್ಯಕ್ಷವಾಗಿ ಕಂಡು ಆಶ್ಚರ್ಯಪಟ್ಟಿದ್ದರೆಂದು ತಿಳಿದುಬರುತ್ತೆ. ಈ ಶಿಷ್ಯರು ದಾಸರಾಯರಲ್ಲಿ ಭಕ್ತಿಯ ಪರಮಾತ್ಮ ವಿಷಯಕ ಜ್ಞಾನ, ಭಕ್ತಿಗಳನ್ನು ಹೊಂದಿ ಉದ್ಧಾರವಾಗಬೇಕೆಂಬ ಇಚ್ಛೆಯಿಂದ ಈ ದಾಸರಾಯರಲ್ಲಿ ತಮಗೆ ಅಂಕಿತ ಪ್ರದಾನ ಮಾಡಿ ದಾಸನನ್ನಾಗಿ ಮಾಡಿ ಕೊಳ್ಳಬೇಕೆಂಬ ಇಚ್ಛೆಯನ್ನು ಹೇಳಲು ದಾಸರಾಯರು ಅಂಕಿತದ ವಿಷಯವಾಗಿ ಅವರವರ ಹಿರಿಯರು ಜನ್ಮ, ಉಪನಯನ ಕಾಲಗಳಲ್ಲಿ ಇಟ್ಟಿರತಕ್ಕ ನಾಮವೇ ಅಂಕಿತನಾಮವೆಂತಲೂ, ಮತ್ತು ಗಾಯಿತ್ರಿ ಉಪದೇಶವೇ ಮಂತ್ರೋಪದೇಶವೆಂತಲೂ ಅರ್ಥಪೂರ್ವಕ ಸಂಧ್ಯಾವಂದನೆ, ಹರಿ ಪೂಜಾದಿಗಳೇ ಸಾಧನವೆಂತಲೂ ಮತ್ತು ಪ್ರತಿಯೊಂದು ಕಾಯವನ್ನು ಮಾಡುವುದು ಭಗವದರ್ಪಣ ಬುಧ್ಧಿಯಿಂದ ಮಾಡುವುದೇ ಹರಿ ಸೇವೆಯೆಂದೂ ಇರುವಾಗ ಒಂದು ಅಂಕಿತವೆಂಬ ಸಂಕೇತದಿಂದೇನಾಯಿತು ಎಂಬುದಾಗಿ ಹೇಳುತ್ತಾ ಡಂಭಕ್ಕೋಸ್ಕರ ಗುರುವೇ? ತಂದೆತಾಯಿಗಳು ಗುರುಗಳಲ್ಲವೇ? ಮಠದ ಗುರುಗಳು ಗುರುಗಳಲ್ಲವೇ? ಇತ್ಯಾದಿ ಅನೇಕ ಅರ್ಥಗರ್ಭಿತ ಮಾತುಗಳನ್ನಾಡಿದರೂ ಶಿಷ್ಯರು ತಾವು ಈ ದಾಸರಾಯರ ಅನುಗ್ರಹವನ್ನು ಹೊಂದಲೇಬೇಕೆಂದು ಆಕಾಂಕ್ಷೆ ತೋರಿಸಲು, ಆಗ ದಾಸರಾಯರು ಒಂದು ದಿನ ರಾತ್ರಿ ಅವರಿಗೆ ಬೆಳಗ್ಗೆಯೊಳಗೆ ಯಾವುದು ಇಷ್ಟಮೂರ್ತಿಯೊ ಅದರ ಮೇಲೊಂದು ದೇವರ ನಾಮವನ್ನಾಗಲಿ ಅಥವಾ ವಚನವನ್ನಾಗಲಿ ಬರೆದು

ಸಮರ್ಪಿಸಬೇಕೆಂದು ತಿಳಿಸುತ್ತಾ ಹಾಗೆ ಬರೆಯುವಾಗ ಯಾವ ವಿಧವಾದ ಸೂಚನೆ ಉಂಟಾದ ಕೂಡಲೆ ಅಷ್ಟಕ್ಕೆ ನಿಲ್ಲಿಸಿ ಎಂದು ತಿಳಿಸಿದರಂತೆ. ಅದೇ ಪ್ರಕಾರ ಆ ಶಿಷ್ಯರು ದಾಸರಾಯರ ದಯದಿಂದ ಒಂದು ಪದ್ಯವನ್ನು ಹಯಗ್ರೀವ ದೇವರ ಮೇಲೆ ರಚನೆ ಮಾಡಲು ತಕ್ಷಣ ಮುಂದೆ ಬರೆಯಬೇಕೆಂದಿದ್ದಾಗ ಕೈಯಲ್ಲಿ ಹಿಡಿದಿದ್ದ ಲೇಖನಿಯು ಇದ್ದಕ್ಕಿದಂತೆ ಕೆಳಗೆ ಬಿದ್ದಿತಂತೆ. ಇದೇ ಸೂಚನೆಯೆಂದು ಅರಿತು ಕೂಡಲೆ ಅಷ್ಟಕ್ಕೆ ನಿಲ್ಲಿಸಿ ಮಾರನೆಯ ದಿವಸ ಅದನ್ನು ದಾಸರಾಯರಲ್ಲಿ ಸಮರ್ಪಿಸಿದರಂತೆ. ಅನಂತರ ದಾಸರಾಯರು ಅವರಿಗೆ 'ಕೊಂಡಾಡು ಲಾಭವೇ ನಿನ್ನಯ ದಿವ್ಯ ಕೀರ್ತಿ' _ ಎಂಬ ಶ್ರೀವಾದಿರಾಜರ ಒಂದು ದೇವರ ನಾಮವನ್ನು ದ್ವಾದಶಾವರ್ತಿ ಪಠಿಸಿರೆಂದು ಆಜ್ಞೆ ಇತ್ತು 'ಪ್ರಸನ್ನ ಹಯವದನ ವಿಠ್ಠಲ' ಎಂಬ ಅಂಕಿತವನ್ನು ಕೊಟ್ಟರಂತೆ. ಈ ಶಿಷ್ಯರಿಗೆ ಇನ್ನೂ ಅನೇಕ ಜಾಗ್ರತ ಮತ್ತು ಸ್ವಪ್ನಾವಸ್ಥೆಗಳಲ್ಲಿ ತೋರಿಸಿದ ಮಹಿಮೆಗಳು ಉಂಟು.

ಶ್ರೀದಾಸರಾಯರ ದೇವರ ನಾಮಗಳನ್ನು ಪಾರಾಯಣಮಾಡಿ ಅದರಿಂದ ಜ್ಞಾನಭಕ್ತಿಗಳಭಿವೃದ್ಧಿಯಾಗಿ ಜೀವನದಲ್ಲಿ ಅನೇಕ ಅನುಕೂಲಗಳು, ವ್ಯಾಧಿ ಪರಿಹಾರ, ದಾರಿದ್ರ್ಯ ಪರಿಹಾರ, ಕಲ್ಯಾಣ ಇವೇ ಮುಂತಾದುವುಗಳು ಉಂಟಾಗಿರುವುದು ಈಗಲು ಚೆನ್ನಾಗಿ ಕಂಡು ಬಂದಿದೆ. ಪಂಡಿತರಿಗೂ ಸಹ ಯಾವುದಾದರೊಂದು ಉದ್ಗ್ರಂಥದಲ್ಲಿ ಯಾವುದಾದರೊಂದು ಭಾಗ ಚೆನ್ನಾಗಿ ಅರ್ಥವಾಗದಿದ್ದರೆ, ಆಗ ಈ ದಾಸರಾಯರು ಮಾಡಿದ ಒಂದು ಪದ್ಯವನ್ನು ಭಕ್ತಿಯಿಂದ ಪಠಿಸಿ ದೇವರಿಗೆ ಸಮರ್ಪಣೆ ಮಾಡಿ ಆ ಅರ್ಥವಾಗದಿದ್ದ ಭಾಗವನ್ನು ಪುನಃ ಓದಿದರೆ ಆಗ ಅವರಿಗೆ ಮೊದಲು ಎಷ್ಟು ಅರ್ಥವಾಗಿತ್ತೊ ಅದಕ್ಕಿಂತ ಹೆಚ್ಚಾಗಿ ಅರ್ಥವಾಗಿರುವುದು ಕಂಡುಬಂದಿದೆ. ಧರ್ಮನ್ಯಾಯವಾದಂತೆ ಯಾವ ವಿಷಯವಾದರೂ ಸರಿಯೆ ರೋಗಾದಿಗಳಾದರೂ ಸರಿಯೆ ಮತ್ತು ಯಾವ ಕಷ್ಟ ಪರಿಹಾರಕ್ಕು ಸರಿಯೆ ಇದೇ ಉಪಾಯವೆಂಬುವುದಕ್ಕೆ ಸಂದೇಹವಿಲ್ಲ. ಏತಕ್ಕೆಂದರೆ ಇದು ಅನುಭವಸಿದ್ಧ.

ಶ್ರೀ ಪ್ರಸನ್ನ ಶ್ರೀನಿವಾಸದಾಸರ ಕೃತಿಗಳ ಪರಿಚಯ

೧. **ಶ್ರೀಮದ್ ಭಾಗವತಾಮೃತಸಾರ:** ಇದರಲ್ಲಿ ಶ್ರೀಮದ್ ಭಾಗವತದ ಪ್ರಥಮ ಸ್ಕಂಧದಲ್ಲಿ ಬರುವ ೩೦ ಅಧ್ಯಾಯಗಳು ಹಾಗೂ ಅಲ್ಲಿನ ನುಡಿಗಳಿಗೆ ಅರ್ಥಪೂರ್ಣವಾಗಿ ಕನ್ನಡದಲ್ಲಿ ದಾಸರು ರಚಿಸಿದ್ದಾರೆ. ಮೊದಲ ಅಧ್ಯಾಯದ ೫, ೬ ಹಾಗು ೭ನೇ ನುಡಿಗಳನ್ನು, ವಿಶೇಷವಾಗಿ ಗಮನಿಸಬೇಕು. ಶ್ರೀಪ್ರಸನ್ನ ಶ್ರೀನಿವಾಸದಾಸರು ಶ್ರೀ ಗೋಪಾಲ ದಾಸರ ಸಮಕಾಲೀನರಲ್ಲದಿದ್ದರೂ, ದಾಸರು ಇವರ ಶಿಷ್ಯರಾಗಿದ್ದರು. ಅನೇಕ ನುಡಿಯಲ್ಲಿ ಶ್ರೀಹರಿಯನ್ನು ಎನ್ನ ಅಂತರ್ಯಾಮಿ ಎಂದೆ ಹೇಳಿದ್ದಾರೆ. ೭ನೇ ನುಡಿಯಲ್ಲಿ ಶ್ರೀಪಾದವ್ಯಾಸರೇ ಪ್ರಸನ್ನರಾಗಿ ತಮ್ಮಲ್ಲಿ ನಿಂತು ಈ ಕೃತಿ ರಚಿಸಿರುತ್ತಾರೆ ಎಂದು ಹೇಳಿದ್ದಾರೆ, ಈ ನೇರ ಮಾತುಗಳು ಗ್ರಂಥದ ಹಿರಿಯೆಯನ್ನು ಸಾರುತ್ತವೆ. ಈ ಕೃತಿ ಸಂಸ್ಕೃತದ ಪಡಿ ಅಚ್ಚು ಅಲ್ಲದಿದ್ದರೂ, ಎಲ್ಲಾ ಶಾಸ್ತ್ರಾರ್ಥ ಪ್ರಮೇಯಗಳನ್ನು ಒಳಗೊಂಡಿದೆ. ದಾಸರು ಇತರ ಸ್ಕಂಧಗಳಿಗೆ ರಚಿಸಿದ ಬಗ್ಗೆ ಯಾವುದು ಹಸ್ತಪ್ರತಿ ಲಭ್ಯವಿಲ್ಲ.

೨. **ಶ್ರೀ ಬ್ರಹ್ಮಸೂತ್ರಾಮೃತಸಾರ :** ಶ್ರೀ ವೇದವ್ಯಾಸರಿಂದ ರಚಿಸಲ್ಪಟ್ಟ ಬ್ರಹ್ಮಸೂತ್ರವು ವೇದಾಂತದ ಮೂಲ ವಿಷಯವನ್ನು ಪ್ರಸ್ತಾಪಿಸುತ್ತವೆ. ದ್ವೈತಸಿದ್ಧಾಂತದ ಅನ್ವಯ ೫೬೪ ಸೂತ್ರಗಳಿವೆ (೪ ಅಧ್ಯಾಯಗಳು). ಶ್ರೀದಾಸಾರ್ಯರು ಅವಿರೋಧ ಅಧ್ಯಾಯ ಹಾಗೂ ಫಲಾದ್ಯಾಯಗಳಿಗೆ ಸ್ತುತಿರೂಪ ಭಾಷ್ಯ ಬರೆದದ್ದು ಇಲ್ಲವೆನಿಸುತ್ತದೆ. ಉಳಿದ ೩ ಅಧ್ಯಾಯಗಳನ್ನು ೩೨೫ ಸೂತ್ರಗಳು ಇದ್ದು, ಅವುಗಳಲ್ಲಿ ಶ್ರೀದಾಸಾರ್ಯರು ಬರೆದು ರಚಿಸಿದ ೧೦೧ಕ್ಕೆ ಮಾತ್ರಾ ಸ್ತೋತ್ರರೂಪ ಭಾಷ್ಯ ಲಭ್ಯವಿದೆ. ಇದನ್ನು ಭಕ್ತ ವೃಂದವು ಅಕ್ಟೋಬರ್ ೧೯೯೮ ರಲ್ಲಿಯೆ ಪ್ರಕಟಿಸಿದೆ. ಈ ಕನ್ನಡ ಭಾಷ್ಯ ಎಂತಹವರಿಗೂ ಅರ್ಥವಾಗುವಂತಿದೆ. ಪಂಡಿತವರ್ಗ ವಿಮರ್ಶಕರು ಇದನ್ನು ಅಭ್ಯಸಿಸಿ, ಒಪ್ಪಿಕೊಳ್ಳ ಬಹುದಾಗಿದೆ. ಬ್ರಹ್ಮಸೂತ್ರ ಅಧಿಕರಣಸಾರದ ಕೀರ್ತನೆಗಳನ್ನು ದಾಸರು ರಚಿಸಿ, ಹೊಸ ತಿರುವನ್ನು ಹರಿದಾಸ ಸಾಹಿತ್ಯಕ್ಕೆ ನೀಡಿದ್ದಾರೆ. ಈ ಕೀರ್ತನೆಗಳು ಗಾಯನಕ್ಕೂ ಅನುಕೂಲವಾಗಿಯೇ ಇದೆ.

೩. **ಶ್ರೀ ವಿಷ್ಣು ಸಹಸ್ರನಾಮ ಸ್ತೋತ್ರರೂಪ ಭಾಷ್ಯ :** ಈ ಗ್ರಂಥವನ್ನು ಶ್ರೀ ಪ್ರಸನ್ನ ಶ್ರೀನಿವಾಸದಾಸಾರ್ಯ ಭಕ್ತವೃಂದವು ಮೇ ೧೯೯೩ರಲ್ಲಿ ಪ್ರಕಟಿಸಿದರು. ಇದು ದಾಸವಾಙ್ಮಯಕ್ಕೆ ಹಾಗೂ ಹರಿದಾಸ ಸಾಹಿತ್ಯಕ್ಕೆ ನೀಡಲಾದ ಮೇರು ಕೃತಿ ಆಗಿದೆ. ಕನ್ನಡದಲ್ಲಿ ಶ್ರೀ ವಿಷ್ಣು ಸಹಸ್ರನಾಮಗಳಿಗೆ ಭಾಷ್ಯವನ್ನು ರಚಿಸಿದ್ದರೂ ಅದನ್ನು ಸ್ತೋತ್ರ ರೂಪವಾಗಿ ಬರೆದ ಭಾಷ್ಯವಂತೂ ಇಲ್ಲವೇ ಇಲ್ಲ. ಈ ಗ್ರಂಥ ಅಷ್ಟೀ ಛಂದಸ್ಸಿನಲ್ಲಿದೆ. ೧೬ ಅಕ್ಷರಗಳು ಪ್ರತಿಸಾಲಿನಲ್ಲಿದಲ್ಲಿ, ೪ ಸಾಲುಗಳಿವೆ. 'ನಮೋ' ಎಂದು ಬರುವ ಅಧ್ಯಾಯಗಳು - ನುಡಿಗಳು ಬೃಹತೀ ಸಹಸ್ರಕ್ಕೆ ಅನುಗುಣವಾಗಿಯೇ ಇದೆ.

ಪ್ರಸನ್ನ ಶ್ರೀನಿವಾಸದಾಸರು ತಮ್ಮ ಪ್ರತಿಯೊಂದು ಕೃತಿಯಲ್ಲಿ ಬೃಹತೀ ಎಂದ ಪದಪ್ರಯೋಗ ಮಾಡಿ, ನಮ್ಮನ್ನು ಬೃಹತೀ ಸಹಸ್ರದ ಬಗ್ಗೆ ಇನ್ನಷ್ಟು ಜ್ಞಾಪಿಸುತ್ತಾರೆ. ಆ ದೃಷ್ಟಿಯಿಂದಲಾದರು ದಾಸರು ರಚಿಸಿರುವ ಈ ಗ್ರಂಥವು ಪಠನಯೋಗ್ಯವಾಗಿದೆ, ಇವರ ಪಾಠಾಂತರವೇ ಸರಿಯಾದ್ದು ಎಂದು ಎಲ್ಲ ಪಂಡಿತ - ಪಾಮರ ವರ್ಗ ಒಪ್ಪಿಕೊಳ್ಳುವಂತಿದೆ

೪. **ಜಗನ್ನಾಥ ದಾಸಾರ್ಯರ ಚರಿತ್ರೆ:** ಈ ಕೃತಿಯಲ್ಲಿ ೯ ಅಧ್ಯಾಯಗಳಿದ್ದು, ೨೪೪ ನುಡಿಗಳಲ್ಲಿ ದಾಸರು ಈ ಕೃತಿಯನ್ನು ರಚಿಸಿದ್ದಾರೆ. ಈ ಕೃತಿಯನ್ನು ನವಂಬರ್ ೧೯೭೩ರಲ್ಲಿ ಪ್ರಕಟಿಸಲಾಗಿದೆ. ಶ್ರೀನಿವಾಸ ದಾಸಾಚಾರ್ಯರು, ಗುರುಗಳಾದ ಗೋಪಾಲದಾಸರ ಉಪದೇಶದಂತೆ ಪಂಡರಪುರದಲ್ಲಿ ಭೀಮರಥಿ ನದಿಯಲ್ಲಿ ಸ್ನಾನ ಮಾಡಿದಾಗ, ತೀರ್ಥಾಭಿಮಾನಿ ದೇವತೆಗಳನ್ನು ತದಂತರ್ಗತ ಶ್ರೀಹರಿಯ ರೂಪಗಳನ್ನು ಅನುಸಂಧಾನದಿಂದ ಸ್ಮರಿಸಿದ ವರ್ಣನೆಯು ಶ್ರೀ ಪ್ರಸನ್ನ ಶ್ರೀನಿವಾಸದಾಸರ ಗುಹ್ಯ ಆಧ್ಯಾತ್ಮ ಪ್ರಮೇಯಗಳ ಪರಿಚಯವನ್ನು ಅವರ ತತ್ವ ಸಾಕ್ಷಾತ್ಕಾರವನ್ನು ಸೂಚಿಸುತ್ತದೆ. ಇವರ ಕೃತಿಗಳನ್ನು ಪುನಃ ಪುನಃ ಪಾರಾಯಣ ಮಾಡಿದಾಗ ಹೊಸವಿಚಾರಗಳು ಹೊಮ್ಮುತ್ತವೆ. ಜಗನ್ನಾಥ ದಾಸರು ಭೀಮರಥಿಯಲ್ಲಿ ಮಿಂದು ಸೂರ್ಯದೇವನಿಗೆ ಅರ್ಘ್ಯವನ್ನು ಕೊಡುವಾಗ ಮೂಗಿನಿಂದೊಂದಡಿ ಶಿರದ ಮೇಲೆ ಜಗನ್ನಾಥ ವಿಠಲ ಎಂಬ

ಅಂಕಿತವು ಪ್ರಜ್ವಲಿಸಿತು. ದಾಸರು ಈ ದೃಶ್ಯವನ್ನು ಸೊಗಸಾಗಿ ಹೇಳಿ, ಅಂಕಿತ ಪದದ ಬಗ್ಗೆ ಇರುವ ಜಿಜ್ಞಾಸೆಯನ್ನು ದೂರ ಮಾಡಿದ್ದಾರೆ. ಶ್ರೀಪಾಂಡುರಂಗನ ಹಾಗೂ ರುಕ್ಮಿಣಿದೇವಿಯರ ಮೂರ್ತಿಗಳ ಸೌಂದರ್ಯ ಹಾಗೂ ಮಹಿಮೆಗಳನ್ನು ಅಭೂತಪೂರ್ವವಾಗಿ ವರ್ಣಿಸಿದ್ದಾರೆ. ಹಾಗೆಯೇ 'ಜಗನ್ನಾಥ' ಎಂಬ ಪದಕ್ಕೂ ವ್ಯಾಖ್ಯಾನ ನಾಡಿದ್ದಾರೆ. ಕಥೆಯನ್ನು ಪುನರಾವರ್ತಿ ಹೇಳುವುದು ಸಂಪ್ರದಾಯ. ಅದರಂತೆ ೮, ೯ನೇ ಅಧ್ಯಾಯಗಳಲ್ಲಿ ಸಂಕ್ಷಿಪ್ತವಾಗಿ ಕಥೆಯನ್ನೇ ಹೇಳಿ ತಮ್ಮ ಈ ಕೃತಿ ಮುಗಿಸಿದ್ದಾರೆ.

೫. **ಶ್ರೀ ವಿಜಯದಾಸಾರ್ಯರ ಚರಿತ್ರೆ:–** ಶ್ರೀ ವಿಜಯದಾಸಾರ್ಯರ ಚರಿತ್ರೆಯನ್ನು ಶ್ರೀ ಪ್ರಸನ್ನ ಶ್ರೀನಿವಾಸದಾಸರು ೫ ಅಧ್ಯಾಯಗಳಲ್ಲಿ ೧೭೦ ನುಡಿಗಳೊಂದಿಗೆ ರಚಿಸಿದ್ದಾರೆ.

ಈ ಕೃತಿಯ ೩ನೇ ಅಧ್ಯಾಯ ೬ನೇ ನುಡಿಯಲ್ಲಿ ಶ್ರೀ ಪ್ರಸನ್ನ ಶ್ರೀನಿವಾಸ ದಾಸರು ಶ್ರೀಗೋಪಾಲದಾಸರೇ ನಿಶ್ಚಯವಾಗಿ ತಮ್ಮ ಗುರುಗಳೆಂದು ಹೇಳಿದ್ದಾರೆ.ಇದರಿಂದ ಈ ಪ್ರಸನ್ನ ಶ್ರೀನಿವಾಸ ದಾಸರ ಬಗ್ಗೆ ಕೊಂಚ ಆಳವಾಗಿ ಅಭ್ಯಸಿಸುವವರಿಗೆ ಸಹಾಯವಾಗುತ್ತದೆ.

ತಿರುಪತಿಯಲ್ಲಿ ಶ್ರೀನಿವಾಸನ ರಥವು ನಿಂತಿದ್ದಾಗ ಶ್ರೀವಿಜಯದಾಸರು ಹರಿತತ್ವಮಾಡಿದರೆಂಬ ಕಾವ್ಯ ರೂಪದಲ್ಲಿ ಸ್ತುತಿಸಿ ಗರುಡಗಮನನು ರಥದಿ ಸರಸರನೆ ಬಂದ, ಈ ಪ್ರಸಂಗವನ್ನು ದಾಸರು ವರ್ಣಿಸಿದ್ದಾರೆ. ಎಲ್ಲ ನುಡಿಗಳು ದ್ವಿತೀಯಾಕ್ಷರಪ್ರಾಸದಲ್ಲಿದ್ದು, ಪ್ರತಿ ನುಡಿಯಲ್ಲೂ ಶ್ರೀಹರಿಯಬಗ್ಗೆ ಶಬ್ದವಿದೆ. ೩ನೇ ಅಧ್ಯಾಯದ ೧೪,೧೫ಹಾಗು ೧೬ ನುಡಿಗಳಲ್ಲಿ ಶ್ರೀ ವೆಂಕಟೇಶನ ವರ್ಣನೆ ನೋಡಿದಾಗ ದಾಸರು ನೇರವಾಗಿ ಭಗವತ್ ದರ್ಶನ ಮಾಡಿದ್ದಾರೆ ಎನಿಸುತ್ತದೆ.

ಹಾಗೆಯೇ ೧ನೇ ಅಧ್ಯಾಯದ ೧೩ನೇ ನುಡಿಯನ್ನು ಗಮನಿಸಿದಾಗ ಭೃಗು ಮುನಿಗಳು ೪ ಯುಗಗಳಲ್ಲಿಯೂ ಅವತರಿಸಿ ಶ್ರೀಹರಿಯ ಸೇವೆ ಮಾಡಿದ್ದಾರೆ ಎಂಬ ಜನವಾಕ್ಯಕ್ಕೆ ಒತ್ತು ನೀಡಿದ್ದಾರೆ.

ದಾಸರು ೫ನೇ ಅದ್ಯಾಯದಲ್ಲಿ ಬಹಿಷ್ಕೃತಳಾದ ಬಾಲ ವಿಧವೆಯ ಮನೆಗೆ ಹೋಗಿ ಶ್ರೀಹರಿ ಪೂಜಾದಿಗಳನ್ನು ಮಾಡಿ, ನೈವೇದ್ಯ ಸ್ವೀಕರಿಸಿದ ಬಗ್ಗೆ ವಿವರಣೆ ಇದೆ. ಇದಕ್ಕೆ ದಾಸರು ನೀಡಿರುವ ವಿವರಣೆಯನ್ನು ಎಲ್ಲರೂ ಒಪ್ಪ ಬಹುದಾಗಿದೆ. ಈ ದಾಸರು ತಮ್ಮ ಪ್ರತಿಯೊಂದು ಕೃತಿಯಿಂದ ಕೃತಿಯಲ್ಲಿಯೂ ವಿಶೇಷಗಳು ಹೇಳುತ್ತಾರೆ. ಇಲ್ಲವೇ ಅನುಮಾನಗಳಿಗೆ ಸ್ಪಷ್ಟನೆ ನೀಡುತ್ತಾರೆ.

ವಿಜಯದಾಸಾರ್ಯರ ಸ್ಮರಿಸಿದರೆ ಆಯುಷ್ಯ, ಆರೋಗ್ಯ, ಸಿರಿ, ನಿಜಭಕ್ತಿ, ಜ್ಞಾನವು, ಎಲ್ಲದರಲ್ಲೂ ವಿಜಯವನ್ನು ಶ್ರೀ ಪ್ರಸನ್ನ ಶ್ರೀನಿವಾಸನು ಅನುಗ್ರಹಿಸುತ್ತಾನೆ. ಹಾಗೆಯ ದಾಸದೀಕ್ಷೆಯನ್ನು ಜ್ಞಾನ ಪ್ರವಚನ ಪಟುತ್ವವನ್ನು ಕೊಟ್ಟು ಅನುಗ್ರಹಿಸು ಎಂಬ ಅಂಕಿತ ನುಡಿಯಲ್ಲಿ ಹೇಳುತ್ತಾ ತಮ್ಮ ಈ ವಿಜಯ ದಾಸಾರ್ಯರ ಕಥನ ಮುಗಿಸಿದ್ದಾರೆ.

೧. ಶ್ರೀ ಗೋಪಾಲದಾಸಾರ್ಯರ ವಿಜಯ

ಈ ಕೃತಿಯನ್ನು ಜನವರಿ ೧೯೯೩ರಲ್ಲಿ ಶ್ರೀ ಪ್ರಸನ್ನ ಶ್ರೀನಿವಾಸ ದಾಸಾರ್ಯರ ಭಕ್ತ ವೃಂದದವರು ಪ್ರಕಟಿಸಿ ಬಿಡುಗಡೆ ಮಾಡಿರುತ್ತಾರೆ. ಶ್ರೀ ಗೋಪಾಲದಾಸಾರ್ಯರ ಕೃತಿ ಸೆಪ್ಟೆಂಬರ್ ೮೧ ರಲ್ಲಿ ಅಚ್ಚಾಗಿದ್ದರೂ ಹೊರಬರಲಿಲ್ಲ. ಅಪೂರ್ಣವಾಗಿದ್ದ ಶ್ರೀ ವಿಜಯದಾಸರ ನುಡಿಗಳನ್ನು ಸೇರಿಸಿ ಈ ಕೃತಿ ಹೊರ ತರಲು ಪ್ರಯತ್ನವನ್ನು ೧೯೯೩ರಲ್ಲಿ ಮಾಡಲಾಯಿತು.

ಶ್ರೀ ಪ್ರಸನ್ನ ಶ್ರೀನಿವಾಸ ದಾಸಾರ್ಯರು ಗೋಪಾಲದಾಸಾರ್ರ್ಯರ ಹಿರಿಮೆಯನ್ನು ೧೨೪ ನುಡಿಗಳಲ್ಲಿ ಈ ಕೃತಿಯನ್ನು ರಚಿಸಿದ್ದಾರೆ. ದಾಸರು ಯಾವುದೇ ರಚನೆ ಮಾಡಲಿ ಗುರುಪರಂಪರೆಯನ್ನು ವಂದಿಸದೇ ಕಥಾ ಭಾಗಕ್ಕೆ ಹೋಗುವುದಿಲ್ಲ. ಇಲ್ಲೂ ಸಹ ಅದೇ ರೀತಿ ಮಾಡಿದ್ದಾರೆ. ೩೦ನೇ ನುಡಿಯಲ್ಲಿ ಶ್ರೀ ಗೋಪಾಲದಾಸರು ಗಣೇಶಾಂಶರು ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಶ್ರೀ ಗೋಪಾಲದಾಸರಿಗೆ ಪ್ರಣವ ಹಾಗು ಗಾಯತ್ರಿ ಜಪಾನುಷ್ಠಾನದಿಂದಾಗಿ ವ್ಯಾಪ್ತವಾದ ದರ್ಶನ ಉಂಟಾಯಿತು. ಈ ಬಗ್ಗೆ ೪೧ ಹಾಗೂ ೪೩ನೇ ನುಡಿಗಳಲ್ಲಿ ದಾಸರು ಹೇಳಿದ್ದಾರೆ. ಆನಂತರ ಐಜಿವ್ಯಾಸತತ್ವಜ್ಞರು ಸೂರ್ಯಾಸ್ತವಾದ ಮೇಲೆಯೂ

ಸೂರ್ಯನ ಪ್ರಕಾಶವನ್ನು ತಾವೂ ನೋಡಿ ಭಾಗಣ್ಣದಾಸರಿಗೂ ತೋರಿಸಿದ್ದಾರೆ. ಶ್ರೀಪ್ರಸನ್ನ ಶ್ರೀನಿವಾಸದಾಸರೂ ಒಮ್ಮೆ ಅವರ ಶಿಷ್ಯನನ್ನು ಕರೆದು ತೋರಿಸೋ ವೇಳೆಗೆ ಭೂಮಂಡಲಗಳನ್ನು ಪಲ್ಲವಿ ಅನುಪಲ್ಲವಿಯನ್ನು ಸಂಪುಟಾಕಾರವಾಗಿ ಸೇರಿಸಿ ಕೊಂಡು ಶ್ರೀ ಪ್ರಸನ್ನ ಶ್ರೀನಿವಾಸ ದಾಸಾರ್ಯರ ಸ್ಮರಿಸುತ್ತಾ ಭಕ್ತಿಯಿಂದ ಪಾರಾಯಣ ಮಾಡಿದರೆ ರಾತ್ರಿ ವೇಳೆಯಲ್ಲೂ ಸೂರ್ಯನ ಪ್ರಕಾಶವನ್ನು ನೋಡಬಹುದು ಎಂಬ ಅಭಿಪ್ರಾಯ ಭಕ್ತರಲ್ಲಿದೆ. ಶ್ರೀವಿಜಯದಾಸರು ಶ್ರೀ ಭಾಗಣ್ಣದಾಸರಿಗೆ ಶ್ರೀ ಗೋಪಾಲವಿಠಲ ಎಂಬ ಅಂಕಿತವನ್ನು ಕೊಟ್ಟು ಅನುಗ್ರಹಿಸಿದರೂ ಶ್ರೀಸತ್ಯ ಬೋಧಾರ್ಯರು ಈ ಭಾಗಣ್ಣ ಹಾಗೂ ಅವರ ತಮ್ಮಂದಿರ ಅಪರೋಕ್ಷತ್ವದ ಪರೀಕ್ಷೆ ಇತ್ಯಾದಿ ಎಲ್ಲಾ ವಿಷಯಗಳನ್ನು ದಾಸರು ತಮ್ಮ ಈ ಕೃತಿಯಲ್ಲಿ ಹೇಳಿದ್ದಾರೆ.

೭. ಶ್ರೀ ಪ್ರಸನ್ನ ಶ್ರೀನಿವಾಸದಾಸರ ದೇವರನಾಮಗಳು ಭಾಗ ೧ ಮತ್ತು ೨ ೧೯೬೬ರಲ್ಲಿ ಪ್ರಕಟವಾಗಿದ್ದು, ಆನಂತರ ಇವುಗಳು ಪುನರ್ ಪ್ರಕಟಣೆ ಕಂಡಿಲ್ಲ. ಇದರಲ್ಲಿ ೪೩ ಕೃತಿಗಳು ಇವೆ. ಇವುಗಳಲ್ಲಿ ಶ್ರೀ ಪ್ರಸನ್ನ ಶ್ರೀನಿವಾಸ ಕಲ್ಯಾಣ, ಶ್ರೀ ಪ್ರಸನ್ನ ರಾಮಾಯಣ (ಸುಂದರಕಾಂಡ) ಮತ್ತು ಅವುಗಳ ಪಾರಾಯಣ ಫಲದಿಂದಾಗಿ ಹಸ್ತ ಪ್ರತಿಯಾಗಿಯೋ, ಭಜನ ರೂಪದಲ್ಲೋ ಕೊಂಚ ಪ್ರಚಾರದಲ್ಲಿದ್ದವು. ಇತ್ತೀಚೆಗೆ ಈ ಕೃತಿಗಳಲ್ಲಿ ಅಡಗಿರುವ ಮೌಲ್ಯ, ಕಥನಾ ಚಾತುರ್ಯಗಳು ಹೊರ ಬರುತ್ತವೆ. ಈ ಗ್ರಂಥದಲ್ಲಿರುವ ದೇವರನಾಮಗಳು ದೇವತಾಕಕ್ಷದ ಅರೋ ಹಣ ಕ್ರಮದಲ್ಲಿದೆ. ಇವುಗಳಲ್ಲಿ ಕೆಲವನ್ನು ವಿವರಿಸಲಾಗಿದೆ.

ಸಾಧನ ದೇಹವಿದು–ಈ ಕೃತಿಯಲ್ಲಿ ಗುರುಗಳ ಆವಶ್ಯಕತೆ, ಕೇಶವನ ವರ್ಣನೆ, ಶ್ರೀಶನನ್ನು ಕಾಣುವ ರೀತಿ ಇತ್ಯಾದಿಗಳ ವಿವರಣೆ ಇದೆ.

'ಗೋಪಾಲದಾಸರು'– ಈ ಕೃತಿಯಲ್ಲಿ ಶ್ರೀ ಗೋಪಾಲದಾಸರ ದಯದಿಂದಲೇ ತಮ್ಮ ಜೀವನವು ನಡೆಯುತ್ತದೆ ಎನ್ನುವ ಮೂಲಕ ದಾಸರು ಹಾಗೂ ಶ್ರೀಗೋಪಾಲದಾಸರ ಬಾಂಧವ್ಯ ತಿಳಿಯಲು ಸಹಕಾರಿ ಆಗಿದೆ. ದಾಸರ ಚಿಕ್ಕಮ್ಮ ಶ್ರೀ ರಾಘವೇಂದ್ರ ಸ್ವಾಮಿಗಳ ಸೇವೆಯನ್ನು ಮಾಡಿದುದರ ಫಲವಾಗಿ

ಜನಿಸಿದರು. 'ಇದೇ ಮಾತನ್ನು' ನಿನ್ನ ದಯದಿಂದಲೇ 'ನಿನ್ನ ಬಳಿ ಬಂದೆ' ಎಂದು ಹೇಳುವುದರ ಮೂಲಕ ಸ್ಪಷ್ಟಪಡಿಸಿದ್ದಾರೆ.

ಶ್ರೀ ಗಣೇಶನನ್ನು ಕುರಿತ ಕೀರ್ತನೆಯಲ್ಲಿ: ಇಲ್ಲಿ ಶ್ರೀ ಗಣೇಶನು ಭೂತಾಕಾಶ ಅಭಿಮಾನಿ ಏಕಾತ್ಮಾ ಕಾರ್ತಿಕೇಯನ ಅನುಜ ಇತ್ಯಾದಿ ವರ್ಣನೆಯನ್ನು ಶಾಸ್ತ್ರಗಳಿಗೆ ಅನುಗುಣವಾಗಿ ಮಾಡಿದ್ದಾರೆ.

ಲೋಕಪಾಲಕರನ್ನು ಕುರಿತ ಕೀರ್ತನೆಯಲ್ಲಿ: ಈವರೆವಿಗೆ ಆಗಿ ಹೋದ ದಾಸರುಗಳು ಯಾರೂ ಎಲ್ಲ ಲೋಕಪಾಲಕರ, ನವಗ್ರಹಗಳ ಕುರಿತಂತೆ ದೇವರನಾಮಗಳನ್ನು ರಚಿಸಿದಂತಿಲ್ಲ. **ಶ್ರೀನಿವಾಸದಾಸರೊಬ್ಬರೇ ಮಾಡಿದ್ದಾರೆ.** ಲೋಕಪಾಲಕರ ಸ್ತುತಿಯಲ್ಲಿ ಎಲ್ಲಾ ದಿಕ್ ಪಾಲಕರಿಗೆ ನಮಿಸಿದ್ದಾರೆ. ಶ್ರೀ ಹರಿ ಅಂತರ್ಯಾಮಿತ್ವವನ್ನು ಗುರುತಿಸಿ ನಮಿಸಿದಾಗ ದಿಕ್ ಪಾಲಕರು ನವಗ್ರಹಗಳು ಅನುಗ್ರಹಿಸುತ್ತಾರೆ ಎಂದು ತಿಳಿಸಿದ್ದಾರೆ.

ಇದೇ ರೀತಿಯಾಗಿ ಶ್ರೀ ಶಿವ ಶೇಷದೇವ, ಶ್ರೀ ತುಳಸಿ, ಶ್ರೀ ಲಕ್ಷ್ಮಿ ಸ್ತುತಿಗಳು ಎಲ್ಲವೂ ವೇದಪುರಾಣ, ಮಹಾಭಾರತ, ರಾಮಾಯಣಗಳಿಗೆ ಅನ್ವಯ ವಾಗಿರುವುದರಿಂದ ಈ ದೇವರ ನಾಮಗಳೆಲ್ಲವೂ ಮಂತ್ರಗಳಷ್ಟೇ ಫಲವನ್ನು ನೀಡುತ್ತವೆ.

ಸುಂದರಕಾಂಡ : ಸುಂದರಕಾಂಡದ ಪೂರ್ಣ ಚಿತ್ರಣ ಇಲ್ಲಿದೆ. ದಾಸಾರ್ಯರು ಸರಳ ಕನ್ನಡದಲ್ಲಿ ರಾಮಾಯಣ ಕಥೆಯನ್ನು ಹೇಳಿದ್ದಾರೆ.

ಶ್ರೀಪ್ರಸನ್ನ ಶ್ರೀನಿವಾಸ ಕಲ್ಯಾಣ ಕೀರ್ತನೆಯಲ್ಲಿ : ಇದು ೨೫ ನುಡಿಗಳ ರಚನೆ ಇದೆ. ಪಲ್ಲವಿ ಹಾಗೂಮುದ್ರಿಕೆ ನುಡಿ ಬಿಟ್ಟಲ್ಲಿ, ಕಥಾಭಾಗ ೨೩ ನುಡಿಗಳು ಮಾತ್ರ. ಶ್ರೀ ಮಹಾಲಕ್ಷ್ಮಿಯು ಶ್ರೀಹರಿಯ ಮನದಿಂಗಿತವನ್ನು ಅರಿತು ಕೊಲ್ಹಾಪುರಕ್ಕೆ ಹೋಗಲು, ಶ್ರೀಹರಿಯು ಹುತ್ತವನ್ನು ಸೇರಿದನು ಎಂದು ಪ್ರಾರಂಭಿಸಿ, ಶ್ರೀ ಶ್ರೀನಿವಾಸನ ಕಲ್ಯಾಣದವರಗೆ ಹೇಳಿದ್ದಾರೆ. ದಾಸರ ಕೃತಿಗಳ ವಿಶೇಷ ಏನೆಂದರೆ 'ಅಹ' ಶಬ್ದ ಪ್ರಯೋಗ. ದಾಸರ ೫ ಸಾಲಿಗೆ ಒಂದು ನುಡಿ

ರಚಿಸಿ, ೩ನೇ ಸಾಲಿನ ಕೊನೆಯ 'ಅಹ' ಸೇರಿಸಿದ್ದಾರೆ. ಕಥೆ ದೃಷ್ಟಿಯಿಂದ 'ಅಹ' ಶಬ್ದ ಮತ್ತು ಆಗುತ್ತದೆ. ಅಕಾರದಿಂದ ಹಕಾರ ಪರ್ಯಾಂತ ಇರುವ ವರ್ಣಾಕ್ಷರಗಳ ಪ್ರತಿಪಾದ್ಯವಾದ ಶ್ರೀಹರಿಯ ಚಿಂತೆಯನ್ನು ಸದಾ ಮಾಡುತ್ತಿರಬೇಕು ಎನ್ನುವುದೇ ದಾಸರ ಸದುದ್ದೇಶ್ಯ. ಇದನ್ನು ಶ್ರೀಪ್ರಸನ್ನ ಶ್ರೀನಿವಾಸ ಕಲ್ಯಾಣದಲ್ಲಿ ಅಳವಡಿಸಿಕೊಂಡಿದ್ದಾರೆ.

೮. ಶ್ರೀ ಪ್ರಸನ್ನ ಶ್ರೀನಿವಾಸದಾಸರ ದೇವರ ನಾಮಗಳು ಭಾಗ –೨ ಈ ಕಿರುಹೊತ್ತಿಗೆ ಯನ್ನು ಜೂನ್ ೧೯೮೫ರಲ್ಲಿ ಭಕ್ತವೃಂದದವರು ಹೊರತಂದಿದ್ದಾರೆ.

೧. ಇಲ್ಲಿಯೂ ಸಹ ಶ್ರೀವ್ಯಾಸರಾಜರ, ವೇದನಾಯಕ, ವೃದ್ಧಾಚಲ ಈಶ್ವರ ಶ್ರೀನಾಮಕಲ್ ಹನುಮಂತಸ್ತೋತ್ರಗಳು ಇವೆ.

೨. ದಾಸರು ಸುಂದರ ಕಾಂಡ ಕಥಾ ಭಾಗವನ್ನು ಅದ್ಭವನ್ನಾಗಿ ರಚಿಸಿ, ಅದಕ್ಕೆ 'ಸೌಭಾಗ್ಯ ಪ್ರದ ಹನುಮಂತ' (ಅಣು ಸುಂದರ ಕಾಂಡ) ಎಂಬ ನಾಮವನ್ನುಕೊಟ್ಟಿದ್ದಾರೆ. ದಾಸರು ದೊಡ್ಡ ಕೀರ್ತನೆಗಳನ್ನು ಅಷ್ಟೇ ಚಿಕ್ಕದ್ದಾಗಿಯೂ ರಚಿಸಬಲ್ಲರು.

೧೦. **ಧನಪ್ರದ ಶ್ರೀಕರ ಕಾರುಣ್ಯಸ್ತೋತ್ರ** : ಹೆಸರೇ ಸೂಚಿಸುವಂತೆ, ಈ ದೇವರ ನಾಮದಿಂದ ಶ್ರೀಕರ ಅನುಗ್ರಹದಿಂದ ಧನಕೀರ್ತಿಗಳು ಲಭ್ಯ. ೨ ಹಾಗು ೩ ನುಡಿಗಳಲ್ಲಿ ಶ್ರೀಹರಿಯು ಯಾರ್‍ಯಾರಿಗೆ ಕೀರ್ತಿಗಳನ್ನು ಅನುಗ್ರಹಿಸಿದ್ದಾನೆ ಎಂದು ತಿಳಿಸುತ್ತಾ, ನಮ್ಮನ್ನು ಸಹಾ ಕಾಪಾಡುತ್ತೀಯೆ ಎಂದು ತಿಳಿಸಿದ್ದಾರೆ.

೪. ಪಂಗುಪುರವಾಸ ಶ್ರೀ ವೇಂಕಟೇಶನು ಲಿಂಗರೂಪದಲ್ಲಿರುವುದನ್ನು ವರ್ಣಿಸುತ್ತಾ ಸರ್ವಲಿಂಗಾತ್ಮಕ ಶಬ್ದಗಳು. ವಿಷ್ಣುವಿಗೇ ಅನ್ವಯ ಎಂದು ತಿಳಿಸಿದ್ದಾರೆ.

೧೧. **ಪ್ರಸನ್ನ ನಿರ್ಣಯ ರಾಮಾಯಣ:** – ಈ ವರೆವಿಗೆ ದಾಸರುಗಳು ಯಾರೂ ಇಡೀ ರಾಮಾಯಣ ವನ್ನು ಪೂರ್ಣವಾಗಿ ಚಿತ್ರಿಸಿಲ್ಲ. ಶ್ರೀ ಪ್ರಸನ್ನ

ಶ್ರೀನಿವಾಸ ದಾಸರೊಬ್ಬರೇ ಪ್ರಾದುರ್ಭಾವ ಕಾಂಡದಿಂದ ಪ್ರಾರಂಭಿಸಿ ಉತ್ತರಕಾಂಡದವರೆಗೆ ೭ ಕಾಂಡಗಳನ್ನು ರಚಿಸಿದ್ದಾರೆ. ಇದು ಶ್ರೀ ಮದ್ವಾಚಾರ್ಯರ ಮಹಾಭಾರತ ನಿರ್ಣಯಕ್ಕೆ ಅನುಗುಣವಾಗಿದೆ. ರಾಮಾಯಣದ ಕೆಲವೊಂದು ಚರ್ಚಾಸ್ಪದ, ನಿರ್ಣಾಯಕ ವಿಷಯಕ್ಕು ದಾಸರು ನಿರ್ಣಯವನ್ನು ಹೇಳಿದ್ದಾರೆ. ನಿರ್ಣಯಾತ್ಮಕ ವಿಷಯಗಳನ್ನು ಎಪ್ರಿಲ್ ೧೯೯೪ ಮುದ್ರಣದಲ್ಲಿ ತಿಳಿಸಲಾಗಿದೆ. ಇನ್ನಷ್ಟು ವಿಶ್ಲೇಷಿಸಿ ಹುಡುಕಿ ನೋಡಿದಲ್ಲಿ, ಹನ್ನನ ನಿರ್ಣಾಯಕ ಅಂಶಗಳು ಸಿಕ್ಕುತ್ತವೆ.

೧೨. ಶ್ರೀ **ರಾಘವೇಂದ್ರ ವಿಲಾಸ** : ೩ ಅದ್ಯಾಯಗಳಲ್ಲಿ ೩೨೯ ನುಡಿಗಳಲ್ಲಿ ರಚಿಸಿರುವ ಕೃತಿ ಇದು. ಇದಕ್ಕೆ ಪೂರಕ ಏನೋ ಎಂಬಂತೆ ೧೯ ನುಡಿಗಳಲ್ಲಿ ಅಣು ಚರಿತ್ರೆಯನ್ನು ರಚಿಸಿದ್ದಾರೆ. ಈ ರಾಘವೇಂದ್ರ ವಿಲಾಸ ನೋಡುತ್ತಿದ್ದರೆ ಇದೊಂದು ತೀರ್ಥ ಪ್ರಬಂಧವೇನೋ ಎಂದೆನಿಸುತ್ತದೆ. ಶ್ರೀರಾಘವೇಂದ್ರ ಸ್ವಾಮಿಗಳು ಸಂದರ್ಶಿಸಿದ ಕ್ಷೇತ್ರಗಳ ನೀಲಿನಕ್ಷೆಯೂ ೪ ಸಾಲಿನ ಪುಟ್ಟನುಡಿಗಳಲ್ಲಿದೆ. ಅಷ್ಟು ಚೊಕ್ಕವಾಗಿ ರಚಿಸಿದ್ದಾರೆ. ಆಯಾ ಕ್ಷೇತ್ರಗಳಲ್ಲಿನ ವಿಧಾನಕ್ಕಣುವಾಗಿ. ಕ್ಷೇತ್ರ ಮೂರ್ತಿಗಳ ಸಂದರ್ಶನ ಬೇಕು ಹಾಗೂ ಉಪಾಸಿಸಬೇಕು ಎಂದು ಎಚ್ಚರಿಸಿದ್ದಾರೆ. ಈ ಕೃತಿಯಲ್ಲಿ ದಾಸರೇ ತಿಳಿಸಿದಂತೆ ಮೊದಲ ಅದ್ಯಾಯದ ೨೫ ನುಡಿಗಳು ಶ್ರೀ ವಿಜಯೇಂದ್ರ ರಜಿತ ೧೦೪ ಗ್ರಂಥಗಳನ್ನೂ, ಮೂರನೇ ಅದ್ಯಾಯದ ೧೦೦ ನುಡಿಗಳು ಶ್ರೀಹರಿ ಶತರೂಪಗಳನ್ನು ಜ್ಞಾಪಿಸುತ್ತವೆ. ಇದನ್ನೇ ದಾಸರು ಅಳವಡಿಸಿಕೊಂಡಿದ್ದಾರೆ. ಶ್ರೀಹರಿಯು ಶ್ರೀ ರಾಘವೇಂದ್ರ ರಲ್ಲಿದ್ದು ಅನುಗ್ರಹಿಸುತ್ತಾನೆ ಎಂಬ ಅಂಶವನ್ನು ದಾಸರು ತಿಳಿಸಿ ಹೇಳಿದ್ದಾರೆ.ಇತರ ಗ್ರಂಥಗಳು

ಶ್ರೀಪ್ರಸನ್ನ ಶ್ರೀನಿವಾಸದಾಸ ರಚಿತ ಶ್ರೀ ಗೋಪಾಲ ದಾಸರು ವಿಜಯದಾಸರು, ಜಗನ್ನಾಥದಾಸರು, ಶ್ರೀ ರಾಘವೇಂದ್ರ ವಿಲಾಸ (ಪೂರ್ಣ ಕೃತಿ) ಹಾಗೂ ಶ್ರೀ ವಿಷ್ಣುಸಹಸ್ರನಾಮ ಸ್ತುತಿರೂಪಭಾಷ್ಯ ಹೊರತು ಪಡಿಸಿ ಉಳಿದೆಲ್ಲಾ ಲಭ್ಯಕೃತಿಗಳನ್ನು ಈ ಗ್ರಂಥದಲ್ಲಿ ಸೇರಿಸಲಾಗಿದೆ. ಮೇಲೆ ಹೆಸರಿಸಲಾದ ಗ್ರಂಥಗಳು ಪ್ರತ್ಯೇಕವಾಗಿ ಪ್ರಕಟವಾಗಿದೆ.

ಶ್ರೀ ಪ್ರಸನ್ನ ಶ್ರೀನಿವಾಸದಾಸರ ಅಪ್ರಕಟಿತ ಕೃತಿಗಳು

೧. ಶ್ರೀ ವೆಂಕಟೇಶ್ವರ ಸಹಸ್ರನಾಮಕ್ಕೆ ಶ್ರೀದಾಸರು ಭಾಷ್ಯವನ್ನು ಬರೆದಿದ್ದು ಅದು ಅಪೂರ್ಣವಾಗಿದೆ. ಶ್ರೀದಾಸರು ದೇವನಾಗರಿ ಲಿಪಿಯಲ್ಲಿ ಬರೆದಿದ್ದ ಸುಮಾರು ೭೬೫ ನಾಮಗಳಿಗೆ, ಕನ್ನಡದಲ್ಲಿ ಬರೆದಿರುವ ೨೨೫/೨೬೫ ನುಡಿಗಳ ಭಾಷ್ಯ ಮಾತ್ರ ಸಿಕ್ಕಿದೆ. ಶ್ರೀದಾಸರು ಬರೆದ ಉಳಿದ ನುಡಿಗಳು ಬಗ ಏನಾಯಿತೆಂಬುದು ತಿಳಿದಿಲ್ಲ. ಶ್ರೀ ವೇಂಕಟೇಶ್ವರ ಸಹಸ್ರನಾಮದ ಮೂಲ ಸಂಸ್ಕೃತ ಪಾಠಾಂತರವೂ ಭಿನ್ನವಾಗಿದ್ದು ಅದನ್ನು ಒರಿಯಂಟಲ್ ಲೈಬ್ರರಿ ಮೈಸೂರಿನಿಂದ ಪ್ರತಿ ಮಾಡಲಾಗಿದೆ. ಮೂಲ ಹಾಗೂ ದಾಸರ ಭಾಷ್ಯಸೇರಿಸಿ ಪ್ರತ್ಯೇಕವಾಗಿ ಪ್ರಕಟಿಸುವ ಕಾರ್ಯ ಆಗಬೇಕಾಗಿದೆ.

೨. ಗೀತಾಸಾರ ಸಂಗ್ರಹ : ದಾಸರ 'ಗೀತಾಸಾರ ಸಂಗ್ರಹ' ಕ್ಕೆ ೧೦೦ ಗೀತೆಗಳನ್ನು ರಚಿಸಿದ್ದಾರೆ ಎಂದು ತಿಳಿದಿದೆ. ಆದರೆ ಹಸ್ತ ಪ್ರತಿ ಲಭ್ಯವಿಲ್ಲ.

೩. ಹಾಗೆಯೇ ದಾಸರು ಬರೆದಿರುವ ಶಾಸ್ತ್ರ ಪ್ರಮೇಯಗಳ ಕೆಲವೊಂದು ಅನಿಸಿಕೆಗಳು ಇವೆ ಎಂದು ತಿಳಿದಿದೆ. ಅವುಗಳ ಹಸ್ತಪ್ರತಿಗಳು ಸಿಕ್ಕಲ್ಲಿ ಪ್ರಕಟಿಸುವ ಅಭಿಪ್ರಾಯವನ್ನು ಭಕ್ತವೃಂದದವರು ವ್ಯಕ್ತ ಪಡಿಸಿದ್ದಾರೆ.

ಹರಿದಾಸ ಸಾಹಿತ್ಯಕ್ಕೆ ಕೊಡುಗೆ : ಎಲ್ಲಾ ದಾಸರಂತೆ, ಪ್ರಸನ್ನ ಶ್ರೀನಿವಾಸದಾಸರೂ, ಶ್ರೀ ಮಧ್ವಾಚಾರ್ಯರು ಬೋಧಿಸುವ ದ್ವೈತಮತ ಸಿದ್ಧಾಂತದಲ್ಲಿ ಇರುವ ವಿಷಯಗಳಿಗೆ ಆದ್ಯತೆ ನೀಡಿದ್ದಾರೆ. ಇವರು ಶ್ರೀ ವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರು ರಚಿಸಿದ ಶೈಲಿಯಲ್ಲೇ ತಮ್ಮ ಕೃತಿ ರಚನೆ ಮಾಡಿದರೂ, ಶಾಸ್ತ್ರ ಪ್ರಮೇಯಗಳಿಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಇವರು ಎಲ್ಲೂ ನಿಂದಾಸ್ತುತಿಯ ಶೈಲಿಯನ್ನು ಅಳವಡಿಸಿಕೊಂಡಿಲ್ಲ. ಇವರ ಕೃತಿಗಳನ್ನು ಅರ್ಥ ಮಾಡಿಕೊಳ್ಳಲು ಸಾಕಷ್ಟು ವಿಷಯಜ್ಞಾನ ಬೇಕು. ಹಾಗಿದ್ದಲ್ಲಿ ಇವರ ರಚನೆಯ ಮಹತ್ವ ಗೊತ್ತಾಗುತ್ತದೆ. ಇವರು ತಮ್ಮ ಕೃತಿಗಳಲ್ಲಿ ಪಾರಾಯಣದ ಮುಖ್ಯ ಫಲವನ್ನು ಹೇಳಿದ ನಂತರ ಅವಾಂತರ ಫಲವನ್ನು

ಹೇಳಿದ್ದಾರೆ. ಇವರ ಪ್ರತಿ ಕೃತಿಯಲ್ಲಿಯೂ ಇತರರು ಹೇಳದೇ ಬಿಟ್ಟಿರುವ ವಿಷಯ ಅಥವ ಚರ್ಚಾಸ್ಪದ, ವಿಷಯಕ್ಕೆ ನಿರ್ಣಯ ಹೇಳಿದ್ದಾರೆ. ಅವರ ತಮ್ಮ ಕೃತಿಯ ಬಗ್ಗೆ ಚರ್ಚೆಗೆ ಅವಕಾಶ ಕೊಡದೆ ಸುಮ್ಮನೆ ರಚಿಸಿ ಕೈ ಬಿಟ್ಟಿದ್ದಾರೆ. ತಾರ್ಕಿಕ ತೀರ್ಮಾನವನ್ನ ನಮಗೇ ಬಿಟ್ಟಿದ್ದಾರೆ. ಇವರು ಹರಿದಾಸ ಸಾಹಿತ್ಯಕ್ಕೆ ನೀಡಿರುವ ಕೊಡುಗೆ ಬಗ್ಗೆ ನೋಡೋಣ: –

೧. ಇವರು ಎಲ್ಲೂ ದ್ವೈತಸಿದ್ಧಾಂತ, ಶಾಸ್ತ್ರಪುರಾಣಗಳಲ್ಲಿ ಹೇಳಿರುವ ಪ್ರಮೇಯ ವಿಷಯಗಳನ್ನು ಉಲ್ಲಂಘಿಸಿಲ್ಲ.

೨. ಪ್ರತಿ ರಚನೆಯಲ್ಲೂ, ವಿಶೇಷ ಅಂಶಗಳನ್ನು 'ಹೇಳಿದ್ದಾರೆ'.

೩. ಪ್ರತಿ ಕೃತಿಯಲ್ಲಿ ಬಹುತೇಕವಾಗಿ ಬೃಹತೀ ಸಹಸ್ರವನ್ನು ಬೃಹತೀ ಎಂಬ ಶಬ್ದದೊಂದಿಗೆ ಜ್ಞಾಪಿಸಿದ್ದಾರೆ. ಇದರಿಂದ ಬೃಹತೀ ಸಹಸ್ರದ ಮಹತ್ವ ತಿಳಿಯುತ್ತದೆ

೪. ಎಲ್ಲ ಹರಿದಾಸರುಗಳು ಭಾಗವತದ ಹಿರಿಮೆಯನ್ನು ಹೇಳಿದ್ದಾರೆ. ಭಾಗವತದಲ್ಲಿ ಭಕ್ತಿಭಾಗವೂ ಇದೆ, ತತ್ವಭಾಗವೂ ಇದೆ. ಎಲ್ಲರೂ ಭಕ್ತಿಭಾವಕ್ಕಷ್ಟೇ ಮಹತ್ವ ನೀಡಿ, ತತ್ವಭಾಗಕ್ಕೆ ಆದ್ಯತೆ ನೀಡಿಲ್ಲ. ಪ್ರಸನ್ನ ಶ್ರೀನಿವಾಸದಾಸರು ಎರಡಕ್ಕೂ ಮನ್ನಣೆ ನೀಡಿ, ವಿಶೇಷಾಂಶಗಳನ್ನು ಗುರುತಿಸಿ ಪ್ರಾದುರ್ಭಾವಗಳ ರಚನೆ ಮಾಡಿದ್ದಾರೆ.

೧. ಶ್ರೀಪ್ರಹ್ಲಾದರಾಜ ಚರಿತ್ರೆಯಲ್ಲಿ, ಬಾಲಕ ಪ್ರಹ್ಲಾದ ರಾಜನು ದೈತ್ಯ ಬಾಲಕರಿಗೆ ನೀಡಿದ ಉಪದೇಶವನ್ನು ವಿವರವಾಗಿ ತಿಳಿಸಿದ್ದಾರೆ. ಇದು ಈ ಕೃತಿಯ ವಿಶೇಷವಾಗಿದೆ.

೨. ಹಲವು ಹರಿದಾಸರಷ್ಟೆ ಶ್ರೀಹರಿಯ ವಿರಾಟ ಸ್ವರೂಪ ವರ್ಣನೆ ಮಾಡಿದ್ದಾರೆ. ಇವರು ವಾಮನಪ್ರುದುರ್ಭಾವದಲ್ಲಿ ವಿರಾಟ ಸ್ವರೂಪ ವರ್ಣನೆ ಕೊಟ್ಟಿದ್ದಾರೆ.

೩. ದಾಸರು ತಮ್ಮ ಕೃತಿಗಳನ್ನು ಅಷ್ಟೀ ಛಂದಸ್ಸಿನಲ್ಲಿಯೂ, ಕೆಲವನ್ನು ಪ್ರಥಮಾಕ್ಷರ ಪ್ರಾಸದಲ್ಲಿಯೂ, ಕೆಲವನ್ನು ದ್ವಿತೀಯಾಕ್ಷರ ಪ್ರಾಸದಲ್ಲಿಯೂ ರಚಿಸಿದ್ದಾರೆ.

೧. ಶ್ರೀವಿಷ್ಣು ಸಹಸ್ರನಾಮಗಳಿಗೆ ಅಷ್ಟೀ ಛಂದಸ್ಸಿನಲ್ಲಿ ಬರೆದು ಕನ್ನಡದಲ್ಲಿ ಎಲ್ಲಾ ನಾಮಗಳಿಗೂ ಬೃಹತೀಸಹಸ್ರಕ್ಕೆ ಅನ್ವಯವಾಗುವಂತಹ ಅರ್ಥವನ್ನು ಹೇಳಿ ಸ್ತುತಿರೂಪ ಭಾಷ್ಯವನ್ನು ಹೇಳಿರುವ ದಾಸರಲ್ಲಿ ಇವರೇ ಪ್ರಥಮರಾಗಿದ್ದಾರೆ.

೨. ಎಲ್ಲ ಹರಿದಾಸರೂ, ರಾಮಾಯಣದಲ್ಲಿ ಕಥಾ ಪ್ರಸಂಗಗಳನ್ನೋ, ಶ್ರೀರಾಮದೇವರನ್ನೋ, ಹನುಮಂತನನ್ನೋ ಕುರಿತು ಕೃತಿಗಳನ್ನು ರಚಿಸಿದ್ದಾರೆ. ಆದರೆ ಪೂರ್ಣವಾದ ರಾಮಾಯಣವನ್ನು ರಚಿಸಿ, ನಿರ್ಣಯಾತ್ಮಕ ವಿಷಯಗಳಿಗೆ ಆದ್ಯತೆ ನೀಡಿರುವವರಲ್ಲಿ ಶ್ರೀಪ್ರಸನ್ನ ಶ್ರೀನಿವಾಸದಾಸರು ಅಗ್ರಗಣ್ಯರೆನ್ನಬಹುದು. ಇದಕ್ಕೆ ಫಲಸ್ತುತಿ ಯನ್ನು ಹೇಳಿದ್ದಾರೆ. ರಾಮಾಯಣದಲ್ಲಿ ಬಹುತೇಕ ನುಡಿಗಳು ಶ್ರೀಹರಿಯನ್ನೇ ಸಂಬೋಧಿಸಿ ಬರೆದಿದ್ದಾರೆ. ಈ ದಾಸಾರ್ಯರು ಲೌಕಿಕ ಜನರತ್ತ ತಿರುಗದೇ ಎಲ್ಲವನ್ನೂ ಶ್ರೀಹರಿಯ ಕಡೆಗೇ ನೋಡಿದ್ದಾರೆ.

೩. ಶ್ರೀಮದ್ ಭಾಗವತದ ಪ್ರಥಮ ಸ್ಕಂಧದಲ್ಲಿ ಇಪ್ಪತ್ತು ಅಧ್ಯಾಯದಲ್ಲಿ ಬರುವ ವಿಷಯಗಳನ್ನು ತಮ್ಮ ರಚನೆ ಮೂಲಕ ಹೇಳುತ್ತಾ, ಹರಿದಾಸ ಸಾಹಿತ್ಯಕ್ಕೆ ಹೊಸ ಆಯಾಮ ನೀಡಿದ್ದಾರೆ.

೪. ಅದೇ ರೀತಿ ಬ್ರಹ್ಮಸೂತ್ರಾಮೃತಸಾರದಲ್ಲಿ ೩ ಅಧ್ಯಾಯಗಳಲ್ಲಿ ಬರುವ ೩೨೫ ಸೂತ್ರಗಳಲ್ಲಿ ೧೦೧ ಸೂತ್ರಗಳಿಗೆ ಸ್ತುತಿರೂಪ ಭಾಷ್ಯವನ್ನು ರಚಿಸಿದ್ದಾರೆ. ಸ್ತುತಿ ರೂಪ ಎಂದೊಡನೆ ನಾವು ತಿಳಿಯಬೇಕಾದ್ದು ಅದರಲ್ಲಿ ಅಡಗಿರುವ ಮಂತ್ರಗಳಷ್ಟೇ ಧಾರ್ಢ್ಯತನವಿರುತ್ತದೆ ಎಂಬ ಅಂಶವನ್ನು ಗಮನಿಸಬೇಕು. ಬ್ರಹ್ಮಸೂತ್ರಾಮೃತವೂ ಹರಿದಾಸ ಸಾಹಿತ್ಯಕ್ಕೆ ಪ್ರಪ್ರಥಮವಾಗಿದೆ.

೫. ಬ್ರಹ್ಮಸೂತ್ರ ಅಧಿಕರಣ ಸಾರಾಮೃತ ಕೀರ್ತನೆಗಳು. ಅಧಿಕರಣ ಎಂದರೆ ಆಯಾ ಬ್ರಹ್ಮ ಸೂತ್ರಗಳಲ್ಲಿ ಅಡಕವಾಗಿರುವ ಮುಖ್ಯ ವಿಷಯಗಳ ಮೇಲಿನ ಪ್ರಸ್ತಾವನೆ ಆಗಿರುತ್ತದೆ. ಇಂತಹ ಕ್ಲಿಷ್ಟವಾದ ವಿಷಯದ ಮೇಲೂ ಕೀರ್ತನಾ

ರೂಪವಾಗಿ ಹೇಗೆ ಮಾಡಲು ಸಾಧ್ಯ ಎನ್ನುವುದಕ್ಕೆ ದಾಸರ ೩ ಕೀರ್ತನೆಗಳೇ ಸಾಕ್ಷಿ ಆಗಿವೆ. ಕೀರ್ತನಾವಿಷಯಗಳು ಅತ್ಯಂತ ಸರಳ ಹಾಗೂ ಹೇಳಿರುವ ರೀತಿಯೂ ಸರಳವಾಗಿದೆ. ದಾಸರು ಈ ಬಗ್ಗೆ ಇನ್ನು ಹೆಚ್ಚಿಗೆ ಹೇಳಿರುವ ಕೃತಿಗಳ ಲಭ್ಯವಿಲ್ಲ.

೬. ಶ್ರೀರಾಘವೇಂದ್ರ ವಿಲಾಸವೂ ವೈಶಿಷ್ಟ್ಯ ಪೂರ್ಣವಾಗಿದ್ದು ಶ್ರೀ ವಾದಿರಾಜರ ತೀರ್ಥಪ್ರಬಂಧವನ್ನು ಜ್ಞಾಪಿಸುತ್ತದೆ. ದಾಸರು ಪ್ರಸ್ತಾಪಿಸುವ ತೀರ್ಥ ಕ್ಷೇತ್ರಗಳ ವರ್ಣನೆ ಹೊಸವಾಗಿದ್ದು, ತೀರ್ಥಕ್ಷೇತ್ರಗಳ ನೇರ ನಕ್ಷೆಯನ್ನು ನಮಗೆ ನೀಡಿದ್ದಾರೆ.

ಈ ಎಲ್ಲಾ ಅಂಶಗಳನ್ನು ನೋಡಿದಾಗ ದಾಸರು ಹರಿದಾಸ ಸಾಹಿತ್ಯಕ್ಕೆ ಹೊಸ ಆಯಾಮವನ್ನು ನೀಡಿದ್ದಾರೆ ಎಂಬುದರಲ್ಲಿ ಸಂದೇಹವೇ ಇಲ್ಲ.

ಕೃತಜ್ಞತೆಗಳು

ಶ್ರೀ ಪ್ರಸನ್ನ ಶ್ರೀನಿವಾಸದಾಸರ ಕೀರ್ತನೆಗಳ ಸಂಪಾದನಾ ಕಾರ್ಯದಲ್ಲಿ ಹಲವಾರು ರೀತಿಗಳಲ್ಲಿ ನೆರವಾದವರಿಗೆ ಕೃತಜ್ಞತೆಗಳನ್ನು ಸಲ್ಲಿಸುವುದು ಆದ್ಯ ಕರ್ತವ್ಯವಾಗಿದೆ.

ಮೊದಲನೆಯದಾಗಿ ಕನ್ನಡ ಸಂಸ್ಕೃತಿ ನಿರ್ದೇಶನಾಲಯದಿಂದ ಪ್ರಕಟವಾಗಲಿರುವ ಸಮಗ್ರ ದಾಸಸಾಹಿತ್ಯದ ಪ್ರಕಟನ ಸಮಿತಿಯವರಿಗೂ ಈ ಕಾರ್ಯವನ್ನು ನಿರ್ವಹಿಸುವಂತೆ ತಿಳಿಸಿ ಮಾರ್ಗದರ್ಶನಮಾಡಿ ಹಸ್ತಪ್ರತಿಯನ್ನು ಪರಿಶೀಲಿಸಿದ ದಾಸಸಾಹಿತ್ಯ ತಜ್ಞರೂ ಆದ ಶ್ರೀನಿವಾಸ ಹಾವನೂರ ಅವರಿಗೆ ನಾನು ಆಭಾರಿ ಆಗಿದ್ದೇನೆ. ಶ್ರೀ ಪ್ರಸನ್ನ ಶ್ರೀನಿವಾಸದಾಸರ ಲಭ್ಯ ಪ್ರಕಟಿತ ಕೃತಿಗಳನ್ನು ಕೊಟ್ಟು ಈ ವಿಷಯವನ್ನು ಗಮನಕ್ಕೆ ತಂದ ಶ್ರೀ ಅರಳುಮಲ್ಲಿಗೆ ಪಾರ್ಥಸಾರಥಿ ಅವರಿಗೆ ವಂದನೆಗಳು. ಅತಿಮುಖ್ಯವಾಗಿ ಅತ್ಯಲ್ಪಕಾಲದಲ್ಲಿ ಕೀರ್ತನೆಗಳ ಸಂಪಾದನೆ, ಸಂಗ್ರಹ, ಹಸ್ತಪ್ರತಿಸಿದ್ಧತೆ ಕಾರ್ಯದಲ್ಲಿ ಏಕನಿಷ್ಠೆಯಿಂದ ನೆರವಾಗಿ ಪ್ರಸನ್ನ ಶ್ರೀನಿವಾಸದಾಸರ ಕೀರ್ತನ ಸಾಮಗ್ರಿಯನ್ನು ಒದಗಿಸಿದ ಪ್ರಸನ್ನ

ಶ್ರೀನಿವಾಸದಾಸರ ಸಾಕ್ಷಾತ್ ಶಿಷ್ಯರುಗಳಾದ ಸರ್ವಶ್ರೀ ಎನ್. ರಾಘವೇಂದ್ರರಾವ್, ದಿ॥ ಜಿ. ತಿರುಮಲ, ಆನಂದರಾವ್, ಎನ್. ಕೆ. ಶ್ರೀಧರಮೂರ್ತಿ, ಅವರ ಕುಟುಂಬದವರಾದ ಶ್ರೀಮತಿ. ಎನ್. ಎಸ್. ಚೂಡಾಮಣಿ, ಬಿ. ಎಸ್. ಕೃಷ್ಣ ಮತ್ತು ಇತರರಿಗೆ ಎಷ್ಟು ಕೃತಜ್ಞತೆಗಳನ್ನು ಸಲ್ಲಿಸಿದರೂ ಸಾಲದು. ಈ ಪೈಕಿ ದಿ॥ ಜಿ. ತಿರುಮಲ ಅವರ ನೆರವಂತೂ ಅಪಾರವಾದುದು. ಇವರೆಲ್ಲರ ಗುರುಭಕ್ತಿ, ಶ್ರದ್ಧಾಶಕ್ತಿಗಳು ನಿಜಕ್ಕೂ ಆದರ್ಶಪ್ರಾಯವಾಗಿದೆ. ಕೀರ್ತನೆಗಳ ನಕಲು ಕಾರ್ಯದಲ್ಲಿ ಶ್ರೀಮತಿ ಎಂ. ಆರ್. ಲಕ್ಷ್ಮೀದೇವಿ, ಡಾ. ಪಿ. ಶಾರದಾ ಮತ್ತು ಶ್ರೀ. ಎಂ. ಕೆ. ಗೋಪೀನಾಥ್ ನೆರವಾಗಿದ್ದಾರೆ. ಅವರಿಗೆ ವಂದನೆಗಳು.

ಕನ್ನಡ ದಾಸಸಾಹಿತ್ಯಕ್ಕೆ ಯತಿವರ್ಯರ ಕಥನ ಕೀರ್ತನೆಗಳು, ದೀರ್ಘ-ಕೀರ್ತನೆಗಳ ಮೂಲಕ ರಾಮಾಯಣ, ವಿಷ್ಣು ಸಹಸ್ರನಾಮ, ಬ್ರಹ್ಮಸೂತ್ರ, ಭಾಗವತಗಳನ್ನು ವಿಶಿಷ್ಟ ಕೊಡುಗೆಗಳನ್ನಾಗಿ ನೀಡಿರುವ ಶ್ರೀ ಪ್ರಸನ್ನ ಶ್ರೀನಿವಾಸದಾಸರ ಕೀರ್ತನೆಗಳ ಸಂಪುಟ ದಾಸಸಾಹಿತ್ಯ ಪ್ರೇಮಿಗಳಿಗೆ ಕನ್ನಡ ಕೀರ್ತನ ಸಾಹಿತ್ಯಾಸಕ್ತರ ಮೆಚ್ಚುಗೆಗೆ ಪಾತ್ರವಾಗುತ್ತದೆ ಎಂದು ನಂಬಿದ್ದೇನೆ.

ಸಂಪಾದಕ

ಬೆಂಗಳೂರು

ಪ್ರೊ. ಜಿ. ಅಶ್ವತ್ಥನಾರಾಯಣ

ಕೀರ್ತನೆಗಳ ಕ್ರಮಸೂಚಿ

ಕೀರ್ತನೆ ಸಂಖ್ಯೆ	ಕೀರ್ತನೆಯ ಮೊದಲ ಸಾಲು	ಪುಟ ಸಂಖ್ಯೆ
	ಶ್ರೀ ವಾಮನ	
೧೬.	ಭೂಮಾದಿ ಗುಣನಿಧಿಯೇ ಅನಘ ಮಂಗಳರೂಪ	೭೬
	ನಿರ್ವ್ಯೆಷಮ್ಯ ಯಾಚನೆ ಸ್ತೋತ್ರ	
೧೭.	ವಾಮನ ಸುಸೌಂದರ್ಯಸಾರ ಲಕ್ಷ್ಮೀಶ	೯೮
	ಶ್ರೀ ವಾಮನ ತ್ರಿವಿಕ್ರಮ	
೧೮.	ಜಯತು ವಾಮನನಿಗೆ ಜಯತು ತ್ರಿವಿಕ್ರಮ	೧೦೦
	ಶ್ರೀ ಅಷ್ಟಾಕ್ಷರ ವಾಮನಮಂತ್ರ	
೧೯.	ಅಮಲ ಗುಣಪರಿಪೂರ್ಣ ಅಮೃತಸುಖ ಚಿನ್ಮಯನೆ	೧೦೦
	ಶ್ರೀ ಪರಶುರಾಮ	
೨೦.	ಶರಣು ಶರಣು ಶರಣು ಪರಶುರಾಮನೆ ಶರಣು ಶರಣು	೧೦೧
	ಶ್ರೀರಾಮ	
೨೧.	ಜಯ ಜಯ ಜಯರಾಮಚಂದ್ರ	೧೧೩
	ಶ್ರೀ ರಾಮಮಂತ್ರ	
೨೨.	ಶ್ರೀ ರಾಮ ಸೀತಾರಮಣ ಮಾಂ ಪಾಹಿ	೧೨೩
	ಶ್ರೀ ಕೃಷ್ಣ ಪ್ರಾದುರ್ಭಾವ ಸ್ತುತಿ	
೨೩.	ಪೂರ್ಣ ಸುಗುಣಾರ್ಣವನೇ ಅನಘ ಮಾಯಾ ರಮಣ	೧೨೫
	ಶ್ರೀ ರುಕ್ಮಿಣೀಶ ಕಲ್ಯಾಣ	
೨೪.	ಪೂರ್ಣ ಸುಗುಣಾರ್ಣವನೇ ಅನಘ ಮಾಯಾರಮಣ	೧೨೬

ಅನುಬಂಧಗಳು

೧. ಕಠಿಣ ಶಬ್ದಗಳ ಅರ್ಥ

೨. ಟಿಪ್ಪಣಿಗಳು

೩. ಅಂಕಿತದ ವಿಶೇಷಣಗಳು

೪. ಶ್ರೀ ಪ್ರಸನ್ನ ಶ್ರೀನಿವಾಸದಾಸರ ಪ್ರಕಟಿತ ಕೃತಿಗಳು

೫. ಕೀರ್ತನೆಗಳ ಅಕಾರಾದಿ

೬. ಸಹಾಯಕ ಸಾಹಿತ್ಯ

ಅನುಬಂಧ-೧

ಕಠಿಣ ಶಬ್ದಗಳ ಅರ್ಥ

ಅ-೧

ಅನುಜ - ತಮ್ಮ

ಅಪರಿಚ್ಛಿನ

ಸುಗುಣಪೂರ್ಣ - ಸದ್ಗುಣ ಪರಿಪೂರ್ಣ

ಅರದೂರ - ಪಾಪವನ್ನು ಕಳೆಯುವವ

ಅನಂತೋರು - ಅನಂತ ಗುಣಗಳುಳ್ಳವನು

ಅಖಿಳ - ಎಲ್ಲದಕ್ಕೂ

ಅದ್ರಿ - ದೇವತೆಗಳು

ಅಮಿತ - ಮಿತಿಯಿಲ್ಲದ

ಅಧುನಾಪಿ - ಈಗಲೂಕೂಡ

ಅಸಿತ - ಕಪ್ಪು

ಅಶ್ರುತ - ಕೇಳಿಲ್ಲದ

ಅರ್ಭಕ - ಮಗು

ಅನಘ - ನಿರ್ದೋಷ

ಅವ್ಯಕ್ತ - ಕಾಣದ

ಅಣೋರಣೀಯವಾನ್ -ಅತಿಚಿಕ್ಕದಕ್ಕಿಂತ ಚಿಕ್ಕವನು

ಅವ್ಯಯ - ನಾಶರಹಿತ

ಅಭಿನ್ನ - ಭಿನ್ನವಲ್ಲದ

ಅಬ್ಜ - ಕಮಲ

ಅಧೋರ್ಧ್ವಲೋಕ - ಸ್ವರ್ಗಾದಿ ೭ ಲೋಕ ಪಾತಾಳದಿ ೭ ಲೋಕ

ಅಮ್ಲಾನ - ಯಾವಾಗಲೂ ಬಾಡದಿರುವ

ಅರಿಹರ - ಪಾಪವನ್ನು ಕತ್ತರಿಸುವವನು

ಅಮಿತಾರ್ಕಪ್ರಕಾಶ- ಕೋಟಿಸೂರ್ಯ ಪ್ರಕಾಶ

ಅತುಳ - ಅನಂತಾನಂತ

ಅಸು - ಪ್ರಾಣ

ಅಭಿಮಂತ್ರಿತ - ಮಂತ್ರಿಸಲ್ಪಟ್ಟ

ಅವಿದ್ಯಾ - ಅಜ್ಞಾನ

ಅನೀಶ - ಸರ್ವಚೇಷ್ಟಕ

ಅಪತ್ಯನ್ನ - ದುರ್ಬುದ್ಧಿಯುಳ್ಳವನು

ಅಪವ್ರತ - ಕೆಟ್ಟವಾಕ್ಯ

ಅವಿಕ್ಲವ - ಕೆಟ್ಟಭಾವನೆ

ಅಸಿ - ಕತ್ತಿ

ಅಹಿ - ಸರ್ಪ

ಅರುಣ - ಸೂರ್ಯನ ಸಾರಥಿ

ಅಕ್ಷೋಭ್ಯ - ಕ್ಷೋಭೆಗೊಳಗಾ-ಗದವನು

ಅಮ್ಯಾತಸುಖ - ಮೋಕ್ಷಸುಖ

ಅದ್ರಿಜಾಪತಿ - ಪಾರ್ವತಿ ಪತಿ(ರುದ್ರ)

ಅಚ್ಛಿನ್ನ - ಅಖಂಡ

ಅವ್ಯಯ - ನಾಶರಹಿತ

ಅಹಿತಲ್ಪ - ಶೇಷಶಾಯಿ

ಅಜರ - ಮುಪ್ಪಿಲ್ಲದವ

ಶ್ರೀ ಪ್ರಸನ್ನ ಶ್ರೀನಿವಾಸದಾಸರ ಕೀರ್ತನೆಗಳು

ಶ್ರೀ ಕ್ಷಿಪ್ರ ಪ್ರಸಾದ ಗಣೇಶ

೧

ಶರಣು ಶರಣು ಶರಣು ಸಿದ್ಧಿ ವಿನಾಯಕ
ಶರಣು ಸಿದ್ಧಿ ಪ್ರದಾಯಕ ಪ

ಸ್ಕಂಧ ಅನುಜನೆ ಬಂದು ಈಗನೇ
ಅಂದದಿ ಎನ್ನ ಪಾಲಿಸೋ
ರಕ್ತವರ್ಣ ಸುರೇಶ್ಮಿ ವಸನನೆ ೧

ಉದಯ ಭಾಸ್ಕರ ತೇಜನೇ
ಅಜನ ತಾತ ಪ್ರಸನ್ನ ಶ್ರೀನಿವಾಸನಿಗೆ
ನಿಜದಾಸ ಗಜಮುಖ ೨

ಶ್ರೀ ಗಣೇಶ

೨

ಕ್ಷಿಪ್ರ ಪ್ರಸಾದನೆ ಪ್ರಣಮಿಸುವೆ ಕರುಣಾಳು
ವಿಪ್ರ ಪ್ರಬುದ್ಧರಿಗೆ ಪ್ರಿಯತರ ಗಣೇಶ
ಅಪ್ರತಿಸುಪೂರ್ಣ ಸಚ್ಛಕ್ತಿಸ್ವರೂಪನು
ಸುಪ್ರಕಟ ನಿನ್ನೊಳು ಪ್ರಭಂಜನಸಮೇತ ಪ

ಬಾಲಾರ್ಕನಿಭ ವಸ್ತ್ರ ತನುಮಾಲ್ಯ ಲೇಪನದಿ
ಹೊಳೆಯುವ ಮಹೋದರ ಗಜಾನನ ಸುಫಲದ

ಥಳಥಳಿಪ ಪಾಶ ದಂತಾಂಕುಶಾಭಯಹಸ್ತ
ಒಲಿದು ವಿಘ್ನವ ಕಳೆದು ಕಾಮಿತಾರ್ಥವನೀವೆ ೧

ನಾಕಭೂಪಾತಾಳ ನಿಖಿಳ ಲೋಕಂಗಳ
ಮುಕ್ತಾಮುಕ್ತರ ಸರ್ವಧಾರಕಾಕಾಶ
ಏಕಾತ್ಮ ವಿಶ್ವನು ಪ್ರಕಾಶಿಪನು ನಿನ್ನೊಳು
ಶಂಕರಾತ್ಮಜ ಭೂತಾಕಾಶಾಭಿಮಾನಿ ೨

ತ್ರಾತ ಪದ್ಮಜಪಿತ ಪ್ರಸನ್ನ ಶ್ರೀನಿವಾಸನ
ಅತಿ ವಿಮಲ ನಾಭಿದೇಶದಲಿರುವೆ ಮುದದಿ
ಕಾರ್ತಿಕೇಯನ ಅನುಜ ವಿತ್ತಪಗೆ ಸಮ ಶೇಷ
ಶತಸ್ಥರಿಗೆ ಉತ್ತಮನೆ ಗುರುವರ ನಮಸ್ತೆ ೩

ಶ್ರೀಲಕ್ಷ್ಮೀನಾರಾಯಣ ಸ್ತುತಿ

೩

ಗುಣಪೂರ್ಣಾಚ್ಯುತೋ ವಿಷ್ಣುಃ ಅಪ್ರಾಕೃತರೂಪವಾನ್
ಅನ್ನದಾತಾ, ಧನದಾತಾ ಆಯುಷ್ಯಾರೋಗ್ಯದೋ ಹರಿಃ
ಚಕ್ಷುದಾತಾ ಜ್ಞಾನದಾತಾ ದೇಹಿ ತ್ವಮಿ ಭಕ್ತಿ ಸದಾ
ಮದಾದರ್ಭಿಹಿಃ ಸರ್ವತ್ರ ತ್ವಮೇವ ಜ್ವಲತಿ ಸದಾ
ತ್ವತ್ಕೃಪಯಾ ಏವ ಪಶ್ಯಾಮಿ ಭೋ ವಾಮನ ಭಾಮನಾ
ಮದ್‌ಹೃಸ್ಥ ಹರಿಣಾವೇ ಕ್ರಿಯಾದರ್ಶನ ಚಿಂತನಂ
ವಾಯು ಯಜ್ಞಸ್ಯ ಪಾದಸ್ತೇಃ ಮನ್ಮನತಿಚ್ಛಾಮೀಚ
ವಾಯುಯಜೇ ಸದಾತೀಕ್ಷು ಯಜ್ಞನಾಮಾ ಶ್ರೀಯಃ ಪತಿಃ
ಶ್ರೀ ಲಕ್ಷ್ಮೀನಾರಾಯಣಾಭ್ಯಾಂ ಸದಾ ವಂದೇ ಮಮಸ್ವಾಮಿಃ

ಶ್ರೀ ಪ್ರಸನ್ನ ಶ್ರೀನಿವಾಸದಾಸರ ಶ್ರೀಹರಿ ಪ್ರಾದುರ್ಭಾವಗಳು

ಪ್ರಸನ್ನ ಶ್ರೀ ಮತ್ಸ್ಯಾವತಾರ

೪

ಲೀಲಾವತಾರನೇ ಪ್ರಳಯಾಬ್ಧಿ ಸಂಚರನೇ
ಮಾಲೋಲ ಸುಖಚಿತ್ ತನು ಮತ್ಸ್ಯರೂಪ
ಬಾಲಾರ್ಕ ಕೋಟ್ಯಮಿತ ಜ್ಯೋತಿರ್ಮಯ ಸುಂದರನೇ
ಕಾಲಗುಣದೇಶ ಅಪರಿಚ್ಛಿನ್ನ ಪೂರ್ಣ ಸುಗುಣಾರ್ಣವನೇ ಶರಣು ಪ

ಪ್ರಳಯದಲಿ ಭೂರಾದಿ ಲೋಕಂಗಳು
ಮುಳಗಿರಲು ಹಯಗ್ರೀವನಾಮ ದಾನವನು
ಸೆಳೆದು ವೇದಗಳ ತನ್ನೊಳ್ ಅಡಗಿಸಿದ್ದವನ
ಸೀಳ್ದಿ ನೀ ಬಂದು ವೇದೋದ್ಧರನೇ ಮತ್ಸ್ಯ ೧

ಗೋ ವಿಪ್ರ ಸುರ ಸಾಧು ಜನರ ವೇದಂಗಳ –
ಕಾವ ಸರ್ವೇಶ್ವರನೇ ಪುರುಷಾರ್ಥದಾತ
ಸರ್ವರಿಗೂ ಸುಖವೀವುದು ನಿನ್ನ ಸುಚರಿತ್ರೆ
ಶ್ರೀವರನೇ ಮತ್ಸ್ಯರೂಪಿಯೇ ಶರಣು ಶ್ರೀ ಕೃಷ್ಣ ೨

ಹಂಸ ಐರಾವತ ತಿತ್ತಿರಾ ಶುಕಗಳು
ಈ ಪಕ್ಷಿಗಳಲ್ಲಿ ತರತಮ ಉಂಟು
ಸುಸುಖ ಐಶ್ವರ್ಯೋನ್ನಾಹ ಅದರಂತೇವೇ
ಈ ಸುನುಡಿಗಳ ಪಠನ ಮಾಳ್ಪ ಸುಜನರಿಗೆ ೩

ಗುರುರ್ಗುರೋರ್ ಗುರು ಮನು ಶುಕ ಮಧ್ವಾಂತಸ್ಥ
ಪರಮಾತ್ಮ ಹರಿ ವಿಷ್ಣೋ ಉದ್ದಾಮ ಸಾಮ
ಅರದೂರ ಅನಂತೋರು ನಿಜಶಕ್ತಿ ಪರಿಪೂರ್ಣ
ಉರು ಸುಗುಣ ನಿಧಿಯೇ ಶಫರಿರೂಪ ಮಾಂಪಾಹಿ ೪

ಸರ್ವೋತ್ತಮನು ನಾರಾಯಣನೇ ಎಂದರಿತು
ದ್ರವಿಡ ದೇಶಾಧಿಪನು ಸತ್ಯವ್ರತರಾಯ
ಸುವಿವೇಕದಿ ನಿನ್ನ ಕುರಿತು ತಪವಚರಿಸಿದನು
ಭಾವ ಶುದ್ಧನು ಸಲೀಲಾಶನ ದೃಢವ್ರತನು ೫

ವಿವಸ್ವಾನ್ ಮಗ ಶ್ರಾದ್ಧದೇವನು ಪ್ರಖ್ಯಾತ
ವೈವಸ್ವತ ಮನುವೇ ಇಂದಿನ ಮನುವು
ಪೂರ್ವದಲಿ ಈತನೇ ಸತ್ಯವ್ರತ ಸಾಮ್ರಾಟ್
ಅವನಿಗೆ ನಮೋ ಎಂಬೆ ನಿನ್ನವನೆಂದು ೬

ರಾಜ ಋಷಿ ಈ ಮಹಾನ್ ಕೃತಮಾಲಾ ನದಿಯಲ್ಲಿ
ನಿಜ ಭಕ್ತಿಯಿಂದ ಜಲತರ್ಪಣವ ಚರಿಸೆ
ಅಂಜಲಿ ಉದಕದಲಿ ಮುದ್ದು ಮರಿ ಮೀನೊಂದು
ಸರಿಜ್ಜಲ ಸಹಿತದಿ ಬಂದದ್ದು ಕಂಡ ೭

ಅರಸ ಕರುಣದಲಿ ಅದನು ನದಿಯಲಿ ಬಿಡಲಿರೆ
ಅರುಹಿತು ತನ್ನ ವೃತ್ತಾಂತವ ಆ ಮೀನು
ಪರಿಪರಿಯಾಗಿ ತನ್ನ ಸಜಾತೀಯರ ಭಯ ತನಗೆ ಎಂದು
ನೀರು ಪ್ರವಾಹದಲ್ಲಿ ತನ್ನ ಬಿಡಬೇಡವೆಂದು ಪ್ರಾರ್ಥಿಸಿತು ರಾಜನ್ನ ೮

ನಾರಾಯಣಾದಿ ಸುಮಂತ್ರಿತ ಅಭಿಯಂತ್ರಿತ ತನ್ನ
ಸ್ಫುರತ್ ಕಲಶ ಕಮಂಡಲು ನೀರಲ್ಲಿ ಮೀನು ಮರಿ ಇಟ್ಟುಕೊಂಡು
ಆಶ್ರಮಕೆ ಕೃತ ಕೃತ್ಯ ಮನದಿ ರಾಜನು ಬಂದ
ಮರುದಿನ ಉದಯದಲಿ ಕಂಡ ಆಶ್ಚರ್ಯವ ೯

ಕಮಂಡಲ ಕಲಶ ಪೂರಾವು ಏಕ ರಾತ್ರಿಯಲ್ಲೇವೇ
ಆ ಮತ್ಸ್ಯ ಮರಿ ಬೆಳೆದಿದ್ದು ಆಶ್ಚರ್ಯ ಕಂಡ
ಕಮಂಡಲು ಸಾಲದೇ ವಿಸ್ತಾರವಾದ ಸ್ಥಳ
ನಿರ್ಮಾಣ ಮಾಡಿ ನೀರು ತುಂಬಿಸಿ ಅದರೊಳ್ ಮೀನನ್ನ ಬಿಟ್ಟ ೧೦

ಉದಕ ತುಂಬಿದ ಕುಂಟೆ ಸರೋವರವನ್ನು
ಮತ್ಸ್ಯವು ಪೂರ್ಣ ವ್ಯಾಪಿಸಿದ ಆಶ್ಚರ್ಯ

ಅತಿಶಯ ಲೀಲಾ ವಿನೋದವ ಕಂಡ ರಾಜ
ಉದಧಿಯಲಿ ಬಿಡಲು ನಿಶ್ಚಯಿಸಿ ಕ್ರಮಗೊಂಡ ೧೧

ಮಹೋದಧಿಯಲ್ಲಿರುವ ಮಕರಾದಿಗಳು ತನ್ನ ನುಂಗುವನೆಂದು
ಮಹಾರಾಜನಿಗೆ ಆ ಮೀನು ಹೇಳಿ ತಾನು
ಆದರೂ ರಾಜನು ಅಷ್ಟರಲ್ಲೇ ಉದಧಿಯೊಳು ಬಿಟ್ಟನು
ಮೀನನ್ನು ಆಗ ದೊಡ್ಡ ಆಶ್ಚರ್ಯವೊಂದನ್ನ ಕಂಡ ಆ
ಮೀನು ಮತ್ತೂ ದೊಡ್ಡದಾಯಿತು ೧೨

ಶತಯೋಜನ ಮಹಾವೀರ್ಯ ಜಲಚರಗಳು
ಯಾವುದೂ ಕಂಡಿಲ್ಲ ಕೇಳಿಲ್ಲ ಜಗದಿ
ಅತಿ ಅದ್ಭುತ ಮಹಾ ಮೀನರೂಪನು ಸಾಕ್ಷಾತ್
ಉದಧಿಶಾಯಿ ಶ್ರೀಮನ್ನಾರಾಯಣ ನೀ ಎಂದ ೧೩

ಜೀವರುಗಳಿಗೆ ಅನುಗ್ರಹ ಮಾಡಲಿಕ್ಕೇವೇ
ದೇವ ನೀ ಮತ್ಸ್ಯರೂಪ ಪ್ರಕಟಿಸಿರುವಿ
ಕಾವ ಕಾರುಣಿಯೇ ಪುರುಷಶ್ರೇಷ್ಠ ಸರ್ವೋತ್ತಮನೇ
ಸರ್ವದಾ ನಮೋ ಜಗಜ್ಜನ್ಮಾದಿ ಕರ್ತ ೧೪

ಶ್ರವಣ ಸಂಸ್ತುತಿಸಿ ಮನನ ಧ್ಯಾನಾದಿಗಳು ಮಾಡಿ
ಶ್ರೀವರನೇ ನಿನ್ನ ಮಹಾತ್ಮ್ಯ ಜ್ಞಾನ
ಪೂರ್ವಕ ನಿನ್ನಲ್ಲಿ ಸುಸ್ನೇಹರತನಾದ
ವಿವೇಕಿ ಪ್ರಪನ್ನರ ಸಲಹಿ ಗತಿ ಈವಿ ೧೫

ಯಥಾರ್ಥ ಜ್ಞಾನವ ಭಕ್ತಿಮಾನ್ ರಾಜನು ಸ್ತುತಿಸಲು
ಮುದದಿಂದ ಇನ್ನೂನು ನಿನ್ನ
ವ್ರತತಿಜೇಕ್ಷಣ ಜಗತ್ಪತಿಯೇ ನೀನು ಆ
ಮತಿವಂತನಿಗೆ ಪೇಳಿದಿ ಅವತಾರಕಾರ್ಯ ೧೬

ಏಳುದಿನವಾಗಲು ಭೂರಾದಿ ಲೋಕಗಳು
ಪ್ರಳಯಜಲದಲ್ಲಿ ಮುಳುಗಿ ಹೋಗುವವು

ಒಳ್ಳೇ ಓಷಧಿ ಸರ್ವವೀರ್ಯತರ ಬೀಜ –
ಗಳ ಸಪ್ತಋಷಿ ಸಹ ಕಾದಿರು ಎಂದಿ ೧೭

ಕಾದುಕೊಂಡು ಇರುವಾಗ ವಿಶಾಲ ನೌಕವು ಒಂದು
ಶ್ರೀದ ನೀ ಕಳುಹಿಸೆ ಜಲದ ಮೇಲ್ ಬರುವದು
ಅದರಲಿ ಅರೋಹಿಸಬೇಕು ಬೀಜಗಳ
ಸಪ್ತಋಷಿ ಸಹ ರಾಜ ಎಂದು ಬೋಧಿಸಿದಿ ೧೮

ಎಲ್ಲೆಲ್ಲೂ ಪ್ರಳಯಜಲ ತುಂಬಿ ತುಳಕಾಡುವುದು
ಲೋಲ್ಯಾಡುವುದು ನೌಕ ಗಾಳಿರಭಸದಲಿ
ಅಲ್ಲಿ ಸಮೀಪಿಸುವ ಮತ್ಸ್ಯರೂಪನ ನಿನ್ನ
ಹೊಳೆವ ಶೃಂಗದಿ ನಾವೆಯನು ಕಟ್ಟು ಎಂದಿ ೧೯

ನಾವೆಯನು ಬಂಧಿಸಲು ರಜ್ಜು ಸರ್ಪವು ಎಂದು
ಸುವ್ರತ ರಾಜನಿಗೆ ಉಪಾಯ ಪೇಳಿದ
ಸರ್ವಗುಣ ಪರಿಪೂರ್ಣ ನಿರ್ದೋಷ ಪರಬ್ರಹ್ಮ
ವಿಶ್ವ ವಿಷ್ಣೋ ಸೃಷ್ಟಾ ಪಾತಾ ರಮೇಶ ೨೦

ಈ ರೀತಿ ಆ ಮಹಾನ್ ಸತ್ಯವ್ರತರಾಜನಿಗೆ
ಹರಿ ನೀನು ಬೋಧಿಸಿ ಅಂತರ್ಧಾನವು ಆಗೇ
ಆ ರಾಜಋಷಿ ತಾನು ಮತ್ಸ್ಯರೂಪ ಹೃಷಿಕೇಶ
ಸಿರಿವರನೇ ನಿನ್ನನ್ನೇ ಧ್ಯಾನಿಸುತಲಿದ್ದ ೨೧

ಯುಕ್ತ ಕಾಲವು ಬಂತು ಉಕ್ಕಿತು ಸಮುದ್ರವು
ಸುತ್ತು ಮುತ್ತು ಎಲ್ಲೂ ಪೊಕ್ಕಿತು ಭೂಮಿಯಲಿ
ಅತ್ತ ಇತ್ತ ಇಲ್ಲೂ ಸುತ್ತಿ ಸುಳಿವ ನೀರು
ಭೀತಿಕರ ನೆನೆಯಲಿಕೆ ನೋಡೆ ಮತ್ತೆಷ್ಟೋ ೨೨

ಚಂಡಮಾರುತ ಪ್ರಚಂಡ ಮೇಘವು ಕರಿ
ಸೊಂಡಲಂತೆ ಹನಿ ಕಂಡಿಲ್ಲ ಇಂಥಾ ಮಳೆ
ಕಂಡು ನಾವೆಯ ರಾಜಕೊಂಡು ಬೀಜಗಳ ಕರ
ಕೊಂಡು ಋಷಿಗಳ ಏರಿಕೊಂಡನು ಬೇಗ ೨೩

ಕೇಶವನೇ ನಿನ್ನ ಧ್ಯಾನಿಸಲು ಆಗ
ಕೌಶೇಯ ಶೃಂಗಿ ಮಹಾಮತ್ಸ್ಯ ನೀ ಬರಲು
ಈಶ ನಿನ್ನಯ ಶೃಂಗಕ್ಕೆ ನೌಕವ ಕಟ್ಟಿ
ಸಂಸ್ತುತಿಸಿದನು ಮಧುಸೂಧನನೇ ನಿನ್ನ ೨೪

ಶ್ರೀ ಭಾಗವತಾಷ್ಟಮ ತ್ರಯೋವಿಂಶತ್ ಅಧ್ಯಾಯ
ಶುಭತಯ ವಿಜ್ಞಾನ ಬೋಧಕವು ಅದರ
ಸೊಬಗರಿತು ಯೋಗ್ಯರು ಪಠಿಸೆ ಪ್ರೇರಿಸು ಸ್ವಾಮಿ
ಸೌಭಾಗ್ಯಪ್ರದ ಶ್ರೀಶ ಮಾಂಪಾಹಿ ೨೫

ಏಕಶೃಂಗಧರ ಸ್ವರ್ಣ ಮತ್ಸ್ಯನಿಗೆ ಸರ್ಪದಿಂ
ಲಕ್ಷ ಯೋಜನೆ ಮೇಲಿನ ವಿಸ್ತಾರದಿ ಬಂಧಿಸಿದ
ಸತ್ಯವ್ರತ ರಾಜನು ಸಂತೋಷದಲಿ ಸ್ತುತಿಸಿದ
ಅನಾದಿ ಅವಿದ್ಯಾ ಪೀಡಿತ ಜನ ಸಂರಕ್ಷನ್ನ ೨೬

ಪರಮಹಂಸನ ಮೂಲ ಗುರೋ ಲಕ್ಷ್ಮೀಹಯವದನ
ಮೇರು ಇತರಾ ದೇವಹೂತಿ – ಸುತ ಶರಣು
ಘೋರ ಸಂಸಾರ ಬಂಧ ಮೋಚಕ ಹರಿಯೇ
ವರ ಸುಖಪ್ರದ ಸಂರಕ್ಷಕ ಮಾಂಪಾಹಿ ೨೭

ಶಕ್ರಾದಿ ಜಗತ್ತಿಗೆ ಗುರು ಗಂಗಾಧರನು
ಗಂಗಾಧರನಿಗೆ ಗುರು ಪ್ರಾಣ ಪದ್ಮಜರು
ಪಂಕಜಾಸನ ಪ್ರಾಣರಿಗೆ ಗುರು ರಮೇಶನು ಹರಿಯೇ
ಆ ಗುರು ಮೂಲಗುರು ಪರಮಗುರ್ರೋಗುರುವು ೨೮

ನಿನ್ನ ಅನುಗ್ರಹ ಹೊಂದಿದರು ನೀ ಪರಮಗುರು
ಎಂದು ತಿಳಿದು ಬದ್ಧ ಜೀವರ ಮೋಕ್ಷ ಪುರುಷಾರ್ಥ
ಅವಿದ್ಯಾಜ್ಞಾನ ಕಳೆದು ಪುಟವಿಟ್ಟ
ಸ್ವರ್ಣರಜತಪೋಲ್ ಶುಚಿ ಆಗಿಸುವಿ ದಯದಿ ೨೯

ಸರ್ವಲೋಕ ಜನರಿಗೆ ಹಿತಕರ ಸುಹೃತ್ ನೀನೇ
ಪ್ರಯೇಶ್ವರ ಆತ್ಮಾಗುರು ಜ್ಞಾನ ಅಭೀಷ್ಟಸಿದ್ಧಿಯು

ನೀ ಸುಹೃತ್ ಅಂದರೆ ಪ್ರತ್ಯುಪಕಾರ ಶೂನ್ಯನು
ಇನ್ನೂ ಬಹು ವಿಧದಿ ಪರಮಸಾಧು ಸ್ತುತಿಗೈದಿ ೩೦

ಸರ್ವಲೋಕಕೆ ನೀನೇ ಸುಹೃತ್ ಪ್ರಯೇಶ್ವರನು
ಶರ್ವ ಅಜ ಶಕ್ರಾದಿಗಳ ನಿಯಾಮಕನು
ಸರ್ವಾದಾನಂದಮಯ ಗುಣನಿಧಿ ಆತ್ಮನು
ಸರ್ವಾಭೀಷ್ಟಪ್ರದ ಜ್ಞಾನಸಿದ್ಧಿದನು ೩೧

ದೇವದೇವೋತ್ತಮನೇ ಆದಿಪೂರುಷ ಶ್ರೀಶ
ವಿಶ್ವೇಶ್ವರ ಮತ್ಸ್ಯರೂಪ ಭಗವಂತ
ನೀ ವಿಹಾರವು ಮಾಡಿ ಪ್ರಳಯಾರ್ಣವದಲಿ
ಕವಿವರ್ಯ ರಾಜನಲಿ ಸುಪ್ರೀತನಾದಿ ೩೨

ವೇದ ಉದ್ಧರಿಸಿದಿ ಹಿಂದೆ ಅಸುರನ್ನ ಕೊಂದು
ಯುಕ್ತ ಕಾಲದಿ ಈಗ ಪ್ರಳಯವು ತೀರೆ
ಸಾಧುವರ್ಯನು ಜ್ಞಾನವಿಜ್ಞಾನ ಕೋವಿದನು
ಸತ್ಯವ್ರತನಿಗೆ ಮನು ಪದವಿಯನು ಇತ್ತಿ ೩೩

ಮತ್ಸ್ಯಾವತಾರ ಸಂಕೀರ್ತನೆ ಮಾಳ್ಪರಿಗೆ
ಸಿದ್ಧಿ ಆಗುವುದು ಸರ್ವೇಷ್ಟ ಸದ್ಗತಿಯು
ಎಂದು ಪೇಳಿರುವಿ ಶುಕಪದ್ಮಭವಪತಿ ಶ್ರೀಶ
ಸಾತ್ಯವತಿ ಮೀನ ವೇಧಪಿತ ಪ್ರಸನ್ನ ಶ್ರೀನಿವಾಸ ೩೪

– ಇತಿ ಶ್ರೀ ಮತ್ಸ್ಯಾವತಾರ ಸಂಪೂರ್ಣಂ –

ಪ್ರಸನ್ನ ಶ್ರೀ ಕೂರ್ಮ

ॐ

ಪ್ರಥಮ ಅಧ್ಯಾಯ

ಶ್ರೀ ಕೂರ್ಮ ಪ್ರಾದುರ್ಭಾವ

ಲೀಲಾವತಾರನೇ ಸರ್ವ ಲೋಕಾಧಾರ
ಮಾಲೋಲ ಸುಖಚಿತ್ ತನು ಕೂರ್ಮರೂಪ
ಪಾಲಾಬ್ಧಿಜಾಪತಿ ಅನಘ ಅಜಿತ ಧನ್ವಂತರಿ
ಲೀಲಾ ಮೋಹಿನಿ ಅನಘ ಶರಣು ಮಾಂಪಾಹಿ ಪ

ವೇದಾದಿ ಸಚ್ಛಾಸ್ತ್ರ(ಪ್ರ)ಮೇಯ ವೇದವತೀಶ
ಪದುಮಜಾಂಡವ ಪಡೆದ ಜಗದೇಕಭರ್ತಾ
ಅದ್ವಿತೀಯನು ಸ್ವಾಮಿ ಸಮರಧಿಕರಿಲ್ಲದವ
ವೇಧ ಮುಕ್ಕಣ್ಣಾದಿ ಸುರಸೇವ್ಯ ಪಾಹಿ ೧

ಸತ್ಯ ಜ್ಞಾನಾನಂತ ಭೂಮಾದಿ ಗುಣನಿಧಿಯೇ
ಸತ್ಯಸೃಷ್ಟಿ ಮಾಳ್ಪಿ ಸತ್ಯನಾಮಾ
ಪ್ರತ್ಯಕ್ಷ ಪ್ರಮಾಣ ಸಿದ್ಧವು ಈ ಜಗತ್ತು
ತತ್ಸೃಷ್ಟಿ ಪಾಲನಾದಿಗಳೆಲ್ಲ ಸತ್ಯ ೨

ಸೃಷ್ಟಿ ಪ್ರವಾಹವು ಅನಾದಿಯೂ ನಿತ್ಯವೂ
ಘಟಾದಿ ಕಾರ್ಯಗಳ ಉಪಾದಾನ ಕಾರಣ
ಮೂಲ ಜಡಪ್ರಕೃತಿಯೂ ಅನಾದಿಯೂ ನಿತ್ಯವೂ
ಸೃಷ್ಟ್ಯಾದಿಕರ್ತಾ ನಿನ್ನಾಧೀನವು ಎಲ್ಲಾ ೩

ಕಾರ್ಯಕಾರಣಾತ್ಮಕ ಜಗತ್ತು ಸರ್ವಕ್ಕೂ
ತೋಯಜಾಕ್ಷನೇ ನೀನು ನಿಮಿತ್ತ ಕಾರಣನು
ನಿಯಾಮಕನು ನೀನೇವೇ ಚಿದಚಿತ್ ಅಖಿಳಕ್ಕೂ
ಅನ್ಯರಿಗೆ ಸ್ವಾತಂತ್ರ್ಯ ಸಾಮರ್ಥ್ಯವಿಲ್ಲ ೪

ವಿಧಿ ಶಿವಾದಿ ಸರ್ವ ಸುರಾಸುರರುಗಳಿಗೆ
ಸತ್ತಾಪ್ರತೀತಿ ಪ್ರವೃತ್ತಿಪ್ರದ ಹರಿಯೇ
ಭೂತಭವ್ಯ ಭವತ್ಪ್ರಭುವು ವಿಷ್ಣು ನೀನೇವೇ
ಚೇತನಾ ಚೇತನಾಧಾರ ಸರ್ವತ್ರ ೫

ದೂರ್ವಾಸರ ಶಾಪ ನಿಮಿತ್ತದಿ ಸ್ವರ್ಗದ
ಐಶ್ವರ್ಯವು ಕ್ಷಿಣವು ಆಗಿ ಬಹುವಿಧದಿ
ದೇವಶತೃಗಳ ಬಲ ಉನ್ನಾಹವಾಗಲು
ದೇವರಾಜನು ಬ್ರಹ್ಮನಲ್ಲಿ ಪೋದ ೬

ವಾಸವ ವರುಣಾದಿ ಸುರರ ಮೊರೆ ಕೇಳಿ
ಬಿಸಜಸಂಭವ ಶಿವ ಶಕ್ರಾದಿಗಳ ಕೂಡಿ
ಶ್ರೀಶನೇ ರಕ್ಷಕನು ಎಂದು ನಿನ್ನಲ್ಲಿ ಬಂದು
ಸಂಸ್ತುತಿಸಿದನು ಪರಮ ಪೂರುಷ ನಿನ್ನನ್ನ ೭

ಅವ್ಯಯನೇ ಸತ್ಯನೇ ಅನಂತನೇ ಅನಘನೇ
ಶ್ರೀವರನೇ ಪೂರ್ಣೈಶ್ವರ್ಯ ಮಹಾಪುರುಷ
ದೇವವರೇಣ್ಯ ನಿನ್ನಲ್ಲಿ ಸ್ತುತಿ ಬ್ರಹ್ಮ
ಸುವಿನಯದಿ ಮಾಡಿದ ವೇದಾರ್ಥಸಾರ ೮

ಸಹಸ್ರಾರ್ಕೋದಯ ದ್ಯುತಿ ಸುಂದರರೂಪ
ಮಹಾರ್ಹ ಭಗವಂತ ಹರಿ ಈಶ್ವರನೇ ನೀನು
ಬ್ರಹ್ಮಾದಿಗಳ ಸ್ತುತಿಗೆ ಪ್ರಸನ್ನನು ಆಗಿ
ಮಹಾನುಭಾವ ನೀ ಒಲಿದಿ ಕೃಪೆಯಿಂದ ೯

ಪದುಮನಾಭನೇ ನಿರ್ವಾಣ ಸುಖಾರ್ಣವನೇ
ಪದುಮಭವ ಸನ್ನಮಿಸಿ ಪೇಳಿದ್ದ ಕೇಳಿ
ಸಿಂಧುವ ಮಥನ ಮಾಡಲಿಕೆ ಬೇಕು ಎಂದಿ
ಅದರ ಬಗ್ಗೆ ಉಪಾಯವ ಅರುಹಿದಿ ವಿಭುವೇ ೧೦

ಕ್ಷೀರಾಬ್ಧಿಯಲಿ ವೀರು ತೃಣ ಲತೌಷಧಿ ಇಟ್ಟು
ಗಿರಿಶ್ರೇಷ್ಠ ಮಂದರವ ಕಡೆಗೋಲು ಮಾಡಿ
ವರಸರ್ಪ ವಾಸುಕಿಯ ಹಗ್ಗ ಮಾಡಿ ಮಥಿಸಿ
ಅಮೃತೋತ್ಪಾದನ ಯತ್ನಿಪುದು ಎಂದಿ ೧೧

ದೈತ್ಯ ದಾನವರೆಲ್ಲ ಶತೃಗಳು ಆದರೂ
ಸಂಧಿಯ ಅವರೊಡೆ ಮಾಡಿ ಕೂಡಿ
ಮಂದರವ ಸಿಂಧುವಲಿ ತಂದಿಟ್ಟು ಮಥಿಸುವುದು
ಸುಧೆಯ ಉತ್ಪಾದನಕೆ ಉಪಾಯ ಇದು ಎಂದಿ ೧೨

ದೈತ್ಯರ ಸಹಕಾರ ಬಗೆ ಯುಕ್ತಿಗಳ ಪೇಳಿ
ಭೀತಿ ಪಡಬೇಡ ವಿಷ ಉಕ್ಕಿ ಬರುವಾಗ
ಅದಿತಜರಿಗೇವೇ ಫಲ ಲಭಿಸುವುದು ಎಂದು
ದಿತಿಜರಿಗೆ ಕ್ಲೇಶ ಭವಿಸುವುದು ಎಂದಿ ೧೩

ಪುರುಷೋತ್ತಮ ಜಗತಃಪತಿ ಅಜಿತನಾಮಾ
ಸುರರಿಗೆ ಬೋಧಿಸಿದ ರೀತಿ ಅನುಸರಿಸಿ
ಶಕ್ರಾದಿಗಳು ವೈರೋಚನಾದಿಗಳೊಡೆ
ತ್ವರಿತ ಯತ್ನಿಸಿದರು ಕಡಲ ಮಥನಕ್ಕೆ ೧೪

ದೂರದಲ್ಲಿ ಇದ್ದ ಆ ಅತಿಭಾರ ಗಿರಿಯನ್ನ
ಸುರರು ದಾನವರೆತ್ತಿ ಸಮುದ್ರ ತಟಕೆ
ತರಲು ಬಹು ಯತ್ನಿಸಿದರು ವ್ಯರ್ಥದಿ
ಗಿರಿಯ ಭೂ ಮೇಲೆತ್ತೆ ಅಸಮರ್ಥರು ೧೫

ಮೇರುಗಿರಿ ಬದಿ ಇದ್ದ ಮಂದರಾಚಲವು
ರುದ್ರ ರುದ್ರವರ ಬಲಯುತವು ಎತ್ತಲು ಅಶಕ್ಯ
ಸುರದಾನವರು ಬೆರಗಾಗೇ ಒಂದೇ ಕರದಿಂ
ಗಿರಿಯ ನೀ ಎತ್ತಿ ಗರುಡನ ಮೇಲೆ ಇಟ್ಟಿ ೧೬

ಗರುಡನಿಂದ ತಮ್ಮ ಮೇಲೆ ಇರಿಸೆ ಪರಿಕ್ಷಾರ್ಥ
ಭಾರ ತಾಳದೇ ಸುರಾಸುರರು ಹತರಾಗೇ

ಕಾರುಣ್ಯ ನೋಟದಿ ಬದುಕಿಸಿದಿ ಮೃತರನ್ನ
ತೀವ್ರ ಗಾಯಗಳನ್ನ ಸೌಖ್ಯ ಮಾಡಿದಿಯೋ ೧೭

ಲೀಲೆಯಿಂದಲಿ ಪುನಃ ಒಂದೇ ಹಸ್ತದಿ ಗಿರಿಯ
ಮೇಲೆತ್ತಿ ಗರುಡನ ಹೆಗಲಲಿಟ್ಟು ಕುಳಿತು
ಪಾಲಸಾಗರದಲ್ಲಿ ಸ್ಥಾಪಿಸಿ ಮಥನಕ್ಕೆ
ವ್ಯಾಳನ ಹಗ್ಗದಂದದಿ ಸುತ್ತಿಸಿದಿಯೋ ೧೮

ಪುಚ್ಛಭಾಗವು ಅಮಂಗಳವು ಬೇಡವೆಂದು
ಅಸುರರ ವಾದಾ ಮುಖಭಾಗ ಹಿಡಿಯೇ
ವಾಸುಕಿಯ ಪುಚ್ಛಾಂಗ ದೇವತೆಗಳು ಹಿಡಿದು
ಶ್ರೀಶ ನೀ ಸಹಕರಿಸೆ ಮಥನವ ಮಾಡಿದರು ೧೯

ಪರಮ ಯತ್ನದಿ ಅಮೃತಾರ್ಥ ಪಯೋನಿಧಿಯ
ಗಿರಿಯಿಂದ ಮಂಥನ ಸುರಾಸುರರು ಮಾಡೆ
ಪರಮಗುರುತರ ಅದ್ರಿ ಆಧಾರವಿಲ್ಲದೆ
ಸರಿದು ಮುಳುಗಿ ಬೇಗ ಕೆಳಗಡೆ ಹೋಯಿತು ೨೦

ಶೈಲವು ಮುಳುಗಲು ಸುಧಾಕಾಂಕ್ಷಿಗಳ ಮನ
ವ್ಯಾಕುಲದಿ ಮುಖಕಾಂತಿ ಮ್ಲಾನವು ಆಯಿತು
ಎಲ್ಲಾ ಶ್ರಮವು ವ್ಯರ್ಥ ಎಂದು ಬೆರಗಾಗಿರೆ
ಬಲು ಕೃಪೆಯಲಿ ನೀನು ಒದಗಿದಿ ಆಗ ೨೧

ಅದ್ಭುತ್ ಮಹತ್ ಕಚ್ಛಪ ರೂಪದಲಿ ನೀ
ಅಬ್ಧಿಯಲಿ ಬೇಗನೇ ಬಂದು ಮೇಲೆ
ಎಬ್ಬಿಸಿದಿ ಆ ಮಂದರಾಚಲಗಿರಿಯ
ಸುಬಲ ಪೂರುಷ ನಮೋ ಚಿನ್ಮೋದಗಾತ್ರ ೨೨

ಚಿನ್ಮೋದಮಯ ಮಹಾ ಕೂರ್ಮ ರೂಪನೇ ನಿನ್ನ
ಅಮಿತ ಸುಬಲ ಲಕ್ಷ ಯೋಜನ ವಿಸ್ತಾರ
ಸುಮಹಾ ದ್ವೀಪದಂದಿರುವ ಪೃಷ್ಠದ ಮೇಲೆ
ಆ ಮಹಾದ್ರಿಯ ಹೊತ್ತಿ ಪುನರ್ ಮಥಿಸಲೊದಗಿದಿ ೨೩

ಜ್ಞಾನ ಸುಖಪೂರ್ಣ ಸ್ವತಂತ್ರ ಸರ್ವಾಧೀಶ
ಪೂರ್ಣಪ್ರಜ್ಞರ ಹೃತ್‌ಸ್ಥ ಜನ್ಮಾದಿಕರ್ತ
ವನಜಭವಪಿತ ಶ್ರೀಪ್ರಸನ್ನ ಶ್ರೀನಿವಾಸ
ಧನ್ವಂತರೀ ಶರಣು ಅಜಿತ ಸ್ತ್ರೀ ಕೂರ್ಮ ೨೪

-ಇತಿ ಪ್ರಥಮಾಧ್ಯಾಯ ಸಂಪೂರ್ಣಂ-

ದ್ವಿತೀಯ ಅಧ್ಯಾಯ

ನೀಲಕಂಠ ವೃತ್ತಾಂತ

ಲೀಲಾವತಾರನೇ ಸರ್ವಲೋಕಾಧಾರ
ಮಾಲೋಲ ಸುಖಚಿತ್ ಕೂರ್ಮರೂಪ
ಪಾಲಾಬ್ಧಿಜಾಪತಿ ಅಜಿತ ಧನ್ವಂತರೀ
ಲೀಲಾ ಮೋಹಿನಿ ಅನಘ ಶರಣು ಮಾಂಪಾಹಿ ಪ

ಸಿರಿವರ ಹರಿ ಕೂರ್ಮನ ಪೃಷ್ಠೋಪರಿನಿಂತ
ಗಿರಿಯಿಂದ ಅಸುರರು ಸುರರು ಪುನರ್ಮಥಿಸೆ
ಗಿರ್ಗಿರಿ ಗಿರಿ ಗಿರಿ ಎಂದು ಭ್ರಮಿಸಿತು ಗಿರಿಯು
ಪರಿಮಳ ಪೂ ಸುರಿಸಿದರು ಬ್ರಹ್ಮಾದಿಗಳು ೧

ವಾಸುಕಿ ತಾಳದೇ ಬುಸು ಬುಸು ಎಂದು ಮೇಲ್
ಶ್ವಾಸದಿ ವಿಷಜ್ವಾಲೆ ಹೊರಗೆ ಬಿಡಲು
ಅಸುರ ಬಲಿ ಇಲ್ವಾದಿಗಳು ಬಿಸಿ ಸಹಿಸದೇ
ಘಾಸಿ ಹೊಂದಿದರು ದಾವಾಗ್ನಿ ಪೀಡಿತರ ಪೋಲ್ ೨

ದಿತಿಜರು ಅದಿತಿಜರು ಎಷ್ಟೇ ಯತ್ನಿಸಿದರೂ
ಸುಧಾ ಇನ್ನೂ ಪುಟ್ಟದೇ ಇರುವುದ ಕಂಡು
ದಂತ ಶೂಕವ ಆಗ ಸ್ವಯಂ ನೀನೇ ಹಿಡಿದು
ಮಥನ ಮಾಡಿದಿ ಸ್ವಾಮಿ ಕಾರುಣ್ಯದಿಂದ ೩

ಪೀತಾಂಬರಿ ಸುಖ ಚಿನ್ಮಾತ್ರ ಚಾರ್ವಾಂಗ
ಸದಾ ನಮೋ ಶರಣಾದೆ ಲೋಹಿತಾಕ್ಷ
ದಿತಿಜಾ ಅದಿತಿಜಾರೊಡೆ ನೀನು ಸಹಮಥಿಸಲು
ಲತಾ ಓಷಧಿ ಕಲುಕಿ ಉಕ್ಕಿತು ಸಿಂಧು ೪

ಹಾಹಾ ಭಯಂಕರವು ಇದೇನು ಲೋಕಗಳ
ದಹಿಸುವಂದದಿ ಫೇಣ ಉಕ್ಕಿ ಬರುತಿದೆಯು
ಮಹಾ ವೀರ್ಯತರ ಹಾಲಾಹಲವೆಂಬ ವಿಷ ಇದು
ಮಹೀಭರ್ತಾ ಮಹಾದೇವ ಮಹಾದ್ರಿಧೃತ್ ಪಾಹಿ ೫

ಅಸಮ ಸ್ವಾತಂತ್ರ್ಯ ನಿಜಶಕ್ತಿ ಪರಿಪೂರ್ಣ
ವಿಶ್ವರಕ್ಷಕ ನೀ ವಿಷಭಯ ನಿವಾರಿಸೆ
ಸ್ವಸಮರ್ಥನಾದರೂ ಭೃತ್ಯರ ಕೀರ್ತಿಯ
ಪ್ರಸರಿಸೆ ಒದಗಿದಿ ಮಹಾದೇವ ಶಾಸ್ತ ೬

ಮಹತ್ ಎಂಬ ಬ್ರಹ್ಮನ ಸ್ವಾಮಿ ಆದುದರಿಂದ
ಮಹಾದೇವ ಎಂಬುವ ನಾಮ ನಿನ್ನದೇವೇ
ಮಹಾದೇವ ಶಿವ ಈಶ ರುದ್ರಾದಿ ಶಬ್ದಗಳು
ಮಹಾಮುಖ್ಯ ವೃತ್ತಿಯಲಿ ನಿನಗೇವೇ ವಾಚಕವು ೭

ಭಸ್ಮಧರ ದೇವನಿಗೆ ಮಹಾದೇವ ಎಂಬುವ
ನಾಮ ಔಪಚಾರಿಕದಲ್ಲೇವೇ ರೂಢ
ಬ್ರಹ್ಮನಾಮನು ನೀನೇ ಬ್ರಹ್ಮಾಂತರ್ಯಾಮಿಯು
ಬ್ರಹ್ಮನೊಳು ಇದ್ದು ನೀ ಭುವನಂಗಳ ಪಡೆವಿ ೮

ರುದ್ರ ನಾಮನು ನೀನೇ ರುದ್ರಾಂತರ್ಯಾಮಿಯು
ರುದ್ರನೊಳು ಇದ್ದು ನೀ ಸಂಹಾರವ ಮಾಡುವಿ
ತತ್ತತ್ರಸ್ಥಿತೋ ವಿಷ್ಣುಃ ತತ್ಛಕ್ತಿ ಪ್ರಬೋಧಯನ್
ರುದ್ರನಿಂ ವಿಷಪಾನ ನಿನ್ನ ನಿಯಮನವೇ ೯

ಶಕ್ರಾದಿ ಸರ್ವರಿಗೂ ಗುರು ಆಶ್ರಯನು ಶಂಕರನು
ಶಂಕರನಿಗೆ ಆಶ್ರಯನು ಗುರುಮುಖ್ಯವಾಯು

ಮುಖ್ಯವಾಯುಗಾಶ್ರಯ ಶ್ರೀಕಾಂತ ನೀನು
ಶ್ರೀಕಾಂತ ನೀನೇವೇ ಸರ್ವಾಶ್ರಯ ಅನೀಶ ೧೦

ಯಾವ ಮಹಾದೇವನೊಲಿಯದೇ ವಾಯು ಒಲಿಯ
ಆ ವಾಯು ಒಲಿಯದೇ ಹರಿ ತಾನೂ ಒಲಿಯ
ಆ ವಾಯು ಹರಿಒಲಿಯದಿರೆ ಬೇರೆ ಗತಿಇಲ್ಲ
ಆ ವಾಯು ಹರಿಧಾಮ ಮಹಾದೇವ ಸ್ತುತ್ಯ ೧೧

ಸರ್ವಾಂತರ್ಯಾಮಿ ಯಾವನಲಿ ಪ್ರಸನ್ನನು ಆಗಿ
ಯಾವನ ಮೂಲಕ ಶಕ್ರಾದಿಗಳ ಕಷ್ಟ
ತೀವ್ರದಿ ಪೋಗುವುದೋ ಆ ಮಹಾದೇವನ ಸ್ತುತಿಸಿದರು ಸುರರು
ಶಿವಾಂತರ್ಯಾಮಿ ಶ್ರೀಹರಿ ಮಹಿಮೆಗಳ ಕೂಡಿ ೧೨

ಕರತಲೀಕೃತ್ಯ ಹಾಲಾಹಲ ವಿಷವ
ಶಕ್ರಾದಿ ಜನರಲ್ಲಿ ಕೃಪೆ ಮಾಡಿ ಉಂಡು
ಕರುಣಾಳು ಮಹಾದೇವ ಭೂತದಯಾಪರನು ಈ
ಹರಿಭಕ್ತಾಗ್ರಣಿ ಶಿವ ಉಮೇಶನಿಗೆ ಶರಣು ೧೩

ಹರಿ ಬ್ರಹ್ಮ ಪಾರ್ವತಿ ಪ್ರಜೇಶ್ವರರು
ಹರನ ಈ ಮಹತ್ಸೇವೆ ಬಹು ಶ್ಲಾಘಿಸಿದರು
ಕರದಿಂದ ಕೆಳಗೆ ಪ್ರಸ್ಕನ್ನ ಗರವಾದ್ದು
ಸರೀಸೃಪ ವೃಶ್ಚಿಕಾದಿಗಳೊಳು ಸೇರಿತು ೧೪

ಗರವು ಭೂಷಣವಾಯಿತು ವೈರಾಗ್ಯಾಧಿಪ ಶಿವಗೆ
ಸುಪ್ರಸಿದ್ಧನು ಆದ ನೀಲಕಂಠನೆಂದು
ಧೀರ ಕರುಣಾಂಬುನಿಧಿ ನಂಜುಂಡೇಶ್ವರನು ಈ
ಗಿರಿಜೇಶನಿಗೆ ನಾ ನಮಿಪೆ ಶರಣೆಂದು ೧೫

ಈ ಕೃಪಾಕರ ನೀಲಕಂಠ ಕರತಲೀಕೃತ್ಯ
ಆ ಕಾಲಕೂಟವಿಷ ಉಂಡ ಮಹತ್ಕಾರ್ಯ
ಸಂಕೀರ್ತಿ ಪೇಳಿರುವುದು ಶ್ರೀ ಭಾಗವತದಿ
ಬಾಕಿ ಬಹು ಮಹೋಲ್ಬಣ ವಿಷ ವಿಷಯ ಶೃತಿ ವೇದ್ಯ ೧೬

ಉರಗಭೂಷಣ ವಿಪ ಉರಗಪರುಗಳಿಗಿಂತ
ನೂರುಗುಣ ಎಂಬುದಕೆ ಅತ್ಯಧಿಕ ಬಲಿಯು
ವರಮುಖ್ಯ ಪ್ರಾಣ ಜಗತ್ ಪ್ರಾಣಗೆ ಸಮರಿಲ್ಲ
ನೀರಜಜಾಂಡದಿ ಎಲ್ಲೂ ಶರಣೆಂಬೆ ಇವಗೆ ೧೭

ಜ್ಞಾನ ಸುಖಪೂರ್ಣ ಸ್ವತಂತ್ರ ಸರ್ವಾಧಾರ
ಪೂರ್ಣಪ್ರಜ್ಞರ ಹೃತ್‌ಸ್ಥ ಜನ್ಮಾದಿಕರ್ತ
ವನಜಭವಪಿತ ಶ್ರೀ ಪ್ರಸನ್ನ ಶ್ರೀನಿವಾಸ
ಧನ್ವಂತರಿ ಶರಣು ಅಜಿತ ಸ್ತ್ರೀ ಕೂರ್ಮ ೧೮

–ಇತಿ ದ್ವಿತೀಯಾಧ್ಯಾಯಂ ಸಂಪೂರ್ಣಂ –

ತೃತೀಯ ಅಧ್ಯಾಯ

ಶ್ರೀ ಇಂದಿರಾ ಆವಿರ್ಭಾವಸಾರ

ಲೀಲಾವತಾರನೇ ಸರ್ವ ಲೋಕಾಧಾರ
ಮಾಲೋಲ ಸುಖಚಿತ್ ಕೂರ್ಮರೂಪ
ಪಾಲಾಬ್ಧಿಜಾಪತಿ ಅಜಿತ ಧನ್ವಂತರೀ
ಲೀಲಾ ಮೋಹಿನಿ ಅನಘ ಶರಣು ಮಾಂಪಾಹಿ ಪ

ಗರಪಾನವ ವೃಷಾಂಕನು ಮಾಡೆ ಇಂದ್ರಾದಿ
ಸುರರು ದಾನವರು ಪುನರ್‌ಮಥನವ ಚರಿಸೆ
ಕ್ಷೀರ ಸಾಗರದಿಂದ ಉತ್ಪನ್ನವಾದವು
ಪರಿಪರಿ ವಸ್ತುಗಳ್ ಒಂದರ ಮೇಲೊಂದು ೧

ಯಜ್ಞೋಪಯೋಗಿಗಳಪ್ರದ ಕಾಮಧೇನು
ಉಚ್ಚೈಶ್ರವನಾಮ ಸುಲಕ್ಷಣ ಅಶ್ವ
ಸಚ್ಛಕ್ತಿ ಶ್ರೇಷ್ಠತರ ಐರಾವತನಾಮ
ಗಜೇಂದ್ರ ನಾಲ್ಕು ಚಂದದಂತ ಭೂಷಿತವು ೨

ಸರಸಿಜೋದ್ಭವ ಸೇವ್ಯ ಶ್ರೀಶ ವರಾಹ
ಹರಿ ನಿನ್ನ ವಕ್ಷ ಸಂಬಂಧದಿ ಹೊಳೆವ

ಸುಶ್ರೇಷ್ಠ ಕೌಸ್ತುಭರತ್ನ ಎಂಬುವಂತಹ
ಸುಭ್ರಾಜಮಣಿ ಬಂತು ಆ ಸಿಂಧುವಿನಿಂದ ೩

ಸುರಲೋಕ ವಿಭೂಷಣವು ಸರ್ವವಾಂಛಿತ ಪ್ರದವು
ಪಾರಿಜಾತವು ಉದ್ಭವವಾಯಿತು ತರುವಾಯ
ಸ್ಫುರದ್ರೂಪ ರಮಣೀಯ ಸುಂದರಾಂಗಿಗಳು
ಹಾರವಸನಭೂಷಿತ ಅಪ್ಸರಸರು ೪

ಸೌದಾಮಿನಿಗಮಿತ ವಿದ್ಯುತ್ ಕಾಂತಿಯಿಂದ
ದಿಕ್‌ವಿದಿಕ್ಕುಗಳ ರಂಜಿಸುವರೂಪ –
ದಿಂದ ಆವಿರ್ಭವಿಸಿದಳು ಸಾಕ್ಷಾತ್ ಶ್ರೀ
ಇಂದಿರೆ ಅಲೌಕಿಕ ಸೌಂದರ್ಯಪೂರ್ಣೆ ೫

ಸರ್ವದಾ ಸರ್ವವಿಧದಿ ನಿನ್ನ ಸೇವಿಸಿ ನುತಿಪ
ಸರ್ವಜಗಜ್ಜನನಿಯೇ ಸಿಂಧು ಕನ್ಯಾ
ದೇವ ದೇವೋತ್ತಮ ರಾಜರಾಜೇಶ್ವರ ನಿನಗೆ
ದೇವ ಶ್ರೀ ರಾಜರಾಜೇಶ್ವರಿ ನಿತ್ಯ ನಿಜಸತಿಯು ೬

ಇಂದ್ರಾದಿ ದೇವತೆಗಳು ಮುನಿಜನರು
ಇಂದಿರೆಯನ್ನು ವಿಧಿಯುಕ್ತ ಪೂಜಿಸಿದರು
ಸಿಂಧುರಾಜನು ವರುಣ ಏನು ಧನ್ಯನೋ ಜಗನ್ –
ಮಾತೆ ನಿರ್ದೋಷೆ ರಮಾ ಮಗಳಾಗಿ ತೋರಿಹಳು ೭

ಅಲೌಕಿಕ ಮುತ್ತು ನವರತ್ನದ ಮುಕುಟ
ಒಳ್ಳೇ ಪರಿಮಳ ಹೂವು ಮುಡಿದ ತುರುಬು
ಫಾಲದಲಿ ಶ್ರೇಷ್ಠತಮ ಕಸ್ತೂರಿತಿಲಕವು
ಪೊಳೆವ ಪೂರ್ಣೇಂದು ನಿಭ ಮೂಗುಬಟ್ಟು ೮

ಅಂಬುಜಾಕ್ಷಗಳು ದಿವ್ಯ ಮುತ್ತಿನ ತೋಡುಗಳು
ಗಂಭೀರ ಸೌಭಾಗ್ಯಪ್ರದ ಕೃಪಾನೋಟ
ಕಂಬುಕಂಠದಿ ಮಂಗಳಸೂತ್ರ ಕರಯುಗದಿ
ಅಂಬುಜಾ ವರ ಕೊಡುವ ಅಭಯಹಸ್ತಗಳು ೯

ಕಂದರದಿ ಎಂದೂ ಬಾಡದ ಕಮಲ ಮಾಲಾ
ಪೀತಾಂಬರ ದಿವ್ಯ ಕುಪ್ಪಸ ಮೇಲ್ವಟ್ಟೆ
ವಸ್ತ್ರ ರಾಜಿಸುವಂತಹ ಸ್ವರ್ಣಹಾರಗಳು
ಕಾಂತಿಯುಕ್ ಭಂಗಾರ ಸರ್ವಾಭರಣಗಳು ೧೦

ಆನಂದಮಯ ಅಜಿತನಾಮಾ ನಿನ್ನನು ಮನ –
ಮಂದಿರದಿ ಪೂಜಿಸುತ ಇಂದಿರಾದೇವಿ
ಬಂದು ಸಭೆಯಲಿ ಸಾಲು ಸಾಲಾಗಿ ಕುಳಿತಿದ್ದ
ವೃಂದಾರಕರನ್ನ ಮಂದಹಾಸದಿ ನೋಡಿದಳು ೧೧

ಒಬ್ಬೊಬ್ಬ ದೇವತೆಯಲೂ ಗುಣವಿದ್ದರೂ
ಅಬ್ಬಬ್ಬ ಏನೆಂಬೆ ದೋಷಗಳೂ ಉಂಟು
ಅದ್ಭುತ ಗುಣನಿಧಿ ನಿರ್ದೋಷ ಸರ್ವೇಶ –
ಅಂಬುಜನಾಭ ನೀನೇವೇ ಎಂದು ನಮಿಸಿದಳು ೧೨

ಕ್ಷರರಿಗೂ ಅಕ್ಷರರಿಗೂ ಎಂದೆಂದೂ ಆಶ್ರಯನು
ಪುರುಷೋತ್ತಮ ಹರಿ ವಿಷ್ಣು ಸ್ವತಂತ್ರ
ಸರಿ ಅಧಿಕರು ಇಲ್ಲದ ಅನಘನು ಸರ್ವಗುಣ
ಪರಿಪೂರ್ಣನಿಗೇವೇ ಅರ್ಪಿಸಿದಳು ಮಾಲೆ ೧೩

ಉತ್ತಮ ಸುತೀರ್ಥಗಳಿಂದ ಅರ್ಘ್ಯ ಚಮನ
ಪಾದ್ಯಾದಿ ಅರ್ಚನೆ ವಿಧಿಯುಕ್ತವಾಗಿ
ಸುತಪೂನಿಧಿ ವಸಿಷ್ಠಾದೀಯರು ವೇದೋಕ್ತ
ಮಂತ್ರ ಪಠಿಸೆ ವರುಣ ಹರಿಯ ಪೂಜಿಸಿದ ೧೪

ಆನಂದಪೂರ್ಣ ಅಜ ನಿತ್ಯಮುಕ್ತೆ ಮಗಳು
ಇಂದಿರೆಯ ಆನಂದಮಯ ಹರಿ ನಿನಗೆ
ಸಿಂಧು ಧಾರೆ ಎರೆದು ಮದುವೆ ಮಾಡಿಕೊಟ್ಟ
ಆನಂದ ನಿತ್ಯದಂಪತಿ ರಮಾ ಮಾಧವರು ೧೫

ಪೀತಾಂಬರ ದಿವ್ಯ ಆಭರಣ ಪೊಳೆಯುತ್ತ
ಮೋದಮಯ ನೀ ಸಿಂಧುಜಾ ಸಹ ದಿವ್ಯ

ರತ್ನ ಖಚಿತ ಮಂಟಪದಲಿ ಕುಳಿತರೆ
ಮುದದಿ ವರ್ಷಿಸಿದರು ಪೂಮಳೆ ಸುರರು ೧೬

ಸಂಭ್ರಮದಿ ಮಂಗಳವಾದ್ಯ ಸುಧ್ವನಿಗಳು
ತುಂಬಿತು ಅಂಬರ ಅಂಬುಧಿ ಎಲ್ಲೂ
ಗಂಭೀರ ಸುಸ್ವರ ವೇದಘೋಷಗಳು
ತುಂಬರ ನಾರದಾದಿಗಳ ಗಾಯನವು ೧೭

ದೇವಗಾಯಕರುಗಳ ದಿವ್ಯ ಕೀರ್ತನೆಗಳು
ದೇವನರ್ತಕ ನರ್ತಕಿಯರ ನರ್ತನವು
ದೇವತೆಗಳ ಆಭರಣಾದಿ ಕಾಣಿಕೆಗಳ
ದೇವಿ ರಮೆಗೂ ನಿನಗೂ ಅರ್ಪಿಸಿದರು ಮುದದಿಂ ೧೮

ವನಜಭವ ರುದ್ರಾದಿಗಳು ಮುನಿವೃಂದವು
ಸನ್ನುತಿಸುತ ಸರ್ವ ಕೀರ್ತನವನ್ನು
ಆನಂದ ಭಕ್ತಿಯಂ ಶ್ರೀ ಲಕ್ಷ್ಮೀಯನ್ನು ನೋಡಿ
ಧನ್ಯರಾದರು ನಮೋ ವಿಷ್ಣುಗೆ ಶ್ರೀರಮೆಗೆ ೧೯

ಜ್ಞಾನ ಸುಖಪೂರ್ಣ ಸ್ವತಂತ್ರ ಸರ್ವಾಧಾರ
ಪೂರ್ಣಪ್ರಜ್ಞರ ಹೃತ್‌ಸ್ಥ ಜನ್ಮಾದಿಕರ್ತ
ವನಜಭವಪಿತ ಶ್ರೀ ಪ್ರಸನ್ನ ಶ್ರೀನಿವಾಸ
ಧನ್ವಂತರಿ ಶರಣು ಅಜಿತ ಸ್ತ್ರೀ ಕೂರ್ಮ ೨೦

– ಇತಿ ತೃತೀಯ ಅಧ್ಯಾಯ ಪೂರ್ಣಂ –

ಚತುರ್ಥ ಅಧ್ಯಾಯ

ಶ್ರೀ ಧನ್ವಂತರಿ ಹಾಗೂ ಮೋಹಿನಿ ವೃತ್ತಾಂತ ಸಾರ

ಲೀಲಾವತಾರನೇ ಸರ್ವಲೋಕಾಧಾರ
ಮಾಲೋಲ ಸುಖಚಿತ್ ಕೂರ್ಮರೂಪ

ಪಾಲಾಬ್ಧಿಜಾಪತಿ ಅಜಿತ ಧನ್ವಂತರೀ
ಲೀಲಾ ಮೋಹಿನಿ ಅನಘ ಶರಣು ಮಾಂಪಾಹಿ ಪ

ವಿಸ್ತಾರವಾಗಿ ಫೇಣವು ವ್ಯಾಪಿಸಿರುವ
ಆ ಸಮುದ್ರದಿಂದ ವಾರುಣಿಯು ಬರಲಾಗ
ಅಸುರರನು ತಮಗೇವೆ ಬೇಕೆಂದು ಕೊಂಡರು
ಈಶ ನೀ ಅವರಿಗೆ ಅನುಮತಿ ಕೊಡಲು ೧

ಸುಧೆಗಾಗಿ ಸಿಂಧುವ ಮತ್ತೂ ಮಥನಮಾಡೆ
ಉದಿಸಿದನು ಪರಮ ಅದ್ಭುತ ಪುರುಷನು
ಸುಂದರ ವಿಗ್ರಹ ಕಂಬುಗ್ರೀವ ಅರುಣೇಕ್ಷಣ
ಅಂದ ಸುದೀರ್ಘ ಪೀವರದೋರ್ದಂಡ ೨

ಸಗ್ಧರ ಶ್ಯಾಮಲಸ್ತರುಣ ಸರ್ವಾಭರಣ –
ದಿಂದ ಒಪ್ಪುವ ರತ್ನಖಚಿತ ಕುಂಡಲವು
ಪೀತವಾಸ ಮಹಾಸ್ಕಂಧ ಸುಶುಭಾಂಗನು
ಸ್ನಿಗ್ಧ ಕುಂಚಿತ ಕೇಶ ಸಿಂಹ ವಿಕ್ರಮನು ೩

ಅನುಪಮಾದ್ಭುತ ಈ ಮಹಾಪುರುಷ ಸಾಕ್ಷಾತ್
ವಿಷ್ಣು ನೀನೇವೆ ಮತ್ತೊಂದವತಾರ
ಆನಂದ ಚಿನ್ಮಾತ್ರ ಹಸ್ತದಲಿ ಹಿಡಿದಿರುವಿ
ಪೂರ್ಣವಾಗಿ ಅಮೃತ ತುಂಬಿರುವ ಕಳಸ ೪

ಆಯುರ್ವೇದ ಮಹಾಭಿಷಕ್ ಶ್ರೀ ಧನ್ವಂತರಿ ನೀನು
ಕೈಯಲ್ಲಿ ಪಿಡಿದ ಪಿಯೂಷ ಕುಂಭವನು
ದೈತ್ಯರು ನೋಡಿ ಬಹು ಇಚ್ಛೈಸಿ ಅಪಹರಿಸೆ
ಶ್ರೀಯಃಪತಿಯೇ ಸುರರು ನಿನ್ನಲ್ಲಿ ಮೊರೆಇಟ್ಟರು ೫

ದೇವತಾವೃಂದ ವಿಷ್ಣ ಮನಸ್ಸಿಂದಲಿ
ದೇವವರೇಣ್ಯ ಹರಿ ನಿನ್ನ ಶರಣು ಹೋಗಲು
ಯಾವ ಮನಖೇದವೂ ಬೇಡ ಅನುಕೂಲವನೇ
ಮಾಡುವಿ ಎಂದು ನೀ ಅಭಯವನ್ನಿತ್ತಿ ೬

ಅಮೃತಕಲಶವು ಎಂದು ನೆನೆದು ಆ ಅಸುರರು
ನಾಮುಂಚೆ(ಚೆ) ನಾಮುಂಚೆ (ಚೆ) ನೀ ಮುಂಚೆ (ಚೆ) ಅಲಲ್
ತಮ್ಮೊಳಗೆ ಈ ರೀತಿ ಪರಸ್ಪರ ಕಾದಾಡೇ
ನೀ ಮೋಹಿನಿ ರೂಪದಲಿ ತೋರಿ ನಿಂತಿ ೭

ಪರಮ ಅದ್ಭುತ ಅನಿರ್ದೇಶ್ಯ ಸ್ತ್ರೀರೂಪವ
ಧರಿಸಿ ನಿಂತಿಯೋ ಆ ಅಸುರರ ಮುಂದೆ
ಅರಳಿದಮಲ್ಲಿಗೆ ಮುಡಿದ ಕುಂತಳವು
ವರಾನನ ಕರ್ಣಕುಂಡಲ ಕಪೋಲ ೮

ಸುಗ್ರೀವ ಕಂಠಾಭರಣ ಸುಭುಜಾಂಗದ
ಸ್ಫುರತ್ ನವ ಯೌವನಗಾತ್ರ ಸೌಂದರ್ಯ
ಉರದಿ ಪೊಳೆಯುವ ನವರತ್ನಪದಕಗಳು
ಭಾರಿ ಪೀತಾಂಬರವುದಿವ್ಯ ಒಡ್ಯಾಣ ೯

ಸರ್ವಅವಯವಗಳು ಅನುಪಮ ಸುಂದರವು
ಸರ್ವಾಭರಣ ವಿಭೂಷಿತ ಸೊಬಗು
ಸರ್ವಾಕರ್ಷಕ ಮಂದಗತಿ ನೋಟವು
ಸರ್ವ ಆ ದೈತ್ಯರೊಳು ಕಾಮ ಪುಟ್ಟಿಸಿತು ೧೦

ಅಮರರೊಳು ದೈತ್ಯರೊಳು ಗಂಧರ್ವ ನರರೊಳು
ಈ ಮಹಾ ಸೌಂದರ್ಯರೂಪ ಕಂಡಿಲ್ಲ
ಸುಮೋಹಿತ ದೈತ್ಯರು ಸುಧಾ ವಿಷಯದಲಿ
ತಮಗೂ ಸುರರಿಗೂ ನ್ಯಾಯಮಾಡೆ ಕೋರಿದರು ೧೧

ಮಾಯಾಯೋಷಿದ್ ವಪುಷ ಅಮೃತ ವಿನಿಯೋಗ
ನ್ಯಾಯವೋ ಸರಿಯೋ ಸರಿಯಲ್ಲವೋ
ನೀ ಹ್ಯಾಗಾದರೂ ಮಾಡಲಿಕೆ ಒಪ್ಪಿದರು
ಮಾಯಾ ಮೋಹವೃತ ಆ ದೈತ್ಯಜನರು ೧೨

ಉಪವಾಸ ಸ್ನಾನ ಹೋಮಾದಿಗಳು ಆಗಿ
ದೀಪಾವಳಿಗಳ ಹಚ್ಚಿಟ್ಟು ಮುದದಿ
ತಪ್ಪದೇ ಮುಕ್ತ ಆಚರಣೆ ತರುವಾಯ
ಸುಪವಿತ್ರ ಸುಧೆಗೆ ಕಾದರು ಸುರಾಸುರರು ೧೩

ಸುಧೆಗೆ ಕಾದಿರುವ ಸುರಾಸುರರ ನೋಡಿ
ಸುಧಾ ಕಲಶ ನಿಜವಾದ್ದನ್ನ ಹಿಡಿದಿ
ಮಂದಗಜ ಗತಿಯಲ್ಲಿ ಶೃಂಗಾರ ಸುರಿಸುತ್ತ
ಬಂದಳು ಮೋಹಿನಿ ಚಂದ ನವಯುವತಿ ೧೪

ಅಸುರರು ಅರಿಯರು ಯೋಷಿದ್ ವಪುಹರಿಯೇವೇ
ಆ ಸ್ಫುರದ್ರೂಪಿಣಿ ಮೋಹಿನಿ ಎಂತ
ಅಸುರರು ಲೋಲುಪಮರು ಸುಧಾ ಅನರ್ಹರು ಎಂದು
ಶ್ರೀಶ ನೀ ನಿಶ್ಚಯಿಸಿದಿ ದೇವ ದೇವ ೧೫

ದೇವತೆಗಳ ಪಂಕ್ತಿ ಒಂದು ಸಾಲು ಮತ್ತು
ದೇವಶತೃಗಳ ಪಂಕ್ತಿ ಮತ್ತೊಂದು ಸಾಲು
ದೇವತೆಗಳಿಗೇವೇ ನೀ ಸುಧ ಉಣಿಸಿದಿ
ದೇವಶತೃಗಳಿಗೆ ಸುಧಾ ಉಣಿಸಲಿಲ್ಲ ೧೬

ಕೂರ್ಮರೂಪದಲಿ ನೀ ಮಂದರಾಗಿರಿ ಪೊತ್ತು
ಅಮರರ ಸಹಿತ ಸಿಂಧು ಮಥಿಸಿದಿ ಅಜಿತ
ಅಮೃತ ಕಲಶವ ತಂದಿ ಶ್ರೀಶ ಧನ್ವಂತರಿ
ಸುಮನಸ ಸುಧಾಪ್ರದ ಮೋಹಿನಿರೂಪ ೧೭

ಹರಿಪಾದಾಶ್ರಿತರಾಗಿರುವ ಸುರರಿಗೆ ಅಮೃತ
ಹರಿಪರಾಙ್ಮುಖ ದ್ವೇಷಿ ದೈತ್ಯರಿಗೆ ಇಲ್ಲ
ಸುರಾಸುರಗಣಕೆ ಸಮ ಕರ್ಮೋಪಕರಣಗಳು
ಆದರೂ ಯೋಗ್ಯತೆಯಿಂದ ಫಲ ಬೇರೆ ಬೇರೆ ೧೮

ಜ್ಞಾನಸುಖಪೂರ್ಣ ಸ್ವತಂತ್ರ ಸರ್ವಾಧಾರ
ಪೂರ್ಣ ಪ್ರಜ್ಞರ ಹೃತ್‌ಸ್ಥ ಜನ್ಮಾದಿಕರ್ತ
ವನಜಭವಪಿತ ಶ್ರೀ ಪ್ರಸನ್ನ ಶ್ರೀನಿವಾಸ
ಧನ್ವಂತರಿ ಶರಣು ಅಜಿತ ಸ್ತ್ರೀ ಕೂರ್ಮ ೧೯

– ಇತಿ ಚತುರ್ಥ ಅಧ್ಯಾಯ ಸಂಪೂರ್ಣಂ –

ಪ್ರಸನ್ನ ಶ್ರೀ ವರಾಹ

೬

ಪ್ರಥಮ ಅಧ್ಯಾಯ

ಆದಿವರಾಹ ಸಾರ

ಆದರದಿ ಶರಣಾದೆ ಭೂದರ ವರಾಹನೇ
ಶ್ರೀಧರಾರಮಣ ವಿಧಿ ಶ್ರದ್ಧೇಶ ವಂದ್ಯ
ಬದರಶೇಖರ ಮುಖ ಸುರವಿನುತ ವಾಂಛಿತದ
ಮೋದಚಿನ್ಮಯ ಭೂವರಾಹ ಯಜ್ಞೇಶ ಪ

ಅದ್ವಿತೀಯನು ನೀನೇ ಪದುಮಜಾಂಡದ ಒಡೆಯ
ಪದುಮಭವನೊಳಿದ್ದು ಭುವನಗಳ ಸೃಜಿಸಿ
ವೃಂದಾರಕರೊಳು ನಿಂತು ಕೃತಿ ನಡೆಸುತ್ತ
ಒದಗುವಿ ಸುಖಜ್ಞಾನ ಬಲಪೂರ್ಣ ಹರಿಯೇ ೧

ಅಂದು ಸ್ವಾಯಂಭುವ ಮನು ವೇನಗರ್ಭನಲಿ
ಬಂದು ನಮಿಸಿ ಭಿನ್ನಹವ ಮಾಡೆ
ವಿಧಿ ಹೇಳಿದ ಜನಾರ್ದನ ಯಜ್ಞಪರಮಾತ್ಮ
ಶ್ರೀದ ಭದ್ರದ ಈಜ್ಯ ಪೂಜ್ಯ ನೀನೇ ಎಂದು ೨

ಸ್ವಾಯಂಭುವ ಸಾಮ್ರಾಟ್ ಪೇಳಿದ ಮಹಾ
ಅಂಬುಧಿ ಕೆಳಗಡೆ ಮಗ್ನ ಆಗಿ

ಈ ಭೂಮಿ ಇರುವುದು ಉದ್ಧರಿಸಿ ಸ್ಥಾನವ
ತನ್ ಪ್ರಜೆಗಳಿಗೆ ಒದಗಿಸಬೇಕು ಎಂದ ೩

ಇರುವುದಕೆ ಸ್ಥಳ ಪ್ರಜೆಗಳಿಗೆ ಒದಗಿಸಲು
ಪರಮೇಷ್ಟಿರಾಯ ತನ್ನ ಹೃದ್ ವನಜದಿ
ಸುಪ್ರಕಾಶಿಪ ಪರಮ ಪೂರುಷ ನಿನ್ನನ್ನು
ಪರಮಾದರದಲ್ಲಿ ಧ್ಯಾನಿಸಿದನು ೪

ಮಹಿಶಿರಿಕಾಂತ ನಿನ್ನನು ಧ್ಯಾನಿಸುತಲಿದ್ದ
ಬ್ರಹ್ಮನ ಮೂಗಿಂದ ಹರಿ ಅನಘ ನೀನು
ವರಾಹ ಮರಿ ಅಂಗುಷ್ಟ ಮಾತ್ರ ಪ್ರಮಾಣದಿ
ಬಹಿರ್ಗತನು ಆದಿಯೋ ಚಿದಾನಂದರೂಪ ೫

ಒಂದೇ ಕ್ಷಣದಿ ಗಜಮಾತ್ರ ವರ್ಧಿಸಿದಿಯೋ
ಅದ್ಭುತ ಈ ರೂಪ ಕಂಡು ಅಲ್ಲಿ
ಇದ್ದ ಮರೀಚಿ ಪ್ರಮುಖ ವಿಪ್ರರು ಮನು
ಮೊದಲಾದವರು ಬಹು ಬೆರಗಾದರಾಗ ೬

ಪುಂಡಲೀಕಜಾಂಡದಲಿ ಇಂಥ ಸೂಕರ ರೂಪ
ಕಂಡಿಲ್ಲ ಎಲ್ಲೂನು ಇದು ಮಹಾಶ್ಚರ್ಯ
ಗಂಡ ಶಿಲಾವೋಲ್ ಕ್ಷಣ ಮಾತ್ರದಲಿ
ಚಂಡ ಈ ಕ್ರೋಡವು ದೊಡ್ಡದಾಗಿಹುದು ೭

ಈ ನಿನ್ನ ಸೂಕರ ರೂಪವ ನೋಡುತ್ತ
ಮುನಿಗಳು ತರ್ಕಿಸಿ ಮೀಮಾಂಸ ಮಾಡಿ
ಅನಿಮಿತ್ತಬಂಧು ಹರಿ ಒಲಿದು ಬಂದಿರುವಿ
ಎಂದು ವನಜಸಂಭವ ಸಂತೋಷ ಹೊಂದಿದನು ೮

ಮಹಾವರಾಹ ರೂಪನೇ ವಿಭೋ ನೀನು
ಮಹಾಧ್ವನಿಯಲಿ ಗರ್ಜಿಸಿದಿ ಆಗ
ಆ ಹೂಂಕಾರವು ದಿಕ್ಕು ವಿದಿಕ್ಕುಗಳ
ಮಹಾಂಬರವ ತುಂಬಿತು ಪ್ರತಿಧ್ವನಿಯಿಂದ ೯

ಅಪ್ರತಿ ಮಹಾಮಹಿಮ ಉರುಪರಾಕ್ರಮ ನೀನು
ಅಂಬುಧಿಯೊಳು ಲೀಲೆಯಿಂದಲಿ ಪೊಕ್ಕು
ಸುಪವಿತ್ರತಮ ನಿನ್ನ ದಂಷ್ಟ್ರದ ಮೇಲಿಟ್ಟುಕೊಂಡು
ಕ್ಷಿಪ್ರದಲಿ ನೀರಮೇಲ್ ತಂದಿ ಭೂಮಿಯನು ೧೦

ನೀರೊಳಗಡೆ ತಡೆದ ಆದಿದೈತ್ಯನ ಕೊಂದು
ನೀರಮೇಲ್ ಇರಿಸಿದಿ ಭೂಮಿಯ ಎತ್ತಿ
ಸರಸಿಜೋದ್ಭವ ಮುಖ್ಯಸುರಮುನಿ ವೃಂದವು
ಕರಮುಗಿದು ಸ್ತುತಿಸಿದರು ಕೃತಜ್ಞ ಭಕ್ತಿಯಲಿ ೧೧

ಜಿತಂಜಿತಂತೇ ಅಜಿತ ಯಜ್ಞಾಭಾವನ
ಎಂದು ಜಯಘೋಷವ ಮಾಡಿ ಮುದದಿ
ಸುತಪೋನಿಧಿಗಳು ಸ್ತುತಿಸಿ ನಮಿಸಿದರು
ವೇದವೇದ್ಯನೇ ಸೂಕರರೂಪ ನಿನ್ನನ್ನ ೧೨

ದೇವೇಶನೇ ನಮೋ ನಮಸ್ತೆ ಅಖಿಳ ಮಂತ್ರದೇವತಾ
ದ್ರವ್ಯಾಯ ಸರ್ವಕೃತವೇ ಕ್ರಿಯಾತ್ಮನೇ
ವೈರಾಗ್ಯ ಭಕ್ತ್ಯಾತ್ಮಜಯಾನುಭಾವಿತ
ಜ್ಞಾನಾಯ ವಿದ್ಯಾ ಗುರುವೇ ನಮೋ ನಮಃ ೧೩

ಈ ರೀತಿ ಇನ್ನೂ ಬಹುವಾಗಿ ಸ್ತುತಿಸಿದರು
ಹರಿ ವರಾಹನೇ ಭೂದರ ಧರೋದ್ಧಾರ
ನರಸುರರು ಶುಚಿಯಿಂ ಪಠಿಸಿ ಎಲ್ಲರೂ ಕೇಳೆ
ಸುಪ್ರಸನ್ನನು ಆಗಿ ಭದ್ರವನು ಈವ ೧೪

ಜ್ಞಾನಸುಖ ಪೂರ್ಣ ಪ್ರಸನ್ನ ಶ್ರೀನಿವಾಸ
ಅನತೇಷ್ಟಪ್ರದ ಭೂವರಾಹ ಹಯಗ್ರೀವ
ಶ್ರೀಶ ನರಸಿಂಹ ವಿಧಿತಾತ ನಮಸ್ತುಭ್ಯಂ
ಪೂರ್ಣಪ್ರಜ್ಞರ ಹೃತ್‌ಸ್ಥ ಜನ್ಮಾದಿಕರ್ತ ೧೫

–ಇತಿ ಪ್ರಥಮ ಅಧ್ಯಾಯ ಪೂರ್ಣಂ –

ದ್ವಿತೀಯ ಅಧ್ಯಾಯ

ಹಿರಣ್ಯಾಕ್ಷ ಸಂಹಾರ

ಆದರದಿ ಶರಣಾದೆ ಭೂದರ ವರಾಹನೇ
ಶ್ರೀಧಾರಾರಮಣ ವಿಧಿ ಶ್ರದ್ಧೇಶ ವಂದ್ಯ
ಬದರಶೇಖರ ಮುಖ ಸುವಿನುತ ವಾಂಛಿತದ
ಮೋದ ಚಿನ್ಮಯ ಭೂವರಾಹ ಯಜ್ಞೇಶ ಪ

ಜ್ಞಾನಸುಖ ಭೂಮಾದಿ ಗುಣಪೂರ್ಣ ನಿರ್ದೋಷ
ಪೂರ್ಣಬಲ ಹರಿ ಯಜ್ಞಮೂರುತಿ ವರಾಹ
ಹನನ ಮಾಡಿ ಆದಿದೈತ್ಯನ ನೀರಿಂದ
ಕ್ಷೋಣಿಯ ನಿನ್ ದಂಷ್ಟ್ರ ಮೇಲಿಟ್ಟು ತಂದಿ ೧

ಭೂಮಿ ಉದ್ಧರಿಸಲು ಮಾತ್ರವಲ್ಲದೇ ಆ
ಹೇಮಾಕ್ಷ ಅಸುರನ್ನ ಸಂಹಾರ ಮಾಡೆ
ನೀ ಮಹಾಕ್ರೋಡರೂಪವ ಪ್ರಕಟಿಸಿದಿ ವಿಭೋ
ಅಮಲ ಅಪ್ರಾಕೃತ ಚಿನ್ಮಯ ವಪುಷ ೨

ಏಕದಾ ಬ್ರಹ್ಮನ ಸುತರು ಸನಕಾದಿಗಳು
ಏಕಾತ್ಮ ಶ್ರೀ ವಿಷ್ಣುಲೋಕಕ್ಕೆ ಬರಲು
ದಿಗ್ವಾಸಸ ಶಿಶುರೂಪ ಆ ಮುನಿವರರ
ಲೆಕ್ಕಿಸದೆ ತಡೆದರು ದ್ವಾರಪಾಲಕರು ೩

ಜಯವಿಜಯರೆಂಬುವ ಆ ದ್ವಾರಪಾಲಕರಿಗೆ
ಮಾಯೇಶ ಹರಿ ಪ್ರಿಯತರ ಮುನಿಶ್ರೇಷ್ಠರು
ಈಯಲು ಶಾಪವ ಆ ವಿಷ್ಣು ಪಾರ್ಷದರು
ದೈತ್ಯಜನ್ಮವ ಹೊಂದಿದರು ಪತನವಾಗಿ ೪

ಪತಿ ಕಶ್ಯಪ ಮುನಿ ಅಗ್ನೀಕದಲಿ ಇರಲು
ದಿತಿ ದೇವಿ ಬಂದು ಅಪತ್ಯಕಾಮದಲಿ

ಸಂಧ್ಯಾಕಾಲದಿ ಇಚ್ಛಿಸಿ ನಿರ್ಬಂಧಿಸಿ
ತಾ ಧರಿಸಿದಳು ಗರ್ಭ ವಿಧಿ ವಿರುದ್ಧದಲಿ ೫

ಸುತಪೋನಿಧಿ ಕಶ್ಯಪ ತೇಜೋಲ್ಬಣದಿ
ದಿತಿದೇವಿ ಜಠರದಲಿ ವಿಷ್ಣುಪಾರ್ಶದರು
ಪತಿತ ಆ ಜಯವಿಜಯರು ಪ್ರವೇಶಿಸಿದರು
ಆ ಆದಿದೈತ್ಯನು ಸಹ ಮೊದಲೇ ಅಲ್ಲಿ ಹೊಕ್ಕಿದ್ದ ೬

ಅಬ್ಧಿಯಿಂ ನೀ ಭೂಮಿ ಎತ್ತೆ ತಡೆದು ಹತ –
ನಾದ ಆ ದೈತ್ಯನು ಅಬ್ಜದೋದ್ಭವನು
ದಿತಿದೇವಿ ಉದರದಿ ಪ್ರವೇಶ ಮಾಡಿದ ಅವನೋಳ್
ಶ್ರೀದ ನಿನ್ ಪಾರ್ಶದನು ಆವಿಷ್ಟನಾದ ೭

ಆದಿ ಹೇಮಾಕ್ಷನೊಳು ವಿಷ್ಣು ದ್ವಾರಪ ವಿಜಯ
ದಿತಿದೇವಿ ಅವರ ಸುತ ಹಿರಣ್ಯಾಕ್ಷನೆಂದು
ಉದಿಸಿದನು ಅಣ್ಣ ಜಯ ಹಿರಣ್ಯಕಶಿಪು ಸಹ
ಅತಿಪರಾಕ್ರಮಯುತನು ಲೋಕಕಂಟಕನು ೮

ಗದೆ ಹಿಡಿದು ಹಿರಣ್ಯಾಕ್ಷ ದಿಗ್ವಿಜಯ ಮಾಡಿ
ಭೀತಿ ಪಡಿಸಿದ ದೇವತಾ ಜನರನ್ನೆಲ್ಲ
ಅತಿಬಲಯುತನಿವ ಧರೆಯ ಸೆಳಕೊಂಡು
ಉದಧಿಯೊಳು ಹೊಕ್ಕನು ಆರ್ಭಟಮಾಡುತ್ತ ೯

ವರುಣಾದಿ ಸುರರು ನಿನ್ನಲಿ ಮೊರೆ ಇಡಲು
ವರಶ್ಯಾಮಸುಂದರ ವರಾಹ ಹರಿ ನೀನು
ನೀರೊಳು ಲೀಲೆಯಿಂದಲಿ ಪೊಕ್ಕು ಆ ದೈತ್ಯ
ಹಿರಣ್ಯಾಕ್ಷನ ಸಹ ಯುದ್ಧ ಮಾಡಿದಿಯೋ ೧೦

ಸುರವೃಂದ ಕ್ಷೇಮಾರ್ಥ ಪದುಮಜ ಪ್ರಾರ್ಥಿಸಲು
ಕರದಿಂದ ಹೊಡೆದು ಆ ದೈತ್ಯನ ಕೊಂದು
ಧರೆಯನುದ್ಧರಿಸಿ ನೀ ಮೇಲೆತ್ತಿ ತಂದಿಯೋ
ಉರುಪರಾಕ್ರಮ ಭಕ್ತವತ್ಸಲ ಕೃಪಾಳೋ ೧೧

ಭೂದರ ವರಾಹ ಹರಿ ನಿನ್ನ
ಕೃತಜ್ಞ ಮನದಿ ಸನ್ನಮಿಸಿ ಸ್ತುತಿಸಿದರು
ಉದಾರ ವಿಕ್ರಮ ಹಿರಣ್ಯಾಕ್ಷನ್ನ ನೀನು
ಕೊಂದ ನಿನ್ನಯ ಕ್ರೀಡಾ ವರ್ಣಿಸಲಶಕ್ಯ ೧೨

ಕಮಲಾರಮಣ ಶ್ವೇತವರಾಹ ಮೂರುತಿ ನಮೋ
ಶಾಮಚಾರ್ವಾಂಗ ನಮೋ ಭೂವರಾಹ
ಬ್ರಹ್ಮ ಪವಮಾನರಿಂದಲಿ ಸದಾ ಪೂಜ್ಯನೇ
ಸ್ವಾಮಿ ಕರುಣಾಂಬುಧಿಯೇ ಶರಣು ಮಾಂಪಾಹಿ ೧೩

ಮೀನ ಕೂರ್ಮ ಕ್ರೋಢ ನರಸಿಂಹ ವಾಮನ
ರೇಣುಕಾದೇವಿಯ ಸುತ ರಾಮಚಂದ್ರ
ಕೃಷ್ಣ ಬುದ್ಧ ಕಲ್ಕಿ ವ್ಯಾಸ ಹಯಗ್ರೀವ
ಆನಮಿಪೆ ಅವನೀಶ ಭೂ ಶ್ರೀಶ ಪಾಹಿ ೧೪

ಉತ್ತಿಷ್ಠ ಶ್ರೀಕರ ಭೂಧರ ವರಾಹ ನಮೋ
ಸದಾನಂದಮಯ ಜಗಜ್ಜನ್ಮಾದಿ ಕರ್ತ
ನಿರ್ದೋಷ ಗುಣಪೂರ್ಣ ಅನಿಷ್ಟ ಪರಿಹರಿಸಿ
ಸದ್‌ಜ್ಞಾನ ಬಲ ಅಯಸ್ಸು ಧನ ಯಶಸ್
ವರ್ಧಿಸುವಿ ದಯದಿ ೧೫

ಶ್ಯಾಮ ಅರಿಶಂಖಧರ ಅಭಯ ಸದ್ವರಹಸ್ತ
ಭೂಮಿಧರ ಸರ್ವವಾಂಛಿತ ಸಿದ್ಧಿದಾತ
ಭೂಮ ನಿರ್ಮಲ ಕೋಲ ರೂಪ ಸರ್ವೋತ್ತಮನೇ
ಮನ್ಮನದಿ ಸರ್ವದಾ ಹೊಳೆಯೋ ಕರುಣಾಳು ೧೬

ಗುರು ಗುರೋರ್ಗುರು ಗುರೋರ್ಗುರುವಿನ ಗುರು
ಶ್ರೀ ರಾಘವೇಂದ್ರ ಗುರುರಾಜ ಲಾತವ್ಯ ಋಜುವರ್ಯ ಮಧ್ವ
ವಾರಿಜಾಸನ ಸರ್ವಹೃದ್ವನಜ ಅಂತಸ್ಥ
ಶಿರಿ ಮಹೀರಮಣ ವರಾಹ ನಮೋ ಶರಣು ೧೭

ಜ್ಞಾನಸುಖಪೂರ್ಣ ಪ್ರಸನ್ನ ಶ್ರೀನಿವಾಸ
ಅನತೇಷ್ಟಪ್ರದ ಭೂವರಾಹ ಹಯಗ್ರೀವ
ಶ್ರೀಶ ನರಸಿಂಹ ವಿಧಿತಾತ ನಮಸ್ತುಭ್ಯಂ
ಪೂರ್ಣಪ್ರಜ್ಞರ ಹೃತ್‌ಸ್ಥ ಜನ್ಮಾದಿಕರ್ತ ೧೮

–ಇತಿ ದ್ವಿತೀಯ ಅಧ್ಯಾಯ ಸಂಪೂರ್ಣಂ –

ಶ್ರೀಭೂವರಾಹ ಸ್ತೋತ್ರ

೭

ಭೂವರಾಹ ಭುವನವ ತಂದ ಭೂವರಾಹ ಪ.

ಆನಮಿಪೆ ನಿನ್ನಂಬುಜ ಚರಣಕೆ ಆನಮಿಪೆ॥
ಆನಮಿಸುವೆಮ್ಮ ದೋಷಗಳೆಣಿಸದೆ ಕಾಯೋ ॥ ಭೂವರಾಹ ಅ.ಪ.

ನಾಳಿಜಾತ ನಾಶರಹಿತ ನಾಳಿಜಾತ ವಾಸುದೇವ
ನಾಳಿಜಾತ–ಜಲದೊಳು ಪೊಕ್ಕು ಅಸುರನಕೊಂದು–
ವಸುಧೆಯ ತಂದು–ಭೂವರಾಹ ೧

ಅಂಬುಜಾಕ್ಷ । ಶಂಭುವಂದ್ಯ ಅಂಬುಜಾಕ್ಷ ಅಂಬು ಜೇಶ।
ಅಂಬುಜಾಕ್ಷ –ಅಂಬುಧಿ ಪೊಕ್ಕು–ಜಾಂಬುನದಾಕ್ಷಣ
–ಕೊಂದಿಧರೋದ್ಧರ – ಭೂವರಾಹ ೨

ಸಹಸ್ರಶೀರ್ಷ। ಸಹಸ್ರ ಅಕ್ಷ ಸಹಸ್ರಪಾದ ಸಹಸ್ರನಾಮ–
ಸಹಸ್ರ ಶೀರ್ಷ– ಬ್ರಹ್ಮನಜನಕ ಮಹಿಶಿರಿ ಈಶ–
ಪ್ರಸನ್ನ ಶ್ರೀನಿವಾಸ ॥ಭೂವರಾಹ ೩

॥ಶ್ರೀ ಭಾರತೀರಮಣ ಮುಖ್ಯ ಪ್ರಾಣಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು॥

ಪ್ರಸನ್ನ ಶ್ರೀ ನರಸಿಂಹ (ಪ್ರಹ್ಲಾದ ಚರಿತೆ)]

೮

ಪ್ರಥಮ ಅಧ್ಯಾಯ – ಹಿರಣ್ಯಕಶಿಪು ಪೂರ್ವ ವೃತ್ತಾಂತ

ಜಯತು ಜಯ ನರಸಿಂಹ ಅಮಿತಪೌರುಷ ವಿಷ್ಣೋ
ಜಯತು ಶ್ರೀಪತಿ ಅನಘ ಬ್ರಹ್ಮ ಶಿವವಂದ್ಯ
ಜಯ ಗುಣಗಣಾರ್ಣವನೇ ಪ್ರಹ್ಲಾದ ರಕ್ಷಕನೇ
ಜಯ ಸ್ವಜನತೇಷ್ಟ ಚಿಂತಾಮಣಿಯೇ ಶರಣು ಪ

ತೋಯಸ್ಥ ಪತ್ರಸ್ಥ ತೋಯಜಾಲಯಾ ಸ್ತುತ್ಯ
ತೋಯಜಾಸನ ಅಂಡ ಸ್ರಷ್ಟಾ ಸರ್ವಸ್ಥ
ಅಚ್ಯುತಾನಂತ ಗೋವಿಂದ ನೀ ಸಜ್ಜನರ
ಭಯ ನಿವಾರಣ ಮಾಳ್ಪಿ ತೋರಿ ಆಗಾಗ ೧

ಪ್ರಳಯ ಜಲಚರ ಶೈಲಧರ ಧರೋದ್ಧರ ನಮೋ
ಬಾಲಕಗೆ ಒಲಿದು ಬಲಿಯಲಿ ದಾನ ಕೇಳಿ
ಖಳ ಕುಪಾಲರ ಸದೆದು ಜಲಧಿಯ ಬಂಧಿಸಿದ
ಲಲನೇರ ರಂಜಿತ ಶಿಶು ಕಂಭಳದಿ ತೋರ್ವಿ ೨

ಏಕದಾ ಬ್ರಹ್ಮನ ಸುತರು ಸನಕಾದಿಗಳು
ಏಕಾತ್ಮ ಶ್ರೀ ವಿಷ್ಣುಲೋಕಕ್ಕೆ ಬರಲು
ದಿಗ್ವಾಸಸ ಶಿಶುರೂಪ ಆ ಮುನಿವರರ
ಲೆಕ್ಕಿಸದೇ ತಡೆದರು ದ್ವಾರಪಾಲಕರು ೩

ಜಯವಿಜಯರೆಂಬ ಆ ದ್ವಾರಪಾಲಕರಿಗೆ
ಮಾಯೇಶ ಹರಿ ಪ್ರಿಯತರರು ಮುನಿವರರು
ಈಯಲು ಶಾಪವ ಆ ವಿಷ್ಣು ಪಾರ್ಷದರು
ದೈತ್ಯಜನ್ಮವ ಹೊಂದಿದರು ಪತನವಾಗಿ ೪

ಸುತಪೋನಿಧಿ ಕಶ್ಯಪ ತೇಜೋಲ್ಬಣದಿಂ
ದಿತಿದೇವಿ ಜಠರದಲಿ ವಿಷ್ಣು ಪಾರ್ಷದರು
ಪತಿತ ಆ ಜಯ ವಿಜಯರು ಪ್ರವೇಶಿಸಿದರು
ದಿತಿ ಹಡೆದಳು ಗಂಡು ಮಕ್ಕಳೀರ್ವರನು ೫

ದಿತಿದೇವಿ ಅಗ್ರಸುತ ಹಿರಣ್ಯಕಶಿಪು ಜಯ
ದಿತಿ ಅವರಸುತ ವಿಜಯನೇ ಹಿರಣ್ಯಾಕ್ಷ
ಗದೆ ಹಿಡಿದು ಸುರರಿಗೆ ಉಪಟಳ ಕೊಟ್ಟನು
ಈ ಧರೆಯ ಅಬ್ಧಿಯ ಕೆಳಗೆ ಅಡಗಿಸಿದ ೬

ಸುರಸುಜನ ಕ್ಷೇಮಾರ್ಥ ಪದುಮಜ ಪ್ರಾರ್ಥಿಸಲು
ಕರದಿಂದ ಹೊಡೆದು ಹಿರಣ್ಯಾಕ್ಷನ ಕೊಂದು
ಧರೆಯ ಲೀಲೆಯಿಂದ ಮೇಲೆತ್ತಿತಂದಿ
ವರಶ್ಯಾಮಸುಂದರ ವರಾಹ ಹರಿ ನೀನು ೭

ಜಯ ಜಯತು ವೇಧಪಿತ ಶ್ರೀ ಪ್ರಸನ್ನ ಶ್ರೀನಿವಾಸ ನರಸಿಂಹ
ಜಯ ಗುಣಾರ್ಣವ ಭೂಮಾನ್ ಲಕ್ಷ್ಮೀಸಮೇತ
ಜಯ ಅಜನಪಿತ ನಮೋ ಶರ್ವಾದಿ ಸುರವಂದ್ಯ
ಜಯತು ಭಕ್ತೇಷ್ಟಪ್ರದ ಪ್ರಹ್ಲಾದ ಪಾಲ ೮

–ಇತಿ ಪ್ರಥಮಾಧ್ಯಾಯ ಸಂಪೂರ್ಣಂ –

ದ್ವಿತೀಯ ಅಧ್ಯಾಯ

ಹಿರಣ್ಯಕಶಿಪು ವರ ವೃತ್ತಾಂತ

ಜಯತು ಜಯ ನರಸಿಂಹ ಅಮಿತಪೌರುಷ ವಿಷ್ಣೋ
ಜಯತು ಶ್ರೀಪತಿ ಅನಘ ಬ್ರಹ್ಮ ಶಿವವಂದ್ಯ
ಜಯ ಗುಣಗಣಾರ್ಣವನೇ ಪ್ರಹ್ಲಾದ ರಕ್ಷಕನೇ
ಜಯ ಸ್ವಜನತೇಷ್ಟ ಚಿಂತಾಮಣಿಯೇ ಶರಣು ಪ

ಮೂರ್ಜಗದ ದೊರೆ ಹರೇ ನೀ ತನ್ನ ತಮ್ಮನ
ಭಂಜಿಸಿದೆ ಎಂದು ಕಡುಕೋಪಗೊಂಡು
ದುರ್ಜನ ದಾನವ ವಂದಿತ ಹಿರಣ್ಯಕನು
ರಜಸ್ತಮೋಚ್ಛದಿ ದ್ವೇಷ ಮಾಡಿದನು ನಿನ್ನಲ್ಲಿ ೧

ಶೂಲದಿಂ ಅಚ್ಯುತನ ಕುತ್ತಿಗೆ ಕತ್ತರಿಸಿ
ಗಳರುಧಿರ ತರ್ಪಣ ಕೊಡುವೆ ಎನ್ನುತ್ತ
ಖಳ ದೈತ್ಯ ಪ್ರಮುಖರಿಗೆ ಹೇಳಿದನು ವೈಷ್ಣವ
ಸ್ಥಳ ದ್ವಿಜ ಗೋ ಭಕ್ತರನ್ನ ತರಿ ಎಂದ ೨

ಗರ್ಜಿಸುತ ದೈತ್ಯರು ಪುರ ಗ್ರಾಮ ಆಶ್ರಮ
ವ್ರಜಕ್ಷೇತ್ರ ದಹಿಸಲು ಹಿರಣ್ಯಕಶಿಪು
ಅಜೇಯಾಜರಾಮರತ್ವವ ಅಪ್ರತಿ ಮುಖ್ಯ
ರಾಜತ್ವ ಹೊಂದಲು ತಪಸ್ಸು ಮಾಡಿದನು ೩

ಊರ್ಧ್ವದಲಿ ಬಾಹುಗಳ ನಭದಲಿ ದೃಷ್ಟಿಯು
ಪಾದಾಂಗುಷ್ಟ ಮಾತ್ರದಿ ನಿಂತು ತಪವ
ಗೈದನು ಆ ತಪೋಧೂಮಾಗ್ನಿ ಪೀಡಿತ
ತ್ರಿದಿವರು ಮೊರೆ ಇಟ್ಟರು ಬ್ರಹ್ಮನಲ್ಲಿ ೪

ಪದುಮಭವ ಭೃಗು ದಕ್ಷಾದಿಗಳೊಡೆಯೈದು
ದೈತ್ಯೇಶ್ವರ ಹಿರಣ್ಯಕನ ಆಶ್ರಮವ
ಭದ್ರಂತೇ ತಪಸಿದ್ಧಿ ಆಯಿತು ವಶೀಕೃತನಾದ
ಉತ್ತಿಷ್ಠೋತ್ತಿಷ್ಠ ವರ ಕೊಡುವೆನು ಎಂದ ೫

ಬ್ರಹ್ಮನ್ನ ನೋಡಿ ಹಿರಣ್ಯಕನು ಸನ್ನಮಿಸಿ –
ಬ್ರಹಾಂತರ್ಗತ ಹರಿ ವಿವಕ್ಷಿತ ಗುಣಗಳ
ಬ್ರಹ್ಮ ಹರುಷದಿಂದಲಿ ಸಮ್ಯಕ್ ಕೀರ್ತನೆ ಮಾಡಿ
ಆ ಹಂಸವಾಹನನ ವರಗಳ ಬೇಡಿದನು ೬

ಸರೋರುಹಾಸನ ಸೃಷ್ಟ ಸರ್ವಭೂತಂಗಳು
ನರ ಅಹೀ ಮೃಗ ಪ್ರಾಣ ಉಳ್ಳವು ಇಲ್ಲದವು
ಹೊರ ಒಳಗೆ ಭೂಮ್ಯಾಂಬರ ದಿವಾ ರಾತ್ರಿಯು
ಸುರಾಸುರ ಮೃತ್ಯು ಮಾ ಭೂನ್ಮ್ರಮ ಎಂದ ೭

ಏಕಪಥ್ಯವು ಅಪ್ರತಿ ಶಕ್ತಿಮತ್ಯವವು
ಲೋಕಪಾಲಕರಂತೆ ಬಲವು ಮಹಿಮೆಗಳು
ಯೋಗಿ ತಪಸ್ವಿಗಳಂತೆ ಸಿದ್ಧಿಗಳು ಸರ್ವವು
ಬೇಕು ತನಗೆಂದು ವರ ಬೇಡಿದ ಬ್ರಹ್ಮನ್ನ ೮

ಶತಧೃತಿಯು ಈ ದುರ್ಲಭ ವರಗಳನ್ನಿತ್ತು
ತಾ ತೆರಳಿದನು ದೈತ್ಯನಿಂ ಪೂಜೆಗೊಂಡು
ಭ್ರಾತೃವಧ ಅನುಸ್ಮರಿಸಿ ಹರಿದ್ವೇಷ ಬೆಳಸಿದನು
ಲಬ್ಧವರ ದೈತ್ಯೇಶ ಇನ್ನೂ ಹೆಚ್ಚಾಗಿ ೯

ನರಸುರಾಸುರ ಋಷಿ ಗರುಡೋರಗ ಸಿದ್ಧ
ಚಾರಣ ವಿದ್ಯಾಧರ ಯಕ್ಷ ಗಂಧರ್ವ
ಪಿತೃ ಪ್ರೇತ ಭೂತಪತಿ ರಾಕ್ಷಸ ಪಿಶಾಚೇಶ
ಸರ್ವರನು ಜೈಸಿ ತನ್ನವಶ ಮಾಡಿಕೊಂಡ ೧೦

ಮೂಲೋಕಂಗಳಲ್ಲಿ ದಶದಿಕ್ಕುಗಳಲ್ಲಿ ಈ
ಹಿರಣ್ಯಕಶಿಪು ತನ್ನ ಜಯಭೇರಿ ಹೊಡೆದ
ಸರ್ವಲೋಕಪಾಲರ ತೇಜಃಸ್ಥಾನಗಳ ಅಪ –
ಹರಿಸಿ ತ್ರಿವಿಷ್ಟಪ ಭೋಗದಲಿ ಮನಸ್ಸಿಟ್ಟ ೧೧

ಅಜಿತೇಂದ್ರಿಯ ಹೇಯ ಭೋಗರತ ಅಹಂಕಾರಿ
ಮೂರ್ಜಗಾರಿಯು ಧರ್ಮ ಆಚಾರ ದ್ವೇಷಿ

ನಿರ್ಜರರು ಅವನಿಂದ ಹಿಂಸೆ ತಾಳದೆ ವಿಷ್ಣೋ
ತ್ರಿಜಗದೀಶನೇ ಮೊರೆ ಹೊಕ್ಕರು ನಿನ್ನಲ್ಲಿ ೧೨

ಹರಿ ಹೃಷಿಕೇಶ ಅಚ್ಯುತ ಈಶ್ವರ ನಿನ್ನ
ಭದ್ರವಾಣಿ ಅಭಯ ಹೊಂದಿ ಸುರವರರು
ನಿರೀಕ್ಷಿಸಿದರು ಪ್ರಶಾಂತ ಮಹಾತ್ಮಾ
ನಿರ್ವೈರ ಪ್ರಹ್ಲಾದ ಹುಟ್ಟುವ ಕಾಲವನು ೧೩

ಜಯತು ಜಯತು ವೇಧಪಿತ ಶ್ರೀ ಪ್ರಸನ್ನ ಶ್ರೀನಿವಾಸ ನರಸಿಂಹ
ಜಯ ಗುಣಾರ್ಣವ ಭೂಮಾನ್ ಲಕ್ಷ್ಮೀಸಮೇತ
ಜಯ ಅಜನಪಿತ ನಮೋ ಶರ್ವಾದಿ ಸುರವಂದ್ಯ
ಜಯತು ಭಕ್ತೇಷ್ಟಪ್ರದ ಪ್ರಹ್ಲಾದ ಪಾಲ ೧೩

–ಇತಿ ದ್ವಿತೀಯ ಅಧ್ಯಾಯ ಸಂಪೂರ್ಣಂ –

ತೃತೀಯ ಅಧ್ಯಾಯ – ಬಾಲಕ ಪ್ರಹ್ಲಾದ

ಜಯತು ಜಯ ನರಸಿಂಹ ಅಮಿತಪೌರುಷ ವಿಷ್ಣೋ
ಜಯತು ಶ್ರೀಪತಿ ಅನಘ ಬ್ರಹ್ಮ ಶಿವವಂದ್ಯ
ಜಯ ಗುಣಗಣಾರ್ಣವನೇ ಪ್ರಹ್ಲಾದ ರಕ್ಷಕನೇ
ಜಯ ಸ್ವಜನತೇಷ್ಟ ಚಿಂತಾಮಣಿಯೇ ಶರಣು ಪ

ಯುಕ್ತ ಕಾಲದಿ ಹೇಮಕಶಿಪುಗೆ ಐದು
ಮಕ್ಕಳು ಹುಟ್ಟಿದರು ನಾಲ್ವರು ಗಂಡು
ಮಕ್ಕಳು ನಾಲ್ವರಲ್ಲಿ ಪ್ರವರ ಪ್ರಹ್ಲಾದನು
ಅಕಳಂಕ ಗುಣಶ್ರೇಷ್ಠ ಮಹದುಪಾಸಕನು ೧

ಸತ್ಯಸಂಧನು ಶೀಲಸಂಪನ್ನ ಬ್ರಹ್ಮಣ್ಯ
ಜಿತೇಂದ್ರಿಯ ಸಮದರ್ಶಿ ಆರ್ಯರ ವಿಧೇಯ
ಸ್ನಿಗ್ಧರಿಗೆ ಭ್ರಾತೃವತ್ ಯಥಾದೇವೋ ತಥಾಗುರೋ
ಭೂತಪ್ರಿಯ ಸುಹೃತ್ತಮ ದೀನವತ್ಸಲನು ೨

ವಿಧ್ಯಾರ್ಥಿ ರೂಪಾದಿಗಳ ಗರ್ವ ಇವಗಿಲ್ಲ
ಶ್ರುತ ದೃಷ್ಟ ವಿಷಯದಲಿ ಗುಣಗ್ರಾಹಿಯು
ಶಾಂತನು ದಾಂತನು ಸಾಧುಗಳಲಿ ಪ್ರಿಯ
ಸದಾ ಸ್ವಭಾವದಿ ಶ್ರೀ ವಿಷ್ಣುಭಕ್ತಿ ೩

ಗೋವಿಂದ ಹರಿ ವಾಸುದೇವ ನಿನ್ನಲ್ಲೇ
ಸರ್ವದಾ ಮನವನು ನೆಲಸಿ ಈ ಬಾಲ
ಸರ್ವ ನಡೆನುಡಿ ಊಟ ಶಯನ ಪರ್ಯಟನ
ಸರ್ವಾವಸ್ಥೆಯಲೂ ನಿನ್ನ ಸ್ಮರಿಸುವನು ೪

ಅಂಬುಜೋದ್ಭವ ತ್ರ್ಯಂಬಕ ಮುಖ್ಯವಿನುತ ನಿನ್ನ
ಅಂಬುಜಾಂಘ್ರಿಗಳನ್ನ ಧ್ಯಾನಿಪ ಈ ಬಾಲಕನ
ಅಂಬಕದಿ ಸುಜ್ಞಾನ ಭಕ್ತಿ ಪುಳಕಾಂಬುವು
ತುಂಬಿ ತುಳುಕಾಡುವುದು ಕಂಡಿಹರು ಅಂದು ೫

ಒಮ್ಮೆ ನಗುವನು ಒಮ್ಮೆ ರೋದಿಸುವನು ಒಮ್ಮೆ
ಸುಮ್ಮನಿರುವ ಹರಿ ಪ್ರೇಮಾನಂದದಲಿ
ಅಮ್ಮಮ್ಮ ಭಕ್ತಿಯಲಿ ಕೂಗಿ ಕುಣಿವನು ಮಹಾನ್
ರಮೆಯರಸ ನಿನ್ನ ದಾಸಾಗ್ರಣಿಯು ಪ್ರಹ್ಲಾದ ೬

ಮಹಾತ್ಮನು ಮಹಾಭಾಗ ಮಹಾಭಾಗವತನು
ಮಹಾಕಾರುಣಿಕ ಪ್ರಹ್ಲಾದಗೆರಗುವೆನು
ಅಹರ್ನಿಶಿ ಧೃತಿಸ್ಥ ಹರಿ ನಿನ್ನಲ್ಲಿ ಭಕ್ತಿ
ಇಹಪರದಿ ಸೌಭಾಗ್ಯ ಎಮಗೀಯಲೆಂದು ೭

ಜಯ ಜಯತು ವೇಧಪಿತ ಶ್ರೀ ಪ್ರಸನ್ನ ಶ್ರೀನಿವಾಸ ನರಸಿಂಹ
ಜಯ ಗುಣಾರ್ಣವ ಭೂಮನ್ ಲಕ್ಷ್ಮೀಸಮೇತ
ಜಯ ಅಜನಪಿತ ನಮೋ ಶರ್ವಾದಿ ಸುರವಂದ್ಯ
ಜಯತು ಭಕ್ತೇಷ್ಟಪ್ರದ ಪ್ರಹ್ಲಾದ ಪಾಲ ೮

– ಇತಿ ತೃತಿಯಾ ಅಧ್ಯಾಯ ಸಂಪೂರ್ಣಂ –

ಚತುರ್ಥ ಅಧ್ಯಾಯ

ಪ್ರಹ್ಲಾದರ ವಿಧ್ಯಾಭ್ಯಾಸ

ಜಯತು ಜಯ ನರಸಿಂಹ ಅಮಿತಪೌರುಷ ವಿಷ್ಣೋ
ಜಯತು ಶ್ರೀಪತಿ ಅನಘ ಬ್ರಹ್ಮ ಶಿವವಂದ್ಯ
ಜಯ ಗುಣಗಣಾರ್ಣವನೇ ಪ್ರಹ್ಲಾದ ರಕ್ಷಕನೇ
ಜಯ ಸ್ವಜನತೇಷ್ಟ ಚಿಂತಾಮಣಿಯೇ ಶರಣು ಪ

ದೈತ್ಯರಾಜನು ಪ್ರಿಯಪುತ್ರ ಪ್ರಹ್ಲಾದನಿಗೆ
ವಿದ್ಯೆಕಲಿಸಲು ಶಂಡಾಮರ್ಕರು ಎಂಬ
ಬೋಧಕರ ಏರ್ಪಾಡು ಮಾಡಿಸಲು ಆ ಮಹಾನ್
ಇತರ ಬಾಲಕರೊಡೆ ಕೂಡಿ ಓದಿದನು ೧

ವಿದ್ಯೆ ಕಲಿಯುವಾಗ ಇತರ ಬಾಲರ ಮೀರಿ
ಪ್ರತಿಭೆ ತೋರಿಸಿದನು ಬಾಲಪ್ರಹ್ಲಾದ
ಒಂದಾನೊಂದು ದಿನ ಹಿರಣ್ಯಕನು ವತ್ಸನ
ಕೇಳ್ದ ಕಲಿತದ್ದೆಲ್ಲಿ ಸಾಧು ಹೇಳೆಂದು ೨

ಸಂಸಾರಿ ಜೀವರುಗಳು ಸದಾ ಐಹಿಕ
ನಿಸ್ಸಾರ ವಿಷಯಂಗಳಲ್ಲಿ ಮುಳುಗಿ
ತಮಃಸಿಲಿ ಬೀಳದಿರೆ ಸಾಧು ಜನಸಂಗ
ಶ್ರೀಶ ಹರಿ ಸರ್ವವಂದ್ಯನ ಆಶ್ರಯಿಪುದು ೩

ಹೀಗೆ ಪ್ರಹ್ಲಾದ ಪೇಳಲು ಹಿರಣ್ಯಕ ಕೇಳಿ
ನಕ್ಕು ಪರ ಬೋಧಿತನಾಗಿಹನೆಂದು ನೆನೆದು
ಶುಕ್ರ ಸುತರು ತಮ್ಮ ಮನೆಯಲ್ಲೇ ಇಟ್ಟುಕೊಂಡು
ತಕ್ಕ ವಿಧದಲಿ ಬುದ್ಧಿ ತಿದ್ದಿಸುವುದು ಎಂದ ೪

ಗುರುಗಳು ಮನೆಯಲ್ಲಿ ಒಳ್ಳೆಮಾತಿಂದಲಿ
ಪರಕೃತವೋ ಸ್ವತಃ ಕೃತವೋ ಈ ಹರಿಪಕ್ಷಬುದ್ಧಿ
ಅನೃತವಾಡದೆ ಸತ್ಯ ಪೇಳೆಂದು ಕೇಳಿದರು
ಪರಮ ಭಾಗವತ ಪ್ರಹ್ಲಾದ ಬಾಲನ್ನ ೫

ಸತ್ತಾ ಪ್ರವೃತ್ತಿ ಪ್ರತೀತ್ಯಾದಿಪ್ರದ ಸರ್ವ -
ಕರ್ತನು ಸರ್ವವಶೀ ಚಕ್ರಧರ ವಿಷ್ಣು
ಸ್ವತಂತ್ರ ಹರಿ ವಿಧಿ ಶಿವಾದೀಡ್ಯನಲಿ ರತತಾನು
ಕಾಂತವು ಅಯಸ್ಸನ್ನು ಸೆಳೆವಂತೆ ಎಂದು ೬

ಅತಿ ಕೋಪದಿಂದ ಗುರು ಈ ಮಾತುಕೇಳಿ
ದೈತ್ಯೇಯ ಚಂದನ ವನರುಹ ಮುಳ್ಳುಗಿಡ
ದೈತ್ಯ ಮೂಲೋನ್ಮೂಲ ವಿಷ್ಣು ಕೊಡಲಿ ನಾಳ
ಎಂದು ಬಯ್ದು ಮತ್ತೂ ಪಾಠ ಹೇಳಿದರು ೭

ತ್ರಿವರ್ಗ ವಿಷಯಾದಿ ಪಾಠಗಳ ಬೋಧಿಸಿಲು
ತ್ರಿವರ್ಗ ಗ್ರಹಿಸಿದ ಈ ಕುಶಾಗ್ರ ಧೀಮಂತ
ಸರ್ವ ಬೋಧಿತವ ತಿಳಕೊಂಡಿಹನು ಎಂದು
ಕವಿಜರು ಹುಡುಗನ ಮನೆಗೆ ಕಳುಹಿದರು ೮

ಅರಮನೆಯಲಿ ಮಾತೆ ಬಾಲನ್ನ ಅಲಂಕರಿಸಿ
ಗುರು ಸಹ ಕಳುಹಿದಳು ರಾಜನ ಸಭೆಗೆ
ಹಿರಣ್ಯಕಶಿಪು ಮಗ ವಿನಯದಿ ನಮಸ್ಕರಿಸಿ
ತರಳನಾಶ್ಲೇಷಿಸಿ ಆನಂದಪಟ್ಟ ೯

ಮೈಸವರಿ ಶಿರಮೂಸಿ ತೊಡೆಯಮೇಲೆ ಕುಳ್ಳಿರಿಸಿ
ವತ್ಸಹೇಳು ಕೊಂಚವ ತಿಳಿದಲ್ಲಿ ಉತ್ತಮ
ವಾಸ ಮಾಡಿರುವಿ ಗುರುಗೃಹದಲಿ ಇದುವರೆಗೂ
ಸುಶಿಕ್ಷಿತನು ನೀ ಆಗಿರುವಿ ಎಂದ ೧೦

ಶ್ರವಣಂ ಕೀರ್ತನಂ ವಿಷ್ಣೋ ಸ್ಮರಣಂ ಪಾದ ಸೇವನಂ
ಅರ್ಚನಂ ವಂದನಂ ದಾಸ್ಯಂ ಸಖ್ಯಂ ಆತ್ಮನಿವೇದನಂ
ಭಕ್ತಿ ನವವಿಧ ವಿಷ್ಣುಗರ್ಪಿಪುದು ಕರ್ತವ್ಯ
ಅಧಿತ(ಕ)ದಿ ಉತ್ತಮವಿದು ಎಂದ ಪ್ರಹ್ಲಾದ ೧೧

ಹರಿಭಕ್ತಿ ಲಕ್ಷಣವ ಪ್ರಹ್ಲಾದ ಪೇಳಲು
ಹಿರಣ್ಯಕಶಿಪು ಕೇಳಿ ಮಗನ ಬೋಧಕರಾದ

ಗುರುಪುತ್ರರು ತನಗೆ ದ್ರೋಹ ಮಾಡಿದರೆಂದು
ಕ್ರೂರ ಮಾತಾಡಿದನು ಬಹು ಕುಪಿತನಾಗಿ ೧೨

ನಮತ್ಪ್ರಣೀತಂ ನಪರಪ್ರಣೀತಂ
ನಿನ್ನ ಮಗನು ನೈಸರ್ಗಿಕ ಮತಿಯಿಂದಲೇ
ಈ ಮಾತುಗಳಾಡಿದ್ದು ಎನ್ನ ಮೇಲ್ಕೋಪ
ನೀ ಮಾಡುವುದು ಹೇಗೆ ಎಂದ ಗುರುಪುತ್ರ ೧೩

ಗುರು ಹೀಗೆ ಪ್ರತಿ ಉತ್ತರ ತನಗೆ ಕೊಡಲು
ಹಿರಣ್ಯಕನು ಪ್ರಹ್ಲಾದನ ನೋಡಿ ಕೇಳ್ದ
ಗುರುಮುಖದಿಂದ ನೀ ಕಲಿಯದಿದ್ದರೆ ಮತ್ತೆ
ಯಾರಿಂದ ದುರ್ಬುದ್ಧಿ ಕಲಿತಿ ಎಂದ ೧೪

ದೈತ್ಯರಾಜನಿಗೆ ಪ್ರಹ್ಲಾದ ಹೇಳಿದನು
ಮತಿ ತನಗೆ ಕೃಷ್ಣನಲಿ ಬಂದಿರುವುದು
ಸ್ವತಃ ಅಲ್ಲವು ಮತ್ತು ಪರತಃವು ಅಲ್ಲವು
ಭಕ್ತಿ ಬುದ್ಧಿಗೆ ಯಾರ ಯತ್ನವೂ ಅಲ್ಲ ೧೫

ಭೋಗಿಸಿದ್ದೇ ಭೋಗಿಸುತ ವಿಷಯಲಂಪಟರಾದಿ
ಹೋಗಿಸದ ವಿಷಯಾಶೆ ಸಂಸಾರಸುಳಿಯೊಳು
ಹಗಲಿರುಳು ಬಳಲುವ ಅದಾಂತ ಮಂದರು ಎಲ್ಲಿ
ಹೋಗುವರು ನರಕಾಂಧ ಕೂಪದೊಳಗೆ ೧೬

ವಿಷ್ಣು ಒಲಿಯದೆ ಜ್ಞಾನಮಾರ್ಗವ ತಿಳಿಯರು
ದುಷ್ಟ ಆಶೇಯಿಂದ ವಿಷಯಾರ್ಥರತರು
ನಿಷ್ಕಾಮವಿಲ್ಲದೆ ಕಾಮ್ಯ ಅಚರಿಸುವ
ಕಷ್ಟಿಗಳು ಕುರುಡ ಕೈಪಿಡಿದ ಅಂಧನಂತೆ ೧೭

ಅಮಿತ ಪೌರುಷ ಪೂರ್ಣ ಶಕ್ತಿ ಸ್ವತಂತ್ರ
ಹರಿಚರಣದಲಿ ಮತಿ ಸಜ್ಞಾನ ಪ್ರೇಮ
ದೊರೆಯುವುದು ವೈಷ್ಣವ ಮಹಾತ್ಮರ ಪದರಜ
ಧರಿಸಿ ಸೇವಿಪರಿಗೆ ಅನ್ಯರಿಗೆ ಇಲ್ಲ ೧೮

ಪ್ರಹ್ಲಾದ ಹೀಗೆನಲು ಆ ಮಹಾದೈತ್ಯ
ಲೋಹಿತ ನೇತ್ರದಿಂರುಹ ಜ್ವಾಲೆ ಸ್ಫುರಿಸಲು
ಮಹಿತಲಕೆ ದಬ್ಬಿದನು ತೊಡೆಯಿಂದ ಮಗನ
ಮಹಾಶತೃ ಪಕ್ಷೀಯ ಕುಲ ವೈರದಿಂದ ೧೯

ತಾನು ಹಾನಿಗೈವ ಅಮಯಗ್ರಸ್ಥ ಅಂಗವು
ತನುಜವಾದರು ಅದನ್ನ ಛೇದಿಪ ತೆರದಿ
ತನ್ನ ಮಗ ಅಹಿತನು ಶತೃವಾದುದರಿಂದ
ಹನನಾರ್ಹ ಸರ್ವೋಪಾಯದಲಿ ಕೊಲ್ಲೆಂದ. ೨೦

ಕೆಂಜೆಡೆ ಕೆಮ್ಮೀಸೆ ಕರಾಳ ಮುಖದವರು
ಗರ್ಜಿಸುತ ಕೋರೆ ಹಲ್ಲುಗಳ ತೋರಿ
ಪಿಂಜು ಬಾಲಕ ಐದು ವರ್ಷದ ಪ್ರಹ್ಲಾದನನ್ನ
ರಾಜಾಜ್ಞೆಯಿಂ ಶೂಲದಿಂ ಚುಚ್ಚಿದರು ೨೧

ಮರ್ಮ ಸ್ಥಾನಗಳಲ್ಲಿ ಎಷ್ಟೇ ಚುಚ್ಚಿದರೂ
ಸುಮ್ಮನಿದ್ದನು ತರಳ ನಿನ್ನ ಧ್ಯಾನಿಸುತ
ಅಮಲೋರು ಗುಣನಿಧಿಯೇ ಅಖಿಲಾತ್ಮ ಭಗವಂತ
ಸಂಸ್ಮರಿಸುವರ ಕಾಯ್ದಿ ವಿಶ್ವವ್ಯಾಪಕ ನೀ ೨೨

ದಿಗ್ಗಜಗಳು ದಂತಶೂಕಗಳು ಅಭಿಚಾರ
ಪ್ರಯೋಗ ಮಾಯಾ ಇಂದ್ರಜಾಲದಿ ಸರ್ವ
ಅಗ್ನಿ ಬಲವಾಯು ಹಿಮ ಪರ್ವತಾ ಕ್ರಮಣದಿ
ಬಗೆಬಗೆ ಮಾರಕ ಉಪಾಯಗಳು ವ್ಯರ್ಥವಾಯ್ತು ೨೩

ದೈತ್ಯ ಹಿರಣ್ಯಕ ಇಂಥ ಎಷ್ಟೇ ಉಪಾಯದಿಂ
ಯತ್ನಿಸಿದರೂ ಮಗನ ಕೊಲ್ಲಲಾಗಲಿಲ್ಲ
ಬದಿಯಲಿ ಸದಾ ಇದ್ದು ಕಾಯ್ದಿ ನೀ ಪ್ರಹ್ಲಾದನ್ನ
ಮೃತ್ಯು ಮೃತ್ಯು ವಿಷ್ಣೋ ಸರ್ವಸ್ಥ ಭದ್ರ ೨೪

ಪುತ್ರನ್ನ ಕೊಲ್ಲುವ ಯತ್ನ ಸರ್ವವು ಸೋತು
ಸುತನು ಶಾಂತದಿ ಸುಖದಿ ಇರುವುದ ಕಂಡ

ಚಿಂತೆ ಭಯ ವ್ಯಾಕುಲ ಮನದಿಂದ ಮುಖವು
ಕಿಂಚಿತ್ ಮ್ಲಾನವು ಆಯಿತು ದೈತ್ಯರಾಜನಿಗೆ ೨೫

ಶಂಡಾಮರ್ಕರು ನೋಡಿ ಹಿರಣ್ಯಕಗೆ ಹೇಳಿದರು
ಚಂಡ ತ್ರಿಜಗತ್ ಏಕರಾಟ್ ಚಿಂತೆ ಪಡಬೇಡ
ಶೌಂಡರು ಭಾರ್ಗವರು ಬರುವರು ಅವರು ಈ
ಗಂಡಿನ ಬುದ್ಧಿಯ ತಿದ್ದುವರು ಎಂದು ೨೬

ಸರಿಯೆಂದು ದೈತ್ಯೇಶ ಮಗನ ಕಳುಹಿಸುತ
ಗುರುಪುತ್ರರ ನೋಡಿ ಪೇಳ್ದ ಪ್ರಹ್ಲಾದಗೆ
ಪರವಿದ್ಯಾ ಭೋದಿಸಲು ಬೇಡವು ತ್ರಿವರ್ಗಾ –
ದ್ಯಪರವಿದ್ಯಾ ನೀತಿ ಮಾತ್ರ ಕಲಿಸೆಂದ ೨೭

ಜಯ ಜಯತು ವೇಧಪಿತ ಶ್ರೀ ಪ್ರಸನ್ನ ಶ್ರೀನಿವಾಸ ನರಸಿಂಹ
ಜಯ ಗುಣಾರ್ಣವ ಭೂಮನ್ ಲಕ್ಷ್ಮೀಸಮೇತ
ಜಯ ಅಜನಪಿತ ನಮೋ ಶರ್ವಾದಿ ಸುರವಂದ್ಯ
ಜಯತು ಭಕ್ತೇಷ್ಟಪ್ರದ ಪ್ರಹ್ಲಾದ ಪಾಲ ೨೮

–ಇತಿ ಚತುರ್ಥ ಅಧ್ಯಾಯ ಸಂಪೂರ್ಣಂ –

ಪಂಚಮೋಧ್ಯಾಯ

ಸಹಪಾಠಿಗಳಿಗೆ ಸತ್ತತ್ವಬೋಧೆ

ಜಯತು ಜಯ ನರಸಿಂಹ ಅಮಿತಪೌರುಷ ವಿಷ್ಣೋ
ಜಯತು ಶ್ರೀಪತಿ ಅನಘ ಬ್ರಹ್ಮ ಶಿವವಂದ್ಯ
ಜಯ ಗುಣಗಣಾರ್ಣವನೇ ಪ್ರಹ್ಲಾದ ರಕ್ಷಕನೇ
ಜಯ ಸ್ವಜನತೇಷ್ಟ ಚಿಂತಾಮಣಿಯೇ ಶರಣು ಪ

ದೈತ್ಯ ಬಾಲಕರೊಡೆ ಕಲಿಯುವ ಪ್ರಹ್ಲಾದನು
ಒಂದು ದಿನ ಗುರುಗಳು ದೂರ ಪೋಗಿರಲು

ಬದಿಯಲಿ ಆ ಹುಡುಗರ ಕರೆದು ಸನ್ಮತಿ
ಬೋಧಿಸಿದ ಗೌರವದಿ ಕೇಳಿದರು ಅರ್ಭಕರು ೧

ಕೇಳಿ ತನ್ನ ಮಾತು ಮಂಗಳಕರವೆಂದು
ಹೇಳಿದನು ಪ್ರಹ್ಲಾದ ಆ ಅರ್ಭಕರಿಗೆ
ಇಳೆಯಲಿ ಜರಾಮರಣ ಅವಸ್ಥೆಗಳ ನೋಡಿದರೂ
ಬಳಲುವರು ಲೌಕಿಕ ವಿಷಯದಿ ಮಾನವರು ೨

ಗುರು ಉಕ್ತ ಕಾಮಾದಿಗಳು ಬಂಧಕವು
ಸಂಸ್ಕೃತಿ ಜನಕ ನಿಸ್ಸಾರ ಅಗ್ರಾಹ್ಯ
ತಾರಕವು ಐಹಿಕ ವಿಷಯ ಎಂಬುವರಿಗೂ
ಅವರ ಅನುಚರರಿಗೂ ಪರಗತಿ ಇಲ್ಲ ೩

ಹರಿ ಶ್ರೀಶ ಒಲಿವಂಥ ಭಾಗವತಧರ್ಮ
ಮರೆಯದೇ ಸುಬುದ್ಧಿಗಳು ಆಚರಿಸುವರು
ಅಧ್ರುವವು ಅದರೂ ದುರ್ಲಭ ಮಾನುಷಜನ್ಮ
ದೊರೆತಿರುವುದು ಸಾಧು ಸಾಧನಕ್ಕೇವೇ ೪

ಸರ್ವಭೂತಂಗಳ ಪ್ರೀಯ ಸುಹೃದನಾಗಿರುವ
ಸರ್ವಭೂತಾಂತರ ನಿಯಾಮಕನು ಶಾಸ್ತಾ
ಸರ್ವೇಶ್ವರ ಈ ವಿಷ್ಣು ಪಾದಾಬ್ಜದಲಿ
ಸರ್ವದಾ ಮನಸ್ಸನ್ನು ಇಟ್ಟಿರಲೇಬೇಕು ೫

ಐಂದ್ರಿಯಕ ಸುಖವೆಲ್ಲಾ ಲಭಿಸುವುದು ದೈವಾತ್
ಯತ್ನವಿಲ್ಲದೆ ದುಃಖ ಸಂಭವಿಸುವ ತೆರದಿ
ಅದಕಾಗಿ ಶ್ರಮಪಟ್ಟು ಕಾಲ ಕಳೆಯಲು ಬೇಡ
ಮುಕುಂದ ಚರಣಾಂಬುಜವೇ ಕ್ಷೇಮಪ್ರದವು ೬

ಶತವರ್ಷ ಆಯುಸ್ಸಲಿ ರಾತ್ರಿಯಲಿ ಅರ್ಧ
ಮುಗ್ಧತನ ಬಾಲ್ಯ ಕೌಮಾರದಿ ಇಪ್ಪತ್ತು
ಮುದಿತನ ಜರಾದಲ್ಲಿ ಹೋಗುವವು ಇಪ್ಪತ್ತು
ಮತ್ತುಳಿದದ್ದು ಗೃಹ ಮೋಹ ಕಾಮದಲಿ ೭

ದಾರಾ ಅಪತ್ಯ ಪಿತೃ ಭ್ರಾತೃ ಭೃತ್ಯಾದಿಗಳು
ಪರಿಪರಿವರ್ಗ ಕುಟುಂಬ ಸರ್ವರನು
ಪರಿಪೋಷಿಸೆ ತಾಪತ್ರಯದಲ್ಲಿ ಸಿಲುಕಿ
ತಿರುಗಾಡಲು ಬೇಡ ತ್ಯಜಿಪುದು ಬಂಧ ೮

ದುರಂತ ಮೋಹವು ಅತೃಪ್ತ ಕಾಮವು
ಪರವಿತ್ತ ಆಕಾಂಕ್ಷ ಅಜಿತೇಂದ್ರಿಯತ್ವ
ಈ ರೀತಿ ಮೂಢತನದಲಿ ವಿಷಯಲಂಪಟರು
ಪರಗತಿ ಹೊಂದದೆ ನರಕಯ್ದೈದುವರು ೯

ಪರಿತ್ಯಜಿಸಿ ವಿಷಯಗಳ ದೈತ್ಯರ ಸಂಗ
ನಾರಾಯಣ ಆದಿದೇವನ ಹೊಂದುವುದು
ದೊರೆಯುವುದು ಸುಭಕ್ತರ ಸಂಗದಿ ಮೋಕ್ಷವು
ಹರಿ ಒಲಿದು ಅಪವರ್ಗ ಈವ ಭಕ್ತರಿಗೆ ೧೦

ಬ್ರಹ್ಮವಾಯು ಸದಾಶಿವ ಗರುಡಶೇಷ
ಮಹೇಂದ್ರಮುಖ ಸುರವೃಂದ ಋಷಿ ಪಿತೃಗಂಧರ್ವ
ಮಹೀಪ ನರಮೃಗ ತೃಣ ಚರಾಚರ ಸರ್ವದೊಳು
ಮಹಾರ್ಹ ಸರ್ವಾಂತಸ್ಥ ಪರಮಾತ್ಮ ಇಹನು ೧೧

ಪ್ರಕೃತಿ ಅವ್ಯಕ್ತ ಮಹದಾದಿ ತತ್ವಂಗಳು
ಪ್ರಾಕೃತ ಗುಣ ಪಂಚಭೂತಾದಿಗಳಲಿ
ಅಕಳಂಕ ಸರ್ವಗನು ಇಹ ನಿಯಮಕನಾಗಿ
ಭಗವಂತ ಈಶ್ವರ ಅವ್ಯಯನು ಪರಮ ಆತ್ಮ ೧೨

ಸರ್ವಜೀವರು ಭಿನ್ನ ಪೃಥಕ್ ಪೃಥಕ್ ಸರ್ವ
ಜೀವರಾಂತರ್ಯಾಮಿಯು ಪ್ರತ್ಯಗಾತ್ಮ
ಸರ್ವತ್ರ ವ್ಯಾಪ್ತನು ಸತ್ತಾದಿ ಕರ್ತನು
ಕೇವಲಾನುಭವಾನಂದ ಸ್ವರೂಪ ೧೩

ಪರಮೇಶ್ವರ ವಿಷ್ಣು ಐಶ್ವರ್ಯ ಪೂರ್ಣ
ಪ್ರಕೃತ್ಯಾತಮಸಾವೃತತ್ವಾತೇ

ಹರೇರೈಶ್ವರ್ಯಂ ನಜ್ಞಾಯತೇ ಇವನು
ಸರ್ವರೊಳಿದ್ದು ಕಾಣದೆ ಚರಿಪ ಸ್ವಾಮಿ ೧೪

ಆದಿಪೂರುಷ ವಿಷ್ಣು ಪುರುಷಾರ್ಥದಾತನು
ಪ್ರೀತನಾದರೆ ಸರ್ವೇಷ್ಟ ಲಭಿಸುವುದು ಅವನ
ಪದ ಪದ್ಮಯುಗಳದಿ ಸದ್ಗತಿಯು ಸರ್ವದೊಳು
ಉತ್ಕೃಷ್ಟವೆಂದು ನಾ ತಿಳಿದಿಹೆನು ಎಂದ ೧೫

ವೈದಿಕ ಸದಾಗಮಿಕ ಅಮಲ ದುರ್ಲಭಜ್ಞಾನ
ಬದರೀಶ ನರಸಖ ನಾರಾಯಣನು
ವೃಂದಾರಕ ಮಾನ್ಯ ನಾರದರಿಗೆ ಅರುಪಿ
ಸಾಧುಭಕ್ತರ ದ್ವಾರ ಕ್ರಮಶಃ ಲಭಿಸಿದ್ದು ೧೬

ಅಧಿಕಾರಿಗಳು ಮಹೀಯಶರು ಪದರಜ ಧರಿಸಿ
ಭಕ್ತಿಯಲಿ ಸೇವಿಸೆ ದೊರೆಯುವುದು ಜ್ಞಾನ
ಶುದ್ಧಭಾಗವತಧರ್ಮ ಈ ಜ್ಞಾನ ವಿಜ್ಞಾನ
ನಾರದರು ಬೋಧಿಸಿದರು ತನಗೆ ಎಂದ ೧೭

ದೈತ್ಯ ಬಾಲಕರಿದನು ಕೇಳಿ ಪ್ರಹ್ಲಾದನ
ಇದು ಹೇಗೆ ತಮ್ಮೊಡ ಹುಟ್ಟಿ ಬೆಳೆದು ಕಲಿತ
ಅಂತಃಪುರಸ್ತನಿಗೆ ಮಹತ್ಸಂಗ ಸಾಧ್ಯವು
ಎಂದು ಸಂಶಯ ನಿವಾರಿಸೆ ಪ್ರಶ್ನಿಸಿದರು ೧೮

ನಾರದರ ಸ್ಮರಿಸುತ್ತ ತನ್ನ ಪೂರ್ವ
ಚರಿತೆ ಪೇಳಿದ ಪ್ರಹ್ಲಾದ ಬಾಲಕರ್ಗೆ
ಹಿರಣ್ಯಕಶಿಪು ಮಂದರಾಚಲದಿ ತಪಸು –
ಚರಿಸುತಿದ್ದನು ಸುತರು ಹುಟ್ಟಿಲಿಕೆ ಪೂರ್ವ ೧೯

ಆವಾಗ ವಿಭುದರು ದಂಡೆತ್ತಿ ದಾನವರ
ಸವರಬೇಕೆಂದು ಬಂದರು ಮಾರ್ಗದಲ್ಲಿ
ದಿವಿಜರು ರಾಜ ಶಿಬಿರವ ತಡೆಗಟ್ಟಿ
ದೇವೇಂದ್ರ ತನ್ನ ವಶದಲ್ಲಿ ಇಟ್ಟುಕೊಂಡ ೨೦

ಶಿಬಿರದೊಳು ರಾಣಿ ಪ್ರಹ್ಲಾದನ ಮಾತೆಯು
ಬಹು ಭೀತಿಯಿಂ ಕಿರುಚಿ ಕೂಗಿ ಅಳಲು
ಅಭಯ ನೀಡಿದರು ನಾರದರು ಎದ್ಯೃಚ್ಛೆಯಾ ಬಂದು
ಗೋಪಗೆ ಹೇಳಿದರು ಬಿಟ್ಟು ಬಿಡು ಎಂದು ೨೧

ಸುರಪ ಹೇಳಿದ ಇವಳ ಗರ್ಭದಲಿ ಇರುತಿಹ
ಸುರದ್ವಿಷನ ಮೇಲ್ ತನ್ನ ದೃಷ್ಟಿ ಎಂದು
ಸುರಮುನಿ ಪೇಳಿದರು ಈಕೆಯ ಜಠರದಲಿ
ಸುರಪಕ್ಷ ನಿಷ್ಕಲ್ವಿಷ ಇಹನು ಎಂದು ೨೨

ಮಹಾನ್ ಸಾಕ್ಷಾತ್ ಮಹಾಭಾಗವತ
ಇಹ ಈಕೆ ಹೊಟ್ಟೆಯಲಿ ಎಂದು ಹೇಳಿ
ಮಹೇಂದ್ರನು ನಾರದರ ಮಾತಿಗೆ ಬೆಲೆ ಇತ್ತು
ಮಹಾರಾಣಿಯ ಅವರಲ್ಲಿ ಬಿಟ್ಟು ಹೋದ ೨೩

ರಾಣಿಯ ಋಷಿ ತನ್ನ ಆಶ್ರಮಕೆ ಕರೆದ್ಹೋಗಿ
ತನ್ನಲಿ ಭರ್ತೃರಾಗಮನದವರಿಗೂ ಇರಲಿ
ಎನುತ ವಾತ್ಸಲ್ಯದಿ ಆಶ್ರಯ ಕೊಡಲು
ವನಿತೆ ನಿಂತಳು ಅಲ್ಲಿ ಭದ್ರದವು ಎಂದು ೨೪

ಮತ್ತೂ ವಿವರಿಸಿ ಪ್ರಹ್ಲಾದ ಪೇಳಿದ ತನ್ನ
ಮಾತೆಯ ಗರ್ಭದ ಕ್ಷೇಮ ಸುಖಪ್ರಸವ
ಒದಗಲು ನಾರದರ ಪ್ರತಿನಿತ್ಯ ಪರಮ
ಭಕ್ತಿಯಿಂದಲಿ ಸೇವಿಸಿದಳು ಎಡಬಿಡದೆ ೨೫

ಮಾತೃ ಗರ್ಭದೊಳಿದ್ದ ತನ್ನ ಉದ್ದೇಶ್ಯ
ಮಾತೆಗೂ ತನಗೂ ಆ ಕಾರುಣಿಕ ಋಷಿಯು
ಸದ್ಧರ್ಮ ಸತ್ತತ್ವಜ್ಞಾನ ಬೋಧಿಸಿದರು
ಮಾತೆ ಸ್ತ್ರೀ ಮರೆತಳು ಕಾಲದೀರ್ಘದಲಿ ೨೬

ಮಾತೆಗೆ ತಿರೋಧಾನ ಆದರೂ ತನಗೆ
ಆ ತಪೋಧನರ ಅನುಗ್ರಹ ಬಲದಿಂದ

ಅಧುನಾಪಿ ಸ್ಮೃತಿ ತಪ್ಪಲಿಲ್ಲವು ಎಂದು
ಪೇಳ್ದ ಪ್ರಹ್ಲಾದ ಆ ದೈತ್ಯಪುತ್ರರಿಗೆ ೨೭

ಮಮಕಾರ ಅಹಂಕಾರಗಳು ಮೋಹದಿ ಜನ್ಯ
ಮಮ ಅಹಂಭಾವಗಳ ತ್ಯಜಿಸಬೇಕು
ಅಮಲ ನಿಜ ಶಕ್ತ ಹರಿ ಈಶ್ವರಾಧೀನವು
ನಿಯಮ್ಯವ ಸರ್ವ ಜಡ ಚೇತನ ಭೂತಗಳು ೨೮

ಜೀವರ ಜಾಗರಣವು ಸುಷುಪ್ತಿಯ ಸ್ವಪ್ನವ
ಯಾವನು ಪ್ರವರ್ತಿಸುವವನು ಅವನೇಅಧ್ಯಕ್ಷ
ಅವನೇ ಮಹಾಪರಮ ಪೂರುಷ ಶ್ರೀನಾಥ
ಆ ವಿಷ್ಣುವನ್ನೇವೇ ಒಲಿಸಿಕೊಳ್ಳಬೇಕು ೨೯

ಗುರುಗಳಿಗೆ ಶುಶ್ರೂಷೆ ಭಕ್ತಿಯಿಂದಲಿ ಚರಿಸೆ
ಸರ್ವಲಬ್ಧಾರ್ಪಣೆ ಗುರುಗಳಿಗೆ ಮಾಡಿ
ಪರಮಸಾಧು ಭಕ್ತರ ಕೂಡಿ ಹರಿಯ ಆರಾಧಿಸೆ
ಹರಿ ಶ್ರೀಶನಲಿ ಸದ್ಗತಿಯು ಲಭಿಸುವುದು ೩೦

ಕಾಮಾದಿಗಳ ತೊರೆದು ಹರಿಯಲ್ಲಿ ರತನಾಗೆ
ಅಮಿತ ಐಶ್ವರ್ಯ ಸುಪೂರ್ಣ ಗುಣನಿಧಿಯು
ಬ್ರಹ್ಮಾದಿ ಸುಮನಸಾರ್ಚಿತಪಾದಯುಗಳನು
ರಮೇಶ ವಾಸುದೇವ ದಯದಿಂದ ಒಲಿವ ೩೧

ದೇಹವು ಜರಾಮರಣಕ್ಕೊಳಗಾದ್ದು ಅಸ್ಥಿರವು
ಮಹಾಮಹಿಮ ಆತ್ಮಾಂತರಾತ್ಮ ಶ್ರೀವಿಷ್ಣು
ದೇಹದೊಳು ತತ್ರಸ್ಥ ಜೀವರೋಳು ಮುಕ್ತರೊಳು
ಅಹರ್ನಿಶಿ ನಿಯಾಮಕನಾಗಿಹನು ಸ್ವಾಮಿ ೩೨

ಹೃದಯದಿ ಹೃದೀಶ್ವರ ಶ್ರೀಹರಿ ಜಗತ್ಪತಿ
ಅಧೋಕ್ಷಜನಲಿ ಭಕ್ತಿ ಮಾಡಲೇ ಬೇಕು
ಅರ್ಥ ಆಯುಷ್ಯಾದಿ ವಿಷಯ ಕ್ಷಣ ಭಂಗುರವು
ಸುತಕಳತ್ರವು ಗೃಹಾದಿಗಳು ಹಾಗೇವೇ ೩೩

ದೇವ ದಾನವ ಗಂಧರ್ವ ನರ ಯಕ್ಷಾದಿ
ಸರ್ವರು ಮುಕುಂದನ ಪಾದ ಭಜಿಸಿದರೆ
ಸರ್ವ ಪ್ರಕಾರ ತನ್ನಂತೆ ರಕ್ಷಿಸಲ್ಪಟ್ಟು
ಸ್ವಸ್ಥವಾಗಿರುವರು ಎಂದನು ಪ್ರಹ್ಲಾದ ೩೪

ಶೌಚ ವ್ರತ ತಪ ಯಜ್ಞ ದಾನಾದಿ ಕರ್ಮಗಳು
ಸ್ವಚ್ಛ ಭಕುತಿಯಿಂದ ಹರಿ ಪ್ರೀತಿಗಾಗಿ
ಆಚರಿಸಿ ಅರ್ಪಿಸಬೇಕು ಅನ್ಯಥಾ ಅವು
ಮೆಚ್ಚಲಾಗದ ವಿಡಂಬನವೇ ಆಗುವವು ೩೫

ಅಣು ರೇಣು ತೃಣ ತರು ಜಲಕು ಖೇಚರುಗಳು
ಮನುಷ್ಯ ಧಾನವ ಯಕ್ಷ ಸ್ತ್ರೀಪುರುಷ ಸರ್ವ
ಪ್ರಾಣಿ ಜಡಚೇತನ ಸುರಾಸುರ ಸರ್ವತ್ರ
ಅನಘ ಹರಿ ಈಶ್ವರನು ಇರುತಿಹ ಸ್ವತಂತ್ರ ೩೬

ಅಜ ಅಮಿತ ಸಚ್ಛಕ್ತ ಸರ್ವಸ್ಥ ಸರ್ವೇಶ
ಭಜಕರಕ್ಷಕ ಇಷ್ಟಪ್ರದ ಮೋಕ್ಷದಾತ
ತ್ರಿಜಗದೀಶ್ವರ ತ್ರಿಗುಣಾತೀತ ಸರ್ವೋತ್ತಮ
ಅಧೋಕ್ಷಜ ಹರಿಯಲಿ ಭಕ್ತಿ ಮಾಡೆಂದ ೩೭

ಜಯ ಜಯತು ವೇಧಪಿತ ಶ್ರೀ ಪ್ರಸನ್ನ ಶ್ರೀನಿವಾಸ ನರಸಿಂಹ
ಜಯ ಗುಣಾರ್ಣವ ಭೂಮನ್ ಲಕ್ಷ್ಮೀಸಮೇತ
ಜಯ ಅಜನಪಿತ ನಮೋ ಶರ್ವಾದಿ ಸುರವಂದ್ಯ
ಜಯತು ಭಕ್ತೇಷ್ಟಪ್ರದ ಪ್ರಹ್ಲಾದ ಪಾಲ ೩೮

–ಇತಿ ಪಂಚಮ ಅಧ್ಯಾಯ ಸಂಪೂರ್ಣಂ –

ಷಷ್ಟಾಧ್ಯಾಯ

ಶ್ರೀ ನರಸಿಂಹ ಪ್ರಾದುರ್ಭಾವಸಾರ

ಜಯತು ಜಯ ನರಸಿಂಹ ಅಮಿತಪೌರುಷ ವಿಷ್ಣೋ
ಜಯತು ಶ್ರೀಪತಿ ಅನಘ ಬ್ರಹ್ಮ ಶಿವವಂದ್ಯ
ಜಯ ಗುಣಗಣಾರ್ಣವನೇ ಪ್ರಹ್ಲಾದ ರಕ್ಷಕನೇ
ಜಯ ಸ್ವಜನತೇಷ್ಟ ಚಿಂತಾಮಣಿಯೇ ಶರಣು ಪ

ಕೇಶವನೇ ನಿನಗೆ ಪ್ರಿಯತರ ಪರಮಭಾಗವತ
ವತ್ಸ ಪ್ರಹ್ಲಾದ ವಿಜ್ಞಾನ ವರಶ್ರೇಷ್ಠ
ಕುಶಲ ಹಿತತಮವಾದ ಉಪದೇಶ ಮಾಡಲು
ಅಸುರ ಸುತರುತ್ಸಹದಿ ರತರಾದರು ಆದರದಲಿ ೧

ಪ್ರಹ್ಲಾದ ಬೋಧಿಸಿದ್ದಲ್ಲಿ ಅತಿವಿಶ್ವಾಸ
ಬಹು ಉದಾಸೀನವು ಗುರುಶಿಕ್ಷೆಯಲ್ಲಿ
ಮಹಾಭೀತಿಯಲಿ ಶುಕ್ರ ಪುತ್ರರು ತಿಳಿಸಿದರು
ಅಹಿತ ಈ ಸ್ಥಿತಿಯನ್ನು ದೈತ್ಯರಾಜನಿಗೆ ೨

ಅಪ್ರಿಯ ಸುದ್ದಿಯ ಹಿರಣ್ಯಕಶಿಪುವು ಕೇಳಿ
ಕೋಪಾವೇಶದಿ ಸಹನವಿಲ್ಲದೆ ಮೈನಡುಗಿ
ಅಪತ್ಯನ್ನ ತಾಕೊಲ್ಲೆ ಮನದಿ ನಿಶ್ಚಯ ಮಾಡಿ
ಅಪವ್ರತ ಬಯ್ದು ಮಾತಾಡಿದ ಪ್ರಹ್ಲಾದಗೆ ೩

ಕ್ರೂರ ಅಪಭಾಷಣವಾಡಿ ದೈತ್ಯೇಶ್ವರನು
ಮೂರು ಲೋಕಂಗಳು ಮೂರ್ಲೋಕಾಧಿಪರು
ಯಾರು ಕೋಪದ ಭಯದಿ ನಡುಗುವರೋ ಅಂಥಾ
ಪರಸಮರಿಲ್ಲದ ಮಹಾಬಲಿ ತಾನೆಂದ ೪

ಅಹಂಕಾರ ಮಮಕಾರ ಹೀಗೆ ಪ್ರಕಟಿಸಿ ಕುಪಿತ
ಆ ಹಿರಣ್ಯಕ ಕೇಳ್ದ ಸುವಿನೀತ ಮಗನ್ನ

ಮಹಾಪರಾಕ್ರಮ ಎನ್ನಲಿ ಭೀತಿ ನಿನಗಿಲ್ಲ
ಇದು ಹೇಗೆ ಹೇ ಮೂಢ ಯಾರ ಬಲ ನಿನಗೆ ೫

ರಾಜಗೆ ಸುತ ಹೇಳ್ದ ನನಗೆ ಮಾತ್ರವು ಅಲ್ಲ
ಮೂರ್ಜಗದಿ ತರತಮದಿ ಸರ್ವರಿಗೂ ನಿನಗೂ ಬಲ
ಅಜೇಶ ಮುಖವಂದಿತನು ಬ್ರಹ್ಮಾದಿ ಸರ್ವ
ಈ ಜಗತ್ ಯಾರ ವಶವೋ ಅವನೇ ಎನಗೂ ನಿನಗೂ ಬಲವು ೬

ಅವನೇವೇ ಕೇಶವನು ಮಹಾವಿಷ್ಣು ಈಶ್ವರನು
ಸರ್ವತೋಮುಖ ಕಾಲನಾಮ ಕಾಲಸ್ಥ
ಸರ್ವಕಾಲಾತೀತ ಕಾಲ ನಿಯಾಮಕನು
ಸರ್ವೋರು ಸಚ್ಛಕ್ತ ಮಹಾಬಲ ಮಹೋಜ ೭

ಸ್ವೇಚ್ಛಾ ಪ್ರವೃತ್ತನು ನಿಮಿತ್ತ ಕಾರಣನಾಗಿ
ಇಚ್ಛಾ ಮಾತ್ರದಿ ಜಗತ್ ಸೃಷ್ಟಿ ಮಾಡುವನು
ಅಚ್ಯುತ ಅವಿಕ್ರಯ ಪ್ರಕೃತೀಶ ತ್ರಿಗುಣೇಶ
ತ್ರಿಜಗತ್‌ಪಾಲ ಭೀಷಣ ಮೃತ್ಯು ಮೃತ್ಯು ೮

ಸರ್ವಸ್ಥ ತನ್ನಾಮ ತದ್ರೂಪ ತದ್ಭಿನ್ನ
ಸರ್ವನಿಜಬಲಪೂರ್ಣ ಸಮಸರ್ವದೊಳಗು
ಸರ್ವೇಶನಾಗಿ ಜ್ವಲಿಸುವ ಈ ಉರುಕ್ರಮನ
ಸೇವಿಸು ಶರಣಾಗಿ ದ್ವೇಷವ ತ್ಯಜಿಸು ೯

ಪರಮೇಶ್ವರ ಹರಿ ಸರ್ವದೊಳು ಇಹ ಪೂರ್ಣ
ನಿರವಧಿಕ ಐಶ್ವರ್ಯರೂಪ ಎಂದರಿತು
ಇಂದ್ರಿಯ ನಿಯಾಮಕ ಈ ಹೃಷಿಕೇಶನಲಿ ಮನ
ಸದೃಢದಿ ಇಡು ನೀನು ಜಿತೇಂದ್ರಿಯನು ಆಗಿ ೧೦

ಅವಿಕ್ಲವ ಮನದಿಂದ ಪ್ರಹ್ಲಾದ ತನಗೆ ಬಲ
ಶ್ರೀವರನೇ ಎಂದು ಹೇಳಿದ್ದು ಕೇಳಿ ದೈತ್ಯ
ತೀವ್ರ ಕಿರುಚಿದ ಸುತನ ನೋಡಿ ನೀನು
ಸಾಯುವುದಕ್ಕೇವೇ ಈ ಮಾತಾಡಿದಿ ಎಂದ ೧೧

ಎಲ್ಲಿರುವ ಎನಗನ್ಯ ಜಗದೀಶ್ವರ ಯಾರು
ಎಲ್ಲೆಲ್ಲೂ ಇರುವನು ಆದೊಡೆ ಈ ಸ್ತಂಭ
ದಲ್ಲಿ ಕಾಣೆ ನಿನ್ನ ಶಿರಚ್ಛೇದ ಮಾಡುವೆ
ಕಾಯಲಿ ಆ ಹರಿ ನಿನ್ನಯ ಸ್ವಾಮಿ ೧೨

ಮಹಾಭಾಗವತ ಪ್ರಹ್ಲಾದನ್ನ ನೋಡಿ
ಮಹಾಅಸುರ ಈ ರೀತಿ ದುರ್ವಚನವಾಡಿ
ಸಿಂಹಾಸನದಿಂದ ಧುಮುಕಿ ಖಡ್ಗವ ಹಿಡಿದು
ಮಹಾಬಲದಿ ಮುಷ್ಟಿಯಿಂ ಸ್ತಂಭವ ಹೊಡೆದ ೧೩

ಘಟ್ಟೆಂತ ಮುಷ್ಟಿ ಪೆಟ್ಟಿಂದ ತಾಡಿತ ಆ
ಗಟ್ಟಿಕಂಭವು ಒಡೆದು ಛಟ್ ಛಟಾ ಛಟಿ ಛಟ್
ಅಂಡಕಟಾಹವು ಸ್ಫೋಟನವು ಆದಂತೆ
ತ್ರುಟಿ ಬಿಡದೆ ಪಟ್ ಪಟಾ ಪಟು ಧ್ವನಿ ಬಂತು ೧೪

ಮಹಾ ಉಲ್ಕ ಪತನವೋ ಸಿಡಿಲೋ ಎಂಬುವ ತರದಿ
ಮಹಾದ್ಭುತ ಆ ಧ್ವನಿ ಬ್ರಹ್ಮಲೋಕ ವ್ಯಾಪಿಸಿತು
ಮಹಾ ದೈತ್ಯರಾಜನು ಬೆರಗಾಗಿ ಕುಳಿತನು
ಬಹುಭೀತ ಸ್ವಜನಸಹ ಏನೂ ತೋಚದಲೆ ೧೫

ಭೂತಸರ್ವದಿ ವ್ಯಾಪ್ತ ಸರ್ವಾಂತರ್ಯಾಮಿ ನೀ
ಸಾಧು ಭೃತ್ಯರ ಮಾತು ಸತ್ಯ ಮಾಡಲಿಕೆ
ಆ ಸ್ತಂಭ ಮಧ್ಯದಿಂ ಮಹಾದ್ಭುತ ರೂಪವ
ಉದ್ವಹಿಸಿ ತೋರ್ದಿ ನ ಮೃಗಂ ನ ಮಾನುಷಂ ೧೬

ಸತ್ಯ ಮಾಡಲು ಭಕ್ತ ಪ್ರಹ್ಲಾದನ ಮಾತು
ಸತ್ಯಮಾಡಲು ಬ್ರಹ್ಮವರ ಕೊಟ್ಟ ಮಾತು
ಸತ್ಯಮಾಡಲು ನಾರದಾದಿಗಳ ತತ್ವಮಾತು
ಸತ್ಯಸರ್ವಸ್ಥ ಹರಿ ಈಶ ನೀ ತೋರಿದಿ ೧೭

ಪೃಥ್ವಿಜಲ ಅಗ್ನ್ಯಂತರಿಕ್ಷ ವಾಯು ಸ್ವರ್ಗ
ಆದಿತ್ಯ ದಿಕ್‌ಚಂದ್ರ ನಕ್ಷತ್ರ ಆಕಾಶ

ಅಸಿತ ಕತ್ತಲೆ ಬೆಳಕು ನಿಖಿಳ ಭೂತ ಪ್ರಾಣ
ಶ್ರೋತ್ರ ಮನತ್ವಗ್ರೇತಸಾ ವಾಕ್ಚಕ್ಷುರ್ವ್ಯಾಪ್ತ ೧೮

ಈ ಸ್ತಂಭ ಉದ್ಭೂತರೂಪ ನೋಡಿ ದೈತ್ಯ
ಇದು ಏನು ಮೃಗವಲ್ಲ ನರನೂ ಅಲ್ಲ
ಅತಿ ವಿಚಿತ್ರವು ನರಮೃಗೇಂದ್ರ ರೂಪವು ಇದು
ಎಂದು ವಿಸ್ಮಯ ಭೀತಿಯಲಿ ಸ್ತಬ್ಧನಾದ ೧೯

ಸ್ತಂಭದಿಂದಲಿ ಬಂದಿ ನಮೋ ಅದ್ಭುತ ರೂಪ
ಸುಭ್ರಾಜ ಅಮಿತ ಮುಖಕಾಂತಿಯಿಂದ
ಅಬ್ಬಬ್ಬ ಏನೆಂಬೆ ದುರ್ಜನ ಭಯಂಕರ
ಸುಸ್ಫುಟಿತ ಹಾಟಕೋಪಮ ಚಂಡನೇತ್ರ ೨೦

ಸ್ಫುರತ್ ಸಟಾ ಕೇಸರ ಜೃಂಭಿತಾನನನವು
ಕ್ರೂರಾದ ಚಂಚಲ ನಾಲಿಗೆ ಹಲ್ಲು
ಕೋರೆ ಕರಾಳವು ಸ್ತಬ್ಧೋರ್ಧ್ವ ಕರ್ಣವು
ಗಿರಿ ಗುಹಾ ಅಂದದಿ ನಾಸಿಕ ರಂಧ್ರ ೨೧

ಭೀತಿ ಪಡಿಸುವ ಹಳ್ಳ ಹನು ಧೀರ್ಘಕಾಯವು
ಉತ್ತಮ ಲಕ್ಷಣ ಗ್ರೀವ ಎದೆ ಅಗಲ
ಮಧ್ಯಾಂಗ ಸಣ್ಣ ಶಶಿಕಿರಣ ನಿಭರೋಮ
ಅತಿಬಲ ಬಾಹುಗಳು ನಖ ಆಯುಧ ೨೨

ಚಕ್ರ ಶಂಖ ಕೌಮೋದಕೀ ಖೇಟಕವು
ಶಾರ್ಙ್ಗ ಧನುರ್ಬಾಣ ಅಸಿ ಅಂಕುಶ ಶೂಲ
ಬಗೆ ಬಗೆ ನಿಜ ಇತರ ಆಯುಧ ಹಿಡಿದಿ
ಝಗ ಝಗಿಪ ತೇಜೋಮಯ ನರಸಿಂಹ ೨೩

ದೈತ್ಯ ದಾನವರನ್ನ ಹೊಡೆದಟ್ಟಿ ಬೇಗ
ದೈತ್ಯೇಶ ಹಿರಣ್ಯಕನ ಬಳಿ ನೀನು ಪೋಗೆ
ಮಾಯಾವಿ ಹರಿಯೇವೇ ತನ್ನ ವಧ ಮಾಡಲು
ಪ್ರಾಯಃ ಬಂದಿರುವಿ ಎಂದು ಅವ ನೆನೆದ ೨೪

ಬಂದಿರುವದು ಹರಿಯೇ ಆದರೂ ಏನು ಭಯ
ಎಂದು ತಾನೇ ಹೇಳಿಕೊಂಡು ಗದೆ ಹಿಡಿದು
ಆ ದೈತ್ಯ ಕುಂಜರನು ನರಸಿಂಹ ನಿನ್ನ ಸಹ
ಯುದ್ಧಕ್ಕೆ ಹತ್ತಿದನು ದ್ವೇಷ ಮೌಢ್ಯದಲಿ ೨೫

ಪತಂಗ ಹುಳು ಅಗ್ನಿಯಲಿ ಬೀಳ್ವ ತೆರದಿ
ದೈತ್ಯನು ನಿನ್ನ ಮೇಲೆ ಹಾರಿ ನಿನ್ನ
ಉತ್ತಮ ಓಜಸ್ಸಲ್ಲಿ ತನ್ನ ವರ್ಚಸ್ಸು ಕುಂದೇ
ಗದೆಯಿಂದ ಹೊಡೆದ ಅಚ್ಚುತನೇ ನಿನ್ನ ೨೬

ಗರುಡನು ಅಹಿಯನ್ನ ಹಿಡಕೊಂಬ ರೀತಿಯಲ್ಲಿ
ಉರುಪರಾಕ್ರಮ ನೀನು ಅಸುರನ್ನ ಹಿಡಿದಿ
ಸುರದ್ವಿಷನು ಸುಳಿದು ತಪ್ಪಲು ಯತ್ನಿಸಲು
ಹರಿ ನೀನು ಕ್ರೀಡಾರ್ಥ ಹಿಡಿಯನ್ನ ಬಿಟ್ಟಿ ೨೭

ಲೀಲಾ ವಿನೋದದಲಿ ಹಿಡಿ ನೀ ಅಳ್ಳಕ ಮಾಡಿ
ಮೆಲ್ಲಗೆ ಆ ದುರುಳ ಜರುಗೆ ಒದಗಿಸಲು
ಇಲ್ಲ ನಿನಗೆ ಬಲ ಎಂದು ನೆನೆದು ಮೂಢ
ಢಾಳು ಕತ್ತಿಯಿಂದ ಪುನರ್ಯುದ್ಧಗೈದ ೨೮

ಪಟ್ಟೆ ಖಡ್ಗವ ಪಿಡಿದು ಬರಲು
ಪಟು ಪಟೀಯಸ ಅಟ್ಟಹಾಸದಲಿ ನೀನು
ಪಟಿಷ್ಟ ಗರ್ಜನೆ ಮಾಡಿ ದುಷ್ಟನು ಭಯಪಟ್ಟು
ಕಂಗೆಟ್ಟು ಹೋಗಲು ಗಟ್ಟಿಯಾಗಿ ಅವನ ಹಿಡಕೊಂಡಿ ನೀ ೨೯

ಗರುಡನು ಮಹಾಗರ ಸರೀಸೃಪವ ಹಿಡಿವಂತೆ
ಐಂದ್ರ ವಜ್ರಾಧಿಕ ಬಲಿ ಆ ಹಿರಣ್ಯಕನ
ಉರವ ನಿನ್ನ ನಖದಿಂದ ಲೀಲೆಯಿಂ ಸೀಳಿದಿ
ಉಗ್ರವೀರನೇ ಮೃತ್ಯು ಮೃತ್ಯು ನರಸಿಂಹ ೩೦

ಸುರಂಭ ಭೀತಿಕರ ದುಷ್ಪ್ರೇಕ್ಷ ನೇತ್ರಗಳು
ತೆರದ ವಕ್ತ್ರವು ತುಟಿ ಕೊನೆಯ ಮೇಲ್ ಜಿಹ್ವೆ

ಅರುಣ ಹನಿಯಲಿ ತೋಯ್ದು ಕೇಸರಾನನವು
ಆಂತ್ರಮಾಲಾಧರನು ಉಗ್ರಭೀಷಣನು ೩೧

ಸಿಂಹ ಹಸ್ತಿಯ ಮಸ್ತಕ ಭೇದಿಸುವ ತೆರದಿ
ನರಸಿಂಹ ನೀನು ಆ ದೈತ್ಯನ್ನ ತರಿದು
ಆಂತ್ರಕರುಳ ಬಗೆದು ಕೊರಳಲಿ ಧರಿಸಿದಿ
ಸುರಶತ್ರು ಹರ ಮಹಾಬಲ ಭಕ್ತ ಭದ್ರ ೩೨

ನಖಾಗ್ರದಿಂದ ಹತ ಹಿರಣ್ಯಕನ ದೇಹವ
ನೂಕಿ ಅವನನುಚರರು ಸಾಯುಧ ಸಹಸ್ರ
ಸಂಖ್ಯಾಕ ದುರುಳರ ಹಿಡಿದು ಸೆಳೆದು ನಿನ್ನ
ಉಗುರಿಂದ ಸೀಳಿ ಕೊಂದು ಹಾಕಿದೆಯೋ ವೀರ ೩೩

ಹೇ ವಿಷ್ಣೋ ನಿನ್ ರೂಪ ಪೌರುಷ ಮಹಿಮೆಗಳ
ನಾ ವರ್ಣಿಸಲರಿಯೆ ಬ್ರಹ್ಮಾದಿ ವಂದ್ಯ
ಭುವಿ ದಿಕ್ಕು ಸುರಮಾನ ಅರ್ಕಾದಿ ಖಗಮೇಘ
ಪರ್ವ ದಿಗ್ಗಜ ಸಿಂಧು ಎಲ್ಲ ನಡುಗಿದವು ೩೪

ನರಸಿಂಹ ನಿನ್ನಯ ಸಟಾದಿಂದ ಅಲ್ಲಾಡಿ
ನೀರು ಮೇಘಂಗಳು ಪತನವಾಗಿ
ಹಾರುವ ವಿಮಾನಗಳು ಕೇಸರದಿ ಸಿಲುಕಿದವು
ಉಗ್ರದೃಷ್ಟಿಯು ಅರ್ಕಾದಿಗಳ ಸೋಲಿಸಿತು ೩೫

ಹೆಜ್ಜೆಯಿಂ ಭುವಿನುಡುಗಿ ಶ್ವಾಸದಿಂ ಕಡಲು ಕಲಕಿ
ಹೇ ಜನಾರ್ಧನ ನಿನ್ನ ವೇಗ ರಭಸದಲಿ
ವಜ್ರ ತಾಡಿತವೋಲ್ ಶೈಲಗಳು ಬಿದ್ದವು
ತೇಜಸ್ಸಲಿ ನಭದಿಕ್ಕು ಕಾಂತಿಮರೆಯಾಯ್ತು ೩೬

ಈ ರೀತಿಯಲಿ ಸರ್ವ ಚರಾಚರ ಪ್ರಪಂಚವು
ಉಗ್ರವೀರನೇ ವಿಷ್ಣೋ ನಿನ್ ಉಜ್ವಲಿಪ ತೇಜಸ್ಸು
ಉರು ಪರಾಕ್ರಮದಿ ನಡುಗಿ ಪುರರು ವಿನಯದಿ ನಿಲ್ಲೇ
ನರಸಿಂಹ ನೀ ಸಿಂಹಾಸನದಲ್ಲಿ ಕುಳಿತಿ ೩೭

ಹಿರಣ್ಯಕಶಿಪು ರಾಜ ಹಿಂದೆ ಕುಳಿತಿದ್ದ ಆ
ವರ ಸಿಂಹಾಸನದಲಿ ನೀ ಕುಳಿತು ಅದನು
ಪವಿತ್ರ ಮಾಡಿದಿ ಭಕ್ತ ಭಯ ನಿವಾರಣ ಭದ್ರ
ಪರ ಇಹದಿ ಸೌಭಾಗ್ಯಪ್ರದ ಶ್ರೀ ನೃಸಿಂಹ ೩೮

ಹಿರಣ್ಯಕಶಿಪು ರೂಪ ತ್ರೈಲೋಕ್ಯ ಪೀಡೆಯ
ಹರಿ ನೀ ನಿವಾರಿಸಿದ್ದಲ್ಲಿ ಬಹು ತುಷ್ಟ
ಸುರ ಸುರಸ್ತ್ರೀ ಗಾಯಕ ನರ್ತಕರೆಲ್ಲ
ಅಂಬರದಿ ತುಂಬಿ ಪುಷ್ಪವೃಷ್ಟಿ ಮಾಡಿದರು ೩೯

ಪದುಮಸಂಭವ ರುದ್ರ ಸಂಕ್ರಂದ ಸುರವೃಂದ
ಸುತಪೋನಿಧಿ ಮಹರ್ಷಿಗಳು ಪಿತೃಗಳು
ಸಿದ್ಧ ವಿದ್ಯಾಧರ ಮಹೋರಗ ಮನುಪ್ರಜಾ –
ಪತಿಗಳು ಗಂಧರ್ವ ಅಪ್ಸರ ಚಾರಣರು ೪೦

ಯಕ್ಷ ಕಿಂಪುರುಷ ವೇತಾಳ ಕಿನ್ನರರು
ವಿಷ್ಣು ಪಾರ್ಷದ ಸುನಂದ ಕುಮುದಾದಿಗಳು
ಅಕ್ಷರ ಕ್ಷರೋತ್ತಮ ಜಯ ನೃಸಿಂಹನೇ ನಿನ್ನ
ಸಂತೋಷದಲಿ ಕರಮುಗಿದು ಸ್ತುತಿಸಿದರು ೪೧

ವನಜಭವ ಪೇಳಿದನು ನಮಿಸುವೆ ಅನಂತನಿಗೆ
ಗುಣಕಾಲದೇಶ ಅಪರಿಚ್ಛಿನ್ನ ವಿಷ್ಣು
ದುರಂತ ಶಕ್ತಗೆ ಮಹಾಮಹಿಮ ವೀರ್ಯನಿಗೆ
ಅನಘ ಸುಕ್ರೀಡಾ ಕ್ರಿಯಾ ವಿಶೇಷನಿಗೆ ೪೨

ಅಮಿತ ಆನಂದಮಯ ಹರಿ ಲೀಲೆಯಿಂದಲಿ
ನಿಮಿತ್ತ ಕಾರಣನಾಗಿ ಜಗತ್‌ಸೃಷ್ಟಿ ಮಾಳ್ಪ
ಕ್ಷೇಮ ಕ್ಷಾಮ ಸಮೀಹನ ಗುಣತ್ರಯ ನಿಯಾಮಕನು
ಭೂಮಾದಿ ಗುಣಪೂರ್ಣ ಸ್ವಾಮಿ ಅವ್ಯಯನು ೪೩

ಸರ್ವ ಜಗತ್ ಸೃಷ್ಟಿ ಸ್ಥಿತಿ ಸಂಹಾರ ನಿಯಮನ
ಅವೃತಿ ಸುಜ್ಞಾನ ಬಂಧ ಮೋಕ್ಷಕೆ

ಸರ್ವೇಶನು ಶ್ರೀಧರನು ಮುಖ್ಯಕರ್ತಗೆ ನಮೋ
ಈ ವಿಧದಿ ಸ್ತುತಿಸಿದ ಶತಾನಂದ ಶಂಭೊ ೪೪

ವಿಷ್ಣುಭಕ್ತಾಗ್ರಣಿ ರುದ್ರದೇವನು ಮಾಳ್ಪ
ವಿಷ್ಣುಭಕ್ತರಲಿ ದಯಾ ವರ್ಣಿಸಲಳವೇ
ಇಷ್ಟಪ್ರದ ಪಾಲಕನು ಕಷ್ಟಉಪಟಳಹರನು
ವೃಷಾಂಕ ಪಾರ್ವತೀರಮಣ ಸ್ತುತಿಸಿದ ಹರಿಯ ೪೫

ಯುಗಾಂತ ಸಮಯದಲಿ ರೋಷವ ಪ್ರಕಟಿಸಿ
ಜಗತ್ ಸಂಹಾರವ ಮಾಳ್ಪಿ ನೀ ಅಸುರನ
ಬಗಿದು ಹತ ಮಾಡಿದ್ದು ಬಹು ಚಿಕ್ಕ ವಿಷಯ ಈ
ಭಕ್ತ ತತ್ಸುತನನ್ನ ಪಾಲಿಸು ಭಕ್ತವತ್ಸಲ ೪೬

ಸದಾಶಿವ ಹೀಗೆಂದು ಹೇಳಿಬಿನ್ನಹ ಮಾಡೆ
ಇಂದ್ರನು ಕೃತಜ್ಞತೆ ನಮ್ರಭಾವದಲಿ
ಹೃತ್ಪದ್ಮ ಸದ್ಮಸ್ಥ ಅಧೋಕ್ಷಜ ನೃಸಿಂಹ
ಮೋದಪ್ರದ ಏಕಾತ್ಮ ನಿನ್ನ ಭಜಿಸಿದನು ೪೭

ಶರಣ್ಯಪಾಲನೇ ಚತುರ್ಮುಖ ನಿಯಂತ್ರವೇ ನಿನ್ನ
ಸೂರಿ ಋಷಿಗಳು ಹೊಗಳೆ ಪಿತೃಗಳು ನಮಿಸಿ
ನರಹರೇ ಅಖಿಳ ಧರ್ಮಪಾಲಕನೆ ನಿನ್ನ
ಪರಾಕ್ರಮ ಕೊಂಡಾಡಿದರು ಧನ್ಯಮನದಿಂದ ೪೮

ಯಜ್ಞ ಹವಿರ್ಹರಣವು ತಪೋ ವಿಘ್ನ ಶ್ರಾಧ್ಧದಲಿ
ಯಜಿಸಿ ಅರ್ಪಿತ ಅನ್ನ ಉದಕ ಅಪಹಾರ
ನೀಚಮತಿ ದುಷ್ಟ ಹಿರಣ್ಯಕ ಮಾಡಿದನೆಂದು
ಶಚೀಶನು ಋಷಿಗಳು ಪಿತೃಗಳು ಹೇಳಿದರು ೪೯

ಸಿದ್ಧರು ಹೇಳಿದರು ತಮ್ಮ ಯೋಗ ಸಿದ್ಧಿಯನು
ದೈತ್ಯ ತನ್ನಯ ಬಲದಿ ಸೆಳೆಕೊಂಡ ಅವನ
ಎದೆಯ ಸೀಳಿ ತಮ್ಮನ್ನು ಉದ್ಧರಿಸಿದಿ ನೀನು
ಎಂದು ನಮಿಸಿದರು ನರಸಿಂಹ ನಿನಗೆ ೫೦

ಶಾಂತನಾಗು ನಿನ್ನ ಸ್ಮರಿಪ ಸುಜನರ ಬದಿ
ಇದ್ದು ಭಯಪರಿಹರಿಪಿ ನರಸಿಂಹ ಎಂದ ೨೦

ಭೀಕರಾನನ ಜಿಹ್ವೆ ಅರ್ಕನೇತ್ರ ದಂಷ್ಟ್ರ
ರಕ್ತ ಕ್ಷತ ಕೇಶರ ಆಂತ್ರಮಾಲ
ದಿಕ್ ನಭ ನಡುಗುವ ಗರ್ಜನೆ ಅರಿಹರ
ನಖ ಉಗ್ರ ನೃಸಿಂಹ ಅಜಿತ ಅಭಯದನು ೨೧

ಕೃಪಣ ವತ್ಸಲ ನೀನು ಎಂದು ಪ್ರಹ್ಲಾದ
ತಾ ಭೀತಿಗೊಳ್ಳಲಿಲ್ಲ ನಿನ್ನೌಗ್ರ್ಯ ನೋಡಿ
ತನ್ನ ಭಯ ಕರ್ಮ ಸಂಸ್ಸೃತಿ ಚಕ್ರ ಎನ್ನುತ
ಅಪವರ್ಗತ್ವ ಉತ್ಪಾದಕೆಂದು ಕರೆಯುವಿ ಎಂದ ೨೨

ಸಕಲ ಯೋಗಿಗಳಲ್ಲಿ ಬಹು ನೋಹಿ ನೋತು ಆ
ದುಃಖ ಔಷಧವೆಂದು ದುಃಖದಲ್ಲೇ ಮುಳುಗಿ
ತಾ ತಿರುಗಿ ತಿರುಗುತಿಹ ಸಂಸಾರದಲ್ಲಿ ತನಗೆ
ನಿನ್ನ ದಾಸ್ಯ ಯೋಗ ಕೊಡು ಭೂಮ ನೀ ಎಂದ ೨೩

ಹರಿದಾಸ್ಯ ಯೋಗ ದಯದಿಂದ ನೀಕೋಡಲು ತಾನು
ಹರಿ ನಿನ್ನ ಪದಯುಗ ಅಮಲರತರ ಕೂಡಿ
ವಿರಿಂಚಾದಿ ಈಡ್ಯ ನೃಸಿಂಹ ನಿನ್ನ ಲೀಲೆ ಕಥೆ
ಬರೆದೋದಿ ಪ್ರಕೃತಿ ಗುಣಬಂಧ ಕಳೆವೆ ಎಂದ ೨೪

ಸರ್ವ ಜಗಚ್ಚೇಷ್ಟಕನು ಪಾಲಕ ನಿಯಾಮಕನು
ಸರ್ವಗ ನೃಸಿಂಹ ನೀನೇವೇ ಎಲ್ಲೆಲ್ಲೊ
ಸರ್ವ ಚಿತ್ ಅಚಿತ್ ಸ್ವಾಮಿ ನೀನು ಉಪೇಕ್ಷಿಸಿದರೆ
ಸರ್ವ ಪ್ರಾಣಿಗಳಿಗೂ ಗತಿ ಏನೂ ಇಲ್ಲ ೨೫

ಕರ್ತೃ - ಕರ್ಮ ಕ್ರಿಯಾದಿಗಳ ಸತ್ತಾಪ್ರವೃತ್ತಿಯು
ಸ್ವತಂತ್ರ ನಿಯಾಮಕ ನೃಸಿಂಹನ ಅಧೀನ
ಸರ್ವವು ನಿನ್ ಅಧೀನವಾದುದರಿಂದ
ಸರ್ವರೂಪನು ಎಂದೆನಿಸಿಕೊಂಬಿ ವಿಷ್ಣೋ ೨೬

ಪಂಚ ಜ್ಞಾನೇಂದ್ರಿಯವು ಪಂಚ ಕರ್ಮೇಂದ್ರಿಯವು
ಪಂಚ ಪ್ರಾಣವು ಮನ ಈ ಷೋಡಶ ಆರ
ಸಂಸಾರ ಚಕ್ರಕ್ಕೇ ಮೂಲವು ಮನಸೇವೇ
ಈಶ ನೃಸಿಂಹ ನೀ ಕಡೆ ಹಾಯಿಸೋ ೨೭

ಸರ್ವಶಕ್ತನೇ ನೀ ಪ್ರಸನ್ನಪಾಲಕ ವಿಭು
ಸರ್ವವಶೀ ಭೂತಕೃತ್ ಭೂತಭಾವನನು
ತೀವ್ರ ಸಂಸ್ಕೃತಿ ಚಕ್ರ ತಾಪ ಬಿಡುಗಡೆ ಮಾಡು
ಸ್ಥವಿರ ಆವರ್ತನ ನಿವೃತ್ತಾತ್ಮ ಶರಣು ೨೮

ಆಯುರ್ವೈಭವ ಐಶ್ವರ್ಯ ಜನರು ವಾಂಛಿಪ ಈ
ಕಾಮೇಂದ್ರಿಯ ವಿಷಯ ಸರ್ವವು ಅಸ್ಥಿರವು
ಈ ಯಾವುವು ಅಳಿದು ಪೋದದ್ದು ತಾ ಕಂಡು
ಹೇಯ ನಶ್ವರ ಇವುಗಳ ಇಚ್ಛೆಯಿಲ್ಲೆಂದ ೨೯

ನರಸಿಂಹ ನಿನ್ನ ನಿಜಭಕ್ತರ ಸಂಗ
ಕರುಣಿಸು ತನಗೆಂದು ಬೇಡಿ ಪ್ರಹ್ಲಾದ
ಶಿರ ಬಾಗಿ ನಮಿಸೆ ತಾ ನಿನ್ನಯ ಪದ್ಮ –
ಕರ ಪ್ರಸಾದವನಿತ್ತಿ ತನಗೆಂದ ೩೦

ಸೇವಿಸುವವರಿಗೆ ಏನೂ ವೈಷಮ್ಯ ಇಲ್ಲದೆ
ಸೇವೆಯ ಗಣಿಸಿಯೇ ನಿನ್ನಯ ಪ್ರಸಾದ
ಈವಿ ನೀನು ಸೇವೆ ಅಧಿಕವಾಗಿದ್ದರೆ
ಮಾಡುವಿ ಅಧಿಕದಯ ಅನ್ಯಥಾ ಅಲ್ಲ ೩೧

ಪ್ರಭವಾದಿ ಕೂಪಭಯ ಪರಿಹಾರವಾಗಿ
ಪ್ರಭುವೇ ನೀ ದೇವರ್ಷಿಯಿಂದ ಆದೇಶಿಸಿ
ಅಭಯ ನೀಡಿ ವಶಮಾಡಿಕೊಂಡಿ ತನ್ನ
ನಿನ್‌ಭೃತ್ಯ ಸೇವೆ ಬಿಡಲಾರೆ ತಾನು ಎಂದ ೩೨

ದೇಶಗುಣ ಕಾಲ ಅಪರಿಚ್ಛಿನ್ನನು ನೀನು
ಅಸು ರಕ್ಷಣೆ ಮಾಡಿದಿ ಮಹಾಬಲ ಅನಂತ

ಈಶ ನಿನ್ನಯ ಭೃತ ಋಷಿ ವಾಕ್ಯಸತ್ಯವು
ಅಸುರ ತನ್‌ಪಿತ ಮಾತಾ ಸತ್ಯಮಾಡಿದಿ ಎಂದ ೩೩

ಕೂರು ಖಡ್ಗವ ಹಿಡಿದು ತನ್ನವಿನಾ ಈಶ್ವರನು
ಯಾರಿಹನು ಕಾಯಲಿ ಶಿರ ಕಡಿವೆ ಎಂದ ಪಿತನ
ಹರಿ ನೀನು ಹತ ಮಾಡಿದಿ ಎಂದ ಪ್ರಹ್ಲಾದ
ವರ ಭಕ್ತಾಗ್ರಣಿ ಇವಗೆ ನಮೋ ನಮೋ ಎಂಬೆ ೩೪

ವಿಶ್ವ ವಿಷ್ಣು ವಷಟ್ಕಾರ ಏಕಾತ್ಮ
ಸೃಷ್ಟಿ ಸ್ಥಿತಿ ಲಯ ಮುಖ್ಯಕರ್ತ ಪ್ರವೀಣ
ಬೆರಸಿ ಉಪಾದಾನ ಜಡ ಪ್ರಕೃತಿ ಗುಣ ಜಗತ್ತನ್ನ
ಸೃಷ್ಟಿಸಿದಿ ನಿಮಿತ್ತ ಕಾರಣ ನೀ ಹೊಕ್ಕಿ ಅದರೊಳಗೆ ೩೫

ಸಂಸೃಷ್ಟ ಅಸಂಸೃಷ್ಟ ಚರಾಚರ ಜಗದೀಶ
ಸೃಷ್ಟಿ ಸ್ಥಿತಿ ಸಂಹಾರಾದಿಗಳ ಕರ್ತೃ
ಈಶ ಅಂತರ್ಯಾಮಿ ಹರಿ ವ್ಯಾಪಕ ಪ್ರತ್ಯಗಾತ್ಮ
ಶಾಸಕನು ಸರ್ವವಶಿ ಕಾಲನಾಮ ೩೬

ಸರ್ವವೂ ನಿನ್ನಧೀನವು ಆದುದರಿಂದ
ಸರ್ವವು ನೀ ಎಂದು ಅನಿಸಿಕೊಂಬಿ
ಸರ್ವ ಇವು ನಿನ್ನ ಸ್ವರೂಪ ಅಲ್ಲವೋ ಸ್ವಾಮಿ
ಸರ್ವರಿಂ ಭಿನ್ನ ನೀ ಸರ್ವಾಂತರ್ಯಾಮಿ ೩೭

ತ್ರಿಮಾತ್ರ ಪರಮಾತ್ಮ ಅನಂತಮಾತ್ರನೇ ಹರೇ
ನೀ ಮಾಡಿ ಮಾಡಿಸಿ ಜಗತ್ ವ್ಯಾಪಾರಗಳ
ಆ ಮಹಾ ಪ್ರಳಯಾಂಬು ಮಧ್ಯಶೇಷನ ಮೇಲೆ
ಪ್ರಮೋದ ಶಯನವ ಮಾಳ್ಪಿ ಅಮಾತ್ರ ಜಗದುದರ ೩೮

ನಾಭಿಕಮಲದಿ ನೀನು ಬ್ರಹ್ಮದೇವನ ಪಡೆದಿ
ಆ ಬ್ರಹ್ಮ ಪರಿಶುದ್ಧ ಭಾವನು ನಿನ್ನಲ್ಲಿ
ತಪಗೈಯೆ ಪ್ರತ್ಯಕ್ಷನಾಗಿಯೋ ಮಹಾಪೂರುಷ
ಪ್ರಭು ನೀನು ಗುಣಗಣಾರ್ಣವ ವಿತತ ಮಹಿಮ ೩೯

ಅನಂತ ವದನಾಂಘ್ರಿ ಶಿರ ನಯನೋರು ಕರ ನಾಸಿ
ಕರ್ಣ ನಿಜ ಆಭರಣ ಆಯುಧಾಡ್ಯ
ಆನಂದಾದಿ ಲಕ್ಷಣ ಸಮುದಾಯ ರೂಪನು
ಜ್ಞಾನ ಸ್ವರೂಪ ನೀ ಬ್ರಹ್ಮನಿಗೆ ತೋರ್ದಿ ೪೦

ಜ್ಞಾನ ಸುಖವಪುಷ ಅಕಳಂಕ ಹಯಗ್ರೀವ ರೂಪದಿಂ
ಆಮ್ನಾಯ ನಿಗಮ ಕಳ್ಳರು ಮಧು ಕೈಟಭರ
ಹನನ ಮಾಡಿ ವೇದಗಳ ಬ್ರಹ್ಮನಿಗಿತ್ತಿ
ಆನಂದಮಯ ನಮೋ ನಮೋ ಸೈಂಧವಾಸ್ಯ ೪೧

ಮಹಾಪೂರುಷ ನಿನ್ನಯರೂಪವ ನೋಡಿದ
ಬ್ರಹ್ಮನು ಮಹಾನಂದ ಹೊಂದಿದ ನಿನ್ನ
ಮಹಾಮಹಿಮೆ ವರ್ಣಿಸಲಶಕ್ಯವೋ ಸ್ವಾಮಿ
ಮಹಾಸ್ವ ನಮೋ ಧರ್ಮಸ್ಥಾಪಕನೇ ತ್ರಿಯುಗ ೪೨

ವಿಷಯೀಷಣಾದಿಗಳಲ್ಲಿ ರತ ಮನಸ್ಸು
ವಿಷಯಸುಖ ಹುಡುಕುತ್ತ ಪಾಪಕರ್ಮ
ದುಷ್ಟಚರ್ಯಾದಿ ಇರಲು ವೈಕುಂಠಪತಿ ನಿನ್ನ
ಉತ್ಕೃಷ್ಟ ಕಥಾ ಶ್ರವಣ ಮನನ ಮಾಡುವುದು ಇಲ್ಲ ೪೩

ಜ್ಞಾನ ಕರ್ಮೇಂದ್ರಿಯಗಳು ಪಾಪ ವಿಷಯಗಳಲಿ
ಅನವರತ ಕಳೆದ್ಹೋಗಿ ಮೈತ್ರವೈರದಿ ಸಿಲುಕಿ
ಜನನಮೃತಿ ಭವ ವೈತರಣಿಯಲಿ ಬೀಳ್ವರು
ಘನದಯದಿ ಅಚ್ಯುತನೇ ಕಾಪಾಡೋ ಕರುಣಿ ೪೪

ಆರ್ತಬಂಧೋ ಅಖಿಳ ಲೋಕಗುರು ಭಗವಂತ
ಮೋದಮಯ ಸರ್ವಕರ್ತನೇ ನಿನ್ನ ನಿನ್ನವರ
ಪಾದಭಜಕರ ವಿಷಯಬಂಧ ಬಿಡಿಸಿ ಭವ –
ದಿಂದ ತಾರಿಸುವುದಕೆ ನೀನಲ್ಲದೇ ಬೇರೆ ಯಾರೂ ಇಲ್ಲ ೪೫

ಕಜ್ಜಿ ನವೆ ತುರುಸುವಾಗಲೇ ಅಲ್ಪ ಸುಖವಿತ್ತು
ಕಜ್ಜಿ ದುಃಖ ಬಹು ಹೆಚ್ಚುವ ತೆರದಿ

ಇಚ್ಛೆಸಿ ಗೃಹಲೋಕ ವಿಷಯ ಭೋಗಿಸಿ ದುಃಖ
ಹೆಚ್ಚುವುದು ಜಿತ ಕಾಮ ಹರಿಭಕ್ತ ಗೆಲ್ವ ೪೬

ಮೌನವ್ರತ ಶೃತ ತಪಸ್ ಅಧ್ಯಯನ ಪ್ರವಚನ
ವರ್ಣ ಸ್ವಧರ್ಮ ಜಪ ಧ್ಯಾನ ಮೋಕ್ಷೋಪಾಯ
ಎನಿಸಿದರೂ ಅಜಿತೇಂದ್ರಿಯಗೆ ಇವು ಅಪವರ್ಗ
ಸಾಧನವು ಆಗವು ಡಂಭ ವರ್ತನವೇ ೪೭

ಕಾರ್ಯಕಾರಣ ರೂಪಗಳು ಎಲ್ಲವು ನಿನ್ನ ವಶ
ಕಾರ್ಯಕಾರಣ ಸತ್ತಾಪ್ರದ ನಿಯಮಕನು
ವಾಯ್ವಗ್ನಿ ವಿಯತ್ ಅಂಬು ಪೃಥ್ವಿ ಮಾತ್ರೇಂದ್ರಿಯಾದಿ
ಈ ಎಲ್ಲದೊಳು ಇರುವಿ ಸರ್ವವಶಿ ಭೂಮನ್ ೪೮

ವಿಧಿ ಭವಾದಿ ಸುರರ ಮನುಷ್ಯಾಧಿ ಜೀವರ
ಈ ದೇಹ ಪ್ರಾಕೃತವು ಆದ್ಯಂತ ಉಂಟು
ವೇದತತಿ ಧೀಮಂತರಿಂ ಮಹಾಸ್ತುತ್ಯ ನೀ
ಅದ್ವಿತೀಯನು ಶಾಶ್ವತ ಸನಾತನನು ೪೯

ಸುಧೀಗಳು ಪ್ರಾಕೃತ ವಿಷಯದಲಿ ಮನವಿಡದೆ
ಮಾಧವ ಮಹತ್ತಮನೆ ನಿನ್ನನ್ನೇ ತಿಳಿವರು
ಅಧಿಕಾರಿಗಪರೋಕ್ಷ್ಯ ನಿನ್ನ ದಯದಿಂದಲೇ
ಶ್ರೋತವ್ಯ ಮಂತವ್ಯ ಧ್ಯಾತವ್ಯ ವಂದ್ಯ ೫೦

ತತೇ ಮಹತ್ತಮ ನಮಃ ಸ್ತುತಿ ಕರ್ಮ ಪೂಜ
ಕರ್ಮ ಸ್ಮೃತಿಃ ಚರಣಯೋಃ ಶ್ರವಣಂ ಕಥಾಯಾಂ
ಸಂಸೇವಯಾ ತ್ವಯೀ ವಿನೇತಿ ಷಡಂಗಾಯ
ಭಕ್ತಿಂ ಜನಃ ಪರಮಹಂಸಗತೋ ಲಭೇತ್ ೫೧

ಭಕ್ತಿಯಿಂದಲಿ ನಿನ್ನ ಗುಣಾನುವರ್ಣನ
ಭಕ್ತವರ ಪ್ರಣತ ಪ್ರಹ್ಲಾದನು ಮಾಡೆ
ಪ್ರೀತನಾಗಿ ಶಾಂತ ನರಸಿಂಹ ನೀನು
ಪ್ರಹ್ಲಾದ ಭದ್ರ ಭದ್ರಂತೆ ಎಂದಿ ೫೨

ಭಕ್ತವರಶ್ರೇಷ್ಠ ಅಸುರೋತ್ತಮ ಪ್ರಹ್ಲಾದನಲಿ
ಪ್ರೀತನಾದಿ ಎಂದು ಪೇಳಿ ವರಕೇಳು
ಭಕ್ತರಿಷ್ಟಾರ್ಥ ಪೂರೈಸುವಿ ನೀನು
ಎಂದು ಪೇಳಿದಿ ಭಕ್ತವತ್ಸಲ ಕೃಪಾಳೋ ೫೩

ನೀನೇವೇ ತನಗಿಷ್ಟ ನಿನ್ನ ಭಕ್ತನು ತಾನು
ನೀನೇವೇ ಸ್ವಾಮಿ ಆಶ್ರಯನು ಎನ್ನುತ
ನಿನ್ನಲಿ ದಾಸ್ಯವೇ ತಾನು ಕಾಮಿಸುವುದು
ಅನ್ಯದಲಿ ಇಚ್ಛೆಯಿಲ್ಲವು ಎಂದ ಪ್ರಹ್ಲಾದ ೫೪

ಪುಂಡರೀಕಾಕ್ಷ ಭಗವಂತ ನಮೋ ನಿನಗೆ
ಪೂರ್ಣೈಶ್ವರ್ಯ ನೀ ಪೂರುಷ ಮಹಾತ್ಮ
ಗುಣಪೂರ್ಣ ಬ್ರಹ್ಮ ಪರಿ ಜ್ಞಾನಾನಂದಮಯ
ಅನಘ ಪರಮಾತ್ಮ ಸರ್ವೋತ್ತಮ ನೀ ಎಂದ ೫೫

ಈ ರೀತಿ ಭಕ್ತವರ ಪ್ರಹ್ಲಾದ ಪೇಳಲು
ಹರಿ ನೀನು ಪೇಳಿದಿ ಆ ಮನ್ವಂತರ ಪೂರ
ಉತ್ಕೃಷ್ಟ ಕೀರ್ತಿ ಯಶಸ್ಸಿನಿಂದ ರಾಜ್ಯವನಾಳು
ತರುವಾಯ ತನ್ನ ಬಳಿ ಬರುವುದು ಎಂದಿ ೫೬

ಹರಿ ನಿನ್ನನು ನಿನ್ನ ಭಕ್ತಪ್ರಹ್ಲಾದನನ್ನು
ಸ್ಮರಿಸಿ ಈ ಪ್ರಹ್ಲಾದ ಗೀತೆಯನ್ನ
ನರರು ಕೀರ್ತನೆ ಮಾಡೆ ಅಂಥ ನರರು
ಕರ್ಮಬಂಧ ಬಿಡುಗಡೆ ಆಗುವರು ಎಂದಿ ೫೭

ಶ್ರೀಮದ್ ಭಾಗವತ ಸಪ್ತಮೋಧ್ಯಾಯವನು
ಅಮಲ ಸತ್ತತ್ವ ತಿಳಿದವನು ಆದ
ನಿರ್ಮತ್ಸರ ಹರಿಭಕ್ತರ ಮುಖದಿಂದ ಸಹ
ಮುಮುಕ್ಷುಗಳು ಸುಶ್ರವಣ ಮಾಡಿ ಸುಖಿಸುವುದು ೫೮

ಹರಿ ಸರ್ವಲೋಕ ಗುರು ಮಹೇಶ್ವರ ನಿನ್ನ
ಕೋರಿದನು ಪ್ರಹ್ಲಾದಪಿತನು ಹರಿಯಲ್ಲೂ

ಹರಿಭಕ್ತ ತನ್ನಲ್ಲೂ ಮಾಡಿದ ಅಘವ
ಪರಿಹರಿಸಿ ಪಿತನನ್ನ ಪಾವನ ಮಾಡೆಂದ ೫೯

ಶಾಂತ ನರಸಿಂಹನೇ ಕೃಪಣ ವತ್ಸಲ ನೀನು
ಪೇಳ್ದಿ ಪ್ರಹ್ಲಾದನ ಪಿತ ಪೂತನಾದ
ಪಿತಾಮಹ ಮೂರೇಳು ಜನ್ಮಾಂತರ ಪಿತೃಗಳು
ಪೂತರಾದರು ಎಂದಿ ಕರುಣಾಂಬುನಿಧಿಯೇ ೬೦

ಬಹು ಒಳ್ಳೆ ಮಾತುಗಳ ಅಡಿ ಪ್ರಹ್ಲಾದನ್ನ
ವಿಹಿತದಲಿ ಪಿತೃಕಾರ್ಯಚರಿಸಲಿ ಎಂದು
ನೀ ಹೇಳಿ ಪ್ರಹ್ಲಾದ ಅದರಂತೆ ಮಾಡಿದನು
ಶ್ರೀಹರಿ ಪ್ರೀತಿಗೆ ಕರ್ಮ ಅರ್ಪಿಸಿದ ೬೧

ಋತೇತು ತಾತ್ವಿಕಾನ್ ದೇವಾನ್
ನಾರದಾದೀಂ ಸ್ತಥೈವಚ
ಪ್ರಹ್ಲಾದಾನುತ್ತಮಃ ಕೋನು
ವಿಷ್ಣು ಭಕ್ತಾ ಜಗತ್ರಯ (ಇತಿ ಸ್ಕಂಧೇ) ೬೨

ದ್ವಿಜೋತ್ತಮರಿಂದ ನೀನು ಪ್ರಹ್ಲಾದನಿಗೆ
ರಾಜಾಭಿಷೇಕವು ಮಾಡಿಸಿದಿ ಶ್ರೀಶ
ರಾಜರಾಜೇಶ್ವರಿ ಲಕ್ಷ್ಮೀ ನೃಸಿಂಹಗೂ
ರಾಜಾಧಿರಾಜ ಪ್ರಹ್ಲಾದರಾಜಗೂ ಪರಾಕ್ ೬೩

ಜಯ ಜಯತು ಶ್ರೀ ಪ್ರಸನ್ನ ಶ್ರೀನಿವಾಸ ನರಸಿಂಹ
ಜಯ ಗುಣಾರ್ಣವ ಭೂಮಾನ್ ಲಕ್ಷ್ಮೀಸಮೇತ
ಜಯ ಅಜನಪಿತ ನಮೋ ಶರ್ವಾದಿ ಸುರವಂದ್ಯ
ಜಯತು ಭಕ್ತೇಷ್ಟಪ್ರದ ಪ್ರಹ್ಲಾದ ಪಾಲ ೬೪

–ಇತಿ ಶ್ರೀ ನೃಸಿಂಹ ಪ್ರಾದುರ್ಭಾವ (ಪ್ರಹ್ಲಾದ ಚರಿತಾಮೃತ) ಸಂಪೂರ್ಣಂ–

ಶ್ರೀ ಕಂಚೀಪುರ ನರಸಿಂಹ

೯

ಶರಣಂ ಶರಣಂ ಪಾಲಯ ಮಾಂ ಪ

ವರ ಕಂಚೀಪುರ ಯೋಗನೃಕೇಸರಿ
ಪಾಲಯ ಮಾಂ ಅ.ಪ

ಪೂರ್ಣ ಅದೋಷ ಸುಚಿನ್ಮಯ ನೃಹರೇ
ಪೂರ್ಣಾನಂದ ಭೋ ಏಕಾತ್ಮ ೧

ಮತ್ಕುಲದೇವ ಶ್ರೀ ವೆಂಕಟಕೃಷ್ಣ
ವರದ ಕೃಪಾಂಬುಧೆ ಪಾಲಯ ಮಾಂ ೨

ಯೋಗಕ್ಷೇಮಂ ಮಮವಹ ಸ್ವಾಮಿ
ಕಾಮಿತಫಲದ ದಯಾನಿಧೆ ಭೂಮನ್ ೩

ಮೀನಾದಿದಶ ಅನಂತ ಸುರೂಪ
ಅನುಪಮ ಸುಖಮಯ ಪಾಲಯ ಮಾಂ ೪

ಮಂದಜಭವಪಿತ ಪ್ರಸನ್ನ ಶ್ರೀನಿವಾಸ
ಇಂದಿರಾಪತಿ ನರಸಿಂಹ ನಮಸ್ತೆ ೫

ಶ್ರೀ ಚಿಂತಲವಾಡಿ ನರಸಿಂಹ

೧೦

ಚಿಂತಾಮಣಿಗಮಿತ ಚಿಂತಾಮಣಿ
ಚಿಂತಲವಾಡಿ ಶ್ರೀ ನೃಸಿಂಹಸ್ವಾಮಿ ಪ

ಕಂತುಪಿತ ಕೊಟ್ಟಿರುವ ಸಾಮರ್ಥ್ಯದಿಂದಲೇ
ಚಿಂತಾಮಣಿಯು ಐಹಿಕ ವಸ್ತುವೀವುದು

ಅನಂತ ಶ್ರೀಪತಿ ಚಿಂತಲವಾಡಿ ಕರುಣಿ ಸ್ವ -
ತಂತ್ರನು ಇಹಪರದಿ ಐಶ್ವರ್ಯವ ೧

ಕಾಕುಮನ ವಾಕ್ಕಾಯ ಶುದ್ಧ ಮಾಡುವ ದೇವಿ
ಶ್ರೀ ಕಾವೇರಿ ತೀರದಲಿ ಕುಳಿತು ಸರ್ವ
ಭಕುತರಿಗೆ ವರವೀವ ಶ್ರೀಕಾಂತ ನರಸಿಂಹ
ಸುಖಜ್ಞಾನಮಯ ದೋಷದೂರ ಗುಣನಿಧಿಯು ೨

ಮಮಕಾರ ಅಹಂಕಾರ ಡಂಭತನವನು ಬಿಟ್ಟು
ಮಮಸ್ವಾಮಿ ಸರ್ವರಿಗೂ ಪರಮೈಕಸ್ವಾಮಿಯು
ಸುಮನಸಾರ್ಚಿತ ಕುಸುಮಸಂಭವನ ತಾತನು
ರಮಾಪತಿ ಪ್ರಸನ್ನ ಶ್ರೀನಿವಾಸ ನಮೋ ಎನ್ನಿ ೩

ಶ್ರೀ ನರಸಿಂಹ ಸ್ತೋತ್ರ

೧೧

ವಂದಿಸು ನರಹರಿಯ ಮನವೆ ವಂದಿಸು ನರಹರಿಯ
ವಂದ್ಯವಂದ್ಯನು ಬಹು ಸುಂದರ ಸುಖಮಯ
ಇಂದಿರರಸ ಅರವಿಂದ ಸುನಾಭನ ವಂದಿಸು ನರಹರಿಯ ಪ

ಸಿಂಧು ಸಂಚರ ಬಹು ಸುಂದರ ಗಿರಿಧರ
ತಂದನು ವಸುಧೆಯ ಕಂದನ ಕಾಯ್ದ ಪು
ರಂದರವರದ ಮುನೀಂದ್ರ ಕುಮಾರ ಕ
ಪೀಂದ್ರಗೆ ಒಲಿದಮರೇಂದ್ರಗೆ ಬೋಧಿಸಿ
ನಿಂದ ದಿಗಂಬರ ಕುಂಭಿಣಿ ಸುರನುತ
ಮಂದರಗಿರಿ ಎತ್ತಿ ಸಿಂಧುವಿಂದಲಿ ಬಂದು
ಅಂಧ ಮೂಢರ ತನ್ನ ಅಂದ ಮೋಹದಿ ಕಟ್ಟಿ
ದಾನ್ತ ಸುರರಿಗೆಲ್ಲ ಚಂದ ಸುಧೆಯನಿತ್ತ
ಇಂದಿರಾಕಾಂತನನಂತ ಸುಗುಣಗಳ

ಚಿಂತಿಸಿ ಯೋಗ್ಯದಿ [೧]ಕಂದದ ಪ್ರೇಮದಿ
ವಂದಿಸು ನರಹರಿಯ ೧

ವೇದಾಂತರ್ಗತ ಬಾದರಾಯಣ ಹರಿ
ಪಾದಾರಾಧಕ ಮೋದ ಸುತೀರ್ಥರ
ಪಾದಾವಲಂಬಕ ಸಾಧು ಸುಮೇಧರ
ಹೃದಯಾಕಾಶದಿ ಪದುಮದ ಮೂಲದಿ
ಸದಮಲಾತ್ಮನಾದಿತ್ಯನುಪೋಲು [೨]
ವಿಧವಿಧಭಾಸದಿ ಪದೆ ಪದೆ ನೋಡುತ
ವಿಧಿಯ ತಾತನ ಬಹು ಮೋದ ಸುಗುಣಗಳ
ಮುದದಲಿ ಚಿಂತಿಪ ಕೋವಿದ ಹಿರಿಯರ
ಪಾದ ಸುಪಾಂಶುವ ನಿಯಮದಿ ಪೊಂದಿ ನೀ
ಪದುಮೇಶನ ನಿನ್ನ ಹೃದಯದಿ ಚಿಂತಿಸಿ
ವಂದಿಸು ನರಹರಿಯ ೨

ನಿಜಸುಖಮಾರ್ಗದಿ ಭಜಕ ಬಾಲಕ ಪೋಗೆ
ಅರ್ಜಿತ ದ್ವೇಷದಿ [೩] ಮೂರ್ಜಗ ಶತ್ರು
ಗಜಾದಿಗಳಿಂ ಹೆಜ್ಜೆಜ್ಜೆಗೆ ಬಾಧಿಸೆ
ಧೂರ್ಜಟಸೇವ್ಯ ಜನಾರ್ಧನ ನರಹರಿ
ಗರ್ಜಿಪ ವದನನು ಸಜ್ಜನಪಾಲಕ
ಅಜಸುರರೆಲ್ಲರು ತೇಜೋಮಯ ಅತಿ
ಜ್ವಲಿಸುವ ನಖದಿಂ ದುರ್ಜನ ರಾಜನ
ಜೋಜ್ಜೆಯ ಛೇದಿಸಿ ಭಜಕಗೆ ವರವಿತ್ತು
ಸೃಜ್ಯಾಸೃಜ್ಯರ ಪ್ರಾಜ್ಞನ ಮರೆಯದೆ
ವಂದಿಸು ನರಹರಿಯ ೩

ಸೃಷ್ಟ್ಯಾಧೀಶನದೃಷ್ಟನಾಗಿರುತಿಹ
ಸೃಷ್ಟಾಸೃಷ್ಟ ಪ್ರವಿಷ್ಟಾಸೃಷ್ಟನು
ಶಿಷ್ಟರ ಇಷ್ಟ ಸುದೃಷ್ಟಿಯ ಬೀರುತ
ಶಿಷ್ಟರ ಬಹು ವಿಧ ಕಷ್ಟಗಳಳಿದು [೪]

೧. ಕುಂದದ ೨. ಆದಿತ್ಯನವೊಲು ೩. ಮೂಜಗ ೪. ಅಳಿಸಿ

ಅಭೀಷ್ಟಗಳೀವನು ದುಷ್ಟರ ಶಿಕ್ಷಿಪ
ಭ್ರಷ್ಟಜನರಿಗಿವ ಸ್ಪಷ್ಟನಾಗುವನಲ್ಲ
ಶ್ರೇಷ್ಠೋತ್ತಮ ಪರಮೇಷ್ಠಿ ಜನಕನಿವ
ಕಾಷ್ಟಾಗ್ನಿಯವೊಲ್ ಅದೃಷ್ಟಾದೃಷ್ಟನು
ದುಷ್ಟದೂರ ವಾಸಿಷ್ಠ ಶ್ರೀ ಕೃಷ್ಣನು
ಶಿಷ್ಟನು ನಿನ್ನೊಳುತ್ಕೃಷ್ಟನೆಂದರಿತು
ವಂದಿಸು ನರಹರಿಯ ೪

ಸರಿಪರರಿಲ್ಲದ ಸಿರಿಯರಸನ ಚಾರು
ಚರಣಾರಾಧನ ಪರಸುಖವೀವುದು
ಸಿರಿದೊರೆ ಸುಹೃದನು ಸಿರಿಸಹ ಮೆರೆಯುತ
ಅರಿತ ಸುಜನರನು ಪೊರೆವನು ದಯದಿ
ಮೊರೆಯನು ಲಾಲಿಸಿ ಪೊರೆದನು ಗರ್ಭವ
ಮರೆತು ನಾರಾ ಎಂದ ನರಸುರಗೊಲಿದನು
ಪೊರೆದನು ದಯದಿ ನರಾಧಮ ಎನ್ನನು
ಕರಿವರ ದ್ರೌಪದಿವರದ ವಿಖ್ಯಾತನು
ಸರಸಿಜಭವತಾತ ಪ್ರಸನ್ನ ಶ್ರೀನಿವಾಸ
ಪೊರೆವನು ನೆನೆವರ ಸಿರಿಭೂದೊರೆಯೆಂದು
ವಂದಿಸು ನರಹರಿಯ ೫

ಶ್ರೀ ನರಸಿಂಹ ಮಂತ್ರ

೧೨

ಜಯ ಜಯ ಜಯ ನರಸಿಂಹ
ಜಯ ಜಯ ಮಹಾಲಕ್ಷ್ಮೀರಮಣ
ಜಯ ನಿರಾಮಯ ಸರ್ವೋತ್ಕೃಷ್ಟ ಆಹ
ಜಯ ಕಮಲಜ ಮೃಡಾದ್ಯಮರವಂದ್ಯನೆ ನಮೋ
ಭಯಬಂಧಹರ ಭಕ್ತ ಜನರ ರಕ್ಷಕ ಸ್ವಾಮಿ ಪ

ಅರದೂರ ಗುಣಪರಿಪೂರ್ಣ
ಉಗ್ರವೀರನೆ ಮಹಾವಿಷ್ಣು
ಉರುಕಾಂತಿ ಸರ್ವತೋಮುಖನೆ ಆಹ
ನರಸಿಂಹ ಭಯಕರಾಶ್ರಿತಜನರ ರಕ್ಷಕ
ಶರಣಾದೆ ನಿನಗೆ ನಾ ಮೃತ್ಯುಮಾರಕ ನಮೋ ೧

ಸೃಷ್ಟಾ ಪಾತಾ ಅತ್ತ ತ್ರಾತಾ
ದುಷ್ಟ ದೈತ್ಯರಿಗತಿ ಕ್ರೂರ
ಶ್ರೇಷ್ಠ ಅಸಮಬಲರೂಪ ಆಹ
ಇಷ್ಟಭಕ್ತನ ಕಾಯೆ ಕಂಬದಿಂದಲಿ ಬಂದು
ತ್ಕೃಷ್ಟ ಪ್ರಜ್ವಲಿಪ ನಖದಿ ಸೀಳ್ದೆ ಭ್ರಷ್ಟನ ೨

ವಿಶ್ವಸ್ಥ ಬಹಿರಂತರ್ವ್ಯಾಪ್ತ
ವಿಶ್ವ ವಿಷ್ಣು ವಷಟ್ಕಾರ
ಸರ್ವಜ್ಞ ನಿರ್ದೋಷ ಸುಗುಣಿ ಆಹ
ರವಿಕೋಟಿ ಅಮಿತ ಸಕಾಂತಿಯಿಂ ಜ್ವಲಿಸುವೆ
ವಿಶ್ವತೋಮುಖ ಸರ್ವಸಾಕ್ಷಿಸ್ವತಂತ್ರ ೩

ನರನಲ್ಲ ನರರೂಪಧಾರಿ
ನೀ ಮೃಗವಲ್ಲವು ಸಿಂಹವದ್ರೂಪ
ನರಮೃಗಗಳಲಿ ನೀ ಸಮನು ಆಹ
ಧರೆ ದಿವಿ ಪಾತಾಳ ಜಂತು ಸರ್ವಾಂತಸ್ಥ
ಉರು ಜ್ಞಾನ ಬಲರೂಪ ಅನಂತ ನೀ ಏಕ ೪

ನ ಎಂದರೆ ಸರ್ವವಂದ್ಯ
ರ ಎಂದರೆ ಸುಖ ಜ್ಞಾನ
ಸಿಂ ಎಂದರೆ ಗುಣಸಾರ ಆಹ
ಇಂದಿರಾಪತಿ ಮಹದೈಶ್ವರ ರೂಪನು
ಹ ಎಂದರೆ ನೀನು ಪೂರ್ಣ ನಿರ್ದೋಷ ೫

ಭೂತಾದಿ ದುಷ್ಟ ಗ್ರಹಗಳ
ಖದ್ರೂಜಾದಿ ಸರ್ವ ವಿಷವ

ನೀ ದಯದಿ ಪರಿಹರಿಪೆ ಆಹ
ಭಕ್ತ ಜನರಿಗೆ ನೀ ಶುಭವಿತ್ತು ಅಕಾಲ
ಮೃತ್ಯುವ ತರಿವ ರಕ್ಷಕ ನಮೋ ಎಂಬೆ ೬

ದ್ವಾತ್ರಿಂಶ ಚತುರ್ವಿಂಶಾಕ್ಷರದ
ಮಂತ್ರ ಗಾಯತ್ರಿ ಪ್ರತಿಪಾದ್ಯ
ವೃತತಿಜಾಸನ ಮಂತ್ರ ಋಷಿಯು ಆಹ
ಅಧಿಕಾರಿಗಳು ಇದನು ಶ್ರವಣ ಪಠಣ ಮಾಡೆ
ಭೀತಿ ಮೋಹವ ಬಿಡಿಸಿ ನಿಖಿಳೇಷ್ಟವೀವೆ ೭

ಜಯ ಜಯ ನರಸಿಂಹಸ್ವಾಮಿ
ಜಯ ಜಯ ಸರ್ವಜ್ಞ ಭೂಮನ್
ಜಯ ಮಹಾ ತೇಜೋಬಲವೀರ್ಯ ಆಹ
ಜಯ ಪುರುಷೋತ್ತಮ ವೇಧಾದಿ ಸುರರಿಂದ
ಇಜ್ಯಪೂಜ್ಯನು ದೃಢಭಕ್ತಿಯಿಂ ಮುದದಿ ೮

ನಾರ ಉರು ಗುಣಸಿಂಧು
ನರಸಿಂಹ ಸುಪ್ರೀತನಾಗೊ
ಚಿರಜ್ಞಾನ ಭಕ್ತಿಯ ಸತತ ಆಹ
ಪರಮರಿಲ್ಲದ ಬಲಿ ನಿನ್ನಲಿ ಧ್ಯಾನ
ತೀವ್ರ ಪ್ರೇರಿಸು ಎನಗೆ ಅನಂತ ಅನುತ್ತಮ ೯

ಪ್ರೋದ್ಯಾರ್ಕನಿಭ ದೀಪ್ತವಾದ
ವರ್ತುಲ ಉರು ನೇತ್ರತ್ರಯವು
ಹಸ್ತದ್ವಯವು ಜಾನುವರೆಗೂ ಆಹ
ಸುದರ್ಶನಿ ಶಂಖಿ ಮಹಾಲಕ್ಷ್ಮಿಯುತ ಕೋಟಿ
ಆದಿತ್ಯಾಧಿಕತೇಜ ಉತ್ಕೃಷ್ಟ ಶಕ್ತ ೧೦

ಮೀನ ಕಮಠ ಕ್ರೋಡ ನೃಹರಿ
ಮಾಣವ ಪರಶ್ವಿ ಸುಧನ್ವಿ
ಕೃಷ್ಣ ಬುದ್ಧ ಕಲ್ಕಿ ಶರಣ ಆಹ

ವನರುಹನ ತಾತ ಪ್ರಸನ್ನ ಶ್ರೀನಿವಾಸ
ಅನಿಷ್ಟಹ ಇಷ್ಟದ ಎನಗೆ ದಯವಾಗೊ ೧೧

ಶ್ರೀಪರಿಕಲ್ ನರಸಿಂಹ ಸ್ತೋತ್ರ

೧೩

ನರಸಿಂಹ ಪರಿಕಲ್ ನರಸಿಂಹ ।
ನರಸಿಂಹ ಶರಣು ಲಕ್ಷ್ಮೀಶ
ಗೌರೀಶಾದ್ಯಮರರಿಗೀಶ । ಆಹ ।
ಅಮಿತ ಪೌರುಷ ಸ್ವಜನತೇಷ್ಟಪ್ರದನೆ ನಮೋ
ಅಮಲೂರು ಗುಣಗಣಾರ್ಣವ ಜಯ ಜಯತು ಪ

ಸರ್ವೋರು ನಿಜ ಶಕ್ತಿಮಂತ । ಸದಾ
ಸರ್ವತ್ರವ್ಯಾಪ್ತ ಅನಂತ । ಜಗತ್
ಸೃಷ್ಟ್ಯಾದಿಗಳಿಗೇ ನೀ ಕರ್ತ । ವಿಷ್ಣು
ಸರ್ವತೋಮುಖ ಮೃತ್ಯುಹಂತ ॥ ಆಹ ॥
ಶ್ರೋತವ್ಯಮಂತವ್ಯ ಧ್ಯಾತವ್ಯವಿಭು ನೀನು
ವ್ಯಕ್ತನಾದಿಯೋ ಸ್ತಂಭದಲಿ ಭೃತ್ಯಗೋಲಿದು ೧

ಮೂಲಾಧಾರಾರಭ್ಯಲೂರ್ಧ್ವ । ವಾಗಿ
ತಲೆಯ ಪರ್ಯಂತದಿ ನಿಲುವ । ಬಲು
ಸುಲಲಿತಸ್ತಂಭದಂತಿರುವ । ನಾಡಿ
ಯಲ್ಲಿ ಉರದೇಶದಿ ಪೊಳೆವ ॥ಆಹ॥
ಜ್ಯೋತಿರ್ಮಯನೆ ಪಾಪತಿಮಿರಾರ್ಕ ನೀ ಎನ್ನ
ಪ್ರತಿಕ್ಷಣ ಪಾಲಿಸೋ ಶ್ರೀಲಕ್ಷ್ಮೀರಮಣ ೨

ವಿಧಿ ಭವೇಂದ್ರಾದಿಗಳಿಂದ । ಪ್ರಹ
ಲ್ಲಾದ ಶ್ರೀವ್ಯಾಸಮುನೀಂದ್ರ । ಮಂತ್ರಾ
ಸದ್ಮಸ್ಥ ಶ್ರೀ ರಾಘವೇಂದ್ರ । ದಾಸ
ವೃಂದ ಸುಜನರುಗಳಿಂದ ॥ಆಹ ॥

ಸೇವಿತ ಪೂಜಿತ ಸ್ತುತ್ಯ ಸಂಭಾವಿತ
ವಿಧಿಪಿತ ಶ್ರೀನೃಹರೇ 'ಪ್ರಸನ್ನ ಶ್ರೀನಿವಾಸ'
||ಪಾಲಿಸೋ.......... ३

ಶ್ರೀ ನರಸಿಂಹ

೧೪

ನರಸಿಂಹ ಪಾಹಿ ಶ್ರೀಶ ಪೊರೆವರಾರಿಲ್ಲ ಬೇರೆ
ಕರವೆತ್ತಿ ಮುಗಿವೆ ನಿನಗೆ ಸುರಮುನಿ ಸುಖತೀರ್ಥ ಸೇವ್ಯ ಪ

ನಿಷಿದ್ಧ ಕರ್ಮಗಳ ಗೈದು ಅನಿರುದ್ಧ ನಾ ನಿನ್ನ ಮರೆತೆ
ಶುದ್ಧವೈಷ್ಣವತನವನೀಯೊ ಪ್ರಸಿದ್ಧಿ ಅದ್ಭುತಶಕ್ತ ವಿಭುವೆ ೧

ಸಾಧ್ಯಸಾಧನವನ್ನು ಬಿಟ್ಟು ಪ್ರದ್ಯುಮ್ನ ನಾ ನಿನ್ನ ಮರೆತೆ
ವಿದ್ಯುದೀಶನೆಸ್ವಾಮಿ ಸಲಹೊ ವೇದವೇದ್ಯಾನಂತ ಮಹಿಮ ೨

ಸಂಚಿಂತೆ ಸಂಸ್ಮರಣೆ ತೊರೆದು ಸಂಕರ್ಷಣ ನಿನ್ನ ಮರೆತೆ
ಸಂಸಾರತಾಪಗಳ ೧ ತೊರೆಯೊ ಶಂಕರ ಸುರ ಶಂಭು ಸೇವ್ಯ ३

ವಸನ ಮನೆ ಹಣ ಹೆಣ್ಣು ಹುಡುಕಿ ವಾಸುದೇವನೆ ನಿನ್ನ ಮರೆತೆ
ಪಸು ಶಿಶುವಾದೆನ್ನ ಪೊರೆಯೊ ಶ್ರೀಶ ಮುಕ್ತೇಶ ಸರ್ವೇಶ ೪

ಅನಿಮಿತ್ತಬಂಧು ಮೂಲೇಶ ಅನ್ಯರ ನಾನರಿಯೆ ನಾರಾಯಣ
ವನರುಹಾಸನ ತಾತ ಪ್ರಸನ್ನ ಶ್ರೀನಿವಾಸನೆ ಕೃಷ್ಣವ್ಯಾಸ ೫

ಶ್ರೀ ವರಾಹ ನರಹರಿ ಧನ್ವಂತರಿ

೧೫

ಶರಣು ಶರಣು ಶರಣು ಭೂವರಾಹ ಮೂರುತಿ
ಶರಣು ಶರಣು ಧನ್ವಂತರಿ
ಶರಣು ಭಾರತೀರಮಣವಂದ್ಯನೆ ಶರಣು ನೃಹರೆ ಕೃಪಾನಿಧೆ ಪ

ವಾರಿಧಿಯಿಂದ ಕ್ರೂರ ಅಸುರನ
ಮುರಿದು ಧರೆಯನುದ್ಧರಿಸಿದೆ
ಘೋರ ವ್ಯಾಧಿಸಮುದ್ರದಿಂದು -
ದ್ಧರಿಸೊ ಎನ್ನ ಕೃಪಾನಿಧೆ ೧

ಸುರರ ಪೊರೆಯಲು ಅಮೃತ ತಂದೆ
ಪರಮ ಪೂರುಷ ಭೇಷಜ
ಶಿರ ಉರಾದಿ ಸರ್ವ ಅಂಗದಿ
ಸುರಿದು ಅಮೃತವ ಪೊರೆ ಎನ್ನ ೨

ಮೃತ್ಯು ಮೃತ್ಯುವೆ ದಯದಿ ಎನ್ನಪ -
ಮೃತ್ಯು ತರಿದು ಪಾಲಿಸೊ
ನಿತ್ಯ ಸುಖಮಯ ವಿಧಿಯ ತಾತ
ಪ್ರಸನ್ನ ಶ್ರೀನಿವಾಸನೆ ೩

೧೬

ಪ್ರಸನ್ನ ಶ್ರೀ ವಾಮನ
ಪ್ರಥಮ ಅಧ್ಯಾಯ

ಶ್ರೀ ವಾಮನ ಪ್ರಾದುರ್ಭಾವ ಸಾರ

ಭೂಮಾದಿ ಗುಣನಿಧಿಯೇ ಅನಘ ಮಂಗಳರೂಪ
ವಾಮನ ಸುಸೌಂದರ್ಯಸಾರ ಲಕ್ಷ್ಮೀಶ
ಬ್ರಹ್ಮೇಶ ಮುಖವಂದ್ಯ ಶರಣು ಸೌಭಾಗ್ಯದನೆ
ಬ್ರಹ್ಮಾಂಡ ಬಹಿರಂತರ್ವ್ಯಾಪ್ತ ಸರ್ವೇಶ ಪ

ಉದಿತಭಾಸ್ಕರ ನಿಭ ಸ್ವಕಾಂತಿಯಲಿ ಜ್ವಲಿಸುತಿ
ಸುದರ್ಶನ ಗದಾ ಜ್ಞಾನಪ್ರದ ದರಾ ಹಸ್ತ
ಪದುಮೆ ಸಹ ಅಜುವಿಷ್ಣು ಮಂತವ್ಯ ಸರ್ವಸ್ಥ
ಶೃತಿವೇದ್ಯ ಅಜಸೇವ್ಯ ಪ್ರಣವ ಪ್ರತಿಪಾದ್ಯ ೧

ಸರ್ವ ಸೃಷ್ಟಿ ಸ್ಥಿತಿ ಲಯ ನಿಯಮನ ಜ್ಞಾನ
ಆವೃತಿ ಬಂಧ ಮೋಕ್ಷಕೆ ಮುಖ್ಯಕರ್ತ
ಸುವರ್ಣಾಂಡವ ಪಡೆದು ವ್ಯಾಪಿಸಿ ಅದರೊಳು
ಅವತಾರಗಳ ಮಾಡಿ ಸಜ್ಜನರ ಕಾಯುವಿ ೨

ವೇದೋದ್ಧರ ಮತ್ಸ್ಯ ಸತ್ಯವ್ರತನಿಗೆ ಒಲಿದಿ
ಮಂದರವ ಪಾಲ್ಗಡಲಲಿ ಪೊತ್ತ ಕೂರ್ಮ
ಇಂದಿರಾಪತಿ ಅಜಿತ ಮೋಹಿನಿ ಧನ್ವಂತರಿ
ದೈತ್ಯಹರ ಭೂಮಿ ಉದ್ಧರ ಭೂವರಾಹ ೩

ಪಾಪಘ್ನ ಪ್ರಹ್ಲಾದ ರಕ್ಷಕ ನೃಸಿಂಹನೇ
ವಿಷ್ಟ ವಾಮನ ತ್ರಿವೃತ್ ಗೋಪಬಾಲ
ಸುಪವಿತ್ರ ಜಮದಗ್ನಿಸುತ ಪರುಶುರಾಮ
ಪ್ರಭಂಜನ ಸೇವ್ಯ ಶ್ರೀರಾಮಚಂದ್ರ ೪

ಅಜ್ಞಾನ ಹೃತ್ತಿಮಿರ ಸೂರ್ಯ ವೇದವ್ಯಾಸ
ನಿಜಭಕ್ತಜನ ಪಾಂಡವಪ್ರಿಯ ಕೃಷ್ಣ
ದುರ್ಜನ ವಿಮೋಹಕ ಸುರಸುಬೋಧಕ ಬುದ್ಧ
ಸುಜನವಂದ್ಯನೆ ಧರ್ಮಸ್ಥಾಪಕನೆ ಕಲ್ಕಿ ೫

ಷಡ್ರೂಪ ಹಯವದನ ಮಹಿದಾಸ ತಾಪಸ
ಕ್ಷಿಪ್ರ ವಸುಪ್ರದ ಶ್ರೀಕರ ಯಜ್ಞ ಕಪಿಲ
ಅತ್ರಿಸುತ ವೃಷಭಾದಿ ಅನಂತಸುಖ ಚಿದ್ರೂಪ
ಅಪ್ರತಿ ಮಹೈಶ್ವರ್ಯ ಪೂರ್ಣ ಏಕಾತ್ಮ ೬

ನಿರ್ವ್ಯಾಜ ಭಕ್ತಾಗ್ರಣಿಯು ಪ್ರಹ್ಲಾದನು
ಆ ಆರ್ಯನ ಸುತ ವಿರೋಚನನೆಂಬುವನು
ಆ ದೈತ್ಯನ ಪುತ್ರ ಬಲಿಮಹಾರಾಜನು
ಆಧಿಕ್ಯ ಹೊಂದಿದನು ಬಲಪೌರುಷದಲಿ ೭

ದೈತ್ಯೇಯ ಬಲಿರಾಜ ಬಲಉನ್ನಾಹದಿಂ
ಜಗತ್ರಯವ ತನ್ನ ವಶ ಮಾಡಿಕೊಂಡ

ಇಂದ್ರಾದಿಗಳು ಐಶ್ವರ್ಯ ಶ್ರೀಯಶಸ್ಥಾನ
ವಿದುರರಾಗಲು ದೇವಮಾತೆ ಯೋಚಿಸಿದಳು ೮

ಸರ್ವಭೂತ ಗುಹಾವಾಸ ವಾಸುದೇವ ಜಗದ್ಗುರು
ಸರ್ವ ಜಗತ್ಪತಿ ಕೇಶವನಿಗೆ ಪ್ರಿಯವಾದ
ಪಯೋವ್ರತವ ಭಕ್ತಿಯಿಂದಲಿ ಮಾಡುವುದೆಂದು
ದೇವಮಾತೆಗೆ ಪತಿ ಕಶ್ಯಪ ಪೇಳಿದನು ೯

ಆದಿವರಾಹನೇ ಮಹಾಪುರುಷ ಸರ್ವ –
ಭೂತ ನಿವಾಸನೇ ವಾಸುದೇವ
ಸದಾ ಸರ್ವ ಸಚ್ಛಕ್ತಿ ಪರಿಪೂರ್ಣ ಸರ್ವ
ವಿದ್ಯಾಧಿಪತಿ ಶುಭಮಂಗಳ ಸ್ವರೂಪ ೧೦

ಸರ್ವ ಜಗಜ್ಜನ್ಮಾದಿಕರ್ತನೇ ಜಗದೀಶ
ಸರ್ವ ಜಗತ್ರಾಣ ಚೇಷ್ಟಕ ನಿಯಾಮಕನೇ
ವಿಶ್ವತೋ ಮುಖ ಆದಿದೇವ ನಿನಗೆ ನಮೋ
ಶ್ರೀವರ ನಾರಾಯಣ ನರಹರೇ ಸ್ವಾಮಿ ೧೧

ಮರಗದ ಶ್ಯಾಮ ಅನಿರುದ್ಧ ಪ್ರದ್ಯುಮ್ನ
ಸಿರಿಕಾಂತ ಸರ್ವೇಶ ಕೇಶವ ನಮಸ್ತೆ
ಪುರುಟಾಂಬರಧಾರಿ ಸುರವರೇಣ್ಯನೇ ನಮೋ
ಸರ್ವ ವರದನೇ ಶ್ರೀದ ಕರುಣಾಂಬುನಿಧಿಯೇ ೧೨

ಅದಿತಿ ದೇವಿಯು ಪಯೋವ್ರತವ ಮಾಡಿದಳು
ವಿಧಿಪೂರ್ವಕ ಭಕ್ತಿ ಶ್ರದ್ಧೆಯಿಂದ
ಆದಿ ಪೂರುಷ ಭಗವಂತ ಶಂಖ ಚಕ್ರ
ಗದಾಧರನೇ ಅದಿತಿಗೆ ಪ್ರತ್ಯಕ್ಷನಾದಿ ೧೩

ಕಣ್ಣೆದುರಿಗೆ ನಿಂತ ನಿನ್ನ ನೋಡಿ ಅದಿತಿ
ಆನಂದ ಬಾಷ್ಪವ ಸುರಿಸುತ್ತ ದೀರ್ಘ
ಪ್ರಣಾಮವ ಮಾಡಿದಳು ಗದ್ಗದ ಕಂಠದಿಂ
ನಿನ್ನ ಸ್ತುತಿಸಿದಳು ಆ ದೇವಮಾತೆ ೧೪

ತೀರ್ಥಪಾದನೇ ತೀರ್ಥಶ್ರವ ಶ್ರವಣ ಮಂಗಳ
ನಾಮಧೇಯನೇ ಯಜ್ಞೇಶ ಯಜ್ಞಪುರುಷ
ಅಚ್ಯುತನೇ ರಕ್ಷಿಸುವಿ ಪ್ರಪನ್ನಪಾಲಕ ನಮೋ
ಶ್ರೀದ ಶ್ರೀಪತೇ ವಿಷ್ಣೋ ದೀನನಾಥ ೧೫

ಅಖಂಡೈಕ ಸಾರಾತ್ಮ ವಿಶ್ವವ್ಯಾಪಕವಿಶ್ವ
ಅಕಳಂಕ ಸರ್ವೋರು ಸಚ್ಛಕ್ತಿಪೂರ್ಣ
ಏಕಾತ್ಮ ಸರ್ವಜ್ಞ ಸುಖಜ್ಞಾನಪ್ರದ ಭೂಮನ್
ನಿಖಿಳಗುಣ ಐಶ್ವರ್ಯಪೂರ್ಣ ಹರೇ ಶ್ರೀಶ ೧೬

ಅದಿತಿಯ ವ್ರತಾಚರಣೆ ಮೆಚ್ಚಿ ಕಮಲಾಕ್ಷ ನೀ
ಅದಿತಿಯ ಸುತನೆನಿಸಿ ಭವಿಸುವಿ ಎಂದಿ
ಮುದದಿ ಈ ರಹಸ್ಯವ ಪತಿಗೆ ಪೇಳ್ದಳು ಅದಿತಿ
ಆ ದಂಪತಿ ಕೂಡಿ ನಿರೀಕ್ಷಿಸಿದರು ನಿನ್ನ ೧೭

ಜಗನ್ನಿವಾಸನೆ ನೀನು ದೇವಮಾತೆಯೊಳು
ಝಗಝಗಿಸಿಪೊಳೆದಿಯೋ ಉರು ಮಹಾತೇಜ
ಪೊಗಳಲಳವೇ ನಿನ್ನ ಲೀಲಾವತಾರಗಳ
ಅಗಣಿತ ಮಹಿಮೆಗಳ ದೇವ ದೇವೇಶ ೧೮

ಸನಾತನನೇ ಅನಘನೇ ಅಜನೇ ಭಗವಂತನೇ
ನೀನು ಅದಿತಿಯಲಿ ಅವತರಿಪುದರಿತು
ವನರುಹಾಸನ ಹಿರಣ್ಯಗರ್ಭನು ಬಂದು
ಶ್ರೀನಿಧಿಯೇ ಶ್ರೀಶ ನಿನ್ನನ್ನು ಸ್ತುತಿಸಿದನು ೧೯

ಜಯೋರುಗಾಯ ಭಗವನ್ ಉರುಕ್ರಮ ನಮೋಸ್ತುತೇ
ತೋಯಜಾಸನ ಹೀಗೆ ಇನ್ನೂ ಬಹುವಿಧದಿ ಸ್ತುತಿಸಿದ
ತೋಯಜಾಕ್ಷ ಶಿಪಿವಿಷ್ಟ ವಿಷ್ಣು ಸರ್ವೋತ್ತಮ
ಅಚ್ಯುತಾನಂತೋರು ಶಕ್ತಿಮಯ ನಿನ್ನ ೨೦

ಪದುಮಭವ ಸನ್ನುತನೇ ಆನಂದಮಯ ನೀನು
ಪ್ರಾದುರ್ಭವಿಸಿದಿ ಅದಿತಿ ದೇವಮಾತೆಯಲಿ

ಚತುರ್ಭುಜವು ಶಂಖಗದಾ ಅಬ್ಜ ಚಕ್ರ
ಪೀತ ಕೆಂಪು ವಸನವನ್ನ ಧರಿಸಿದ್ದಿ ೨೧

ಅನುಪಮ ಸುಸೌಂದರ್ಯ ಚಾರ್ವಾಂಗ ಕಾಂತಿಯು
ನಳಿನಾಯತೇಕ್ಷಣ ಮಕರಕುಂಡಲವು
ಆನಂದ ಸುಪ್ರಚುರ ವದನಾರವಿಂದವು
ಏನೆಂಬೆ ಗಂಭೀರವಕ್ಷ ಶ್ರೀವಕ್ಷ ೨೨

ವನಮಾಲೆ ಸುಸ್ಫುರತ್ ಕಿರೀಟಾಂಗದಾದಿಗಳು
ವನಜಾಸನಾಶ್ರಿತ ಕೌಸ್ತುಭಮಣಿಯು
ಸುನೂಪುರ ತೊಟ್ಟ ಶುಭಮಂಗಳಪಾದ
ನಿನ್ನ ಪ್ರಾದುರ್ಭಾವ ವರ್ಣಿಸಲು ಅರಿಯೆ ೨೩

ಸೌರ ಶ್ರಾವಣ ಸಿಂಹ ಚಾಂದ್ರ ಭಾದ್ರಪದ
ನೀ ಪ್ರಾದುರ್ಭವಿಸಿದ್ದು ಸಿತ ಶ್ರಾವಣ ದ್ವಾದಶಿ
ಚಿತ್ರ ವಾದ್ಯಗಳ ಘೋಷ ಸಿದ್ಧಿ ವಿದ್ಯಾಧರರು
ಸುರಗಾಯಕರುಗಳ ಗಾಯನ ನೃತ್ಯ ೨೪

ಜಯ ಜಯತು ಜಯ ಜಯ ವಾಮನ ವಟುರೂಪ
ಜಯ ಜಯತು ಶಾಶ್ವತ ಸರ್ವಸ್ಥ ವಿಷ್ಣೋ
ಜಯ ಜಯತು ಸರ್ವ ಜಗಜ್ಜನ್ಮಾದಿಕರ್ತ
ಜಯ ಜಯ ಪರಮ ಪೂರ್ಣೈಶ್ವರ್ಯ ಜಯತು ೨೫

ಸುಂದರ ವಟು ವಾಮನ ನಿನ್ನ ನೋಡಿ
ಮಂದಜಾಸನ ಮಹಾ ಋಷಿವರ್ಯರು ಬಹು
ಆನಂದಭರಿತರು ಆಗಿ ಸಂಸ್ಕಾರ
ಅಂದದಿ ಚರಿಸಿದರು ವೈದೀಕ ರೀತಿಯಲಿ ೨೬

ಬ್ರಹ್ಮಾದಿದೇವರು ಮಹಾಋಷಿಗಳು ಪರ –
ಬ್ರಹ್ಮ ವಾಮನ ನಿನಗೆ ಉಪನಯನರೂಪ
ಮಹಾಪೂಜೆ ಚರಿಸಿದರು ಮುದಭಕ್ತಿಯಿಂದಲಿ
ಮಹಾರ್ಹನೇ ನಿನಗಿದು ಅವತಾರ ಲೀಲ ೨೭

ದೇವವರೇಣ್ಯ ಬ್ರಹ್ಮಣ್ಯದೇವನೇ ನಿನಗೆ
ದೇವತಾವೃಂದವು ನೆರದಿದ್ದ ಮುನಿಗಳು
ಸಾವಿತ್ರೀಂ ಸವಿತಾ ಬ್ರವೀತ್ ಬೃಹಸ್ಪತಿ ಬ್ರಹ್ಮಸೂತ್ರಂ
ಈ ವಿಧದಿ ಮುದಮನದಿ ಅರ್ಪಿಸಿದರು ೨೮

ಕಮಂಡಲ ವೇದಗರ್ಭನು, ಕೃಷ್ಣಾಜಿನ
ಭೂಮಿ, ದಂಡ, ಸೋಮ, ಕುಶ ಸಪ್ತ ಋಷಿಗಳು
ಸುಮೇಖಳ ಕಶ್ಯಪ, ಕೌಪೀನ ಅದಿತಿಯು
ಉಮಾ ಭಗವತಿಬಿಕ್ಷಾಪಾತ್ರೆ ವಿತ್ತಪನು ೨೯

ಈ ರೀತಿ ಮೇಖಳ ಸೂತ್ರ ಆಚ್ಛಾದನ
ಛತ್ರ ಕೃಷ್ಣಾಜಿನ ಕಮಂಡಲು ದಂಡ
ಪಾತ್ರೆ ಅಕ್ಷಮಾಲಾದಿ ವಸ್ತುಗಳು ದರ್ಭೆ
ಪರಿಪರಿ ದೇವತೆಗಳು ಅರ್ಪಿಸಿದರು ೩೦

ಮಹಾಪೂರುಷ ಶಿಪಿವಿಷ್ಟ ವಾಮನ ವಿಷ್ಣೋ
ಮಹಾದುರ್ಗ ಭೂ ಶ್ರೀಶ ನಿನ್ನ ಉಪನಯನ
ಮಹೋತ್ಸವದ ವೈಭವವು ಹೋಮ ಪೂಜಾದಿಗಳು
ಮಹಿಯಲ್ಲಿ ಅಸದೃಶವು ಸರ್ವಕಾಲದಲು ೩೧

ಸೂತ್ರ ಮೇಖಳ ಕೌಪೀನ ಆಚ್ಛಾದನ
ಛತ್ರಮಾಲಾ ಕಮಂಡಲು ದಂಡಹಸ್ತ
ಚಂದ್ರಾರ್ಕ ಕೋಟ್ಯಮಿತ ಜ್ಯೋತಿರ್ಮಯ ವಟುರೂಪ
ಶ್ರೀರಮಣ ಪದ್ಮಭವ ರುದ್ರಾದಿವಂದ್ಯ ೩೨

ಮಧ್ವಸ್ಥ ಪರ್ವಸ್ಥ ಮತ್‌ಸ್ಥ ವಿಧಿತಾತ
ಜ್ಯೋತಿರ್ಮಯ ತ್ರಿವೃನ್ನಾಮ ವಾಮನ ಮಂತವ್ಯ
ಮೋದಮಯ ಶ್ರೀಯುಕ್ ಪ್ರಸನ್ನ ಶ್ರೀನಿವಾಸ
ಮುದಜ್ಞಾನಧನ ಆಯುರ್ಭಾಗ್ಯದನೇ ಶರಣು ೩೩

–ಇತಿ ಪ್ರಥಮಾಧ್ಯಾಯ ಸಂಪೂರ್ಣಂ –

ದ್ವಿತೀಯ ಅಧ್ಯಾಯ

ದಾನಪ್ರಕರಣ ಸಾರ

ಭೂಮಾದಿ ಗುಣಸಿಧಿಯೇ ಅನಘ ಮಂಗಳರೂಪ
ವಾಮನ ಸುಸೌಂದರ್ಯಸಾರ ಲಕ್ಷ್ಮೀಶ
ಬ್ರಹ್ಮೇಶ ಮುಖವಂದ್ಯ ಶರಣು ಸೌಭಾಗ್ಯದನೆ
ಬ್ರಹ್ಮಾಂಡ ಬಹಿರಂತರ್ವ್ಯಾಪ್ತ ಸರ್ವೇಶ ಪ

ಸರಸಿಜೋದ್ಭವ ಸುರವೃಂದ ಮಹಾಋಷಿಗಳು
ಮರೀಚಿಸುತ ಮೊದಲಾದ ಸುಧೀಗಳು ನಿನಗೆ
ಚರಿಸಿದ ಉಪನಯನ ರೂಪಮಹೋತ್ಸವವ
ಸ್ವೀಕರಿಸಿ ಜ್ವಲಿಸಿದಿ ಬ್ರಹ್ಮಣ್ಯದೇವ ೧

ನೋಡಿದ ಮಾತ್ರದಲೆ ಸುಜನ ವಿಶ್ವಾಸಿಗಳು
ಮಾಡಿದ ಪಾಪ ಪರಿಹರಿಪ ನರ್ಮದೆಯ
ದಡ ಉತ್ತರದಲಿ ಯಜ್ಞಶಾಲೆ ಕಟ್ಟಿ
ದೊಡ್ಡ ಕ್ರತು ಮಾಡುತ್ತಿದ್ದನು ಬಲಿರಾಜ ೨

ಮೌಂಜಿ ಮೇಖಳ ಸೂತ್ರದಿಂದ ಬೆಳಗುತ್ತ
ಸಜಲ ಕಮಂಡಲು ಸುದಂಡ ಛತ್ರ
ಪ್ರಜ್ವಲಿಪ ಚಿನ್ಮಯ ಜಟಿಲ ವಾಮನ ವಿಪ್ರ
ಯಜ್ಞಶಾಲೆಯೊಳು ಪ್ರವೇಶ ಮಾಡಿದಿಯೋ ೩

ಜ್ವಲಿಸುವ ಸ್ವಕಾಂತಿಯುಕ್ ಮಾಯಾ ಮಾಣವಕ
ಬಾಲ ಸುಂದರ ಬ್ರಹ್ಮಚಾರಿ ಹರಿ ನಿನ್ನ
ಬಲಿರಾಜ ಆಚಾರ್ಯ ಶುಕ್ರಾದಿಗಳು ನೋಡಿ
ಬಲುಹರುಷದಲಿ ಎದ್ದು ಸ್ವಾಗತಮಾಡಿದರು ೪

ಭಗವಂತ ವಾಮನ ನಿನ್ನ ಪಾದದಿ ಬಲಿ
ಬಾಗಿ ನಮಿಸಿ ಸ್ವಾಗತಂ ತೇ ನಮಸ್ತುಭ್ಯಂ

ಹೀಗೆಂದು ತನ್ನ ಪಿತೃಗಳು ತೃಪ್ತರಾದರು
ತನ್ನ ಕುಲ ಪಾವಿತವಾಯ್ತೆಂದು ಪೇಳ್ದ ೫

ವನಜಜಾಂಡದ ಒಡೆಯ ರಾಜರಾಜೇಶ್ವರನೇ
ನಿನ್ನ ಮುಂದೆ ಕರ ಮುಗಿದು ಬಲಿರಾಜ
ಧೇನು ಕಾಂಚನ ಗ್ರಾಮ ವಿಪ್ರ ಕನ್ಯಾದಿಗಳು
ಏನು ನೀ ವಾಂಛಿಸಿದರೂ ಕೊಳ್ಳಬಹುದೆಂದ ೬

ಸುಗಮ ಸುಹೃತ್ ಧರ್ಮಯುಕ್ ಈ ಮಾತಲ್ಲಿ
ಭಗವಂತ ನೀ ಪ್ರೀತನಾದದ್ದು ಪ್ರಕಟಿಸಿ
ಲೋಕದಲಿ ಪ್ರಖ್ಯಾತ ಬಲಿಯ ಕುಲಕೀರ್ತಿಯ
ಪೊಗಳಿದಿಯೋ ಬ್ರಾಹ್ಮಣ ಮಹೇಜ್ಯ ಪರಮೇಶ ೭

ಆಕಾಶದಲಿ ಆಹ್ಲಾದಕರ ಉಡುಪನು
ಪ್ರಕಾಶಿಸುವಂತೆ ಪ್ರಹ್ಲಾದನ ಯಶಸ್ಸು
ಉತ್ಕೃಷ್ಟವಾದದ್ದು ವ್ಯಾಪಿಸಿ ಜಗತ್ತಲ್ಲಿ
ಪ್ರಕಾಶಿಸುತೆ ಆ ಕುಲೋತ್ಪನ್ನನು ಬಲಿಯು ೮

ಮಹಾ ಗದಾಯುಧದಾರಿ ದಿಗ್ವಿಜಯಿ ಶೂರನು
ಆ ಹಿರಣ್ಯಾಕ್ಷನ ಅಣ್ಣನು ಆದ
ಪ್ರಹ್ಲಾದಪಿತ ಹಿರಣ್ಯಕಶಿಪು ವೀರನು
ಮಹೀಯಲ್ಲಿ ಖ್ಯಾತವು ಈ ದೈತ್ಯ ಕುಲವು ೯

ಆ ಜಗತ್ ಪ್ರಖ್ಯಾತ ಪ್ರಹ್ಲಾದನಸುತ
ದ್ವಿಜವತ್ಸಲ ತನ್ನ ಆಯುಷ್ಯವ
ದ್ವಿಜವೇಷದಿ ಬಂದ ಸುರರಿಗೆ ಕೊಟ್ಟಿದ್ದು
ಮೂರ್ಜಗ ಅರಿವುದು ಬಲಿ ಆ ಕುಲೀನ ೧೦

ಇಂಥ ಕುಲದಲಿ ಬಂದ ಪ್ರಹ್ಲಾದ ಪೌತ್ರ
ಈ ಧರ್ಮವಂತ ಬಲಿ ಎಂದು ನೀ ಪೇಳಿ
ಪದಾನಿ ತ್ರೀಣಿ ದೈತ್ಯೇಂದ್ರ ಸಂಹಿತಾನಿ
ಪದಾಮಮ ಎಂದು ಭೂಮಿ ಯಾಚಿಸಿದಿ ೧೧

ನಳಿನಜಾಂಡದ ದೊರೆ ಹರಿ ನಿನ್ನ ಮಾಯೆಯಿಂ
ಬಾಲಿಶಮತಿಯೇ ಮೂರಡಿ ಯಾಕೆ ಕೇಳುತಿ ಎಂದ
ಬಲಿಯು ತನ್ನಲಿ ಕೊಂಡವ ಪೂರ್ಣನಾಗುವ
ಮತ್ತೆಲ್ಲೂ ಪುನರ್ಯಾಚಿಸನು ಎಂದು ಪೇಳಿದನು ೧೨

ಕರ್ಮಜ ದೇವತಾ ಕಕ್ಷದವ ಬಲಿರಾಜ
ಕರ್ಮ ನಿಮಿತ್ತದಿ ಸಂಸಾರ ಸುಳಿಯ
ಊರ್ಮಿಗಳಿಗೊಳಗಾದ ಭಕ್ತನಲಿ ಕರುಣಿಸಿದಿ
ಧರ್ಮನೀತಿ ಪೇಳಿದಿ ಶ್ರೀಶ ಮುಕುಂದ ೧೩

ಇಂದ್ರಿಯ ಅಭಿಲಾಷೆ ಜಯಿಸದವನ ಆಶೆಗೆ
ಮಿತಿಯಿಲ್ಲ ಬೆಳೆಯುವುದು ಮೇಲು ಮೇಲು
ಯದೃಚ್ಛಾಲಾಭ ಸಂತುಷ್ಟ ವಿಪ್ರನತೇಜಸ್ಸು
ವರ್ಧಿಸುವುದು ಮತ್ತು ಸುಖವೀವುದೆಂದಿ ೧೪

ಈ ರೀತಿ ಬಲಿರಾಜನಿಗೆ ಇನ್ನೂ ಪೇಳಿ
ಮೂರಡಿ ಮಾತ್ರವೇ ಕೊಳ್ಳುವಿ ಎನಲು
ಧಾರೆ ಎರೆದು ಕೊಡಲು ಬಲಿಯು ನಿಶ್ಚೈಸಲು
ಅರಿತು ಶಿಷ್ಯನ ಎಚ್ಚರಿಸಿದ ಶುಕ್ರ ೧೫

ವೇದ ವೇದಾಂತ ಕೋವಿದ ಶುಕ್ರಾಚಾರ್ಯರು
ಬುದ್ಧಿ ವಿದ್ಯಾ ನಿಪುಣರು ಕುಶಲ ಕವಿವರರು
ದೈತ್ಯರಿಗೆ ಕುಲಗುರು ಶ್ರೀದ ಶ್ರೀಹರಿ ನಿನ್ನ
ಭಕ್ತವರ್ಯರು ಎಂದು ನಮಿಪೆ ಸಂತೈಸು ೧೬

ಶಿಷ್ಯ ವೈರೋಚನನಿಗೆ ಪೇಳಿದನು ಶುಕ್ರ
ಶ್ರೀಶ ಭಗವಂತನು ವಿಷ್ಣು ಅವ್ಯಯನೆ
ಕಶ್ಯಪ ಅದಿತಿಯಲಿ ಭವಿಸಿ ದೇವತೆಗಳ
ಕಾರ್ಯಸಾಧನಕಾಗಿ ಬಂದಿರುವ ಎಂದ ೧೭

ಮತ್ತು ಪೇಳಿದ ಈ ದಾನ ಕೊಡುವುದರಿಂದ
ದೈತ್ಯರಿಗೆ ಅಕ್ಷೇಮ ಬಲಿಯ ಶ್ರೀ ಸ್ಥಾನ ಯಶಸ್ಸು

ಮುಕ್ತಿ ಯೋಗ್ಯರು ತಿಳಿವ ಬ್ರಹ್ಮ ವಿದ್ಯೆಯ ಕಲಿಯೆ
ಯತ್ನಿಸುವುದು ಸುರರು ನಿನ್ನಲ್ಲಿ ಪೇಳಿದರು ೧೦

ಕಲಿಯುಗದಿ ಈ ತಮೋಯೋಗ್ಯ ದೈತ್ಯರಿಗೆ
ಬೆಳೆಯುವುದು ಮೋಹವು ದ್ವೇಷ ಪರಿಪಾಕ
ಮಿಳಿತವಾಗಲಿ ಕೂಡದು ಮುಕ್ತಿ ಯೋಗ್ಯರ ಸಹ
ಒಳ್ಳೇ ಮುತ್ತಿನ ಸರದೋಳ್ ಮುಳ್ಳ ಬೀಜಗಳೇ ? ೧೧

ಆ ತ್ರಿಪುರ ದೈತ್ಯರ ಪ್ರಮುಖನೂ ತಮೋಯೋಗ್ಯ
ಧಾತ್ರಿಯಲಿ ಸೌದ್ಧೋದನ ಜಿನನೆಂದು
ಪರಿವಾರ ಸಹ ಜನಿಸಿ ಮುಕ್ತಿಯೋಗ್ಯರ ತೆರದಿ
ಚರಿಸಿದರು ಸ್ವಸ್ವ ಯೋಗ್ಯತೆ ಅತಿಕ್ರಮಿಸಿ ೧೨

ದೇವವೃಂದದ ಪ್ರಾರ್ಥನೆ ಅರಿಕೆಯನು ಕೇಳಿ
ದೇವವರೇಣ್ಯಾ ನೀ ಅಭಯವನಿತ್ತಿ
ದಿವ್ಯ ಶಿಶುರೂಪವ ಪ್ರಕಟಿಸಿ ಆಗಲೇ
ತ್ವರಿತ ಪೋದೆಯೋ ಆ ಜಿನನ ಮಂದಿರಕೆ ೧೩

ಆಗಲೇ ಜಿನನಿಗೆ ಮಗು ಒಂದು ಹುಟ್ಟಿತ್ತು
ಪೋಗಿ ನೀ ಆ ಮಗುವ ಮರೆಯಾಗಿಸಲು
ಬೇಗನೆ ತೊಟ್ಟಿಲಲಿ ಮಲಗಿದಿಯೋ ವಿಭುವೇ
ಜಗನ್ಮೋಹನ ಶಿಶುರೂಪ ಚಿನ್ಮಾತ್ರ ೧೪

ಇದನ್ನರಿಯದೇ ಜಿನಾದಿಗಳು ನಿನ್ನನ್ನೇ
ಜಾತವಾದ ತಮ್ಮ ಮಗುವೆಂದು ನೆನೆದು
ಬಂಧು ಮಿತ್ರರ ಗುಂಪು ಸ್ತ್ರೀಯರೂ ಪುರುಷರೂ
ಮುದದಿ ಕೊಂಡಾಡಿದರು ಪುತ್ರೋತ್ಸವವ ೧೫

ಕದಳೀ ತೆಂಗು ಪೂಗಿ ಮಾವು ತೋರಣವು
ವಾದ್ಯಂಗಳ ಅರ್ಭಟ ವೇದ ಘೋಷಗಳು

ದೈತ್ಯ ವಿದ್ವಾಂಸರ ವಾದ ಮೀಮಾಂಸವು
ಸುಧ್ವನಿಯಲಿ ಪಕಪಕಾ ಎಂದು ನಕ್ಕಿ ನೀನು ೧೬

ಆಶ್ಚರ್ಯ ಏನಿದು ಹಸಿಮಗು ನಗುತಿದೆ
ಹೇ ಚಿನ್ನ ನೀನ್ಯಾಕೆ ನಗುತಿ ಎಂದು ಕೇಳೆ
ಅಚ್ಚ ವಿಜ್ಞಾನಮಯ ಬುದ್ಧ ನಿನ್ನ ಹೆಸರೆಂದು
ಮೆಚ್ಚಲಾರೆನು ವೈದಿಕಕರ್ಮ ಎಂದಿ ೧೭

ವೇದ ಅಪ್ರಾಮಣ್ಯ ಬೋಧಕವೆಂದು ತೋರುವ
ಬೌದ್ಧಮತ ಪೇಳಿದಿ ದೈತ್ಯರ ಮೋಹಿಸಲು
ಬೋಧಿಸಿದ ಮೋಹಕ ಮಾತು ಜಿನಾದಿಗಳು
ಆದರಿಸದಿರೆ ಹರೇ ನೀ ಸುರರನ್ನ ಕರೆದಿ ೧೮

ಪ್ರತ್ಯಗಾತ್ಮನೇ ಈಶ ಸರ್ವಪ್ರೇರಕ ನೀನು
ವೇದೋಕ್ತ ಸುರರನ್ನ ಸ್ಮರಿಸಿದಾಕ್ಷಣವೇ
ಬಂದರು ಆ ಜಿನಾದಿಗಳಿಗೆ ಕಾಣಿಸುತ
ಯುದ್ಧಕ್ಕೆ ನಿಂತರು ನೀನು ಪ್ರೇರಿಸಲು ೧೯

ವೇದ ವಿರುದ್ಧ ಮಾತುಗಳಾಡುತ ನೀನು
ವೇದ ಅಪ್ರಾಮಣ್ಯ ವಾದಿಸುತ್ತಿ
ಸದೆದು ಹಾಕುವೆವು ಎಂದು ಕೂಗುತ್ತ
ಆಯುಧಗಳ ಪ್ರಯೋಗಿಸಿದರು ವಿಡಂಬನದಿ ೨೦

ಮೋದಮಯ ಶಿಶುರೂಪ ಅಚ್ಯುತನೇ ನೀನು
ಆ ದೇವತೆಗಳು ಪ್ರಯೋಗಿಸಿದ ಆಯುಧ
ಒಂದನ್ನೂ ಬಿಡದೇ ನುಂಗಿ ನಗುತ ಎಲ್ಲಿ
ಮಧುಸೂಧನ ವಿಷ್ಣು ಬರಲೀ ಅವ ಎಂದಿ ೨೧

ಲೀಲಾ ವಿನೋದದಿ ಮತ್ತೊಂದು ರೂಪದಿ ನೀ
ಪೊಳೆವ ಚಕ್ರವ ಪಿಡಿದು ಬಂದು ನಿಲ್ಲೆ
ಸೊಲ್ಲು ಹೆಚ್ಚಾಡದೆ ಚಕ್ರವ ಕಿತ್ತುಗೊಂಡು
ಒಳ್ಳೆ ಆಸನವೆಂದು ಅದರಮೇಲ್ ಕುಳಿತಿ ೨೨

ಸ್ವತಂತ್ರ ಪರಮಾತ್ಮ ನೀ ಸ್ವಸ್ವಯೋಗ್ಯ ಸಾಧನ
ಪ್ರವರ್ತಕ ದೈತ್ಯರ ಮೋಹಕ್ಕೆ ಈ ಲೀಲೆ
ಸಾಧು ನೀ ಪೇಳಿದ ಶಾಸ್ತ್ರ ಎನ್ನುತ ನಮಿಸಿ
ಪೋದರು ಸುರರು ತಮ್ಮ ತಮ್ಮ ಸ್ಥಳಕೆ ೨೩

ಎಲ್ಲೂ ಕಂಡಿಲ್ಲವು ಇಂಥಾ ಮಹಾತ್ಮನ
ಎಲ್ಲ ದೇವತೆಗಳು ಸೋತು ಓಡಿ ಹೋದರು
ಬಲಿಷ್ಟ ತತ್ವವು ಶಿಶುರೂಪ ಬುದ್ಧನದೇ
ಎಲ್ಲ ದೈತ್ಯರು ಹೀಗೆ ನಿಶ್ಚೈಯಿಸಿಕೊಂಡರು ೨೪

ಅಭಾವ ಕ್ಷಣಿಕ ಶೂನ್ಯವಾದ ಮೋಹಿತರಾಗಿ
ಸ್ವಭಾವ ಯೋಗ್ಯತೆಯಂತೆ ವೈದಿಕವ ತೊರೆದು
ಹೇ ಬುದ್ಧ ಆ ಜಿನಾದಿ ದೈತ್ಯರ ಸಮೂಹವು
ತಬ್ಬಿಕೊಂಡರು ತಮಸ್ ಸಾಧನ ಮತಿಯ ೨೫

ಜಿನಾದಿ ದೈತ್ಯರು ಮೇಲ್ವಾರಿ ಅರ್ಥವ
ಮನದಲ್ಲಿ ನಿಶ್ಚಯಿಸಿ ಮೋಹ ವಶರಾಗೇ
ನಿನ್ನಲ್ಲಿ ಸ್ವರೂಪತಹ ಭಕ್ತಿಯುತ ಸುರರು
ಧನ್ಯರಾದರು ಕೇಳಿ ಯಥಾರ್ಥ ತಿಳಕೊಂಡು ೨೬

ಏನೆಂದು ವರ್ಣಿಪೆ ಪ್ರಶಾಂತ ವಿದ್ಯೆಯ ಸೊಬಗು
ಆನಂದ ಸೌಭಾಗ್ಯ ಸಮೃದ್ಧಿ ಸಿದ್ಧಿಪುದು
ಮನ ಪುಳಕವಾಗುತ್ತೆ ಜ್ಞಾನ ತೇಜಃಪುಂಜ
ನಿನ್ನ ದಯದಿಂದ ಸುಖ ಅನುಭವಕೆ ಸುಲಭ ೨೭

ಅದೋಷನು ನೀನು ದೋಷ ಅಭಾವವಾನ್
ಸದಾ ನೀನು ಭಿನ್ನನು ಜಡ ಜೀವರಿಂದ
ಮೋದಮಯ ಅನಂತಕಲ್ಯಾಣಗುಣಪೂರ್ಣ ನೀ
ಆದುದರಿಂ ಅ ಎಂದು ನೀನೇವೇ ಜ್ಞೇಯ ೨೮

ಭವ್ಯವಾಗಿರುವುದು 'ಅ' ಯಿಂದ ಜಗತ್ತು
ಭವ್ಯ ಎಂದರೆ ಉತ್ಪಾದ್ಯ ಎಂಬುವುದು

ಅ ಎಂಬ ನಿನ್ನಿಂದ ಉತ್ಪಾದ್ಯ ಜಗತ್ತನ್ನ
ಅಭಾವವೆಂದಿ ವಿಭುವೇ ಸತ್ಯಜ್ಞಾನ ೨೯

ಕ್ಷಣ ಕ್ಷಣಾದಿ ನಾಶವು ಕಾಲ ಅವಯವ ಕ್ಷಣಕ್ಕೆ
ಕ್ಷೋಣಿಯು ಸ್ಥಿರವಾಗಿ ಇರುತಿದೆ ಅದರೂ
ಕ್ಷಣ ಸ್ಥಾಯಿಯಾಗಿರುವ ಕ್ಷಣದ ಸಂಬಂಧದಿ ಜಗತ್
ಕ್ಷಣಿಕವು ಎಂದು ನೀ ಪೇಳಿದಿಯೋ ಧೀರ ೩೦

ಶಂ ಎಂದರೆ ಸುಖವು ಉ ಉತ್ತಮತ್ವವು
ಶಂ ಸಹ ಉ ಸೇರಿ ಶೂ ಆಯಿತು
ಶೂ ಎಂಬ ಸುಖರೂಪ ಅನುತ್ತಮೋತ್ತಮ ನೀನೇ
ಶೂ ವಾಚ್ಯ ನೀನೇವೇ ಅನ್ಯರು ಅಲ್ಲ ೩೧

ಸ್ವಾ ನೀಯತೇ ಇತಿ ಶೂನ್ಯ ಎಂಬುವರು
ಜ್ಞಾನವಂತರು ಹೀಗೆ ವಿಗ್ರಹ ಮಾಡುವರು
ಆನಂದಮಯನಾದ ಅನುತ್ತಮೋತ್ತಮ ನಿನ್ನ
ಅನುಗ್ರಹದಿಂದ ಜಗತ್ ರಕ್ಷಣೆ ನಿಯಮನವು ೩೨

ಕ್ಷಣಿಕ ಆಭಾವಾದಿ ಶಬ್ದಗಳಿಗೆ ಈ ರೀತಿ
ಜ್ಞಾನಪೂರಿತ ಅರ್ಥ ಪೇಳಿದ ನಿನಗೆ ನಮೋ
ಅನ್ಯ ವಸ್ತುಗಳಿಗಿಂತ ಅತ್ಯಂತ ಪ್ರಿಯತಮನೇ
ಜನ್ಮಾದಿಕರ್ತನೇ ಪೂಷ ಪೋಷಕನೇ ನಮಸ್ತೇ ೩೩

ದೇವವೃಂದಕ್ಕೆ ನೀ ಪ್ರಶಾಂತವಿದ್ಯೆಯ ಪೇಳಿ
ಅವರುಗಳ ಸಹ ನಿಂತು ಮತ್ತೊಂದು ರೂಪದಿಂದ
ದಿವಪರ ಸ್ವಸ್ಥಾನ ಸೇರಿದಿಯೋ ಸುಖಮಯನೇ
ಭಾವಕರು ಸ್ಮರಿಸೆ ಸರ್ವವಿಧದಲಿ ಒಲಿವಿ ೩೪

ಬುದ್ಧಾವತಾರ ಪರಮಾತ್ಮ ಚಿದಾನಂದಮಯ ಶ್ರೀಶ
ದೇವತಾ ವೃಂದಕ್ಕೆ ಸುಬೋಧ ಮಾಡಿದ್ದು ಸಾಕಲ್ಯ ತಿಳಿಯಲಸಖ್ಯ
ಶ್ರೀವೇದವ್ಯಾಸ ಶ್ರೀಶ ಶ್ರೀಮಧ್ವ ಆನಂದತೀರ್ಥರ ಅನುಗ್ರಹದಿಂದಲೇ
ಯಥಾಯೋಗ್ಯ ತಿಳುವಳಿಕೆ ಉಂಟಾಗುವುದು ೩೫

ವೇದಾರ್ಥ ನಿರ್ಣಾಯಕ ಸೂತ್ರಗಳ ಮಾಡಿ
ಇತಿಹಾಸ ಪುರಾಣಾದಿಗಳ ನಮಗಿತ್ತ
ವೇದವ್ಯಾಸ ಸುಹೃತ್ ಬುದ್ಧನು ನೀನೇವೇ
ಸತ್ಯಧರ್ಮರಿಗೆ ಸೌಭಾಗ್ಯ ಸುಖದಾತ ೩೬

ಜ್ಞಾನಭಕ್ತ ಆಯುರಾರೋಗ್ಯ ಐಶ್ವರ್ಯ ಶ್ರೀಮಧ್ವ ಹನುಮಸ್ಥ
ವನಜಭವ ಪಿತ ಶ್ರೀ ಪ್ರಸನ್ನ ಶ್ರೀನಿವಾಸ ನಮೋ
ಅನಿಮಿತ್ತ ಬಂಧು ಹರೇ ಕೃಷ್ಣ ರಾಮ ವೇದವ್ಯಾಸ
ಬುದ್ಧಾವತಾರ ಮೋದಮಯ ಕರುಣಾಳು ೩೭

–ಇತಿ ಶ್ರೀ ಬುದ್ಧ ಪ್ರಾದುರ್ಭಾವ ಸಂಪೂರ್ಣಂ –

ಪ್ರಸನ್ನ ಶ್ರೀ ಕಲ್ಕಿ

೨೯

ಆನಂದ ಜ್ಞಾನಮಯ ಅಮಿತ ವಿಕ್ರಮ ಕಲ್ಕಿ
ಅನಘ ಲಕ್ಷ್ಮೀರಮಣ ಶರಣು ಮಾಂ ಪಾಹಿ
ಕೃಷ್ಣ ನರಹರಿ ಕಪಿಲ ತಿಲಕ ವೇಂಕಟರಮಣ
ಪ್ರಾಣ ಹೃದ್‌ವನಜಸ್ಥ ರಕ್ಷಮಾಂ ಸತತ ಪ

ಶ್ರೀ ದುರ್ಗಾಭೂರಮಣ ವಿಷ್ಣು ರುದ್ರ ಬ್ರಹ್ಮ
ಐದು ರೂಪನೆ ಲಕ್ಷ್ಮೀ ಮಾಯಾ ಜಯಾ ಕೃತಿ
ಶಾಂತೀಶ ಹಯವದನ ಹಂಸ ಮಹಿದಾಸನೆ
ಶ್ವೇತವರಾಹ ಚಿನ್ಮಯ ಮೀನ ಕೂರ್ಮ ೧

ಧನ್ವಂತರಿ ಶರಣು ಅಜಿತ ಸ್ತ್ರೀರೂಪನೇ
ಘನಭೂಮಿಧರ ನಾರಸಿಂಹ ವಾಮನ ತ್ರಿಪದ
ರೇಣುಕಾತ್ಮಜರಾಮ ವೇಣುಗೋಪಾಲ ನಮೋ
ಜ್ಞಾನದಾಯಕ ಬುದ್ಧ ಸುಜನಪ್ರಿಯ ಕಲ್ಕಿ ೨

ವೃಷಭ ತಾಪಸ ಯಜ್ಞ ದತ್ತ ವಡವಾವಕ್ತರ
ಕೃಷ್ಣ ಹರಿನಾರಾಯಣ ವೇದವ್ಯಾಸ
ದೋಷದೂರನೆ ಶಿಂಶುಮಾರ ಸುಗುಣಾರ್ಣವನೆ
ಶ್ರೀಶ ಸರ್ವಾಶ್ರಯ ಅನಂತ ಸುಖರೂಪ ೩

ಭೂಲೋಕದಲಿ ಮಣಿಮಂತಾದಿ ಅಸುರರು
ಶೀಲ ಹರಿಭಕ್ತರನ ಕಂಡು ಸಹಿಸದಲೆ
ಬಾಲ ಶಶಿಶೇಖರನ ಸ್ತುತಿಸಿ ವರಗಳ ಪಡೆದು
ಇಳೆಯಲಿ ಜನಿಸಿದರು ತತ್ವಜ್ಞಾನಿಗಳ ವೋಲ್ ೪

ಬಾದರಾಯಣ ಸೂತ್ರ ವಿರುದ್ಧ ಭಾಷ್ಯಗಳ್ ಮಾಡಿ
ವೇದೋಪನಿಷದ್‌ಗಳಿಗೆ ಅಪ ಅರ್ಥ ಪೇಳಿ
ಸಾಧುಗಳ ಮನಕೆಡಿಸೆ ಮಧ್ವಾಖ್ಯ ಸೂರ್ಯನು
ಉದಿಸಿ ಸಜ್ಜನರ ಹೃತ್ತಿಮಿರ ಕಳೆಯೆ ೫

ಶ್ರೀಪತಿ ವಿಷಯಕ ಜ್ಞಾನ ಮರೆ ಮಾಡುವ
ಇಪ್ಪತ್ತು ಮೇಲೊಂದು ಅಪದ್ಧ ದುರ್ಭಾಷ್ಯ
ಅಪವಿತ್ರ ಅಚರಣೆ ದುಸ್ತರ್ಕ ದುರ್ವಾದ
ಈ ಪರಿಸ್ಥಿತಿಯ ನೆಟ್ಟಗೆ ಮಾಡಿದಾ ಮಾಧ್ವ ೬

ಇಪ್ಪತ್ತಿ(ತ್ತು) ಎರಡನೇ ಭಾಷ್ಯಾ ಸಿದ್ಧಾಂತವ
ಉಪನಿಷದ್ ದಶಕಕೆ ಸರಿಯಾದ ಭಾಷ್ಯಗಳ
ಸಪ್ತ ತ್ರಿಂಶತ್ ಒಟ್ಟುಗ್ರಂಥ ಸುರಧೇನುವ
ಅಪವರ್ಗಾನಂದ ಒದಗಿಸಿದ ಯೋಗ್ಯರಿಗೆ ೭

ಸದ್ಧರ್ಮ ಆಚರಣೆ ಯೋಗ್ಯ ಉಪಾಸನಾ
ಭಕ್ತಿ ಸವೈರಾಗ್ಯ ಜ್ಞಾನ ಉನ್ನಾಹ
ಅಧಿಕಾರಿಗಳು ಈ ಪರಿಯಲಿ ಸುಖಿಸಲು
ಕ್ಷಿತಿಯ ಜನರಿಗೆ ಲಭಿಸಿತು ಕ್ಷೇಮ ೮

ಕಾಲವು ಜರುಗಿತು ದೈತ್ಯರು ನೋಡಿದರು
ಮೆಲ್ಲಮೆಲ್ಲನೆ ಪುನಃ ವಿಷಮ ಮಾಡಿದರು
ಶೀಲರ ಹಿಂಸಿಸಿ ಸದ್ಧರ್ಮ ಕೆಡಿಸಿದರು
ಖಳರು ಕ್ರೌರ್ಯವ ವರ್ಧಿಸಿದರು ದಿನ ದಿನದಿ ೯

ಮಹಾಭಯಂಕರ ದೈತ್ಯ ಸಮೂಹವ
ಸಂಹನನ ಮಾಡಿದಳು ಮಹಾದುರ್ಗಾದೇವಿ
ಬ್ರಾಹ್ಮಣಕುಲದಲಿ ಪ್ರಾದುರ್ಭವಿಸಿದ ದೇವಿ
ಮಹಾದುರ್ಗಾ ಜಗದಾಂಬಾ ಶರಣು ಮಾಂಪಾಹಿ ೧೦

ದಿನಗಳು ಪಕ್ಷಗಳು ಮಾಸ ಋತು ವರುಷಗಳು
ನಿನ್ನ ನಿಯಮನದಿಂದ ಕಾಲ ಪ್ರವಹಿಸಿತು
ಜನಗಳು ಕಲಿಯುಗದ ಕಡೇ ಭಾಗ ಬರಲಾಗ
ಹೀನ ಕರ್ಮಂಗಳಲಿ ಆಸಕ್ತರಾದರು ೧೧

ಪುರಾಣಂಗಳಲಿ ಕಲಿಯಗದ ಸ್ಥಿತಿಗತಿಯು
ವಿವರಿಸಿದಂತೆಯೇ ನೆನೆಯಲೂ ಭೀತಿ –
ಕರ ಪಾಪಕರ್ಮದಲಿ ಜನರು ರತರಾಗಿರಲು
ನರಪರ ಕ್ರೂರತನ ದಿನ ದಿನ ಹೆಚ್ಚಿತು ೧೨

ಜ್ಞಾನಾದಿ ಸಂಪತ್ತು ಕಳಕೊಂಡ ಜನರು
ವಿಷ್ಣು ದ್ವೇಷಿಗಳಾಗಿ ಬಹು ಬಹು ನೀಚ–
ತನದಲಿ ಇರುತಿರಲು ದೇವತಾವೃಂದವು
ನಿನ್ನ ಬೇಡಿದರು ಪುನಃ ಧರ್ಮಸ್ಥಾಪಿಸಲು ೧೩

ಯದಾಯದಾಹಿ ಸದ್ಧರ್ಮಕ್ಕೆ ಹಾನಿಯು
ಅಧರ್ಮಕ್ಕೆ ವೃದ್ಧಿಯು ಆಗುವದೋ ಆಗಾಗ
ಸಾಧುಗಳ ರಕ್ಷಣೆಗೆ ಪಾಪಿಗಳ ಹನನಕ್ಕೆ
ಸದ್ಧರ್ಮ ಸ್ಥಾಪನೆಗೆ ಅವತಾರ ಮಾಳ್ಪಿ ೧೪

ಭೂಮಿಯಲಿ ಸುಪವಿತ್ರ ಶಂಭಳ ಗ್ರಾಮದಲಿ
ಬ್ರಾಹ್ಮಣ ಮಹಾತ್ಮ ವಿಷ್ಣು ಯಶಸ್ ಭವನದಲಿ
ಅಮಿತ ಪೌರುಷಜ್ಞಾನ ಆನಂದಮಯ ನೀನು
ವಿಮಲ ಕಲ್ಕ್ಯವತಾರ ಮಾಡಿದಿ ಮಹೋಜ ೧೫

ಕಲ ಎಂದರೆ ಜ್ಞಾನ ಕ ಎಂದರಾನಂದ
ಕಲ್ಕೆಂದರೆ ಜ್ಞಾನ ಆನಂದ ರೂಪ
ಶೂಲಿ ವಜ್ರಿಗಳಿಗೆ ಸುಖಜ್ಞಾನ ಬಲ ಕೊಡುವ
ಠಲಕನಮೋ ಪಾಪಹರ ಸೌಭಾಗ್ಯದಾತ ೧೬

ಲೋಕವಿಲಕ್ಷಣ ಸುಪ್ರಭಾಶ್ವ ಏರಿ
ನಿಖಿಳ ದುರ್ಮತಿ ಭೂಪಾಲ ಚೋರರನ್ನ
ಅಖಿಳ ಪಾಪಿಗಳ ಅಧರ್ಮ ಆಚರಿಸುವರ
ಶ್ರೀಕಾಂತದ್ವೇಷಿಗಳ ಕತ್ತರಿಸಿ ಕೊಂದಿ ೧೭

ಸತ್ಯವ್ರತ ಸುರವೃಂದ ವಸುಮತಿ ಪ್ರಹ್ಲಾದ
ಶತಮಖ ಪ್ರಜೆಗಳು ವಿಭೀಷಣ ಸುಗ್ರೀವ
ಪಾರ್ಥಸುಧಾಮ ರಕ್ಷಕನೇ ಸುರಬೋಧಕನೇ
ಸತ್ಯಧರ್ಮರ ಕಾಯ್ವ ಕರುಣಾಳು ಕಲ್ಕಿ ೧೮

ಜ್ಞಾನಸುಖ ಭೂಮದಿ ಗುಣಪೂರ್ಣ ನಿರ್ದೋಷ
ವಿಷ್ಣು ಪರಮಾತ್ಮ ಹರಿ ಉದ್ದಾಮ ಬ್ರಹ್ಮ
ಪೂರ್ಣಪ್ರಜ್ಞಾರ ಹೃಸ್ಥ ವನಜಭವಪಿತ ಕಲ್ಕಿ
ಪ್ರಸನ್ನ ಶ್ರೀನಿವಾಸ ಶರಣು ಮಾಂಪಾಹಿ ೧೯

–ಇತಿ ಕಲ್ಕ್ಯಾವತಾರ ಸಂಪೂರ್ಣಂ –

ಪ್ರಸನ್ನ ಶ್ರೀ ವೇದವ್ಯಾಸ

೩೦

ಪ್ರಥಮ ಆಧ್ಯಾಯ

ಪ್ರಾದುರ್ಭಾವಸಾರ

ಜ್ಞಾನ ಸುಖ ಬಲಪೂರ್ಣ ಅನಘ ವೇದವ್ಯಾಸ
ವನಜಜಾಂಡಾಂತರ್ ಬಹಿರ್ವ್ಯಾಪ್ತ ಶ್ರೀಶ
ಇನ ಸೋಮ ಕೋಟ್ಯಮಿತ ತೇಜ ಚಿನ್ಮಯಗಾತ್ರ
ಜ್ಞಾನಾದಿ ಸಂಪತ್‍ಪ್ರದ ಶರಣು ಪಾಹಿ ಪ

ನಾರಾಯಣ ಸರ್ವ ಉರು ಗುಣಾರ್ಣವ ನಮೋ
ಪಾರತಂತ್ರ್ಯಾದ್ಯಖಿಲ ದೋಷಾತಿ ದೂರ
ಪರ ಬ್ರಹ್ಮ ಶ್ರೀ ರಮಣ ವಿಷ್ಣು ಸರ್ವೋತ್ತಮನೇ
ಸೂರಿ ಜ್ಞಾನ ಪ್ರಾಪ್ಯ ನಿಗಮೈಕ ವೇದ್ಯ ೧

ನಾರಾಯಣ ವಾಸುದೇವ ವೈಕುಂಠ ನಮೋ
ತುರ್ಯ ಸಂಕರ್ಷಣ ಪ್ರದ್ಯುಮ್ನಾನಿರುದ್ಧ
ತುರಗಾಸ್ಯ ಕಾರ್ದಮ ನಾಭಿಜಾತ್ರೇಯನೇ
ಪರಮಾತ್ಮ ಉದ್ದಾಮ ಹರಿ ಶ್ರೀನಿವಾಸ ೨

ಮೀನ ಕೂರ್ಮ ಕ್ರೋಢ ನರಸಿಂಹ ವಾಮನ
ಮುನಿಜ ರಾಘವ ಕೃಷ್ಣ ವನಜ ಕಲ್ಕೀಶ
ಆನಂದ ಜ್ಞಾನಾದಿ ಗುಣಮಯ ರೂಪಗಳು
ಅನಂತವು ಅನುಪಮವು ಅಭಿನ್ನವು ನಿತ್ಯ ೩

ವಾರಿಜ ಭವಾಂಡವ ಸೃಜಿಸಿ ಅದರೊಳು ಪೊಕ್ಕು
ವಾರಿಜಜ ಈಶಾದ್ಯರೋಳಿದ್ದು ಕೃತಿ ನಡೆಸಿ
ಮೂರು ವಿಧ ಅಧಿಕಾರಿಗಳಿಗೆ ಗತಿ ಇತ್ತು
ಮೂರು ವಿಧ ಜೀವರಿಗೆ ಯೋಗ್ಯ ಫಲವೀವಿ ೪

ಸೋತು ಮನ ಅವಳನ್ನು ತಾನು ಹೊಂದಬೇಕೆನ್ನಲು
ಸಾಧ್ವಿಸತಿ ಪತಿಯನ್ನು ಎತ್ತಿದಳು ಸೊಂಟದಲಿ ೧೫

ರಾತ್ರಿ ಕತ್ತಲೆಮಾರ್ಗ ತಿಳಿಯದಲೆ ಪತಿಯನ್ನು
ಹೊತ್ತುಕೊಂಡು ಹೋಗುವಾಗ ಪತಿಯ ಕಾಲು ತಾಕಿತು
ಹಾದಿಯಲ್ಲಿ ಕಬ್ಬಿಣ ಸಲಾಕದಲ್ಲಿ ಚುಚ್ಚಿಸಿ ಇದ್ದ
ಸುತಪೋಧನ ಮಾಂಡವ್ಯರ ಕಟಿ ಸಮೀಪ ಹಾಹಾ ೧೬

ಅನ್ಯಾಯದಿ ಆ ರಾಜ್ಯದರಸ ಆ ಮಹಾಮುನಿಯ
ಧನಚೋರನೆಂದು ಶೂಲಕ್ಕೆ ಹಾಕಿಸಿದ್ದ ಆ ಶೂಲ
ಕಾಣದೇ ಕೌಶಿಕನ ಕಾಲ್ತಗಲಿ ಬಲು ನೋವಾಗಿ
ಮುನಿ ಶಾಪವಿತ್ತರು ಸೂರ್ಯೋದಯಲ್ಲೇ ಸಾಯೆಂದು ೧೭

ಹಾಹಾ ಇದು ಏನು ಮುನಿಗಳಿಗೆ ನೋವಾಯಿತಲ್ಲಾ
ಮಹಾತ್ಮರ ಶಾಪ ವೀಣಾಗಲಾರದು ಮಾಂಗಲ್ಯವ
ತಾಹೇಗೆ ಉಳಿಸಿಕೊಳ್ವದು ಎಂದು ಪತಿ ಅಂತಸ್ಥ
ಶ್ರೀಹರಿಯ ಸ್ಮರಿಸಿ ಆ ಪತಿವ್ರತೆ ಹೇಳಿದಳು ೧೮

ಸೂರ್ಯೋದಯವಾಗದಿದ್ದರೆ ಶಾಪವು ಫಲಿಸದು
ಸೂರ್ಯೋದಯವಾಗಬೇಡಿ ಎಂದು ಹೇಳಿದಳು ಸಾಧ್ವಿ
ಆರ್ಯಧರ್ಮ ಲೋಕಕಾರ್ಯ ಸರ್ವವೂ ಸ್ತಬ್ಧವಾದವು
ಎಲೆಲ್ಲೂ ಕತ್ತಲೆಯು ಭಾನು ಉದಯಿಸಲಿಲ್ಲ ೧೯

ಇಂದ್ರಾದಿ ದೇವರ್ಗಗಳು ಬ್ರಹ್ಮನಲಿ ಮೊರೆಯಿಡಲು
ಪತಿವ್ರತೆ ಮಹಾತ್ಮನೆ ಮತ್ತೊಬ್ಬ ಪತಿವ್ರತೆಯೇ
ಪ್ರತಿ ಮಾಡುವಳು ಅತ್ರಿಋಷಿ ಪತ್ನಿ ಅನಸೂಯಾ
ಪತಿವ್ರತಾ ರತ್ನಳಾ ಸಹಾಯ ಕೇಳೆಂದರು ವೇಧ ೨೦

ಶಕ್ರಾದಿ ಸುರರುಗಳು ಅನಸೂಯಾದೇವಿಯಲಿ
ಕೋರಿಕೆ ಮಾಡಲು ಆಕೆ ದೇವತೆಗಳ ಸಮೇತ
ಧೀರ ಪತಿವ್ರತೆಯಾದ ಕೌಶಿಕಾ ಗೃಹಕೆ ಹೋಗಿ
ಪರಿಚಯ ಮಾಡಿಕೊಂಡು ಕೊಂಡಾಡಿದಳಾ ಸಾಧ್ವಿಯ ೨೧

ಮಹಾಭಾಗರು ಇಂದ್ರಾದಿಗಳಿಗೂ ಅನಸೂಯಗೂ
ವಿಹಿತೋಪಚಾರ ಪೂಜಾದಿಗಳ ಮಾಡಿ ಆ ಸಾಧ್ವಿ
ಮಹಾಭಾಗ್ಯ ಆಗಮನ ಎನ್ನುತ್ತ ಕಾರಣವನು
ಬಹು ಹಿತದಲಿ ಕೇಳಿದಳು ತನ್ನ ಸ್ಥಿತಿ ಹೇಳಿ ೨೨

ಅನಸೂಯ ಹೇಳಿದಳು ಸೂರ್ಯ ಉದಿಸುವದಕ್ಕೆ
ನೀನೊಪ್ಪು ನಿನ್ನ ಪತಿ ಬದುಕಿಸಲ್ಪಡುವನು
ಎನ್ನುತೆ ಕೌಶಿಕಾ ಸಾಧ್ವಿಯು ಅನುಮೋದನೆ ಕೊಂಡು
ಇನ ಉದಿಸಲಿ ಎಂದ ಅರ್ಘ್ಯ ಕೊಟ್ಟಳು ಮುದದಿ ೨೩

ಉದಿಸಿದನು ಸೂರ್ಯ ಮುನಿಶಾಪ ಫಲಿಸಿತು
ಬಿದ್ದ ಕೆಳಗೆ ಕೌಶಿಕ ತತ್‌ಕ್ಷಣವೇ ಬದುಕಿ ಎದ್ದ
ಪತಿವ್ರತಾ ಶಿರೋಮಣಿ ಅನಸೂಯಾ ದೇವಿ ಪ್ರಭಾವ
ಪತಿವ್ರತಾ ಮಹಾತ್ಮೆ ಜ್ವಲಿಸಿತು ಲೋಕದಲ್ಲಿ ೨೪

ಕೌಶಿಕನ್ನ ಬದುಕಿಸಿದ್ದು ಮಾತ್ರವಲ್ಲದೇ ಸರ್ವ
ಕುಷ್ಠಾದಿ ರೋಗ ಪರಿಹರಿಸಿ ಯುವವಾಗಿ ಮಾಡಿ
ಅಯುಷ್ಯ ಬಹುನೂರು ವರ್ಷಗಳ ಅನುಗ್ರಹಿಸಿ
ತುಷ್ಟಿ ಸುಖಜೀವನ ಒದಗಿಸಿದಳ್ ಅನಸೂಯಾ ೨೫

ಅನಸೂಯೆಯ ಪಾತಿವ್ರತ್ಯ ಮಹಾತ್ಮೆಯ ಶ್ಲಾಘಿಸಿ
ಏನು ವರ ಕೇಳಿದರೂ ಕೊಡುವವೆಂದು ಸುರಪ
ಅನಿಮಿಷರು ಹೇಳಲು ಪತಿವ್ರತಾ ಶಿರೋಮಣಿ
ವಿಷ್ಣು ವಿಧಿ ಶಿವ ತನ್ನಲ್ಲವತರಿಸಲೆಂದಳು ೨೬

ತಥಾಸ್ತು ಎಂದ ದೇವತೆಗಳ ವರ ಸತ್ಯಮಾಡೆ
ಸುತಪಸ್ವಿ ಅತ್ರಿಗೆ ಹಂಸ ವೃಷಾರೂಢರು
ಪ್ರತ್ಯಕ್ಷದಿ ಹೇಳಿದಂತೆಯೂ ಅನಸೂಯ ಅತ್ರಿಗೆ
ಪುತ್ರರೆಂದುದಿಸಿದರು ಸೋಮಸ್ತ ಬ್ರಹ್ಮೇಶ ವಿಷ್ಣು ೨೭

ಮುಖ್ಯಪ್ರಾಣಾಂತರ್ಗತನೇ ಪಂಕಜಾಸನ ಪಿತನೆ
ಶ್ರೀಕರಾರ್ಚಿತ ಶ್ರೀಪ್ರಸನ್ನ ಶ್ರೀನಿವಾಸ ಕಪಿಲ

ಅರ್ಕಕೋಟ್ಯಾಮಿತ ತೇಜನೇ ಬ್ರಹ್ಮಾದ್ಯಮರ ಗುರೋ
ಜಗದೀಶ ದತ್ತಾತ್ರಯನಮೋ ಪ್ರಿಯತಾಂ ಶರಣು ೨೮

–ಇತಿ ಪ್ರಥಮಾದ್ಯಾಯ ಸಂಪೂರ್ಣಂ–

ಎರಡನೇ ಅಧ್ಯಾಯ

ಶ್ರೀ ದತ್ತಾತ್ರಯ ಪ್ರಾದುರ್ಭಾವ ಸಾರ

ಉದಿತ ಭಾಸ್ಕರನಿಭ ಅನಂತಾರ್ಕಾಮಿತ ತೇಜ
ಪದ್ಮಜಾದಿ ದೇವರ್ಗೆ ಜ್ಞಾನಭೋಧಕನು ಅನಘ
ಮುದಬಲ ಜ್ಞಾನಾದಿ ಗುಣಗರ್ಣಾಣವ ಸರ್ವತ್ರ
ವ್ಯಾಪ್ತ ರಕ್ಷಕ ದತ್ತಾತ್ರಯ ಶ್ರೀಶನೆ ಶರಣು ಪ

ಬ್ರಹ್ಮಾವಿಷ್ಣನು ಸೋಮ ಔಷಧಿಗಳ ರಾಜನಾದ
ಉನ್ಮಾದ ಚರ್ಯದಿ ಕೋಪ ಪ್ರಕಟಿಸಿ ಮೆರೆವರು
ತಮ್ಮ ಶಿಷ್ಯರೊಡಗೂಡಿ ಶಿವಾವತಾರ ದೂರ್ವಾಸ
ಸುಮ್ಮನಸ ಸಜ್ಜನ ಹಿತರು ದುಷ್ಟನಿಗ್ರಹರು ೧

ತನ್ನನ್ನ ತಾನೇ ಸುತನಾಗಿ ದತ್ತಮಾಡಿಕೊಂಡನು
ವಿಷ್ಣು ಅತ್ರಿ ದಂಪತಿಗೆ ಆದ ಕಾರಣ ಪ್ರಖ್ಯಾತೆ
ಉನ್ನಾಮ ದತ್ತಾತ್ರಯ ಕ್ಷೋಣಿ ಯೋಗ್ಯಾಧಿಕಾರಿಗಳಿಂ
ಘನಭಕ್ತಿಯಿಂ ಶುಚಿಯಿಂ ಜಪ್ಯ ಸ್ಮರಣೀಯಿಂ ಶ್ರೋತವ್ಯ ಜಯತು ೨

ಕಲ್ಯಾಣತಮ ಪೂರ್ಣ ಅಮಲ ಗುಣಗಣ ಸಿಂಧು
ಮಾಲೋಲ ಶ್ರೀವಕ್ಷ ಶ್ರೀಶನೇ ಪ್ರಾದುರ್ಭವಿಸಿದನು
ಚೆಲುವ ಅನುಪಮ ಸೌಂದರ್ಯಸಾರ ಸರ್ವೋತ್ತಮ
ಲೀಲಾನಂದಮಯ ಚಿನ್ಮಾತ್ರಗಾತ್ರ ಭಕ್ತೇಷ್ಟದಾತ ೩

ಕಮಲಾಸನಾವಿಷ್ಟ ಸೋಮ ರುದ್ರಾವತಾರ ದೂರ್ವಾಸ
ತಮ್ಮ ತಮ್ಮ ಉದ್ಯೋಗಸಾಧನಕೆ ಬೇರೆ ಬೇರೆ ಹೋಗೆ
ಸುಮನೋಹರ ರೂಪ ಶ್ರೀಮನೋರಮ ದತ್ತಾತ್ರಯ
ಸುಮಹಾ ಯೋಗಿಯಾದ ನಿಸ್ಸಂಗ ಯೋಗೇಶ್ವರೇಶ್ವರ ೪

ಅತ್ರೇಯರು ಮೂವರು ಹೀಗೆ ಬೇರೆ ಬೇರೆಯಾಗಿಯೇ
ತಮ್ಮ ತಮ್ಮ ರೂಪದಲ್ಲೇ ಇದ್ದರು ಒಂದಾಗಿ ಅಲ್ಲ
ಸೋಮ ಶಿವ ದತ್ತರಿಗೆ ಬೇರೆ ಬೇರೆ ಮಂತ್ರವುಂಟು
ಸೋಮ ಪಂಚ ಶಿವ ಪಂಚ ದತ್ತ ನವಅಕ್ಷರವು ೫

ಪ್ರೋದ್ಯ ದಿವಾಕರ ಪೋಲ್ವ ವರ್ಣವುಳ್ಳ ಶುಭಗಾತ್ರ
ಆದಿತ್ಯ ಸಹಸ್ರಾಮಿತ ಮಹೋತ್ಕೃಷ್ಟ ತೇಜಃಪುಂಜ
ವ್ಯಾಪ್ತ ಸರ್ವತ್ರ ಜ್ಞಾನಾಭಯಕರನು ಬ್ರಹ್ಮಾದಿ
ತ್ರಿದಿವ ಸುಬೋಧಕನು ಕಪಿಲನು ದತ್ತಾತ್ರಯ ೬

ಇಂಥ ಮಹಾಮಹಿಮನು ಕಪಿಲ ದತ್ತಾತ್ರಯನು
ಅಧಿಕಾರಿಗಳಿಗೆ ಅಪರೋಕ್ಷಜ್ಞಾನ ಮೋಕ್ಷದಾತ
ಶ್ರೋತ್ರ, ಮಂತ್ರ, ಧ್ಯಾತೃಗಳಿಗೆ ಕಪಿಲ ದತ್ತಾತ್ರಯ
ಭಕ್ತಿ ಮೆಚ್ಚಿ ಸದಾ ಸಂರಕ್ಷಿಸಿ ಇಷ್ಟಾರ್ಥ ಕೊಡುವ ೭

ಪದ್ಮ ಭವಾದ್ಯಮರರಿಂ ಧ್ಯಾತ ದತ್ತಾತ್ರಯ ಹರಿ
ಮೇದಿನಿ ನರರಂತೆ ಅವತಾರ ಲೀಲೆ ಚರಿಸಿ
ಅದ್ಭುತ ಯೋಗಾನುಷ್ಠಾನದಿ ಇರುತಿರೆ ಜನರು
ಈತನ ಸೌಂದರ್ಯ ಯೋಗಸಾಮರ್ಥ್ಯ ಹೊಗಳಿದರು ೮

ಸಹಸ್ರಾರು ಋಷಿಪುತ್ರ ಬ್ರಹ್ಮಚಾರಿಗಳು ಬಂದು
ಅಹರ್ನಿಶಿ ಯೋಗೇಶ್ವರೇಶ್ವರ ದತ್ತನಾಶ್ರಮದಿ
ಬಹಳುತ್ಸಾಹದಲಿ ಸುತ್ತು ಮುತ್ತು ಗುಂಪುಗೂಡಿ
ಮಹಾಯೋಗಾಭ್ಯಾಸಕ್ಕೆ ಚ್ಯುತಿಯ ಕಲ್ಪಿಸಿದರು ೯

ಯೋಗ್ಯರು ಸಜ್ಜನರು ಈ ಭಕ್ತ ಋಷಿಕುವರರು
ಯೋಗ್ಯಸಾಧನೆ ಅವರವರ ಆಶ್ರಮದಲ್ಲಿಯೇ –
ಗೈಯಲಿ ಬೇಕೆಂದು ಅವರುಗಳು ಹೋಗೋ ಉಪಾಯ
ನಿಶ್ಚೈಸಿ ಮುಳುಗಿದ ದತ್ತನು ಸರೋವರದೊಳು ೧೦

ಸುರಮಾನದಿ ಸಾವಿರವರ್ಷ ಭಗವಾನ್ ದತ್ತನು
ಸರೋವರದೊಳಿದ್ದನು ಹೊರಜನಕ್ಕೆ ಕಾಣದೆ
ಆ ಋಷಿಪುತ್ರರು ತೀರದಲಿ ಇಕೋ ಈಗ ನಾಳೆ
ಬರುವನು ಮೇಲೆ ಎಂದು ಕಾಯುತ್ತಿದ್ದರು ದೃಢದಿ ೧೧

ಜಲಧಿ ಉಕ್ಕಿ ಹರಿದು ಕ್ಷೋಣಿಯ ಮುಳುಗಿಸದೆ
ಜಲಮಧ್ಯ ತಾನಿದ್ದು ಕಾಯುವ ವಡವಾ ಮುಖಾಗ್ನಿ
ಜಲಮಧ್ಯದಿ ಈಗ ಹೊಕ್ಕಿರುವ ದತ್ತಾತ್ರಯನು
ಮುಳುಗಿರುವುದು ಆಶ್ಚರ್ಯವಲ್ಲ ಈರ್ವರೂ ಏಕ ೧೨

ಬಲುದೀರ್ಘ ದೇವವರ್ಷಗಳು ಸಾಸಿರವಾದರೇನು
ಶೀಲತಮ ವರವಾಯುವು ವರುಣನು ಬುಧಾದಿ
ಜಲಾಭಿಮಾನಿಗಳು ಕಿಂಕರರಾಗಿ ಇರುತಿಹರು
ಜಲಶಾಯಿ ನಾರಾಯಣ ಅವತಾರ ದತ್ತನಿಗೆ ೧೩

ಒಂದು ದಿನ ಕೆರೆನೀರು ಚಲಿಸಲು ಸಂತೋಷದಿ
ಬಂದರೂ ಬಂದರೂ ಎಂದು ಕೂಗೆ ಋಷಿಕುವರರು
ಇಂದಿರಾಪತಿ ದತ್ತ ಮೇಲೆದ್ದು ಬಂದ ಬದಿಯಲ್ಲಿ
ಇಂದಿರಾಂಗಿ ನಾರೀಮಣಿ ಓರ್ವಳ ಆಲಿಂಗಿಸುತ ೧೪

ಯಾರನ್ನೂ ಲೆಕ್ಕಿಸದೆ ಕಾಮವಿಲಾಸ ಕೇಳಿಯ
ಆ ಸ್ತ್ರೀಯೊಡನೆ ಮಾಡುತ್ತಿದ್ದುದು ಕಂಡು ಯುವಕರು
ಅರರೆ ಇದೇನಿದು ಯೋಗಿ ಹೀಗಾದರೆ ಎನ್ನುತ
ತ್ವರಿತ ತೆರಳಿದರು ಜುಗುಪ್ಸೆಯಲ್ಲಿ ತ್ಯಜಿಸಿ ೧೫

ಆ ಪುಣ್ಯವಂತ ಋಷಿಪುತ್ರರು ತಿಳಕೊಳ್ಳಲಿಲ್ಲ
ಆ ಸ್ಫುರದ್ರೂಪಿಣಿ ನಾರಿ ಸಾಕ್ಷಾತ್ ಲಕ್ಷ್ಮೀದೇವಿಯೆಂದು

ವಿಪುಲ ಮನ ಹರುಷ ತೋರಿಸಿ ದತ್ತಾತ್ರಯನು
ಕೈಪಿಡಿದು ಲಕ್ಷ್ಮಿಯ ಕರೆದುಹೋದ ಆಶ್ರಮಕೆ ೧೬

ಯಾವ ತನ್ನಾಶ್ರಮದಿ ಸ್ವಾಧ್ಯಾಯ ಪ್ರವಚನಗಳ್
ದಿವ್ಯ ಯೋಗ ಅಭ್ಯಾಸ ಶಿಷ್ಯರ್ಗೆ ಶೀಕ್ಷಾದಿಗಳ್
ಯಾವಾಗಲೂ ಹಿಂದೆ ನಡೆಸುತ್ತಿದ್ದನೋ ಅಲ್ಲಿ ಈಗ
ದೇವಿಯೊಡನೆ ಲೀಲಾವಿಲಾಸಗಳ ತೋರಿಸಿದ ೧೭

ಮಂದ ಧೀಗಳು ಈ ವಿಡಂಬನೆ ಕಂಡು ಮೋದದಲಿ
ಶ್ರೀದತ್ತ ಈ ರೀತಿ ಆದನಲ್ಲಾ ಎಂದು ಮಾತನಾಡೆ
ಸುಧೀಗಳು ಬೃಹಸ್ಪತ್ಯಾದಿಗಳು ದತ್ತಾತ್ರಯನು
ಮೋದಚಿನ್ಮಯ ನಿರ್ದೋಷ ಹರಿ ಶ್ರೀಶನೆ ಎಂದರು ೧೮

ಮುಖ್ಯಪ್ರಾಣಾಂತರ್ಗತನೇ ಪಂಕಜಾಸನ ಪಿತನೆ
ಶ್ರೀಕರಾರ್ಚಿತ ಶ್ರೀಪ್ರಸನ್ನ ಶ್ರೀನಿವಾಸ ಕಪಿಲ
ಅರ್ಕಕೋಟ್ಯಮಿತ ತೇಜನೇ ಬ್ರಹ್ಮಾದ್ಯಮರ ಗುರೋ
ಜಗದೀಶ ದತ್ತಾತ್ರಯ ನಮೋ ಪ್ರಿಯತಾಂ ಶರಣು ೧೯

–ಇತಿ ಎರಡನೇ ಅದ್ಯಾಯ ಸಂಪೂರ್ಣಂ –

ಮೂರನೇ ಅದ್ಯಾಯ

ಸಂಪತ್‌ಲಕ್ಷ್ಮೀ ವೃತ್ತಾಂತ

ಉದಿತ ಭಾಸ್ಕರನಿಭ ಅನಂತಾರ್ಕಾಮಿತ ತೇಜ
ಪದ್ಮಜಾದಿ ದೇವರ್ಗೆ ಜ್ಞಾನಬೊಧಕನು ಅನಘ
ಮುದಬಲ ಜ್ಞಾನಾದಿ ಗುಣಗಣಾರ್ಣವ ಸರ್ವತ್ರ
ವ್ಯಾಪ್ತ ರಕ್ಷಕ ದತ್ತಾತ್ರಯ ಶ್ರೀಶನೆ ಶರಣು ಪ

ಸುರಪ ಜಂಭಾಸುರನಿಂದ ಅಪಜಯವ ಕೊಂಡು
ಸುರಗುರು ಪ್ರೇರಣೆಯಿಂ ದತ್ತಾತ್ರಯನಲಿ ಹೋಗಿ

ಶರಣು ಹೊಕ್ಕು ಸೇವಗೈಯಲು ಆಗ ಅವನನ್ನು
ಶತೃಗಳು ಪಿಡಿದು ನಿಗ್ರಹಿಸ ಬಂದರು ಅಲ್ಲಿ ೧

ದತ್ತನು ಸ್ತ್ರೀಯೊಡನೆ ಕ್ರೀಡಿಸುತ ಇರುವುದು
ಮಂದಧೀ ಅಸುರರು ನೋಡಿ ತಮ್ಮ ಕಾರ್ಯಮರೆತು
ಅತಿಮೋಹಿತರಾಗಿ ಪಲ್ಲಕ್ಕಿಯಲ್ ಅವಳ ಇಟ್ಟು
ಹೊದ್ದಿಗೆಯಿಂ ಕಟ್ಟಿ ಶಿರಮೇಲೆ ಎತ್ತಿ ಓಡಿದರು ೨

ಕುಪಿತ ವಿಸ್ಮಿತ ಇಂದ್ರ ಇದೇನಿದು ಈಗ ಹೇಗೆ
ಈ ಪಾಪಿಗಳ ನಿಗ್ರಹಿಸುವುದು ಎನ್ನಲು ದತ್ತ
ಪಾಪಿಗಳು ತಮ್ಮ ಪಾಪಫಲ ಹೊಂದುವರು ಚಿಂತೆ
ನೀ ಪಡಬೇಡ ನಿನಗೆ ಹಿತವೇ ಆಯಿತು ಎಂದ ೩

ಇಂದ್ರನು ಇಂದ್ರನೊಡನೆ ಬಂದಿದ್ದ ದೇವರುಗಳು
ದತ್ತಾತ್ರಯನ ವಿಶದವಾಗಿ ಹೇಳೆಂದು ಬೇಡಲು
ಸ್ವತಂತ್ರ ಪೂರ್ಣೈಕ ಸರ್ವಜ್ಞ ದತ್ತಾತ್ರಯಾಚಾರ್ಯರು
ಹಿತದಿ ಹೇಳಿದರು ಈ ರಹಸ್ಯವನು ಶ್ರೂಯತಾಂ ೪

ಈಕೆ ಸಂಪತ್ ರೂಪಿ ದೇವಿ ಲಕ್ಷ್ಮೀ ಎಂದು ತಿಳಿ ಇಂದ್ರ
ಈಕೆಯನು ಒಲಿಸಿಕೊಳ್ಳುವಲ್ಲಿ ಅಶ್ರದ್ಧೆಯಲೋ
ಸೊಕ್ಕು ಮದದಿಂದಲೋ ಕಾಲಿಂದ ಸ್ಪರ್ಶಾದಿ ಮಾಡುವ
ಆ ಕುಜನರಿಗೆ ಸಂಪತ್ ಶ್ರೀಯು ಮರೆ ಆಗುವಳು ೫

ಕಾಲು ಸೋಕದೆ ಸಂಪತ್ ಲಕ್ಷ್ಮೀಯಲ್ಲಿ ಗೌರವ ಬುದ್ಧಿ-
ಯಲಿ ತಮ್ಮ ತೊಡೆ ಮೇಲೆ ಸಂಪತ್ ಇಟ್ಟುಕೊಂಬರಿಗೆ
ಹಲವು ಬಗೆ ಸಂಪತ್ತು ಪಟ್ಟೆ ಪೀತಾಂಬರಾದಿ ಈ-
ವಳು ಧಾರಾಳವಾಗಿಯೇ ಉದಾರ ಕಾರುಣ್ಯದಿಂದ ೬

ಆಕಸ್ಮಿಕವಾಗಿಯೋ ವಾತಾವರಣ ಸಂದರ್ಭವೋ
ತಕ್ಕ ಕಾರಣ ನಿರ್ಬಂಧದಿಂದಲೋ ರಹಸ್ಯ ಸ್ಥಾನ-
ಗಳಿಗೆ ತಾತ್ಕಾಲಿಕವಾಗಿ ಸಂಪತ್ ದ್ರವ್ಯ ಸೇರಿದರೆ
ಅಕಳಂಕ ಮನಸ್ಸಿಗೆ ಸತ್ಕಳತ್ರಲಾಭ ಉಂಟು ೭

ಉರದಲಿ ಸೇರಿಸಿ ಭಕ್ತಿಯಲಿ ಸ್ಮರಿಸುವರ್ಗೆ
ದೊರೆಯುವುದು ಸಂತಾನಭಾಗ್ಯ ಹೃದಯಸ್ಥಾನದಿ
ಸೇರಿದ ಶ್ರೀ ಸರ್ವವಾಂಛಿತಪ್ರದಳು ಗ್ರೀವಸ್ಥ ಶ್ರೀ
ದಾರಾ ಪುತ್ರಾದಿ ಬಂಧು ಸೌಂದರ್ಯ ಸರ್ವಾಭೀಷ್ಟಪ್ರದಳು ೮

ಮುಖದಲ್ಲಿ ಶ್ರೀಯನು ಇಟ್ಟು ಭಕ್ತಿಯಿಂದ ಸ್ಮರಿಸೆ
ಸಕಲ ವಿದ್ಯಾ ಬುದ್ಧಿ ಕೌಶಲ್ಯ ಸಂಪತ್ತು ಈವಳು
ಮತ್ತೆ ಪಾದ ತೊಡೆ ರಹಸ್ಯಸ್ಥಾನ ಎದೆ ಹೃದಯ
ಕುತ್ತಿಗೆ ಮುಖ ಏಳು ಸ್ಥಾನಗಳನ್ನು ಹೇಳಿಹುದು ೯

ಈ ಏಳು ಸ್ಥಾನಗಳ ದಾಟಿ ಶಿರ ಮಧ್ಯದ ಮೇಲೆ
ದ್ರವ್ಯ ಸಂಪತ್ ಶ್ರೀಯ ಇಟ್ಟುಕೊಂಡರೆ ಅಂತಹವರ
ಶ್ರೀ ತ್ಯಜಿಸಿ ಹೋಗುವಳು ತೇಜಸ್ಸು ಬಲ ವೀರ್ಯವು
ರಾಜ್ಯ ಧನ ರತ್ನಾದಿ ಸಂಪತ್ ನಷ್ಟವಾಗುವವು ೧೦

ಕೇಳು ಇಂದ್ರನೇ ಈಗ ಈ ಅಸುರರು ವದನಾಂತ
ಏಳು ಸ್ಥಾನವ ಉಲ್ಲಂಘಿಸಿ ಮೂರ್ಧ್ನಿನಿ ಮೇಲೆ ಶ್ರೀಯ
ಬಲಾತ್ಕಾರದಿ ಇಟ್ಟುಕೊಂಡು ಓಡುವುದು ಅವರ
ಬಲಾದಿ ಐಶ್ವರ್ಯ ಸರ್ವವೂ ನಷ್ಟವಾಗಲೀಕ್ಕೇವೆ ೧೧

ಈ ಸಮಯ ನೀ ಹೋಗಿ ಅಸುರರ ಜಯಿಸಿ ರಾಜ್ಯ
ವಶ ಮಾಡಿಕೊಳ್ಳಬಹುದು ಜಯವು ನಿನಗೇವೆ
ಶ್ರೀಶ ದತ್ತಾತ್ರಯ ಉಪದೇಶದಂತೆ ದೇವರಾಜ
ಅಸುರರನ್ನು ನಿಗ್ರಹಿಸಿ ರಾಜ್ಯಲಕ್ಷ್ಮೀ ಕೈಕೊಂಡ ೧೨

ಶ್ರೀ ದತ್ತಾತ್ರಯ ಸಂಕ್ರಂದನಿಗೆ ಅನುಗ್ರಹಿಸಿದ್ದು
ವೇದವಿತ್ ಗಾರ್ಗರು ಹೇಹಾಯಧಿಪ ಅರ್ಜುನನಿಗೆ
ಬೋಧಿಸಲು ಆಗ ಆ ಕಾರ್ತವೀರ್ಯನಿಗೆ ಹುಟ್ಟಿತು
ಯಥಾರ್ಥ ಜ್ಞಾನಯುಕ್ ಭಕ್ತಿ ದತ್ತಾತ್ರಯನಲಿ ಸಂಯುಕ್ ೧೩

ಕಾರ್ತವೀರ್ಯಾರ್ಜುನನ ಭಕ್ತಿ ಸೇವಾ ಮೆಚ್ಚಿ ಶ್ರೀಪತಿ
ದತ್ತಾತ್ರಯ ಪರಮಾನುಗ್ರಹ ಮಾಡಿ ಬಹು ಐಶ್ವರ್ಯ

ಅತಿಶಯ ಪರಾಕ್ರಮ ಸಾಮರ್ಥ್ಯ ತೇಜಸ್ ಯಶಸ್
ಒದಗಿಸಿದ್ದು ಕ್ಷಿತಿಯಲ್ಲಿ ಪ್ರಸಿದ್ಧವಾಗಿಹುದು ೧೪

ದತ್ತಾತ್ರಯೋಪಾಸನದಿ ಲಬ್ಧ ಪ್ರಸಾದವಂತ
ದೇವತಾ ತಾರತಮ್ಯದಿ ಕರ್ಮದೇವರೊಳ್ ಪ್ರಸಿದ್ಧ
ಈ ಕಾರ್ತವೀರ್ಯಾರ್ಜುನನ ಸ್ತುತಿನಾಮ ಪಠಿಸುವ
ಭಕ್ತರಿಗೆ ನಷ್ಟವಸ್ತು ಲಾಭ ಜ್ಞಾನಭಾಗ್ಯ ಉಂಟು ೧೫

ಕಾರ್ತವೀರ್ಯಾರ್ಜುನನಲ್ಲಿ ತದ್‌ಗುರುಗ ಮುಖ್ಯವಾಯು
ಅಧಿಷ್ಠಾನದಲಿ ಇಷ್ಟ ಪರಮಾತ್ಮ ದತ್ತಾತ್ರಯ
ಸ್ತುತಿಶಬ್ದದಿಂ ಮುಖ್ಯ ಪ್ರತಿಪಾದ್ಯನಾಗಿ ಒಲಿದು
ವಾಂಛಿತವೀಯುತ್ತ ಅರ್ಜುನನ ಯಶಸ್‌ವರ್ಧಿಸುವ ೧೬

ಜಯಂತಿ ಆಚರಿಸುವರ್ಗೆ ಜ್ಞಾನಭಕ್ತಿ ಐಶ್ವರ್ಯ
ದೊರೆಯುವುದು ಈ ನುಡಿಗಳ್ ಪಠಣ ಶ್ರವಣ ಫಲ
ಮುಖ್ಯದಿ ಹರಿಪ್ರೀತಿ ಅವಾಂತರ ಫಲ ಸಂತೋಷ
ಸುಜ್ಞಾನ ಸಂಪತ್ತು ಆಯುರಾರೋಗ್ಯ ಐಶ್ವರ್ಯಾದಿಯು ೧೭

ಮುಖ್ಯಪ್ರಾಣಾಂತರ್ಗತನೇ ಪಂಕಜಾಸನ ಪಿತನೆ
ಶ್ರೀಕರಾರ್ಚಿತ ಶ್ರೀಪ್ರಸನ್ನ ಶ್ರೀನಿವಾಸ ಕಪಿಲ
ಅರ್ಕಕೋಟ್ಯಾಮಿತ ತೇಜನೇ ಬ್ರಹ್ಮಾದ್ಯಮರ ಗುರೋ
ಜಗದೀಶ ದತ್ತಾತ್ರಯನಮೋ ಪ್ರಿಯತಾಂ ಶರಣು ೧೮

–ಇತಿ ದತ್ತಾತ್ರಯ ಪ್ರಾದುರ್ಭಾವ ಸಂಪೂರ್ಣಂ–

ಶ್ರೀ ಪ್ರಸನ್ನ ಶ್ರೀನಿವಾಸ ಸ್ತುತಿಗಳು

೩೨

ಅದ್ರಿಜಾಪತಿ ಪಿತನ ಪಿತ ಸುಭದ್ರೆಯ ಪ.

ಅಣ್ಣ ಸಮುದ್ರಜಾಪತಿ ಪ್ರಸನ್ನ
ಶ್ರೀನಿವಾಸನೇ ನಮೋ ॥ ೧

ಕ್ಷುದ್ರ ವಿಷಯಾದ್ರಿಗಳ ವಜ್ರ ಮನೋ ವಾಂಛಿತದ
ಕಪರ್ದಿನುತ ವಿಧಿಪಿತ ಪ್ರಸನ್ನ ಶ್ರೀನಿವಾಸ ॥ ೨

ಶ್ರೀ ಶ್ರೀನಿವಾಸದೇವರು

೩೩

ಸರ್ವಾಂತರ್ಯಾಮಿ ಸ್ವತಂತ್ರ ಶ್ರೀನಿವಾಸ ಸರ್ವಾಂತರ್ಯಾಮಿ ಸ್ವತಂತ್ರ
ಸರ್ವಾಂತರ್ಯಾಮಿ ಹರಿ ಸುಂದರ ಜ್ಞಾನಾನಂದ
ಇಂದಿರೆಕಾಂತ ಅರವಿಂದಸಂಭವನಯ್ಯ ಪ

ಅದ್ಭುತ ಅಚಿಂತ್ಯ ಶಕ್ತ ಅಮ್ಮ ಲಕುಮಿಯ
ಅಮಲ ಪ್ರೇಮದಿ ಇವನ ಅಡಿಗಳಿಗೆರಗುವರ
ಅಘಕೂಟ ತೊಲಗಿಸಿ ಅಪವರ್ಗವೀವ ಸ್ವಾಮಿ
ಚಿಂತಿಸಿ ವಂದಿಪ ಸುಜನರ ಮನದೊಳು
ಚಂದಿರನಂದದಿ ನಿಂದಿವ ಪೊಳೆಯುತ
ಹಿಂದಿನ ಮುಂದಿನ ಕರ್ಮವ ಕಳೆದಿನ
ಕುಂದದಾನಂದವನೀವ ಮುಕುಂದನು ೧

ಜನ್ಮಾದಿ ಮುಖ್ಯ ಕಾರಣ ಜಾನಕೀಶ ಜಲಜಸಂಭವನಯ್ಯ
ಜಿಹ್ವಾದ್ವಯನು ದ್ವಿಜ ಜಲಧರ ಮೊದಲಾದ

ಜನರೊಳು ಇದ್ದು ಕಾಣದೆ ಜಾಣತನದಿ ಚರಿಪನು
ಶೀಘ್ರದಿ ಒಲಿವನು ಸೇವಿಪ ಜನರಿಗೆ
ಸುಗ್ರೀವನ ಸಖ ಲಕ್ಷ್ಮಣನಗ್ರಜ
ಜಾಗೃತ ಸ್ವಪ್ನ ಸುಷುಪ್ತಿ ಪ್ರವರ್ತಕ
ವಿಗ್ರಹ ರೂಪದಿ ನಿಂತಿಹನಿಲ್ಲಿ ೨

ಆಲೋಚನೆಗೂ
ಶಾಸ್ತ್ರದಿಂದಲೆ ಗೋಚರ ಸಾತ್ಯವತಿ
ಶಾಸ್ತ್ರವೆಲ್ಲಕೂ ಅತೀತ
ಸರ್ವಾಶ್ರಯನು ಇವ ಶಂಭೂ ಶಂಕರನುತ
ಸರ್ವತ್ರ ವ್ಯಾಪ್ತ ಅಮಲ ಸರ್ವ ವಿಲಕ್ಷಣ ಹರಿಯು
ಸರಿಪರರಿಲ್ಲವು ಇವಗೆಲ್ಲೆಲ್ಲು ಹರ ವಿಧಿ ಸುರ
ಮುನಿ ಸನ್ನುತ ಶ್ರೀಶನು ವರ ವರ ವೆಂಕಟ
ನಿಂತಿಹನಿಲ್ಲಿ ಸರಸಿಜಭವ ತಾತ
ಪ್ರಸನ್ನ ಶ್ರೀನಿವಾಸ ೩

ಶ್ರೀ ಪ್ರಸನ್ನ ಶ್ರೀನಿವಾಸ ಕಲ್ಯಾಣ (ಅಣು)

೩೪

ಮೇರು ಸುತ ಗಿರಿವಾಸ ।
ಶರಣಾದೆ ನಿನ್ನಲಿ ವಿಶ್ವಜನ್ಮಾದಿಕರ್ತ ನಿರ್ದೋಷ ।
॥ಶ್ರೀ ಶ್ರೀನಿವಾಸ ॥
ವಿಷ್ಣು ಸರ್ವೋತ್ತಮ ಸಾಕ್ಷಾತ್ ।
ರಮಾದೇವಿ ತದಂತರಾ ।
ತದಧೌ ವಿಧಿ ವಾಣ್ಯೌಚ ತತ್ವವನು ಪ್ರತ್ಯಕ್ಷ ಭೃಗುಗೆ ।
ತಿಳಿಸಿ ಲಕ್ಷ್ಮಿಯ ಇಳೆಯ ಜನರಿಗೆ ಒಲಿಯೆ ಕಳುಹಿಸಿ ।
ವ್ಯಾಳಗಿರಿ ವಲ್ಮೀಕ ಪೊಕ್ಕಿ ಶ್ರೀವತ್ಸಶರಣು ।
ಶರಣು ಹೇ ಸರ್ವ ಹೃದ್ಗುಹಾಂತಸ್ಥವಿಶ್ವ ಪ

ವೃಷಭ ಅಂಜನ ಶೇಷ ।
ವೇಂಕಟಾದ್ರಿಯ ನೆನೆಯೆ ಪಾಪವಿನಾಶ ।
ಶ್ರೀಸ್ವಾಮಿತೀರ್ಥದ ದಕ್ಷಪಾರ್ಶ್ವಪರೇಶ ।
॥ ಶ್ರೀ ಶೇಷಾಚಲೇಶ ॥
ಅರ್ಚಿಪರ ಸಂರಕ್ಷಿಪುದು ನಿನ್ನಪಣವು ಆದುದರಿಂದ ಗೋಪಾನ ।
ಆಸಿಯತಲೆಯಲಿ ತಡೆದು ಗೋವನು ಕಾಯ್ದ –
ಕರುಣಿಯೆ ಭಕ್ತವತ್ಸಲ ।
ತುಚ್ಛಗೋಪನು ಭಯದಿ ಅಸುಬಿಡೆ
ಚೋಳರಾಯಗೆ ಶಾಪವಿತ್ತು ।
ಅಚ್ಯುತನೆ ನೀದೇವ ಗುರುವಿನ ಸೇವೆಕೊಂಡು ನಿನ್ನರೂಪ ।
ಸ್ವಚ್ಛಚಿನ್ಮಯ ಭೂವರಾಹನ ಸಹವಿನೋದ ಲೀಲೆಮಾಡಿ ।
ಪ್ರೋಚ್ಚನಂದದಿ ಕ್ಷೇತ್ರ ಸಹಬಕುಳಾ ಯಶೋದೆಯ –
ಪಾಕಕಾಗಿ ಸ್ವೀಕರಿಸಿ ಹೇ ದಯಾನಿಧೇ ನಿತ್ಯತೃಪ್ತ ೧

ಅಸಮ ಸತ್ಯವಾಗೀಶ ।
ಜಗನ್ಮಾತೆಯೆಂದು ಪೇಳಿದಂತೆ ಆಕಾಶ ।
ಕಂಡಪದ್ಮದಿ ಪದುಮ ಸುಮುಖವಿಲಾಸ ।
ಶಿಶುವಕೊಂಡಳು ಧರಣಿ ಬಹು ಸಂತೋಷ ।
॥ ದಿಂದ ವಿಹಿತ ಆಶ ॥

ಧರಣಿದೇವಿ ಆಕಾಶರಾಜನ ಸುತೆಪದ್ಮಾವತಿಯೆಂಬ ನಾಮದಿ ।
ಪುರಿಯ ಹೊರಗೆ ಪುಷ್ಪವನದಲಿ ಸಖಿಯರೊಡನೆ ಆಡುವಾಗ ।
ನಾರದನು ಬಹು ವೃದ್ಧರೂಪದಿ ಬಂದು –
ಹಸ್ತರೇಖೆ ನೋಡುತ ।
ಶ್ರೀರಮಾಲಕ್ಷಣವ ಕಾಣುತ ಬ್ರಹ್ಮದೇವನ ತಾಯಿ ಅಂಗಿಯು ।
ಮಾರಜನಕನೆ ಪತಿಯು ಎಂದು ಪೇಳಿತೆರಳೆ ಶಿರಿಯ ಸ್ಮರಿಸುತ ।
ಏರಿ ಕುದುರೆಯ ವನದಿ ಪದ್ಮಾವತಿ ಸಂಗಡ –
ಆಟವಾಡಿದಿ ಹೇ ದಯಾನಿಧೇ ಶ್ರೀಶಸ್ವರಮಣ ೨

ಧರಣಿಯೊಡನೆ ಸಂವಾದ ।
ಮಾಡೆ ಬಕುಳಾ ಪೋಗೆ ನೀನು ಪುಳಿಂದ ।
ವಿಧಿವತ್ಸರುದ್ರನು ದಂಡ ಗುಲ್ಮಬ್ರಹ್ಮಾಂಡ ।
ಹಾರ ಗುಂಜಾಕಂಬುವೇಷದಿ ಪೋದಿಯೋ ಮುದದಿಂದ ।
॥ ಕಣಿಪೇಳ್ವ ಚೆಂದ ॥
ಧರಣಿಪದ್ಮಗೆ ಕಣಿಯಪೇಳಿ ಮದುವೆ ನಿಶ್ಚಯಮಾಡಿ ಬಂದೆಯೋ ।
ಭರದಿ ಶುಕ ಆಕಾಶರಾಜ ಲಗ್ನಪತ್ರವಕೊಡಲು ಬ್ರಹ್ಮ –
ಗರುಡ ಶೇಷ ಶಿವಾದಿಸುರ ಮುನಿಜನರ ಬಕುಳಾ ಲಕ್ಷ್ಮೀಸಹ ನೀ ।
ಪೊರಟುಮಾರ್ಗದಿ ಶುಕಮುನಿಯ ನೈವೇದ್ಯ ಉಂಡು ಜನರತೃಪ್ತಿಸಿ ।
ಸೇರಿಪುರಿಯ ಅಜರ ಮಂದಿರ ಪೋಲ್ವ –
ಮನೆಯಲಿ ಪದ್ಮಾವತಿಗೆ ಮಾಂಗಲ್ಯ ಧರಿಸಿದಿ ।
ಸರಸಿಜಾಸನ ತಾತ ಪ್ರಸನ್ನ ಶ್ರೀನಿವಾಸನೆ
ವಿಶ್ವಪಾಲಕ ಹೇ ದಯಾನಿಧೇ ಶರಣು –
ಶರಣು ಹೇ ಸೌಭಾಗ್ಯದಾತಾ ಪ. ೩

॥ಶ್ರೀ ಪ್ರಸನ್ನ ಅಣು ಶ್ರೀನಿವಾಸ ಕಲ್ಯಾಣ ಸಂಪೂರ್ಣ॥

ಪ್ರಸನ್ನ ಶ್ರೀನಿವಾಸ ಕಲ್ಯಾಣ

೩೫

ಜಯ ಜಯ ಜಯ ಶ್ರೀನಿವಾಸ
ಜಯಾ ಶಾಂತಿ ಕೃತಿ ಮಾಯಾ ಶ್ರೀಶ
ಭಯಬಂಧಮೋಚಕ ಜೀಯ ಆಹ
ಸುಂದರ ಚಿನ್ಮಯಾನಂದ ಜ್ಞಾನಾತ್ಮನೆ
ಮಂದಜಭವ ಸುರವೃಂದ ಸಂಸೇವ್ಯ ಜಯ ಪ

ಸುರಸರಿತ ತೀರದಿಂದ
ಸುರಮುನಿ ಭೃಗು ಬಂದು ನಿನ್ನ

ಪರಸಮರಹಿತನೆಂದರಿತ ಆಹ
ಸಿರಿಯು ನಿನ ಭಾವವನುಸರಿಸಿ ಬೇಗ
ಕರವೀರ ಪುರ ಪೋಗೆ ಗಿರಿಪುತ್ತ ಪೊಕ್ಕೆಯೊ ೧

ಮೇರುಸುತನೆ ಹಾಟಕಾದ್ರಿ
ವೀರ ಭಕುತ ವೃಷಭಾದ್ರಿ
ಕೀರುತಿ ಇತ್ತಿ ತಂಜನೆಗೆ ಆಹ
ಸರೀಸೃಪಾವರಿಸಿದ ಸೌರಭ್ಯಗಿರಿಯಿದು
ಪರವೇಂಕಟಾದ್ರಿಯು ಹರಿತು ವಿಪ್ರನ ಪಾಪ ೨

ನೀನಿದ್ದ ಸ್ಥಳವೇ ವೈಕುಂಠ
ನಿನಗಾರು ಸಮರುಂಟೆ ಶ್ರೀಶ
ದೀನ ಸುಜನರಿಗೆ ನಂಟ ಆಹ
ಧೇನು ಪಾಲ್ಗರೆಯಲು ಪಾಲಕ ಹೊಡೆಯಲು
ದೀನರಕ್ಷಕ ನೀನು ಶಿರಸಿತ್ತು ಪೊರೆದೆಯೊ ೩

ಏಳು ತಾಳದ ಉದ್ದ ರಕ್ತ
ತಾಳಲಾರದೆ ಬಿದ್ದ ಗೋಪ
ಚೋಳರಾಯಗೆ ಕೊಟ್ಟೆ ಶಾಪ ಆಹ
ಪೇಳಬಲ್ಲೆನೆ ನಿನ್ನ ಅತಿಶಯ ಲೀಲೆಯ
ಶೀಲ ಸುರರ ಗುರು ಚಿಕಿತ್ಸೆಯನ್ನೈದಿದೆ ೪

ಸ್ವಗತ ಭೇದವಿಲ್ಲದಂಥ
ಸ್ವಚ್ಛ ಚಿತ್ಸುಖಮಯನಂತ
ಸ್ವಾನಿರ್ವಾಹಕ ವಿಶೇಷ ಆಹ
ಶ್ವೇತವರಾಹನ ಸಂವಾದದಿಂದಲಿ
ಸ್ವೀಕರಿಸಿದೀ ಸ್ಥಳ ಮೊದಲು ಪೂಜೆಯ ಕೊಟ್ಟು ೫

ಸರಸ್ವತೀ ಸ್ವಾಮಿ ಪುಷ್ಕರಣಿ
ಸುರಮುನಿನರರಿಗೆ ಸ್ನಾನ

ಪರಸುಖಮಾರ್ಗ ಸೋಪಾನ ಆಹ
ಸುರತಟಿನ್ಯಾದಿ ಸುತೀರ್ಥಗಳೆಲ್ಲವು
ಸರಿತವಾಗಿರುತವೆ ಈ ಸ್ವಾಮಿ ತೀರ್ಥದಿ ೬

ಆದಿಕಾರಣ ನಿನ್ನ [೩]ಲೀಲಾ
ಮೋದಸಂಭ್ರಮವನ್ನು ನೋಡೆ
ಕಾದುಕೊಂಡಿಹರು ಕೋವಿದರು ಆಹ
ಸಾಧು ಸಂಭಾವಿತ ಬಕುಳಾದೇವಿಯುಗ್ಧೈದ
ಸ್ವಾದ ಭೋಜ್ಯವನುಂಬ ನಿತ್ಯ ಸಂತೃಪ್ತ ೭

ಮಂಗಳ ಚಿನ್ಮಯ ರಂಗಾ –
ನಂಗನಯ್ಯನೆ ಮೋಹನಾಂಗ
ತುಂಗ ಮಹಿಮನೆ ಶುಭಾಂಗ ಆಹ
ಬಂಗಾರ ಕುದುರೆ ಮೇಲಂಗನೇರಲಿ [೪]ಬಂದ
ಶೃಂಗಾರವೇನೆಂಬೆ ಎಂದಿಗೂ ಸ್ವರಮಣ ೮

ತೋಂಡಮಾನ ರಾಯನಣ್ಣ
ಚಂಡಭೂಪನು ಆಕಾಶ
ಕಂಡನು ಕಮಲದೊಳ್ ಶಿಶುವ ಆಹ
ಅಂಡ ಅಖಿಳ ಕೋಟಿ ಅಸಮ ಈ ಶಿಶುವನ್ನು
ಹೆಂಡತಿ ಧರಣಿಯು ಕೊಂಡಳು ಮಗಳಾಗಿ ೯

ಮೂಲೇಶ ನಿನ್ನಯ ರಾಣಿ
ಮೂಲಪ್ರಕೃತಿ ಗುಣಮಾನಿ
ಕೀಲಾಲಭವ ಭವ ತಾಯಿ ಆಹ
ಶೀಲ ಭೂಪಾಲನ ಸುತೆ ಪದ್ಮಾವತಿಯೆಂದು
[೫]ಬಾಲೇರ ಸಹ ಪುಷ್ಪವನಕೆ ಬಂದಿಹಳೊ ೧೦

ಮಹಿದೇವಿ ಕಮಲವಾಸಿನಿಯು
ಬಹಿನೋಟಕ್ಕೆ ರಾಜಸುತೆಯು

ಬಹು ಚಿತ್ರ ಪುಷ್ಪವ ಕೊಯ್ಯೆ ಆಹ
ಮಹತಿಪಾಣಿಯು ಬಹು ವಯೋರೂಪದಲಿ ಬಂದು
ಅಹಿತಲ್ಪ ಶ್ರೀಶನೆ ಪತಿಯೆಂದು ನುಡಿದ ೧೧

ಹಾಟಕಗಿರಿಯಿಂದ ನೀನು
ಬೇಟೆಯಾಡುವ ರೂಪ ತಾಳಿ
ಘೋಟಕವೇರಿ ಸಂಭ್ರಮದಿ ಆಹ
ಆಟವಾಡುವ ಬಾಲೆ ಬಳಿಯಲ್ಲಿ ಬಂದು ನೀ
ನಾಟಕವಾಡಿದ್ದು ಪಾಡಲರಿಯೆನೊ ೧೨

ನಿತ್ಯನಿರ್ಮಲ ಅವಿಕಾರ
ಮರ್ತ್ಯರವೋಲು ನೀ ನಟಿಸೋ
ಕೃತ್ಯಗಳರಿವರು ಯಾರೋ ಆಹ
ಭೃತ್ಯವತ್ಸಲ ನೀನು ಬಕುಳೆಯ ಬಳಿ ಪೇಳಿ
ಸಂತ್ಯಸಂಕಲ್ಪ ನಿನ ಸಂದೇಶ ಕಳುಹಿದೆ ೧೩

ಪೊಂದಿದೆ ಘುಲ್ಕಸೀ ರೂಪ
ಮಂಧಜಭವ ಶಿಶುವಾಗೆ
ನಂದಿನಿಧರ ಯಷ್ಟಿಯಾದ ಆಹ
ಮಂದಜಭವಾಂಡ ಗುಣಗುಲ್ಮ ಮಾಡಿ ನೀ
ಕಂಧರದಲಿ ಗುಂಜ ಕಂಬುಸರವ ತೊಟ್ಟೆ ೧೪

ನಾರಾಯಣಪುರಿಯಲ್ಲಿ
ಮಾರನಯ್ಯನೆ ನಿನ್ನ ಸುಗುಣ
ವಾರಿಧಿ ಪೊಕ್ಕಳು ಪದುಮೆ ಆಹ
ಪುರಿಪ ಧರಣೀದೇವೀ ಪುತ್ರಿಗೆ ಜ್ವರವೆಂದು
ಪರಿಪರಿ ಪರಿಹಾರ ಪರದು ನೋಡಿದರಾಗ ೧೫

ಶುದ್ಧ ಸುಂದರ ಸುಖಕಾಯ
ವೃದ್ಧ ಘುಲ್ಕಸೀ ವೇಷಧಾರಿ
ಬದ್ಧ ಶೋಕರ ಬಳಿ ಪೋದೆ ಆಹ

ಇದ್ದ ಸುದ್ದಿಯ ಅಬದ್ಧವಿಲ್ಲದೆ ಪೇಳಿ
ಮುದ್ದು ಪದ್ಮೆಗೆ ಅನಿರುದ್ಧನೆ ಪತಿಯೆಂದೆ ೧೬

ವಹಿಸಿ ನಿನ ಶಾಸನ ಬಕುಳ
ಮಹದೇವನಾಲಯದಿಂದ
ಮಹಿಳೆಯರ ಸಹ ಕೂಡಿ ಆಹ
ಮಹಿದೇವಿಯಲಿ ಪೋಗಿ ವಿಹಿತ ಮಾತುಗಳಾಡಿ
ಬಹು ಶುಭವಾರ್ತೆಯ ತಂದು ಪೇಳಿದಳೊ ೧೭

ಶುಕಮುನಿ ಕರಪ್ರದವಾದ
ಆಕಾಶ ನೃಪ ಲಗ್ನಪತ್ರ
ಸ್ವೀಕರಿಸಿದೆ ಬಹು ಹಿತದಿ ಆಹ
ವಾಗೀಶ ಶಶಿಧರ ನಾಗೇಶ ಸೌಪರ್ಣ
ನಾಕೀಶ ಮೊದಲಾದ ಸುರರನು ಕರೆದೆ ೧೮

ಶಿಷ್ಟ ಸನ್ಮುನಿಜನ ಕೂಟ
ತುಷ್ಟ ಸುಮನಸ ಸಮೂಹ
ಶ್ರೇಷ್ಠಸುಗಂಧಿ ಆಗಮನ ಆಹ
ಸೃಷ್ಟ್ಯಾದಿಕರ್ತೆ ನಿನ ಸುಮಹೋತ್ಸವ ನೋಡಿ
ಇಷ್ಟಾರ್ಥ ಪಡೆವರು ಎಷ್ಟೆಂಬೆ ವಿಭುವೆ ೧೯

ಮಾಯ ಜಯೇಶ ಶ್ರೀವತ್ಸ
ಛಾಯೇಶಗುಪಾಯ ಪೇಳಿ
ತೋಯಜೆಯನು ಕರೆತಂದೆ ಆಹ
ಮಾಯಾ ಜಯಾ ಸಿರಿ ಕೃತಿ ಕಾಂತಿ ನಿನ್ನಿಂದ
ವಿಯೋಗರಹಿತರು ಎಂದೂ ಎಲ್ಲೆಲ್ಲೂ ೨೦

ಬೃಹದಣುವಿಗೆ ಸತ್ತಾಪ್ರದನೆ
ಸುಹೃದ ಸಂತೃಪ್ತ ಮುಖಾಬ್ಧೇ

ದೃಢವ್ರತ ಶುಕಮುನಿಗೊಲಿದೆ ಆಹ
ಬೃಹತೀ ಫಲಾನ್ನವನುಂಡು ಘೂತ್ಕಾರದಿ
ಗೃಹ ಬಹಿರದಿ ಇದ್ದ ಜನರ ತೃಪ್ತಿಸಿದೆ ೨೧

ಸುಜನರಿಗಾನಂದ ದಾತ
ದ್ವಿಜರೂಢ ಜಗದೀಶ ನೀನು
ಅಜಸುರರೊಡಗೂಡಿ ಬರೆ ಆಹ
ಅಜಿತ ಚಿನ್ಮಯ ನಿನ್ನ ಆಕಾರ ನೃಪ ನೋಡಿ
ನಿಜವಾಗಿ ಕೃತಕೃತ್ಯ ಧನ್ಯ ತಾನೆಂದ ೨೨

ಅಜರ ಮಂದಿರ ಪೋಲ್ವ ಮನೆಯು
ಪ್ರಜುವಲಿಸುವ ದಿವ್ಯ ಸಭೆಯು
ನಿಜಭಕ್ತ ಪುರುಜನ ಗುಂಪು ಆಹ
ದ್ವಿಜರ ವೇದಗಾನ ವಾದ್ಯ ಘೋಷಿಸಲಾಗ
ನಿಜಸತಿ ಪದ್ಮೆಗೆ ಮಾಂಗಲ್ಯ ಧರಿಸಿದೆ ೨೩

ಸುರಮುನಿಜನ ಮೂರು ವಿಧಕೆ
ತರತಮ ಯೋಗ್ಯತೆ ಅರಿತು
ಪರಿಪರಿ ಸಾಧನವಿತ್ತೆ ಆಹ
ನೀರರುಹಜಾಂಡವು ನಿನ್ನಾಧೀನವು
ಸಿರಿಭೂದೊರೆಯೇ ಶ್ರೀನಿವಾಸ ದಯಾನಿಧೆ ೨೪

ನೀ ನಿಂತು ನುಡಿಸಿದೀ ನುಡಿಯು
ನಿನ್ನಡಿಗಳಿಗೆ ಅರ್ಪಣೆಯು
ಚನ್ನಮಾರುತ ಮನೋಗತನೆ ಆಹ
ವನರುಜಹಾಸನ ತಾತ ಪ್ರಸನ್ನ ಶ್ರೀನಿವಾಸ
ನಿನಗೆ ಪ್ರೀತಿಯಾಗಲೊ ಸುಹೃದ ಸಂತೃಪ್ತ ೨೫

ಶ್ರೀ ರಾಮಕಪಿಲ

೩೬

ಸೋಮರವಿ ಭಾಸಕನೆ ರಾಮ ಕಪಿಲನೆ ನಿನ್ನ
ತಾಮರ ಸಪದಯುಗಳಕಾ ನಮಿಪೆ ಕಾಯೊ ಪ

ಹೇಮಗರ್ಭನ ತಾತ ಭಾಮೆ ಭೈಷ್ಮಿಯ ರಮಣ
ವಾಮ ಚಿತ್ಸುಖಕಾಯ ಅಮರಗುಣಪೂರ್ಣ ಅಪ

ಶ್ರೀಕರನೆ ಸುಖಮಯನೆ ಲೋಕಪಾಲಕ ಸ್ವಾಮಿ
ಸ್ವೀಕರಿಸೊ ಈ ಸೇವೆ ಭಕುತಜನಪ್ರಿಯ
ನಾಕ ಭುವಿ ಪಾತಾಳ ಲೋಕಂಗಳಲಿ ವ್ಯಾಪ್ತ
ಏಕಕಾರಣ ಸಾಕ್ಷಿಸುಖ ಸಾರಭೋಕ್ತಾ ೧

ಭೂರಮಣ ಸಾರಾತ್ಮ ನೀ ರಮಿಪೆ ನಿನ್ನೊಳಗೆ
ಮಾರ ಕಮಲಜತಾತ ಶರಣು ಶರಣಾದೆ
ಹಾರ ಅರಿಶಂಖಾಬ್ಜ ಭಾರಿಗದೆ ಚಾಪಧರ
ಘೋರತರ ಭಯಹಾರಿ ನಾರಸುರಸೇವ್ಯ ೨

ನೋಡಬೇಕೆಲೊ ನಿನ್ನ ಮೂಢಮನೋತಿಮಿರಾರ್ಕ
ಬಾಢವೆನ್ನುತ ಬೇಗ ನೋಡೆನ್ನ ದಯದಿ
ಪಾಡಿ ಪೊಗಳುವೆ ನಿನ್ನ ಈಡು ಇಲ್ಲದ ವಿಶ್ವ
ಮೂಡಲ ಸುನಗವಾಸ ಪ್ರಸನ್ನ ಶ್ರೀನಿವಾಸ ೩

ಪಂಗು ಪುರವಾಸ ಶ್ರೀ ವೆಂಕಟೇಶ

೩೭

ಪಂಗು ಪುರವಾಸ ಶ್ರೀ ವೆಂಕಟೇಶ ನಿನ್ನ
ಪಂಕಜಂಘ್ರಿಗಳಲ್ಲಿ ಸತತ ಶರಣಾದೆ

ಪಂಕಜಾಲಯ ಪತಿಯೆ ಪಂಕಜೋದ್ಭವ ಪಿತ
ವೃಷಾಂಕ ಸಂಕ್ರದಾದಿ ಸುತವಿನುತ ಈಶ ಪ

ಏಳು ತಗ್ಗಿದ ಗುಡ್ಡ ದಾಟಿ ನಿನ್ನಯ ಕ್ಷೇತ್ರ
ಹೇಳುವರು ಮೊಂಡಿಪಾಳಯ ಎಂದು ಅಲ್ಲಿ
ಮಾಲೋಲ ನಿನ್ನಾನುಗ್ರಹದಿ ಕಂಡೆ ನಿನ್ನ
ಚೆಲುವ ಲಿಂಗಾಕಾರ ಶ್ರೀ ವೆಂಕಟೇಶ ೧

ಸರ್ವ ವೈದಿಕ ನಾಮಲಿಂಗಾತ್ಮಕ ಶಬ್ದ
ಸರ್ವೋತ್ತಮ ವಿಷ್ಣುವಿಗೇವೇ ಮುಖ್ಯದಲಿ
ಅನ್ವಯವು ಎಂಬುದನ್ನು ಸೂಚಿಸುವ ತೆರದಲ್ಲಿ
ದಿವ್ಯ ಲಿಂಗರೂಪ ತೋರಿಸುತಿ ೨

ಉತ್ಸವ ಮೂರ್ತಿಗಳೋಳ್ ಶ್ರೀ ಭೂ ಸಮೇತನೀ
ಜ್ಯೋರ್ತಿಮಯ ಜ್ವಲಿಸುತಿ ಅಪ್ರತಿಮಾಂತಸ್ಥ
ವೇಧ ಪಿತ ಶ್ರೀ ಪ್ರಸನ್ನ ಶ್ರೀನಿವಾಸನೇ ನಮೋ
ವಿಧಿ ಶೇಷ ದೂರ್ವಾಸ ಇಂದ್ರಾದಿ ವಂದ್ಯ ೩

ದೇವರ ನಾಮ

(ಶ್ರೀಶ ಸ್ತೋತ್ರ)

೩೮

ಶ್ರೀಕರಾರ್ಚಿತ ಶ್ರೀಶ ಶ್ರೀ ಶ್ರೀನಿವಾಸ
ಭಕುತವತ್ಸಲ ನಮೋ ಕಾರುಣ್ಯ ಶರಧೇ ಪ

ಲೌಕೀಕ ವಿಷಯದಲಿ ಕಾಯಮನದಿಂಚರಿಸಿ ।
ಶ್ರೀಕರನೆ ನಿನ್ನನಾ ಸಂಸ್ಮರಿಸಲಿಲ್ಲಾ
ಲೋಕ ಬಂಧುವೇ ಶರಣು ಶರಣು ಕರುಣಾಂಬುಧಿಯೇ
ನೀಕಾಯಬೇಕೆನ್ನ ತಪ್ಪು ಎಣಿಸದಲೆ ೧

ನಾರಾಯಣ ವಾಸುದೇವ ಸಂಕರುಷಣ
ಪ್ರದ್ಯುಮ್ನ ಅನಿರುದ್ಧ ಆತ್ಮಾಂತರಾತ್ಮ
ಶ್ರೀ ಕೃಷ್ಣ ಕಪಿಲನೆ ಸರ್ವಕರ್ತನು ನೀನೆ
ಸರ್ವ ಪ್ರೇರಕ ಸರ್ವ ಸ್ವಾಮಿ ಮಮ ಸ್ವಾಮಿ ೨

ವಿಶ್ವ ವಿಷ್ಣು ವಷಟ್ಕಾರ ಶ್ರೀಭೂರಮಣ
ವಿಶ್ವತೋಮುಖ ಸರ್ವ ವಶಿ ವಿಶ್ವನಾಥ
ವಿಶ್ವ ಪಾಲಕ ನಮೋ ಶ್ರೀರಾಮ ವಿಧಿತಾತ
ವಿಶ್ವ ರೂಪನೇ ಶ್ರೀ ಪ್ರಸನ್ನ ಶ್ರೀನಿವಾಸ ೩

ಶ್ರೀವಿಠಲದೇವರು

೩೯

ವಂದೇ ವಿಠಲರಾಯ ಇಂದಿರೆ ಬಂದು
ನಿಂದು ಪಾಲಿಸೋ ಎನ್ನ ಇಂದ್ರನ ಇಂದ್ರ ಪ

ಪೂರ್ಣ ಜ್ಞಾನಾತ್ಮ ಸುಪೂರ್ಣೈಶ್ವರ್ಯನೆ
ಪೂರ್ಣ ಪ್ರಭಾತ್ಮ ಸುಪೂರ್ಣ ಆನಂದ
ಪೂರ್ಣ ತೇಜಾತ್ಮನೇ ಪೂರ್ಣ ಅದೋಷನೆ
ವನರುಹಭವನಿಂದರ್ಚಿತಧ್ಯೇಯ ವಿಭುವೆ ೧

ಶರಣಸರೋಜವು ಸಮಕಟಿ ಕರಗಳು
ಸುರಪ ನೀಲಾಭ ಶ್ರೀ ತುಳಸಿಯ ಹಾರ
ಪುರುಷೋತ್ತಮ ವಿಭು ಖರದಕ್ಷ ವಾಮದಿ
ಪದಾರವಿಂದವು ಸರಸಿಜನಯನ ೨

ವೃತತಿಜಾಸನಪಿತ ಪ್ರಸನ್ನ ಶ್ರೀನಿವಾಸ
ಪ್ರತತ ಪರಾತ್ಪರ ಹೃತ್ತಿಮಿರಾರ್ಕ
ನುತಜನಹಿತ ಕರಧನಭಕ್ತಿಪ್ರದ ಜಗನ್
ಮಾತೆ ರುಕ್ಮಿಣಿ ಸತ್ಯಭಾಮಾಪತೇ ನಮೋ ೩

ಶ್ರೀ ಆನಂದಮಯ ಸ್ತೋತ್ರ

೪೦

ಪೂರ್ಣ ಸುಗುಣಾರ್ಣವನೆ ಅನಘ ಪರಮೇಶ್ವರನೆ
ಆ ನಮಿಪೆ ಶ್ರೀರಮಣ ಆನಂದಮಯ ವಿಷ್ಣು ಪ

ನಿನ್ನಯ ಸುಮಹಿಮೆಗಳ ನಿನ್ನಿಚ್ಛೆಯಿಂದಲೇ
ಚೆನ್ನಾಗಿ ತಿಳಿಸಿ ಅಚ್ಛಿನ್ನ ಭಕ್ತಿಯನೀಯೊ ಅಪ

ಸುಖರೂಪ ಪಾಲನಾಲಯಕರ್ತ ಲಕ್ಷ್ಮೀಶ
ನಿಷ್ಕಳನು ನೀ ಸದಾ ಕೈವಲ್ಯ ಸುಖದ
ಆಗಮ ಸುಶಾಸ್ತ್ರೈಕ ವಿಜ್ಞೇಯ ಪರಬ್ರಹ್ಮ
ಅಂಗಾಂಗ್ಯಭಿನ್ನ ಆನಂದ ಸಂಪೂರ್ಣ ೧

ಬ್ರಹ್ಮಶಬ್ದದಿ ಮುಖ್ಯವಾಚ್ಯ ಬಹು ಆವರ್ತಿ
ಬ್ರಹ್ಮ ಆನಂದಮಯ ನೀ ಇತರರಲ್ಲ
ಬ್ರಹ್ಮಪರಿಪೂರ್ಣ ಹರಿ ಸರ್ವನಾಮದಿ ನೀನೆ
ಬಹುರೂಪ ಸರ್ವಸ್ಥ ಈಶ್ವರ ಆನಂದಮಯ ೨

ಚಿತ್ಪ್ರಕೃತಿ ನಾಲ್ಮೊಗನು ಅಷ್ಟಮೂರುತಿ ಎಂಬ
ರುದ್ರನು ದೇವೇಂದ್ರ ಸುರಗುರು ವಿಪ್ರ
ಇಂಥ ಯಾರೂ ವಸ್ತು ಯಾವುದೊ ಅಲ್ಲವು
ಆನಂದಮಯ ನೀನು ವಿಷ್ಣು ಪರಬ್ರಹ್ಮ ೩

ಪ್ರಕೃತಿ ಪ್ರಜಾಪತಿ ಸದಾನಂದ ದಶಪ್ರಮತಿ
ರುದ್ರಾಷ್ಟಮೂರ್ತ್ಯಾದಿ ಸರ್ವ ಶಬ್ದಂಗಳು
ಪರನೆ ಬ್ರಹ್ಮನೆ ವಿಷ್ಣು ಮುಖ್ಯ ವಾಚಕ ನಿನಗೆ
ಇರುವ ಈ ಸರ್ವರೊಳು ಸುಖಪೂರ್ಣ ಸ್ವಾಮಿ ೪

ಅನ್ನಮಯ ಪ್ರಾಣಮಯ ಮನೋಮಯ ವಿಜ್ಞಾನಮಯ
ಆನಂದಮಯ ಎಂಬ ಐದು ಶಬ್ದಂಗಳು ೧

ಆನಂದಮಯ ಶಬ್ದದಿಂದ ಗ್ರಹಿಸಲುಬೇಕು
ಆನಂದಮಯ ಬ್ರಹ್ಮ ನೀನೆ ಇತರರು ಅಲ್ಲ ೫

ಶಿರ ಬಾಹುದ್ವಯ ಮಧ್ಯ ಚರಣ ಅಂಗಾಂಗಗಳು
ಪೂರ್ಣ ಆನಂದಮಯ ಎಂದೂ ಅಭಿನ್ನ
ಉರು ಸುಗುಣ ಪರಿಪೂರ್ಣ ವಿಷ್ಣು ಆತ್ಮನು ಬ್ರಹ್ಮ
ಶೃತಿಯು ಬಹುಸಾರುತಿದೆ ಸುಖಮಯನು ಎಂದು ೬

ಅನ್ನಮಯ ಅನಿರುದ್ಧ ಪ್ರಾಣಮಯ ಪ್ರದ್ಯುಮ್ನ
ಮನೋಮಯ ಸಂಕರ್ಷಣನು ವಿಜ್ಞಾನಮಯನು
ಅನಘ ಮಾಯಾರಮಣ ಪರವಾಸುದೇವ ನೀ
ಆನಂದಮಯ ಶ್ರೀಶ ನಾರಾಯಣ ಬ್ರಹ್ಮ ೭

ಪಂಚ ಕೋಶಂಗಳಲಿ ತನ್ನಾಮ ತದ್ಭಿನ್ನ
ಕಿಂಚಿತ್ತು ಲೇಪವಿಲ್ಲದೆ ಇದ್ದು ನಿಯಮಿಸುವೆ
ಪಂಚ ಸುಖರೂಪದಿಂ ಪಂಚವರ್ಣದಿ ಜ್ವಲಿಪೆ
ಸಂಚಿಂತಿಪರ್ಗೆ ಸುಖವೀವೆ ಸುಖಮಯ ಬ್ರಹ್ಮ ೮

ಅಧಿಕಾರಿ ಆನಂದ ಪ್ರಚುರ ಬಹುರೂಪ ನೀ
ಸರ್ವರೂ ನಿನ್ನಿಂದ ಉಪಜೀವ್ಯರೊ ಸ್ವಾಮಿ
ಸರ್ವರಿಗು ಪ್ರೇರಕನು ಸತ್ತಾಪ್ರವೃತ್ತಿದನು
ಸರ್ವೇಶ ಸುಖಪೂರ್ಣ ಸರ್ವವ್ಯಾಪಿಯೆ ದೇವ ೯

ಆನಂದಮಯ ನೀನೆ ಆನಂದೋದ್ರೇಕದಿಂ
ಪ್ರಾಣಿಗಳ ಧರ್ಮಗಳ ಪ್ರವೃತ್ತಿ ಮಾಡುವೆಯೊ
ಆನಂದೋದ್ರೇಕದಿಂ ಸರ್ವತ್ರವ್ಯಾಪ್ತ ನೀ
ಆನಂದಮಯ ಇತರ ಲೋಕಚೇಷ್ಟಕರಿಲ್ಲ ೧೦

ಅಂಗಾಂಗಿತ್ವದಿ ಭಗವಂತ ನೀ ಕ್ರೀಡಿಸುವೆ
ರಂಗ ನೀ ಸತ್ಯಂ ಜ್ಞಾನಮನಂತಂ ಬ್ರಹ್ಮನೆಂದು
ಹೊಗಳುತಿದೆ ಶೃತಿಯು ಸುಖಸಾರಾತ್ಮ ಚಿನ್ಮಾತ್ರ
ಚಾರ್ವಾಂಗ ನಿನ್ನ ತಿಳಿಯದೆ ಬೇರೆ ಗತಿಯಿಲ್ಲ ೧೧

ಸತ್ಯ ಸತ್ಸೃಷ್ಟಿಕರ್ತ ಜೀವನಪ್ರದನು
ಸರ್ವ ಪ್ರವರ್ತಕನು ಸಂಹಾರಕರ್ತ
ಅಶೇಷಸಾಮಾನ್ಯ ವಿಶೇಷಜ್ಞಾನವು ಜ್ಞಾನ
ದೇಶಾದಿಪರಿಚ್ಛೇದ ಶೂನ್ಯವು ಆನಂತ ೧೨

ಅನ್ನಮಯದಿಂ ಸೃಷ್ಟಿ ಸಂಹಾರಜೀವನವು
ಪ್ರಾಣಮಯ ಶಬ್ದ ಸಹ ಜೀವನಪ್ರದವು
ಮನೋಮಯ ಶಬ್ದದಿಂ ಸಾಮಾನ್ಯಜ್ಞಾನವು
ವಿಜ್ಞಾನಮಯ ಶಬ್ದದಿ ವಿಶೇಷಜ್ಞಾನ ೧೩

ಆನಂದಮಯ ಶಬ್ದದಿಂದಲಿ ಜ್ಞೇಯವು
ಆನಂದಾದ್ಯಖಿಳಗುಣ ಅಪರಿಚ್ಛಿನ್ನತ್ವ
ಅನ್ನಮಯ ಪ್ರಾಣಮಯ ಸತ್ಯಂ ಬ್ರಹ್ಮ
ಮನೋಮಯ ವಿಜ್ಞಾನಮಯ ಜ್ಞಾನಂ ಬ್ರಹ್ಮ ೧೪

ಆನಂದಮಯ ಆನಂತಂ ಬ್ರಹ್ಮ ಎಂದೀ ರೀತಿ
ಮಂತ್ರವರ್ಣೋಕ್ತ ಶಬ್ದಗಳಿಗೇಕಾರ್ಥ
ಆನಂದಮಯ ಮೊದಲಾದ ಶಬ್ದಗಳಿಂದ
ಆನಂದಪರಿಪೂರ್ಣ ವಿಷ್ಣು ನೀನೇ ವಾಚ್ಯ ೧೫

ಆತ್ಮ ನೀ ಆನಂದಮಯ ಇತರರು ಅಲ್ಲ
ಅನಾತ್ಮರು ಸಂಪೂರ್ಣಸ್ವತಂತ್ರರು ಅವರು
ಚೇತನಾಚೇತನದ ಸತ್ತಾ ನಿನ್ನಿಂದಲೇ
ಆನಂತ ನೀ ಸರ್ವಗನು ಆಸಮ ಪ್ರಭು ಐರ ೧೬

ಬ್ರಹ್ಮ ವಿದಾಪ್ನೋತಿ ಪರಂ ಎಂದು ಉಪನಿಷದ್ವಾಕ್ಯ
ಬ್ರಹ್ಮಾಪರೋಕ್ಷವೇ ಮೋಕ್ಷಕ್ಕೆ ಕಾರಣ
ಬ್ರಹ್ಮೇತರ ವಿರಿಂಚಾದಿ ಜೀವರ ಜ್ಞಾನ
ಮೋಕ್ಷಕೊಡಲು ಎಂದು ಶೃತಿಯು ಪೇಳುತಿದೆ ೧೭

ತಮೇವಂ ವಿದ್ವಾನಮೃತ ಇಹಭವತಿ
ನಾನ್ಯಃ ಪಂಥಾ ಅಯನಾಯ ವಿದ್ಯತಾ
ಎಂಬ ಶೃತ್ಯನುಸಾರ ನಿನ್ನಾಪರೋಕ್ಷ ವಿನಾ
ಮುಕ್ತಿಯು ಲಭಿಸದು ಅನ್ಯಜ್ಞಾನದಿ ಎಂದೂ ೧೮

ಆನಂದಪ್ರಚುರ ಪೂರ್ಣಾನಂದಮಯ ನೀನೆ
ಆನಂದ ತರತಮದಿ ಜೀವರಲಿ ಉಂಟು
ಅತ್ಯಂತ ಭೇದವು ನಿನಗೂ ಜೀವರಿಗೂ
ಅನಂತ ಅಪರಿಮಿತ ಆನಂದಿ ನೀನೆ ೧೯

ರುದ್ರನ ಶತಗುಣಿತ ಆನಂದ ನಾಲ್ಮೊಗನ
ಒಂದು ಆನಂದವು ಎಂಬುವುದು ಶೃತಿಯು
ಆನಂದ ಪರಿಮಿತವು ಜೀವರಿಗೆ ಈ ರೀತಿ
ಆನಂದ ಅಪರಿಮಿತ ನಿನ್ನಯ ಸ್ವರೂಪ ೨೦

ಸುಖಮಯ ನಿನ್ನಪರಿಮಿತಾನಂದಾದಿಗಳನು
ಸಾಕಲ್ಯ ತಿಳಿದವರು ಇಲ್ಲವೇ ಇಲ್ಲ
ಸಾಕಲ್ಯ ಶಬ್ದಗಳು ಪೊಗಳಲರಿಯವು ನಿನ್ನ
ಏಕಸುಖಮಯ ನೀನು ಜೀವರಿಗೆ ಭಿನ್ನ ೨೧

ತತ್ವಮಸ್ಯ ಹರಿಬ್ರಹ್ಮಾಸ್ಮಿ ಪುರುಷಯೇ ವೇದಂ
ಸರ್ವಂ ಎಂಬಂಥಾ ಇಂಥ ಶೃತಿ ಮಾತುಗಳು
ಜೀವೇಶ ಐಕ್ಯವನು ಬೋಧಿಸುವವಲ್ಲವು
ಸರುವಿಚಾರ ನಿರ್ಣಯದಿ ಭೇದಬೋಧಕವೆ ೨೨

ಜೀವರಿಗೆ ಜನ್ಮಜೀವನ ಸತ್ತಾ ದಾತನು
ಸರ್ವಾಶ್ರಯ ಸರ್ವನಿಯಾಮಕನು ಆತ್ಮ
ಜೀವರು ಪರಬ್ರಹ್ಮಜ್ಞಾನದಿಂ ಪೊಂದುವ
ಸೋಚಿತಪೂರ್ಣತ್ವ ಕೊಡುವ ನೀ ಬ್ರಹ್ಮ ೨೩

ಸರ್ವಕ್ಕೂ ಭಿನ್ನ ನೀ ಸರ್ವತ್ರ ಸರ್ವದಾ
ಸರ್ವದೊಳು ಇರುವಂಥ ಸರ್ವೇಶ್ವರ

ಸರ್ವ ಸತ್ತಾದಿ ಪ್ರದತ್ವ ಸ್ವಾಮಿತ್ವದಿಂ
ಸರ್ವ ನೀನೆಂದೆನಿಸಿಕೊಂಬೆಯೊ ದೇವ ೨೪

ಸರ್ವವಂದ್ಯನು ವಿಷ್ಣು ಸರ್ವಾಂತರ್ಯಾಮಿಯು
ಸ್ವತಂತ್ರ ಈಶನು ಸರ್ವಜೀವರಿಗೆ ಭಿನ್ನ
ಸರ್ವಸ್ವಾಮಿಯು ನೀನು ಎಂದರಿತು ಭಜಿಪರಿಗೆ
ಸರ್ವಶೋಕವ ಬಿಡಿಸಿ ಮೋಕ್ಷಸುಖವೀವೆ ೨೫

ಸರ್ವಜಡ ಚೇತನದಿ ಅಂತರ್ನಿಯಾಮಕನು
ಸರ್ವಜಗದಾಧಾರ ಏಕ ಬಹುರೂಪ
ತ್ವಂ ಅಸೌ ಅಹಮೆಂದು ಸರ್ವನಾಮದಿ ವಾಚ್ಯ
ಸರ್ವಜಡ ಚೇತನಕೆ ವಿಲಕ್ಷಣನು ಸ್ವಾಮಿ ೨೬

ಅತೀಂದ್ರಿಯವು ಬ್ರಹ್ಮವಿಷಯಕ ಜ್ಞಾನ
ಶೃತ್ಯನುಸಾರವಿಲ್ಲದ ಅನುಮಾನ
ದುಸ್ತರ್ಕದಿಂದಲಿ ಲಭಿಸದು ಯಾರಿಗೂ
ಮೋದಮಯ ಶ್ರೀ ವಿಷ್ಣು ಜೀವರಿಂ ಭಿನ್ನ ೨೭

ಬದ್ಧರೊಳು ಮುಕ್ತರೊಳು ಇದ್ದು ನೀ ನಿಯಮಿಸುವೆ
ಬದ್ಧರಂತೇ ಮುಕ್ತಜೀವರಿಗೂ ಭಿನ್ನ
ಮುಕ್ತರಿಗೆ ಅವರವರ ಆನಂದ ಅನುಭವವು
ಅಧೀನ ನಿನ್ನಲ್ಲಿ ಆನಂದಮಯ ಶ್ರೀಶ ೨೮.

ಸದಮಲ ಬ್ರಹ್ಮ ನಿನ್ನ ಪರೋಕ್ಷಜ್ಞಾನಿಗೆ
ಪದುಮಸಂಭವ ಸಹ ನೀನು ಸಹ ಇದ್ದು
ಒದಗಿಸುವೆ ಸೋಚಿತ ಮೋಕ್ಷಸುಖ ಅವರಿಗೆ
ಹೇ ದಯಾನಿಧೇ ನಮೋ ಆನಂದಪೂರ್ಣ ೨೯

ಅನ್ನ ಪ್ರಾಣ ಮನೋವಿಜ್ಞಾನ ಆನಂದಮಯ
ಪರಿಣಾಮ ಅಭಿಮಾನರಹಿತ ಅಧಿಕಾರಿ
ಆನಂದ ಪ್ರಚುರನೇ ಲೋಕಚೇಷ್ಟಕ ನೀನೆ
ಮಂತ್ರವರ್ಣೋಕ್ತ ಮಹಾಮಹಿಮ ಸುಖಪೂರ್ಣ ೩೦

ವನಜಾಸನಾದಿಗಳು ಆನಂದಮಯರಲ್ಲ
ನಿನ್ನಿಂದ ಉಪಜೀವ್ಯ ಭಿನ್ನರು ಅವರು
ಆಮ್ನಾಯದಿಂ ವೇದ ದುಸ್ತರ್ಕಕತಿ ದೂರ
ಆನಂದಮಯ ವಿಷ್ಣು ಮುಕ್ತರಿಗೂ ಆಶ್ರಯನು ೩೧

ಜ್ಞಾನಸುಖಪೂರ್ಣ ಪ್ರಸನ್ನ ಶ್ರೀನಿವಾಸ
ಪೂರ್ಣಪ್ರಜ್ಞರ ಹೃತ್‌ಸ್ಥ ಜನ್ಮಾದಿಕರ್ತ
ಎನ್ನ ಒಳಹೊರಗಿದ್ದು ನೀನೆ ನುಡಿದೀ ಗ್ರಂಥ
ನಿನಗೆ ಅರ್ಪಣೆ ಸುಹೃದ ನಿತ್ಯ ಸಂತೃಪ್ತ ೩೨

ಶ್ರೀ ಸರ್ವಾಶ್ರಯ ಸ್ತೋತ್ರ

೪೧

ಪೂರ್ಣ ಸುಗುಣಾರ್ಣವನೆ ಅನಘ ಪರಮೇಶ್ವರನೆ
ಆ ನಮಿಪೆ ಶ್ರೀರಮಣ ಆನಂದಮಯ ವಿಷ್ಣು
ನಿನ್ನಯ ಸುಗುಣಗಳ ನಿನ್ನಿಚ್ಛೆಯಿಂದಲೇ
ಚೆನ್ನಾಗಿ ತಿಳಿಸಿ ಅಚ್ಛಿನ್ನ ಭಕ್ತಿಯನೀಯೊ ಪ

ಯಸ್ಮಿನ್ ದ್ಯೌ ಎಂಬ ಶೃತಿ ಉಕ್ತವಾದ ದ್ಯೌ
ಭೂಮ್ಯಂತರಿಕ್ಷಾದಿ ಸರ್ವಕಾಶ್ರಯನು
ತಮೇವೈಕಂ ಶೃತ್ಯುಕ್ತ ಆತ್ಮಸ್ವಶಬ್ದಿತನೇವೆ
ಉಮೇಶ ವಿಧಿ ವಾಯು ಜೀವರಾರೂ ಅಲ್ಲ ೧

ಶ್ರೀ ಪುಷ್ಪಭವ ವಾಯು ವಾರುಣೀಪತಿ ರುದ್ರ
ವಿಪ ಶಕ್ರ ಸರ್ವರಿಗು ಆಶ್ರಯನು
ಸುಪೂರ್ಣಗುಣ ಆತ್ಮ ಅಕ್ಷರ ಸುಮೋಕ್ಷದನು
ಶ್ರೀಪ ವಿಷ್ಣುವೇ ಸರ್ವ ಆಧಾರ ಎಂದೂ ೨

ಉರು ಸುಗುಣ ಪರಿಪೂರ್ಣ ಆತ್ಮ ವಿಷ್ಣುವಿಗೇವೆ
ರುದ್ರ ಕೃತ್ತಿವಾಸ ಈಶಾನ ಪಿನಾಕಿ
ಸರ್ವ ವೈದಿಕನಾಮ ಲಿಂಗಾತ್ಮಕ ಶಬ್ದ
ಇರುತಿವೆ ವಾಚಕವಾಗಿ ಮುಖ್ಯವಾಗಿ ೩

ಈ ಷೋಡಶ ಕಲಾತ್ಮಕ ದೇಹ ಅಭಿಮಾನಿ
ಪುಷ್ಪಭವ ರುದ್ರ ಮೊದಲಾದವರಲ್ಲಿ
ದೋಷದೂರನೆ ವಿಷ್ಣು ನೀ ನಿಂತು ಪ್ರವರ್ತಿಸುವೆ
ವೃಷಭ ಗಮನಾದಿಗಳು ನಿನ್ನಯ ಪ್ರತೀಕ ೪

ಉತ್ತಮನೆ ಪರಮನೆ ಪರಿಪೂರ್ಣ ಗುಣಸಿಂಧೊ
ನಿತ್ಯ ಅವ್ಯಯ ವಿಷ್ಣು ನೀನೇವೆ ಎಂದೂ
ಆತ್ಮ ಬ್ರಹ್ಮಾದಿ ಶಬ್ದಗಳಿಂದ ವಾಚ್ಯನು
ಚತುರ್ಮುಖಾದ್ಯ ಪೂರ್ಣರಿಗೆ ಕೂಡುವುದು ಇಲ್ಲ ೫

ಸಮಪರರು ಇಲ್ಲದ ವಿಷ್ಣು ಆತ್ಮನೇ ದೌ
ಭೂಮ್ಯಂತರಿಕ್ಷ ಮನಃ ಪ್ರಾಣೇಂದ್ರಿಯಗಳೊಳ್
ಮತ್ತೂ ತದಭಿಮಾನಿಗಳೊಳ್ ಪ್ರವಿಷ್ಟನು
ಈ ಮಹಾ ಮಹಿಮೆ ವಿಷ್ಣ್ವೇತರರಿಗಿಲ್ಲ ೬

ಮೋಕ್ಷ ಕಾರಣ ಜ್ಞಾನವಿಷಯನಾಗಿರುವಂಥ
ವಿಷ್ಣುವೇ ಆತ್ಮ ದ್ಯುಭ್ವಾದಾಯತನ
ವಿಷ್ಣುವೇ ಮುಖ್ಯದಲಿ ಆತ್ಮನೆಂದಿರುವುದು
ವಿಷ್ಣ್ವೇತರರಲ್ಲಿ ಮುಖ್ಯ ವಾಚ್ಯತ್ವವಿಲ್ಲ ೭

ವಿಷ್ಣು ಆತ್ಮನೇ ಸರ್ವ ಮುಕ್ತರಿಗು ಆಶ್ರಯನು
ವಿಷ್ಣು ಆತ್ಮನೇ ಸರ್ವ ಚಿದಚಿದಾಶ್ರಯನು
ವಿಷ್ಣು ಆತ್ಮಂದೇವೆ ದ್ಯುಭ್ವಾದ್ಯಾಯತನತ್ವ
ವಿಷ್ಣ್ವೇತರ ಅಪೂರ್ಣರಲಿ ಅಸಂಭವವು ೮

ಆತ್ಮನೇ ದ್ಯುಭ್ವಾದ್ಯಾಯತನ ಪರಬ್ರಹ್ಮ
ಆತ್ಮ ಅಕ್ಷರ ವಿಷ್ಣುವೇ ಮುಕ್ತಪ್ರಾಪ್ಯ
ಮುಕ್ತಾಶ್ರಯತ್ವವು ಜೀವರಾರಿಗೂ ಇಲ್ಲ
ಮುಕ್ತ ಪ್ರಾಪ್ಯತ್ವಲಿಂಗವು ವಿಷ್ಣುವಿನದೇ ೯

ಶೃತಿಸ್ಮೃತಿಗಳು ವಿಷ್ಣುವೇ ಮುಕ್ತಪ್ರಾಪ್ಯ
ಎಂದು ಸಾರುತಿವೆ ಬಹುವಿಧದಿ ದೃಢದಿ
ಮುಕ್ತಾಶ್ರಯತ್ವ ಅಮೃತ ಶೈಷ ಸೇತು ಶೃತಿಸಿದ್ಧ
ಮುಕ್ತಾನಾಂ ಪರಮಾ ಗತಿಃ ವಿಷ್ಣುವೇವೆ ೧೦

ಬ್ರಹ್ಮಜ್ಞಾನಿ ಮುಕ್ತಬ್ರಹ್ಮನ್ನ ಹೊಂದುವನು
ಮಹಾ ಜ್ಞೇಯ ವಿಶ್ವಾತ್ಮ ನಾರಾಯಣ
ಇಹಲೋಕ ಪರಲೋಕ ಎಲ್ಲಕ್ಕು ಸ್ವಾಮಿಯು
ಶ್ರೀಹರಿ ನಾರಾಯಣನೆ ಮುಕ್ತಾಶ್ರಯನು ೧೧

ಅಪ್ರಯೋಜಕ ಚಿಂತೆ ತೊರೆದು ತತ್ವವನರಿತು
ಅಪರೋಕ್ಷಜ್ಞಾನಿಯು ಶ್ವೇತದ್ವೀಪಸ್ಥ
ಶ್ರೀಪ ವಾಸುದೇವನಲಿ ಪೋಗಿ ನೋಡುವ ತನಕ
ನ ಭವತಿ ಮುಕ್ತತ್ವ ಎಂದು ನಿರ್ಣಯವು ೧೨

ಜ್ಞಾನ ಸುಖಪೂರ್ಣ ಪ್ರಸನ್ನ ಶ್ರೀನಿವಾಸ
ಪೂರ್ಣಪ್ರಜ್ಞರ ಹೃತ್‌ಸ್ಥ ಜನ್ಮಾದಿಕರ್ತಾ
ಎನ್ನ ಒಳಹೊರಗಿದ್ದು ನೀನೆ ನುಡಿದೀ ಗ್ರಂಥ
ನಿನಗೆ ಅರ್ಪಣೆ ಸುಹೃದ ನಿತ್ಯಸಂತೃಪ್ತ ೧೩

ಶ್ರೀ ಅಚ್ಯುತಾನಂತ ಗೋವಿಂದ ಸ್ತೋತ್ರ

೪೨

ಪ್ರೋಚ್ಯಸುಗುಣಾರ್ಣವ ಶ್ರೀಶ ನಿರ್ದೋಷ
ಅಚ್ಯುತಾನಂತ ಗೋವಿಂದಾಯ ನಮಃ ॥ ಪ

ಪ್ರಾತರುದಿತಾರ್ಕ ನಿಭ ತೇಜಸ್ವಕಾಂತಿಮಾನ್
ರತ್ನ ಛವಿ ಜ್ವಲಿಸುವ ಕಿರೀಟಿಯೆ ಶರಣು
ಪ್ರತತ ಪ್ರಜ್ವಲ ಮಂಡಲೋಪಮ ಕುಂಡಲಗಳು
ವಿತತ ಮಹಿಮನೆ ನಿನ್ನ ಕಿವಿಯಲಿ ಪೊಳೆಯುತೆ ೧

ರಾಜರಾಜೇಶ್ವರನೆ ಸರ್ವಾಯುಧೋಪೇತ
ನಿಜಬಲಾಮಿತ ಶಕ್ತ ಚತುರ್ಬಾಹು ಶರಣು
ಭಜಕರಕ್ಷಕ ಶಂಖ ಚಕ್ರಧರ ದೇವನೆ
ತ್ರಿಜಗದೀಶನೆ ವಿಷ್ಣೋ ಪರಿ ಸಂಸ್ಥಸ್ವಾಮಿ ೨

ಅನಂತ ನಿತ್ಯನೆ ನಿನ್ನನ್ನ ಸರ್ವದೇವತೆಗಳು
ಸನಕಾದಿ ಮುನಿವರರು ಉಪಾಸಿಪರು ಶರಣು
ಘನವರದ ಅಭಯದನೇ ಸರ್ವ- ಲೋಕವಕಾಯ್ವ
ವನಜಭವಪಿತ ನಮೋ ಪ್ರಸನ್ನ ಶ್ರೀನಿವಾಸ ೩

ಪ್ರಸನ್ನ ಶ್ರೀ ರಾಜರಾಜೇಶ್ವರ ಸ್ತೋತ್ರ ಹಾಗೂ ಶ್ರೀ ಕಪಿಲ

೪೩

ರಾಜರಾಜೇಶ್ವರನೇ ರಾಜೀವವದನ ಶ್ರೀ
ರಾಜರಾಜೇಶ್ವರಿ ಪತೇ ಶರಣು ಮಾಂಪಾಹಿ
ರಾಜೀವಪಿತ ನೀನು ಕನ್ಯೆಯರಿಗೆ ವರ
ಪ್ರಜಾಸಂಪತ್ ಉದ್ಯೋಗ ಈವಿ ಭಜಕರಿಗೆ ಪ

ವೇಧ ಕಾಯಜ ಸ್ವಾಯಂಭುವ ಮನು ಶತರೂಪಾ
ಈ ದಂಪತಿಗೆರಡು ಗಂಡುಗಳು ಪ್ರಿಯವ್ರತ
ಉತ್ಥಾನಪಾದ ಮೂರು ಹೆಣ್ಣು ಮಕ್ಕಳು
ಅಕೂತಿ ದೇವಹೂತಿ ಪ್ರಸೂತಿ ಎಂಬುವರು ೧

ಶ್ರೀಪತಿಯೇ ನಿನ್ನ ಕಾರುಣ್ಯ ಬಲದಿಂದ
ಸುಪುಣ್ಯ ಶ್ಲೋಕ ಆದಿಮನು ತನ್ನ
ರೂಪ ಗುಣ ಶ್ರೇಷ್ಠ ಕನ್ಯೆಯರಿಗೆ ತಕ್ಕಾನು –
ರೂಪ ವರರುಗಳಿಗೆ ಮದುವೆ ಮಾಡಿಸಿದನು ೨

ಪುತ್ರಿಕಾ ನಿಯಮದಿ ಆಕೂತಿ ದೇವಿಯನು
ಸುತಪೋಧನ ಪ್ರಜೇಶ್ವರ ರುಚಿಗೆ ಕೊಟ್ಟ
ನಿರ್ದೋಷ ಕಲ್ಯಾಣ ಗುಣಗಣಾರ್ಣವ ನೀನು
ಪ್ರಾದುರ್ಭವಿಸಿದಿ ಯಜ್ಞಶ್ರೀಯು ದಕ್ಷಿಣಾದೇವಿಯು ೩

ಕರ್ದಮ ಪ್ರಜೇಶ್ವರರ ಭಕ್ತಿ ತಪಸ್ ಏನೆಂಬೆ
ಶ್ರೀದ ನಿನ್ನಯ ಭಕ್ತ ವಾತ್ಸಲ್ಯಕ್ಕೆಣೆಯುಂಟೆ
ಪದ್ಮಜನು ಕರ್ದಮಗೆ ಪ್ರಜಾಃಸ್ರುಜ ಎನ್ನಲು
ಭಕ್ತಿಯಿಂ ತಪಗೈಯೇ ಪ್ರತ್ಯಕ್ಷನಾದಿ ೪

ಸುಪುಷ್ಕರಾಕ್ಷ ನೀ ಸೂರ್ಯ ತೇಜಃಪುಂಜ
ಪ್ರಪನ್ನರ್ಗೆ ಬೀರುವ ಕಾರುಣ್ಯನೋಟ
ವಿಪುಲಾಬ್ಜ ವದನ ಸುಂದರಸುಳಿಗೊರಳು
ಸುಭ್ರಾಜ ಕುಂಡಲ ಕಿರೀಟದ ಹೊಳಪು ೫

ಉರುಕಾಂತಿಯಿಂ ಜ್ವಲಿಪ ಅರಿ ಶಂಖ ಗದೆಯ
ಶುಭ್ರೋತ್ಪಲ ಪುಷ್ಪ ಕರಗಳ ಹಿಡಿದಿಹಿ
ವಿರಾಜಿಸುವ ಕೌಸ್ತುಭಶಿತ ಪದ್ಮೋತ್ಪಲಸ್ರಜ
ಶ್ರೀರಮಣ ನಿನ್ನ ಶ್ರೀವತ್ಸ ಸೌಂದರ್ಯ ಏನೆಂಬೆ ೬

ದ್ವಿಷೋಡಶ ಶುಭಲಕ್ಷಣ ಸುಲಕ್ಷಿತ
ಪುಷ್ಪಭವ ವರವಾಯು ಸಂಸೇವ್ಯ ಶ್ರೀಶ
ಶೇಷಾಹಿ ಭೂಷಣಾದ್ಯಮರ ಸನ್ನುತ ನೀನು
ಪಕ್ಷಿಸೋಪರಿ ಅಂಬರದಿ ನಿಂತಿ ೭

ಉತ್ತಮಶ್ಲೋಕ ನಿನ್ನ ಕರ್ದಮ ಹರುಷದಿನೋಡಿ
ಕ್ಷಿತಿಯಲ್ಲಿ ಬಿದ್ದು ಸನ್ನಮಿಸಿ ಸ್ತುತಿಸೇ
ಮಾಧವನೇ ನೀನು ಹೇಳಿದಿ ಸ್ವಾಯಂಭುವನು
ಶತರೂಪಾ ದೇವಹೂತಿ ಸಹ ಬರುವನೆಂದು ೮

ಆ ಮನು ದಂಪತಿಯು ಮತ್ತು ದೇವಹೂತಿಯು
ಧರ್ಮನಿಷ್ಠರೂ ಸದ್ಗುಣಾದಿ ಶ್ರೇಷ್ಠರೆಂದಿ
ರಮಣೀಯ ಆಕೆಯ ಕರ್ದಮರು ಪರಸ್ಪರ ಅರ್ಹರೆಂದಿ
ಹೆಣ್ಣುಮಕ್ಕಳೊಂಬತ್ತು ಸ್ವಯಂ ನೀ ಅವತರಿಪಿ ಎಂದಿ ೯

ಸತಿ ಸುತಾ ಸಹ ಸ್ವಾಯಂಭುವ ಬರಲು ಮುನಿಯು
ಆದರದಿ ಸ್ವಾಗತ ನೀಡಿ ರಾಜನಲಿ ಯುಕ್ತ
ಸದ್ಬೋಧ ರೂಪದಲಿ ಮಾತನಾಡೆ ಮನವು
ಬಂದ ಕಾರ್ಯ ಹೇಳಿದನು ವಿನಯ ಗಾಂಭೀರ್ಯದಿ ೧೦

ದುಹಿತ್ರು ಸ್ನೇಹ ಪರಿಕ್ಲಿಷ್ಟ ಮನದಿಂದ ದೀನ
ನಾ ಹೇಳುವುದು ಕೃಪೆಯಿಂದ ಕೇಳಿರಿ ತಮ್ಮ
ಬಹುಶೀಲ ಗುಣ ವಯಸ್ ರೂಪಾದಿಗಳ
ಮಹರ್ಷಿ ನಾರದರು ಹೇಳಿ ಕೇಳಿಹಳು ದೇವಹೂತಿ ೧೧

ಸರ್ವಾತ್ಮನಾ ತಮಗೆ ಅನುರೂಪ ಗೃಹಿಣಿ ಅಗುವಳು
ಅವಳನ್ನ ದಯದಿಂದ ವಧುವಾಗಿ ಸ್ವೀಕರಿಸಿ
ವಿವಾಹ ವಿಧಿಪೂರ್ವಕ ಮಾಡಿಕೊಳ್ಳಿರಿ ಎಂದು
ಈ ವಿಧದಿ ರಾಜ ಕೋರಲು ಮುನಿಯು ಒಪ್ಪಿದನು ೧೨

ಸಾಧು ಮಾತುಗಳಾಡಿ ಹಸನ್ಮುಖವ ತೋರಿಸಿ
ಕರ್ದಮರು ಅರವಿಂದನಾಭನ್ನ ಸ್ಮರಿಸುತ್ತ

ಶಾಂತವಾಗಿ ಸುಮ್ಮನೇ ಕುಳಿತರು ಆಗ ಮನು
ವಿಧಿಪೂರ್ವಬ್ರಾಹ್ಮಿವಿವಾಹಕ್ಕೆ ಏರ್ಪಾಡು ಮಾಡಿದನು ೧೩

ಶ್ರೀವರನೇ ನಿನ್ನಾನುಗ್ರಹ ಬಲದಿಂದಲೇ
ದಿವ್ಯಾಭರಣ ಉಡುಗೊರೆ ವೈಭವದಿಂದ
ದೇವಹೂತಿ ಕರ್ದಮರ ವಿವಾಹ ಮಾಡಿ ಕೃತಕೃತ್ಯ
ಸ್ವಾಯಂಭುವ ಬರ್ಹಿಷ್ಮತಿ ಸೇರಿದನು ೧೪

ಕರ್ದಮರು ದೇವಹೂತಿಯು ಗೃಹಸ್ಥತನ ಚರಿಸಿದನು
ಪತಿ ಇಂಗಿತವರಿತು ಪಾರ್ವತಿ ಶಿವನಿಗೆ
ಎಂತಹ ಸೇವೆ ಮಾಳ್ಪಳೋ ಅದರಂತೆ ಪ್ರೀತಿಯಿಂದ
ಪತಿಸೇವೆ ಮಾಡುತ್ತಿಹಳು ದೇವಹೂತಿ ಸಾಧ್ವಿ ೧೫

ಯೋಗಾತಿಶಯ ಸಾಮರ್ಥ್ಯದಿ ಕರ್ದಮರು
ಕಾಮಗ ವಿಮಾನ ನಿರ್ಮಿಸಿ ದಾಂಪತ್ಯ
ಸುಖ ವಿಹಾರವ ಮಾಡಿ ಹೇ ಸ್ವಾಮಿ ನಿನ್ನ ಕೃಪದಿ
ಮಕ್ಕಳು ಸ್ತ್ರೀ ಪ್ರಜಾ ಒಂಭತ್ತು ಹುಟ್ಟಿದವು ೧೬

ಶ್ರೀಕರ ನಾರಾಯಣ ನೀ ಕಪಿಲಾವತಾರ
ಆ ಕರ್ದಮರು ದೇವಹೂತಿ ಮಗನೆನಿಸಿ
ಉತ್ಕೃಷ್ಟ ಸಾಧು ಸಾಂಖ್ಯ ತತ್ವೋಪದೇಶವ
ಅ ಕುಟಿಲ ಮಾತೆಗೆ ಬೋಧಿಸಿದ್ದು ಪ್ರಸಿದ್ಧ ೧೭

ಕರ್ದಮರ ಒಂಭತ್ತು ಕನ್ಯೆಯರು ಕಲಾ, ಅನಸೂಯ,
ಶ್ರದ್ಧಾ, ಹರ್ವಿಭೂ, ಗತಿ, ಕ್ರಿಯಾ, ಊರ್ಜಾ, ಶಾಂತಿ ಖ್ಯಾತಿ
ಸಾಧ್ವಿಗಳಿವರು ಮರೀಚತ್ರಿ, ಅಂಗೀರ, ಪುಲಸ್ತ್ಯ ಪುಲಹ
ಕ್ರತು ವಶಿಷ್ಟಾ ಭೃಗುಗಳಿಗೆ ಮದುವೆ – ಆದರೀ ಕ್ರಮದಿ ೧೮

ಐಶ್ವರ್ಯವಂತ ಸ್ವಾಯಂಭುವ ಮನು ತನ್ನ ಮಗಳು
ಪ್ರಸೂತಿಯನು ಬ್ರಹ್ಮಪತ್ರ ದಕ್ಷನಿಗೆ ಕೊಟ್ಟು ಆಕೆ

ಪ್ರಸವಿಸಿದಳು ಷೋಡಶಾಮಲಲೋಚನೆ ಪುತ್ರಿಯರ
ಸುಶೀಲ ಸಾಧ್ವಿಯರು ಮದುವೆ ಅದರು ಸುಲಭದಿ ೧೯

ಶ್ರಧ್ಧಾ, ಮೈತ್ರಿ, ದಯಾ, ಶಾಂತಿ, ತುಷ್ಟಿ, ಪುಷ್ಟಿ, ಕ್ರಿಯಾ
ಉನ್ನತಿ, ಬುದ್ಧಿ, ಮೇಧಾ, ತಿತಿಕ್ಷಾ, ಹ್ರೀ ಮೂರ್ತಿ
ಹದಿಮೂರು ಈ ಕನ್ಯೆಯರು ಮದುವೆ ಆದರು ಧರ್ಮಗೆ
ಸಾಧ್ವಿ ಸ್ವಾಹಾಪತಿ ಅಗ್ನಿಪಿತೃಗಳ ಪತ್ನಿ ಅದಳು ಸ್ವಧಾ ೨೦

ಶ್ರೀ ರಮಾಪತಿ ನಿನ್ನ ಕಾರುಣ್ಯ ಏನೆಂಬೆ
ಪಿತೃದೇವರೊಳ್ ಅಂತರ್ಗತನಾಗಿ ನೀನೇ
ಪಿತೃದೇವರ್ಗಳನ್ನ ಪುತ್ರ ಸಂತಾನ ಬೇಕೆಂದು
ನರರು ಬೇಡಿಕೊಂಡರೆ ಭಕ್ತಿ ಮೆಚ್ಚಿ ಫಲವೀವಿ ೨೧

ಸತಿದೇವಿ ಭವನ ಪತ್ನಿಯಾದಳು ವಿಹಿತದಿ
ಪತಿಭಕ್ತಿ ಪತಿಸೇವಾ ಸದಾರತಳು ಭವಾನಿ
ಹದಿನಾರು ಕನ್ಯೇಯರ ದಕ್ಷನು ಹರಿ ನಿನ್ನದಯದಿ
ಮದುವೆ ಮಾಡಿ ಕೊಟ್ಟನು ಹಾಗೂ ಪುನರವತಾರದಲ್ಲೂ ೨೨

ಧನಹೀನರಿಗೂ ನೀನು ಉದಾರ ಕಾರುಣ್ಯದಿ
ಧನಒದಗಿಸಿ ಮದುವೆ ಮಾಡಿಸುವಿಯೋ
ಮುನಿವರ್ಯ ರುಚಿಕರಿಗೆ ವರುಣನ ದ್ವಾರ ನೀ
ಕನ್ಯಾಶುಲ್ಕ ಒದಗಿಸಿ ವಿವಾಹ ಮಾಡಿಸಿದಿ ೨೩

ಪಶುಪತ್ನಿ ಸಂತಾನ ಯಜ್ಞ ಧನ ವಿವಾಹೋತ್ಸವ
ಯಶಸ್ ತೇಜೋಬಲ ವೀರ್ಯ ಪ್ರಜಾಸೃಷ್ಟಿ ಅಧಿಕಾರ
ಐಶ್ವರ್ಯ ಇಂತಹುದು ದಕ್ಷಗೆ ಬಹು ಕೊಟ್ಟು -
-ಅವನೋಳ್ ಇದ್ದು
ಯಶ ಎಂದು ಕರೆಸಿಕೊಂಬ ಶ್ರೀರಮಣ ಶ್ರೀಕರ -
-ನಮೋ ನಮೋ ನಿನಗೆ ೨೪

ನಂದಿನೀಧರ ಶಿವನೊಳ್ ಅಂತರ್ಯಾಮಿಯಾಗಿರುತ
ಪುಂಸ್ತ್ರೀ ಪ್ರಜಾಸೃಷ್ಟಿ ಮುಂಜಿ ಮದುವೆ ಮಕ್ಕಳು ಮೊಮ್ಮಕ್ಕಳು
ಇಂಥಾ ಸಂತಾನ ಮತ್ತು ಆಯುಷ್ಯ ಸುಖವೀವಿ ಪ್ರಜಾತಿಹಿ
ಅಮೃತಂ ಆನಂದ ಎಂದು ಕರೆಸಿಕೊಂಬ ನಿನಗೆ ಶರಣು ೨೫

ಮನು ಸ್ವಾಯಂಭುವ ದಕ್ಷ ಮರುತ ದೇವತೆಗಳೊಳ್
ಶ್ರೀನಿಧಿಯೇ ನೀನಿದ್ದು ಪ್ರಜೋತ್ಪತ್ತ್ಯಾದಿಗಳನ್ನು ಈವಿ
ಈ ನುಡಿಗಳ ಪಠಣ ಫಲ ಮೋಕ್ಷ ಹೇತು – ಸಜ್ಞಾನ ಲಾಭವು
ಇನ್ನೂ ಅವಾಂತರ ಫಲ ವಿವಾಹ ಸಂತಾನ
ಆಯುರಾರೋಗ್ಯ ಉದ್ಯೋಗ ಪ್ರಾಪ್ತಿ ೨೬

ಮಂದಜಾಸನಪಿತ ಶ್ರೀ ಪ್ರಸನ್ನ ಶ್ರೀನಿವಾಸ
ಒಂದು ಪುತ್ರ ಬೇಕೆನ್ನೆ ಮೂವರನ್ನು ನೀ ಕೊಟ್ಟೆ
ಅಂದು ನೀನೇ ತೋರ್ದಿ ಮಗನಾಗಿ ಮನುವಿಗೆ
ಒಂದೇಮನದಿ ಇದು ಪಠಿಸೆ ನೀ ಒಲಿವೆ ೨೭

–ಇತಿ ಶ್ರೀ ರಾಜೇಶ್ವರ ಸ್ತೋತ್ರ ಸಂಪೂರ್ಣಂ –

ಶ್ರೀವಾಮದೇವ ಅಂತರ್ಯಾಮಿ

೪೪

ಮೋದಮಯ ಶ್ರೀ ವಿಷ್ಣು ಬಾದರಾಯಣ ನಮೋ
ಭೇದಜ್ಞಾನವನಿತ್ತು ಉದ್ಧರಿಸೊ ದಯದಿ ಪ

ವೇದತತಿ ಸಚ್ಛಾಸ್ತ್ರದಿಂದಲೇ ವೇದ್ಯ ನೀ
ಆಧಾರವಿಭು ಸ್ವಾಮಿ ಸರ್ವಾಂತರ್ಯಾಮಿ ಅ.ಪ

ವಾಮದೇವನು ಪೇಳ್ದ ಗರ್ಭದಲಿ ತಾನಿರಲು
ಸ್ವಾಮಿ ನೀ ಸರ್ವ ಸುರ ಜನ್ಮಾದಿಕರ್ತ

ಈರ್ಶ್ಮ ನೀ ಸರ್ವ ಪ್ರೇರಕನೆಂದು ಅರಿತನು
ಘರ್ಮ ಶತ್ರುಘ್ನ ಪರಮಾತ್ಮ ಪರಿಪೂರ್ಣ ೧

ಯಾವ ಪರಮಾತ್ಮ ನೀ ಜೀವಾತ್ಮನಲಿ ಇರುವೆ
ಜೀವನಿಗೆ ಭಿನ್ನ ನಿಯಾಮಕ ಅವ್ಯಕ್ತ
ಯಾವ ನಿನಗೇ ಜೀವ ದೇಹ ಅಂಥಾ ನೀನೆ
ನಾಲ್ವಿಧದ ನಾಶವಿಲ್ಲದ ಅಂತರ್ಯಾಮಿ ೨

ಪೃಥ್ವಿ ಜಲ ಅಗ್ನ್ಯಂತರಿಕ್ಷವಾಯು ಸ್ವರ್ಗ
ಆದಿತ್ಯದಿಕ್ ಚಂದ್ರ ನಕ್ಷತ್ರ ಆಕಾಶ
ಮೊದಲಾದುವುಗಳ ಅಭಿಮಾನಿ ದೇವತೆಗಳೊಳ -
ಗಿದ್ದು ಕಾಣದೆ ಕ್ರಿಯೆ ಮಾಡಿ ಮಾಡಿಸುವೆ ೩

ಅಸಿತ ಕತ್ತಲೆ ಬೆಳಕು ನಿಖಿಳ ಭೂತಪ್ರಾಣ
ವಾಕ್ ಚಕ್ಷು ಶ್ರೋತ್ರ ಮನ ತ್ವಗ್ರೇತಸಭಿಮಾನಿ
ಈ ಸರ್ವದೇವತೆಗಳಂತರ್ನಿಯಾಮಕನೆ
ಅಶಕ್ಯ ನಿನ್ನನು ತಿಳಿಯೆ ಸರ್ವರಾಧಾರ ೪

ಪ್ರೇರಕನು ಸರ್ವರಲಿ ಸರ್ವಸ್ಥ ಸ್ವಾಮಿಯು
ಶಾಸ್ತ್ರ ದೃಷ್ಟಿಯಲಿ ಆ ವಾಮದೇವ
ಅರಿತು ಮನು ಸೂರ್ಯಾದಿ ಸರ್ವಾಂತರ್ಯಾಮಿಯೆ
ಇರುತಿಹನು ತನ್ನಂತರ್ಯಾಮಿಯಾಗಿ ಎಂದ ೫

ಯ ಆದಿತ್ಯೇ ತಿಷ್ಟನ್ ಆದಿತ್ಯಾದ್ದಂತರಃ
ಯೋ ಸಾವ ಸೌ ಪುರುಷಃ ಸೋಹಮಸ್ಮಿ
ಯ ಆತ್ಮನಿ ತಿಷ್ಟನ್ ಆತ್ಮನೋಂತರ ಎಂಬ
ಈ ಶಾಸ್ತ್ರದೃಷ್ಟಿಯಲಿ ಅಹಂ ಮನು ಎಂದ ೬

ಪ್ರಾಣಸುಖಪೂರ್ಣ ಸ್ವತಂತ್ರಚೇಷ್ಟಕ ಈಶ
ಸುರಪ ಉಪದೇಶಿಸಿದ ಪ್ರಾಣ ನೀ ಎಂದು
ವರ ದೇವವರ ನೀನೆ ಪ್ರಾಣಶಬ್ದದಿ ಬೋಧ್ಯ
ಸಿರಿರಮಣ ಲಕ್ಷ್ಮೀಶ ಪಾಹಿ ಮಾಂ ಪಾಹಿ ೭

ಜನ್ಯ ಜನಕ ಜ್ಞಾತೃ ಜ್ಞೇಯ ಪೂರ್ಣಾಪೂರ್ಣ
ಪ್ರೇರ್ಯ ಪ್ರೇರಕ ಅಸ್ವತಂತ್ರ ಸ್ವತಂತ್ರ
ಅಧೇಯ ಆಧಾರ ಭಾವವರಿತು ಮಾಳ್ಪ
ಕಾಯವಾಙ್ಮನ ಕರ್ಮ ಒಪ್ಪಿ ಸುಖವೀವೆ ೮

ಮಂದ ನಾ ಪಂಡಿತನು ಅಲ್ಲದಿದ್ದರು ನೀನೆ
ಸೈಂಧವಾಸ್ಯನೆ ಎನ್ನೊಳ್ ನಿಂತು ಪಾಡುವೆಯೊ
ಮಂದಜಾಸನ ತಾತ ಪ್ರಸನ್ನ ಶ್ರೀನಿವಾಸ
ಸಿಂಧುಜಾಪತಿ ನಮೋ ಅಜಿತ ವೇದವ್ಯಾಸ ೯

ಶ್ರೀ ಪ್ರಣವನಾರಾಯಣ ಕೃಷ್ಣ ಆಗಮನ ಸ್ತೋತ್ರ

೪೫

ಬಾರೋ ಬಂದಿರೋ ಶ್ರೀಶ । ಶ್ರೀಧರಾ ಸಮೇತ ಬಂದಿರೋ ಈಶ ॥
ವಿಭುವೇ ಗುಣಾರ್ಣವ ಅಮಿತ ಪೌರುಷ ಸ್ವವಶ । ಅಮಿತಾರ್ಕ ಕಾಶ ॥
ಸರಸಿಜಾಸನ ಶಿವ ವಿಷಾದಿ ಅಮರವಂದ್ಯನೆ
ಪರಮ ಭಾಗವತೇಷ್ಟ ಚಿಂತಾಮಣಿಯೇ ಜಯ ಜಯ
ಶರಣು ಪಾಲಿಪ ಪ್ರಭುವೇ ನಾರಾಯಣನೇ ಕೃಷ್ಣನೇ ॥ ಬಾರೋ॥ ಪ

ಪ್ರಣವಾಷ್ಟಾಕ್ಷರ ದಿವ್ಯ । ಆರು ಅಕ್ಷರ ಮಂತ್ರ ಸುಪ್ರತಿಪಾದ್ಯ
ವಿಶ್ವಾದಿ ಎಂಟು ರೂಪಚಿನ್ಮಯ ಕಾಯ ।
ಅರಿದರಧೃತ ಹಸ್ತ ಹಸ್ತವರದ ಅಭಯ । ಜಯ ಜಯತು ಜೀಯ
ಶ್ರೀಧರಾ ಸಮೇತನಾಗಿಹ ಪ್ರೋದ್ಯ ಪೂಷ ಸ್ವಕಾಂತಿ ತೇಜನೇ
ಕೃದ್ಧವೀರ ಮಹಾದ್ಯುಸಹಸ್ರ ಉಲ್ಕ ನಿಜ ಸಚ್ಛಕ್ತ ಲೀಲೆಯಿಂ
ಸರ್ವದಾ ಸರ್ವತ್ರ ಸರ್ವರೋಳ್ ಇದ್ದು ನಿಯಮಿಪ ವಿಭುವೇ ಪರತರ।
ಕೃಷ್ಣರಾಮ ನೃಸಿಂಹ ವರಹನೇ ವಿಷ್ಣುವೇ ಪರಂಜ್ಯೋತಿ ಪರಂಬ್ರಹ್ಮ ।

ವಾಸುದೇವನೆ ಏಕದಶ ಶತಾನಂತ ರೂಪ ನಿರ್ದೋಷ ಗುಣನಿಧೇ ।
ಎನ್ನ ಪಾಲಿಪ ಪ್ರಭುವೇ ಶ್ರೀಶನೇ ವೇದಹನುಮ
ಶಿವಾದಿ ವಂದ್ಯನೇ ॥ ಬಾರೋ ೧

ಪ್ರಚುರ ಅಮಿತ ಆನಂದ ಅವಿಕಾರ ಚಿನ್ಮಯ ಸರ್ವಚೇಷ್ಟಕ ಕರ್ತ
ಚೇತನಾಚರ ಸರ್ವವಶಿ ಜಗದ್ಧರ್ತಾ ಸೌಂದರ್ಯಸಾರನೆ
ಇಂದ್ರಮಣಿ ದ್ಯುತಿವಂತ ಸೌಭಾಗ್ಯದಾತ ।
ಚಕ್ರಧರವರ ಅಭಯಹಸ್ತನೇ ಅಜಿತ ಅಜ ಜಗದೇಕವಂದ್ಯನೆ
ಉರುದಯಾನಿಧೆ ಭೈಷ್ಮೀ ಸತ್ಯಾರೊಡನೆ ಬಂದು ನಿಂತಿದ್ದಿಲ್ಲಿ
ಪರಮಲಾಭವು ಎನಗೆ ಸುಹೃದನೆ ಭೀಮದ್ರೌಪದಿ ಪಾಂಡವ ಪ್ರಿಯ
ವಿದುರಗೊಲಿದನೆ ದೇವಕೀಸುತ ಸರ್ವಾಭೀಷ್ಟಪ್ರದ ಉದಾರನೆ
ಉತ್ತರಾಸುಧಾಮ ಉದ್ಧವ ಗೋಪಿಜನ ಅಕ್ರೂರ ವರದನೇ
ಹಲಧರಾನುಜ ಸುಭದ್ರೆ ಅಣ್ಣ ಷಣ್ಮಹಿಷಿ
ರಮಣನೆ ಶರಣು ಸಂತತ ॥ ಬಾರೋ ೨

ಸ್ವಾಮಿವೇಂಕಟರಮಣ । ಕುಲದೇವ ಸರ್ವೋತ್ತಮನೆ ಭಕ್ತಪ್ರಸನ್ನ
ಪದ್ಮಾವತೀಶ ಕರುಣಿ ಪಾಲಿಸೋ ಎನ್ನ । ಶ್ರೀವತ್ಸ ಅರಿದರಾ
ಅಭಯವರಕರ ಘನ್ನ । ಅಮಲೇಂದು ವದನಂ ॥
ಮುಗುಳುನಗೆ ಕಾರುಣ್ಯ ನೋಟವು ಜಗವನಳೆದ ತೀರ್ಥಪದಯುಗ
ತಿರುಮಲೇಶ ಮದ್ಗೇಹನಿಲಯನೆ ರಂಗ ವರದ । ಲಕ್ಷ್ಮೀನೃಸಿಂಹನೆ
ಪೂರ್ಣ ಪ್ರಮತಿಗಳಿಂದ ಪೂಜಿತ ಬೆಣ್ಣೆ ನರ್ತನ ಕೃಷ್ಣರಾಮನೇ
ಇನನಿಗಮಿತ ಸ್ವಕಾಂತಿ ತೇಜನೇ ಕರ್ಣಕುಂಡಲೋಜ್ವಲ ಕಿರೀಟಿಯೆ ।
ಅನ್ನವಾಹನ ತಾತ ಪ್ರಸನ್ನ ಶ್ರೀನಿವಾಸನೆ ಪೂರ್ಣಕಾಮನೇ ।
ಘನ ದಯಾಂಬುಧೇ ದೇವ ದೇವಶಿಖಾಮಣಿಯೆ ಬಾ ॥
ಬಾರೋ ಬಂದಿರೋ ಶ್ರೀಶ॥ ೩

ಸಾಯುಧ ಚತುರ್ವಿಂಶತಿ ವಿಷ್ಣುರೂಪ ಸ್ತೋತ್ರ

೪೬

ಬಲದ ಅಜಾನುಕರ ಮೊದಲು ಪ್ರದಕ್ಷಿಣದಿ
ಸಲಿಲಜಾದಿಧರರಮಾಪತೇ ನಮಸ್ತೇ ಪ

ಅರವಿಂದ –ಶಂಖ ಸುದರ್ಶನ ಕೌಮೋದಕೀ
ಧರನಮೋ ಕೇಶವ ಶ್ರೀಶ ಬ್ರಹ್ಮೇಶ ೧

ದರಾಂಬುಜಗದಾಚಕ್ರಧರಶ್ರೀಶ ನಮೋ
ನಾರಾಯಣ ದೋಷದೂರಗುಣಪೂರ್ಣ ೨

ಕೌಮೋದಕೀಚಕ್ರದರಕಮಲಹಸ್ತನೇ
ನಮೋ ಮಾಧವ ಲಕ್ಷ್ಮೀರಮಣ ಮಾಂ ಪಾಹಿ ೩

ಚಕ್ರ ಕೌಮೋದಕೀ ಪ್ರಫುಲ್ಲ ಅರವಿಂದ
ಶಂಖ ಧರ ಗೋವಿಂದ ನಮೋ ವೇದವೇದ್ಯ ೪

ಗದಾಸರೋರುಹಶಂಖಚಕ್ರಧರವಿಷ್ಣೋ
ಮೋದಮಯ ಸರ್ವತ್ರ ಬಹಿರಂತರ್ವ್ಯಾಪ್ತ ೫

ಸಹಸ್ರಾರ ಶಂಖಾಬ್ಜ ಗದಾಧರ ನಮಸ್ತೇ
ಪಾಹಿ ಮಧುಸೂಧನ ಮಹಾರ್ಹ ಹಯಶೀರ್ಷ ೬

ಅಂಬುಜಗದಾಚಕ್ರ ಶಂಖೀ ತ್ರಿವಿಕ್ರಮನೆ
ಪುಷ್ಪಜಾರ್ಚಿತ ತ್ರಿಪದ ನಮೋ ವಿಶ್ವರೂಪ ೭

ಶಂಖಾರಿ ಕೌಮೋದಕೀ ಪದ್ಮ ಹಸ್ತನೇ
ಮಂಗಳ ಸುಸೌಂದರ್ಯ ವಾಮನ ನಮಸ್ತೇ ೮

ಇಂದೀವರಾರಿಗದಾಶಂಖೀ ನಮಸ್ತೇ
ಶ್ರೀಧರ ಸದಾ ನಮೋ ಶ್ರೀವತ್ಸ ಪಾಹಿ ೯

ಗದಾ ಚಕ್ರ ಪದ್ಮಧರಾ ಹಸ್ತ ಹೃಷಿಕೇಶ
ಇಂದ್ರಿಯ ನಿಯಾಮಕ ದೇವದೇವೇಶ ೧೦

ಶಂಖಾಬ್ಜರಿಗದಾಧರಪದ್ಮನಾಭ
ಅಕಳಂಕ ಮಹಿಮ ಜಗಜ್ಜನ್ಮಾದಿಕರ್ತ ೧೧

ಕಮಲಧರ ಕೌಮೋದಕೀ ಚಕ್ರೀ ಈಶ
ದಾಮೋದರ ದೇವ ಸುಜ್ಞಾನದಾತ ೧೨

ಕೌಮೋದಕೀ ಶಂಖ ಅಬ್ಜಾರಿಪಾಣಿನ್
ಮಮ ಪಾಪಹರ ಸಂಕರ್ಷಣ ಜಯೇಶ ೧೩

ಗದಾಶಂಖ ಚಕ್ರಾಬ್ಜಹಸ್ತ ಮಾಯೇಶ
ಸದಾ ನಮೋ ಳಾಳುಕ ಡರಿ ವಾಸುದೇವ ೧೪

ರಥಾಂಗ ಕಂಬು ಗದಾ ಕಮಲಧರ ಪ್ರದ್ಯುಮ್ನ
ಕೃತಿದೇವಿರಮಣ ನಮೋ ಭಾಸ್ವ ಮದ್ ಹೃದಯೇ ೧೫

ರಥಾಂಗ ಗದಾಕಂಬು ಕಮಲ ಹಸ್ತ ನಮೋ
ಶಾಂತೀಶ ಅನಿರುದ್ಧ ಶರಣು ಮಾಂ ಪಾಹಿ ೧೬

ಅರಿ ಕಮಲ ಶಂಖ ಗದಾಧರ ಪುರುಷೋತ್ತಮ
ಕ್ಷರಾ ಕ್ಷರೋತ್ತಮ ಪೂರುಷ ಸ್ವತಂತ್ರ ನಮೋ ಪಾಹಿ ೧೭

ಪದ್ಮ ಗದಾ ಶಂಖಾರಿಧರ ಅಧೋಕ್ಷಜ ನಮೋ
ಮೋದಮಯ ಕಪಿಲ ಭಾಮನ ಡರಕ ವಿಶ್ವ ೧೮

ಚಕ್ರಾಬ್ಜ ಗದಾ ಶಂಖ ಭಕ್ತ ರಕ್ಷಕ ನಮೋ
ಸದಾನಂದ ಚಿನ್ಮಯ ಅನಘ ಅವಿಕಾರಿ ೧೯

ಅಬ್ಜಾರಿ ಶಂಖ ಗದಾಧರ ಜನಾರ್ಧನ ನಮೋ
ಅಜಿತ ಅಜ ಸಂಸಾರ ಬಂಧ ಹರ ಸುಖದಾ ೨೦

ದರಗದಾ ಅರಿ ಅಬ್ಜ ಧರ ಉಪೇಂದ್ರ ನಮೋ
ಇಂದ್ರಾನುಜನೇ ಬ್ರಹ್ಮ ರುದ್ರಾದಿ ವಂದ್ಯ ೨೧

ದರ ಸುದರ್ಶನ ಕಮಲ ಕೌಮೋದಕೀ ಪಿಡಿದ
ಹರಿ ಶ್ರೀಯಃಪತಿ ಅಭಯ ವರದನೇ ಶರಣು ೨೨

ಶಂಖ ಕೌಮೋದಕೀ ಅಬ್ಜಾರಿಧರ ಕೃಷ್ಣ
ಸುಖಜ್ಞಾನ ಚೇಷ್ಟಾ ರೂಪ ನಮೋ ಶ್ರೀಶ ೨೩

ಮಧ್ವ ಹೃದ್ವನಜಸ್ಥ ಚತುರ್ವಿಂಶತಿ ರೂಪ
ಉದ್ದಾಮ ಪರಮಾರ್ತ ಹರಿ ಶ್ರೀಶ ಶರಣು ೨೪

ಮತ್ಸ್ಯ ಕೂರ್ಮ ಕ್ರೋಡ ನರಸಿಂಹ ವಟು ರೇಣು –
ಕಾತ್ಮಜ ಶ್ರೀರಾಮ ಕೃಷ್ಣ ಶಿಶು ಕಲ್ಕಿ ೨೫

ಆನಂದಚಿನ್ಮಯ ಅನಂತ ರೂಪನೇ ನಮೋ
ವನಜಭವಪಿತ ಶ್ರೀ ಪ್ರಸನ್ನ ಶ್ರೀನಿವಾಸನೇ ನಮೋ ೨೬

ಶ್ರೀಕರ ಅಷ್ಟಾಕ್ಷರ ಮಂತ್ರ

೪೭

ಗುಣವಾರಿನಿಧಿ ಅನಘ ಉತ್ತಮಮಹಾ ಪ್ರಭುವೆ
ನಿನಗೆ ನಮೋ ಶ್ರೀಕರ ನಾರಾಯಣನೆ ಶರಣು ಪ

ಉತ್ತಮೋತ್ತಮಗುತ್ತ ಮೋತ್ತ ಮೋದೀತ
ಚೇತನಾಚೇತನರಿಗುತ್ತಮಾಶ್ರಯನು
ಉತ್ತಮ ಉಮೇಶಾದಿ ಭಾರತಿಗುತ್ತಮ ವಾಯು
ಆತಗುತ್ತಮೆ ಸಿರಿಗೆ ಉತ್ತಮೋತ್ತಿಷ್ಠ ೧

ಶ್ರೀ ಎಂದರೆ ಜ್ಞಾನಸುಖಪೂರ್ಣೆ ಲಕ್ಷ್ಮಿಸ್ಥ
ಕ ಎಂದರಾನಂದಶತ ಸುಖಾಂತಸ್ಥ

ರ ಎಂದರೆ ಸ್ವರತ ಸುಖಪ್ರದ ಸುಖಾಶ್ರಯನು
ಇಂದಿರೇಶನೆ ಎನಗೆ ಸೌಭಾಗ್ಯವೀಯೊ ೨

ಸ್ವಾಹಾ ಆತ್ಮನು ಸ್ವವಶ ಸರ್ವವಶಿ ಶ್ರೀಪನು
ಹರಿ ಹಂಸ ನಿರ್ದೋಷ ಬ್ರಹ್ಮ ನಾರಾಯಣ
ಅಹರ್ನಿಶಿ ಈ ರೀತಿ ನಿನ್ನ ಸ್ಮರಿಸುವ ಜನಕೆ
ಇಹಪರದಿ ನಿಖಿಳ ಐಶ್ವರ್ಯವೀವೆ ೩

ರವಿ ಸೋಮ ಕಂಬು ಅರಿ ಶಂಖನಿಧಿ ಪದ್ಮನಿಧಿ
ದಿವ್ಯ ಹಸ್ತಗಳಲಿ ಶೋಭಿತವಾಗುಂಟು
ದ್ರವ್ಯ ಹಾಟಕ ರತ್ನ ಧನ ಕೊಡುವ ಕರಗಳು
ದೇವಿ ಶ್ರೀ ಹ್ರೀ ಸಹ ಗರುಡಾಂಶಸಂಸ್ಥ ೪

ಮೀನಾದಿರೂಪ ತ್ವದ್ ಮಸ್ತಕಾದ್ಯಂಗದಿ
ಇನಗಮಿತದೀಪ್ತ ಆಭರಣ ಜ್ವಲಿಸುತಿವೆ
ವನರುಹಾಸನ ತಾತ ಶ್ರೀಕರ ಪ್ರಸನ್ನ
ಶ್ರೀನಿವಾಸನೆ ಸ್ವರ್ಣವರ್ಣ ನಮೋ ಶರಣು ೫

ಧನಪ್ರದ ಶ್ರೀಕರ ಕಾರುಣ್ಯ ಸ್ತೋತ್ರ

೪೮

ಧನಕೀರ್ತಿಗಳ ಹುಡುಕಿ ತಿರುಗಾಡಲಾರೆ
ಧನಕೀರ್ತಿಗಳ ಕೊಡುವಿ ನೀನಾಗಿ ನೀನೆ ಪ

ಶ್ರೀಕರನೇ ನೀನಾಗಿ ನೀನೇ ಸುಧಾಮನಿಗೆ
ಬೇಕಾದ ಸೌಭಾಗ್ಯ ಧನ ಧಾನ್ಯವಿತ್ತಿ
ಸಾಕಿ ಸಲಹುವ ಸ್ವಾಮಿ ನೀನಿರಲಿಕೆ ನಾನು
ಏಕೆ ತಿರುಗಾಡುವುದು ಕುಳಿತಲೆ ಕೊಡುವಿ ೧

ಭಾರತೀ ಪತಿ ಹೃಸ್ಥ ಶ್ರೀ ರಮಾಪತಿ ಸರ್ವ
ಪ್ರೇರಕಾಂತರ್ಯಾಮಿ ಆರ್ತಿಹರ ನೀನು

ವರಜ್ಞಾನ ಯೋಗಿವರ್ಯನು ರೈಕ್ವ ಕುಳಿತಲೆ
ಪೌತ್ರಾಯಣ ದ್ವಾರ ಭಾರಿ ಧನವಿತ್ತೆ ೨

ದೇವ ವೃಂದದಿ ಪ್ರವರ ಗುರು ವಾಯು ಪ್ರೇರಿಸಲು
ದೇವ ಶರ್ಮನು ಬಂದು ಏನೂ ಬೇಡದಲೆ
ನಿರ್ವ್ಯಾಜ ಭಕ್ತಿ ಆನಂದದಲಿ ಸ್ತುತಿಸಿದನು
ದ್ರವಿಣಾದಿ ಧನವಿತ್ತಿ ನೀನಾಗಿ ನೀನೇ ೩

ಸರ್ವದೊಳು ನೀನಿರುವಿ ಸರ್ವವಶಿ ನಿಸ್ಸಂಗ
ಸರ್ವಧಾರಕ ಶ್ರೀಶ ಸರ್ವಗುಣ ಪೂರ್ಣ
ಭೂಮಿಯಲಿ ಮಾರ್ಜಾಲ ತನ್ನ ಮರಿಯ ತಾನೇ ಎತ್ತಿ
ಕಾಯುವಂತೆ ನೀ ಎನ್ನ ಸರ್ವದಾ ಕಾಯುತಿ ಕೃಪೆಯಿಂದ ೪

ಶಂಖ ನಿಧಿ ಪದ್ಮನಿಧಿ ರವಿ ಸೋಮಕೈಗಳಲಿ
ಶಂಖಾರಿಧರ ದ್ರವ್ಯ ಕೊಡುವ ಹಸ್ತಗಳು
ಸ್ವಾಂಕಸ್ಥ ಲಕ್ಷ್ಮೀ ಸಮೇತ ಗರುಡಾ ರೂಢ
ಶ್ರೀಕರನೇ ಅಜಪಿತ ನಮೋ ಪ್ರಸನ್ನ ಶ್ರೀನಿವಾಸ ೫

ಶ್ರೀಹರಿ ಸ್ತೋತ್ರ

೪೯

ಪಾಲಿಸೆನ್ನನು ಶ್ರೀ ಹರಿಯೆ ಸಿರಿದೇವಿ ಧೊರೆಯೇ ।
ಸರಸಿಜಾಸನ ಪಿತನೇ॥ ಪ

ಪಾರ್ಥಸೂತ ಪನ್ನಗಗಿರಿ ನಿಲಯ ಪವಮಾನ ವಂದ್ಯ ।
ಶ್ರೀ ಭೂರಮಣನೇ ಸೃಷ್ಟಿಗೊಡೆಯನೆ ।
ಆದಿ ಕಾರಣ ಅತುಳ ಮಹಿಮನೇ
ಭಜಿಪ ಭಕ್ತರ ಕ್ಲೇಶ ಕಳೆಯುವ
ಕೈಟಭಾರಿ ಕರುಣ ಶರಧಿಯೆ ಅ.ಪ

ಬ್ರಹ್ಮಾದಿ ಮನುಜಾಂತ ಶ್ರವಣ ಮನನ ಧ್ಯಾನ
ದಿಂದಲೇ ಕಾಂಬೋರು ನಿನ್ನ ರೂಪ ಯೋಗ್ಯತಾನುಸಾರ ।
ನಿಯಮ ಭಂದ ಮೋಕ್ಷ ಕರ್ತನೆ ।
ಶಾಂತಿ ಕೃತಿ ಜಯಾ ರಮಣನೀನೇ
ಮೋಕ್ಷದಾಯಕ ಮಾಯಾಪತಿಯೇ
ಸರ್ವ ಆಶ್ರಯ ಲಕ್ಷ್ಮೀ ರಮಣನೇ
ಸಮರು ಅಧಿಕರು ಇಲ್ಲದಂಥಾ ।
ಸಾರ್ವಭೌಮನೇ ಆದಿಮೂಲನೆ ಅಪ್ರಮೇಯನೆ
ಅನಿಮಿಷೇಶನೇ ಅನಿರುದ್ಧ ಮಾರುತಿ ।
ಎನ್ನ ಅಪವಳಿಗಳನೆ ತಂದು
ಚೆನ್ನವಾಗಿ ನಿನ್ನ ತೋರಿಸಿದ ೧

ಸರ್ದೋಷಿ ನಾನಹುದೋ ಸಂಕರ್ಷಣ
ಮದ್ದೋಷ ಪರಿಹರಿಸೋ
ನಿತ್ಯ ನಿರ್ಮಲ ನೀನು ನಿಗಮ ವೇದ್ಯನೆ ನಿನ್ನಧೀನವು ಎಲ್ಲಾ ।
ವಿಶ್ವ ತೇಜಸ ಪ್ರಾಜ್ಞರೂಪನೇ
ಮೂರು ಸ್ಥಿತಿಯಲ್ಲಿ ಮುಖ್ಯ ಪ್ರವರ್ತಕ ।
ಅನ್ನ ಅಂಡ ಪಿಂಡ ಬ್ರಹ್ಮಾಂಡದಲ್ಲಿ ಒಳ ಹೊರಗೆ ವ್ಯಾಪ್ತನೆ
ವಿಶ್ವತೋಮುಖ ವಿಧಿಭವ ನುತ ವಿಚಿತ್ರ ಮಹಿಮ ವಿಭೂತಿರೂಪನೇ
ವಾಸುದೇವನೇ ವಾರಿಜಾಸನ ವಂದ್ಯ ವರಾಹನೆ
ಕುಮತಿ ಕಡಿಯೋ ಕುಬ್ಜ ವರದನೇ ತಗಲಿ
ಇರುವ ತಾಪಟೆ ಹರಿದು ೨

ನಿರ್ಗುಣ ಗುಣ ಭರಿತಾ ನಿನ್ನ ಪರೋಕ್ಷ ಬೇಡುವೆ ಬಹುವಿಧದಿ
ಭವದ ಕ್ಲೇಶಗಳ ಬಿಡಿಸೋ ಭಕ್ತವತ್ಸಲ ।
ಭವಾನಿ ಪತಿ ಸನ್ನುತ ।
ಪರಮ ಹಂಸೋಪಸ್ಯ ತುರ್ಯನೆ ಆತ್ಮ ಅಂತರಾತ್ಮ ।
ಪರಮ ಆತ್ಮ ಜ್ಞಾನಾತ್ಮ ನೀನೆ ।
ಮೀನ ಕೂರ್ಮ ಕ್ರೋಢ ನರಹರಿ ಮಾಣವಕ ।

ಭೃಗುರಾಮ ಕೃಷ್ಣನೇ ಮೋದ ಕೊಡುವ ಮುದ್ದು ಬುದ್ಧನೆ ।
ಕಠಿಣ ಖಳರ ಕಡಿವ ಕಲ್ಕಿಯೆ
ಅನಂತ ಗುಣ ಕ್ರಿಯಾ ರೂಪದಲಿ ನೀ
ಸ್ವಗತ ಭೇದ ವಿವರ್ಜಿತಾತ್ಮನೇ ।
ನಿತ್ಯ ನಿರಂಜನ ನಾರಾಯಣನೇ ।
ವಿದ್ಯುತ ಪತಿ ಪ್ರಭಂಜನ ಪ್ರಿಯ ರಾಗರಹಿತ
ರಾಘವೇಂದ್ರ ಸಂಸೇವ್ಯ ನರಹರಿಯೆ ।
ಅಜನ ತಾತ ಪ್ರಸನ್ನ ಶ್ರೀನಿವಾಸ ಲಕ್ಷ್ಮೀ ಈಶ ಹರಿಯೆ ।
ಪ್ರಣತಾರ್ತಿಹರ ಪ್ರಮೋದಿ ನೀನೇ ೩

ಶ್ರೀ ವಿಶ್ವ ಪರಮಾತ್ಮ ಸ್ತೋತ್ರ

೫೦

ಈಶ ವಿಶ್ವ ರಮೇಶ । ಪಾಲಿಸೆನ್ನನು ದಕ್ಷಿಣಾಕ್ಷಿನಿವಾಸ ।
ರೂಪಾಂತರದಿ ನೀ । ವಾಮನಯನದಿ ಕಾಶ । ಶರಣು ಶರಣು ।
ಸರ್ವೇಶ । ಜಾಗೃತ ಕಾಲದಿ ಸರ್ವ ವ್ಯಾಪಾರಗಳ ಮಾಡಿಸುವಂಥ
ವಿಭುವೆ। ಮಂಗಳಾತ್ಮ ನಿಸ್ಸಂಗ ಚಿನ್ಮಯ ಸರ್ವಸುಖ
ಸೌಭಾಗ್ಯ ದಾತನೇ ಪ

ಕಂಜನೇತ್ರ ಶ್ರೀರಾಮ । ಸರ್ವದಲ್ಲಿ ಸಮ ಸಾಮ ಜ್ಞಾನಶೃಂಗ ನಾಮ
ಯಾಜ್ಯ ಸ್ವರೂಪದಿಂದ ನೀ ಯರ್ಜು ನಾಮ । ಉತ್ಥಾಪಕೊತ್ತ ನಾಮ
ಸರ್ವಪಾಪೋಜ್ಜಿತ ಉನ್ನಾಮನೇ ದೀಪ್ತ ಇಂಧನ ವಾಮ ಮಂಗಳ ।
ಸರ್ವ ವೇದಗಳಿಂದ ಸರ್ವದಾ ವಾಣಿ ಪ್ರಾಣ ಸಂಸ್ತುತ್ಯ ಶ್ರೀಶನೇ
ದಿವ್ಯದೃಷ್ಟಿ ಗೋಚರ ವಿರಾಜನೇ ಶ್ರೀ ರಮಾ ಸಮೇತನಾಗಿಹ
ಸರ್ವದಾ ಸುಖ ಪೂರ್ಣ ಆತ್ಮನೇ ।
ಮೃತ್ಯು ವರ್ಜಿತ ಅಮೃತ ಜಯ ಜಯ ೧

ಭಯ ವಿವರ್ಜಿತ ಅಭಯ । ಗುಣಪೂರ್ಣ ಬ್ರಹ್ಮ ಪುರುಷ
ಪೂರ್ಣೈಶರ್ಯ । ಶಂಖ ಚಕ್ರ ಗದಾಬ್ಜ ಸಂಯುತ ದಿವ್ಯ ।
ಶಬಲ ವರ್ಣ ಸುವರ್ಣ ವಸ್ತು ನಿಸ್ಸಂಗ ನಿನ್ನ ಸ್ಥಾನವಾದುದರಿಂದಲೇವೇ
ಸರ್ವ ಉದಕಾದ್ಯ ಅಖಿಳವಸ್ತು ಅಸಂಗವಾಗಿವೆ ಎನ್ನ ಕಂಣ್ಗಳು ।
ಸರ್ವದಾ ಸೌಂದರ್ಯ ರೂಪ ಶ್ರೀವಾಮನನೆ ಎನ್ನ ಎಡದ ಕಣ್ಣಲಿ
ಸರ್ವ ನಿಜ ಸದ್ಭಕ್ತಭಾಮನ ದಕ್ಷಿಣಾಕ್ಷಿಗತ ನಿಯಾಮಕ । ೨

ವಿಶ್ವ ಶರಣು ಶುಭಾಂಗ । ಎರಡು ಪಾದವು ನಾಲ್ಕು ಹಸ್ತವು ಏಕ ।
ಕುಂಡಾದಂಡ ಹೀಗೆ ಜ್ಞಾನ ಸುಖ ಸಪ್ತಾಂಗ ಪಾಹಿಮಾಂ ಮಂಗಳಾಂಗ
ಹತ್ತು ಮೇಲೊಂಬತ್ತು ಮುಖಗಳು ಮಧ್ಯ ಗಜಮುಖ ಮಂಗಳಪ್ರದ ।
ಮೋದಮಯ ನರಮುಖ ಒಂಬತ್ತು ಬಲದ ಪಾರ್ಶ್ವದಿ ಹಾಗೂ ಎಡದಿ ।
ಖೇದರಹಿತ ಜ್ಞಾನಮಯ ಒಂಬತ್ತು ನರಮುಖ ವಿಶ್ವ ಚಕ್ಷುಸ ।
ಪದ್ಮಜನ ಪಿತ ಶ್ರೀ ಪ್ರಸನ್ನ ಶ್ರೀನಿವಾಸ ವಿಶ್ವನೇ ಶರಣು ಸಂತತ । ೩

ಶ್ರೀ ತಿರುವಳ್ಳೂರ್ ಶ್ರೀ ವೀರರಾಘವ ಸ್ತೋತ್ರ

೫೧

ವೀರರಾಘವ ಸ್ವಾಮಿ ಸಿರಿ ಕನಕ ವಲ್ಲೀಶ
ಶರಣಾದೆ ಪೊರೆ ಎನ್ನ ಕರುಣಾ ಸಮುದ್ರ ಪ

ಮರುತಾದಿ ಸುರಸೇವ್ಯ ಉರುಗುಣಾರ್ಣವ ದೋಷ
ದೂರ ಸ್ರಷ್ಟಾಪಾತ ಪರಮೈಕ ಈಶ ಅ ಪ

ಜಗಜ್ಜನ್ಮಾದ್ಯಷ್ಟಕ ಸುಕರ್ತೇ ನೀನೇವೆ
ನಿಗಮೈಕವೇದ್ಯನೇ ಏಕಾತ್ಮ ಭೂಮನ್
ಗೋಗಣಗಳೆಲ್ಲವೂ ಪೊಗುಳುತಿವೆ ನಿನ್ನನ್ನೇ
ಏಕ ವಿಧದಲ್ಲಿ ಇದಕೆ ಸಂದೇಹವಿಲ್ಲ ೧

ನಿರ್ವ್ಯಾಜ ಭಕ್ತನ ಆತಿಥ್ಯವನು ಸ್ವೀಕರಿಸಿ
ಸತ್ಯವಾಗಿ ವರವ ಈವಿ ಭಕ್ತರಿಗೆ ಎಂದಿ
ಸತ್ಯಲೋಕಾಧಿಪ ಪದಾರ್ಹನನುಯಾಯಿಗಳ
ಭೃತ್ಯನಾದೆನ್ನ ಪೊರೆ ಉದ್ಯಾರ್ಕ ತೇಜ ೨

ನೀನಾಗಿಯೇ ನೀನು ನಿನ್ನ ಸ್ಥಳಕೆ ಕರೆಸಿ
ನಿನ್ನದರುಶನವಿತ್ತಿ ನಿನಗೇವೆ ನಾ ಶರಣು
ಮನೋವಾಕ್ ಕಾಯದ ಎನ್ನ ಸರ್ವಕರ್ಮಗಳೊಪ್ಪಿ
ಘನ ದಯವ ಬೀರೊ ' ಪ್ರಸನ್ನ ಶ್ರೀನಿವಾಸ' ೩

ಶ್ರೀ ವೀರರಾಘವ

೫೨

ಅಪ್ರತಿ ಕೃಪಾನಿಧಿಯೆ ವೀರರಾಘವ ದೇವ
ಕ್ಷಿಪ್ರದಲೆ ಎನ್ನಭೀಷ್ಟಗಳ ಪೂರೈಸೊ ಪ

ಫಣಿಪಗಿರಿ ವೆಂಕಟನೆ ಎನ್ನ ಕುಲದೇವನೆ
ಅನಂತ ಗುಣಪರಿಪೂರ್ಣ ಅನಂತ ಸುಖರೂಪ
ವನಜೆಸಹ ನೀ ಇಲ್ಲಿ ವೀರರಾಘವನೆನಿಸಿ
ಫಣಿಶಾಯಿ ಕಾಮದನಾಗಿರುವೆ ವಿಧಿತಾತ ೧

ನಿನ್ನ ದರ್ಶನ ಮಾಳ್ಪ ಜನರ ಕಾಮದನೆಂದು
ನಿನ್ನ ಬಳಿ ಬಂದಿಹೆನೊ ನಿನ್ನ ದಯದಿಂದ
ಎನ್ನಭೀಷ್ಟಗಳೆಲ್ಲ ನೀ ಬಲ್ಲೆಯೋ ಸ್ವಾಮಿ
ಘನ್ನ ಔದಾರ್ಯ ಕರುಣಾಂಬುಧಿಯೇ ಶರಣು ೨

ವೇಧ ಮಂದಮುನಿಪೂಜ್ಯ ಬದರೀಶ ಉಡುಪೀಶ
ಸ್ವಾದಿ ಯತಿವರಪೂಜ್ಯ ಭೂಧರ ಹಯಾಸ್ಯ
ಪಾದತ್ರಯ ವಿಖ್ಯಾತ ವರದ ನರಹರಿ ರಂಗ
ಮದ್ಗೇಹನಿಲಯ ಶ್ರೀ ಪ್ರಸನ್ನ ಶ್ರೀನಿವಾಸ ೩

ಶ್ರೀಹರಿಯು ದಾಸರಿಗೆ ಒಲಿದ ಸ್ತೋತ್ರ

೫೩

ನೀನಾಗಿ ನೀಎನಗೆ ಒಲಿಯೋ ಸರ್ವೇಶ ಪ

ದೀನ ವತ್ಸಲ ವೇಧಪಿತ ಶ್ರೀದ ಶ್ರೀಶ ಅ.ಪ
ಕರಿಯಂತೆ ನಿನ್ನರಿತು ಕರೆಯಲರಿಯೆನು ನಾನು ।
ನಾರಿಯಂತೆ ಸವಿದು ಕೊಡಲರಿಯೆ ಪಣ್ಣು ॥
ತರುಗಳಂತೆ ತಪಸ್ಸು ಸಂಸ್ಮರಣೆ ನಾನರಿಯೆ
ಕರುಣಾಬ್ಧಿ ನೀನೇ ಪೊರೆ ಎನ್ನ ಶ್ರೀಹರಿಯೆ ೧

ಹೇಮ ಕಾಮಿನಿ ಭೂಮಿ ಸಾಧನಕ್ಕೊದಗಬೇಕು ।
ಮಮ ಅಹಂಕಾರ ದುಷ್ಟದಿ ರತಿ ಸಾಕು ॥
ಭೂಮನಿನಗೆ ಪ್ರಿಯ ಸೇವೆಯಾಗಲಿ ಸರ್ವ ।
ವಾಙ್ಮನೋ ಕಾಯ ಕ್ರಿಯೆಗಳು ದೇವ ದೇವ ೨

ಎನ್ನ ಸರ್ವಾಭೀಷ್ಟಗಳು ಸಿದ್ಧಿ ಆಗುವವು ।
ನಿನ್ನ ಔದಾರ್ಯ ಕೃಪೆಯಿಂದ ಎಂದೆಂದೂ ॥
ನಿನ್ನಧೀನವು ನಾನುರಕ್ಷಕನು ನೀ ಶ್ರೀಶ ॥
ಎನ್ನುವದೊಂದೇ ಬಲ್ಲೆ ಪ್ರಸನ್ನ ಶ್ರೀನಿವಾಸ ೩

ಶ್ರೀ ಹಯಗ್ರೀವ ಮಂತ್ರಸ್ತೋತ್ರ

೫೪

ಜ್ಞಾನ ಬಲಾನಂದಾದಿ ಸರ್ವಗುಣ ವಾರಿನಿಧಿ
ಅನಿಷ್ಟಹರ ಇಷ್ಟಪ್ರದ ಹಯಗ್ರೀವ ಅನಘ
ವನಜಭವ ಅನಲಾಕ್ಷಾದ್ಯಮರ ಸನ್ನುತ ಸೇವ್ಯ
ಘನ ದಯಾಂಬುಧೇ ನಮೋ ಗುರುಗ ಲಕ್ಷ್ಮೀಶ ಪ

ಕಮಲಾಸನ ಋಷಿಯು ಗಾಯತ್ರಿಛಂದಸ್ಸು
ಅಮಲಾಷ್ಟಾಕ್ಷರ ಮಂತ್ರ ದೇವತೆ ಹಯಾಸ್ಯ
ಸೋಮ ಮಂಡಲ ಸ್ಥಿತನು ಅಕಳಂಕ ಕಾಂತಿಮಾನ್
ಅಮೃತ ತನ್ಮಯ ಸ್ವರೂಪ ಕಿರಣ ಸುರಿಸುವನು ೧

ನಾಶರಹಿತನು ಅವ್ಯಯ ನಿತ್ಯೋ ನಿತ್ಯಾನಾಮ
ಭಾಸಿಸುತಿಹ ಅಂಡ ಬಹಿರಂತರದಿ ಎಲ್ಲೂ
ಪುಸ್ತಕ ಚಿನ್ಮುದ್ರೆಯು ಶಂಖಾಕ್ಷ ಮಾಲಾಧರ
ಕಾಶಿಸುತಿಹ ತುರಗ ವದನ ಸರ್ವಜ್ಞ ೨

ಪೂರ್ಣ ಜ್ಞಾನಾತ್ಮನು ಪೂರ್ಣ ಐಶ್ವರ್ಯಾತ್ಮ
ಪೂರ್ಣ ಪ್ರಭಾತ್ಮನು ಪೂರ್ಣ ತೇಜಾತ್ಮಾ
ಪೂರ್ಣಾನಾನಂದಾತ್ಮನು ಪೂರ್ಣ ಶಕ್ತ್ಯಾತ್ಮನು
ಪೂರ್ಣ ಗುಣನಿಧಿ ಸದಾ ನಿರ್ದೋಷ ಈಶ ೩

ಪ್ರತಿವಾದಿ ಜಯಪ್ರದನು ಸರ್ವ ವಿದ್ಯಾದಾತ
ಬುದ್ಧಿ ಸ್ಥೈರ್ಯ ಸತ್‌ಜ್ಞಾನ ವರ್ಚಸ್ಸು ಈವ
ಮುಕ್ತಿಸಾಧನೆ ಅಪರೋಕ್ಷಜ್ಞಾನವನಿತ್ತು
ಸಾಧು ಅಧಿಕಾರಿಗಳ ಯೋಗಕ್ಷೇಮ ವಹಿಪ ೪

ಏಕದಶ ಶತ ಸಹಸ್ರಾನಂತ ರೂಪನೇ
ಸ್ವಗತ ಭೇದ ವಿಲ್ಲದ ಸುಪೂರ್ಣ ಸ್ವತಂತ್ರ
ಶ್ರೀಕದಶ ವಿಧಿಪಿತ ಪ್ರಸನ್ನ ಶ್ರೀನಿವಾಸ ನಮೋ
ವ್ಯಾಂ ಕಪಿಲದತ್ತ ವರಾಹಹಯಗ್ರೀವ ೫

ಶ್ರೀ ಮಧ್ವಾಂತರ್ಗತ ಶ್ರೀ ಕೃಷ್ಣಾರ್ಪಣಮಸ್ತು

ಜ್ಞಾನಾನಂದ ಸ್ತುತಿ

೫೫

ಜ್ಞಾನಾನಂದ ಅನಂತರೂಪ –
ಆನಮೋ ನಮೋ ತ್ವಂಪಾಲಯಮಾಂ ಪ.

ವೇದೋದ್ಧಾರಕ ಮತ್ಸ್ಯ ಸುರೂಪ
ಮಂದರೋದ್ಧಾರ ಕಚ್ಛಪರೂಪ ೧

ಭೂಧರಕೋಲ ನರಹರಿರೂಪ
ಅದಿತೇಃ ಸೂನೋ – ಗಂಗಾಜನಕ ೨

ಕೃನ್ನೃಪಾಹರಿ ರಾಮಪರಶ್ವಿ
ಹನೂಮತೇವ್ಯ ರಮಸ್ತ ಸೀತಾ ೩

ದೇವಕಿಪುತ್ರ ಪಾಂಡವಬಂಧೋ
ದೇವ ಶ್ರೀಕೃಷ್ಣ ರುಕ್ಮಿಣೀನಾಥ ೪

ದೈತ್ಯವಿಮೋಹ ದೇವಸುಬೋಧ
ಬುದ್ಧಸ್ವರೂಪ – ದೇಹಿಮೇ ಜ್ಞಾನಂ ೫

ದರ್ಜೇನ – ಹಂತಾಧರ್ಮಸ್ವರೂಪ
ಸಜ್ಜನಪಾಲ ದೇಹಿಮೇ ಭಕ್ತಿಂ ೬

ಪದ್ಮಜಿತಾತ ಪ್ರಸನ್ನ ಶ್ರೀನಿವಾಸ
ಪದ್ಮೇಶ ಶರಣಂ ಪಾಹಿ ೭

ಅಧೀನ ಸ್ತೋತ್ರ

೫೬

ನಿನ್ನಧೀನವು ಎಲ್ಲ ಘನ್ನ ಸುಮಹಿಮನೆ ಪ

ಬೊಮ್ಮನ ಪಿತ ನೀನು ಅಮ್ಮ ಲಕುಮಿಪತೆ
ಎಮ್ಮನು ಪೊರೆ ಶ್ರೀನಿವಾಸ ೧

ಬೃಹದಣುರೂಪನೆ ಮಹದಣು ಸರ್ವದಿ
ಬಹಿರಂತರದಿ ಇಹ ಮಹಾವಿಷ್ಣು ಪರಮಾತ್ಮ ೨

ಸಿರಿಯು ನಿನ್ನೊಡಗೂಡಿ ಚರಿಪಳು ಎಲ್ಲೆಲ್ಲೂ
ಸರಿ ಯಾರು ನಿನಗಿಲ್ಲ ಪರರುಂಟೆ ಸಿರಿಸೇವ್ಯ ೩

ನಿಜವರ್ಣ ಪ್ರತಿಪಾದ್ಯ ಅಜ ನರಹರೇ ನಮೋ
ಸೃಜಾಸೃಜ ಅಂಗಗಳೊಳ್ ಜ್ವಲಿಸುವೆ ಶಕ್ತೀಶ ೪

ಪೋಷ ಕಲುಷಹ ಶೇಷಗಿರೀಶನೆ
ದೋಷವೇನಿಲ್ಲದ ಹೃಷೀಕೇಶ ಕ್ಷೇತ್ರಜ್ಞ ೫

ಏಕಮಾದ್ವಿತೀಯ ಸರ್ವೋತ್ತಮ ಭೂಮನ್
ಸಾಕಲ್ಯ ನಿನ್ನ ತಿಳಿಯಲು ಅಶಕ್ಯ ೬

ಪ್ರಾರ್ಥಿಸಲರಿಯೆ ನಾ ದಯದಿ ನೀ ಸಲಹೆನ್ನ
ವೃತತಿಜಾಸನ ತಾತ ಪ್ರಸನ್ನ ಶ್ರೀನಿವಾಸ ೭

ಸರ್ವ ವಿಪತ್ ಪರಿಹಾರ ಸ್ತುತಿ

೫೭

ನ್ಯಗ್ರೋಧೋದುಂಬರನೆ ಕರ್ಮ ಫಲದಾತನು
ಅಘೃಣಿ ಅಲ್ಲ ಹರಿ ವೈಷಮ್ಯ ಶೂನ್ಯ ಪ

ಭೂಕಂಪ ಮಾರಿಕಾವ್ಯಾಧಿ ವಾಹನ ಪತನ
ಉಕ್ಕಿ ಪ್ರವಹಿಸುವ ನದಿ ಮೊದಲಾದ್ದರಿಂದ
ಏಕ ಕಾಲದಿ ಸಂಗ ಮರಣ ಸಂಭವಿಸುವುದು
ಏಕೆಂದು ಶಂಕಿಸುತಿ ಕೇಳು ಶ್ರದ್ಧಾಳು ೧

ಏಕ ಕಾಲದಿ ನಾನಾ ಜನರು ಸಂಗದಿ ಕೂಡಿ
ಸುಖಿಸುವರು ಮಂದ ಮಾರುತ ಪುಷ್ಪವನದಿ
ಶ್ರೀಕರ ಕಥಾ ಶ್ರವಣ ನಾಟಕ ಕೇಳಿಕೆಯು
ಹೀಗೆ ಜನ ಸಂಘದಲಿ ನಾನಾ ಸಂಭವವು ೨

ಒಂದೊಂದು ಮನುಜನಿಗು ಇಂಥಾ ಕಾಲದಿ ಇಂಥಾ
ರೀತಿಯಲಿ ಇಂಥಾ ಸ್ಥಳದಲ್ಲಿ ಇಂಥಾ
ಹಿತಕರವೊ ಅಹಿತವೊ ಕರ್ಮಗತಿ ಸಂಭವವು
ಶ್ರೀದ ನಿಯಮಿಸುವ ವೈಷಮ್ಯವಿಲ್ಲದಲೆ ೩

ಮಳೆ ಬಿಸಿಲುಭೂಕಂಪ ಚಂಡಮಾರುತ ಸುಳಿಸುಳಿದು
ಪ್ರವಹಿಸುವ ನದಿ ಹರಡುವ ದಾವಾಗ್ನಿ
ಎಲ್ಲ ಇಂಥಾ ಅಹಿತ ಸಂಭವದಿ ಸಿಲುಕುವರು
ಅಲ್ಲಲ್ಲಿ ಬಹುಜನರು ಕರ್ಮಗತಿಯಲ್ಲಿ ೪

ಘೋರ ಭೂಕಂಪದ ಪೀಡೆಗೆ ಯೋಗ್ಯರು
ಯಾರು ಯಾರೊ ಒಳ್ಳೆವರೋ ಕೆಟ್ಟವರೊ
ಹರಿಯು ಆ ಜನರನ್ನು ಕಂಪನಕೆ ಒಳಮಾಡಿ
ಮರಣಾಂಗ ಹೀನತೆಯು ರಕ್ಷಣೆಯು ಈವ ೫

ಭಿನ್ನ ಜೀವರು ಭಿನ್ನ ಕರ್ಮಗತಿ ಉಳ್ಳವರು
ಭಿನ್ನ ಫಲಯೋಗ್ಯರು ಆದ ಕಾರಣದಿ
ಕ್ಷೋಣಿ ಕಂಪನದಲ್ಲಿ ಮರಣ ಕೆಲವರಿಗೆ
ಅಂಗ ಹೀನತೆ ಕೆಲವರಿಗೆ ರಕ್ಷಣೆ ಕೆಲವರಿಗೆ ೬

ಘೃಣಿ ಹರಿಯು ಭೂಕಂಪ ಆಗುವ ಪೂರ್ವದಲೆ
ಜನರು ಕೆಲವರನ್ನು ಬೇರೆ ಊರಿಗೆ ಕಳುಹಿ

ಹಾನಿಗೊಳಿಸುವ ಕಂಪನಕೆ ಸಿಲುಕದಂತೆ
ಇನ್ನು ಕೆಲವರನ್ನು ಅಲ್ಲಿ ಬಾರದೇ ಮಾಳ್ಪ ೭

ಅಮಲ ಗುಣಗಣ ಸಿಂಧು ವಿಜ್ಞಾನಂದ ಹರಿಯೇ
ಕರ್ಮಾಧ್ಯಕ್ಷನು ಕರ್ಮಫಲದಾತ
ಕರ್ಮಜಡವಾದುದರಿಂ ಕರ್ಮ ಕೊಡದು ಫಲ
ಕರ್ಮಾಧ್ಯಕ್ಷ ಶ್ರೀಹರಿಯೇ ಫಲದಾತ ೮

ಸಂಘ ಸುಖ ಪ್ರಾಪ್ತಿಯು ಹ್ಯಾಗೆ ದೊರೆಯುವುದೊ
ಸಂಘ ದುಃಖ ಪ್ರಾಪ್ತಿಯು ಹಾಗೆ ಭವಿಸುವುದು
ಸುಖ ದುಃಖ ಐಹಿಕ ವಿಷಯಜವು ಉದಾನಿಸಿ
ಅಘದೂರ ಗುರುಗ ಶ್ರೀ ಹರಿಯ ಸ್ಮರಿಸು ೯

ನರಜನ್ಮ ಹೊಂದಿದವ ಹರಿನಾಮ ಸರ್ವದಾ
ಸ್ಮರಿಸುವುದು ಕರ್ತವ್ಯ ದೊರಕಿದ ಸ್ಥಳದಿ
ಹರಿನಾಮ ಭಕ್ತಿ ಪೂರ್ವಕದಿ ನುಡಿಯಲೇ ಬೇಕು
ನರಪಶು ಜಡಮತಿ ಮೂಢನು ನುಡಿಯ ೧೦

ಹರಿಯೇ ಸರ್ವೋತ್ತಮನು ಮುಖ್ಯಕಾರಣ ವಿಷ್ಣು
ಶ್ರೀರಮಾಪತಿಯೇ ಸ್ವತಂತ್ರ ಜಗನ್ನಾಥ
ಸರಸಿಜೋದ್ಭವ ಶಿವ ಶಕ್ರಾದಿ ಸರ್ವರಿಗೂ
ಪ್ರೇರಕನು ಸ್ವಾಮಿಯು ಚಿತ್ ಅಚಿತ್ ನಿಯಂತ ೧೧

ವಿಹಿತ ಸಾಧನಕ್ಕೊದಗೆ ನ್ಯಗ್ರೋಧೋದುಂಬರ ಹರಿ
ದೇಹ ಬೆಳಸುವ ಪೋಷಿಸುವ ರಕ್ಷಿಸುವನು
ಅಹರ್ನಿಶಿ ಪಾಲಿಸುವ ಭಕ್ತವಾತ್ಸಲ್ಯದಿ
ಮಹಾರ್ಹರ ರಕ್ಷಿಸಿದ ಪ್ರಹ್ಲಾದ ಗಜಪತಿಯ ೧೨

ಹರಿಯ ಪಾದಕೆ ಅಭಿಷೇಕ ಮಾಡಿದ ಬ್ರಹ್ಮ
ಹರನು ಕೈಲಾಸ ವಾಸನು ಆ ತೀರ್ಥ
ಸಹಸ್ರನಾಮ ಬೃಹತೀ ಸಹಸ್ರ ಸಹ ಪಠಿಸುತ್ತಾ
ಶಿರದಲ್ಲಿ ಧರಿಸಿ ಸತಿ ಪಾರ್ವತಿಗೆ ಎರೆದ ೧೩

ಹರಿನಾಮ ಸಂಸ್ಮರಣೆ ಪೂರ್ವಕದಿ ಈ ನುಡಿಯ
ಬರೆಯುವ ಪಠಿಸುವ ಕೇಳುವ ಭಕ್ತರನ್ನು
ಶ್ರೀರಮಾಯುತ ಹರಿ ಸುರವೃಂದ ಸಹ ಬಂದು
ಸಂರಕ್ಷಿಸುವ ಸರ್ವವಿಪತ್ ದೂರ ಮಾಡಿ ೧೪

ಸತ್ತಾ ಪ್ರವೃತ್ತಿ ಪ್ರತೀತಿ ಪ್ರದ ಶ್ರೀ ಪತೇ
ವೃತತಿಜಾಸನ ಪಿತ ವರಾಹ ನರಸಿಂಹ
ಭೂತಿದ ದಯಾಬ್ಧಿ ಶ್ರೀ ಪ್ರಸನ್ನ ಶ್ರೀನಿವಾಸ ನಮೋ
ಸದಾ ಶರಣು ಮಾಂಪಾಹಿ ಸಜ್ಜನರ ೧೫

ರೋಗ ಪರಿಹಾರ ಸ್ತುತಿ

೫೮

ಗುರುಗ ಧನ್ವಂತರೀ ವರಾಹ ನರಹರಿ ನಿನ್ನಾ
ಚರಣಕೆರಗುವೆ ಎನ್ನ ಬಿನ್ನಪಕೇಳಿ ಪೊರೆ ಇವಳನ್ನಾ ಪ

ಉದರ ಶೂಲಿ ಎನಲು ವೈದ್ಯಪಂಡಿತರು
ಶಸ್ತ್ರ ಪ್ರಯೋಗಿಸಲಿಹರು ಅವಶ್ಯ ಇಲ್ಲದಲೆ ೧

ಶಸ್ತ್ರದ ವೈಷಮ್ಯ ಬಾಧೆಗಳ ಕಳೆದು
ನಿತ್ರಾಣ ನರ ಉದರ ಮಾಂದ್ಯಗಳ ತಿದ್ದಿ ಕಾಪಾಡು ೨

ವಿಧಿತಾತ ಶ್ರೀ ಪ್ರಸನ್ನ ಶ್ರೀನಿವಾಸ ಘೃಣಿಯೇ
ನಿನ್ನ ದಯದಿಂದಲೇ ಜೀವರು ನಮ್ಮೆಲ್ಲರ ಯೋಗ ಕ್ಷೇಮಗಳು ೩

ಶ್ರೀ ರಾಜಸೂಯಾ ಅಗ್ರಪೂಜಾ ಸ್ತೋತ್ರ

೫೯

ರಾಜನ ಭಾಗ್ಯವಿದು । ಧರ್ಮರಾಜನ ಭಾಗ್ಯವಿದು ಪ

ರಾಜೀವ ಜಾಂಡದ ಏಕಸ್ವರಾಟ್ ಶ್ರೀ
ಕೃಷ್ಣನ ರಾಜೀವ ಅಂಘ್ರಿ ಸುಯುಗ್ಮವ
ರಾಜಸೂಯದಿ ತಾ ಪೂಜಿಸಿದ ಅ.ಪ

ಚಿತ್ರವಿಚಿತ್ರವು ಸ್ತಂಭತೋರಣಗಳು
ರತ್ನ ಮಾಣಿಕ್ಯ ಮರುಗದದಿ
ಚಂದ ಹೊಳೆವ ಸಭೆ ರಾಜರು ಸುತಪೋ
ಧನರು ಕುಳಿತಿರೆ ಮಾಧವಗೆ
ಮೊದಲು ಪೂಜೆಯ ಮಾಡಿ ಯಜ್ಞವಾ
ಚರಿಸಿದ ವಿಧಿ ಪೂರ್ವಕದಿ ಶ್ರದ್ಧೆಯಲಿ ೧

ಶಂತನುಸುತ ಗಾಂಗೇಯರು ನೆರೆದಿದ್ದ
ಸಾಧು ಸನ್ಮುನಿಜನ ಮನದಂತೆ
ಇಂದಿರೆಯರಸ ಶ್ರೀ ಕೃಷ್ಣಗೆ ಸಮರು
ಅಧಿಕರು ಇಲ್ಲದ ಜಗದೀಶ
ವಿಧಿ ಈಶಾನದಿ ಸರ್ವನಿಯಾಮಕ
ಕೃಷ್ಣನೇ ಪೂಜ್ಯನು ಎಂದರು ದೃಢದಿ ೨

ಗಂಗಾಜಲವ ಜಾಂಬೂನದ ಕಲಶದಿ
ಮಾದ್ರೇಯನು ತಾ ತಂದೀಯೇ
ಗಂಗಾಜನಕ ವರಾಂಗಿ ಸುವಕ್ಷ ಐ
ಶಂಗವಾಸನ ಅರಿಶಂಖವ ಪಿಡಿದವನ
ಅಂಘ್ರಿ ಸುಕಂಜದ್ವಯವ ಯುದಿಷ್ಠಿರ
ಅವನೀಜನಗೈದ ಭಕ್ತಿಯಲಿ ೩

ಮನುಷ್ಯವತ್ ಲೀಲಾ ದ್ವಿಭುಜನು ಚಿನ್ಮಯ
ಭಜಕಗೆ ಚತುರ್ಭುಜ ಕಾಣಿಸುವ
ಜ್ಞಾನರೂಪದಿ ಹರಿ ವನಜ ಸಂಭವನಲಿ
ಇಹ ಕ್ರಿಯಾರೂಪದಿ ವಾಯುನಲಿ
ವಾಣೀ ಭಾರತಿಯಲಿ ಇಚ್ಚಾಶಕ್ತಿ
ರೂಪದಿ ಪ್ರಚುರನು ಸರ್ವೇಶ ೪

ರಥನಾಭಿಯಲಿ ಅರಗಳ ತೆರದಿ
ಸಮಸ್ತವು ಪ್ರತಿಷ್ಠಿತ ವಾಯುನಲಿ
ಕ್ಷಿತಿಯಲಿ ಸ್ವಯಮೇವ ವಾಯುವೆ
ಜನಿಸಿ ಜಗದಂತರಾತ್ಮ ಭೀಮನಾಗಿ
ಯುಧಿಷ್ಠಿರನಲಿ ಸಮಾಭಿಷ್ಟನಾಗಿಹ ಸೌಮ್ಯ
ರೂಪದಿ ಕೃಷ್ಣನ ಸೇವಿಸಲು ೫

ಸೌಮ್ಯರೂಪದಿ ಒಳಗಿದ್ದು ಶ್ರೀ ಕೃಷ್ಣಗೆ
ಅಗ್ರ ಪೂಜಾದಿ ರಾಜಸೂಯ
ತಾ ಮಾಡಿ ಸ್ವಯಂ ತನ್ನ ಅವತಾರ
ಭೀಮಗೆ ಅಣ್ಣನೆಂದೆನಿಸುತಿಪ್ಪ
ಧರ್ಮರಾಜನ ಕೈಯಿಂದ ಮಾಡಿಸಿದನು
ಭಕ್ತಾನುಕಂಪಿ ಶ್ರೀಹರಿಯ ಪ್ರೀತಿಸಿದ ೬

ಮನಶುಚಿಯಲಿ ಈ ನುಡಿಗಳ ಪಠಿಸುವ
ಶ್ರವಣವ ಮಾಡುವ ಸುಜನರಿಗೆ
ವನರುಹಾಸನ ಪಿತ ಶ್ರೀ ಪ್ರಸನ್ನ ಶ್ರೀನಿವಾಸ
ಪಾಂಡವ ಪ್ರಿಯ ಶ್ರೀ ರುಕ್ಮಿಣೀಶ
ಮನಶೋಕಾದಿ ತಾಪತ್ರಯ ನೀಗಿಸಿ
ಯೋಗ್ಯವಾಂಛಿತವೀವ ಬಹುದಯದಿ ೭

ಕೂಡಲ ಮಾಣಿಕ್ಯ ಕ್ಷೇತ್ರಸ್ಥ ಭರತ ಪ್ರದ್ಯುಮ್ನ

೬೦

ಶ್ರೀ ರಾಮಚಂದ್ರಾನುಜ ಭರತರಾಜ
ಶರಣಾದೆ ತವಚರಣಯುಗಳ ತೋಯಜಕೆ ಪ

ಉರು ಪರಾಕ್ರಮಿ ದುರ್ಗೆರಮಣ ಹರಿಚಕ್ರದಲಿ
ಇರುವೆ ನೀ ತದ್ರೂಪದಲಿ ಸೇವಿಸುತಲಿ

ಮಾರ ಶ್ರೀ ಕೃಷ್ಣಸುತ ಸ್ಕಂಧಾದಿರೂಪಿ ನೀ
ಧೀರ ನಿನ್ನಲಿ ಕೃತೀಪತಿಯು ಪ್ರಜ್ವಲಿಪ ೧

ಉಡುಪಶೇಖರ ಕೊಟ್ಟ ವರಬಲದಿ ಪೌಲಸ್ತ್ಯ
ಕಡು ಕಷ್ಟ ಕೊಡಲಾಗ ಸುರರು ಮೊರೆಯಿಡಲು
ಕಡಲಶಯನನು ರಾಮ ಪ್ರಾದುರ್ಭವಿಸಲು ನೀನು
ಹೆಡೆರಾಜ ಅನಿರುದ್ಧಸಹ ಬಂದೆ ಬುವಿಯೊಳ್ ೨

ಕೇಕಯಕೆ ನೀ ಪೋಗೆ ಕೈಕೇಯಿ ವರದಿಂದ
ರಾಕೇಂದುನಿಭಮುಖನು ನಿಷ್ಕಳ ಶ್ರೀರಾಮನ
ನೂಕಲು ವನಕೆ ನೀ ಬಂದರಿತು ಧಿಕ್ಕರಿಸಿ
ಏಕಾತ್ಮ ರಾಮನಲಿ ಪೋಗಿ ಬೇಡಿದೆಯೊ ೩

ಸ್ವೀಕರಿಸಿ ರಾಜ್ಯವಾಳೆಂದು ನೀ ಬೇಡಲು
ಅಖಿಲಾಂಡಕೋಟಿ ಬ್ರಹ್ಮಾಂಡಪತಿ ರಾಮ
ನಾಕಿ ಭೂಸುರರೊಡೆಯ ಹದಿನಾಲ್ಕು ವರ್ಷಗಳು
ಆಗೆ ತಾ ಬರುವೆನು ಎಂದು ಪೇಳಿದನು ೪

ದೇವ ಶ್ರೀ ರಾಮನ ಸುಖಜ್ಞಾನಮಯಪಾದ
ಸೇವಿಸಿ ಪ್ರೇಮಪ್ರವಾಹದಲಿ ನೀನು
ಬುವಿಯನು ಪವಿತ್ರ ಮಾಡುವ ಪಾದಪೀಠವನು
ನವವಿಧ ಭಕ್ತಿಯಲಿ ತಂದು ಪೂಜಿಸಿದೆ ೫

ನಂದಿಗ್ರಾಮದಲಿ ನೀ ತಪಶ್ಚರ್ಯದಲಿ ಇದ್ದು
ಬಂದಿಲ್ಲ ರಾಮನೆಂದಗ್ನಿ ಮುಖದಲಿ ನಿಲ್ಲೆ
ಬಂದ ಇಕ್ಷ್ವಾ ಸ್ವಾಮಿ ರಾಮಚಂದ್ರನು ಎಂದ
ಇಂದಿರೇಶನ ಪ್ರಥಮ ದೂತ ಶ್ರೀ ಹನುಮ ೬

ಅಖಿಲೇಶ ಸುಖಮಯನು ಶ್ರೀ ರಾಮಚಂದ್ರನು
ಸುಖ ಪೂರ್ಣ ಸೀತಾಸಮೇತ ಬರುವುದನು

ನೀ ಕೇಳಿ ಮುದದಲಿ ಮಾತೇರು ಶತ್ರುಘ್ನ
ಭಕುತ ಪುರಜನ ಕೂಡ ಪೋದೆ ಕರೆತರಲು ೭

ಕಮಲೆ ಜಾನಕಿಪತಿಯ ಮೇಲೆ ಪೂಮಳೆ ಕರೆದು
ನಮಿಸೆ ನೀ ಭಕ್ತಿಯಲಿ ಕೃತಕೃತ್ಯ ಮನದಿ
ಸ್ವಾಮಿ ರಾಮನು ನಿನ್ನ ಅಚಲ ಭಕ್ತಿಯ ಮೆಚ್ಚಿ
ಪ್ರೇಮದಿಂದಲಿ ನಿನಗಾಲಿಂಗನವನಿತ್ತ ೮

ಸುರರ ನಗರೋಪಮವು ಸರೆಯೂ ತಟಿನಿಯಲ್ಲಿ
ಇರುವುದು ಅಯೋಧ್ಯಾ ಆ ಪುರಿಜನರು ಎಲ್ಲಾ
ಶ್ರೀರಾಮ ಸೀತಾಸಮೇತ ಪರಿವಾರ ಸಹ
ಪುರಿಯೊಳು ಬರಲು ಆನಂದ ಹೊಂದಿದರು ೯

ಅಘದೂರ ಪೂರ್ಣಕಾಮನ ಮಂದಹಾಸವನು
ನರಜನರು ನೋಡಿ ಹಿಗ್ಗಿ ಘೋಷಿಸಲು
ಜಗಜ್ಜನ್ಮ ಸ್ಥಿತ್ಯಾದಿಕರ್ತ ಭೂಕಾಂತ ಶ್ರೀ
ರಾಘವಗೆ ಮಾಡಿಸಿದೆ ರಾಜ್ಯಾಭಿಷೇಕ ೧೦

ಶ್ರೀ ರಾಮಭದ್ರನಿಗೆ ಯುವರಾಜನಾಗಿದ್ದು
ಭರತರಾಯನೆ ನೀನು ಸೇವೆ ಅರ್ಪಿಸಿದೆ
ಸರಸಿಜೋದ್ಭವ ಲೋಕದಂತಾಯಿತೀ ಲೋಕ
ವರ ವಿಷ್ಣು ಭಕ್ತಿಯು ಸೌಖ್ಯ ಎಲ್ಲೆಲ್ಲೂ ೧೧

ಶರದಿಂದ ನೀನು ಗಂಧರ್ವರೂಪದಲಿದ್ದ
ಮೂರು ಕೋಟಿ ಕ್ರೂರ ಅಸುರರನು ಕೊಂದೆ
ಕರುಣಿಸಿ ನೀ ಎನ್ನ ಕಷ್ಟಗಳ ಪರಿಹರಿಸೊ
ಶ್ರೀ ರಾಮಪ್ರಿಯ ಭರತ ಎನ್ನ ಗುರುಗಳ ರಾಜ ೧೨

ಶ್ರೀ ರಾಮ ಅವತಾರ ಕಾರ್ಯ ತಾ ಪೂರೈಸಿ
ಸುರರು ಮುನಿಗಣ ಮುಕ್ತಿಯೋಗ್ಯರ ಸಮೇತ

ತೆರಳೆ ಸ್ವಧಾಮಕ್ಕೆ ಚಕ್ರ ನೀ ಚಕ್ರವನು
ಶ್ರೀರಾಮನಿಗೆ ದಕ್ಷಪಾರ್ಶ್ವದಲಿ ಪಿಡಿದೆ ೧೩

ಗರುಡ ಮೃಡ ಶೇಷಸ್ಥ ಭಾರತೀಪತಿ ಹೃಸ್ಥ
ಪರಮ ಪೂರುಷ ಕೃತೀಪತಿಯು ಪ್ರದ್ಯುಮ್ನ
ಹರಿ ರಾಮನಲಿ ಸದಾ ಭಕ್ತಿಭರಿತನೆ ಭರತ
ವರ ನೀನು ಅಹಂಕಾರಿಕ ಪ್ರಾಣಾದ್ಯರಿಗೆ ೧೪

ಸರಸಿಜಾಸನ ಪಿತ ಶ್ರೀ ಪ್ರಸನ್ನ ಶ್ರೀನಿವಾಸನ
ವರಭಕ್ತ ವೃಂದ ಶಿರಮಾಣಿಕ್ಯ ಭರತ
ಧರೆಯೊಳುತ್ತಮ ಕೂಡಲ್ ಮಾಣಿಕ್ಕವೆಂಬುವ
ಕ್ಷೇತ್ರದಲಿ ನಿಂತು ಹರಿಭಕ್ತರನು ಪೊರೆವೆ ೧೫

ಶ್ರೀ ಧರ್ಮಪುರಿ ಕ್ಷೇತ್ರ ಪರವಾಸುದೇವ ಸ್ತೋತ್ರ

೬೧

ಶರಣು ಹೊಕ್ಕೆನೋ ನಿನ್ನ ।
ಪರವಾಸುದೇವನೇ ಪಾಲಿಸೆನ್ನಲಿ ಕೃಷ್ಣ ।
ಕರಿರಾಜವರದನೇ ಶರಣ ವತ್ಸಲ ಘನ್ನ ।
ಭಕ್ತಜನ ಪ್ರಸನ್ನ ।
ಉರುಗುಣಾರ್ಣವ ವೇದವೇದ್ಯನೆ ।
ಶಿರಿ ಕರಾಂಬುರುಹಾಚೀತಾಂಘ್ರಿ ।
ಸರೋಜ ವಿಧಿ ಶಿವಾದ್ಯಮರ ವಂದ್ಯನೆ ಸರ್ವಕರ್ತಾ
ಶರಣುಹೊಕ್ಕೆನೋ ನಿನ್ನ॥ ಪ

ಮೀನ ಕೂರ್ಮ ವರಾಹ । ಚಿನ್ಮಾತ್ರವಪುಷವೀರಭದ್ರ ನೃಸಿಂಹ ॥
ಬಲಿರಾಯಗೊಲಿದು ಕೆಡಹಿದೈತ್ಯ ಸಮೂಹ ॥
ದುಷ್ಟನೃಪರ ಸೀಳಿ ಬಿಸುಟು ಬ್ರಹ್ಮ । ಕುಲವರವಾಯು ಮಹಾರ್ಹ
ಹನುಮಪ್ರಿಯರವಿ ಸುತ ವಿಭೀಷಣರಿಗೆ ನೀ ಅಭಯನೀಡಿ ಪಾಂಡು –
ತನಯರು ದ್ರೌಪದೀ ವಿದುರ ಉದ್ಧವ ಇನ್ನು

ಬಹು ಸಜ್ಜನರಿಗೊಲಿದು ॥
ಜನಜನೆನಿಸಿದಿ ದೈತ್ಯಮೋಹಕ ಸುರಸುಬೋಧಕ ಬುದ್ಧಶರಣು ।
ಕ್ಷೋಣಿಯಲ್ಲಿ ಚೋರರಾಜರ ಸದೆದು –
ಧರ್ಮಸ್ಥಾಪಿಸಿದಿ ಹೇ ಕಲ್ಕಿ ನಮೋ ನಮೋ ಪಾಹಿ ಸಂತತ ೧

ಸರ್ವಗತ ಸರ್ವೇಶ । ಸರ್ವೇಶ್ವರನು ನೀನೇ ಕಾಲವಸ್ತುದೇಶ ॥
ಸರ್ವತ್ರಒಳಹೊರ ವ್ಯಾಪ್ತನಾಗಿಹ ಶ್ರೀಶ ॥
ಶ್ರೀತತ್ವ ನಿನ್ನಲಿ ಓತಪ್ರೋತಮಹೇಶ । ಅಕರನೇನಿರ್ದೋಷ ॥
ಸಚ್ಚಿತ್ ಸುಖಮಯ ಆತ್ಮಾಪ್ರೇದಕ್ಕೂ ಅಮಿತ ಸತ್ಕಲ್ಯಾಣಗುಣನಿಧೇ ॥
ಸರ್ವಜಗಚ್ಚೇಷ್ಟೆಯನು ಗೈಸುತಿ ಸ್ವಪ್ರಯೋಜನ ರಹಿತಸ್ವಾಮಿಯೇ ।
ಅಜಿತರುಚಿರಾಂಗದನೇ ಸ್ವಾಸ್ಯನೇ ಸರ್ವಭೂತಾಂತರಾತ್ಮನೇ ॥
ಅಚ್ಯುತನೇ ಸಂಪೂರ್ಣ ಕಾಮನೇ ಅತಿಜ್ಞಾನ ವೈರಾಗ್ಯ ಸಂಪತ್‌ದಾತ
ಕರುಣಿ । ಗುರುವೇಂಕಟ ॥ ಶರಣು ॥ ೨

ಧರ್ಮಪುರಿಯಲ್ಲಿರುತ್ತಿ । ಶೇಷಶಯನನೇ
ನಮೋ ಪರವಾಸುದೇವ ಪ್ರಮೋದಿ ॥
ಮದ್ದೋಷ ಕಳೆದು ಸದ್ಧರ್ಮದಲಿ ಇಡು ದಯದಿ ।
ವೃಷಾತಪಿಯೇ ಕಪಿತನಾಮಕನಮೋ ಆನಂದಿ ನಂದಾ ನಂದನ ನಂಹಿ
ಜಗದಾಧಾರ ಶ್ರೀಕೂರ್ಮನಭ ಅರ್ಕಾದಿ ಧಾರಕ ಶಿಂಶುಮಾರನೇ
ಸಾಗರವು ಭೂಮಿಯನು ನುಂಗದೇ ಹಿಂದೆ ಸೆಳೆದು ಧರೆಯರಕ್ಷಿಪ ॥
ಸಾಗರದಲ್ಲಿರುವ ವಡವಾವತ್ತಅಗ್ನಿನೀನು ಸವತ್ರ ಹರವು ।
ಮುಖ್ಯ ರಕ್ಷಕ ವೇಧತಾತ ಪ್ರಸನ್ನ ಶ್ರೀನಿವಾಸ ಶ್ರೀಪತಿಗರುಡಕೇತನ
ಶರಣು ಹೊಕ್ಕೆನೋನಿನ್ನ ೩

ಶ್ರೀ ತಾಂದೋಣಿ ವೆಂಕಟರಮಣ

೬೨

ಧನ್ಯನಾದೆನು ಇಂದು ವೆಂಕಟನ ಕಂಡು
ಅನ್ಯರೊಬ್ಬರು ಇವಗೆ ಸರಿಪರರು ಇಲ್ಲ ಪ

ಅಮರರಿಗು ಮನುಜರಿಗು ಸರ್ವ ಪ್ರಾಣಿಗಳಿಗು
ಸ್ವಾಮಿ ರಕ್ಷಕ ಸರ್ವ ಪ್ರೇರಕನು ದೇವ
ಅಮರಾವತಿ ಸರಿತತೀರ ಗಿರಿಯಲಿ ನಿಂತ
ಪ್ರೇಮದಿಂದಲಿ ಭಜಿಸೆ ಅಭಯ ವರವೀವ ೧

ಎನ್ನ ಕುಲದೇವನು ತಿರುಪತಿ ವೆಂಕಟನು
ತಾನೇವೆ ಭಕ್ತರಿಗೆ ಒಲಿಯೆ ಬಂದಿಹನು
ಅನಂತ ಗುಣಪರಿಪೂರ್ಣ ತನ್ನ ಸೇವಿಸುವರ
ಅನುಗಾಲ ರಕ್ಷಿಸುವ ಅನಿಮಿತ್ತಬಂಧು ೨

ಮಧ್ವಮುನಿ ಹೃತ್ಸದನ ದೇವದೇವೋತ್ತಮನು
ಮಧ್ವಮುನಿ ಗುರುಸ್ವಾಮಿ ವಿಧಿತಾತ ಶ್ರೀಶ
ಶುದ್ಧಕಾರುಣ್ಯನಿಧಿ ಪ್ರಸನ್ನ ಶ್ರೀನಿವಾಸ
ಉದ್ಧರಿಪ ಸಂಸ್ಮರಿಸೆ ಇಹಪರದಿ ಎಂದೂ ೩

ದೇವರನಾಮ – ಶ್ರೀ ಸೇತುಮಾಧವ ಸ್ತೋತ್ರ

೬೨–೧

ಸೇತುಮಾಧವ ವಿಭುವೇ । ನಿನ್ನಯ ದಿವ್ಯ
ವೃತತಿಜ ಪದಯುಗಳ ।
ಸತತ ನಂಬಿದೆ ಎನ್ನ ಹಿತದಿ ಪಾಲಿಸಿ ಸದಾ
ಕೃತ ಕೃತ್ಯ ಧನ್ಯನ ಮಾಡಿ ಸಲಹೋ ಸ್ವಾಮಿ ಪ

ಪುಟ್ಟಿದಾರಭ್ಯ ನಿನ್ನ । ನಾಮವ ಒಂದು ।
ತೃಟಿಯು ಭಜಿಸಲಿಲ್ಲವೋ ।
ವಿಠ್ಠಲರಾಯ ಪರಮೇಷ್ಠಿಯ ಪಿತ ಎನ್ನ
ಕಷ್ಟಗಳಳಿದು ಸಲಹೋ ಸರ್ವೋತ್ಕೃಷ್ಟ ॥

ಕೃಷ್ಣ ಕೃಷ್ಣಾವರದ ಅಜಮಿಳ
ಭ್ರಷ್ಟತನವ ಎಣಿಸದೇ ಬಹು

ನಿಷ್ಟ ವಿಪ್ರ ಸುಧಾಮಗೊಲಿದ
ತ್ರಿಧಾಮ ನಮೋ ಮದ್ವೇಷ್ಟ ಪಾಹಿ ೧

ಸೇತು ಸರ್ವಾಶ್ರಯನೇ । ನೀನೊಬ್ಬನೇ ।
ಮುಕ್ತಾ ಮುಕ್ತಾಶ್ರಯನು ।
ತ್ರಾತನೀನೇವೆ ಯೆಂದರಿತವರ ಭೀತಿಹರ
ಪಾತ ಸರ್ವೋತ್ತಮ ಜಗದೇಕ ಈಶ
ದ್ಯುಧರಾ ಪಾತಾಳ ಸರ್ವಾಧಾರನಾಗಿಹ
ಪ್ರಭುವೇ ನಿನ್ನಯ ಅತಿ ಅಗಾಧಸುಮಹಿಮೆ ಅನಂತವು ।
ಮೋದ ಮಯ ದಶ ಶತ ಸಹಸ್ರಾನಂತರೂಪನೇ ॥ ೨

ಹೀನಮಂದನು ನಾನೆಂದು । ದೂರನೀ ॥
ಎನ್ನ ಮಾಡದೇ ಸಲಹೋ ।
ಎನ್ನ ಹಿರಿಯರು ನಿನ್ನಚ್ಚನ್ನ ಭಕ್ತರೋ
ಘನದಯಾಂಬುಧೇ ಗಂಗಾ
ಜನಕ ಪಾವನ ನಾಮಾ ।
ಮನೋವಾಕ್ಕಾಯದಿ ನಿಂತು ಎನ್ನೊಳು
ನೀನೆ ಮಾಡಿ ಮಾಡಿಸುವುದೆಲ್ಲ
ನಿನಗೆ ಸುಪ್ರೀತಿಯಾಗಲೋ ಮುಕ್ –
ಕಣ್ಣ ವಿಧಿಪ ಶ್ರೀ ಪ್ರಸನ್ನ ಶ್ರೀನಿವಾಸ ಶ್ರೀಶ ॥ ೩

ಶ್ರೀ ಪುರುಷೋತ್ತಮವಿಲಾಸ

೬೨–೨

ಆನಂದ ಜ್ಞಾನಮಯ ಅಖಿಲ ಗುಣ ಪರಿಪೂರ್ಣ ॥
ಅನಘ ಲಕ್ಷ್ಮೀರಮಣ ಶರಣು ಜಗದೀಶ ಪ

ವನಜಾಸನಾದಿ ಸುರರಿಂದ ಆರಾಧಿತನೇ ।
ವನಜಜಾಂಡದಿ ಜಗಜ್ಜನ್ಮಾದಿಪತೇ ಅಪ

ಆಮ್ನಾಯಕೂ ಅಮಿತ ಅನಂತ ಗುಣಕ್ರಿಯಾರೂಪ
ಅನಂತ ಶೀರ್ಷಾನಂತ ಉರುಸುಗುಣಪೂರ್ಣ॥
ಅನಂತಾಕ್ಷ ಸರ್ವಜ್ಞ ಸಾಕ್ಷಿ ಸರ್ವಾಧ್ಯಕ್ಷ ॥
ಅನಂತಪಾದನು ಅನಂತರೂಪಸರ್ವಸ್ಥ ೧

ಸಹಸ್ರಪಾತ್ ಸತ್ಯಂ ಸತ್‌ಸೃಷ್ಟಿ ಜೀವನದ
ಸಹಸ್ರಾಕ್ಷಜ್ಞಾನಂ ಎರಡು ವಿಧಜ್ಞಾನ ॥
ಸಹಸ್ರಶೀರ್ಷಾನಂತಂ ಆನಂದ ಆನಂದ
ಮಹಾಮಹಿಮ ಪೂರ್ಣಗುಣ ಪುರುಷನೀಬ್ರಹ್ಮ ೨

ನಾಕಭೂಪಾತಾಳ ಜಗದಂತರ್ಬಹಿರ್ವ್ಯಾಪ್ತ ॥
ಭಕುತರ ಸಮೀಪಸ್ಥ ಇತರರಿಗೆ ದೂರ ॥
ಏಕಾತ್ಮ ಪರಮಾತ್ಮ ಪರಮ ಪುರುಷವಿಷ್ಣೋ
ನೀಕಾಲಗುಣ ದೇಶಾಪರಿಚ್ಛಿನ್ನ ಭೂಮನ್ ೩

ಪ್ರಕೃತಿಶಚವ್ಯಕ್ತ – ಮಹದಾದಿ ತತ್ವಂಗಳಿಗೇ ।
ಆಕಾಶ ಮೊದಲಾದ ಭೂತ ಪಂಚಕಕ್ಕೆ ॥
ಸುಖಮಯನೇ ನೀಸರ್ವೆ ಚೇತನಾ ಚೇತನಕೆ ।
ಏಕ ಆಶ್ರಯ ಅನಂತ ಶೀರ್ಷಾಕ್ಷಪಾದ ೪

ಪರಮೇಶ ಅವಿಕಾರ ಸಮರ್ಥ
ಉರು ತೈಜಸಚ್ಛಕ್ತಿ ರೂಪವಷಟ್ಕಾರ
ಪ್ರಕ್ರತಿ ಸರ್ವದಿ ನೀನು ಸ್ವೇಚ್ಛೆಯಿಂ ತುಂಬಿರುವಿ ।
ಪ್ರಕೃತಿ ಸರ್ವವು ನಿನ್ನಧೀನವೋ ಸ್ವಾಮಿ ೫

ದ್ಯುಭ್ವಾದಿ ಜಗತ್ತಿಗೆ ಆಧಾರಾಧಿಷ್ಠಿತನು
ದುಭ್ವಾದಿಗಳವ್ಯಾಪ್ಯ ವ್ಯಾಪಕನು ನೀನು
ಸರ್ವಸ್ಥನಾಗಿ ನೀ ಸರ್ವವಶಿಯಾದುದರಿಂ
ಸರ್ವನೀನೇಂದೆನಿಸಿಕೊಂಬಿಯೋ ಸ್ವಾಮಿ ೬

ಆಧಾರ ಆಧೇಯೆ ಅನಂತಾಲ್ಪಶಕ್ತಿಯು
ಅಧಿಷ್ಠಾನಾಷ್ಷಿತ ವ್ಯಾಪ್ಯ ವ್ಯಾಪಕವು
ಭೇದ ಈರೀತಿಯಲಿ ಸುಸ್ಪಷ್ಟವಾಗಿದೆಯು
ಇದಂಸರ್ವಂ ಉಕ್ತಿ ನಿನ್ ಸ್ವಾಮಿತ್ವ ಬೋಧಕವು ೭

ಹಿಂದಿನಮುಂದಿನ ಇಂದಿನ ಜಗತ್ತೆಲ್ಲ
ಅಧೀನ ನಿನ್ನಲ್ಲಿ ಸ್ವಾಮಿ ಸರ್ವವಶಿಸರ್ವ ।
ಓದುನವು ಕರ್ಮಫಲಭುಂಜಿಪ ಸಂಸಾರಿಗಳು
ಅದರಂತೆ ಮುಕ್ತರಸ್ವಾಮಿ ಆಶ್ರಯನು ೮

ಇವು ಮಾತ್ರವೇ ನಿನ್ನ ಮಹಿಮೆಗಳು ಪರಮಾತ್ಮ ॥
ಇವಕಿಂತ ಅಧಿಕೋಚ್ಚ ಅಪರಿಮಿತ ಮಹಿಮಾ
ಸರ್ವ ಈ ಚೇತನಾಚೇತನ ಪ್ರಪಂಚವು
ಸರ್ವೇಶ ನಿನ್ನಂಶ ಸಹೃದಯ ಕಿಂಚಿತ್ತು ೯

ಒಡೆಯನಿನ್ನಮಿತ ಶಕ್ತಿಯೊದಂಶದಲೆ
ಜಡಜಗತ್ ಇರುವಿಕೆ ವಿಕಾರವುಸರ್ವ ॥
ಜಡ ಭಿನ್ನರಲಿ ನಿನ್ನ ಸಾದೃಶ್ಯ ಅತಿ ಸ್ವಲ್ಪ
ನಡಿವುದು ಪಾದ ವೊಂದಂ ಶೃತ ಸುಪಾದನು ೧೦

ಅಧೀನತ್ವದಿಂಜಗತ್ ಇದಂಸರ್ವಂ ಎಂದಂತೆ –
ಪಾದೋಸ್ಯ ವಿಶ್ವದಲಿ ಭಿನ್ನಾಂಶಜೇಯ ॥
ಸದೃಶ್ಯ ಮಾತ್ರದಲೇ ಭಿನ್ನಜೀವರು ನಿನ್ನ
ಪಾದರಾಗಿಹರೋ ಚಿತ್ಚೇತ್ಯಯಂತ ೧೧

ಪೂರ್ಣಗುಣನಿಧಿ ಅನಘ ಜನ್ಮಾದಿಕರ್ತಅಜ
ಆವಣ್ಣಯೋನಿತ ಪ್ರಾಪ್ಯ ಮಧ್ವಸ್ಥ ಶರಣು ॥
ವನಜಭವಪಿತ ಶ್ರೀಶ ಪ್ರಸನ್ನ ಶ್ರೀನಿವಾಸ ನಮೋ
ಅನಂತ ಗುಣಪೂರ್ಣ ನೀ ಅನಂತನು ಪರಮ ಪುರಷ ೧೨

ಸಾಧನ ದೇಹವಿದು

೬೨-೩

ಸಾದನ ದೇಹವಿದು
ಶ್ರೀ ಪದುಮೇಶ ದಯದಿ ಕೊಟ್ಟ ದೇಹವಿದು ಪ

ವಿಹಿತಾವಿಹಿತವು ಈರ್ವಿಧ ಕರ್ಮದಿ
ವಿಹಿತವ ಪಿಡಿದು ಅಕಾಮ್ಯದಿ ಸಮ್ಯಕ್ ಆಚರಿಸಿ
ಅಹಿಪಶಯ್ಯನ ಸನ್ಮಹಿಮೆಗಳರಿತು ವ
ರಾಹನ ದಯದಲಿ ಪರಸುಖ ಪೊಂದಲು ೧

ಬೇಸರ ತೊರೆದು ಸುಶಾಸ್ತ್ರವನೋದಿ
ಸಾಸಿರ ನಾಮನ ಭಾಸುರ ಗುಣ ಕ್ರಿಯರೂಪಗಳ
ಈಶನ ದಯದಿ ಸದ್ಯೋಚಿಸಿ ಹಿಗ್ಗುತ
ವಾಸುದೇವನೆ ಸರ್ವೇಶನೆಂದರಿಯಲು ೨

ವಿಷಯೀಕ್ಷಣಗಳು ಕ್ಷಣಸುಖವೀವುವು
ಶೇಷಗಿರೀಶನೆ ಅಕ್ಷಯಸುಖದನು ಸುಖಮಯನು
ದೋಷದೂರ ಶ್ರೀ ಲಕ್ಷ್ಮಿಯ ರಮಣನೆ
ಪೋಷಕ ಮನೋಗತ ತಿಮಿರಕೆ ಪೂಷನು ೩

ತಾರಕ ಗುರು ಉದಾರ ಸುಮನದಲಿ
ದಾರಿಯ ತೋರಿಸಿ ಉದ್ಧರಿಸಲು ಬಹು ದಯದಿ
ವಿಧಾತೃ ಸಮೀರ ಸುಮೇಧರು ಚಿಂತಿಪ
ವಾರಿಧಿಶಯ್ಯ ಪರೇಶನು ತೋರುವ ೪

ಸಪ್ತ ಸುಸ್ಥಾನದಿ ಮರುತಾದಿಗಳೊಡೆ
ಗುಪ್ತನಾಗಿಪ್ಪ ನಿರ್ಲಿಪ್ತ ನಿರಾಮಯ ಶ್ರೀಕಪನು
ಸುಪ್ತಿ ಜಾಗೃತ ಸ್ವಪ್ನಾದಿ ಕಾಲದಿ ಕಾಯುವ
ಆಪ್ತ ಸುಹೃದನಿವಗಾರು ಈಡಿಲ್ಲವು ೫

ಪಂಚ ಸುನಾಡಿಯೋಳ್ ಪಂಚ ಸುವರ್ಣದಿ
ಪಂಚ ಸುರೂಪ ಸ್ವತಂತ್ರನು ಇರುತಿಹ ಶ್ರೀಹರಿಯು
ವಿರಿಂಚ ಸಮೀರ ಸುಮೇಧರು ಬಹು ವಿಧ
ಚಿಂತಿಸಿ ನಮಿಪ ಪ್ರಪಂಚದ ಒಡೆಯನು ೬

ಪದುಮದ ದಳಗಳು ಐದು ಮೂರುಂಟು
ಅದರ ಮೂಲದಿ ಇಹ ಸದಮಲ ಲಕ್ಷ್ಮೀಶ
ಬಾಧಿಪ ಕರ್ಮವ ಸುಡುವ ಸಂಕರುಷಣ
ಸದಮಲ ಪೊರೆಯುವ ಒಳಹೊರಗೆ ೭

ಶ್ರವಣ ಮನನ ಸುಧ್ಯಾನದ ಬಲವು
ಶ್ರೀಶನೊಳ್ ಭಕುತಿಯು ನಿಶ್ಚಯ ಸಾಧನ ಗುರುಮಯದಿ
ಶ್ರೀಶನ ಮಹಿಮೆಗಳರಿತು ಸದ್ವೃಷದಿ
ಸುರತಟಿನಿಯಪೋಲು ಸರಿಪ ಪ್ರೇಮವೆ ಭಕ್ತಿ ೮

ಮುಕುತಿ ಕೊಡುವ ಜ್ಞಾನ ಭಕುತಿಲಿ ಬರುವುದು
ಸುಖಮಯ ಶ್ರೀಶನ ದಯವು ಇಲ್ಲದೆ ಇದು ಸಿಕ್ಕದಯ್ಯ
ವಿಕಸಿತಾಬ್ಜಜ ತಾತ ಪ್ರಸನ್ನ ಶ್ರೀನಿವಾಸ
ಶ್ರೀಕರ ವ್ಯಾಸ ರಾಮ ಕೃಷ್ಣ ನೃಹರಿ ಕಾಯ್ವ ೯

ಶ್ರೀ ಗಾಯತ್ರಿ ಪ್ರಣವ ಮಂತ್ರ ರಹಸ್ಯ

೬೨–೪

ಪ್ರಣವಾಷ್ಟ ದ್ವಾದಶಾಕ್ಷರ ಮನುಗಾಯತ್ರೀ ।
ಘನ ಪುರುಷಸೂಕ್ತ ಸಾಹಸ್ರನಾಮಾ ನಿಗಮ ವೇದ್ಯ ॥
ವರ್ಣ ವ್ಯಂಜನ ಸ್ವರಾಕ್ಷರ ಪ್ರತಿ ಪಾದ್ಯಾನಂತ ಕ್ರಿಯ ।
ಗುಣ ರೂಪ ಶ್ರೀಶ ನಮೋ ಸರ್ವೇಶ ಗುರುಗ ।

ಅನಂತ ಕ್ರಿಯ ಗುಣರೂಪ ಅನಘ ನಮೋ ವಾಯುಸ್ಥ ।
ಗುಣರೂಪಾ ಕ್ರಿಯಾ 'ನಮೋ' ಅನಘವಾಯುಸ್ಥ ॥

ಅನಿಷ್ಟಹರ ಇಷ್ಟಪ್ರದ ವಿಷ್ಣುಸಾಸಿರನಾಮಾ ॥
ಅನುಷ್ಟುಪ್ ಛಂದಸ್ ಶ್ರೀ ಕೃಷ್ಣದೇವತೆಯು
ಅನಘ ಜ್ಞಾನಾದಿ ನಿರ್ದೋಷ ಗುಣನಿಧಿ
ಗುಣಪೂರ್ಣ ಅನಘ ಅಕಾರವಾಚ್ಯ ಅಂಭ್ರಣೀಶ
ವಿಷ್ಣು ಅವತಾರ ವೇದ ವ್ಯಾಸನೇ ಋಷಿಯು ॥

ಪ್ರಣವೀಷ್ಟ ದ್ವಾದಶಾಕ್ಷರ ಮನುಗಾಯತ್ರೀ ।
ಘನ ಪುರುಷ ಸೂಕ್ತ ಸಾಸಿರನಾಮವೇದ ।
ವರ್ಣ ಸ್ವರವ್ಯಂಜನಾಕ್ಷರ ಸಾದು ಶರಧಿ
ಅನುಪಮ ಸರ್ವೋತ್ತಮ ಪ್ರತಿಪಾದ್ಯ ಶರಣು ॥

ಶ್ರೀ ನಾಮಗಿರಿ ಅಮ್ಮ

೬೩

ಶ್ರೀ ನಾಮಗಿರಿ ಅಮ್ಮ ನಿನ್ನ ನಾ ನಂಬಿದೆ ಸಲಹೆನ್ನ
ಶ್ರೀ ನರಸಿಂಹನ ನಿಜಸತಿ ಶುಭಕರಿ
ವನರುಹಜಾಂಡದ ಜನನಿ ಭೂ ಅಂಭ್ರಣಿ ಅ.ಪ

ಬೊಮ್ಮನ ಪ್ರಳಯದಲಿ ಕಮಲಜ ಆಲದ ಎಲೆಯಾಗಿ
ಸ್ವಾಮಿ ಸ್ವಾಪ್ಯನ ಬಹುನಂದದಿ ಸ್ತುತಿಸಿ
ಸಮಸ್ತಜಗತ್ ಸತ್ಸೃಷ್ಟಿಯ ಗೈಸಿದೆ ೧

ಕ್ಷೀರಾಂಬುಧಿಯಿಂದ ತೋರಿ ನೀ ಸರ್ವಜನರ ಮುಂದೆ
ನಾರ ಅಜಿತ ಸರ್ವೋತ್ತಮ ಹರಿಗೆ ನೀ
ನಿರಂತರ ನಿಜಸತಿಯೆಂದು ಪ್ರಕಟಿಸಿದೆ ೨

ಘನ ಬಾಲಭಕ್ತನಿಗೆ ಒಲಿದ ವೃತಿತಿಜಾಸನ ಪಿತನು
ಹನುಮವಂದಿತ ಶ್ರೀ ಪ್ರಸನ್ನ ಶ್ರೀನಿವಾಸ
ನರಸಿಂಹನ ಸಹ ಭಕ್ತಜನರ ಪೊರೆವೆ ೩

ಶ್ರೀ ರಮಾದೇವಿ

೬೪

ಅಂಬೋನಿಧಿ ಹೃದಂಬರ ವಾಸಿನಿ
ಅಂಬಾ ಬಾ ಬಾ ಅಂಬುಧಿಜಾ ನಮೋ ಪ

ಅಂಬುಜನಾಭನ ನಿಜಸತಿ ಶ್ರೀ ಭೂ
ಅಂಭ್ರಣಿ ಚಾಮರ ವ್ಯಜನ ರಥಾಂಗ ಪೂ
ಕಂಬು ಮಾಲಾದಿ ಸುರೂಪದಿ ಹರಿಗೆ ನೀ
ಸಮ್ಮುದದಿಂದೆ ಸುಸೇವೆಯ ಮಾಳ್ಪಳೆ ಅ ಪ

ಮಂದರಗಿರಿಯಿಂದ ಸಿಂಧುವ ಮಥಿಸಲು
ನಿಂದು ಪ್ರಕಟವಾದೆ ಇಂದಿರಾದೇವಿಯೆ
ಕುಂದೇನಿಲ್ಲದ ಸುಂದರಗುಣನಿಧಿ
ಬಂಧಮೋಚಕ ಆನಂದಸುಪೂರ್ಣ ಗೋ
ವಿಂದ ಶ್ರೀ ಅಜಿತಭೂಮನನ್ನೆ ವರಿಸಿದೆ
ಮಂದಜಭವ ಶಿವ ವೃಂದಾರಕನುತ ೧

ಹರನ ಚಾಪವ ಶ್ರೀರಾಮನು ಮುರಿಯಲು
ವರ ವನಮಾಲೆಯ ಅರ್ಪಿಸಿ ನಿಂದೆ
ಸುರಮುನಿರಾಜರು ಪುರಜನರೆಲ್ಲರು
ಸುರಿಯಲು ಪೂಮಳೆ ಸಂಭ್ರಮದಿಂದಲಿ
ಸರಿಪರರಿಲ್ಲದ ಶ್ರೀ ರಘುರಾಮನು
ಸಿರಿಜನಕಜೆ ನಿನ್ನ ಕರವನು ಗ್ರಹಿಸಿದ ೨

ಭೈಷ್ಮಿ ರುಕ್ಮಿಣಿ ಸತ್ಯಭಾಮಾ ಶ್ರೀ ಭೂದೇವಿ
ವಾಮಚಿನ್ಮಯೆ ಶ್ರೀ ಸ್ವಾಮಿ ಕೃಷ್ಣನ ರಾಣಿ
ಹೇಮಗರ್ಭಾದಿ ಸಮಸ್ತ ಸುಜನರಿಗೆ
ರಮೆ ನಿನ್ನಯ ಸುಮಂದ ಕಟಾಕ್ಷವು

ಕಾಮಿತ ಫಲದವು ಮೋಕ್ಷಹೇತುವೆ ದೇವಿ
ನಮೋ ನಮೋ ಪ್ರಸನ್ನ ಶ್ರೀನಿವಾಸನ ಸತಿ ೩

ಶ್ರೀ ವಾಯುದೇವರು

೬೫

ಕಾಯೊ ಹನುಮರಾಯ ನಿನ್ನ
ತೋಯಜ ಪಾದಕೆ ಕಾಯ ಮನದಿ ನಮೋ ಪ

ಭಾರತೀಶ ಕೃಪಾಸಮುದ್ರನೆ
ವಾರಿಜಜಾಂಡದಿ ಸರ್ವಜೀವರೊಳಿದ್ದು
ಮೂರೇಳು ಸಾಸಿರ ನೂರಾರು ಜಪಗಳ
ಇರುಳು ಹಗಲು ನರಹರಿಗೆ ಅರ್ಪಿಪ ಸುರ ೧

ಮಾತರಿಶ್ವಪ್ರಖ್ಯಾತ ಮಹಿಮನೆ
ವೀತ ಕಲುಷನೆ ವಾತ ಪ್ರಭಂಜನ
ಸತತ ಎನ್ನನು ಅತಿ ಹಿತದಿ ನೀ ಸಲಹುವೆ
ಪ್ರತತ ಶ್ರೀ ನೃಹರಿಯ ಪ್ರಥಮಾಂಗನೆ ದಣಿ ೨

ಪಾತ್ರರೊಳಗೆ ಸತ್ಪಾತ್ರ ಮಾಡೆನ್ನ
ಸೂತ್ರಸುಖ ಸಿತಗಾತ್ರ ಪವಿತ್ರನೆ
ಮಾತ್ರಾಕರಣನಿಯಂತೃ ಮಹಂತನೆ
ಚಿತ್ರ ಪುರುಷ ಮಾಕಳತ್ರನ ತೋರಿಸೊ ೩

ದೇವಜನನುತ ಭಾವಿ ಬ್ರಹ್ಮನೆ
ಕಾವ ಕರುಣಿಯೆ ಪವಮಾನ ನಮೋ ನಮೋ
ಭಾವುಕರೊಡೆಯ ಶ್ರೀದೇವಿ ಶಾಂತಿಯ ಪತಿ
ದೇವವರೇಣ್ಯನನಿರುದ್ಧನ ತೋರಿಸೊ ೪

ಶುದ್ಧ ಕ್ಷರುಣಾಬ್ಧಿ ನಮೋ ನಮೋ
ಶುದ್ಧ ಭಕ್ತ್ಯಾದಿ ಸಂಪತ್ತು ಎನಗಿತ್ತು

ಉದ್ಧರಿಸೊ ಎನ್ನ ಶ್ರದ್ಧೇಶ ಮುಖ್ಯಪ್ರಾಣ
ಪದ್ಮೆ ಕೃತೀಶ ಪ್ರದ್ಯುಮ್ನಗೆ ಪ್ರಿಯತಮ ೫

ಜ್ಞಾನಬಲರೂಪ ಹನುಮ ನಮೋ ನಮೋ
ಜ್ಞಾನಸುಖಮಯ ಜಾನಕೀಶನ ದೂತ
ಇನನ ಸುತನಿಗೆ ವಿಭೀಷಣನಿಗೆ ರಾಮ
ತಾನೂ ಒಲಿದ ನೀನೊಲಿದ ಕಾರಣದಿ ೬

ಕುಂತಿಸುತ ಬಲವಂತ ಭೀಮ ಶ್ರೀ
ಕಾಂತ ಕೃಷ್ಣನೇಕಾಂತ ಭಕ್ತಾಗ್ರಣಿ
ಭ್ರಾಂತ ಕುಜನಕಲಿ ಅಂತಕ ಸುಜನರ
ಸಂತತ ಪೊರೆವ ಧನಂಜಯಗೊಲಿದನೆ ೭

ಪಂಚಭೇದ ಪ್ರಪಂಚ ಸತ್ಯವಿ
ರಿಂಚಿಪಿತನೆ ಸ್ವತಂತ್ರ ಸರ್ವೋತ್ತಮ
ಚಿಂತಿಸೆ ಭಕ್ತಿಯಿಂ ಮಿಂಚುಪೋಲ್ ತೋರಿ ನಿ
ರಂತರ ನಿಜಸುಖವೀವನೆಂದೆಯೊ ಮಧ್ವ ೮

ಶ್ರೀಶ ಚಿನ್ಮಯ ದೋಷದೂರನು
ವ್ಯಾಸ ಸುಖಮಯ ಪ್ರಸನ್ನ ಶ್ರೀನಿವಾಸ
ಭಾಸಿಪ ನಿನ್ನಯ ಹೃತ್ಸರಸಿಜದಲಿ
ದಾಶರಥಿಯ ಮುಖ್ಯ ದಾಸವರ್ಯನೆ ನಮೋ ೯

ಶ್ರೀಪಂಚಮುಖ ಹನುಮಂತ ದೇವರ ಸ್ತೋತ್ರ

೬೬

ಪಂಚಮುಖ ಹನುಮತೇ ಶರಣುಮಾಂಪಾಹಿ ಪ

ಜ್ಞಾನ ಬಲ ರೂಪನೇ ಹನುಮ ಮುಖ್ಯಪ್ರಾಣ
ಅನಿಮಿಷವೃಂದದಲಿ ಪ್ರವರನೇ ಶರಣು

ಅನುಪಮಾನಂದಮಯ ಅನಘ ಸೀತಾಪತಿಯ
ಅನುಪಮ ಮಹಾದಾಸ ಹನುಮ ಪಾಲಯಮಾಂ ೧

ನಿರುಪಮಮಹಾತೇಜ ಸರ್ವತೋಮುಖ ಉಗ್ರ
ವೀರ ಭೀಕರ ಮೃತ್ಯುಮಾರಕ ಮಹಾವಿಷ್ಣು
ನರಸಿಂಹ ಶುಭಕರಗೆ ಪ್ರಿಯತಮನೆ ಶರಣಾದೆ
ಕರುಣದಿಂದಲಿ ಎನ್ನ ತ್ರುಟಿ ಬಿಡದೆ ಸಲಹೋ ೨

ಬಂಗಾರಮಯ ಸುಧಾ ಪೂರ್ಣ ಕುಂಭವುಕರದಿ
ಜಂಗಮದ ಸ್ಥಾವರದ ವಿಷಹರ ಅಭಯದ
ಖಗರಾಜನಿಗೆ ವರನೆ ತದ್ರೂಪಮುಖಧರನೆ
ಖಗಪ ಗಮನ ಶ್ರೀಕರನ ಒಲಿಸೆನಗೆ ೩

ಶ್ಯಾಮ ಅರಿ ಶಂಖಧರ ಅಭಯ ಸದ್ವರಹಸ್ತ
ಭೂಮಿಧರ ಸರ್ವವಾಂಛಿತ ಸಿದ್ಧಿದಾತ
ಭೂಮ ನಿರ್ಮಲ ಕೋಲ ರೂಪ ಸರ್ವೋತ್ತಮನು
ಮನ್ಮನದಿ ಪೊಳೆವಂತೆ ನೀದಯ ಮಾಡೋ ೪

ಜ್ಞಾನ ವಿದ್ಯಾಕಾಂತಿ ಪ್ರತಿ ವಾದಿಜಯದಾತ
ಮನಬುದ್ಧಿದೇಹ ದಾರುಢ್ಯ ಸ್ಥೈರ್ಯ
ಘನ ಭಕ್ತಿ ಮುಕ್ತಿ ಸಾಧನ ವೀವ ಹಯಶೀರ್ಷ
ಪ್ರಸನ್ನ ಶ್ರೀನಿವಾಸನ ಒಲಿಸೆನಗೆ ಗುರುತಮನೇ ೫

॥ ಶ್ರೀ ಭಾರತೀರಮಣ ಮುಖ್ಯ ಪ್ರಾಣಾಂತರ್ಗತ ಕೃಷ್ಣಾರ್ಪಣಮಸ್ತು ॥

ಶ್ರೀ ಸೌಭಾಗ್ಯ ಪ್ರದ ಹನುಮಂತ

(ಅಣು ಸುಂದರ ಕಾಂಡ)

೬೭

ಶರಣು ಪಾಲಿಸೋ ಹನುಮ ।
ಕರುಣಾಳು ಅಂಜನಾಸೂನು ನಿನ್ನ ಮಹಿಮೆ
ವರ್ಣಿಸಲು ನಾಬಲ್ಲೆನೆ ಹೇ ವಾಯು ಪುತ್ರನೇ ಅಸಮ
ಬಲಜ್ಞಾನ ರೂಪನೆ ನಿನಗೆ ಇಷ್ಟ ಶ್ರೀರಾಮ
ಜೀವರಲಿ ನೀ ಉತ್ತಮ ।
ಶರಣು ಫಲ್ಗುಣ ಸಖ ಪಿಂಗಾಕ್ಷನೇ
ಶರಧಿ ದಾಟಿದಿ ಅಮಿತ ವಿಕ್ರಮ
ವಾರ್ತೆ ಸೀತೆಗೆ ಪೇಳಿ ದಶಮುಖ
ಸರ್ವತರದಿ ಸೌಮಿತ್ರಿ ಪ್ರಾಣ ಪ್ರ –
ದಾತ ಹರಿ ವರ ಶರಣು ಶರಣು ಮಹಾತ್ಮ ಸಹೃದನೇ
ಶರಣು ಪಾಲಿಸೋ ಹನುಮ ಪ

ಪೂರ್ಣಪ್ರಜ್ಞ ನೀನೆಂದು ಬಹು ಹರುಷ ತೋರಿದ ।
ರಾಘವನ ಕರೆತಂದು ರವಿಜನಿಗೆ ಸಖ್ಯ । ಮಾಡಿಸಿ ನೀ ಸಿಂಧು ।
ದಾಟುತ್ತ ಮೈನಾಕನ್ನೇ । ಶ್ಲೇಷಿಸಿ ನಿಂದು
ವಿಶ್ರಾಂತಿ ಕೊಳ್ಳದೆ ಮುಂದು ।
ಹಾರಿ ಸುರ ಸೆಯೊಳ್ ಲೀಲೆಯಿಂದಲಿ ಹೊಕ್ಕು ಹೊರಟು –
ಸುರರು ಪೂಮಳೆ
ಕರಿಯೇ ಸಿಂಹಿಕಾ ಉದರ ಸೀಳಿ ದ್ವಾರ ಪಾಲಕೆಯನ್ನ ಜಯಿಸಿ
ಪುರಿ ಪ್ರವೇಶವ ಮಾಡಿ ಸೀತಾಕೃತಿಯ ಕಂಡುಂಗುರುವ ಕೊಟ್ಟು
ಕ್ರೂರ ರಾಕ್ಷಸ ಅಕ್ಷಾದಿಗಳ ಕೊಂದು ಲಂಕಾಪುರಿಯ ಸುಟ್ಟು
ಭರದಿ ತಿರುಗಿ ಬಂದು ರಾಘವನಂಘ್ರಿಯಲಿ ಸನ್ನಮಿಸಿ ಸೀತೆಯ
ಚೂಡಾರತ್ನವನಿಟ್ಟು ರಾಮಾಲಿಂಗನ ನೀ
ಕೊಂಡಿಯೋ ಸೌಭಾಗ್ಯ ನಿಧಿಯೇ
ಶರಣು ಪಾಲಿಸೋ ಹನುಮ ೧

ಜಯತು ಶರಣು ಶ್ರೀರಾಮ । ಶರಣೆಂದ
ವಿಭೀಷಣನನ್ನ । ಅತಿ ಪ್ರೇಮ
ದಿಂದ ನೀ ಸ್ವೀಕರ್ಯನೆನಲು ಶ್ರೀರಾಮ ।
ಬಂದು ಅಭಯವ ನಿತ್ತ ಪೂರ್ಣಕಾಯ ।
ಅಮಿತ ಸುಗುಣ ಸುಧಾಮ।
ಮಾರ್ಜಗಾರಿ ಸಸೈನ್ಯ ರಾವಣ ನನ್ನ ಜಹಿಯಲು । ಸೇತು ಕಟ್ಟಿಸಿ ।
ಸುಜನ ರಕ್ಷಕ ಉರುಪರಾಕ್ರಮ ಅಜಿತರಾಮನು ಪೋಗೆ ಲಂಕೆಗೆ ।
ಜಾಂಬವಾನ್ ಸುಗ್ರೀವ ಸಹ ನೀ ಜಾನಕೀಶಗೆ ಸೇವೆ ಸಲ್ಲಿಸಿ ।
ಸಂಜೀವಿನಿಗಳ ತಂದು ರಾಮಾನುಜಗೆ ಪ್ರಾಣವನಿತ್ತು ರಾವಣ
ಭಂಜನವ ರಘುರಾಮ ಮಾಡಿ ಅಯೋಧ್ಯೆ
ಬರುವುದು ಪೇಳಿ ಭರತಗೆ ।
ನಿಜ ಸಂತೋಷದಿ ಸೀತಾರಾಮಗೆ ರಾಜ್ಯ ಪಟ್ಟಾಭಿಷೇಕ ಗೈಸಿದಿ –
ಶುಭ ಸುಚರಿತನೆ ಶರಣು ಪಾಲಿಸೋ ಹನುಮ ೨

ರಾಮಭದ್ರನು ನಿನ್ನ । ಅನುಪಮೋತ್ತಮ ಸೇವೆ ಮೆಚ್ಚಿ ಏನನ್ನ ।
ನೀನಗೀವುದು ನಿನ್ನ ಸೇವೆ ಸಮ ಬಹುಮಾನ ।
ಮೋಕ್ಷ ಸಾಲದು ಪೇಳು ಬೇಕಾದ್ದನ್ನ । ಎನಲು ನೀ ರಾಮನ್ನ ।
ನಮಿಸಿ ಪ್ರೇಮದಿ ರಾಮಚಂದ್ರನೆ ನಿನಗೆ ಇಷ್ಟ ಸರ್ವಜೀವರು
ರಾಮನಲ್ಲಿ ಮಾಳ್ಪ ಭಕ್ತಿಗೆ ಅಧಿಕ ನಿತ್ಯ ಪ್ರವೃದ್ಧವಾದ
ಪರಮ ಭಕ್ತಿವೊಂದನ್ನೇ ಈವುದು ಎಂದು ನೀ ಕೇಳೆ ವಿನಯದಿ
ಪ್ರೇಮದಿಂದ ತಥಾಸ್ತು ಎನ್ನುತ ಬ್ರಹ್ಮಪದ ಸಹಭೋಗ ಸಾಂಪ್ರತ
ಸಮಸ್ತವಾದ ಸೌಭಾಗ್ಯ ಸಮೃದ್ಧಿಯ ಇತ್ತು ಒಲಿದನು ಅಜನಪಿತ ಶ್ರೀ
ರಮೆಯ ಅರಸ ಪ್ರಸನ್ನ ಶ್ರೀನಿವಾಸ ಭೂಮ ಏಕಾತ್ಮ ರಾಮ
ಪ್ರಮೋದಿ ವಿಭುವು _ ಶರಣು ಪಾಲಿಸೋ ಹನುಮ ೩

ಶ್ರೀ ನಾಮಕಲ್ ಹನುಮಂತ

೬೮

ಹನುಮಂತನ ಪಾದ ವನಜಕೆ ಶರಣು ಪ

ಹನುಮಂತನ ಪಾದ ವನಜಕ್ಕೆ ಎರಗಲು
ಅನಿಷ್ಟಗಳಳಿದು ಇಷ್ಟಾರ್ಥಗಳೀವ ಅ ಪ

ಇನಸುತಗೊಲಿದನು ಹನುಮ ಆದುದರಿಂದ
ಇನಕುಲ ತಿಲಕನು ತಾನೂ ಪಾಲಿಸಿದ ೧

ಅನಿಮಿಷರಲಿ ಇವ ಪ್ರಥಮನಾಗಿಹ – ಭಾವಿ
ವನರುಹಾಸನ ಜಗತ್ ಪ್ರಾಣ ಜೀವೋತ್ತಮ ೨
ನಾಮಗಿರೀಶ ಶ್ರೀ ಪ್ರಸನ್ನ ಶ್ರೀನಿವಾಸನ್ನ
ನಮಗೆಲ್ಲ ಒಲಿಸಲು ನಾಮಶಿಲದಿ ನಿಂತ ೩

ಪ್ರಸನ್ನ ರಾಮಾಯಣ ಸುಂದರಕಾಂಡ

೬೯

ಜಯ ಜಯ ಜಯ ರಾಮಚಂದ್ರ
ಜಯ ರಾಮಭದ್ರ ಸರ್ವೇಶ
ಜಯ ಜಯ ಜಯ ರಾಮ ಸ್ವರತ ಆಹ
ಜಯ ಸೀತಾರಮಣ ನೀ ಭಯಬಂಧ ಮೋಚಕ
ಜಲ ಸಂಭವಮುಖ ಸುರಸೇವ್ಯ ನಮೋ ನಮೋ ಪ

ಶಾಶ್ವತ ಸುಗುಣಾಬ್ಧಿ ರಾಮ
ಸವೇಶ್ವರನೆ ಬಲವೀರ್ಯ
ಸಂಪೂರ್ಣಾರ್ಣವ ನಿನ್ನ ನಮಿಸಿ ಆಹ
ಶೀಘ್ರ ಆ ಗಿರಿಯೆತ್ತಿ ಹನುಮ ಹಾರಲು ಆಗ
ಸಾಗರ ಸರ್ವವು ಕಲಕಿ ಓಡಿತು ಕೂಡ ೧

ಹಿಂದೆ ಪರ್ವತಗಳ ಪಕ್ಷ
ಹನನ ಕಾಲದಿ ವಾಯು ತನ್ನ
ಹಿತದಿ ರಕ್ಷಿಸಿದನು ಎಂದು ಆಹ
ಹಿಮಗಿರಿಸುತ ಮೈನಾಕನು ಮೇಲೆ ಬಂದಾಗ
ಹನುಮಗೆ ನಮಿಸಿ ವಿಶ್ರಮಿಸಿಕೊಳ್ಳೆಂದ ೨

ಶ್ರಮರಹಿತನು ಎಂದೂ ಹನುಮ
ಶ್ರಮ ನಿವಾರಣ ಅನಪೇಕ್ಷ
ಆಶ್ಲೇಷಿಸಿ ನಗವರನ ಆಹ
ನಿಸ್ಸೀಮ ಪೌರುಷ ಬಲಯುತ ಹನುಮನು
ನಿಲ್ಲದೆ ಮುಂದೆ ತಾ ಸುರಸೆಯೊಳ್ ಹೊಕ್ ಹೊರಟ ೩

ಪವನಜನ ನಿಜಬಲವ
ಪರೀಕ್ಷಿಸೆ ಸುರಸೆಯ ಸುರರು
ಪ್ರೇರಿಸಿ ವರವನ್ನು ಕೊಡಲು ಆಹ
ಫಣಿಗಳ ತಾಯಿ ಅವಳು ಬಾಯಿ ತೆರೆಯಲು
ಪೊಕ್ಕು ಲೀಲೆಯಿಂ ಹನುಮ ಹೊರಹೊರಟ ೪

ಸುರರು ಆನಂದದಿ ಆಗ
ಸ್ತುತಿಸಿ ಹನುಮನ ಕೊಂಡಾಡಿ
ಸುರಿಯಲು ಪುಷ್ಪದ ಮಳೆಯ ಆಹ
ಶೀಘ್ರ ಪವನಜನು ಮುಂದೆ ತಾ ಹೋಗುತ್ತ
ಸಿಂಹಿಕಾ ರಾಕ್ಷಸಿ ಛಾಯಾಗ್ರಹವ ಕಂಡ ೫

ಸರಸಿಜಾಸನ ವರಬಲದಿ
ಸಿಂಹಿಕಾ ಲಂಕಾ ಪೋಗುವರ
ಸೆಳೆದು ತಾ ನಿಗ್ರಹಿಸುವಳು ಆಹ
ಸೆಳೆಯೆ ಆ ರಾಕ್ಷಸಿ ಹನುಮನ ಛಾಯೆಯ
ಸೀಳಿದ ಹನುಮ ಅವಳ ಶರೀರದಿ ಪೊಕ್ಕು ೬

ತನ್ನ ನಿಸ್ಸೀಮ ಬಲವನು
ತೋರಿಸಿ ಈ ರೀತಿ ಹನುಮ

ಧುಮುಕಿದ ಲಂಬ ಪರ್ವತದಿ ಆಹ
ತೋರ್ಪುದು ಲಂಕಾ ಪ್ರಕಾರದೊಲ್ ಈ ಗಿರಿ
ತನ್ನ ರೂಪವ ಸಣ್ಣ ಹನುಮ ಮಾಡಿದನಾಗ ೭

ಆಗಿ ಬಿಡಾಲದೊಲ್ ಸಣ್ಣ
ಅಸಿತ ಕಾಲದಿ ಪೋಗೆ ಪುರಿಗೆ
ಅಲ್ಲಿದ್ದ ಲಂಕಿಣಿ ತಡೆಯೆ ಆಹ
ಅವಳ ಹನುಮ ಮುಷ್ಟಿಯಿಂದ ಕುಟ್ಟಿ ಜಯಿಸಿ
ಅನುಮತಿಯಿಂದಲ್ಲೆ ಲಂಕೆಯೊಳ್ ಪೋದ ೮

ಶ್ರೀಘ್ರ ಅಶೋಕ ವನದಲಿ
ಶಿಂಶುಪಾವೃಕ್ಷ ಮೂಲದಲಿ
ಸೀತಾ ಅಕೃತಿಯನು ಕಂಡ ಆಹ
ಸೀತೆಗೆ ಏನೇನು ಭೂಷಣ ಉಂಟೋ
ಸೀತಾ ಆಕೃತಿಗೂ ಸಹ ಅದರವೊಲಿತ್ತು ೯

ಅವನಿಯೋಳು ನಿನ್ನ ವಿಡಂಬ
ಅರಿತು ಅನುಸರಿಸಿ ಹನುಮ
ಅದರಂತೆ ಪರಿಪಂಥಾವಳಿಗೆ ಆಹ
ಅವಶ್ಯ ಮಾತುಗಳಾಡಿ ಅಂಗುಲೀಯಕವೀಯೆ
ಆಕೆ ಚೂಡಾಮಣಿ ನಿನಗೆಂದು ಕೊಟ್ಟಳು ೧೦

ಅರಿಯರು ರಾಕ್ಷಸರಿದನು
ಅಮರರು ಕಲಿಮುಖರೆಲ್ಲ
ಅವಲೋಕಿಸಿದರು ಈ ಕಾರ್ಯ ಆಹ
ಅಮರರು ಲೋಕವಿಡಂಬವಿದೆಂದರಿಯೆ
ಅಧಮ ಕಲ್ಯಾದಿಗಳ್ ಮೋಹಿತರಾದರು ೧೧

ಕೃತಕೃತ್ಯವಾಗಿ ತಾ ಹನುಮ
ಕೋವಿದೋತ್ತಮ ಬಲವಂತ
ಕಾಣಿಸಿಕೊಳ್ಳುವ ಮನದಿ

ಕಿಂಚಿತ್ತೂ ಭಯವೇನೂ ಇಲ್ಲದೆ ವನವನು
ಕಡಿದು ಧ್ವಂಸವ ಗೈದ ಆ ಶಿಂಶುಪವ ಬಿಟ್ಟು ೧೨

ಕುಜನ ರಾಕ್ಷಸರನು ಕೊಲ್ಲೆ
ಕೂಗಿ ಆರ್ಭಟಮಾಡೆ ಹನುಮ
ಕೇಳಿ ಚೇಷ್ಟೆಗಳ ರಾವಣನು ಆಹ
ಕಪ್ಪು ಕಂಠನ ವರ ಆಯುಧಯುತರು
ಕೋಟಿ ಎಂಬತ್ತರ ಮೇಲ್ ಭೃತ್ಯರ ಕಳುಹಿದ ೧೩

ಆರ್ಭಟದಿಂದ ಘೋಷಿಸುತ
ಅವರು ಆವರಿಸಿ ಹನುಮನ
ಆಯುಧಗಳ ಪ್ರಯೋಗಿಸಲು ಆಹ
ಅತಿ ಬಲಯುತ ಪವನಜ ಮುಷ್ಟಿಪ್ರಹರದಿ
ಆ ವೀರರೆಲ್ಲರ ಹಿಟ್ಟು ಮಾಡಿದ ಬೇಗ ೧೪

ಕಡುಕೋಪದಿಂದ ರಾವಣನು
ಕಳುಹಿದನು ಏಳು ಮಂತ್ರಿ
ಕುವರರ ವರ ಬಲಯುತರ ಆಹ
ಖಳರು ಈ ಏಳ್ವರ ಮೆಟ್ಟಿ ಪಿಷ್ಟವ ಮಾಡೆ
ಕುಮತಿ ರಾಕ್ಷಸ ಸೈನ್ಯ ತೃತೀಯ ಭಾಗವು ಹೋಯ್ತು ೧೫

ಅನುಪಮ ಬಲಕಾರ್ಯಕೇಳಿ
ಅಧಮ ರಾವಣ ತನ್ನ ಸುತನ
ಅಕ್ಷನ ಕಳುಹಲು ಹನುಮ ಆಹ
ಅಕ್ಷನ ಚಕ್ರಾಕಾರದಿ ಎತ್ತಿ ಸುತ್ತಾಡಿ
ಅವನ ಅಪ್ಪಳಿಸಿ ನೆಲದಿ ಚೂರ್ಣ ಮಾಡಿದ ೧೬

ಅತಿ ದುಃಖದಿಂದ ರಾವಣನು
ಅಕ್ಷನಗ್ರಜ ಇಂದ್ರಜಿತನ
ಅಜಿತ ಹನುಮನಲಿ ಕಳುಹೆ ಆಹ

ಇಂದ್ರಜಿತನ ಅಸ್ತ್ರಗಳ ವ್ಯರ್ಥಮಾಡಿ ತಾ
ಒಡಂಪಟ್ಟ ಸ್ವೇಚ್ಛದಿ ಹನುಮ ಬ್ರಹ್ಮಾಸ್ತ್ರಕೆ ೧೭

ರಾವಣನಲಿ ಕೊಂಡು ಪೋಗೆ
ರಾವಣ ಪ್ರಶ್ನೆಯ ಮಾಡೆ
ರಾಮಗೆ ನಮಿಸಿ ಹನುಮನು ಆಹ
ರಘುವರ ರಾಮ ದುರಂತ ವಿಕ್ರಮ ಹರಿ
ರಾಕ್ಷಸಾಂತಕ ದೂತ ಮಾರುತಿ ತಾನೆಂದ ೧೮

ರಘುವರ ಪ್ರಿಯೆಯನು ಬೇಗ
ರಾಮಗರ್ಪಿಸಲೊಲ್ಲೆ ಎನ್ನೆ
ಹನುಮ ಪ್ರಕೋಪದಿ ಅವನ ಆಹ
ರಾಜ್ಯ ಮಿತ್ರ ಬಂಧು ಸರ್ವನಾಶ
ರಾಘವ ಮಾಡುವನೆಂದು ಪೇಳಿದನು ೧೯

ಅಜ ಶಿವ ಮೊದಲಾದ ಸರ್ವ
ಅಮರೇಶ್ವರರು ತಾವು ತಡೆಯ
ಅಶಕ್ತರು ರಾಮಬಾಣವನು ಆಹ
ಅಂಥ ಬಾಣವ ಅಲ್ಪಶಕ್ತ ರಾವಣ ತಾಳೆ
ಅಸಮರ್ಥನೆಂದ ಪ್ರಭಂಜನ ಸುತನು ೨೦

ಪ್ರಭಂಜನ ಸುತ ಮಾತು ಕೇಳಿ
ಪ್ರಕುಪಿತನಾಗಿ ರಾವಣನು
ಪ್ರಯತ್ನಿಸೆ ಹನುಮನ ಕೊಲ್ಲೆ ಆಹ
ಪ್ರಕೃಷ್ಟ ಮನದಿ ವಿಭೀಷಣ ಬುದ್ಧಿ ಪೇಳಲು
ಪುಚ್ಛಕ್ಕೆ ಬೆಂಕಿ ಹಚ್ಚೆಂದ ರಾಕ್ಷಸರಾಜ ೨೧

ಅತಿಭಾರ ವಸ್ತ್ರ ಕಟ್ಟುಗಳಿಂ
ಅಧಮರು ಸುತ್ತಿ ಬಾಲವನು
ಅಗ್ನಿಯ ತೀವ್ರದಿ ಹಚ್ಚೆ ಆಹ
ಅಗ್ನಿಯ ಪರಸಖ ವಾಯು ಆದುದರಿಂದ
ಅಂಜನಾಸುತ ನಿರಾಮಯನ ಸುಡಲೇ ಇಲ್ಲ ೨೨

ಅಧಮ ರಾಕ್ಷಸರ ಚೇಷ್ಟೆಗಳ
ಅಸಮ ಬಲಾಢ್ಯನು ಹನುಮ
ಅನುಭವಿಸಿ ಕುತೂಹಲದಿ ಆಹ
ಅಲ್ಲಲ್ಲಿ ಹಾರಿ ಆ ಲಂಕಾಪುರಿಯ ಸುಟ್ಟು
ಅತಿ ಮುದದಲಿ ಗರ್ಜಿಸಿದ ರಾಮದೂತ ೨೩

ಅಧಮ ಸಪುತ್ರ ರಾವಣನ
ಅಲ್ಪ ತೃಣೋಪಮ ಮಾಡಿ
ಅವರೆದುರಿಗೆ ಪುರಿ ಸುಟ್ಟು ಆಹ
ಅಬ್ಧಿಯ ದಾಟೆ ವಾನರರು ಪ್ರಪೂಜಿಸೆ
ಉತ್ತಮ ಮಧುವುಂಡು ಪ್ರಭುವೇ ನಿನ್ನಲಿ ಬಂದ ೨೪

ಸಮಸ್ತ ವಾನರ ವರರೊಡನೆ
ಸಮರ್ಥ ಹನುಮ ಧೀರ ಬಂದು
ಶುಭಸೂಚಕ ಚೂಡಾಮಣಿಯ ಆಹ
ಶ್ರೀಶ ನಿನ್ನಯ ಪಾದದ್ವಂದ್ವದಿ ಇಟ್ಟು ತಾ
ಸನ್ನಮಿಸಿದ ಭಕ್ತಿಭರಿತ ಸರ್ವಾಂಗದಿ ೨೫

ಭಕ್ತಿ ಸವೈರಾಗ್ಯ ಜ್ಞಾನ
ಪ್ರಜ್ಞಾ ಮೇಧಾ ಧೃತಿ ಸ್ಥಿತಿಯು
ಪ್ರಾಣ ಯೋಗ ಬಲ ಇಂಥಾ ಆಹ
ಪ್ರಕೃಷ್ಟ ಸುಗುಣಗಳು ತುಂಬಿ ಇರುವುವು ಈ
ಪ್ರಭಂಜನ ವಾಯು ಹನುಮನಲಿ ಸರ್ವದಾ ೨೬

ಸರ್ವೇಶ ರಾಮ ಅಗಾಧ
ಸದ್ಗುಣಾರ್ಣವ ನೀ ಹನುಮನ
ಸಂಪೂರ್ಣ ಭಕ್ತಿಗೆ ಮೆಚ್ಚಿ ಆಹ
ಸಮ ಯಾವುದೂ ಇಲ್ಲದೆ ನಿನ್ನನ್ನೇ ನೀ ಕೊಟ್ಟೆ
ಸುಪ್ರಮೋದದಿ ಹನುಮನ ಆಲಿಂಗನ ಮಾಡಿ ೨೭

ನೀ ನಿಂತು ನುಡಿಸಿದೀ ನುಡಿಯು
ನಿನ್ನಡಿಗಳಿಗೆ ಅರ್ಪಣೆಯು

ನಮ್ಮ ಮಾರುತಿ ಮನೋಗತನೆ ಆಹ
ನೀರಜಾಸನ ತಾತ ಪ್ರಸನ್ನ ಶ್ರೀನಿವಾಸ
ನಿನಗೆ ಪ್ರೀತಿಯಾಗಲೊ ಸುಹೃದ ಸಂತೃಪ್ತ ೨೮

ಶ್ರೀ ಗ್ರಂಥಮಾಲಿಕ ಮಧ್ವಸ್ತೋತ್ರ

೭೦

ಜಯ ಜಯ ಜಯ ಮಧ್ವ ಜಯ ಜಯ
ಜಯ ಮಧ್ವ ಮುನಿರಾಯ ನಿನ್ನ ಚಾರು
ತೋಯಜಾಂಘ್ರಿಯಲಿ ನಾ ಶರಣು ಅಹ
ಮಾಯೇಶನಿಗೆ ಪ್ರಿಯ ಮುಖ್ಯಪ್ರಾಣನೇ ಎನ್ನ
ಕಾಯ ವಾಙ್ಮನ ಕರ್ಮ ದೋಷ ಮನ್ನಿಸಿ ಕಾಯೋ ಪ

ಭಾವಿ ವಿರಂಚಿ ಮಹೋಜ ಜಯಾ –
ದೇವಿ ಸಂಕರ್ಷಣ ತನೂಜ ಸೂತ್ರ
ಸಂವಿದ್ ಬಲಾದಿ ಸುಭ್ರಾಜ ಶ್ರಧ್ಧಾ –
ದೇವಿ ಹೃದಬ್ಜವಿರಾಜ ಅಹ
ಇನಶಶಿ ಋಷಿಕುಲ ತಿಲಕ ಶ್ರೀವರನಂಘ್ರಿ
ವನರುಹ ನಿಷ್ಠ ಹನುಮಭೀಮ ಮಧ್ವ ೧

ಜಯತು ಶ್ರೀಹರಿ ರಾಮಚಂದ್ರ ಭಕ್ತ
ಜಯದ ಮೋದದ ಅರ್ತಿಹಂತ ಕೃಷ್ಣ
ಜಯತು ಕಾರುಣ್ಯ ಸಮುದ್ರ ಭಕ್ತ
ಜಯದ ಕ್ಷೇಮದ ಜ್ಞಾನ ಸುಖದ ಅಹ
ರಾಮವಚನ ಕಾರ್ಯರತ ಹನುಮಗೆ ನಮೋ
ನಮೋ ಕುರುಕುಲ ಹರ ಭೀಮ ಕೃಷ್ಣೇಷ್ಟಗೆ ೨

ಜಯತು ಶ್ರೀಹರಿ ವೇದವ್ಯಾಸ ಭಕ್ತ
ಜಯದ ಹೃತ್ತಿಮಿರ ನಿರಾಸ ಮಾಳ್ಪ
ಸೂರ್ಯ ಸ್ವಕಾಂತಿ ಪ್ರಕಾಶ ಮಧ್ವ –

ರಾಯಗೆ ನಿಜಗುರು ಶ್ರೀಶ ಅಹ
ವೈದಿಕಶಾಸ್ತ್ರದಿಂದಲೇ ವೇದ್ಯ ಶ್ರೀಶನ
ಹಿತದಿ ನಮಗೆ ತೋರ್ಪಾನಂದ ಮುನಿಗೆ ನಮೋ ೩

ಅಸುರರು ಪುಟ್ಟಿ ಭೂಮಿಯಲಿ ಸಾಧು
ಭೂಸುರರೆಂದು ತೋರುತಲಿ ವೇದ
ಶಾಸ್ತ್ರಕ್ಕೆ ಅಪಾರ್ಥ ಪೇಳಿ ಮೋಹ
ವಶವಾಗೆ ಸುಜನರಲ್ಲಿ ಅಹ
ಶ್ರೀಶನಾಜ್ಞೆ ಯತಾಳಿ ಮಧ್ವಾಭಿದಾನದಿ
ಮೋಸ ದುರ್ಮತ ಧ್ವಾಂತ ಭಾಸ್ಕರನುದಿಸಿದಿ ೪

ಮಧ್ಯಗೇಹರ ಮನೆಯಲ್ಲಿ ಮುಖ್ಯ
ವಾಯುವೇ ಶಿಶುರೂಪ ತಾಳಿ ಬಲ
ವಯಸ್ಸಲ್ಲೇ ಯತಿವರ್ಯರಲ್ಲಿ ಕೊಂಡಿ
ಸಂನ್ಯಾಸ ಸುಪ್ರಮೋದದಲಿ ಅಹ
ಮಧ್ಯಗೇಹರ ಪುರುಷೋತ್ತಮತೀರ್ಥರ
ಭಾಗ್ಯಕ್ಕೆ ಎಣೆವುಂಟೇ ಮೂಲೋಕದೊಳಗೆ ೫

ಪುರುಷೋತ್ತಮಾಚ್ಯುತಪ್ರೇಕ್ಷ ತೀರ್ಥ
ಗುರುಗಳ ಸೇವಿಸಿ ಮೋಕ್ಷ ಮೋದ
ಉರುಗುಣಸಿಂಧು ನಿರ್ದೋಷನಾದ
ಶಿರಿವರನು ಕಮಲಾಕ್ಷ ಅಹ
ಭಾರಿ ಪ್ರಸಾದವ ದಯದಿ ಬೀರಲ್ಲೇವೆ
ದೊರೆಯುವದೆಂದು ಬೋಧಿಸಿದೆಯೋ ಮಧ್ವ ೬

ಶ್ರೀಶ ವೇದವ್ಯಾಸನಲ್ಲಿ ಗೀತಾ
ಭಾಷ್ಯ ಸಮರ್ಪಿಸಿ ಅಲ್ಲಿಲ್ಲಿ ಉಪ –
ದೇಶಕೊಂಡು ಮತ್ತಿಲ್ಲಿ ಬಂದು
ವ್ಯಾಸನಭಿಪ್ರಾಯದಲ್ಲಿ ಅಹ
ಸರಿಯಾದ ತತ್ವಬೋಧಕ ಗ್ರಂಥಗಳ ಮಾಡಿ

ಬೀರಿದ ಅಧಿಕಾರಿಗಳಿಗೆ ನೀ ದಯದಿ
ಮೂಲಗ್ರಂಥಗಳು ಮೂವತ್ತು ಏಳು ೭

ಆಳುಕ ಪ್ರಿಯತಮವಾದ್ದು ಭಕ್ತಿ
ಶೀಲತ್ವ ಸುಖಜ್ಞಾನವಿತ್ತು ಪರ –
ದಲ್ಲಿ ಕೈವಲ್ಯ ತೋರುವುದು ಅಹ
ಪುನರಪಿ ಬದರಿಗೆ ಪೋಗಿ ಶ್ರೀಶನ ಕಂಡು
ಧನ್ಯ ಮನದಿ ಬಂದು ಶಾಸ್ತ್ರ ಬೋಧಿಸಿದಿ ೮

ಗೀತಾಭಾಷ್ಯವು ಸೂತ್ರ ಭಾಷ್ಯಗೀತಾ
ತಾತ್ಪರ್ಯ ಸೂತ್ರಾಣುಭಾಷ್ಯ ವಿಷ್ಣು
ತತ್ವನಿರ್ಣಯಾ ಋಗ್ಭಾಷ್ಯ ತತ್ತ್ವೋ –
ದ್ಯೋತ ಭಾಗವತ ತಾತ್ಪರ್ಯ ಅಹ
ನಿರ್ಣಯ ಶ್ರೀಮಹಾಭಾರತ ತಾತ್ಪರ್ಯ
ನಿರ್ಣಯ ಯಮಕ ಭಾರತ ಕರ್ಮ ನಿರ್ಣಯ ೯

ಸನ್ನ್ಯಾಯ ವಿವರಣ ತಂತ್ರಸಾರ
ಅನುವ್ಯಾಖ್ಯಾನವು ಸದಾಚಾರ ಸ್ಮೃತಿ
ಅನುತ್ತಮ ದ್ವಾದಶಸ್ತೋತ್ರ ಯತಿ
ಪ್ರಣವ ಕಲ್ಪದಿ ಪ್ರಣವಸಾರ ಅಹ
ಉಪನಿಷದ್ಭಾಷ್ಯವು ಹತ್ತು ಉತ್ಕೃಷ್ಟವು
ಷಟ್ಪ್ರಶ್ನಕಾಠಕ ಬೃಹದಾರಣ್ಯಾಖ್ಯ ೧೦

ಮನನ ಮಾಡಲು ಐತರೇಯ ಪುನಃ
ಶ್ರವಣ ಮಾಡಲು ತೈತಿರೀಯ ಸಂ –
ಚಿಂತಿಸಲು ಈಶಾವಾಸ್ಯ ಬಹು
ಘನವಿದ್ಯಾಯುತವು ಛಾಂದೋಗ್ಯ ಅಹ
ಅರ್ಥವಣಮಾಂಡೂಕ್ಯ ತಲವ ಕಾರೋಕ್ತವು
ಸತತ ಸಂಸ್ಮರಣೀಯ ಜ್ಞಾನದಾಯಕವು ೧೧

ಕೃಷ್ಣಾಮೃತ ಮಹಾರ್ಣದಿ ಬಾಲ
ಕೃಷ್ಣ ಜಯಂತಿ ನಿರ್ಣಯದಿ ಭಕ್ತಿ
ಜ್ಞಾನ ಸಾಧನವ ಬೋಧಿಸಿ ನರ –
ಸಿಂಹನ ನಖಸ್ತುತಿ ಮುದದಿ ಅಹ
ಪಠಿಸೆ ಭದ್ರದ ಕಥಾಲಕ್ಷಣದಲಿ ವಾದ
ಮಾಡುವ ಬಗೆ ತೋರ್ದಿಯೈನ್ಯಹರಿಯ ನಮಿಸಿ ೧೨

ಮಾಯಾ ಅವಿದ್ಯಾ ಆವೃತವು ಬ್ರಹ್ಮ
ಅದೃಷ್ಟ ಜಗತೆಂಬ ಮತವ ತರಿದು
ಮಾಯಾವಾದ ಖಂಡನವ ಮಾಡಿ
ನ್ಯಾಯ ಪ್ರಮಾಣ ಲಕ್ಷಣವ ಅಹ
ನುಡಿದು ಪ್ರಪಂಚ ಮಿಥ್ಯಾತ್ವಾನುಮಾನ ಖಂ –
ಡನವ ಉಪಾಧಿಖಂಡನ ಸಹಗೈದಿ ೧೩

ತಾರತಮ್ಯ ಪಂಚಭೇದ ಸತ್ಯ
ಹರಿಯೇ ಸರ್ವೋತ್ತಮ ಸುಹೃದ ಶಿರಿ
ವರನೇ ಸ್ವತಂತ್ರ ಪ್ರಮೋದ ಸ್ವಾಮಿ
ಸೃಷ್ಟಾ ಪಾತಾ ಅತ್ತಾತ್ರಾಹ ಅಹ
ತತ್ವ ವಿವೇಕವು ತತ್ವ ಸಂಖ್ಯಾನವು
ನಿತ್ಯ ಸುಪಠನೀಯ ಹರಿ ಸರ್ವೋತ್ಕೃಷ್ಟ ೧೪

ನೀನಿಂತು ನುಡಿಸಿದೀ ನುಡಿಯು ನಿನ್ನ
ಸನ್ನಿಧಾನದಿ ಸಮರ್ಪಣೆಯು ನಾನು
ಏನೂ ಓದದ ಮಂದಮತಿಯು ನೀನು
ಪೂರ್ಣಪ್ರಜ್ಞನು ಜೀವೋತ್ತಮನು ಅಹ
ಎನ್ನ ಕೊರತೆಗಳ ನೀಗಿಸಿ ಹೃಸ್ಥಶ್ರೀ
'ಪ್ರಸನ್ನ ಶ್ರೀನಿವಾಸ' ನ್ನೊ ಲಿಸೋ ಎನಗೆ ಜೀಯ ೧೫ ಪ

ಶ್ರೀ ಸೌಭಾಗ್ಯ ಸಪ್ತತ್ರಿಂಶತಿ

೭೧

ಶರಣು ವಿಧಿ ವಾಣೀಶ ಶರಣು ಧೃತಿ ಶ್ರದ್ದೇಶ ।
ಶರಣು ಋಜುವರ್ಯರಲಿ ಶರಣು ಶರಣಾದೆ ಪ

ಮೀನಕೂರ್ಮ ಕ್ರೋಡ ನರಸಿಂಹ ವಟುರೂಪ
ರೇಣುಕಾತ್ಮಜ ರಾಮ ಶ್ರೀ ಕೃಷ್ಣ ಜಿನಜ ॥
ವಿಷ್ಣು ಯಶಸ್ಸುತ ಅಜಿತ ಶ್ರೀಶನಿಗೆ ಪ್ರಿಯತಮ ।
ಅನುಪಮ ಜೀವೋತ್ತಮರ ಚರಣಕಾನಮಿಪೇ ೧

ಪುರುಷವಿಧಿ ಕಾಲವಿಧಿ ವಾಸುದೇವೋತ್ಪನ್ನ ।
ವಿರಿಂಚ ಮಹತ್ತತ್ವತನು ಅನಿರುದ್ಧ ಜಾತ ॥
ನಾರಾಯಣ ನಾಭಿ ಕಮಲಜ ಚತುರ್ಮುಖನು ।
ಸರಸ್ವತೀಪತಿ ರುದ್ರ ತಾತನಿಗೆ ನಮಿಪೆ ೨

ಈ ನಾಲ್ಕು ಬ್ರಹ್ಮನ ಅವತಾರದಲಿ ಶುಕ್ಲ ।
ಶೋಣಿತ ಸಂಬಂಧ ಇಲ್ಲವೇ ಇಲ್ಲ ॥
ಜ್ಞಾನಾದಿ ಐಶ್ವರ್ಯದಲಿ ಯಾರು ನಾಲ್ಮುಗಗೆ ।
ಎಣೆ ಇಲ್ಲ ಹದಿನಾಲ್ಕು ಲೋಕದಲಿ ಎಲ್ಲೂ ೩

ಭಯವು ಅಜ್ಞಾನವು ಸಂಶಯವು ಇವಗಿಲ್ಲ
ಸತ್ಯ ಲೋಕಾಧಿಪನ ಸುರರ ಅಧ್ಯಕ್ಷ ॥
ಹಯಮುಖ ತ್ರಿವೃತ್ತುರೀಯ ಹಂಸ ಇತರಾಸೂನು ।
ತೋಯಜಾಕ್ಷ ಕೇಶವನ ಪ್ರಥಮ ಪ್ರತಿಬಿಂಬ ೪

ಜಗಜ್ಜನ್ಮಾದ್ಯಷ್ಟಕ ಕರ್ತನ ನಿಯಮನದಿ ।
ಜಗವ ಪಡೆದಿಹ ಬ್ರಹ್ಮಸತ್ವವಿಗ್ರಹನು ॥
ಖಗಪ ಭುಜಗಪ ಶಿವಾದ್ಯನಂತ ಜೀವೋತ್ತಮನು ।
ಅಘರಹಿತ ತಾರಕ ಗುರು ಶತಾನಂದ ೫

ಅವನಿಯಲಿ ಅವತಾರ ಬ್ರಹ್ಮದೇವನಿಗಿಲ್ಲ ।
ಭಾವಿ ಬ್ರಹ್ಮನು ಮುಖ್ಯವಾಯುದೇವ ॥
ದೇವೀಜಯಾ ಸಂಕರುಷಣಾತ್ಮಜನು ಈ ।
ಭುವಿಯಲ್ಲಿ ತೋರಿಹನು ಹರಿಯ ಪ್ರಥಮಾಂಗ ೬

ಧೃತಿ ಪ್ರಭಂಜನ ವಾಯು ಸ್ಮರ ಭರತ ಗುರುವರನು ।
ಮಾತರಿಶ್ವನು ಸೂತ್ರ ಪವಮಾನ ಪ್ರಾಣ ॥
ಎದುರು ಸಮರಿಲ್ಲ ಈ ಬ್ರಹ್ಮ ಧಾಮನಿಗೆಲ್ಲೂ ।
ಸದಾ ನಮೋ ಭಾರತೀರಮಣ ಮಾಂಪಾಹಿ ೭

ರಥನಾಭಿಯಲಿ ಅರವೋಲ್ ಪ್ರಾಣನಲಿ ಸರ್ವವೂ ।
ಪ್ರತಿಷ್ಠಿತವೂ ಜೀವರ ದೇಹಕಾಧಾರ ॥
ತ್ರಾತಪೋಷಕ ಸರ್ವವಶಿ ಪ್ರಜ್ಞಾಶ್ರೀದನು ।
ತತ್ವಾದಿ ದೇವ ವರಿಷ್ಠ ಚೇಷ್ಟಕನು ೮

ಶ್ರೀಶ ಹಂಸಗೆ ಪ್ರಿಯ ಶ್ವಾಸ ಜಪ ಪ್ರವೃತ್ತಿಸುವ ।
ಬಿಸಜಜಾಂಡವ ಹೊತ್ತು ಕೊಂಡು ಇರುತಿಹನು ॥
ಅಸಮ ಸಾಮರ್ಥ್ಯದಿ ಸರ್ವ ಕ್ರಿಯೆ ಮಾಡಿಸುವ ।
ಶಾಸ್ತನಾಗಿಹ ಪಂಚ ಅವರ ಪ್ರಾಣರಿಗೆ ೯

ಬಲ ಜ್ಞಾನಾದಿಗಳಲ್ಲಿ ಹ್ರಾಸವಿಲ್ಲವು ಇವಗೆ ।
ಎಲ್ಲ ಅವತಾರಗಳು ಸಮವು ಅನ್ಯೂನ ॥
ಶುಕ್ಲ ಶೋಣಿತ ಸಂಬಂಧ ಇಲ್ಲವೇ ಇಲ್ಲ ।
ಇಳೆಯಲಿ ಜನಿಸಿಹ ಹನುಮ ಭೀಮ ಮಧ್ವ ೧೦

ವಾಯುದೇವನ ಒಲಿಸಿಕೊಳ್ಳದ ಜನರಿಗೆ ।
ಭಯ ಬಂಧ ನಿವೃತ್ತಿಯು ಸದ್ಗತಿಯು ಇಲ್ಲ ॥
ಮಾಯಾ ಜಯೇಶನ ಪರಮ ಪ್ರಸಾದವು ।
ವಾಯು ಒಲಿದರೆ ಉಂಟು ಅನ್ಯಥಾ ಇಲ್ಲ ೧೧

ಶ್ರೀರಾಮಚಂದ್ರನು ಒಲಿದ ಸುಗ್ರೀವಗೆ ।
ಮಾರುತಿಯ ಒಲಿಸಿಕೊಂಡವನವನೆಂದು ॥

ಮಾರುತಿಯ ಒಲಿಸಿಕೊಳ್ಳದ ವಾಲಿ ಬಿದ್ದನು ।
ಕರ್ಣನೂ ಹಾಗೇವೇ ಅರ್ಜುನನು ಗೆದ್ದ ೧೨

ರಾಮನಿಗೆ ಸನ್ನಮಿಸಿ ವನದಿ ದಾಟುತ ಹನುಮ ।
ಶ್ರಮರಹಿತನು ಸುರಸೆಯನು ಜಯಿಸೆ ಸುರರು ॥
ಪೂಮಳೆ ಕರೆಯಲು ಸಿಂಹಿಕೆಯನು ಸೀಳಿ ।
ಧುಮುಕಿದ ಲಂಕೆಯಲಿ ಲಂಕಿಣಿಯ ಬಡಿದ ೧೩

ರಾಮ ಪ್ರಿಯೆಗುಂಗುರವ ಕೊಟ್ಟು ಚೂಡಾರತ್ನ ।
ರಾಮಗೋಸ್ಕರ ಕೊಂಡು ವನವ ಕೆಡಹಿ ॥
ಶ್ರಮ ಇಲ್ಲದೆ ಅಕ್ಷಯಾದಿ ಅಧಮರ ಕೊಂದು ।
ರಾಮ ದೂತನು ಹನುಮ ಲಂಕೆಯ ಸುಟ್ಟ ೧೪

ಶ್ರೀರಾಮನಲಿ ಬಂದು ನಮಿಸಿ ಚೂಡಾಮಣಿಯ ।
ಚರಣದಿ ಇಡೆ ರಾಮ ಹನುಮನ ಕೊಂಡಾಡಿ ॥
ಸರಿಯಾದ ಬಹುಮಾನ ಯಾವುದು ಇಲ್ಲೆಂದು ।
ಶ್ರೀರಾಮ ತನ್ನನ್ನೇ ಇತ್ತಾಲಿಂಗನದಿ ೧೫

ಮೂಲ ರೂಪವನೆನೆದ ಲಕ್ಷ್ಮಣನ ಎತ್ತಲು ।
ಕೈಲಾಗದೆ ರಾವಣನು ಸೆಳೆಯೆ ಆಗ ॥
ಲೀಲೆಯಿಂದಲಿ ಎತ್ತಿ ರಾಮನಲಿ ತಂದನು ।
ಬಲವಂತ ಹನುಮ ಶೇಷಗುತ್ತಮತಮನು ೧೬

ಮೃತ ಸಂಜೀವಿನಿಯಾದಿ ಔಷಧಿ ಶೈಲವನು ।
ತಂದು ಸೌಮಿತ್ರಿ ಕಪಿಗಳಿಗೆ ಅಸು ಇತ್ತ ॥
ಮುಂದಾಗಿ ಪೋಗಿ ಶ್ರೀರಾಮ ಬರುವುದು ಪೇಳಿ ।
ಕಾಯ್ದ ರಾಮಾನುಜನ ಅಗ್ನಿ ಮುಖದಿಂದ ೧೭

ಇತರರು ಮಾಡಲು ಅಶಕ್ಯ ಸೇವೆ ಹನುಮ ।
ಗೈದಿ ಮೋಕ್ಷವು ಸಾಲ್ದು ಏನು ಕೊಡಲೆನ್ನೆ ॥
ಸದಾ ಸರ್ವ ಜೀವರಿಂದಧಿಕ ಭಕ್ತಿ ಒಂದೇ ।
ಕೇಳ್ದ ಶ್ರೀರಾಮನ್ನ ವೈರಾಗ್ಯ ನಿಧಿಯು ೧೮

ಗಂಡು ಶಿಶು ಬೀಳಲು ಗುಂಡು ಪರ್ವತ ಒಡೆದು ।
ತುಂಡು ನೂರಾಯಿತು ಕಂಡಿಹರು ಅಂದು ಬ್ರೋ – ॥
ಮ್ಹಾಂಡದಲಿ ಪ್ರಚಂಡ ಭೀಮಗೆ ಸಮ ।
ಕಂಡಿಲ್ಲ ಕೇಳಿಲ್ಲ ನೋಡಿ ಭಾರತವ ೧೯

ಉಂಡು ತೇಗಿದ ಗರಳ ತಿಂಡಿಯ ಭೀಮನು ।
ಉಂಡು ಹಾಲಾಹಲವ ಹಿಂದೆ ಈ ವಾಯು ॥
ಹಿಂಡಿ ಸ್ವಲ್ಪವ ಮುಕ್ಕಣ್ಣಗೆ ಕೊಟ್ಟನು ।
ಬಂಡು ಮಾತಲ್ಲವಿದು ಕೇಳಿ ವೇದವನು ೨೦

ಅರಗು ಮನೆಯಿಂದ್ಹೊರಟು ಸೇರಿ ವನವನು ಅಲ್ಲಿ ।
ಕ್ರೂರ ಹಿಡಿಂಬನ ಕೊಂದವನ ಸೋದರಿ ॥
ಭಾರತೀ ಯಕ್ಸ್ವರ್ಗ ಶಿಕಿಯು ಹಿಡಿಂಬಿಯ
ಕರಪಿಡಿದ ಭೀಮನು ಅನುಪಮ ಬಲಾಢ್ಯ ೨೧

ಬಕ ಕೀಚಕ ಜರಾಸಂಧಾದಿ ಅಸುರರು ।
ಲೋಕ ಕಂಟಕರನ್ನ ಕೊಂದು ಬಿಸುಟು ॥
ಲೋಕಕ್ಕೆ ಕ್ಷೇಮವ ಒದಗಿಸಿದ ಈ ಅಮಿತ ।
ವಿಕ್ರಮ ಭೀಮನಿಗೆ ಸಮರಾರು ಇಲ್ಲ ೨೨

ಕಲಿ ಕಲಿಪರಿವಾರ ದುರ್ಯೋಧನಾದಿಗಳ ।
ಬಲವಂತ ಭೀಮನು ಬಡಿದು ಸಂಹರಿಸಿದ ॥
ಕಲಿಹರ ಸುಜನಪಾಲ ಭೀಮ ಸಮ್ರಾಟನ ।
ಕಾಲಿಗೆ ಎರಗುವೆ ದ್ರೌಪದೀ ಪತಿಗೆ ೨೩

ಮಾಲೋಲ ಕೃಷ್ಣನ ಸುಪ್ರೀತಿಗಾಗಿಯೇ ।
ಬಲ ಕಾರ್ಯಗಳ ಮಾಡಿ ಅರ್ಪಿಸಿದ ಭೀಮ ॥
ಕಲಿಯುಗದಿ ಈ ಭೀಮ ಅವತಾರ ಮಾಡಿಹನು ।
ಕಲಿಮಲಾಪಹ ಜಗದ್ಗುರು ಮಧ್ವನಾಗಿ ೨೪

ಹನುಮಂತನ ಮುಷ್ಠಿ ಭೀಮಸೇನನ ಗದೆ ।
ದಾನವಾರಾಣ್ಯವ ಕೆಡಹಿದ ತೆರದಿ ॥

ಆಮ್ನಾಯಸ್ಮೃತಿ ಯುಕ್ತಿಯುತ ಮಧ್ವ ಶಾಸ್ತ್ರವು ।
ವೇನಾದಿಗಳ ಕುಮತ ತರಿದು ಸುಜನರ ಕಾಯ್ತು ೨೫

ಇಳೆಯ ಸುಜನರ ಭಾಗ್ಯ ಶ್ರುತಿ ಪುರಾಣಂಗಳು ।
ಪೇಳಿದಂತೆ ಕೊಂಡ ಯತಿರೂಪ ವಾಯು ॥
ಮೇಲಾಗಿ ಇದ್ದ ನಮ್ಮ ಅಜ್ಞಾನ ಕತ್ತಲೆಯ ।
ತೊಲಗಿಸಿದನು ಈ ಮಧ್ವಾಖ್ಯ ಸೂರ್ಯ ೨೬

ದುರ್ವಾದ ಕುಮತಗಳು ಸಜ್ಜನರ ಮನ ಕೆಡಿಸೆ ।
ತತ್ವವಾದವ ಅರುಪಿ ಸಜ್ಜನರ ಪೊರೆದ ॥
ಮೂವತ್ತು ಮೇಲೇಳು ಗ್ರಂಥ ಚಿಂತಾಮಣಿ ।
ಸುವರ್ಣ ಕುಂದಣ ಪದಕ ಯೋಗ್ಯರಿಗೆ ಇತ್ತ ೨೭

ದುಸ್ತರ್ಕ ದುರ್ಮತ ಬಿಸಿಲಿಲ್ಲಿ ಬಾಡುವ ।
ಸಸಿಗಳು ಸಾತ್ವಿಕ ಅಧಿಕಾರಿಗಳಿಗೆ ॥
ಹಸಿ ನೀರು ನೆರಳು ಈ ಮಾಧ್ವ ಮೂವತ್ತೇಳು ।
ಸಚ್ಛಾಸ್ತ್ರ ಪೀಯೂಷ ಗೋಕಲ್ಪ ತರುವು ೨೮

ಮೂಢ ಅಧಮರ ದುಷ್ಟ ಮತಗಳ ಸಂಪರ್ಕದಿ ।
ಈಡಿಲ್ಲದ ಮೋದಪ್ರದ ಜ್ಞಾನ ಕಳಕೊಂಡು ॥
ಬಡತನದಿ ನರಳುವ ಸಜ್ಜನರ ಪೋಷಿಪುದು ।
ನೋಡಿ ಈ ಸುರಧೇನು ಮಾಧ್ವ ಮೂವತ್ತೇಳ ೨೯

ಬಿಲ್ವಪ್ರಿಯ ಶಿವ ಈಡ್ಯ ಸಾರಾತ್ಮ ಕೃಷ್ಣನ ।
ಚೆಲ್ವ ಉಡುಪಿ ಕ್ಷೇತ್ರದಲಿ ನಿಲ್ಲಿರಿಸಿ ॥
ಎಲ್ಲ ಭಕ್ತರ ಕಾವ ಸುಖಮಯ ಜಗತ್ಕರ್ತ ।
ಮೂಲ ರಾಮನ ಸಾಧು ಜನರಿಗೆ ಕಾಣಿಸಿದ ೩೦

ಮಹಿದಾಸ ಬೋಧಿಸಿದ ತತ್ವವನು ವಿವರಿಸುತ ।
ಮಹಂತ ಪೂರ್ಣಪ್ರಜ್ಞ ಬದರೀಗೆ ತೆರಳಿ ॥
ಮಹಿಶಿರಿಕಾಂತ ಶ್ರೀ ವ್ಯಾಸನ ಬಳಿ ಇಹನು ।
ಅಹರಹ ಪ್ರೇಮದಿಂಸಂಸ್ಮರಿಸೆತೋರ್ವ ೩೧

ರಾಮ ಕೃಷ್ಣವ್ಯಾಸ ಜಾನಕೀಸತ್ಯಾ ।
ರುಕ್ಮಿಣೀ ಅಂಭ್ರಣಿ ಪ್ರಿಯತಮ ಹನುಮ ॥
ಭೀಮ ಮಹಾ ಪುರುಷೋತ್ತಮ ದಾಸರಿಗೆ ।
ನಮಿಪೆ ವಿಪಶೇಷ ಶಿವಾದ್ಯಮರ ಸನ್ನತರ್ಗೆ ೩೨

ಚತುರ್ಮುಖ ವರವಾಯು ಸರಸ್ವತಿ ಭಾರತಿಗೆ ।
ಸದಾ ಶ್ರೀಹರಿಯಲ್ಲಿ ಭಕ್ತಿ ಅಚ್ಛಿನ್ನ ॥
ಅತಿರೋಹಿತ ಜ್ಞಾನ ಪ್ರಾಚುರ್ಯರಾಗಿಹರು ।
ಸಾಧಾರಣವಲ್ಲ ಋಜುಗಳ ಮಹಿಮೆ ೩೩

ಋಜುಗಳ ರಾಜೀವ ಚರಣಗಳಿಗಾ ನಮಿಪೆ ।
ಭುಜಗಶಯ್ಯನಲಿ ಭಕ್ತಿ ಸಹಜ ಇವರಲ್ಲಿ ॥
ಭುಜಗ ಭೂಷಣಾದಿಗಳಿಗಧಿಕತಮ ಬಲಜ್ಞಾನ ।
ತ್ರಿಜಗಮಾನ್ಯರು ತ್ರಿಗುಣ ತಾಪವರ್ಜಿತರು ೩೪

ಅಪರೋಕ್ಷ ಋಜುಗಣಕೆ ಅನಾದಿಯಾಗಿಯೇ ಉಂಟು ।
ತಪ್ಪದೇ ಶತಕಲ್ಪ ಸಾಧನವ ಗೈದು ॥
ಶ್ರೀಪನ ಅಪರೋಕ್ಷ ಇನ್ನೂ ವಿಶೇಷದಿ ।
ಲಭಿಸಿ ಕಲ್ಯಾದಿ ಸುನಾಮ ಧರಿಸುವರು ೩೫

ಕಲ್ಯಾದಿ ಪೆಸರಲ್ಲಿ ಪ್ರತಿ ಒಂದು ಕಲ್ಪದಲು ।
ಅಕಳಂಕ ಇವರು ಬಹು ಸುವಿಶೇಷ ಸಾಧನದಿ ॥
ಭಕ್ತ್ಯಾದಿ ಗುಣಕ್ರಮದಿ ಅಧಿಕ ಅಭಿವ್ಯಕ್ತಿಯಿಂ ।
ಮುಖ್ಯ ವಾಯು ಬ್ರಹ್ಮಪದವ ಪೊಂದುವರು ೩೬

ಈ ಬ್ರಹ್ಮಾದಿಗಳೊಳು ಇದ್ದು ಕೃತಿಮಾಡಿಸುವ ।
ಶಿರಿಸಹ ತ್ರಿವೃನ್ನಾಮ ಪ್ರಸನ್ನ ಶ್ರೀನಿವಾಸ ॥
ಸುಹೃದ ಸೌಭಾಗ್ಯದಗೆ ಜಯ ಜಯತು ಅರ್ಪಿತವು ।
ಹರಿವಾಯು ನುಡಿಸಿದಿದು ಜಯತು ಹರಿವಾಯ ೩೭

ಶ್ರೀ ಭಾರತೀದೇವಿ

೭೨

ಭಾರತಿ ತವ ಚರಣಾಂಬುರುಹವ ನಂಬಿದೆ ಪೊರೆ ಎನ್ನ ಪ

ಹರಿಸಿರಿ ಪ್ರಿಯತರ ಮರುತನ ನಿಜಪತಿ
ಹರ ಶಕ್ರಾದಿಗಳಿಂದಾರಾಧಿತೆ ಅಪ

ಉದಿತ ಭಾಸ್ಕರನ ಪೋಲ್ವ ದ್ಯುತಿಯಿಂದ
ಜ್ವಲಿಸುವೆ ಶುಭಕಾಯೆ
ಹೃದಯಾಂತರ್ಬಹಿ ಶ್ರೀಶನ ಕಾಂಬುವ
ಜ್ಞಾನ ಭಕುತಿಯೀಯೆ ತಾಯೆ ೧

ಬಲ ಕರದಲಿ ಜ್ಞಾನ ಊರ್ಧ್ವದಿ
ಅಭಯ ಮುದ್ರೆಯು ಶುಭದ
ಒಲಿವ ಸುವರಮುದ್ರೆ ಪುಸ್ತಕ
ವಾಮದಿ ವಿದ್ಯಾಪ್ರದೆ ಸುಖದೆ ೨

ಶತಸುಖಪಿತ ಪ್ರಸನ್ನ ಶ್ರೀನಿ
ವಾಸನು ಸುಖಮಯನು
ಸತತ ಎನಗೆ ಒಲಿವಂತೆ ನೀ
ದಯಮಾಡೆ ಮಾತೆ ಭಾರತಿ ಶರಣು ೩

ಶ್ರೀ ಶೇಷದೇವರು

೭೩

ಶೇಷದೇವ ಶೇಷದೇವ ವಾರುಣೀಶ ಪಾಹಿ ಮಾಂ ಶೇಷದೇವ ಪ

ಷಡ್ಗುಣೈಶ್ವರ್ಯಪೂರ್ಣ ಕೇವಲಾನಂದರೂಪ
ಜಡಜಾಕ್ಷ ಜಯೇಶನಿಗೆ ಪರ್ಯಂಕ ನಮೋ ನಮೋ ೧

ದ್ಯುಭ್ವಾದಿಗಳಿಗಾಧಾರ ವೇದವತೀಶ ಕೂರ್ಮ
ವಿದ್ಯುನ್ ರಮಣ ಕೂರ್ಮರ ಒಲುಮೆ ನಿನ್ನಲಿ ಸದಾ ೨

ಗಿರಿಸಿಂಧುಯುತಧರೆ ಬ್ರಹ್ಮಾಂಡ ಸರ್ವವ
ಧರಿಸಿರುವೆ ಫಣಿಯ ಮೇಲೆ ಶರ್ಷಪದಂತೆ ನೀನು ೩

ಖದ್ರೂಜಾದಿ ವಿಷ ಸರ್ವದೋಷವೆನಗೆ ತಗಲದಂತೆ
ಕರ್ದಮರ ಸುತನಲ್ಲಿ ಭಕ್ತಿಜ್ಞಾನ ಸತತವೀಯೊ ೪

ಶ್ರಿಷ್ಟಿಧರ ಶುಕ್ಲವರ್ಣ ಸಹಸ್ರಫಣಿ ನೀಲವಾಸ
ಸೃಷ್ಟಿಕರ್ತ ವೇಧತಾತ ಪ್ರಸನ್ನ ಶ್ರೀನಿವಾಸನ ತೋರೊ ೫

ಶ್ರೀ ಶಿವ

೭೪೧

ಸೋಮಶೇಖರ ಶಿವನೆ ಹೈಮವತಿವರ ನಿನ್ನ
ತಾಮರಸ ಪದಯುಗಳಕಾ ನಮಿಪೆ ಕಾಯೋ ಪ

ಕಾಮಹರ ಸ್ಕಂಧಪಿತ ಅಮರೇಂದ್ರ ಮುಖವಿನುತ
ರಾಮ ನರಹುದಾಸ ಅಮರತಟನೀಧರನೆ ಅಪ

ರುದ್ರನೇ ನಮೋ ಎನ್ನುಪದ್ರವಗಳನು ತರಿದು
[1]ಭದ್ರವನು ಇಟ್ಟೆನ್ನ ಉದ್ಧರಿಸೊ ದಯದಿ
ರುದ್ರ ಭವಬಂಧಹರ ದುರ್ಗಾರಮಣನಾದ
ಪದ್ಮಭವತಾತನಿಗೆ ಪ್ರಿಯತರನೆ ತ್ರಿಪುರಾರಿ ೧

ಈಶ ಶಿವ ಮಹದೇವ ಈಶಾನ ನಮೋ ನಿನಗೆ
ವಾಸವಾದ್ಯಮರ ಜಗದ್ಗುರುವೆ ಶರಣೆಂಬೆ
ಈಶ ಕೇಶವ ದೋಷದೂರ ಸುಖಮಯ ಶ್ರೀಶ
ದಾಶಾರ್ಹನಲಿ ಎನ್ನ ಮನವ ಚಲಿಸದೆ ನಿಲಿಸೊ ೨

೧. ಭದ್ರದೊಳು

ತೀರ್ಥಪಾದನು ಸರ್ವ ಚೇತನರ ದೇಹಸ್ಥ
ಕೃತ್ತಿವಾಸನು ಶ್ರೀ ಪ್ರಸನ್ನ ಶ್ರೀನಿವಾಸ
ಕೃತಿಜಯಾತ್ರದ್ಧೇಶ ಸಹ ಜ್ವಲಿಪ ನಿನ್ನೊಳಗೆ
ಕೃತ್ತಿವಾಸನೆ ನಮೋ ಶುಭದ ಪಾರ್ವತೀಶ ೩

ಶ್ರೀ ಪಂಚಾಕ್ಷರ ಶಿವ

೭೫

ಮಂಗಳಾತ್ಮಕ ಶಿವ ಗಂಗಾಧರ ನಮೋ ಪಾಲಯಮಾಂ ಅ

ಪುರಂದರ ಗುರುವರಂ ಧ್ಯೇಯೋರುದ್ರಂ
ಶರಣಮುಮೇಶ ಜನಾರ್ಧನ ಪ್ರಿಯತರಂ

ವಿದ್ಯುತ್ ಶುಭ್ರಂ ಕೃಷ್ಣಂ ರತ್ನಂ ಶ್ಯಾಮಂ ಏನಂ
ಪಂಚ ಮುಖೋಹಿ ೨

ಜಟಾಮಕುಟ ಘಟಕಾಮಲಕಾಂತಿಮಾನ್
ಉಡುಪಕಲಾಧರ ಪಾಲಯಮಾಂ ೩

ಉರಗಭೂಷಣತ್ವಂ ಗಿರುಜಾಯುಕ್ತಂ
ಹರ ಮಮ ಪಾಪಂ ಕೃಪಯಾ ಸತತಂ ೪

ಕುಸುಮಸಂಭವಪಿತ ಪ್ರಸನ್ನ ಶ್ರೀನಿವಾಸ
ಕೇಶವ ಶಿವಪ್ರಿಯ ಶಿವ ತೇ ನಮೋ ನಮೋ ೫

ಶ್ರೀ ಭವಾನಿ ಕ್ಷೇತ್ರಸ್ತ ಸಂಗಮೇಶ್ವರ ಸ್ತೋತ್ರ

೭೬

ಸಂಗಮೇಶ್ವರ ಶರಣು ಸದಾಶಿವ
ಸಂಗಮೇಶ್ವರ ರಂಗ ಶ್ರೀಪತಿಯರ ಅಚಲಭಕ್ತಿಯನಿತ್ತು
ಭಂಗವಿಲ್ಲದೆ ಪರಿಪಾಲಿಸೋ ಎನ್ನ ನೀ ಪ

ರಮ್ಯ ಭವಾನಿ ಕಾವೇರಿ ಸಂಗಮದಲಿ ।
ಉಮೆ ಸಹಿತದಿ ನಿಂತು ಎಮ್ಮ ಪಾಲಿಸುತಿ ನೀ ॥ ೧

ಅಮರ ಸುಮನಸ ವೃಂದಾರಾಧ್ಯನೇ ।
ಷಣ್ಮುಖ ಗಜಮುಖ ತಾತ ಕೃಪಾನಿಧೆ ೨

ಶುದ್ಧ ಸ್ಫಟಿಕಾಮಲ ನಿರ್ಮಲ ಕಾಯನೆ ।
ದುಗ್ಧ ಸಾಗರ ಭವಶೇಖರ ಶಂಕರ ।
ಸ್ನಿಗ್ಧ ಲೋಹಿತ ಜಟಾಜೂಟಿ ಗಂಗಾಧರ ।
ಮೃತ್ಯುಂಜಯ ಅಹಿಭೂಷಣ ಶರಣು ೩

ಅಸಿತ ಲೋಹಿತ ಸಿತ ಶ್ಯಾಮ ವಿಧ್ಯುನ್ನಿಭ ।
ಭಾಸಿಪ ಪಂಚ ಸುವದನ ತ್ರಿಲೋಚನ ।
ಈಶಾನಮಃ ದೇವನೇ ವೇದ ನಾಯಕಿ ಪತಿಯೇ ।
ಅಜಪಿತ ಪ್ರಸನ್ನ ಶ್ರೀನಿವಾಸಗೆ ಪ್ರಿಯ ೪

ವೃದ್ಧಾಚಲ ಶ್ರೀ ಈಶ್ವರ

೭೭

ಮಂಗಳದಾಯಕ ವೃದ್ಧಾಚಲ ಶಿವ ಪಾರ್ವತಿ ರಮಣ
ಪಾಲಯ ಮಾಂ ಪ

ಭೂರ್ಭುವಃ ಸ್ವಹಃ ಪತಿ ಶ್ರೀ ಮುಷ್ಣವರಾಹ
ಮಹಾಬಲ ಪ್ರೋಜ್ವಲ ನರಹರಿ ಪ್ರಿಯ ನಮೋ ೧

ವಿದ್ಯುದಶಿತ ಶಿತ ಲೋಹಿತ ಶ್ಯಾಮೋ
ವದನ ತ್ರಿಲೋಚನ ಮೃತ್ಯುಂಜಯ ನಮೋ ೨

ಬಾಲ ಬದರಧರ ಶೈಲ ಸುತಾಯುತ
ಮೌಲಿ ಜಟಾ ಸ್ಫಟಿಕಾಮಲ ಕಾಂತಿಮಾನ್ ೩

ಇಂದಿರ ರಮಣ ಸ್ವತಂತ್ರ ಸರ್ವೋತ್ತಮ
ಬಿಂದು ಮಾಧವ ತವ ಮಂದಿರೇ ಭಾಸತಿ ೪

ಸರ್ಪಾಭರಣ ತ್ರಿಶೂಲಿ ಧೂರ್ಜಟಿ ಮಮ
ಪಾಪಂ ದ್ರಾವಯ ಕೃಪಯ ಸಂತತ ೫

ಶಂಭೋ ಶಕ್ರಾದ್ಯಮರ ಜಗದ್ಗುರೋ
ಸುಪ್ರದರ್ಶಯ ಮಮ ಮನಸಿ ಶ್ರೀ ಯಃ ಪತೇಂ ೬

ಭಾಗ್ಯ ಸಂವೃದ್ಧಿ ದಾ ವೃದ್ಧಾಂಬಾ ಪತೇ
ಯೋಗಕ್ಷೇಮಂ ವಹ ದಯಾಯಾ ಮಮ ೭

ದರ್ಶನಾರಭ್ಯ ಮದ್ ಹೃದಯೇ ವಿರಾಜಿಸಿ
ಶ್ರೀಶ ಭಾರತಿ ಪತಿ ಸಹ ತ್ವಂ ಕೃಪಾಳೋ ೮

ವೃತತಿ ಜಾಸನ ಪಿತ ಪ್ರಸನ್ನ ಶ್ರೀನಿವಾಸ
ಭೂತಿದ ಶಿವ ಪ್ರಿಯ ಶಿವತೇ ನಮೋ ನಮೋ ೯

ಶ್ರೀ ದಕ್ಷಿಣಾ ಮೂರ್ತಿ ಸ್ತೋತ್ರ

೭೮

ಗುರುವರ ದಕ್ಷಿಣಾ ಮೂರ್ತಿಗೆ ಎರಗುವೆ
ಪುರಂದರ ಮುಖ ಸುರ ವೃಂದ ವಂದಿತರು
ಪರಮಾತ್ಮನು ಶ್ರೀ ರಾಘವ ಸಿಂಹನ
ಪರಮ ಭಕ್ತಾಗ್ರಣಿ ಶರಣರ ಸುರತರು ಪ

ಮೌತಿಕಾಕ್ಷಮಾಲ ಅಮೃತ ಕಲಶ ಅಭಯ
ವಿದ್ಯಾಮುದ್ರಾ ದರ್ಶಕ ಕೈ ಪದ್ಮಗಳ್
ಸುಂದರ ತರ ಶುದ್ಧ ಸ್ಫಟಿಕಾಮಲವರ್ಣ
ಇಂಥ ದಕ್ಷಿಣ ಮೂರ್ತಿಗೆ ಆನಮಿಸುವೆ ೧

ಉರಗ ಭೂಷಣ ದಿವ್ಯ ಹೊಳೆವ ಆಭರಣಗಳ್
ಚಂದ್ರ ಚೂಡ ತ್ರಿನೇತ್ರ ಕೃಪಾಕರ
ದಕ್ಷ ಪ್ರಜೇಶ್ವರಾ ದ್ಯಮರರಿಂದೀಡ್ಯ ಈ
ದಕ್ಷಿಣ ಮೂರ್ತಿಯ ಸ್ಮರಿಸೆ ಸಂತೈಪರು ೨

ಶ್ರೀಪತಿ ಜ್ಞಾನ ಪ್ರದರ್ಶಿಸಿ ತೇಜಸ್ ಐಶ್ವರ್ಯ ಈವೋರು
ಅಪಮೃತ್ಯು ವಿಷರೋಗ ಪರಿಹರಿಸುವರು
ಅಬ್ಜಜ ಪಿತ ಶ್ರೀ ಪ್ರಸನ್ನ ಶ್ರೀನಿವಾಸ
ಹೃತ್ಪದ್ಮದಿ ಕಾಂಬ ಮೇಧಾಕೊಡುವರು ।
ಗುರುವರ ದಕ್ಷಣಾ ಮೂರ್ತಿಗೆ ಎರಗುವೆ ೩

ಶ್ರೀ ಪಾರ್ವತೀದೇವಿ

೭೯

ಮಂಗಳಗೌರೀ ಪಾರ್ವತಿ ಅಂಬಾ ಶಿವಾ
ನಮಸ್ತೆ ಪಾಲಯಂ ಮಾಂ ಪ

ಗೌರವರ್ಣಾ ವರ ಪೀತಾಂಬರಧರಾ
ವರ ಅಭಯಕರಾ ಪಾಲಯ ಮಾಂ ೧

ಧ್ಯಾಯಾಮಿತ್ವಮ್ ಮಂಗಳ ಶುಭದಾ
ಭಾಗ್ಯದಾ ಸಂತತಂ ಪಾಲಯ ಮಾಂ ೨

ವೃತತಿಜಾಸನಪಿತ ಪ್ರಸನ್ನ ಶ್ರೀನಿವಾಸ
ಭಕ್ತೀಂ ದೇಹಿ ಮೇ ಕೃಪಯಾ ಅಂಬಾ ೩

ಶ್ರೀ ಪಾರ್ವತೀ ಸ್ತೋತ್ರ

೮೦

ಅಂಬಾ ಅಚಲಸುತೆ ಅನಲಾಕ್ಷಸತಿ ನಿನ್ನ
ಅಂಬುಜ ಅಡಿಗಳಿಗೆ ಎರಗಿದೆ ಅಮ್ಮ ಪ

ಕಾರ್ತಿಕೇಯನ ಮಾತೆ ಕಾತ್ಯಾಯಿನೀ ದೇವಿ
ಅತಿದಯದಿ ಪಾಲಿಸೆನ್ನ ಕಲುಷ ಪರಿಹರಿಸೇ ೧

ಗಜಮುಖನತಾಯೆ ನೀ ಗಿರಿರಾಜ ಆತ್ಮಜೆ
ವಜ್ರಿ ಮನ್ಮಥನುತೆ ಭಜಕಗೇ ಶುಭದೆ ೨

ಉದಕಜಾಸನ ಪಿತ ಪ್ರಸನ್ನ ಶ್ರೀನಿವಾಸನ
ಭಕ್ತಾಗ್ರಣೀ ಸದಾಶಿವನ ಅರ್ಧಾಂಗಿ ನಮೋ ೩

ಶ್ರೀ ಮದುರೈ ಮೀನಾಕ್ಷಿ ಸ್ತೋತ್ರ

೮೧

ಮೀನಲೋಚನೆ ಅಂಬಾ ದೀನಪಾಲಕೆ
ನಿಂತಲ್ಲಿ ಶರಣೆಂದೆ ಎನ್ನ ಪೊರೆವ ಭಾರ ನಿನ್ನದೇ ಮಾತೆ ಪ

ಕಣ್ಣು ಕಿವಿ ನಾಲ್ಕು ಕುದುರೆ ದೇಹವೆಂಬ ಹರಿಯರಥಕೆ
ನಿನ್ನಧೀನ ಅಶ್ವಗತಿ ಸನ್ಮಾರ್ಗದಿ ನಡೆಸಿ ಕಾಯೆ ೧

ಕಂಡು ಕೇಳಿ ನುಡಿವದೆಲ್ಲ ಉಂಡು ಉಟ್ಟು ಮಾಳ್ಪುದೆಲ್ಲ
ಪುಂಡರೀಕ ನಯನ ಶ್ರೀಶ ರಥಿಕ ಪ್ರೀತಿ ಆಗೆ ಮಾಡೆ ೨

ಮಂದಜಾಸನ ತಾತ ಪ್ರಸನ್ನ ಶ್ರೀನಿವಾಸನಿಗೆ ಪ್ರಿಯ
ಇಂದುಧರ ಸತಿಯೇ ಶರಣು ಸ್ಕಂಧ ವಿಘ್ನರಾಜರ ಮಾತೆ ೩

ಶ್ರೀ ಕಂಚಿ ಕಾಮಾಕ್ಷಿ

೮೨

ಶರಣು ಶರಣು ಶರಣು ಶರಣು ಕಾಮಾಕ್ಷಿ
ಶರಣು ಮೋಹಿನಿ ಮಾ ವಾಣಿ ಶರ್ವಾಣಿ ಪ

ಹರಿ ಸಿರಿ ಸರಸ್ವತಿ ಸಹ ಪ್ರಜ್ವಲಿಸುವೆ
ಗಿರಿಜೆ ಶರಣು ಕಂಚಿನಿಲಯೆ ಸತತಕಾಯೆ ಅ ಪ

ಏಕಾತ್ಮಾನಂದಮಯ ನಿಖಿಳ ಗುಣಾರ್ಣವ
ಜಗಜ್ಜನ್ಮಾದಿಗಳಿಗೆ ಮುಖ್ಯ ಕಾರಣೆ ವ್ಯಾಪ್ತೆ
ಅಕಳಂಕ ಪುಂಸ್ತ್ರೀಗಾತ್ರೆ ಚಿನ್ಮಯೆ ವೃಂದಾ
ರಕರಿಗೆ ಪೀಯೂಷ ಕರುಣಿಸಿ ಉಣಿಸಿದೆ ೧

ಭಾಮಾ ರುಕ್ಮಿಣಿ ಸೀತಾ ಸೋಮಸೋದರಿ ರಮೆ
ಕಮಲಾಸನಾದಿ ಸುಮನಸವಂದಿತೆ ತ್ರಾತೆ
ಕಮಲನಾಭನ ಸೇವೆ ವನಮಾಲೆ ಚಾಮರಾ
ದ್ಯಮಿತ ರೂಪದಿ ಮಾಳ್ಪ ಮಹಾಲಕ್ಷ್ಮೀ ನಮೋ ನಮೋ ೨

ಪಕ್ಷಿವಾಹನ ಸಾಕ್ಷಿ ಚೇತಾನಿರ್ಗುಣ ಅ
ಧೋಕ್ಷಜ ಸರ್ವಾಂತರಾತ್ಮನ ತೀವ್ರ
ಪ್ರೇಕ್ಷಿಸೊ ಜ್ಞಾನ ಭಕುತಿ ಮತಿ ಎನಗಿತ್ತು
ರಕ್ಷಿಸೆ ಸರಸ್ವತಿ ಫಣಿರ ಪಕ್ಷಿಪ ನುತೆ ೩

ಹೇಮ ಅಂಕುಶ ಪಾಶ ಇಕ್ಷುದಂಡವು ಪುಷ್ಪ
ಕೋಮಲಹಸ್ತ ೨ ನಾಲ್ಕಲ್ಲಿ ಶೋಭಿತವು
ಕಾಮಿತವರಪ್ರದೆ ಕಾತ್ಯಾಯನಿ ಉಮಾ
ಹೈಮವತಿಯೆ ಶಿವೆ ದಯಮಾಡಿ ಪೊರೆಯೆನ್ನ ೪

ತತ್ರ ತತ್ರ ಸ್ಥಿತೋ ವಿಷ್ಣುಃ ತತ್ ತತ್ ಶಕ್ತಿ ಪ್ರದರ್ಶಯನ್
ಸೂತ್ರವು ಮಣಿಗಳೊಳಂತೆ ಧಾರಕ ಹರಿ
ವೃತತಿಜಪಿತ ವಿಷ್ಣು ಪ್ರಸನ್ನ ಶ್ರೀನಿವಾಸ
ಗತಿ ಪ್ರಿಯತರೆ ಶಿವೆ ಸತತ ಪಾಲಿಸೆ ಎನ್ನ ೫

ಶ್ರೀ ವೇದನಾಯಕಿ – ಭವಾನಿ

೮೩

ವೇದನಾಯಕಿ
ಆದರದಲಿ ನಿನ್ನಾರಾಧಿಪ ಭಕ್ತರ
ಸಾದರದಲಿ ಸದಾ ಕಾಯ್ವ ಉದಾರಿ ಪ

ಅಮೃತ ಸರಿತ ಕಾವೇರಿ ಭವಾನಿ
ಸುಮ್ಮನೋಹರ ಸಂಗಮ ಕ್ಷೇತ್ರದಲ್ಲಿ
ಅಮಲ ಸ್ಫಟಿಕ ನಿಭ ಕಾಂತಿಮಾನ್ ಈಶ
ಸಮೇತ ವಿರಾಜಿಪ ಸುಮನಸನುತೆ –
– ಮನ್ಮಾತೆ ನಮಸ್ತೆ ೧

ಸ್ನಾನ ಸಂಧ್ಯಾ ಜಪ ಸೇವೆ ಅರ್ಚನೆಗಳು
ಏನೇನು ಮಾಡದೆ ಹೀನ ಕರ್ಮದಿ ರತ
ಎನ್ನ ಮನ್ನಿಸಿ ಬಹುದಯದಿ ಸದಾ ನೀ
ಘನತರ ಪಾಲಿಸೆ ಮೀನಲೋಚನೆ –
– ಮನ್ಮಾತೆ ಕೃಪಾಕರಿ ೨

ವೇಧನ ಪಿತ ಜಗ ಜನ್ಮಾದಿ ಕಾರಣ
ಆದಿಕೇಶವ ಶ್ರೀ ಸುಂದರೀ ರಮಣ ಪ್ರ –
ಮೋದಿ ಗೋಪಾಲ ಪ್ರಸನ್ನ ಶ್ರೀನಿವಾಸ
ಶ್ರೀದನ ಕಾಣಿಸೆ ಖೇಶ ವಲ್ಲೀಶನ ಮಾತೆ –
– ಮನ್ಮಾತೆ ೩

ಶ್ರೀ ತುಳಸಿ

೮೪

ಇಂದಿರೆ ವಂದೆ ಆನಂದೀ ತುಳಸೀದೇವಿ ನಂಬಿದೆ ಸುರಸುಂದರಿ ಪ

ಎಂದೆಂದಿಗೂ ನಾ ನಿನ್ನಧೀನವೆ ಮಾತೆ ಸಿಂಧುಶಯನ
ಪ್ರಿಯೆ ವರದೆ ಆನಂದದೆ ಅ.ಪ

ಆದಿಕಾರಣ ವಿಷ್ಣು ಪ್ರಿಯಳೆ ಶ್ಯಾಮಲೆ ಕೋಮಲೆ
ವಿಧಿಶರ್ವವಂದಿತೆ ವಿದ್ಯಾಧರಾದಿ ಅರ್ಚಿತೆ
ಆದರದಲಿ ನಿನ್ನ ಪಾದಪಂಕಜಗಳ
ಪ್ರತಿದಿನ ಸ್ಮರಿಪೆನೆ ವೃಂದಾವನಸ್ಥಿತೆ ತುಳಸಿ ಸುರೇಶ್ವರಿ ೧

ಈರಾರು ಅಕ್ಷರ ಮಂತ್ರ ಸುಪ್ರತಿಪಾದ್ಯೆ
ನಾರದನುತೆ ನಾರಾಯಣ ಮನಃಪ್ರಿಯಳೆ
ಘೋರ ಪಾತಕ ಬಹು ಪಾಪಹಾರಿಣಿ ನಿನ್ನ
ಚಾರುಪಾದಗಳಿಗೆ ನಮಿಪೆ ಪೊರೆಯೆ
ಎನ್ನ ವರದೆ ತುಳಸೀದೇವಿ ೨

ನಿನ್ನ ಸ್ಮರಣೆ ಮಾಡೆ ಸರ್ವತ್ರ ವಿಜಯವಹುದೆ
ನಿನ್ನ ಸಂದರ್ಶನದಿ ಸರ್ವಪಾಪವು ಪೋಪುವೆ
ಎನ್ನ ಪಾತಕ ತಾಪಾದಿ ೧ ಗಳಳಿಯೆ
ಘನ್ನ ಪ್ರಸನ್ನ ಶ್ರೀನಿವಾಸನ ನಿಜಸತಿ ವಿರಜೆ ತುಳಸೀಮಾತೆ ೩

ಶ್ರೀ ಸ್ಕಂಧ ಸ್ತೋತ್ರ

೮೫

ಸ್ಕಂಧ ದೇವಾ ಸ್ಕಂಧ ದೇವಾ
ಪಾಹಿ ಪಾಹಿ ಪಾಹಿಮಾಂ ಸ್ಕಂಧ ದೇವಾ ಪ

ಇಂದಿರೇಶ ಪ್ರಿಯ ನಮೋ ಶರಣು ಶರಣೆಂಬೆ
ಸುಂದರಾಂಗ ತೇಜೋರೂಪಿ ಸ್ಕಂಧ ನಮಸ್ತೆ ೩

ಕೌಶೀಕಸ ವಿಶ್ವಾಮಿತ್ರ ಋಷಿ ಸಂಸ್ತುತ್ಯ
ಈಶ ಶ್ರೀಶ ದೇವ ನಿನ್ನೊಳ್ ಸುಪ್ರಸನ್ನತ

ಕಾತ್ಯಾಯಿನಿ ಸುತ ವಹ್ನಿ ವರ್ಣ ಷಣ್ಮುಖ
ನೀದಾವಾಗ್ನಿ ಎನ್ನ ಕಷ್ಟ ಕಲುಷ ಕಾನನಕೆ

ವಾಮಸೌಂದರ್ಯೋ ಜ್ವಲನೇ ಧನುಶ್ಶಕ್ತಿ ಧರನೇ ಶರಣು
ಕಾಮದನೇ ಭಯಹರನೇ ಎನಗೆ ದಯವಾಗೋ ೪

ಕುಸುಮಭವಪಿತ ಪ್ರಸನ್ನ ಶ್ರೀನಿವಾಸನ
ದಾಸವರಶ್ರೇಷ್ಠನಮೋ ಭರತ ಪ್ರದ್ಯುಮ್ನ ೫

॥ ಶ್ರೀಮಧ್ವಾಂತರ್ಗತ ಕೃಷ್ಣಾರ್ಪಣಮಸ್ತು ॥

ಶ್ರೀ ಕುಮಾರ

೮೭

ಕುಮಾರ ಪಾಲಿಸೋ ನಿನ್ನ ಚಾರು ಚರಣಕೆ ನಾ
ನಮಿಪೆ ಕೃಪಾಕರ ಪ

ಸುಂದರಾನನ ಸ್ಕಂಧ ಕಾಮಗೋ
ವಿಂದಸುತ ಸುಂದರಾಂಗ ಪ್ರದ್ಯುಮ್ನನೆ
ಇಂದಿರೇಶನ ದಯ ತಂದು ನೀ ಒದಗಯ್ಯ
ವಂದಿಪೆ ನಿನ್ನರವಿಂದ ಪಾದಕೆ ನಾ ೧

ಸೂರ ಪದುಮಾದಿ ಅಸುರರೆಲ್ಲ ನೀ
ಮುರಿದು ಪೊರೆದೆಯೊ ಮೂರು ಜಗವ ಎನ್ನ

ಘೋರ ಬಾಧೆಗಳನ್ನು ತರಿದು ನೀ ಪೊರೆಯಯ್ಯ
ಧೀರ ಉದಾರನೆ ಸುರಸೇನಾಧಿಪ ೨

ಸೋಮವದನ ಉಮೇಶಸುತ ಗುಹ
ಪ್ರೇಮದಯದಿ ಭ್ರಮಾಕಲುಷ ಕೀಳೊ
ಬೊಮ್ಮನ ತಾತ ಪ್ರಸನ್ನ ಶ್ರೀನಿವಾಸ
ವಾಮನ ಶ್ರೀಶನ ಪ್ರೇಮ ಸುಪಾತ್ರನೆ ೩

ಶ್ರೀ ಬೃಹಸ್ಪತಿ ಸ್ತೋತ್ರ

೮೭

ವಂದಿಪೆ ದೇವ ಗುರೋ ನಿನ್ನ ಪಾದಾಂಬುಜದ್ವಯಕೆ
ಇಂದುಶೇಖರ ಅರವಿಂದಾಸನುತ ಇಂದಿರೇಶಗೆ –
– ಪ್ರಿಯ ಹಿತದಿಪಾಲಿಸೊ ಎನ್ನ ಪ

ಬ್ರಹ್ಮಮಾನಸ ಪುತ್ರ ಅಂಗೀರ ಶ್ರದ್ಧಾದಂಪತಿಗೆ
ಬೃಹಸ್ಪತಿ ನೀ ಮಗನಾಗಿ ಜನಿಸಿ ಖ್ಯಾತನಾದಿಯೋ ತಾರೇಶ
ಬ್ರಹ್ಮಜ್ಞಾನದಲಿ ಬುದ್ಧಿ ಕೌಶಲ್ಯದಿ ಬ್ರಹ್ಮಿಷ್ಠನೆ ನಿನಗೆಣೆಯುಂಟೆ ೧

ದೇವತಾ ವೃಂದಕ್ಕೆ ತಪೋಧನ ಋಷಿಗಳ ಸಮೂಹಕ್ಕೆ
ಸರ್ವಲೋಕತ್ರಯ ಸಜ್ಜನರಿಗೆ ಗುರು ಶರಣೆಂಬೆ ಕಾಂಚನಸನ್ನಿಭನೇ
ದೇವಮಂತ್ರಿಯೇ ವಿಶಾಲಾಕ್ಷ ಸದಾ ನೀ ಲೋಕಹಿತೇ –
– ರತ ಪಾಲಯಮಾಂ ೨

ಪದುಮಾಸನ ಪಿತನು ಪ್ರಸನ್ನ ಶ್ರೀನಿವಾಸ ಪದುಮೇಗೆ
ಮದುವೆ ಪತ್ರಿಕಾ ಮಹೋತ್ಸವ ಸೇವೆ ಮುದದಿ ಗೈದಿಯೋ ನೀ ಎನ್ನ
ಗೃಹದಿ ಮದುವೆ ಪೂಜೆ ಶ್ರೀಹರಿ ಪ್ರೀತಿಗೆ ನಿರಂತರ ಮಾಡಿಸೋ ೩ ಪ

ಪ್ರಸನ್ನ ಶ್ರೀ ನವಗ್ರಹ ಸ್ತುತಿಗಳು

ಶ್ರೀ ಸೂರ್ಯದೇವ ಸ್ತೋತ್ರ

೮೮

ಆ ನಮಿಸುವೆ ಘೃಣಿ ಆದಿತ್ಯ ಸೂರ್ಯ
ಘನ್ನ ದಯಾಳುವಾಗಿಹಿ ಸೂರಿ ಪ್ರಾಪ್ಯ ಪ

ಅಮಿತ ಸ್ವತೇಜದಿ ಝಗಿ ಝಗಿಸುತಿ ಜಗತ್
ಜನ್ಮಾದಿಕರ್ತ ಚೇಷ್ಟಕ ಸ್ಫೂರ್ತಿದಾತ
ಅಮಯ ದೂರ ಸುಗುಣ ಗಣಾರ್ಣವ ದೇವ
ಶ್ರೀಮನ್ನಾರಾಯಣ ಧ್ಯೇಯ ಧ್ಯಾನಿಪೆ ನಿನ್ನ ೧

ಕೇಯೂರ ಮಕರ ಕುಂಡಲವಾನ್ ಕಿರೀಟಿಯೆ
ದಿವ್ಯಮಾಲಾಮಣಿ ಅರಿದರ ಧಾರಿ
ಅವ್ಯಯಾನಂದ ಚಿತ್ ಚಾಮೀಕರ ವಪು
ಶ್ರೀಯುಕ್ ಪದ್ಮದಿ ಇರುತಿಹಿಯೋ ಅರ್ಕಸ್ಥ ೨

ಹಿಂಕಾರ ಪ್ರಸ್ತಾವ ಆದಿ ನಮೋ ನಮೋ
ಉದ್ಗೀಥ ಪ್ರತಿಹಾರೋಪದ್ರವ ನಿಧನ
ಉತ್ಕೃಷ್ಟ ಸಾಮ ಪ್ರತಿಪಾದ್ಯ ನಾರಾಯಣ
ಋಕ್ ಸಾಮ ವೇದದಿಂ ಸ್ತುತ್ಯ ವಾಗ್ವಾಯ್ವಿಂದ ೩

ಭೂತೇಂದ್ರಿಯ ಕರ್ಣಾದಿಗಳಿಗೆ ದೂರ
ದ್ಯುಸ್ಥದಿವಃಪರ ತ್ರಿಪಾದ ಜ್ಯೋತಿರ್ಮಯನು
ಹಿತಕರನಿವ ಅರ್ಕನೋಳ್ ಜ್ವಲಿಸಿ ಅರ್ಕಗೆ
ಒದಗಿಸಿಹ ತನ್ನ ಸೂರ್ಯನೆಂಬೋ ನಾಮ ೪

ಸೂರ್ಯದೇವನೆ ದಯಾವಂತನೆ ನಮೋ ನಮೋ
ಕಶ್ಯಪಾತ್ಮಜ ನೀ ಎನ್ ಪಾಪ ಪರಿಹರಿಸೋ

ಮಹಾದ್ಯುತಿ ತಮೋಘ್ನನೇ ಜ್ಞಾನಾಯುರ್ದಾತ ನೀ
ಶ್ರೀಯಃಪತಿ ನಾರಾಯಣನ್ನೊಲಿಸೋ ಎನಗೆ ೫

ಗ್ರಹಗಳಲಿ ಆದಿ ಮಾರ್ತಾಂಡ ಸೂರ್ಯ ನೀ
ಅಹರಹ ಎನ್ನಸರ್ವಪೀಡೆಗಳ್ ಕಳೆದು
ಬೃಹತಿಸಾಸಿರ ಸ್ವರ ವ್ಯಂಜನಾಕ್ಷರ ವಾಚ್ಯ
ಶ್ರೀಹರಿಯ ಭಜಿಸಲು ಶತಾಯುಸ್ ಬಲವೀಯೋ ೬

ಶರಣು ಪದ್ಮಜಪಿತ ಪ್ರಸನ್ನ ಶ್ರೀನಿವಾಸ
ತ್ರಿವೃತ್ ಉರುಕ್ರಮ ಸೂರ್ಯ ನಿನ್ನ ಪ್ರೀತಿಪಾತ್ರ
ಸೂರ್ಯನೊಳಿದ್ದು ನೀ ಜಗತ್ಸರ್ವ ಕಾಯುತ್ತಿ
ಕರುಣದಿ ಎನ್ನನು ಎನ್ನವರನು ಕಾಯೋ ೭ ಪ

ಶ್ರೀ ಚಂದ್ರ ಸ್ತೋತ್ರ

೮೯

ವಾಮನ ಹಯಾಸ್ಯ ಶ್ರೀಹಂಸ ಧನ್ವಂತರಿ
ರಮಾಪತಿಗೆ ಪ್ರಿಯ ಸೋಮರಾಜನೇ ನಮಸ್ತೇ ಪ

ಸಹಸ್ರಶೀರ್ಷ ಪುರುಷನ ನಾಭಿ ವನರುಹಜಾತ
ಬ್ರಹ್ಮದೇವನ ಸುತನು ಬಹುಗುಣಿ ಅತ್ರಿ
ಬ್ರಹ್ಮಿಷ್ಠ ಈ ಋಷಿಯ ನೇತ್ರಜನು ಸೋಮ ನೀ
ಬ್ರಹ್ಮಔಷಧಿ ಉಡುಗಣಕೆ ಪತಿಯಾದಿ ೧

ಪದ್ಮಜನ ನಿಯಮನದಿ ಹೊಂದಿದಿ ಈ ಅಧಿಕಾರ
ಸುಧಾಮೂರ್ತಿಯೇ ಸುಧಾಶನ ಸುಧಾಗಾತ್ರ
ದಧಿ ಶಂಖ ತುಷಾರಾಭ ಆಹ್ಲಾದ ಕೃಷ್ಣಮೋ
ಚಂದ್ರದೇವನೇ ಕ್ಷೀರೋದಾರ್ಣವ ಸನ್ನಿಭನೇ ೨

ತ್ರಿಭುವನಗಳ ಜೈಸಿ ರಾಜಸೂಯ ಯಜ್ಞಗೈದಿ
ತ್ರ್ಯಂಬಕನ ಮುಕುಟ ಭೂಷಣ ರೋಹಿಣೀಶ

ಅಂಬುಜೋದ್ಭವಪಿತ ಪ್ರಸನ್ನ ಶ್ರೀನಿವಾಸ ಹೃತ್
ಅಂಬರದಿಪೊಳೆವೆ ಸುಜ್ಞಾನ ಭಕ್ತಿ ಎನಗೀಯೋ ೩. ಪ

ಶ್ರೀ ರಾಹುದೇವ ಸ್ತೋತ್ರ

೯೦

ಅಭಯ ಹರಿ ಅನುಗ್ರಹ ಪಡೆದ ರಾಹುದೇವನೇ ನಮೋ ಪ

ಸ್ವರ್ಭಾನು ಛಾಯಾಗ್ರಹಕೆ ನೀ ದೇವ ಅಪ

ಹೃತ್‌ತಿಮಿರ ತನು ರೋಗ ಸರ್ವಪೀಡೆ ಪರಿಹರಿಸಿ
ಸುದರ್ಶನೀಯ ಒಲಿಸೆನಗೆ ಸತ್‌ಜ್ಞಾನ ಕರ್ಮಜದೇವ ೧

ಮಹಾವೀರ್ಯನೇ ಊರ್ಧ್ವಕೇಶ ಮಹಾಶೀರ್ಷನೆ
ಮಹಾವಕ್ತ್ರ ಮಹಾದಂಷ್ಟ್ರ ಮಹಾಯಶ ನಮಸ್ತೇ ೨

ನೀರಜಪಿತ ಶ್ರೀ ಪ್ರಸನ್ನ ಶ್ರೀನಿವಾಸ ವಿಭು
ಹರಿಯ ಭೃತ್ಯನೇ ನಮೋ ಪಾಹಿ ಮಾಂ ಸತತ ೩. ಪ

ಶ್ರೀ ಕೇತುದೇವ ಸ್ತೋತ್ರ

೯೧

ತ್ರಾತ ಹರಿ ಪದ್ಮಜರ ಅನುಗ್ರಹ ನಿಯಮನದಿ
ಕೇತುಗಳ ದೇವನೇ ಕೇತುವೇ ನಮಸ್ತೇ ಪ

ಕರಾಳ ದ್ಯುತಿ ಸಂಕಾಶ ರೌದ್ರನೇ ನಮೋ
ಘೋರ ಪಾಪ ಕಷ್ಟಂಗಳ ದೂರಮಾಡಿ ಸಲಹೆನ್ನ ೧

ಅನೇಕರೂಪ ವರ್ಣಾಶ್ಚ ಶತಶೋಥ ಸಹಸ್ರಶಃ
ಎನ್ನನ್ನ ಕೃಪದಿ ಸಂರಕ್ಷಿಸೋ ಸತ್‌ಜ್ಞಾನ ಕರ್ಮಜದೇವ ೨

ವೇಧಪಿತ ಶ್ರೀ ಪ್ರಸನ್ನ ಶ್ರೀನಿವಾಸ ಮುಕುಂದನ್ನ
ಸದಾ ದಯದಿ ಒಲಿಸೆನಗೆ ಪಾಹಿ ನಮೋ ಕೇತೋ ೩ ಪ

ಶ್ರೀ ಅಂಗಾರಕ ಸ್ತೋತ್ರ

೬೨

ಗಂಗಾಜನಕ ಜಯೇಶ ಪ್ರಿಯತರ
ಮಂಗಳ ನಮೋ ನಮೋ ಪಾಲಯಮಾಂ ಪ

ತುಂಗ ಮಹಿಮ ವರಾಹಧರಾಸುತ
ಮಂಗಳಪ್ರದತೇ ನಮೋ ನಮೋ ಅಪ

ಸಾಧು ಜನಪ್ರಿಯ ವೃಷ್ಟಿಕೃದ್ ವೃಷ್ಟಿ
ಹರ್ತಾದುರ್ಜನ ಭೀಕರ ಭೋ
ವಿದ್ಯುತ್ತೇಜ ಕುಮಾರ ನಮೋ ನಮೋ
ಶಕ್ತಿಪಾಣೇ ತ್ವಂ ಪಾಲಯಮಾಂ ೧

ಸಾಮಗಾನ ಪ್ರಿಯ ದೇಹಿಮೇ ಸಪ್ತ –
ಸಾಮಭಕ್ತಿ ಪ್ರತಿಪಾದ್ಯ ಪರೌ
ನಿರ್ಮಲ ಭಕ್ತಿಂ ಸಜ್ಜನ ಸಂಗಂ
ಜ್ಞಾನಾಯುರ್ಬಲಾದ್ಯೈಶ್ವರ್ಯಂ ೨

ವಾಗೀಶಪಿತ ಶ್ರೀ ಪ್ರಸನ್ನ ಶ್ರೀನಿವಾಸ
ವಿಶ್ವರೂಪನು ನಿನ್ನೊಳ್ ಜ್ವಲಿಸುತಿಹ
ಅಂಗಾರಕ ನಮೋ ಭೂಮಿಜ ಕೇವಲ
ಕೃಪಯಾ ಸಂತತ ಪಾಲಯಮಾಂ ೩ ಪ

ಶ್ರೀ ಶುಕ್ರಾಚಾರ್ಯ ಸ್ತೋತ್ರ

೯೩

ಶ್ರೀಶಪ್ರಿಯ ಭೃಗುವಂಶಜಾತ ಶುಕ್ರಾಚಾರ್ಯ
ನೀ ಸಲಹೋ ಎನ್ನನ್ನ ನಮೋ ನಮೋ ನಮಸ್ತೇ ಪ

ಶ್ರೀ ಪದ್ಮನಾಭಜನು ಸುಪವಿತ್ರ ವಿಧಿಸುತ
ಭೃಗು ಅಪತ್ಯನು ಕವಿ ತತ್ಪುತ್ರರತ್ನನು ಶುಕ್ರ
ಈ ಪುಣ್ಯ ಶ್ಲೋಕ ಶುಕ್ರಾಚಾರ್ಯ ಉಷನ ಶ್ರೀಪ
ಪ್ರಿಯನಿಗೆ ನಮೋ ಮಂತ್ರ ತಂತ್ರ ಮಹಾಕವಿಗೆ ೧

ದೈತ್ಯಮಂತ್ರಿಯೇ ಸರ್ವಶಾಸ್ತ್ರ ಪ್ರವಾರ್ತಾರ
ದೈತ್ಯಾನಂ ಪರಮಂ ಗುರುಂ ಪ್ರಭುಸ್ತಾರಾ ಗಣಾನಾಂ
ಮಹಾದ್ಯುತಿಯೇ ನಮೋ ಎನ್ನ ಪೀಡೆಗಳ ಪರಿಹರಿಸಿ
ದಯದಿಪಾಲಿಸೆನ್ನನ್ನು ಹರಿಭಕ್ತ್ಯಾದಿಗಳಿತ್ತು ೨

ಅಕಳಂಕ ಅಜಪಿತ ಪ್ರಸನ್ನ ಶ್ರೀನಿವಾಸನು
ಶುಕ್ರನೆಂದೆಣಿಸುವನು ಶೋಕ ರಹಿತನಾದ್ದರಿಂದ
ಶ್ರೀಕರಾರ್ಚಿತ ಈ ಶುಕ್ರ ನಿನ್ನೊಳ್ ಪ್ರಕಾಶಿಪನು
ಶುಕ್ರನ್ನ ಒಲಿಸೆನಗೆ ಶುಕ್ರಾಭಿದ ಮಹಾಯಶನೇ ೩ ಪ

ಶ್ರೀ ಗಂಗಾದೇವಿ ಸ್ತುತಿ ಸ್ತೋತ್ರ

೯೪

ಜಯ ಜಯ ಜಯ ರಾಮಚಂದ್ರ
ಜಯ ರಾಮಭದ್ರ ಸರ್ವೇಶ
ಜಯ ಜಯ ಜಯ ರಾಮ ಸ್ವರತ ಆಹ
ಜಯ ಸೀತಾರಾಮಣ ನೀ ಭಯ ಬಂಧ ಮೋಚಕ
ಜಲಜಸಂಭವಮುಖ ಸುರಸೇವ್ಯ ನಮೋ ನಮೋ ಪ

ತ್ರಿವಿಕ್ರಮ ಪಾದ ಸಂಭೂತೆ
ತ್ರಿಜಗತ್ ಪಾವನೆ ಗಂಗಾ ನಮಸ್ತೆ
ತ್ರಿದಶೇಶ್ವರಿ ಸೀತಾ ನಳಿನಿ ಆಹ
ತ್ರಾಹಿ ಜಾಹ್ನವಿ ಭಾಗೀರಥಿ ಭೋಗವತಿ ನಮೋ
ತ್ರಿಪಥ ಗಾಮಿನಿ ಪಾಹಿ ಮಾಲತಿ ನಂದಿನಿ

॥ ಜಯ ಜಯ ರಾಮಚಂದ್ರ ॥

ಶ್ರೀ ಬುಧ ಸ್ತೋತ್ರ

೯೫

ಸೂರಿ ಸಂಪ್ರಾಪ್ಯ ಶ್ರೀ ನಾರಾಯಣ ಪ್ರಿಯ ಬುಧನೇ
ನಮೋ ನಮೋ ನಮೋ ನಿನಗೆ ಪ

ಸೂರಿಪ್ರಿಯಕರ ವಿದ್ವಾನ್ ನಮೋ ಎನ್ನ ಕುಂದು
ನೀಗಿಸಿ ಪೊರೆ ಮಹಾದ್ಯುತಿಯೇ ಅ.ಪ

ಪ್ರಿಯಂಗುಕಲಿಕಾ ಶಾಮರೂಪಿಯೆ ಚಾರ್ವಾಂಗ –

– ಬುಧನೇ ನಿನಗೆಣೆಯುಂಟೇ
ಸೌಮ್ಯನೆ ಸೌಮ್ಯಗುಣವಂತನೇ ನಮೋ ಶಶಿಸುತ
– ದಯದಿಂ ಪಾಲಯಮಾಂ ೧

ಅಂಬುವು ಚೂರ್ಣಪಿಂಡೀ ಭಾವ ಹೇತುವಾಗಿಹುದು –
– ನೀ ಅಂಬು
ಅಭಿಮಾನಿ ಮಹ ಪಂಡಿತನಾದುದರಿಂದ ಬೇಡುವೆ –
– ನಿನ್ನ ವಿನಯದಲಿ ೨

ಅಂಬುವತ್ ಜ್ಞಾನಯುಕ್ ಸ್ನೇಹಾನುರಾಗ ಎಂಬ –
– ಭಕ್ತಿ ಅಂಬುಜನಾಭ ಬಿಂಬನಲಿ
ಅನುಕಂಪಯಾ ನೀ ಒದಗಿಸೊ ಎನಗೆ ಅಂಭ್ರಣಿಪತಿ
– ಶ್ರೀವ್ಯಾಸಗೆ ಪ್ರಿಯನೆ ೩

ಮೂಲೋಕದಿ ಖ್ಯಾತ ವಿಧುಕುಲ ಪ್ರವರ ನೀ –
– ಬುದ್ಧಿ ಗಾಂಭೀರ್ಯದಿ ಶ್ರೇಷ್ಠನೆಂದು
ಮಾಲೋಲ ಆತ್ಮಜ ನಿನ್ನನು ಬುಧನೆಂದು –
– ನಾಮಕರಣವ ಮಾಡಿದನು ೪

ಹೇಮಗರ್ಭನಪಿತ ಪ್ರಸನ್ನ ಶ್ರೀನಿವಾಸ ಪೂರ್ಣ –
– ಹೊಳೆಯುತಿಹ ನಿನ್ನಲ್ಲಿ
ನಾಮಾತ್ಮಿಕ ಉಷ ಶನಿ ಕರ್ಮಪ ಮೊದಲಾದವರಿಗೆ –
– ವರ ಬುಧನೇ ನಮೋ ನಮೋ ೫

ಶ್ರೀ ಶನೈಶ್ಚರ ಸ್ತೋತ್ರ

೯೬

ಪಾಹಿ ಶ್ರೀನರಸಿಂಹಪ್ರಿಯ ಶನೈಶ್ಚರನೆ ನಮೋ ಸಂತತ
ಪಾಹಿ ನಮೋ ಗ್ರಹರಾಜಶೌರಿ ಮಹೇಶ್ವರನೇ ಕೃಪಾಕರ ಪ

ಪೃಥ್ವಿ ತತ್ವಾಭಿಮಾನಿಯೇ ನಮೋ ಕರ್ಮಪನು ಎಂಬ ಪುಷ್ಕರ
ಮತ್ತು ಅಜಾನಜರು ಋಷಿಗಂಧರ್ವ ಮಹಾಸಮುದಾಯಕೆ
ಮೇದಿನೀ ರಾಜರು ಮನುಷ್ಯರು ಸರ್ವರಿಗೂ ಗುರು ಈಶ್ವರ
ನೀ ದಯದಿ ಹರಿದಾಸರನ್ನ ಸಲಹುತಿಯೋ ಶರಣೆಂಬೆನೋ ೧

ಸೂರ್ಯಛಾಯಸೂನು ಕಾಲರೂಪಿ ಮಹಾಗ್ರಹ ನಮೋ
ಕಾಯೊ ಜಟಿಲನೇ ವಜ್ರ ರೋಮನೇ ದಾನವರಿಗೆ ಭಯಂಕರ
ತ್ರ್ಯಯಂಬಕ ನಾರದರಿಗುಪದೇಶಿಸಿ ಕೊಂಡಾಡಿದ ನಿನ್ನನ್ನು
ಖ್ಯಾತ ರಘುವಂಶೋತ್ಥ ಅತಿ ವಿಖ್ಯಾತ ದಶರಥ ಕೀರ್ತಿತ ೨

ಜ್ಞಾನ ಚಕ್ಷುರ್ನಮಸ್ತೇಸ್ತು ಕಶ್ಯಪಾತ್ಮಜಸೂನವೇ
ತುಷ್ಟೋದದಾಸಿ ವೈರಾಜ್ಯಂ ರುಷ್ಟೋ ಹರಸಿ ತತ್ಕ್ಷಣಾತ್
ನಿನ್ನನು ದಶರಥನು ಸ್ತುತಿಸಿ ನಮಿಸೆ ವರಗಳನಿತ್ತು ನೀ
ಕ್ಷೋಣಿಜನ ಸಂರಕ್ಷಣೆಗೆ ಬಗೆ ಪಾದ್ಮ ಉಕ್ತದಿ ಅರುಹಿದಿ ೩

ಗಂಗಾ ಮಹಿಮ ರಕ್ಷೋ ಭುವನ ಪ್ರಸ್ಥಾನೋಕ್ತವು ತ್ವತ್‌ಕೃತ
ತುಂಗ ಮಹಿಮ ಶ್ರೀಲಕ್ಷ್ಮೀ ಭೂಮಾನಾರಸಿಂಹನ ಸ್ತೋತ್ರವು
ರಾಘವಕೃತ ತ್ವತ್‌ಕೃತ ಈ ನುಡಿಗಳ್ ಪಠಿಸಿ ಕೇಳ್ವರ್ಗೆ
ಶೋಕನೀಗಿ ಇಷ್ಟ ಲಭಿಸುವುದು ನೃಹರಿಪ್ರಿಯ ನೀ ಒದುಗುವಿ ೪

ವನರುಹಾಸನನ ತಾತ ಪ್ರಸನ್ನ ಶ್ರೀನಿವಾಸ ನೃಕೇಸರಿ
ಘನ್ನದಯದಿ ಪ್ರಸನ್ನನಾಗಿ ಒಲಿಯೆ ಸಾಧನವಾಗುವ
ಜ್ಞಾನ ಭಕ್ತಿ ವೈರಾಗ್ಯ ಸಂಪತ್ ಅಯುರಾರೋಗ್ಯ ಇತ್ತು ನೀ
ಎನ್ನ ತಪ್ಪುಗಳ ಮನ್ನಿಸಿ ಎನ್ನ ಪಾಹಿ ಸತತ ಶನೈಶ್ಚರ ೫ ಪ

ಲೋಕಪಾಲಕರು

೯೬–೧

ಪೂರ್ಣ ಸುಗುಣಾಂಬೋಧಿ ಅನಘ ಲಕ್ಷ್ಮೀರಮಣ
ಜ್ಞಾನಾದಿ ನಿಖಿಳ ಸೌಭಾಗ್ಯದನೆ ಸ್ವಾಮಿ
ಅನವರತ ಸರ್ವ ದಿಕ್ಪಾಲಕರೊಳಿದ್ದು ನೀ
ಎನ್ನ ರಕ್ಷಿಪ ವಿಭುವೆ ಶರಣು ಮಾಂ ಪಾಹಿ ಪ

ಇಂದ್ರಾಗ್ನಿ ಯಮ ನಿಯರುತಿ ವರುಣ ವಾಯು
ಚಂದ್ರ ನಿಧಿಪತಿ ಈಶಾನ ಫಣಿ ಬ್ರಹ್ಮ
ಇಂದಿರಾಪತಿ ಸದಾ ನಿಮ್ಮೊಳು ನಿಂತು ಆ
ನಂದ ಸರ್ವೇಷ್ಟಗಳ ಈವ ಸ್ಮರಿಪರಿಗೆ ೧

ವಾಮ ಹಸ್ತದಿ ವಜ್ರಬಲ ಕರವು ಅಭಯದವು
ಹೇಮವರ್ಣನೆ ಸಹಸ್ರಾಕ್ಷ ಸುರರಾಜ
ಕಾಮಿತಾರ್ಥವನೀವೆ ಐರಾವತಾರೂಢ
ನಮೋ ಶಚೀಪತಿ ಇಂದ್ರ ಶ್ರೀಶಪ್ರಿಯತರನೆ ೨

ಹೇಮ ವರ್ಣಾಂಗನೆ ಸಪ್ತಕರ ಸಪ್ತಾರ್ಚಿ
ನಮೋ ಸ್ವಾಹಾಪತಿ ಅಗ್ನಿ ಮೇಷವಾಹನನೆ

ಕಾಮದನೆ ದುರಿತಹನೆ ಹರಿಣೀಶಪ್ರಿಯಕರನೆ
ನಮೋ ಧ್ರುವಾಶಕ್ತ್ಯಾದಿಧರ ಅಭಯಹಸ್ತ ೩

ಜ್ಞಾನಸುಖಮಯ ವಿಷ್ಣುಯಜ್ಞನಿಗೆ ಪ್ರಿಯತರನೆ
ಕೃಷ್ಣವರ್ಣನೆ ಲೋಕಕರ್ಮಫಲಪ್ರದನೆ
ದಂಡಧರ ಅಭಯದನೆ ಮಹಿಷವಾಹನ ಯಮನೆ
ಎನ್ನ ಮನ್ನಿಸಿ ಪೊರೆ ಇಲಾಪತಿಯೆ ಶರಣು ೪

ಅಸುರರಿಗೆ ಭೀಕರ ಕರಾಲ ವಿರೂಪಾಕ್ಷನೆ
ಅಸಿಧರನೆ ಅಭಯದನೆ ಶರಣು ಮಾಂ ಪಾಹಿ
ನೃಸಿಂಹಪ್ರಿಯತರನೆ ಕಾಳಿಕಾಪತಿ ಊರ್ಧ್ವ
ಕೇಶ ನಿಋುತಿ ನೀಲ ನರವಾಹ ನಮಸ್ತೆ ೫

ಮೀನ ವಡವ ಕಮಠ ಕ್ರೋಡನಿಗೆ ಪ್ರಿಯತರನೆ
ಸ್ವರ್ಣವರ್ಣನೆ ವರುಣ ಪದ್ಮಿನೀರಮಣ
ವನಪತಿಯೆ ಮಕರವಾಹನ ಹವಳಭೂಷಣನೆ
ನಿನಗೆ ನಮೋ ಪಾಶಧರ ಅಭಯದನೆ ಪಾಹಿ ೬

ನಿಯಮನ ಸುಕರ್ತಾ ಶ್ರೀ ಪುಂಡರೀಕಾಕ್ಷನಿಗೆ
ಪ್ರಿಯತರನೆ ಹರಿಣವಾಹನ ಮೋಹಿನೀಶ
ಶ್ಯಾಮವರ್ಣನೆ ವಾಯು ಜಗತ್ ಪ್ರಾಣರೂಪನೆ
ಕಾಯೆನ್ನ ದಯದಿ ಗದಾಪಾಣಿ ಅಭಯದನೆ ೭

ಸಾರಾತ್ಮ ಹಯಮುಖ ಧನ್ವಂತರಿ ಪ್ರಿಯತರನೆ
ಸೂರಿಜನ ಚಿಂತ್ಯ ನೀ ಸಿತಕಾಂತಿ ಕಾಯ
ಪೊರೆ ಎನ್ನ ಅಭಯದನೆ ರೋಹಿಣೀಪತಿ ಸೋಮ
ಪುರುಟಭೂಷಣ ಸುಖದ ಕುಮುದಸದ್ಮಸ್ಥ ೮

ಸೌಭಾಗ್ಯ ಸಾರಾತ್ಮ ಶ್ರೀಯಃಪತಿಗೆ ಪ್ರಿಯತರನೆ
ವಿಪರತ್ನನಿಭ ಯಕ್ಷ ವೈಶ್ರವಣ ಪಾಹಿ
ಕುಬೇರ ನಿಧಿಪತಿ ಧನಧಾನ್ಯಾಧಿಪತೇ ನಮೊ
ಸೌಭಾಗ್ಯ ಧನ ಧಾನ್ಯ ಸಮೃದ್ಧಿ ಎನಗೀಯೊ ೯

ಮನುಜವಾಹ್ಯವು ವರವಿಮಾನದಿ ಕುಳಿತಿಹೆ
ಅನಲಾಕ್ಷ ಶಂಖಗದಾಧರ ನಮೋ ಕಿರೀಟಿ
ಎನ್ನ ತಪ್ಪುಗಳನ್ನು ಮನ್ನಿಸಿ ಹರಿಭಕ್ತಿ
ಧನಧಾನ್ಯ ಆರೋಗ್ಯ ಸೌಂದರ್ಯವೀಯೊ ೧೦

ನಿರ್ದೋಷ ಸುಖಮಯ ಜಯೇಶನಿಗೆ ಪ್ರಿಯತರನೆ
ನೀ ದಯದಿ ಸಲಹೆನ್ನ ಈಶಾನ ಶೂಲಿ
ಸದಾಶಿವನೆ ಭಕ್ತರಿಂ ಅರ್ಚ್ಯನ್ನ ಸೇವ್ಯನೆ
ಸದಾ ಅಭಯ ಎನಗಿತ್ತು ಪೊರೆಯೊ ಗೌರೀಶ ೧೧

ಆನಂದರೂಪ ಸಂಕರ್ಷಣ ಅನಂತನಿಗೆ
ಅನಂತ ನೀ ಪ್ರಿಯತರನು ಶುಕ್ಲವರ್ಣ
ನಿನ್ನ ಸತಿ ವಾರುಣೀಸಮೇತ ಅಭಯದನಾಗಿ
ಎನ್ನ ಪೊರೆ ಕೃಷ್ಟಿಧರ ನಮೋ ನೀಲವಾಸ ೧೨

ಜಗದೀಶ ಭೂರಮಣ ಕೇಶವ ಸುಪ್ರಿಯತಮನೆ
ಜಗದಾದ್ಯ ಬ್ರಹ್ಮ ಸರಸ್ವತೀಸಮೇತ
ಖಡ್ಗಧರ ಅಭಯದನೆ ನಮೋ ರಕ್ತವರ್ಣನೆ
ಮುಗಿದು ಕರ ಶರಣಾದೆ ಪೊರೆ ಪಿತಾಮಹನೆ ೧೩

ಐಶ್ವರ್ಯ ಆಯುಷ್ಯ ನೀತಿ ಜಯ ಅಪಿಪಾಸ
ಪಾವಿತ್ರ್ಯ ಸುಖ ವಿತ್ತ ಜ್ಞಾನ ವಿಜ್ಞಾನ
ಈವೋರು ಇವು ಸರ್ವ ಶ್ರವಣ ಪಠಣವ ಮಾಡೆ
ವಿಶ್ರವ ಕಾಶ್ಯಪ ಲೋಕಪಾಲಕರು ದಯದಿ ೧೪

ಇಂದ್ರಾಗ್ನಿ ಯಮ ನಿಋುಋುತಿ ವರುಣ ಪ್ರವಹಸ್ಥ
ಚಂದ್ರ ವೈಶ್ರವಣ ಈಶಾನ ಅನಂತಸ್ಥ
ಮಂದಜಾಸನಪಿತ ಪ್ರಸನ್ನ ಶ್ರೀನಿವಾಸನು
ಕುಂದದ ಸೌಭಾಗ್ಯವನು ಈವ ಕರುಣಾಳು ೧೫

ಶ್ರೀ ಶುಕಮುನಿ ಸ್ತೋತ್ರ (ಗುಪ್ತ)

೯೭

ಶರಣು ಶುಕಮುನಿರಾಯ ಶರಣು ಮಾಂಪಾಹಿ ಪ

ಕಾರ್ತಿಕ ಸಿತತದಿಗೆ ಗುರುಬ್ರಾಹ್ಮಿ ಶ್ರವಣದಲಿ
ಅತಿವಿಮಲ ತವರೂಪ ತೋರಿದಿಯೋ ಕರುಣಿ ೧

ಬಲಿ ಶಕ್ರವರದ ಬಲಿ ಫಲಿಯನೀಕಂಡೆನ್ನ
ಪಾಲಿಪುದಕೆ ದಯದಿ ಬಲದಿಂದ ಬಂದ್ಯಾ ೨

ವೇಧಪಿತ ಪ್ರಸನ್ನ ಶ್ರೀನಿವಾಸನ ಗುಣಗಾನ
ಸ್ವಾದು ಸುಧೆ ಸುರಿಸುತ್ತ ಶ್ರೀ ವಿಜಯ ಕೊಡುತಿ ೩

॥ ಶ್ರೀಮಧ್ವಾಂತರ್ಗತ ಕೃಷ್ಣಾರ್ಪಣಮಸ್ತು ॥

ಶ್ರೀ ಪದ್ಮನಾಭ ತೀರ್ಥರ ವಿಜಯ

೯೮

ಗುರುವರ್ಯ ಶ್ರೀ ಪದ್ಮನಾಭ ತೀರ್ಥರ ದಿವ್ಯ ।
ಚರಣ ಪದ್ಮಗಳಲ್ಲಿ ಶರಣಾದೆ ಸತತ ॥
ಸುರ ನಿಕರ ಶಿವ ಮಧ್ವ ವಿಧಿನುತ ಪಾದಾಂಬುಜ ।
ಶ್ರೀ ಕರಾರ್ಚಿತ ಪದ್ಮನಾಭನಿಗೆ ಪ್ರಿಯ ಪ

ಅಶೇಷ ಗುಣಗಣಾಧಾರ ಶ್ರೀಪತಿ ಅನಘ ।
ಹಂಸ ಪರಮಾತ್ಮನೇ ಮೂಲ ಗುರು ಅಗುರು ॥
ಹಂಸ ಬೋಧಿತ ವಿಧಿ ಸನಕಾದಿ ಯೋಗಿವರ ।
ವಂಶಜಾಚ್ಯುತಪ್ರೇಕ್ಷ ಸರ್ವರಿಗು ನಮಿಪೆ ೧

ಅಚ್ಯುತಪ್ರೇಕ್ಷಾಖ್ಯ ಪುರುಷೋತ್ತಮಾರ್ಯ ಕರ ।
ತೋಯಜೋದ್ಭವ ಆನಂದ ತೀರ್ಥರಿಗೆ ॥

ಕಾಯವಾಙ್ಮನದಿಂದ ಶರಣಾದೆ ಸತತ ।
ತೋಯಜ ಭವಾಂಡದ ಸಜ್ಜನೋದ್ಧಾರ ೨

ಶ್ರೀ ವರ ಶ್ರೀವ್ಯಾಸನವತಾರಕನುಸರಿಸಿ ।
ಭಾವಿ ಬ್ರಹ್ಮನು ಮುಖ್ಯ ವಾಯುದೇವ ॥
ದೇವೀ ಜಯಾ ಸಂಕರುಷಣಾತ್ಮಜನು ಈ ।
ಭುವಿಯಲಿ ತೋರಿಹನು ಹರಿಯ ಪ್ರಥಮಾಂಗ ೩

ಧೃತಿ ಪ್ರಭಂಜನ ವಾಯು ಸ್ಮರಭರತ ಗುರುವರನು ।
ಮಾತರಿಶ್ವನು ಸೂತ್ರ ಪವಮಾನ ಪ್ರಾಣ ॥
ಮಧ್ವಮುನಿ ಆನಂದತೀರ್ಥರಾಗಿ ಬಂದ ।
ಮೇದಿನಿಯಲ್ಲಿ ಈ ಬ್ರಹ್ಮದಾಮ ೪

ಬಲ ಜ್ಞಾನಾದಿಗಳಲ್ಲಿ ಹ್ರಾಸವಿಲ್ಲವು ಇವಗೆ ।
ಎಲ್ಲ ಅವತಾರಗಳೂ ಸಮವು ಅನ್ಯೂನ ।
ಶುಕ್ಲ ಶೋಣಿತ ಸಂಬಂಧ ಇಲ್ಲವೇ ಇಲ್ಲ ।
ಇಳೆಯಲ್ಲಿ ಜನಿಸಿದ ಹನುಮ ಭೀಮ ಮಧ್ವ ೫

ಮಧ್ವನ್ನ ಒಲಿಸಿ ಕೊಳ್ಳದೇ ಇರುವ ಜನರಿಗೆ ।
ಬಂಧ ಭಯ ನಿವೃತ್ತಿಯು ಸದ್ಗತಿಯು ಇಲ್ಲ ।
ಮಾಧವ ಶ್ರೀಹರಿಯ ಪರಮ ಪ್ರಸಾದವು ।
ಮಧ್ವ ಒಲಿದರೆ ಉಂಟು ಅನ್ಯಥಾ ಇಲ್ಲ ೬

ಮಾಲೋಲ ಶ್ರೀರಾಮಕೃಷ್ಣ ಪ್ರೀತಿಗಾಗಿಯೇ ।
ಬಲಕಾರ್ಯ ಮಾಡಿದ ಹನುಮಂತ ಭೀಮ ।
ಕಲಿಯುಗದಿ ಈ ಭೀಮ ಅವತಾರ ಮಾಡಿಹನು ।
ಕಲಿಮಲಾಪಹ ಜಗದ್ಗುರು ಮಧ್ವನಾಗಿ ೭

ಮಣಿಮಂತ ಮೊದಲಾದ ಕಲಿಯ ಪರಿವಾರಗಳು ।
ಕ್ಷೋಣಿಯಲ್ಲಿ ಪುನರ್ಜನಿಸಿ ಕಲಿಯುಗದಲ್ಲಿ ।

ಆಮ್ನಾಯ ನಿಗಮತತಿ ಸತ್ತತ್ವವಿರುದ್ಧ ।
ಶೂನ್ಯ ಮಾಯಾವಾದಾದಿಗಳು ಹರಡಿರಲು ೮

ಒಳ್ಳೆ ಜನರಂತೆ ನಟಿಸುತ್ತ ದುರ್ಮತಗಳ ।
ಇಳೆಯಲ್ಲಿ ಪ್ರಸರಿಸೆ ಸುಜನರ ಮನಸು ।
ಮೆಲ್ಲಮೆಲ್ಲನೆ ಹರಿ ತತ್ವವನು ಮರೆಯಲು ।
ಮಾಲೋಲ ಆಜ್ಞೆಯಿಂ ಜನಿಸಿದ ಮಧ್ವ ೯

ಮಧ್ವಗೇಹಾಚಾರ್ಯ ಪಂಡಿತರ ಮನೆಯಲ್ಲಿ ।
ನಿರ್ದೋಷ ರೀತಿಯಲ್ಲಿ ಜನಿಸಿ ಈ ಮಧ್ವ ।
ವೈದಿಕ ಸತ್ತತ್ವ ವಾದವನು ಸುಜನರಿಗೆ ।
ಬೋಧಿಸಿ ಅವರ ಹೃತ್ತಿಮಿರ ಕಳೆದ ೧೦

ಬದರಿಗೆ ಪೋಗಿ ಶ್ರೀವೇದವ್ಯಾಸನಕಂಡು ।
ವೇದವ್ಯಾಸಾಭಿಪ್ರಾಯದಲೆ ಮೂಲ ।
ಗ್ರಂಥ ಮೂವತ್ತೇಳ ಮಾಡಿ ಅಧಿಕಾರಿಗಳ ।
ಉದ್ಧಾರ ಮಾಡಿಹ ಕಾರುಣ್ಯ ಶರಧಿ ೧೧

ಆ ಸೇತು ಹಿಮಗಿರಿ ಬದರಿಕಾಶ್ರಮ ಕ್ಷೇತ್ರ ।
ವಸುಧೆಯ ಸಮಸ್ತ ಕಡೆ ಪೋಗಿ ಅಲ್ಲಲ್ಲಿ ।
ದುಸ್ತರ್ಕ ದುರ್ಮತ ಅಟವಿಗಳ ಛೇಧಿಸಿ ।
ಶ್ರೀಶನ್ನ ಒಲಿಸಿದ ಸುಜನವೃಂದಕ್ಕೆ ೧೨

ಈ ರೀತಿ ದಿಗ್ವಿಜಯ ಮಾಡಿ ಮಾರ್ಗದಲ್ಲಿ ।
ಭಾರೀ ಪಂಡಿತರುಗಳೂ ರಾಜಪ್ರಮುಖರೂ ।
ಪೌರ ಜನರುಗಳಿಂದ ಮರ್ಯಾದೆ ಕೊಳ್ಳುತ್ತ ।
ಸೇರಿದರು ಗೋದಾವರೀ ತೀರಕ್ಷೇತ್ರ ೧೩

ಶೀಷ್ಯರ ಸಹ ಮಧ್ವ ಮುನಿಗಳು ಬರುವುದು ।
ಆ ಕ್ಷೇತ್ರದಲ್ಲಿ ಪ್ರಖ್ಯಾತ ಪಂಡಿತರು ।
ಈಕ್ಷಿಸಿ ಮರ್ಯಾದೆಯಿಂದ ಸ್ವಾಗತವಿತ್ತು ।
ಅಪೇಕ್ಷಿಸಿದರು ತತ್ವವಾದ ನಿರ್ಣಯಗಳ ೧೪

ಆನಂದ ತೀರ್ಥ ಮಧ್ವಾಚಾರ್ಯ ರಚಿಸಿದ್ದ ।
ಆನಂದಪ್ರದ ಬ್ರಹ್ಮಸೂತ್ರ ಭಾಷ್ಯವನು ।
ದಿನವೂ ಸತ್ಯತೀರ್ಥರು ಪ್ರತಿಗಳ ಮಾಡಿದರು ।
ಘನ ಭಕ್ತಿಯಲ್ಲಿ ಬದರಿಯಿಂದ ಬರುವಾಗ ೧೪

ಹಿಂದೆ ಕುಮತಿಗಳು ಮಾಡಿದ ಕುಭಾಷ್ಯಗಳು ।
ಒಂದು ಮೇಲಿಪ್ಪತ್ತು ಖಂಡಿಸಿ ವೈದಿಕ ।
ಸಿದ್ಧಾಂತ ಸ್ಥಾಪಿಪ ಮಧ್ವ ಭಾಷ್ಯವ ಕುರಿತು ।
ಮಂದಿಗಳು ಅಲ್ಲಲ್ಲಿ ಕೇಳಿಯೇ ಇದ್ದರು ೧೬

ವಾದಿಸಿಂಹನು ಬುದ್ಧಿ ಸಾಗರನು ಇಂಥವರು ।
ಎದುರುನಿಲ್ಲಲು ಶಕ್ಯವಿಲ್ಲದೆ ಓಡಿದ್ದು ।
ಮೊದಲೇವೇಕೇಳಿದ್ದ ಆ ಪಂಡಿತರು ।
ಮಧ್ವಾಚಾರ್ಯರೊಡನೆ ವಾದಿಸೆ ನಿಂತರು ೧೭

ಬೌದ್ಧ ಚಾರ್ವಾಕ ಪ್ರಭಾಕರ ಭಟ್ಟರು ।
ಬುದ್ಧಿ ತೀಕ್ಷ್ಣರು ನೈಯಾಯಿಕರು ವೈಶೇಷಿಕರು ।
ವಾದೀಭ ಕೇಸರಿ ಮಧ್ವರಾಜರ ಮುಂದೆ ।
ಬಿದ್ದರು ಸೋತು ನಿರುತ್ತರರು ಆಗಿ ೧೮

ಅದ್ವೈತ ವಾದಿಗಳೊಳ್ ಪ್ರಖ್ಯಾತ ಪ್ರವರ ।
ವಿದ್ವಚ್ಛಿರೋಮಣಿ ಶೋಭನ ಭಟ್ಟ ।
ಮಧ್ವಚಾರ್ಯರೊಡೆ ವಾದಿಸಲು ನಿಂತರು ।
ಅಧ್ಯಕ್ಷಮಧ್ವಸ್ಥ ಸಭೆ ಕೂಡಿಸಿದರು ೧೯

ವೈದಿಕ ಎಂದೆನಿಪ ಮತಗಳ ಶಾಖೆಗಳು ।
ಹದಿನೆಂಟು ಪ್ರತಿನಿಧಿ ವಿದ್ವದ್ ರತ್ನಗಳು ।
ಬಂದು ತುಂಬಿದರು ಈ ದೊಡ್ಡ ಸಭೆಯಲ್ಲಿ ।
ಅದ್ವೈತದ್ವೈತವಾದಗಳ ಕೇಳಲಿಕೆ ೨೦

ಗೋದಾವರಿ ಸರಿಚ್ಛ್ರೇಷ್ಠ ತೀರಸ್ಥ
ಉದ್ದಾಮ ಪಂಡಿತಾಗ್ರಣಿ ಶೋಭನರು ।
ವಾದಿಸುವ ವೈಖರಿ ನೋಡಲು ಬಹುಮಂದಿ ।
ವಿದ್ವಜ್ಜನರಿಂದ ತುಂಬಿತು ಸಭೆಯು ೨೧

ಅದ್ವೈತವಾದದ ಪ್ರಕಿಯಾ ಸೂಕ್ಷ್ಮಗಳ ।
ಮುಂದಿಟ್ಟು ಶೋಭನರು ವಾದಮಾಡಿದ್ದು ।
ಮಧ್ವರ ಪ್ರಾಮಾಣೀಕ ಶಕ್ತಿಯುತವಾದ ।
ವಾಗ್ಧಾರಾ ರಭಸದಲಿ ಬಿದ್ದಿತು ಸೋತು ೨೨

ಖೇದವಾಗಲೇ ಇಲ್ಲ ತನ್ನ ಸೋಲಿಂದ ।
ಮೋದವಾಯಿತು ಮನಕೆ ತತ್ವನಿರ್ಣಯದಿ ।
ವೈದಿಕವು ಮಧ್ವ ಮತವೇವೆ ನಿಜಸುಖ ಪ್ರದವು ।
ಎಂದು ಭಟ್ಟರು ಮಾಯಿ ಮತವ ತ್ಯಜಿಸಿದರು ೨೩

ಹಿಂದೆ ತ್ರಿವಿಕ್ರಮಾಚಾರ್ಯರಿಗಾದಂತೆ ।
ಇಂದು ಶೋಭನಭಟ್ಟ ಮಧ್ವಮುನಿಯಿಂದ ।
ಸತ್ತತ್ವ ನಿರ್ಣಯಹೊಂದಿ ಸನ್ನಮಿಸಿ ।
ಸದ್ವೈಷ್ಣವ ದೀಕ್ಷೆ ಅನುಗ್ರಹ ಬೇಡಿದರು ೨೪

ಬಹು ಸಂಖ್ಯಾತ ಮಾಯಿಗಳು ಭಟ್ಟರಿಗೆ ।
ಐಹಿಕ ಧನದ್ರವ್ಯ ಪೂಜೆ ಮರ್ಯಾದೆ ।
ಅಹರಹ ಒದಗಿಸುವರನ್ನ ಸಂತ್ಯಜಿಸಿ ।
ಮಹಾಪುರುಷೋತ್ತಮದಾಸರ ಸೇರಿದರು ೨೫

ಮಹಾಪುರುಷೋತ್ತಮದಾಸರು ಮಧ್ವಮುನಿ ।
ಮಹಾ ವೈರಾಗ್ಯಯುತ ಭಕ್ತಿಮಾನ್ ಭಟ್ಟಗೆ ।
ಅಹಿಶಾಯಿ ವನರುಹ ನಾಭನ್ನ ಒಲಿಸಿ ।
ಬಹು ವೈಭವದಿಂದ ಇತ್ತರು ಸಂನ್ಯಾಸ ೨೬

ಈ ಪುಣ್ಯ ಶ್ಲೋಕ ಶೋಭನ ಭಟ್ಟ ಆರ್ಯರಿಗೆ ।
ಶ್ರೀ ಪದ್ಮನಾಭತೀರ್ಥರು ಎಂಬ ನಾಮ ।
ಶ್ರೀ ಪೂರ್ಣಪ್ರಜ್ಞ ಮಧ್ವಾಚಾರ್ಯರು ಇತ್ತು ।
ಉಪದೇಶಮಾಡಿದರು ಪ್ರಣವಾದಿಮಂತ್ರ ೨೭

ಗೋಪಿವಲ್ಲಭ ವಿಠ್ಠಲನ್ನ ಪೂಜಿಸಲು ।
ಗೋಪಿವಲ್ಲಭ ವಿಠ್ಠಲ ಪ್ರತಿಮೆಯನ್ನ ।
ಶ್ರೀ ಪೂರ್ಣಪ್ರಜ್ಞರು ಈ ಹೊಸಾಯತಿಗೆ ।
ಕೃಪೆಮಾಡಿ ಇತ್ತರು ವಾತ್ಸಲ್ಯದಿಂದ ೨೮

ಆನಮಿಪೆ ಶ್ರೀ ಗೋಪಿನಾಥ ವಿಠ್ಠಲನ ।
ಜ್ಞಾನ ಆನಂದಮಯ ಪಾದಯುಗ್ಮಕ್ಕೆ ।
ಪೂರ್ಣಜ್ಞಾನಾತ್ಮನು ಪೂರ್ಣಐಶ್ವರ್ಯಾತ್ಮ ।
ಪೂರ್ಣ ಪ್ರಭಾನಂದ ತೇಜಶ್ಯಕ್ತ್ಯಾತ್ಮ ೨೯

ಮಧ್ವರಾಯರು ಉಡುಪಿ ಕೃಷ್ಣನ್ನ ಪೂಜಿಸಲು ।
ಯತಿಮಠ ಎಂಟರ ನೇಮಿಸಿ ತಮ್ಮ ।
ಆದಿಮಠ ಆಡಳಿತ ಪದ್ಮನಾಭರಿಗಿತ್ತು ।
ಬದರಿಗೆ ಪೋದರು ಶ್ರೀಶ ವ್ಯಾಸನಲಿ ೩೦

ವೇದಾಂತ ಸಾಮ್ರಾಜ್ಯ ಪೀಠವನ್ನೇರಿ ।
ಪದ್ಮನಾಭತೀರ್ಥರು ತಮ್ಮಯ ಶಿಷ್ಯ ।
ಯತಿವರ್ಯ ಲಕ್ಷ್ಮೀಧರ ತೀರ್ಥರಿಗೆ ।
ಇತ್ತರು ಶ್ರೀ ಗೋಪಿನಾಥವಿಠ್ಠಲನ್ನ ೩೧

ಶ್ರೀಪದ್ಮನಾಭತೀರ್ಥರ ಲಕ್ಷ್ಮೀಧರರ ।
ಸುಪುಣ್ಯ ಸಂತತಿಗೆ ನಮೋ ನಮೋ ಎಂಬೆ ।
ಶ್ರೀಪಾದರಾಜ ಲಕ್ಷ್ಮೀನಾರಾಯಣ ।
ಕೃಪಾನಿಧಿ ಪ್ರಖ್ಯಾತರೀವಂಶದವರು ೩೨

ಗೋದಾವರೀ ಎಂಬ ಸರಿದ್ವರ ದೇವಿಗೆ ।
ಸದಾ ನಮೋ ಪಾಪಹರೆ ಸಂಪದ್ವದಾತೆ ।

ಸಾಧು ಜನ ಸುಪ್ರಿಯೆ ಶೋಭನ ಭಟ್ಟರ ।
ವರ್ಧಿಸಿಹಳು ಪೋಷಿಸಿ ತನ್ನ ತೀರದಿ ೩೩

ಬ್ರಹ್ಮಾನುಗ್ರಹಿ ಪದ್ಮನಾಭತೀರ್ಥರು ।
ಶ್ರೀಮಧ್ವರಾಯರ ಪೀಳಿಗೆಯೊಳ್ ಪ್ರವರ ।
ಈ ಮಹಾವೇದಾಂತ ಚಕ್ರವರ್ತಿಗೆ ಪರಾಕ್ ।
ಎಮಗೆ ವಿಜ್ಞಾನಾದಿ ಧನವವೀವರಿಗೆ ೩೪

ವನರುಹನಾಭ ವಿರಚಿತ ಗ್ರಂಥಗಳಲ್ಲಿ ।
ಸನ್ಯಾಯ ರತ್ನಾವಳಿಯು ಪ್ರಖ್ಯಾತ ।
ಆನಂದ ತೀರ್ಥಮತ ಆರು ವರ್ಷಗಳಾಳಿ ।
ಮುನಿ ನೃಹರಿ ತೀಥರ್ಗೆ ಇತ್ತರಾಡಳಿತ ೩೫

ತುಂಗಭದ್ರಾದಲ್ಲಿ ನವವೃಂದಾವನ ಕ್ಷೇತ್ರ ।
ತುಂಗಮಹಿಮರು ವೃಂದಾವನದಿ ಕುಳಿತಿಹರು ।
ಗಂಗಾಜನಕ ಪ್ರಿಯ ಜಗನ್ಮಾನ್ಯರಿವರ ।
ಅಂಘ್ರಿಪದ್ಮವ ನೆನೆಯೆ ಸೌಭಾಗ್ಯಲಾಭ ೩೬

ಸುರ ನಿಕರ ಶಿವಮಧ್ವ ವಿಧಿನುತ ಪದಾಂಭೋಜ ।
ಶ್ರೀಕರಾರ್ಚಿತ ಶ್ರೀ ಪ್ರಸನ್ನ ಶ್ರೀನಿವಾಸ ॥
ಸರಸಿಜಾಸನ ಪಿತನಿಗೆ ಪ್ರಿಯ ಯತೀಂದ್ರರೇ ।
ಶಿರಿಪದ್ಮನಾಭ ತೀರ್ಥರೇ ಶರಣು ಪಾಹಿ ೩೭ ಪ

ಶ್ರೀ ನರಹರಿ ತೀರ್ಥ ವಿಜಯ

೯೯

ಪ್ರಥಮ ಕೀರ್ತನೆ

ಯೋಗಾನಂದ ನರಹರಿ ರಾಮಪ್ರಿಯತಮರು
ಯೋಗಿವರ ನರಹರಿತೀರ್ಥರ ಪಾದ

ಯುಗ್ಮ ವನರುಹದಿ ನಾ ಶರಣಾದೆ ಸಂತತ
ಅಗಲದೇ ಎನ್ನ ಬದಿ ಇದ್ದು ರಕ್ಷಿಪರು ಪ

ಅಶೇಷ ಗುಣಗಣಾಧಾರ ವಿಭು ಶ್ರೀ ರಮಣ
ಹಂಸ ನಾಮಕ ಪರಮಾತ್ಮನಿಗೆ ನಮಿಪೆ
ಹಂಸ ಬೋಧಿತ ವಿಧಿಗೆ ತತ್ ಶಿಷ್ಯ ಸನಕಾದಿ
ವಂಶಜ ಗುರುಗಳು ಸರ್ವರಿಗು ನಮಿಪೆ ೧

ಅಚ್ಯುತ ಪ್ರೇಕ್ಷಾಖ್ಯ ಪುರುಷೋತ್ತಮಾರ್ಯ ಕರ
ತೋಯಜೋತ್ಪನ್ನ ಆನಂದ ತೀರ್ಥರಿಗೆ
ಕಾಯ ವಾಙ್ಮನದಿಂದ ಶರಣಾದೆ ಸಂತತ
ತೋಯಜ ಭವಾಂಡದ ಸಜ್ಜನೋದ್ಧಾರ ೨

ಶ್ರೀವರ ವೇದವ್ಯಾಸನವತಾರಕನುಸರಿಸಿ
ಭಾವಿ ಬ್ರಹ್ಮನು ಮುಖ್ಯ ವಾಯುದೇವ
ದೇವೀ ಜಯಾ ಸಂಕರ್ಷಣಾತ್ಮಜನು ಈ
ಭುವಿಯಲ್ಲಿ ತೋರಿಹ ಆನಂದ ತೀರ್ಥ ೩

ಮಾಲೋಲ ಶ್ರೀ ರಾಮಕೃಷ್ಣ ಪ್ರೀತಿಗಾಗಿಯೇ
ಬಲ ಕಾರ್ಯ ಮಾಡಿದ ಹನುಮಂತ ಭೀಮ
ಕಲಿಯುಗದಿ ಈ ಭೀಮ ಅವತಾರ ಮಾಡಿಹನು
ಕಲಿ ಮಲಾಪಹ ಜಗದ್ಗುರು ಮಧ್ವನಾಗಿ ೪

ಶ್ರೀ ಮಧ್ವ ಅನಂತ ತೀರ್ಥಕರ ಅಬ್ಜಜರು
ಪದ್ಮನಾಭ ನೃಹರಿ ಮಾಧವಾಕ್ಷೋಭ್ಯ
ಈ ಮಹಾ ಗುರುಗಳು ಸರ್ವರಿಗು ಆ ನಮಿಪೆ
ಸುಮನಸ ಶ್ರೇಷ್ಠರು ಮಹಿಯಲ್ಲಿ ಪುಟ್ಟಿಹರು ೫

ಶ್ರೀ ಮಹಾ ಪುರುಷೋತ್ತಮದಾಸರೆಂದೆನಿಪ
ಶ್ರೀ ಮಧ್ವ ಮುನಿಗಳ ಶಿಷ್ಯ ಸಂತತಿಗೂ

ಸುಮಹಿಮ ಹರಿದಾಸವರ್ಯರು ಸರ್ವರಿಗು
ಸನ್ಮನದಿ ಆ ನಮಿಪೆ ಸಂತೈಪರೆಮ್ಮ ೬

ಆ ಸೇತು ಹಿಮಗಿರಿ ಬದರಿಕಾಶ್ರಮಕ್ಷೇತ್ರ
ವಸುಧೆಯ ಸಮಸ್ತಕಡೆ ಪೋಗಿ ಅಲ್ಲಲ್ಲಿ
ದುಸ್ತರ್ಕ ದುರ್ಮತ ಅಟವಿಗಳ ಛೇದಿಸಿ
ದಶಪ್ರಮತಿ ಮಧ್ವಮುನಿ ಒಲಿದರು ಸುಜನರ್ಗೆ ೭

ಈ ರೀತಿ ದಿಗ್ವಿಜಯ ಮಾರ್ಗದಲಿ ಮಧ್ವ
ರಾಯರ ಸಂಗಡ ವಾದಕ್ಕೆ ನಿಂತು ।
ಭಾರಿ ಪಂಡಿತ ರತ್ನಶೋಭನ ಭಟ್ಟನು
ಶರಣಾಗಿ ಮಧ್ವರಾಯರ ಶಿಷ್ಯನಾದ ೮

ಶೋಭನ ಭಟ್ಟಾಖ್ಯ ಈಗುಣಗ್ರಾಹಿಯು
ಶುಭಪ್ರದೆ ಲೋಕ ಪಾವನಿ ವೃದ್ಧ ಗಂಗೆ
ಎಂಬುವ ಗೋದಾವರೀ ತೀರದಲಿ ಮಧ್ವ
ಅಬ್ಜಹಸ್ತದಿಕೊಂಡ ತುರ್ಯಾಶ್ರಮ ೯

ಸತ್ತತ್ವವಾದದ ಸೊಬಗನ್ನ ಮಧ್ವ
ವದನಾಂಬುಜದಿಂದ ಕೇಳಿ ಸುಪವಿತ್ರ
ಪದ್ಮನಾಭ ತೀರ್ಥಾಖ್ಯ ನಾಮವ ಹೊಂದಿದ
ಮುದದಿಂದ ಈ ಮಹಾತ್ಮನು ಶೋಭನನು ೧೦

ಕಳಿಂಗ ರಾಜನ ಮಂತ್ರಿಯ ಕುಮಾರನು
ಶೀಲತಮ ಹರಿಭಕ್ತಸ್ವಾಮಿ ಶಾಸ್ತ್ರಿ
ಬಾಲ ವಯಸ್ಸಲ್ಲೇವೆ ಸಿರಿತನದಾಮೋಹಾದಿ
ಲೀಲಾವಿನೋದ ಚಟುವಟಿಕೆ ತೊರೆದವನು ೧೧

ವಿಧಿಯುಕ್ತ ಉಪನಯನ ಶಾಸ್ತ್ರಾಭ್ಯಾಸವ
ವೇದ ವೇದಾಂತ ವಿದ್ಯೆ ಸರ್ವ ಹೊಂದಿ
ಗೋದಾವರಿ ಕ್ಷೇತ್ರ ಎಲ್ಲೆಲ್ಲೂ ಈತನು
ವಿದ್ವಚ್ಛಿರೋಮಣಿ ಎಂದೆನಿಸಿಕೊಂಡ ೧೨

ರಾಮ ಮಹೇಂದ್ರ ಪುರ ಪ್ರಾಂತ್ಯಸ್ಥವಾದಿ
ಗಜ ಸಿಂಹ ಶೋಭನ ಭಟ್ಟನು ಈಗ
ತ್ರಿಜಗದ್ಗುರು ಮಧ್ವರಿಂ ಅನುಗ್ರಹವಕೊಂಡದ್ದು
ನಿಜ ಹರುಷದಿ ಕೇಳಿದ ಶ್ಯಾಮ ಶಾಸ್ತ್ರಿ ೧೩

ಹಿತಕರ ಈಸುದ್ದಿ ಕೇಳಲಿಕ್ಕೇವೆ
ಕಾದಿದ್ದ ಶ್ರೀಮಂತ ಈ ಶ್ಯಾಮ ಶಾಸ್ತ್ರಿ
ಬಂದು ಶ್ರೀಮಧ್ವರಲಿ ಕರಮುಗಿದು ಸನ್ನಮಿಸಿ
ಒದಗಿ ಪಾಲಿಸಿ ಸೇವೆ ಕೊಳ್ಳಬೇಕೆಂದ ೧೪

ಉತ್ತಮ ದೇವಾಂಶನು ನಿಜ ಸಹಜ ಭಕ್ತಿಮಾನ್
ಸುದೃಢ ಜ್ಞಾನಿಯು ಋಜುಮಾರ್ಗ ಚರಿಪ
ಕ್ಷಿತಿಯಲ್ಲಿ ಜನಿಸಿಹ ವೈರಾಗ್ಯನಿಧಿ ಇವ
ಹೊಂದಿದ ತುರ್ಯಾಶ್ರಮ ಮಧ್ವ ಮುನಿದಯದಿ ೧೫

ನರಹರಿ ತೀರ್ಥಾಖ್ಯ ಶುಭತಮನಾಮವ
ಶಾಸ್ತ್ರಿಗೆ ಇತ್ತರು ಆನಂದ ಮುನಿಯು
ಹರಿಸೇವಾ ಕಾರ್ಯಸಿದ್ಧ್ಯರ್ಥ ಆದೇಶದಲೆ
ಇರುವುದು ಎಂದರು ಸರ್ವಜ್ಞ ಮುನಿಯು ೧೬

ಸಾಮ್ರಾಜ್ಯ ಅಧಿಪತ್ಯ ಕಳಿಂಗ ದೇಶದಲಿ
ಚರಿಸುವ ಕಾಲವು ಬರಲಿಕ್ಕೆ ಇದೆಯು
ಶ್ರೀರಾಮ ಸೀತಾ ಮೂರ್ತಿಗಳ ಅಲ್ಲಿಂದ
ತರಲಿಕ್ಕೆ ಇರಬೇಕು ಅಲ್ಲಿಯೇ ಎಂದರು ೧೭

ಗಜಪತಿ ರಾಜನ ಅರಮನೆಯಲ್ಲಿ
ರಾಜೀವೇಕ್ಷಣ ಮೂಲರಾಮನು ಸೀತಾ
ರಾಜಭಂಡಾರದಲ್ಲಿ ಮಂಜೂಷದಲಿ
ರಾಜಿಸುತ ಇಹರು ಮೂರ್ತಿ ರೂಪದಲಿ ೧೮

ಕಳಿಂಗದೇಶಾಧಿಪ ಗಜಪತಿಯ ವಂಶದಲಿ
ಬಾಲರಾಜನು ಅವನ ಪ್ರತಿನಿಧಿಯಾಗಿ

ಆಳುವುದು ರಾಜ್ಯವ ಎಂದು ಆಚಾರ್ಯರು
ಪೇಳಿದರು ನರಹರಿ ತೀರ್ಥ ಆರ್ಯರಿಗೆ ೧೯

ಬಾಲರಾಜನು ಯುವಕನಾಗಿ ರಾಜ್ಯವನ್ನು
ಆಳುವ ಯೋಗ್ಯತೆ ಹೊಂದಿದ ಮೇಲೆ
ಅಲ್ಲಿಂದ ರಾಮ ಸೀತಾ ಮೂರ್ತಿರಾಜನ್ನ
ಕೇಳಿತರಬೇಕು ಎಂದರು ಲೋಕ ಗುರುವು ೨೦

ಗೋದಾವರಿ ಕ್ಷೇತ್ರದೇಶ ಸುತ್ತು ಮುತ್ತು
ಸಾಧುಜನ ಉದ್ಧಾರ ಬೋಧಕ್ಕೆ
ಪದ್ಮನಾಭ ತೀರ್ಥರ ತತ್ಕಾಲ ನಿಲ್ಲಿರಿಸಿ
ಬಂದರು ಉಡುಪಿಗೆ ಪೂರ್ಣ ಪ್ರಮತಿಗಳು ೨೧

ಶ್ರೀ ಮಧ್ವಾಚಾರ್ಯರು ಅರುಹಿದ ಪ್ರಕಾರದಲೇ
ಸಮಯ ಒದಗಿತು ರಾಣಿ ಬಿನ್ನೈಸಿದಳು
ಸ್ವಾಮಿ ತಾವೇ ರಾಜ್ಯ ಆಳಬೇಕೆಂದಳು
ಸಮ್ಮತಿಸಿದರು ಶ್ರೀ ನರಹರಿ ಮುನಿಯು ೨೨

ಮಂತ್ರಿ ಪದವಿ ಪರಂಪರೆ ಪ್ರಾಪ್ತವಾಗಿ
ತಂದೆ ವಹಿಸಿದ್ದರು ಅವರ ಮುಖದಿಂದ
ಹಿಂದೆ ಪೂರ್ವಾಶ್ರಮದಿ ರಾಜ್ಯ ಆಡಳಿತದ
ರೀತಿಯ ಅರಿತವರು ಈ ಹೊಸಯತಿಯು ೨೩

ನರಹರಿ ತೀರ್ಥರ ರಾಜ್ಯ ಆಡಳಿತದಲಿ
ಪರಿಪರಿ ರಾಜತಂತ್ರಗಳ ಕೌಶಲ್ಯ
ಸರಿಯಾದ ಧಾರ್ಮಿಕ ರಾಜನೀತಿಯ ದುಷ್ಟ
ಶತ್ರು ನಿಗ್ರಹ ಶಿಷ್ಟ ಪಾಲನ ಏನೆಂಬೆ ೨೪

ದಂಡೆತ್ತಿ ಆಗಾಗ ಬರುತಿದ್ದ ಶಬರಾದಿ
ತುಂಟ ಶತ್ರುಗಳನ್ನ ಜಯಿಸಿ ರಾಜ್ಯವನ್ನ
ಕಂಟಕ ದುರ್ಮತಿಗಳಿಂದ ಕಾಪಾಡಿದರು
ಎಂಟು ದಿಕ್ಕಲು ಹಬ್ಬಿತಿವರ ಕೀರ್ತಿ ೨೫

ಆಶ್ರಮೋಚಿತ ನಿತ್ಯ ಜಪಪೂಜ ಕಾರ್ಯಗಳು
ಶಿಷ್ಯ ಸಜ್ಜನರಿಗೆ ಉಪದೇಶಾನುಗ್ರಹ
ಲೇಶವೂ ಕೊರತೆ ಇಲ್ಲದೆ ಮುದದಿ
ಈಶನ ಪ್ರೀತಿಗೆ ರಾಜಕಾರ್ಯಗಳ ಮಾಡಿದರು ೨೬

ವಾಗೀಶಪಿತ ಶ್ರೀ ಪ್ರಸನ್ನ ಶ್ರೀನಿವಾಸ
ಯೋಗಾನಂದ ನರಹರಿ ಮೂಲ ರಾಮ
ನಿಗೆ ಪ್ರಿಯತಮರು ನರಹರಿ ತೀರ್ಥರಲ್ಲಿ
ಬಾಗಿ ಶರಣಾದೆ ನಾ ಸದಾ ಪೊರೆವರೆನ್ನ ೨೭

– ಇತಿ ಶ್ರೀ ಪ್ರಸನ್ನ ನರಹರಿತೀರ್ಥ ವಿಜಯ ಪ್ರಥಮೋಧ್ಯಾಯಃ –

ದ್ವಿತೀಯ ಕೀರ್ತನೆ

ಯೋಗಾನಂದ ನರಹರಿ ರಾಮಪ್ರಿಯತಮರು
ಯೋಗಿವರ ನರಹರಿತೀರ್ಥರ ಪಾದ
ಯುಗ್ಮ ವನರುಹದಿ ನಾ ಶರಣಾದೆ ಸಂತತ
ಅಗಲದೇ ಎನ್ನ ಬದಿ ಇದ್ದು ರಕ್ಷಿಪರು ಪ

ಶ್ರೀ ಕೂರ್ಮ ಕ್ಷೇತ್ರದಲಿ ಕೂರ್ಮೇಶ್ವರಾಲಯದಿ
ಯೋಗಾನಂದ ನರಸಿಂಹಗೆ ಗುಡಿಯ
ಯೋಗಿವರ ನರಹರಿತೀರ್ಥರು ಕಟ್ಟಿಸಿ
ಯೋಗಾನಂದ ನರಸಿಂಹನ ಸ್ಥಾಪಿಸಿದರು ೧

ಯುಕ್ತ ಕಾಲದಿ ರಾಜನಿಗೆ ರಾಜ್ಯ ಒಪ್ಪಿಸಲು
ಕೃತಜ್ಞ ಮನದಿಂದ ಆ ಯುವಕರಾಜ
ಇತ್ತನು ಸನ್ನಮಿಸಿ ನರಹರಿತೀರ್ಥರಿಗೆ
ಸೀತಾರಾಮ ವಿಗ್ರಹದ ಮಂಜೂಷ ೨

ನರಹರಿತೀರ್ಥರು ಶ್ರೀಮದಾಚಾರ್ಯರಲಿ
ನೇರವಾಗಿ ಪೋಗಿ ಸಮರ್ಪಿಸಲು ಆಗ

ಶ್ರೀರಾಮ ಸೀತಾದೇವಿಯ ಮಧ್ವಮುನಿ
ಕ್ಷೀರಾದಿ ಪಂಚಾಮೃತದಿ ಪೂಜಿಸಿದರು ೩

ಶ್ರೀರಾಮಸೀತಾ ಪ್ರತಿಮೆಗಳೊಳು ಹರಿರಮಾ
ಆರಾಧನಾರ್ಚನೆ ಮೂರು ತಿಂಗಳು ಹದಿ –
ನಾರುದಿನ ತಾಮಾಡಿ ಪದ್ಮನಾಭತೀರ್ಥರು
ತರುವಾಯ ಪೂಜಿಸಲು ಆಜ್ಞೆ ಮಾಡಿದರು ೪

ಮೂರನೇಬಾರಿ ಬದರಿಗೆ ಆಚಾರ್ಯರು
ತೆರಳಲು ಪದ್ಮನಾಭರು ತಾವು ಪೂಜೆ
ಚರಿಸಿ ನಿಯಮನದಂತೆ ಆರು ವರ್ಷ ತರುವಾಯ
ನರಹರಿತೀರ್ಥರಿಗೆ ಇತ್ತರು ಮೂರ್ತಿಗಳ ೫

ಈ ಮೂರ್ತಿಗಳೊಳ್ ಇರುವ ಸೀತಾರಾಮಾರ್ಚನೆ
ಬ್ರಹ್ಮದೇವರು ಮಾಡಿ ಸೂರ್ಯವಂಶ
ಭೂಮಿಪಾಲಕ ಕೈಯಿಂದ ಪೂಜೆಯ ಕೊಂಡು
ಕ್ರಮದಿ ದಶರಥರಾಜ ಕರಕೆ ಲಭಿಸಿದವು ೬

ಶ್ರೀ ರಾಮಚಂದ್ರ ಪ್ರಾದುರ್ಭಾವಕು ಮೊದಲೇ
ದಶರಥ ಆರಾಧಿಸಿದ ತರುವಾಯ
ಶ್ರೀ ರಾಮತಾನೇ ಸ್ವಯಂ ಪೂಜೆ ಮಾಡಿದನು
ಶಿರಿಸೀತ ತಾ ಕೊಂಡಳು ಪೂಜೆಗಾಗಿ ೭

ರಾಮಚಂದ್ರನು ಸೇವೆ ಸಾಕ್ಷಾತ್ ಮಾಡುವ
ಸೌಮಿತ್ರಿ ಆ ಮೂರ್ತಿಗಳನ್ನು ತಾನು
ಸಮ್ಮುದದಿ ತನ್ನ ಅರಮನೆಯಲ್ಲಿಟ್ಟುಕೊಂಡು
ನೇಮದಿ ಪೂಜಿಸುತ್ತಿದ್ದನು ಬಹುಕಾಲ ೮

ದ್ವಿಜನರ ಶ್ರೇಷ್ಠನು ರಾಮನಲಿ ಬಹುಭಕ್ತಿ
ನಿಜಭಾವದಲಿ ಮಾಳ್ಪ ಅನುದಿನ ಅವನು
ರಾಜೀವೇಕ್ಷಣ ರಾಮನನ್ನು ತಾ ನೋಡದಲೆ
ಭೋಜನ ಮಾಡಲಾರನು ಅಂಥಭಕ್ತ ೯

ವಿಪ್ರವರ ಅವಾತ ವೃದ್ಧಾಪ್ಯದಲಿ
ಅರಮನೆ ದರ್ಬಾರ ಮಂಟಪಕೆ ಬಂದ
ಶ್ರೀರಾಮಚಂದ್ರನು ರಾಜಕಾರ್ಯೋದ್ದೇಶ
ಹೊರಗೆ ಹೋಗಿದ್ದನು ಏಳುದಿನ ಹೀಗೆ ೧೦

ಏಳು ದಿನವೂ ಆ ವಿಪ್ರೋತ್ತಮ ಊಟ
ಕೊಳ್ಳದೇ ದೇಹಬಲ ಬಹು ಬಹು
ಕುಗ್ಗಿಮೆಲ್ಲನೆ ಎಂಟನೆ ದಿನ ಬಂದು
ಕುಳಿತಿದ್ದ ಶ್ರೀ ರಾಮಚಂದ್ರ ಸಭೆಯಲ್ಲಿ ೧೧

ಕಣ್ಣಿಗೆ ಏಳುದಿನ ಕಾಣದ ಶ್ರೀರಾಮ
ಆನಂದಮಯ ಶ್ರೀನಿಧಿಯ ಕಂಡಲ್ಲೇ
ಬ್ರಾಹ್ಮಣನು ಆನಂದೋದ್ರೇಕವು ಉಕ್ಕಿ
ಸನ್ನಮಿಸುವಲ್ಲೇಯೇ ಬಿದ್ದನು ಕೆಳಗೆ ೧೨

ಏಳುದಿನ ಉಪವಾಸದಿಂದಲೇ ತನುವಿನ
ಬಲಹೀನತೆ ಹೊಂದಿ ಆ ಬ್ರಾಹ್ಮಣ ಬೀಳೆ ಕೆಳಗೆ
ಕನಕ ಆಸನದಿಂದಲಿ ರಾಮ
ಇಳಿದುಬಂದು ಆಶ್ವಾಸಿಸಿದ ವಿಪ್ರನನ್ನ ೧೩

ವಿಪ್ರಶ್ರೇಷ್ಠನ ನಿರ್ವ್ಯಾಜ ಭಕ್ತಿಯ ಮೆಚ್ಚಿ
ಕರುಣಾಬ್ಧಿ ಭಕ್ತವತ್ಸಲ ರಾಮಚಂದ್ರ
ಕ್ಷಿಪ್ರದಲೆ ಲಕ್ಷ್ಮಣನ ಕಡೆಯಿಂದ ಪ್ರತಿಮೆಗಳ
ತರಿಸಿಕೊಟ್ಟನು ಆ ದ್ವಿಜಶ್ರೇಷ್ಠನಿಗೆ ೧೪

ಅನುದಿನ ವೃದ್ಧ ದೆಶೆಯಲ್ಲಿ ಬರಬೇಡವು
ಅನಾಯಾಸದಿ ತನ್ನ ಪ್ರತಿಮೆಯಲ್ಲಿ
ಕಾಣಬಹುದು ಎಂದು ಶ್ರೀರಾಮ ಪೇಳಿದನು
ಆನಂದದಿ ಕೊಂಡ ಬ್ರಾಹ್ಮಣ ಮೂರ್ತಿಗಳ ೧೫

ಪ್ರತಿನಿತ್ಯ ವಿಧಿಪೂರ್ವಕ ಅರ್ಚಿಸಿದ ವಿಪ್ರ
ಯುಕ್ತ ಕಾಲದಿ ತನು ಬಿಡುವ ಸಮಯದಲಿ

ವಾಯುಸುತ ಹನುಮನ ಕೈಯಲ್ಲಿ ಅರ್ಪಿಸಿದ
ಸೀತಾರಾಮ ಪ್ರತಿಮೆಗಳ ಭಕ್ತಿಯಲಿ ೧೬

ಸಮಸ್ತ ಜೀವರುಮಾಳ್ಪ ಭಕ್ತಿಗೆ ಅಧಿಕ
ಸುಮಹಾಭಕ್ತಿಯ ಮಾಳ್ಪ ಹನುಮಂತ
ಈ ಮೂರ್ತಿಗಳ ತಾಕೊಂಡು ಮುದದಲಿ ಕುಣಿದ
ಸಮ್ಮುದದಿ ಅರ್ಚಿಸಿದ ಸೀತಾರಾಮನ್ನ ೧೭

ಸೌಗಂಧಿಕಾಪುಷ್ಪತರಲು ಭೀಮನು ಪೋಗಿ
ಮಾರ್ಗದಲಿ ತನ್ನಯ ಪ್ರಥಮಾವತಾರ
ಸಾಕೇತರಾಮಪ್ರಿಯತಮ ಅಂಜನಾಸುತನ
ಸಂಗಡವಾದಿಸಿದ ಲೋಕರೀತಿಯಲ್ಲಿ ೧೮

ನರಾಧಮರ ಮೋಹಿಸುವ ಸಜ್ಜನರ ಮೋದಿಸುವ
ಚರ್ಯಸಂವಾದ ತೋರಿಸಿ ರೂಪದ್ವಯದಿ
ತರುವಾಯು ಹನುಮನು ಭೀಮನಿಗೆ ಕೊಟ್ಟನು
ಶ್ರೀರಾಮಸೀತಾ ಮೂಲಪ್ರತಿಮೆಗಳ ೧೯

ಭೀಮಸೇನನು ಆನಂದದಿ ಅರ್ಚಿಸಿದ
ಸುಮನೋಹರ ರಾಮಸೀತಾದೇವಿಯನ್ನ
ಈ ಮಹಾಹರಿಭಕ್ತ ಪಾಂಡವರ ವಂಶದಿ
ಕ್ಷೇಮಕ ರಾಜನು ಕಡೆಯಾಗಿ ಬಂದ ೨೦

ಮೂಲರಾಮಸೀತೆಯ ಮುದದಿಂದ ಪೂಜಿಸಿದ
ಶೀಲಭಾವದಲಿ ಆ ಕ್ಷೇಮಕಾಂತ
ಮೂಲ ವಿಗ್ರಹಗಳು ತರುವಾಯ ಲಭಿಸಿದವು
ಕಳಿಂಗ ದೇಶಾಧಿಪ ಭಕ್ತನ ಕೈಯಲ್ಲಿ ೨೧

ಆಗಿನ ಕಾಲದಲ್ಲಿ ಪೀತಾಪುರವಿಜಯ
ನಗರ ಎಂಬುವ ಪಟ್ಟಣದ ಮತ್ತು

ಜಗನ್ನಾಥಕ್ಷೇತ್ರ ದಕ್ಷಿಣ ಕಳಿಂಗಾಧಿಪರು
ಭಕುತಿ ಬೆಳೆಸಿದರು ಶ್ರೀರಾಮನಲ್ಲಿ ೨೨

ಆಗಾಗ ಹಸ್ತಿನಾಪುರ ಪೋಗುತಿದ್ದರು
ಗಂಗಾದಿಸ್ನಾನ ಕ್ಷೇತ್ರಾಟನ ಮಾಡಿ
ಭಕ್ತಿಯಿಂ ಶ್ರೀರಾಮಚರಿತೆ ಕೇಳುವವರಲ್ಲಿ
ವಿಗ್ರಹಗಳು ಲಭಿಸಿದವು ರಾಮನ ಕೃಪದಿ ೨೩

ಕಳಿಂಗದೇಶಾಧಿಪ ಗಜಪತಿ ರಾಜನು
ಬಲುಶ್ರದ್ಧೆ ಭಕ್ತಿಯಲಿ ಆರಾಧಿಸಿ
ಕಾಲದೀರ್ಘದಿ ಸಂತತಿ ಪೂಜಿಸದಲೆ
ಕೀಲುಹಾಕಿ ರಕ್ಷಿಸಿದರು ಬೊಕ್ಕಸದಿ ೨೪

ಹಿಂದೆ ತಾ ಭೀಮಾವತಾರದಲಿ ಪೂಜಿಸಿದ್ದು
ಎಂದು ಆನಂದಮುನಿ ಇಂದು ವಿಗ್ರಹಗಳ
ಹೊಂದಲು ನರಹರಿ ತೀರ್ಥರ ಕಳಿಂಗದಿ
ನಿಂದಿರಿಸಿ ತರಿಸಿಕೊಂಡರು ಮೂರ್ತಿಗಳನು ೨೫

ಶ್ರೀಮದಾಚಾರ್ಯರು ಅರ್ಚಿಸಿ ತರುವಾಯ
ಪದ್ಮನಾಭತೀರ್ಥರು ಆರುವರ್ಷಗಳು ಆ
ರಾಧಿಸಿ ನರಹರಿ ತೀರ್ಥರು ಒಂಭತ್ತು ವರ್ಷಗಳು
ಮುದದಿಂ ಪೂಜಿಸಿದರು ಮೂಲ ರಾಮನ್ನ ೨೬

ಒಂಭತ್ತು ವರ್ಷಗಳು ಒಂದು ತಿಂಗಳು ದಿನ
ಇಪ್ಪತ್ತ ಮೂರು ಈ ಕಾಲ ಸಂಸ್ಥಾನ
ಶ್ರೀಪನಿಗೆ ಪ್ರಿಯತರದಿ ಆಡಳಿತ ಮಾಡಿ
ಶ್ರೀಪನ್ನ ಧ್ಯಾನಿಸುತ ಹರಿಪುರ ಐದಿದರು ೨೭

ಶಾಲಿಶಕ ಹನ್ನೊಂದು ನೂರು ಮೂವತ್ತಾರು
ಶೀಲತಮ ಶ್ರೀಮುಖ ಪುಷ್ಯ ಕೃಷ್ಣ
ಏಳನೇ ದಿನದಲ್ಲಿ ಹರಿಪುರ ಯ್ಯೆದಿದರು
ಮಾಲೋಲ ಪ್ರಿಯತಮ ನರಹರಿ ತೀರ್ಥರು ೨೮

ಮತ್ತೊಂದು ಅಂಶದಲಿ ವೃಂದಾವನದಲಿ
ವೃತತಿಜನಾಭ ತೀರ್ಥರ ಸಮೀಪ
ಉತ್ತುಂಗ ಮಹಿಮ ತುಂಗಾನದಿ ಚಕ್ರತೀರ್ಥದ
ಹತ್ತಿರ ಕುಳಿತಿಹರು ಸ್ಮರಿಸೆ ರಕ್ಷಿಪರು ೨೯

ಶ್ರೀರಾಮನರಹರಿ ಶ್ರೀ ಶ್ರೀನಿವಾಸನು
ನೇರಲ್ಲಿ ಪ್ರಸನ್ನನಾಗಿ ಈಗ ಈ ನುಡಿಗಳ್
ಬರೆಸಿಹನು ಸಜ್ಜನರು ಓದಲು ಕೇಳಲು
ಗುರುಗಳಂತರ್ಯಾಮಿ ವಾಂಛಿತಗಳೀವ ೩೦

ಅರಸಿಕರಿಗೂ ಅಧಮ ಮಂದರಿಗು ಈ ವಿಜಯ
ಬರೆಯಲಿಕು ಕೇಳಲಿಕು ಅವಕಾಶ ಕೊಡದೆ
ಭಾರಿ ಪಂಡಿತರುಗಳೂ ಸಾಮಾನ್ಯ ಸುಜನರೂ
ಸುಶ್ರಮಣ ಮಾಳ್ಪುದು ಹರಿಪ್ರೀತಿಗಾಗಿ ೩೧

ವಾಗೀಶಪಿತ ಶ್ರೀ ಪ್ರಸನ್ನ ಶ್ರೀನಿವಾಸ
ಯೋಗಾನಂದ ನರಹರಿ ಮೂಲ ರಾಮ
ನಿಗೆ ಪ್ರಿಯತಮರು ನರಹರಿ ತೀರ್ಥರಲ್ಲಿ
ಬಾಗಿ ಶರಣಾದೆ ನಾ ಸದಾ ಪೊರೆವರೆನ್ನ ೩೨

ಶ್ರೀ ನರಹರಿತೀರ್ಥ ವಿಜಯ ಸಂಪೂರ್ಣಂ
॥ ಶ್ರೀ ಕೃಷ್ಣಾರ್ಪಣಮಸ್ತು ॥

ಶ್ರೀ ಅಕ್ಷೋಭ್ಯ ತೀರ್ಥರ ಚರಿತ್ರೆ

೧೦೦

ಅಕ್ಷೋಭ್ಯ ತೀರ್ಥಗುರು ಸಾರ್ವಭೌಮರು ಎಮ್ಮ
ರಕ್ಷಿಪ ಕೃಪಾನಿಧಿಗೆ ಶರಣು ಶರಣೆಂಬೆ
ಪಕ್ಷೀಶ ವಾಹನ್ನ ಲಕ್ಷ್ಮೀಶ ಕಮಲಾಕ್ಷ
ವಿಷ್ಣು ಆತ್ಮಗೆ ಪ್ರಿಯ ಸತ್ತತ್ವವಾದಿ ಪ

ಅಖಿಳಗುಣ ಆಧಾರ ನಿರ್ದೋಷ ಶ್ರೀರಮಣ
ಜಗದಾದಿ ಮೂಲಗುರು ಅಗುರು ಶ್ರೀ ಹಂಸ
ವಾಗೀಶ ಸನಕಾದಿ ದೂರ್ವಾಸಾದಿಗಳ
ಷೀಳಿಗೆ ಗುರುಗಳಿಗೆ ಶರಣು ಶರಣೆಂಬೆ ೧

ಅಚ್ಯುತ ಪ್ರೇಕ್ಷಾಖ್ಯ ಪುರುಷೋತ್ತಮತೀರ್ಥ
ಅಚ್ಯುತ ಪ್ರೇಕ್ಷರ ಶಿಷ್ಯರೆಂದೆನಿಪ
ಅಚ್ಯುತನ ಮುಖ್ಯಾಧಿಷ್ಠಾನ ಶ್ರೀಮಧ್ವ
ಖಚರೇಂದ್ರ ಫಣಿಪಮೃಡ ಅಮರೇಂದ್ರವಂದ್ಯ ೨

ಶ್ರೀ ಮಧ್ವ ಆನಂದತೀರ್ಥ ಕರ ಅಬ್ಜಜರು
ಪದ್ಮನಾಭನೃಹರಿ ಮಾಧವಾಕ್ಷೋಭ್ಯ
ಈ ಮಹಾಗುರುಗಳು ಸರ್ವರಿಗು ಆನಮಿಪೆ
ಸುಮನಸ ಶ್ರೇಷ್ಠರು ಮಹಿಯಲಿ ಪುಟ್ಟಿಹರು ೩

ಸಾಧು ವೈದಿಕ ವೇದಾಂತ ಸತ್ತತ್ವ ಮತ
ಮಧ್ವ ಮತವೇ ಅನ್ಯ ಯಾವುವೂ ಅಲ್ಲ
ಎಂದು ನಿಶ್ಚೈಸಿ ಶೋಭನಭಟ್ಟಸ್ವಾಮಿ
ಶಾಸ್ತ್ರಿ ಮೊದಲಾದವರು ಮಧ್ವಗೆರಗಿದರು ೪

ಸೂರಿವರ ಶೋಭನ ಭಟ್ಟಾದಿಗಳಂತೆ
ಸಾರಾಸಾರ ವಿವೇಕಿ ಗೋವಿಂದ
ಶಾಸ್ತ್ರಿಯು ಮಹಾ ದೊಡ್ಡ ಪಂಡಿತರು ತಾನೂ
ಎರಗಿ ಶರಣಾದರು ಮಧ್ವರಾಯರಲಿ ೫

ಇಂಥಾ ಮಹಾತ್ಮರ ಇನ್ನೂ ಬಹು ಸಜ್ಜನರ
ಉದ್ಧರಿಸಲಿಕ್ಕೇವೆ ಹರಿ ಅಜ್ಞೆಯಿಂದ
ಈ ಧರೆಯಲ್ಲಿ ತೋರಿಹ ಮಧ್ವರಾಯರ
ಶಾಸ್ತ್ರಿ ಬೇಡಿದರು ಸಂನ್ಯಾಸ ಕೊಡು ಎಂದು ೬

ಸಚ್ಛಾಸ್ತ್ರ ಪ್ರವಚನ ಪಟು ವಿದ್ವನ್ಮಣಿಯು
ನಿಶ್ಚಲ ಭಕ್ತಿಮಾನ್ ಸವೈರಾಗ್ಯ ವಿಪ್ರ

ಅಚಲ ಸತ್ತತ್ವನಿಶ್ಚಯ ಜ್ಞಾನಿ ಶಾಸ್ತ್ರಿಗೆ
ಅಕ್ಷೋಭ್ಯ ನಾಮನ ಇತ್ತರಾಚಾರ್ಯ ೭

ಪ್ರಣವ ಮೂಲಾದಿ ಸುಮಂತ್ರ ಉಪದೇಶಿಸಿ
ತನ್ನ ಮಠದಲ್ಲಿ ಅಕ್ಷೋಭ್ಯತೀರ್ಥರಿಗೆ
ವನರುಹನಾಭರಿಂದ ನಾಲ್ಕನೇ ಸ್ಥಾನವ
ಘನದಯದಿ ಇತ್ತರು ಆನಂದಮುನಿಯು ೮

ಬದರಿಗೆ ಮೂರನೇ ಬಾರಿ ತೆರಳುವ ಪೂರ್ವ
ಮಧ್ವ ಮುನಿ ನೇಮಿಸಿದ ಕ್ರಮದಿಂದಲೇವೆ
ಪದ್ಮನಾಭ ನರಹರಿ ಮಾಧವ ತೀರ್ಥರು
ವೇದಾಂತ ಪೀಠದಲಿ ಕುಳಿತುಜ್ವಲಿಸಿದರು ೯

ಪದ್ಮನಾಭತೀರ್ಥರ ಪಾದಪದ್ಮಗಳಿಗೆ
ಸದಾ ನಮೋ ನಮೋ ಎಂಬೆ ಇವರ ಪೀಳಿಗೆಯ
ವಿದ್ಯಾಕುಶಲರು ಸೂರಿಗಳ ಚರಣಕ್ಕೆ
ಸಂತೈಪರೆಮ್ಮ ಸದಾ ನಮೋ ಸರ್ವದಾ ೧೦

ನರಹರಿತೀರ್ಥರು ಚರಣ ಸರಸೀರುಹದಿ
ಶರಣಾದೆ ಕಾಯ್ವರು ಈ ಮಹಾನ್ ಇಹರು
ವರಾಹ ತನಯಾ ಸರಿದ್ವರಾಕ್ಷೇತ್ರದಲಿ
ಶ್ರೀ ವೃಂದಾವನದೊಳು ಹರಿಯ ಧ್ಯಾನಿಸುತ ೧೧

ಮಾಧವತೀರ್ಥರ ಪಾದಪದ್ಮಗಳಿಗೆ
ಸದಾನಮೋ ನಮೋ ಎಂಬೆ ಇವರ ಪೀಳಿಗೆಯ
ಯತಿಗಳೂ ಭಕ್ತಿಮಾನ್ ಜ್ಞಾನಿಗಳ ಚರಣಕ್ಕೆ
ಆದರದಿ ನಮಿಸುವೆ ಸದಾ ಪೊರೆವರೆಮ್ಮ ೧೨

ಸುಲಭರು ಸುಜನರಿಗೆ ಶರಣರ ಸಲಹುವರು
ಮಾಲೋಲನೊಲಿದಿಹ ಅಕ್ಷೋಭ್ಯತೀರ್ಥ
ಬಲು ಖಿನ್ನ ಬ್ರಾಹ್ಮಣನು ಬ್ರಹ್ಮ ಹತ್ಯ ಮಾಡಿದವ
ಕಾಲಲ್ಲಿ ಬಿದ್ದು ಶರಣಾದ ಗುರುಗಳಲಿ ೧೩

ಗುರು ದಯಾನಿಧಿ ಅಕ್ಷೋಭ್ಯತೀರ್ಥರು ಆಗ
ಶರಣಾದ ಪುರುಷನ ಪಶ್ಚಾತ್ತಾಪ
ಖರೆಯೇ ಎಂಬುವುದನ್ನು ಜನರಿಗೆ ತಿಳಿಸಲು
ಏರಿ ಮರ ನದಿಯಲಿ ಬೀಳೆ ಹೇಳಿದರು ೧೪

ತನ್ನಯ ಮಹಾಪಾಪ ಕಳೆಯುವ ಗುರುಗಳು
ಏನು ಹೇಳಿದರೂ ಮಾಡುವೆ ತಾನೆಂದು
ಸನ್ನಮಿಸಿ ಗುರುಗಳಿಗೆ ನದಿ ಬದಿ ಮರಹತ್ತೆ
ದೀನ ರಕ್ಷಕ ಗುರು ಇಳಿಯೆ ಹೇಳಿದರು ೧೫

ವೃಕ್ಷದಿಂದಿಳಿದ ಆ ವಿಪ್ರಘಾತುಕನ ಮೇಲೆ
ಅಕ್ಷೋಭ್ಯತೀರ್ಥರು ಶಂಖತೀರ್ಥವನ್ನ
ಪ್ರೋಕ್ಷಿಸಿ ಆತನ ಮಹಾ ಬ್ರಹ್ಮಹತ್ಯಾ
ದೋಷ ಕಳೆದರು ಪಂಕ್ತಿಯಲಿ ಸೇರಿಸಿದರು ೧೬

ಶಂಖತೀರ್ಥದ ಮಹಿಮೆ ಅಲ್ಲಿದ್ದ ಜನರಿಗೆ
ಶಂಕೆಯಲ್ಲದೆ ತಿಳಿಸಿ ಬಂದು ಬೇಡುವವರ
ಡೊಂಕು ಕೊರತೆಗಳೆಲ್ಲ ನೀಗಿಸಿ ಯೋಗ್ಯದಿ
ಶ್ರೀಕಾಂತನಲಿ ಭಕ್ತಿ ಪುಟ್ಟಿಸಿಹರು ೧೭

ತಮ್ಮಲ್ಲಿ ಬೇಡುವ ಅಧಿಕಾರಿಯೋಗ್ಯರಿಗೆ
ಶ್ರೀಮಧ್ವಶಾಸ್ತ್ರದ ದಾರ್ಢ್ಯ ಜ್ಞಾನ
ಶ್ರೀ ಮನೋಹರನನ್ನ ಅಪರೋಕ್ಷಿಕರಿಸುವ
ಸುಮಹಾ ಉಪಾಯವ ಅರುಹಿಹರು ದಯದಿ ೧೮

ಮಧ್ವಸಿದ್ಧಾಂತ ಸ್ಥಾಪನ ಮಾತ್ರವಲ್ಲದೇ
ವೇದ ವಂಚಕ ದುರ್ಮತಗಳ ಖಂಡನವ
ಪೋದಕಡೆ ಮಾಡುತ್ತಾ ದಿಗ್ವಿಜಯ ಜಯಶೀಲ –
ರೆಂದು ಮರ್ಯಾದೆಗಳ ಕೊಂಡಿಹರು ಜಗದಿ ೧೯

ಅದ್ವೈತವಾದಿಯು ಶಾಂಕರ ಮಠಾಧೀಶ
ವಿದ್ಯಾರಣ್ಯರು ಪ್ರಸಿದ್ಧ ಪಂಡಿತರು
ಎದುರು ನಿಂತರು ಅಕ್ಷೋಭ್ಯ ತೀರ್ಥರ ಮುಂದೆ
ವಾದಿಸಿದರು ಮುಳುಬಾಗಿಲು ಸಮೀಪ ೨೦

ಶ್ವೇತಕೇತು ಉದ್ದಾಲಕರ ಸಂವಾದ
ತತ್ವ ಮಸಿ ವಾಕ್ಯವೇ ವಾದದ ವಿಷಯ
ವೇದಾಂತ ದೇಶಿಕರು ರಾಮಾನುಜೀಯತಿಯ
ಅಧ್ಯಕ್ಷತೆಯಲ್ಲಿ ಸಭೆಯು ಕೂಡಿತ್ತು ೨೧

ಛಾಂದೋಗ್ಯ ಉಪನಿಷತ್ತಲ್ಲಿರುವ ವಾಕ್ಯವು
ಸಆತ್ಮಾ ತತ್ವಮಸಿ ಎಂಬುವಂಥಾದ್ದು
ಭೇದ ಬೋಧಕವೋ ಅಭೇದ ಬೋಧಕವೋ
ಎಂದು ವಾದವು ಆ ಈರ್ವರಲ್ಲಿ ೨೨

ಆತ್ಮ ಶಬ್ದಿತ ನಿಯಾಮಕಗು ನಿಯಮ್ಯ ಜೀವನಿಗೂ
ಭೇದವೇ ಬೋಧಿಸುವುದು ಆ ವಾಕ್ಯವೆಂದು
ಸಿದ್ಧಾಂತ ಬಹುರೀತಿ ಸ್ಥಾಪಿಸಿದರು ಅಕ್ಷೋಭ್ಯರು
ಸೋತಿತು ವಿದ್ಯಾರಣ್ಯರ ಐಕ್ಯವಾದ ೨೩

ಅಸಿನಾತತ್ವ ಮಸಿನಾ ಪರಜೀವಪ್ರಭೇದಿನಾ
ವಿದ್ಯಾರಣ್ಯ ಮಹಾರಣ್ಯಂ ಅಕ್ಷೋಭ್ಯ ಮುನಿರಚ್ಛಿನತ್
ಎಂದು ಬರೆದರು ತಮ್ಮಯ ಗ್ರಂಥದಲ್ಲಿ
ಮಧ್ಯಸ್ಥ ವೇದಾಂತದೇಶಿಕ ಸ್ವಾಮಿಗಳು ೨೪

ಇಳೆಯ ಸಜ್ಜನರಿಗೆ ಜಯತೀರ್ಥರನಿತ್ತ
ಮಾಲೋಲಪ್ರಿಯ ಅಕ್ಷೋಭ್ಯರ ಮಹಿಮೆ
ಅಲ್ಪಮತಿ ನಾನರಿಯೆ ಇಲ್ಲಿ ಒಂದೋ ಎರಡೋ
ಸ್ಥಾಲಿ ಪುಲೀಕ ನ್ಯಾಯದಲಿ ಪೇಳಿಹುದು ೨೫

ನದಿ ದಡದಿ ಕುಳಿತಿದ್ದ ಅಕ್ಷೋಭ್ಯತೀರ್ಥರು
ಎದುರಾಗಿ ನದಿಯಲ್ಲಿ ಆಚೆ ದಡದಿಂದ
ಕುದುರೆ ಸವಾರನು ವರ್ಚಸ್ವಿ ಯುವಕನು
ಬೆದರದೆ ಪ್ರವಾಹದಲಿ ಬರುವುದು ಕಂಡರು ೨೬

ಕುದುರೆ ಮೇಲ್ ಆಸೀನನಾಗಿದ್ದ ಯುವಕನು
ಕ್ಷುತ್‌ತೃಷಿ ಶಮನಕ್ಕೆ ಯತ್ನ ಮಾಡುತ್ತಾ
ಉದಕವ ಕೈಯಿಂದ ತುಂಬಿಕೊಳ್ಳದಲೇ
ಎತ್ತುಗಳು ಕುಡಿವಂತೆ ಬಾಯಿ ಹಚ್ಚಿದನು ೨೭

ಮಾಧವ ಮಧ್ವರು ಮೊದಲೇ ಸೂಚಿಸಿದಂತೆ
ಇಂದು ಆ ಕುರುಹರಿತು ಅಕ್ಷೋಭ್ಯರು
ಇದು ಏನು ಪಶುವಂತೆ ಎಂದು ಧ್ವನಿಗೂಡಲು
ಹಿಂದಿನ ಜನ್ಮ ಯುವಕಗೆ ನೆನಪು ಬಂತು ೨೮

ಪಶು ಶಬ್ದ ಗುರುಮುಖದಿಂಬಂದಲಾಕ್ಷಣ ಪೂರ್ವ
ಸಂಸ್ಕಾರ ಪ್ರತಿಭೆಯು ಉದಯವಾಯ್ತು
ದಶಪ್ರಮತಿಗಳ ತಾನು ಎತ್ತಾಗಿ ಸೇವಿಸಿದ್ದು
ಹಸನಾಗಿ ಟೀಕೆ ಬರೆಯಲಾಜ್ಞೆ ಕೊಂಡದ್ದು ೨೯

ನಗಾರಿಸಮ ಬಲಿಯುವಕನು ಪ್ರವಾಹದ
ವೇಗ ಲೆಕ್ಕಿಸದಲೇ ದಡಕೆ ತಾ ಬಂದು
ಮುಗಿದುಕರ ಬಾಗಿಶಿರ ನಮಿಸಿ ಅಕ್ಷೋಭ್ಯರ
ಆಗಲೇ ಸಂನ್ಯಾಸ ಕೊಡಲು ಬೇಡಿದನು ೩೦

ಗಾಧಿ ಅರ್ಜುನ ಸಮ ಬಲರೂಪದಲಿ ತೋರ್ಪ
ಈತ ರಾಯರ ಸುತನಾದರೂ ವೈರಾಗ್ಯ
ಯುತ ಭಕ್ತಿಮಾನ್ ಸುಶುಭಲಕ್ಷಣನು ಎಂದು ಹರಿ
ಮಧ್ವನಿಯಮಿತ ಅವಗೆ ಕೊಟ್ಟರು ಸಂನ್ಯಾಸ ೩೧

ಶ್ರೀಯಃಪತಿಗೆ ಪ್ರಿಯತರ ಜಯತೀರ್ಥನಾಮವ
ದಯಾಶೀಲ ಹೊಸಯತಿಗೆ ಇತ್ತು ಅಭಿಷೇಕ
ಅಕ್ಷೋಭ್ಯ ಗುರುಮಾಡೆ ಗಗನದಿಂ ಪೂವರ್ಷ
ಜಯ ಘೋಷ ಹರಡಿತು ಪರಿಮಳ ಸುಗಂಧ ೩೨

ಶ್ರೀಮಧ್ವಾಚಾರ್ಯರು ಬೋಧಿಸಿ ತೋರಿಸಿದ
ರಮಾಪತಿ ಪೂಜಾಸತ್ತತ್ವವಾದ
ದುರ್ಮತ ಖಂಡನದ ರೀತಿಯ ಜಯಾರ್ಯರಿಗೆ
ಸುಮ್ಮುದದಿ ಅರುಹಿದರು ಗುರುಸಾರ್ವಭೌಮ ೩೩

ಶೀಲತಮ ಗುರುವರ್ಯ ಅಕ್ಷೋಭ್ಯತೀರ್ಥರು
ಇಳೆಯಲ್ಲಿ ಮಧ್ವಮತ ಹರಿಭಕ್ತಿಯನ್ನ
ಬೆಳೆಸಲು ಪ್ರತ್ಯೇಕ ಮಠವ ಸ್ಥಾಪಿಸಿದರು
ತ್ರೈಲೋಕ ಭೂಷಣ ತೀರ್ಥರ ಮೊದಲ್ಮಾಡಿ ೩೪

ಆದಿ ಮಠ ಹರಿನೈದು ಸಮೀಪ ಪಟ್ಟವ ಆಳಿ
ಹನ್ನೊಂದು ನೂರು ಅರವತ್ತೇಳ ಶಕವರುಷ
ವದ್ಯ ಪಂಚಮಿ ಮಾರ್ಗಶಿರ ವಿಶ್ವಾವಸುವಲ್ಲಿ
ಮಧ್ವ ಹೃದಯಾಬ್ಜಗನ ಪುರವ ಐದಿದರು ೩೫

ಮತ್ತೊಂದು ಅಂಶದಲಿ ಮಳಖೇಡ ಗ್ರಾಮದಲಿ
ನದಿ ತೀರದಲಿ ಹರಿಯ ಧ್ಯಾನ ಮಾಡುತ್ತಾ
ಬಂದು ಬೇಡುವವರಿಷ್ಟಾರ್ಥ ಪೂರೈಸುತ
ವೃಂದಾವನದಲ್ಲಿ ಕುಳಿತಿಹರು ಕರುಣಿ ೩೬

ಶಾಶ್ವತ ಸರ್ವಾಶ್ರಯ ಗುಣಗಣಾರ್ಣವ ಅನಘ
ಜೀವ ಜಡ ಭಿನ್ನ ಪರಮಾತ್ಮ ವಿಧಿತಾತ
ಮಧ್ವಹೃತ್ಪದ್ಮಗ ಶ್ರೀ ಪ್ರಸನ್ನ ಶ್ರೀನಿವಾಸಗೆ
ಸರ್ವದಾಪ್ರಿಯ ಅಕ್ಷೋಭ್ಯ ಗುರೋ ಶರಣು ೩೭ ಪ

॥ ಶ್ರೀ ಅಕ್ಷೋಭ್ಯ ತೀರ್ಥಚರಿತೆ ಸಂಪೂರ್ಣಂ ॥

ಶ್ರೀ ಪ್ರಸನ್ನ ಜಯತೀರ್ಥ ವಿಜಯ

೧೦೧

ಪ್ರಥಮ ಕೀರ್ತನೆ

ಪ್ರವ್ರಜ್ಯ ಕುಲಶಿರೋರತ್ನ ಜಯತೀರ್ಥರ
ಸುವೃತತಿ ಜಾಂಘ್ರಿಯಲಿ ಶರಣಾದೆ ಸತತ
ಸರ್ವೇಷ್ಟದಾತರು ವಿಜ್ಞಾನ ಬೋಧಕರು
ಮದ್ವೇಷ್ಟ ಶ್ರೀ ರಮಾಪತಿಗೆ ಪ್ರಿಯತಮರು ಪ

ಅಖಿಳ ಗುಣ ಆಧಾರ ನಿರ್ದೋಷ ಶ್ರೀರಮಣ
ಜಗದಾದಿ ಮೂಲಗುರು ಅಗುರು ಶ್ರೀ ಹಂಸ
ವಾಗೀಶ ಸನಕಾದಿ ದೂರ್ವಾಸಾದಿಗಳ
ಪೀಳಿಗೆ ಗುರುಗಳಿಗೆ ಶರಣು ಶರಣೆಂಬೆ ೧

ಪುರುಷೋತ್ತಮ ತೀರ್ಥ ಅಚ್ಯುತ ಪ್ರೇಕ್ಷರಿಗೆ
ಪುರುಷೋತ್ತ ಮಾರ್ಯರ ಕರ ಕಮಲ ಜಾತ
ವರ ವಾತ ಅವತಾರ ಆನಂದತೀರ್ಥರ
ಚರಣ ಪದ್ಮದಲಿ ನಾ ಶರಣಾದೆ ಸತತ ೨

ಶ್ರೀ ಮಧ್ವ ಆನಂದ ತೀರ್ಥ ಕರ ಅಬ್ಜಜರು
ಪದ್ಮನಾಭ ನೃಹರಿ ಮಾಧವಾಕ್ಷೋಭ್ಯ
ಈ ಮಹಾ ಗುರುಗಳು ಸರ್ವರಿಗು ಆನಮಿಪೆ
ಶ್ರೀ ಮನೋಹರ ಪ್ರಿಯರು ಸಂತೈಪರೆಮ್ಮ ೩

ತ್ರೇತೆಯಲ್ಲಿ ಶ್ರೀ ರಾಮಚಂದ್ರನ್ನ ಸೇವಿಸಲು
ಸೀತಾ ಪ್ರತಿಕೃತಿಯಲ್ಲಿ ತಾಪೊಕ್ಕ
ವಾತನ್ನೊಲಿಸಿಕೊಳ್ಳ ದವರ್ಗೆ ಹರಿ ಒಲಿಯ
ಎಂದು ಜಗಕೆ ತೋರ್ದ ವಾಲಿಯೇ ಇಂದ್ರ ೪

ವಾತಾವತಾರ ಹನುಮಂತನೇ ದ್ವಾಪರದಿ
ಕೌಂತೇಯ ಭೀಮನು ಅವನಿಗೆ ಅನುಜ
ಇಂದ್ರ ಅರ್ಜುನನಾಗಿ ಸೇವಿಸಿ ಹನುಮದ್ವಜ
ಪಾದ ಮೂಲದಿ ಕುಳಿತ ಕೃಷ್ಣನು ಒಲಿದ ೫

ಅಖಂಡೈಕ ಸಾರಾತ್ಮ ಅನಂತರೂಪಾಭಿನ್ನ
ಶ್ರೀಕೃಷ್ಣ ರಾಮನೇ ಋಷಿವಂಶದಲ್ಲಿ
ಈ ಕುವಲಯದಲ್ಲಿ ಪ್ರಾದುರ್ಭವಿಸಿದ ವ್ಯಾಸ
ಅಕಳಂಕ ಸುಖಜಿತ್ ವಪುಷ ಶ್ರೀಪತಿಯು ೬

ಆಮ್ನಾಯ ತತಿ ಪುರಾಣಗಳು ಪೇಳ್ವಂತೆ
ರಮೆಯರಸ ವ್ಯಾಸನ್ನ ಸೇವಿಸಲು ಇಳೆಯೊಳ್
ಭೀಮನೇ ಯತಿ ರೂಪದಲ್ಲಿ ಬಂದಿಹನೆಂದು
ಸುಮನಸ ರಾಜ ಪುಟ್ಟಿದನು ಪುನಃ ೭

ಹದಿನೆಂಟು ವರುಷಗಳು ಎತ್ತಾಗಿ ತಾನಿದ್ದು
ಹೊತ್ತು ಮಧ್ವಾಚಾರ್ಯರ ಪುಸ್ತಕಗಳ
ಭಕ್ತಿಯಲಿ ಸೇವಿಸಿ ಮದ್ವರಾಯರು ಪಾಠ
ಬೋಧಿಸುವದು ಕೇಳ್ದ ವೃಷಭರಾಟ್ ಇಂದ್ರ ೮

ಆನಂದಪ್ರದ ತತ್ವಬೋಧಕ ಭಾಷ್ಯಾದಿಗಳ
ಆನಂದ ಮುನಿಮಧ್ವ ಬೋಧಿಸಲು ಗ್ರಹಿಸಿ
ವಿನಯದಿ ಕೇಳ್ದರು ಶಿಷ್ಯರು ಟೀಕೆಗಳ
ಗ್ರಂಥಗಳಿಗೆ ಯಾರು ಮಾಡುವುದು ಎಂದು ೯

ಈ ಗೋರಾಜನೇ ಟೀಕೆಗಳ ಸಂರಚಿಸಿ
ಜಗತ್ತಲ್ಲಿ ಸತ್ತತ್ವ ಶಾಸ್ತ್ರ ಪ್ರಕಟಿಸುವ
ಹೀಗೆಂದು ಶ್ರೀ ಮಧ್ವಾಚಾರ್ಯರಾಜ್ಞಾಪಿಸಲು
ಮಿಗೆ ಹರುಷದಲಿ ಗೋರಾಟ್ ಶಿರವ ಬಾಗಿದನು ೧೦

ಯುಕ್ತ ಕಾಲದಿ ಈ ಗೋರಾಜ ನೇವೆ
ರಘುನಾಥ ದೇಶಪಾಂಡೆ ರುಕ್ಮಾಬಾಯಿಗೆ
ಮಗನಾಗಿ ಜನಿಸಿದನು ಮಂಗಳವೇಢೆಯಲಿ
ಈ ಗ್ರಾಮ ಪಂಢರಪುರದ ಸಮೀಪ ೧೧

ಧೋಂಡುರಾಯನು ಎಂಬ ನಾಮದಲಿ ಬೆಳೆದ
ಗಂಡಿಗೆ ಉಪನಯನ ಮದುವೆಯೂ ಆಯ್ತು
ಹೆಂಡತಿ ಭೀಮಾಬಾಯಿ ಸುಗುಣೆ ಸೌಂದರ್ಯವತಿ
ಚಂಡ ಶ್ರೀಮಂತರ ಮನೆತನದವಳು ೧೨

ಒಂದುದಿನ ಧೋಂಡುರಾಯನು ನದೀ ದಡಕೆ
ಬಂದನು ಕುದುರೆಯ ಮೇಲೇರಿಕೊಂಡು
ಅಂದು ಅಕ್ಷೋಭ್ಯ ಮಠ ಸಂಚಾರ ಕ್ರಮದಲ್ಲಿ
ನಿಂತಿತ್ತು ಮೊಕ್ಕಾಮಾಗಿ ಆಚೆಕಟ್ಟೆಯಲಿ ೧೩

ನದೀತೀರ ಕುಳಿತಿದ್ದ ಅಕ್ಷೋಭ್ಯ ತೀರ್ಥರು
ಎದುರಾಗಿ ನದಿಯಲ್ಲಿ ಆಚೆದಡದಿಂದ
ಕುದುರೆ ಸವಾರನು ವರ್ಚಸ್ವಿ ಯುವಕನು
ಬೆದರದೆ ಪ್ರವಾಹದಲಿ ಬರುವದು ನೋಡಿದರು ೧೪

ಕುದುರೆ ಮೇಲ್ ಅಸೀನನಾಗಿದ್ದ ಯುವಕನು
ಕ್ಷುತ್ ತೃಷೆ ಶಮನಕ್ಕೆ ಯತ್ನ ಮಾಡುತ್ತಾ
ಉದಕವ ಕೈಯಿಂದ ತುಂಬಿಕೊಳ್ಳದಲೇ
ಎತ್ತಗಳು ಕುಡಿವಂತೆ ಬಾಯಿ ಹಚ್ಚಿದನು ೧೫

ಮಾಧವ ಮಧ್ವರು ಮೊದಲೇ ಸೂಚಿಸಿದಂತೆ
ಇಂದು ಆ ಕುರುಹ ಅರಿತು ಅಕ್ಷೋಭ್ಯರು
ಇದು ಏನು 'ಪಶು' ವಂತೆ ಎಂದು ಧ್ವನಿಕೊಟ್ಟರು
ಹಿಂದಿನ ಜನ್ಮ ಧೊಂಡೋಗೆ ನೆನಪಾಯ್ತು ೧೬

ಪ್ರವಾಹದ ನಗಾರಿಯ ಸಮಬಲಿ ಧೋಂಡು
ವೇಗ ಲೆಕ್ಕಿಸದಲೇ ದಡಕೆ ತಾ ಬಂದು

ಮುಗಿದ ಕರ ಬಾಗಿ ಶಿರ ನಮಿಸಿ ಅಕ್ಷೋಭ್ಯರ
ಆಗಲೇ ಸಂನ್ಯಾಸಕೊಡಲು ಬೇಡಿದನು ೧೭

ಗಾಧಿ ಅರ್ಜುನ ಸಮ ಬಲ ರೂಪದಲಿ ತೋರ್ಪ
ಈತ ರಾಯರ ಸುತನಾದರೂ ವೈರಾಗ್ಯ
ಯುತ ಭಕ್ತಿಮಾನ್ ಸುಶುಭ ಲಕ್ಷಣನೆಂದು ಹರಿ
ಮಧ್ವ ನಿಯಮಿತ ಅವಗೆ ಕೊಟ್ಟರು ಸಂನ್ಯಾಸ ೧೮

ಶ್ರೀಯಃಪತಿಗೆ ಪ್ರಿಯತರ ಜಯತೀರ್ಥನಾಮವ
ಜಯ ಶೀಲ ಹೊಸಯತಿಗೆ ಇತ್ತು ಅಭಿಷೇಕ
ಅಕ್ಷೋಭ್ಯಗುರು ಮಾಡೆ ಗಗನದಿ ಪೂವರ್ಷ
ಜಯ ಘೋಷ ಹರಡಿತು ಪರಿಮಳ ಸುಗಂಧ ೧೯

ತಂದೆ ರಘುನಾಥರಾಯನು ಸುದ್ದಿ ಕೇಳಿ
ಬಂದು ಅಕ್ಷೋಭ್ಯರ ಕಂಡು ಬಲುಕೋಪ
ದಿಂದ ಯಾಕೆ ಸಂನ್ಯಾಸ ಯುವಕಗೆ ಕೊಟ್ಟಿರಿ
ಎಂದು ವಾದಿಸಿದನು ಪುತ್ರ ಮೋಹದಲಿ ೨೦

ಪೂರ್ವಧೋಂಡುರಾಯ ಈಗ ಜಯತೀರ್ಥರು
ತಾವೇ ಸ್ವೇಚ್ಛೆಯಿಂದ ಕೊಂಡರು ಸಂನ್ಯಾಸ
ಈ ವಿಷಯ ತಿಳಕೊಂಡರೂ ಸಹ ರಘುನಾಥ
ಸೇವಕರ ಸಹ ಮಗನ ಕರಕೊಂಡು ಹೋದ ೨೧

ರಾಯನು ಮಗನನ್ನ ಗೃಹಸ್ಥ ಚರ್ಯದಲಿರಿಸೆ
ಶಯನಗೃಹದೊಳು ಪತ್ನಿ ಸಹಿತ ಕಳುಹಿದನು
ಶಯನ ತಲ್ಪದಿ ದೊಡ್ಡ ಸರ್ಪಕಂಡಳು ಯುವತಿ
ಭಯದಿಂದ ಹೊರಬಂದು ಹೇಳಿದಳು ವಿಷಯ ೨೨

ತನ್ನ ಪತಿ ಧೊಂಡರಾಯನ್ನ ತಲ್ಪದಲಿ
ಕಾಣದೆ ಅವರಿದ್ದ ಸ್ಥಾನದಲಿ ಸರ್ಪ
ಘನ ದೀರ್ಘ ಗಾತ್ರ ವಿಸ್ತಾರ ಹೆಡೆಯಿಂದ
ಮಿನುಗುತ್ತ ಕುಳಿತಿದ್ದ ವಿವರ ಪೇಳಿದಳು ೨೩

ರಘುನಾಥರಾಯನು ಹರಿಚಿತ್ತ ಇದು ಎಂದು
ಮಗನ ಪ್ರಭಾವವ ಅರಿತು ತ್ವರಿತದಲಿ
ಅಕ್ಷೋಭ್ಯರಲಿ ಹೋಗಿ ಶಿಷ್ಯನ್ನ ಒಪ್ಪಿಸಿ
ಬಾಗಿ ಶಿರ ಸನ್ನಮಿಸಿ ಕ್ಷಮೆಯ ಬೇಡಿದನು ೨೪

ವಂಶ ವೃದ್ಧಿಗೆ ಮತ್ತೂ ಪುತ್ರಪುಟ್ಟುವನೆಂದು
ದೇಶಪಾಂಡೆಯ ಅನುಗ್ರಹಿಸಿ ಕಳುಹಿಸಿ
ದಶಪ್ರಮತಿ ಪೀಳಿಗೆಯೊಳು ಅಕ್ಷೋಭ್ಯಮುನಿಗಳು
ಶಿಷ್ಯ ಜಯತೀರ್ಥರಿಗೆ ಸ್ಥಾನ ನೇಮಿಸಿದರು ೨೫

ಶ್ರೀ ಮದ್ವಾಚಾರ್ಯರು ಬೋಧಿಸಿ ತೋರಿಸಿದ
ಶ್ರೀ ರಮಾಪತಿ ಪೂಜಾ ಸತ್ತತ್ವವಾದ
ದುರ್ಮತ ಖಂಡನದ ರೀತಿಯ ಜಯಾರ್ಯರಿಗೆ
ಸಮ್ಮುದದಿ ಅರುಹಿದರು ಅಕ್ಷೋಭ್ಯ ಗುರುವು ೨೬

ಶಕ ವರುಷ ಹನ್ನೊಂದು ನೂರು ಅರವತ್ತೇಳು
ಮಾರ್ಗ ಶಿರ ಕೃಷ್ಣ ಪಂಚಮಿ ವಿಶ್ವಾವಸುವಲ್ಲಿ
ಅಕ್ಷೋಭ್ಯ ತೀರ್ಥರ ಪೀಠ ಆರೋಹಿಸಿ
ಶ್ರೀಕರಗೆ ಪ್ರೀತಿಕರ ಪಟ್ಟವಾಳಿದರು ೨೭

ದೇವತಾರ್ಚನೆ ಶಿಷ್ಯ ಉಪದೇಶ ಮಾಡುತ್ತ
ದಿಗ್ವಿಜಯದಲಿ ದುರ್ವಾದಿಗಳ ಗೆದ್ದು
ಮಧ್ವಗ್ರಂಥಗಳಿಗೆ ಟೀಕೆಗಳ ರಚಿಸಿ
ಪ್ರಖ್ಯಾತರಾದರು ಜಯತೀರ್ಥ ಆರ್ಯ ೨೮

ವನರುಹಾಸನ ಪಿತ ಶ್ರೀ ಪ್ರಸನ್ನ ಶ್ರೀನಿವಾಸ
ಪೂರ್ಣ ಪ್ರಜ್ಞರ ಹೃತ್‌ಸ್ಥ ಜನ್ಮಾದಿ ಕರ್ತ
ಗುಣ ಪೂರ್ಣ ನಿರ್ದೋಷ ಶ್ರೀಯಃ ಪತಿಗೆ ಪ್ರಿಯಘನ ಕರುಣಿ
ಜಯತೀರ್ಥ ಗುರು ನಮೋ ಪಾಹಿ ೨೯

॥ ಪ್ರಥಮ ಕೀರ್ತನೆ ಸಮಾಪ್ತ ॥

ದ್ವಿತೀಯ ಕೀರ್ತನೆ

ಪ್ರವ್ರಜ್ಯ ಕುಲಶಿರೋರತ್ನ ಜಯತೀರ್ಥರ
ಸುವ್ರತತಿ ಜಾಂಘ್ರಿಯಲಿ ಶರಣಾದೆ ಸತತ
ಸರ್ವೇಷ್ಟದಾತರು ವಿಜ್ಞಾನ ಬೋಧಕರು
ಮಧ್ವೇಷ್ಟ ಶ್ರೀ ರಮಾಪತಿಗೆ ಪ್ರಿಯತಮರು ಪ

ನರಹರಿಯ ಮಹಾದುರ್ಗೆಯ ಕುರಿತು ತಪಸ್ ಆಚರಿಸಿ
ವರವ ಪಡೆದಿಹರು ಈ ಜಯತೀರ್ಥ ಆರ್ಯ
ಬರೆವುದಕೆ ಲೇಖನವು ಅಡಿಕೆಯು
ಅರದೂರ ದುರ್ಗೆಯು ಕೊಟ್ಟಿಹಳು ಇವರ್ಗೆ ೧

ಎರಗೋಳದಲ್ಲಿದ್ದು ಶ್ರೀ ಮದಾಚಾರ್ಯರ
ಪರಸುಖಪ್ರಮೂಲಗ್ರಂಥಗಳ ಟೀಕಾ
ಬರೆದಿಹರು ಅನುಪಮ ಉತ್ತಮ ರೀತಿಯಲಿ
ಭರದಿ ಓದುವವರೇ ಬಲ್ಲರು ಮಹಿಮೆ ೨

ಶ್ರೀ ಮಧ್ವಕೃತವು ಶ್ರೀ ಬ್ರಹ್ಮ ಸೂತ್ರ ಭಾಷ್ಯವು
ಆ ಮೂಲಗ್ರಂಥವು ಎರಡು ಸಾವಿರವು
ಆ ಮಹಾಭಾಷ್ಯಕ್ಕೆ ಟೀಕೆ ಅಷ್ಟ ಸಹಸ್ರವು
ಅಮ್ಮಮ್ಮ ಏನೆಂಬೆ ಈ ಮಹಾ ಕಾರ್ಯ ೩

ಅನುವ್ಯಾಖ್ಯಾನದ ನಾಲಕ್ಕು ಸಾವಿರ
ಘನತರ ಗ್ರಂಥಕ್ಕೆ ಜಯತೀರ್ಥರ
ಜ್ಞಾನಪ್ರದ ಅಜ್ಞಾನಗಿರಿ ವಜ್ರ ಟೀಕೆಯ
ಗ್ರಂಥ ಇಪ್ಪತ್ತೆಂಟು ಸಾವಿರ ಸಂಖ್ಯಾ ೪

ಈ ನುಡಿ ಬರೆವಾಗ ಬಿಂದುಮಾಧವ ಪೇಳ್ದ
ಘನ್ನ ಶುಭತರ ಮಧ್ವ ವಿಜಯದಲ್ಲಿ
ಅನುವ್ಯಾಖ್ಯಾನದ ಟೀಕಾ ಸುಧಾ ಎಂದು
ಶ್ರೀ ನಾರಾಯಣಾಚಾರ್ಯ ಸೂಚಿಸಿಹರೆಂದು ೫

ತತ್ವ ಸಂಖ್ಯಾನಕ್ಕೂ ಕಥಾ ಲಕ್ಷಣಕ್ಕೂ
ತತ್ವ ವಿವೇಕಕ್ಕೂ ಋಗ್ಭಾಷ್ಯಕ್ಕೂ
ತತ್ವ ನಿರ್ಣಯಕ್ಕೂ ಪ್ರಮಾಣ ಲಕ್ಷಣಕ್ಕೂ
ತತ್ವೋದ್ಯೋತಕ್ಕೂ ಕರ್ಮ ನಿರ್ಣಯಕ್ಕೂ ೬

ಮಾಯಾವಾದ ಉಪಾಧಿ ಖಂಡನಗಳಿಗೂ
ಮಿಥ್ಯಾತ್ವಾನುಮಾನ ಖಂಡನಕ್ಕೂ
ನ್ಯಾಯ ವಿವರಣಕ್ಕೂ ಗೀತಾ ಭಾಷ್ಯಕ್ಕೂ
ನ್ಯಾಯ ತೇಜೋಜ್ವಲ ಗೀತಾ ತಾತ್ಪರ್ಯಕ್ಕೂ ೭

ಪಟ್ಪ್ರಶ್ನ ಈಶಾವಾಸ್ಯ ಭಾಷ್ಯಗಳಿಗೂ
ಅಷ್ಟಾದಶ ಈ ಗ್ರಂಥಗಳಿಗೆ
ಪಟು ಪಟೀಯಸವಾಗಿ ಟೀಕೆಯಾ ಬರೆದಿಹರು
ಇಷ್ಟೇ ಅಲ್ಲದೇ ಇನ್ನೂ ನಾಲ್ಕು ರಚಿಸಿಹರು ೮

ಪ್ರತ್ಯಕ್ಷ ಅನುಮಾನ ಆಗಮ ಪ್ರಮಾಣಗಳ
ರೀತಿ ಲಕ್ಷಣ ಪೇಳ್ವ ಪ್ರಮಾಣ ಪದ್ಧತಿಯು
ಮಾಧವನ ಸರ್ವೋತ್ತಮ ಜಗತ್ ಸತ್ಯತ್ವ
ಇಂಥಾದ್ದು ಸಾಧಿಸುವ ವಾದಾವಳಿಯು ೯

ತಂತ್ರಸಾರ ಪಾಂಚರಾತ್ರಾಗಮಾನುಸರಿಸಿ
ಪದ್ಯಮಾಲಾನಾಮ ಗ್ರಂಥದಲ್ಲಿ
ಶ್ರೀಧರ ಸರ್ವೋತ್ತಮಾರ್ಚನೆ ಬಗೆ ಪೇಳಿದರು
ಶತಾಪರಾಧ ಸ್ತೋತ್ರವು ಮಾಡಿಹರು ೧೦

ದಿಗ್ವಿಜಯ ಮಾಡಿ ಸಜ್ಜನರ ಉದ್ಧರಿಸುತ್ತಾ
ದುರ್ವಿದ್ಯಾ ದುರ್ಮತಗಳನ್ನ ಛೇದಿಸುತ
ಸುವೈದಿಕ ಮಧ್ವಸಿದ್ಧಾಂತ ಸ್ಥಾಪಿಸುತ
ಭುವಿಯಲಿ ಪ್ರಖ್ಯಾತರಾದರು ಜಯಾರ್ಯ ೧೧

ಒಂದು ಸಮಯದಿ ವಿದ್ಯಾರಣ್ಯರು ಶ್ರೀಮಧ್ವ
ಗ್ರಂಥ ಓದಿ ನೋಡಿ ಅರ್ಥವಾಗದಲೆ
ಗ್ರಂಥಕ್ಕೆ ಜಯರಾಯರು ಬರೆದ ಟೀಕೆಯ
ಓದಲು ಅರ್ಥವು ವಿಶದವಾಯ್ತು ೧೨

ಪೂರ್ವಾಪರ ಸಂಗತಿ ಮತ್ತು ವಾಕ್ಯಾರ್ಥ
ಸರ್ವ ಪ್ರಕಾರದಲೂ ಉತ್ತಮವಾಗಿಹುದು
ಸರ್ವಜ್ಞ ಮುನಿಗಳ ಗ್ರಂಥದ ಸರಿಯಾದ
ಭಾವವ ವಿವರಿಸುವುದೆಂದು ಹೇಳಿದರು ೧೩

ಈ ರೀತಿ ವಿದ್ಯಾರಣ್ಯರು ಕೊಂಡಾಡಿ
ಪುರಿ ರಾಜಬೀದಿಯಲಿ ಆನೆ ಅಂಬಾರಿ
ಮೆರವಣಿಗೆ ಮಾಡಿಸಿ ಜಯಘೋಷ ಮಾಡುತ್ತಾ
ಮರ್ಯಾದೆ ಮಾಡಿದರು ವಿಜಯನಗರದಲಿ ೧೪

ಮಧ್ವಗ್ರಂಥಗಳನ್ನು ಜಯಾರ್ಯ ಬರೆದಿರುವ
ಉತ್ತಮ ಟೀಕೆಗಳ ಬಲು ಶ್ಲಾಘಿಸುತ್ತ
ವಿದ್ಯಾರಣ್ಯರು ನಮಸ್ಕಾರ ಮಾಡಿದರು
ಎಂದು ಇತಿಹಾಸವ ಸುಜನರು ಪೇಳುವರು ೧೫

ಸ್ವಮತ ಪರಮತ ವಿದ್ವಜ್ಜನರಿಂದ
ಈ ಮಹಾಮಹಿಮ ಟೀಕಾಚಾರ್ಯ ಆರ್ಯ
ಈ ಮಹಿಯಲ್ಲಿ ಪ್ರಖ್ಯಾತ ಪೂಜಿತರಾಗಿ
ತಮ್ಮ ಗುರುಕ್ಷೇತ್ರ ಮಳಖೇಡ ಸೇರಿದರು ೧೬

ಮಳಖೇಡ ಕ್ಷೇತ್ರದಲ್ಲಿ ಕಾಗಿನೀ ನದಿತೀರ
ಮಾಲೋಲ ಪ್ರಿಯ ಅಕ್ಷೋಭ್ಯರ ವೃಂದಾವನ
ಶೀಲತಮ ಜಯರಾಯ ಅಲ್ಲಿಯೇ ನಿಂತರು
ಅಳವೇ ವರ್ಣಿಸಲು ಈ ಮಹಾತ್ಮರ ಮಹಿಮೆ ೧೭

ಹನ್ನೊಂದು ತೊಂಭತ್ತು ಶಕ ವಿಭವ ಆಷಾಢ
ಕೃಷ್ಣ ಪಂಚಮಿ ಪುಣ್ಯದಿನದಲ್ಲಿ ಇವರು
ತನ್ನ ಸೇವಾ ವಿಷ್ಣು ಮಧ್ವರಿಗೆ ಪೂರೈಸಿ
ಶ್ರೀ ನಾರಾಯಣನ ಪಾದ ಸೇರಿದರು ೧೮

ಮತ್ತೊಂದು ಅಂಶದಲ್ಲಿ ವೃಂದಾವನದಲ್ಲಿ
ಇದ್ದು ಸೇವಿಸುವವರ್ಗೆ ವಾಂಛಿತವೀಯುತ್ತ
ಮಧ್ವಸ್ಥ ಶ್ರೀ ಹರಿಯ ಧ್ಯಾನಿಸುತ ತಮ್ಮ ಗುರು
ಬದಿಯಲ್ಲಿ ಕುಳಿತಿಹರು ಸ್ಮರಿಸೆ ಪಾಲಿಪರು ೧೯

ವನರುಹಾಸನ ಪಿತ ಶ್ರೀ ಪ್ರಸನ್ನ ಶ್ರೀನಿವಾಸ
ಪೂರ್ಣ ಪ್ರಜ್ಞರ ಹೃತ್‌ಸ್ಥ ಜನ್ಮಾದಿ ಕರ್ತ
ಗುಣ ಪೂರ್ಣ ನಿರ್ದೋಷ ಶ್ರೀಯಃ ಪತಿಗೆ ಪ್ರಿಯ
ಘನ ಕರುಣಿ ಜಯತೀರ್ಥ ಗುರು ನಮೋ ಪಾಹಿ ೨೦

॥ಇತಿ ಶ್ರೀ ಜಯತೀರ್ಥ ವಿಜಯ ಸಂಪೂರ್ಣಂ ॥

ಶ್ರೀ ಬ್ರಹ್ಮಣ್ಯ ತೀರ್ಥ ಗುರುಗಳ ಸ್ತೋತ್ರ

೧೦೨

ವರ ಗುರುವರ್ಯ ಶ್ರೀ ಬ್ರಹ್ಮಣ್ಯತೀರ್ಥರ ।
ಚರಣ ಕಮಲಕೆ ನಾ ಅನುದಿನ ನಮಿಪೆ ಪ

ಪರಿಪರಿ ದುರಿತವ ತ್ವರಿತದಿ ತರಿದು ಶ್ರೀ ।
ಹರಿಮಧ್ವ ಚರಣಂಗಳಲಿ ಭಕ್ತಿ ಕೊಡುವಂತೆ ಅ ಪ

ವರ ಮಧ್ವಮುನಿ ಹೃಸ್ಥ ನರಹರಿ ಶ್ರೀಕೃಷ್ಣ ।
ಕರಗಳ ಕಟಿಯಲಿಟ್ಟಿರುವ ವಿಠಲರಾಯ ॥
ವರ ವೇದವ್ಯಾಸ ವರಾಹನರ್ಚಕರಾದ ।
ವರ ಪುರುಷೋತ್ತಮ ಮುನಿಕರ ಕಮಲಜ ೧

ವಿಪ್ರ ವೃದ್ಧರಿಗೆ ಇವರು ದಯವನ್ನು ಬೀರಿ ।
ಪುತ್ರ ಭಾಗ್ಯವನಿತ್ತು ಆ ವ್ಯಾಸ ಮುನಿಯನು ॥
ಸುಪ್ರಖ್ಯಾತರ ಮಾಡಿದಂಥ ಪ್ರಸಿದ್ಧರೀ – ।
ಸುಪ್ರಬುದ್ಧರ ಮಹಿಮೆಯು ಜ್ವಲಿಪುದು ಎಲ್ಲೂ ೨

ಪರಮ ದಯದಿ ಎನ್ನ ಕಷ್ಟದುರಿತ ಕೀಳ್ತು ।
ಪರಮ ಸದ್ಗುರುವರ್ಯರೆ ಪೊರೆಯಿರಿ ಎನ್ನ ॥
ಸರಸಿಜೋದ್ಭವ ತಾತ ' ಪ್ರಸನ್ನ ಶ್ರೀನಿವಾಸ '
ವರ ಕಾಂತಿಯಿಂ ಪ್ರಜ್ವಲಿಸುತಿಹ ನಿಮ್ಮೊಳು ೩ ಪ

ಪ್ರಸನ್ನ ಶ್ರೀಪಾದರಾಜರ ಅಣು ಚರಿತೆ

೧೦೩

ಪ್ರಥಮ ಕೀರ್ತನೆ

ಶ್ರೀ ಪಾದರಾಜಗುರು ಸಾರ್ವಭೌಮರ ಪಾದ
ನಾಪೊಂದಿ ಶರಣಾದೆ ಎಮ್ಮ ಪಾಲಿಪರು
ಶ್ರೀಪ ನರಹರಿ ಶಿಂಶುಮಾರ ಹಯಮುಖರಾಮ
ಗೋಪಿವಲ್ಲಭ ರಂಗ ಒಲಿದಿಹ ಮಹಂತ ಪ

ಶ್ರೀ ಹಂಸ ಲಕ್ಷ್ಮೀಶನಾಭಿ ಭವ ಸನಕಾದಿ
ಮಹಂತ ದೂರ್ವಾಸಾದಿಗಳ ಗುರು ಪರಂಪರೆಯ
ಮಹಾಪುರುಷೋತ್ತಮ ದಾಸ ಶ್ರೀ ಮಧ್ವವನ –
ರುಹ ಪಾದಗಳಲಿನಾ ಶರಣು ಶರಣಾದೆ ೧

ಕಲಿಯುಗದಿ ಸಜ್ಜನರು ದುರ್ಜನರ ದುಸ್ತರ್ಕ
ಕಲುಷವಾದಗಳಲ್ಲಿ ಮನಸೋತು ಪೋಗೆ
ಆಳುಕನ ಪರಮಪ್ರಸಾದ ಹೊಂದುವ ಜ್ಞಾನ
ಇಳೆಯಲಿ ಮಧ್ವ ಬೋಧಿಸಿದ ಅವತರಿಸಿ ೨

ಭಾರತೀಪತಿ ವಾಯು ಭಾವಿ ಬ್ರಹ್ಮನೇ ಮಧ್ವ
ಹರಿ ಆಜ್ಞೆಯಲಿ ಸುಜನರನುದ್ಧರಿಸೆ ಜನಿಸಿ
ಪರಮ ಸತ್ತತ್ವವಾದ ಅರುಪಿ ಬದರಿಗೆ
ತೆರಳಿದನು ತತ್‌ಪೂರ್ವ ಶಿಷ್ಯರ ನೇಮಿಸಿದ್ದ ೩

ವೈದಿಕ ಸದಾಗಮದಿ ಬೋಧಿತ ತಾತ್ವಿಕ
ದ್ವೈತ ಸಿದ್ಧಾಂತದ ಆದಿಗುರು ಮಧ್ವ
ಬದರಿಗೆ ತೆರಳಲು ಶ್ರೀ ಪದ್ಮನಾಭ –
ತೀರ್ಥರಾರೋಹಿಸಿದರು ಮಧ್ವಮತ ಪೀಠ ೪

ಈ ಆದಿಮಠ ಗುರು ಪರಂಪರೆಯು ನರಹರಿ
ತೀರ್ಥ ಮಾಧವತೀರ್ಥ ಅಕ್ಷೋಭ್ಯ ತೀರ್ಥ
ಮಾಧ್ವಗ್ರಂಥಗಳಿಗೆ ಟೀಕೆಯ ಬರೆದಿರುವ
ಜಗತ್‌ಪ್ರಖ್ಯಾತ ಜಯತೀರ್ಥ ಸಾಧು ಮುನಿವರ್ಯ ೫

ವಿದ್ಯಾಧಿರಾಜರು ಜಯತೀರ್ಥಜಾತರು
ವರ್ಧಿಸಿದರು ಈ ಆದಿ ಮಠವನ್ನ
ಆದಿಮಠ ಭಿನ್ನಾಂಶ ಮಠಗಳು ಪಂಕಜನಾಭ
ಮಾಧವಾಕ್ಷೋಭ್ಯರಿಂ ಪುಟ್ಟಿ ಇಹುದು ೬

ಪದುಮನಾಭಾದಿ ಈ ಸರ್ವ ಗುರುಗಳಿಗೆ ನಾ
ಆದರದಿ ಶರಣಾದೆ ಸಂತೈಪರೆಮ್ಮ
ಪದುಮನಾಭರು ತಾವೇ ಸ್ಥಾಪಿಸಿದ ಮಠದಲ್ಲಿ
ಮೊದಲನೇಯವರು ಶ್ರೀ ಲಕ್ಷ್ಮೀಧರರು ೭

ಶ್ರೀ ಲಕ್ಷ್ಮೀಧರ ತೀರ್ಥ ಸೂರಿಗಳ ವಂಶಜರು
ಮಾಲೋಲ ಶ್ರೀರಂಗನಾಥನ ಪ್ರಿಯ
ಶೀಲ ಯತಿವರ ಸ್ವರ್ಣವರ್ಣತೀರ್ಥರು ಅವರ
ಜಲಜಕರಜಾತ ಶ್ರೀಪಾದರಾಜಾರ್ಯ ೮

ಶ್ರೀಲಕ್ಷ್ಮೀಧರ ತೀರ್ಥ ಮೊದಲಾದ ಸರ್ವರ
ಕಾಲಿಗೆ ಎರಗುವೆ ಕರುಣಾಶಾಲಿಗಳು

ಶ್ರೀ ಲಕ್ಷ್ಮೀನಾರಾಯಣಾರ್ಯರ ಪ್ರಭಾವವು
ಬಲ್ಲನೆ ನಾನು ವರ್ಣಿಸಲು ಘನತರವು ೯

ಯತಿರಾಜರಿವರ ಮಹಿಮೆ ಬಹು ಬಹು ಬಹಳ
ವೇದ್ಯ ಎನಗೆ ಅತಿ ಸ್ವಲ್ಪವೇವೇ
ಅದರಲ್ಲೂ ಬಿಟ್ಟಿದ್ದು ಇಲ್ಲಿ ಪೇಳಿಹುದು
ಅತಿಕಿಂಚಿತ್ ಅಣುಮಾತ್ರ ಸುಜನರು ಆಲಿಪುದು ೧೦

ಕನ್ನಡ ಪ್ರದೇಶದಲಿ ಮಹಿಸೂರು ರಾಜ್ಯದಲಿ
ಚೆನ್ನಪಟ್ಟಣಕೆರಡು ಕ್ರೋಶದೊಳಗೇವೇ
ಸಣ್ಣ ಗ್ರಾಮವು ಅಬ್ಬೂರು ಎಂಬುದುಂಟು
ಕಣ್ವತೀರ್ಥಾಭಿಧ ಪುಣ್ಯನದೀತೀರ ೧೧

ವಿದ್ಯಾಧಿರಾಜರ ಕರಕಮಲೋತ್ಪನ್ನರು
ವೇದ ವೇದಾಂತ ಕೋವಿದರುಗಳು ಈರ್ವರು
ವಿದ್ಯಾಧಿರಾಜ ಈರ್ವರಲಿ ಪೂರ್ವಜರು
ವಾದಿಗಜ ಸಿಂಹ ರಾಜೇಂದ್ರ ಯತಿವರರು ೧೨

ರಾಜೇಂದ್ರ ತೀರ್ಥಜ ಜಯಧ್ವಜರ ಹಸ್ತ
ಕಂಜ ಸಂಜಾತ ಪುರುಷೋತ್ತಮ ತೀರ್ಥರು
ರಾಜರಾಜೇಶ್ವರ ಪಟ್ಟಾಭಿರಾಮನ್ನ
ಪೂಜಿಸುತ ಇದ್ದರು ಅಬ್ಬೂರಿನಲ್ಲಿ ೧೩

ಪುರುಷೋತ್ತಮಾರ್ಯರ ಮಹಿಮೆ ನರರಿಂದ
ಅರಿವುದಕೆ ಸಾಕಲ್ಯ ಶಕ್ಯವು ಅಲ್ಲ
ಶಿರಿವರನ ಪೂರ್ಣಾನುಗ್ರಹಕೆ ಪೂರ್ಣ
ಪಾತ್ರರಾಗಿಹ ಈ ಕರುಣಿಗೆ ಶರಣು ೧೪

ಘೃಣಿ ಸೂರ್ಯ ಆದಿತ್ಯ ತೇಜಸ್ಸಲಿ ಬೆಳಗುವ
ವಿನಯ ಸಂಪನ್ನ ಸುಬುದ್ಧಿಮಾನ್ ಬಾಲನ್ನ
ತನ್ನ ಬಳಿ ಕರೆತರಿಸಿ ಬ್ರಹ್ಮಣ್ಯ ತೀರ್ಥಾಖ್ಯ
ಅನಘ ನಾಮವನಿತ್ತು ಪ್ರಣವ ಉಪದೇಶಿಸಿದರು ೧೫

ವಾಜಿ ವಕ್ತ್ರನು ನರಸಿಂಹ ವಿಠಲನು
ಯಜ್ಞ ವರಾಹ ಶ್ರೀರಾಮ ಯದುಪತಿಯ
ಪೂಜಿಸುವ ಬಗ್ಗೆ ಮತ್ತೂಬ್ರಹ್ಮ ವಿದ್ಯಾ ಮಧ್ವ
ಸಚ್ಛಾಸ್ತ್ರ ಬೋಧಿಸುತ್ತಿಹರು ಬ್ರಹ್ಮಣ್ಯರ್ಗೆ ೧೬

ಪುರುಷೋತ್ತಮರನ್ನ ಕಾಣಲು ಅಬ್ಬೂರನ್ನ
ಕುರಿತು ಬರುತಿಹರು ಸ್ವರ್ಣವರ್ಣ
ತೀರ್ಥರು ಆಗ ಸಾಯಂಕಾಲ ಇನ್ನೆಷ್ಟು
ದೂರವೋ ಎಂದು ಶಂಕಿಸಿದರು ಮನದಿ ೧೭

ಮಾರ್ಗದಲಿ ದನಗಳ ಮೇಸುವ ಬಾಲಕರೊಳು
ಅಕಳಂಕ ವರ್ಚಸ್ವಿ ಹುಡುಗ ಓರ್ವನ್ನ
ತಾ ಕಂಡು ಪಲ್ಲಕ್ಕಿ ನಿಲ್ಲಿಸಿ ಕೇಳಿದರು
ಶ್ರೀಗಳು ಗ್ರಾಮಕ್ಕೆ ದೂರ ಎಷ್ಟೆಂದು ೧೮

ಅಹಸ್ಕ್ರಾಂತ ಗಗನಸ್ಥಸೂರ್ಯನ್ನ ನೋಡಿ
ಬಹು ಸಣ್ಣ ವಯಸ್ಸಿನ ಎನ್ನನ್ನು ನೋಡಿ
ಅಹಂ ಮಾ ಎಂದು ಕೂಗೋ ಧೇನುಗಳ ನೋಡಿ
ಬಹು ಸಮೀಪವು ಗ್ರಾಮ ಎಂದು ಸೂಚಿಸಿದ ೧೯

ಕುಶಾಗ್ರ ಬುದ್ಧಿಯ ಸೂಕ್ಷ್ಮತ್ವವ ನೋಡಿ
ಆ ಸ್ವಾಮಿಗಳಿಗೇ ಈ ಹುಡುಗ ಯಾರೆಂದು
ಭಾಸವಾಗಿ ಲೋಕರೀತಿಯಲಿ ಕೇಳಿದರು
ಹೆಸರು ಏನು ಯಾರ ಮಗ ಮನೆ ಎಲ್ಲಿ ೨೦

ನಮಿಸಿ ಸ್ವಾಮಿಗಳಿಗೆ ಕರಮುಗಿದು ಪೇಳಿದ
ಅಮ್ಮಗಿರಿಯಮ್ಮನು ತಂದೆಯು ಶೇಷಗಿರಿ
ಲಕ್ಷ್ಮೀನಾರಾಯಣಾಭಿದನು ತಾನೆಂದು
ಸಮೀಪಸ್ಥ ಹೊಲದಲ್ಲಿ ಮನೆಯ ತೋರಿಸಿದ ೨೧

ಕ್ರಮದಿ ಬರೆ ಓದು ವಿದ್ಯೆ ಕಲಿಯದಿದ್ದರೂ
ಸೂಕ್ಮ ಬುದ್ಧಿ ದೇಹಕಾಂತಿ ಮುಖ ವರ್ಚಸ್ಸ

ಸುಮಹಾ ಪೂರ್ವಸಾಧನದಿ ಎಂದರಿತರು
ಈ ಮಹಾ ಸೂರಿವರ್ಯರು ಶ್ರೀಸ್ವಾಮಿಗಳು ೨೨

ಅಬ್ಬೂರು ಸೇರಿ ಪುರುಷೋತ್ತಮರ ಕೈಯಿಂದ
ಉಪಚಾರಗಳನ್ನು ಕೊಂಡು ಬಾಲ
ತಪೋನಿಧಿ ಬ್ರಹ್ಮಣ್ಯರ ಕಂಡು ಅವರಂತೆ
ಒಬ್ಬ ಬಾಲನು ತಮಗೂ ಬೇಕೆಂದರು ೨೩

ತಥಾಸ್ತು ಎನ್ನುತಲಿ ಪುರುಷೋತ್ತಮರ
ತಂದೆ ತಾಯಿಗಳನ್ನು ಕರೆತರಿಸಿ ಬೇಗ
ಮುದದಿ ಮಾಡಿದರು ಲಕ್ಷ್ಮೀನಾರಾಯಣಗೆ
ವೇದಾಧಿಕಾರ ಬರುವಂಥ ಉಪನಯನ ೨೪

ಬಹ್ಮೋಪದೇಶಾದಿ ಮಂತ್ರೋಪದೇಶಗಳು
ವಿಹಿತ ರೀತಿಯಲ್ಲಿ ಆದ ತರುವಾಯ
ಬ್ರಹ್ಮಚಾರಿ ಆ ಬಾಲಕನಿಗೆ ಸಂನ್ಯಾಸ
ಮಹಾ ಪ್ರಣವ ಉಪದೇಶ ಕೊಟ್ಟರು ಗುರುವು ೨೫

ಗುರು ಸ್ವರ್ಣವರ್ಣ ತೀರ್ಥರು ವಾತ್ಸಲ್ಯವ
ಎರೆಯುತ್ತ ಲಕ್ಷ್ಮೀನಾರಾಯಣ ತೀರ್ಥ
ಆಶ್ರಮೋಚಿತ ನಾಮ ಕೊಟ್ಟು ಬಾಲನ್ನ
ಸೇರಿಸಿಕೊಂಡರು ತಮ್ಮ ಪರಂಪರೇಲಿ ೨೬

ಹಿಂದೆ ಶೇಷಗಿರಿಯಪ್ಪ ಗಿರಿಯಮ್ಮ ದಂಪತಿಯ
ಕಂದನು ದನ ಮೇಸೋ ಲಕ್ಷ್ಮೀನಾರಾಯಣ
ಇಂದು ಲಕ್ಷ್ಮೀನಾರಾಯಣ ತೀರ್ಥರಾಗಿ
ವೇದಾಂತ ಸಾಮ್ರಾಜ್ಯ ಯುವರಾಜನಾದ ೨೭

ವಿದ್ಯಾಧಿ ರಾಜ ರಾಜೇಂದ್ರ ಜಯಧ್ವಜ ಪುರು -
ಷೋತ್ತಮ ಬ್ರಹ್ಮಣ್ಯರಿಗೆ ನಮೋ ಲಕ್ಷ್ಮೀ
ಧರಾದಿ ಗುರುಗಳಿಗೂ ಸುವರ್ಣವರ್ಣರಿಗೂ
ಸದಾ ನಮೋ ಲಕ್ಷ್ಮಿನಾರಾಯಣ ತೀರ್ಥರಿಗೂ ೨೮

ರಾಜೀವ ಭವ ಪಿತ ರಾಜರಾಜೇಶ್ವರನು
ರಾಜೀವಾಲಯ ಪತಿಯ ಪ್ರಸನ್ನ ಶ್ರೀನಿವಾಸ
ಪ್ರಜ್ವಲಿಸುತಿಹ ಮಧ್ವರಾಜ ಸಹ ಶ್ರೀಪಾದ
ರಾಜರೊಳು ಇವರಲ್ಲಿ ಶರಣು ಶರನಾದೆ ೨೯ ಪ

-ಪ್ರಥಮ ಕೀರ್ತನೆ ಸಂಪೂರ್ಣಂ-

ದ್ವಿತೀಯ ಕೀರ್ತನೆ

ಶ್ರೀ ಪಾದರಾಜಗುರು ಸಾರ್ವಭೌಮರ ಪಾದ
ನಾಪೊಂದಿ ಶರಣಾದೆ ಎಮ್ಮ ಪಾಲಿಪರು
ಶ್ರೀಪ ನರಹರಿ ಶಿಂಶುಮಾರ ಹಯಮುಖರಾಮ
ಗೋಪೀವಲ್ಲಭ ರಂಗ ಒಲಿದಿಹ ಮಹಂತ ಪ

ಸ್ವರ್ಣವರ್ಣರೂ ಲಕ್ಷ್ಮೀನಾರಾಯಣರಿಗೆ
ಆಮ್ನಾಯ ನಿಗಮಾಂತ ವಿದ್ಯೆಗಳ ಕಲಿಸೆ
ಘನ ಮಹಾಪಾಂಡಿತ್ಯ ಪ್ರೌಢಿಮೆಯನು ಹೊಂದಿ
ಸಣ್ಣ ಯತಿ ಪ್ರಖ್ಯಾತರಾದರು ಜಗದಿ ೧

ವಿಭುದೇಂದ್ರ ರಘುನಾಥ ಮೊದಲಾದ ಯತಿವರರು
ಈ ಬಾಲಯತಿಯ ಪಾಂಡಿತ್ಯ ಪ್ರಭಾವವ
ಬಹು ಬಹು ಶ್ಲಾಘಿಸಿ ರಘುನಾಥರಿವರಿನ್ನ
'ಶ್ರೀಪಾದ ರಾಜರು' ಎಂದು ವರ್ಣಿಸಿದರು ೨

ಅಂದಿನಾರಭ್ಯ ಈ ಲಕ್ಷ್ಮೀ ನಾರಾಯಣರ
ಮಂದಿಗಳು ವಿದ್ವಜ್ಜನರು ಸಜ್ಜನರು
'ಆನಂದ ಉತ್ಸಾಹದಿ ಶ್ರೀಪಾದರಾಜ'
ರೆಂದು ಕರೆಯುವುದು ಅದ್ಯಾಪಿ ಕಾಣುತಿದೆ ೩

ರಂಗಕ್ಷೇತ್ರಕೆ ಬಂದು ಶ್ರೀ ಪಾದರಾಜ ಸಹ
ರಂಗನಾಥನ್ನ ಕಂಡು ಸ್ಥಾಪಿಸಿ ಮಠವ
ಭಂಗವಿಲ್ಲದೇ ಪೂಜಾ ಪ್ರವಚನವ ಗೈಯುತ್ತ
ತುಂಗಯತಿ ಸ್ವರ್ಣವರ್ಣರು ಕುಳಿತರಲ್ಲೇ ೪

ವರುಷಗಳು ಜರಗಿತು ಶ್ರೀಪಾದರಾಜರು
ಊರು ಊರಿಗೆ ದಿಗ್ವಿಜಯವ ಮಾಡುತ್ತ
ಪರ ಪಕ್ಷ ಕುಮತಗಳ ಭೇದಿಸಿ ಸತ್ತತ್ವ
ಆರುಪಿದರು ಯೋಗ್ಯಾಧಿಕಾರಿಗಳಿಗೆ ೫

ಮುಳಬಾಗಿಲು ಎಂದು ಆಧುನಿಕರು ಕರೆವಂಥ
ಒಳ್ಳೇ ಕ್ಷೇತ್ರಕ್ಕೆ ಬಂದು ಮಠದಲ್ಲಿ ಇರುತ್ತ
ಬಾಲಕರು ವೃದ್ಧರು ಯತಿಗಳಿಗೂ ಸದ್ವಿದ್ಯಾ
ಕಲಿಸುತ್ತಿದ್ದರು ತಾವೇ ಪಾಠ ಹೇಳುತ್ತಾ ೬

ಮುಳಬಾಗಿಲು ಕ್ಷೇತ್ರದಲ್ಲಿ ಹನುಮಂತ
ಶ್ರೀ ಲಕ್ಷ್ಮೀಪತಿಯನ್ನು ಸೇವಿಸುತ ಇಹನು
ಬಾಲೇಂದು ಶೇಖರನು ಗಿರಿಜಾ ಸಮೇತ
ಶೈಲ ತೋಟಗದ್ದೆ ಅಟವಿಗಳು ಇಹವು ೭

ಊರಿಗೆ ಕ್ರೋಶ ಮಾತ್ರದಿ ಇರುವ ಸ್ಥಳದಲಿ
ವರ ಮಧ್ವಸಿದ್ಧಾಂತ ಜಯ ಶಿಲಾ ಲಿಖಿತ
ಇರುವುದು ಅದ್ಯಾಪಿ ಕಾಣ ಬಹುದು ಅಲ್ಲೇ
ಭಾರಿತರ ವಾದವು ನಡೆಯಿತು ಹಿಂದೆ ೮

ಶ್ವೇತಕೇತು ಉದ್ದಾಲಕರ ಸಂವಾದ
ತತ್ವಮಸಿ ವಾಕ್ಯವೇ ವಾದ ವಿಷಯ
ವಾದಿಸಿದರು ವಿದ್ಯಾರಣ್ಯ ಅಕ್ಷೋಭ್ಯರು
ವೇದಾಂತ ದೇಶಿಕರ ಮಧ್ಯಸ್ಥ ತೀರ್ಮಾನ ೯

ಛಾಂದೋಗ್ಯ ಉಪನಿಷತ್ತಲಿರುವ ವಾಕ್ಯ
ಸ ಆತ್ಮಾ ತತ್ವಮಸಿ ಎಂಬುವಂಥಾದ್ದು
ಭೇದ ಬೋಧಕವೋ ಅಭೇದ ಬೋಧಕವೋ
ಎಂದು ವಾದವು ಆ ಈರ್ವರಲ್ಲಿ ೧೦

ಆತ್ಮ ಶಬ್ದಿತ ನಿಯಾಮಕಗೂ ನಿಯಮ್ಯ ಜೀವನಿಗೂ
ಭೇದವೇ ಬೋಧಿಸುವುದು ಆ ವಾಕ್ಯವೆಂದು

ಸಿದ್ಧಾಂತ ಅಕ್ಷೋಭ್ಯರು ಸ್ಥಾಪಿಸಿದರು
ಸೋತಿತು ವಿದ್ಯಾರಣ್ಯರ ಐಕ್ಯವಾದ ೧೧

ಮಧ್ಯಸ್ಥರಾಗಿದ್ದ ವೇದಾಂತ ದೇಶಿಕರು
ವಿದ್ಯಾರಣ್ಯ ಎಂಬುವ ಮಹಾರಣ್ಯವ
ತತ್ವಮಸಿ ಅಸಿಯಿಂದ ಅಕ್ಷೋಭ್ಯರು
ಭೇದಿಸಿದರೆಂದು ಬರೆದಿಹರು ತಮ್ಮ ಗ್ರಂಥದಲಿ ೧೨

ಶ್ರೀಪಾದರಾಜರ ಮಠವು ಆ ಸ್ಥಳಕೆ
ಸಮೀಪವೇ ಅಲ್ಲುಂಟು ನರಸಿಂಹ ತೀರ್ಥ
ಸುಪವಿತ್ರತ್ರೈ ಲೋಕ್ಯಪಾವನೆಗಂಗಾ
ಸುಪ್ರಸನ್ನಳು ಇಲ್ಲಿ ತೋರಿಹಳು ಸ್ಮರಿಸೇ ೧೩

ದಿಗ್ವಿಜಯ ಕ್ರಮದಲ್ಲಿ ಕಾಶೀ ಪಂಢರೀಪುರ
ಮುಖ್ಯ ಕ್ಷೇತ್ರಗಳಿಗೆ ಪೋಗಿ ಅಲ್ಲಲ್ಲಿ
ಭಗವಂತ ಶ್ರೀಪತಿಯ ಒಲಿಸಿಕೊಳ್ಳುವ ಮಾರ್ಗ
ಭಾಗವತ ಧರ್ಮ ಸಚ್ಛಾಸ್ತ್ರ ಬೋಧಿಸಿದರು ೧೪

ಅಲ್ಲಲ್ಲಿ ವಾದಿಸಿ ದುರ್ವಾದಿ ಕುಮತಿಗಳ
ಸುಳ್ಳು ಸೊಲ್ಲುಗಳನ್ನು ಬಳ್ಳಿಗಳ ತೆರದಿ
ಸೀಳಿ ಭೇದಿಸಿ ಸ್ಥಾಪಿಸಿದರು ಮಧ್ವಮತ
ಶೀಲತ್ವ ಔನ್ನತ್ಯ ವೇದ ಸನ್ನತಿಯ ೧೫

ಅಬ್ಬೂರಲ್ಲಿ ಶ್ರೀ ಸ್ವರ್ಣವರ್ಣ ತೀರ್ಥರು
ಶ್ರೀ ಪುರುಷೋತ್ತಮ ತೀರ್ಥರ ಕೈಯಿಂದ
ಸುಪ್ರೌಢ ಪಾಂಡಿತ್ಯ ಹೊಂದಿ ಪೀಠವ ಏರಿ
ಪರಿಪಾಲಿಸುತ್ತಿದ್ದರು ಯತಿ ಧರ್ಮ ೧೬

ಮಹಾಮಹಿಮ ಶ್ರೀ ಪುರುಷೋತ್ತಮರು ತಮ್ಮಯ
ಗುಹೆಯೊಳು ಕುಳಿತರು ಏಕಾಗ್ರ ಚಿತ್ತದಲಿ
ಮಹಾರ್ಹ ಕೇಶವನ ಆರಾಧಿಸುತಿಹರು
ಬಾಹ್ಯ ಜನರ ಸಂಪರ್ಕವಿಲ್ಲದಲೇ ೧೭

ಬ್ರಹ್ಮಣ್ಯ ತೀರ್ಥರು ಉದಾರ ಕರುಣೆಗಳು
ಬ್ರಾಹ್ಮಣ ಶ್ರೇಷ್ಠನ್ನ ಬದುಕಿಸಿ ಅವನ
ಗೃಹಿಣಿಗೆ ಮಾಂಗಲ್ಯ ಭಾಗ್ಯ ವರ್ಧಿಸಿ
ಮಹಾತ್ಮ ಪುತ್ರನ ಹಡೆಯೆ ವರ ನೀಡಿದರು ೧೮

ತಮಗೆ ಆ ಮಗುವನ್ನು ಕೊಡಬೇಕು ಎಂದು
ಬ್ರಹ್ಮಣ್ಯರು ಪೇಳಿದ್ದ ಅನುಸರಿಸಿ
ಆ ಮಗುವ ದಂಪತಿಗಳ್ ನೀಡೆ ಶಿಶುವು
ಶ್ರೀ ಮಠದಿ ಬೆಳೆಯಿತು ಗುರುಗಳ ಪಾಲನದಿ ೧೯

ಶ್ರೀ ಹರಿಗೆ ಅಭಿಷೀಕ್ತ ಹಾಲುಂಡು ಶಿಶು ಬೆಳೆದು
ಶ್ರೀ ಹರಿ ನೈವೇದ್ಯದಿಂ ವರ್ಧಿಸಿ ಬಾಲ
ವಿಹಿತ ವಯಸ್ಸಲ್ಲೇವೇ ಉಪನಯನವು ಆಗಿ
ಬ್ರಹ್ಮಣ್ಯರ ಕರದಿ ಲಭಿಸಿತು ಸಂನ್ಯಾಸ ೨೦

ಸರ್ವೋತ್ತಮ ಇಜ್ಯಪೂಜ್ಯ ಹರಿಸಾರಾತ್ಮ
ಸರ್ವೇಶ ಶ್ರೀವ್ಯಾಸ ಶ್ರೀಶನ ನಾಮ
ವ್ಯಾಸತೀರ್ಥರು ಎಂದು ಈ ಬಾಲಯತಿವರಗೆ
ಆಶ್ರಮ ನಾಮವಿತ್ತರು ಬ್ರಹ್ಮಣ್ಯರು ೨೧

ಪ್ರಣವಾದಿ ಮಂತ್ರಗಳ ತಾವೇವೇ ಬೋಧಿಸಿ
ಘನ ಬ್ರಹ್ಮ ವಿದ್ಯಾದಿ ಸಚ್ಛಾಸ್ತ್ರ ಕಲಿಯೆ
ಸಣ್ಣ ಯತಿವರ ಶ್ರೀ ಪಾದರಾಜರಲಿ
ಬ್ರಹ್ಮಣ್ಯತೀರ್ಥರು ಕಳುಹಿಸಿದರು ೨೨

ಶ್ರೀ ಪಾದರಾಜರು ವ್ಯಾಸರಾಯರಿಗೆ
ಸುಪ್ರೀತಿಯಲಿ ಸರ್ವ ವಿದ್ಯೆಗಳ ಕಲಿಸಿ
ತಾಪೋದಕಡೆ ದಿಗ್ವಿಜಯದಿ ಕರದ್ಹೋಗಿ
ಈ ಬಾಲ ಯತಿಗಳ ಪ್ರಭಾವ ಹರಡಿದರು ೨೩

ಶ್ರೀಪಾದರಾಜರು ಸ್ವಭಾವದಿ ಕೃಪಾಳುಗಳು
ಈ ಪುಣ್ಯ ಶ್ಲೋಕ ಶ್ರೀಗಳ ಮಹಿಮೆ ಏನೆಂಬೆ
ಸರ್ಪಬಾಧೆಯು ವ್ಯಾಸರಾಜರಿಗೆ ಸೋಕದೆ
ಕಾಪಾಡಿಹರು ಆ ಆಹಿಯ ಹೋಗೆಂದು ೨೪

ಶಂಖತೀರ್ಥದ ಮಹಿಮೆ ಶ್ರೀಪಾದರಾಜರು
ಶಂಕೆ ಇಲ್ಲದೇ ತೋರ್ಪಡಿಸಿಹರು ಜಗಕೆ
ಮಂಕುತನದಲಿ ಬ್ರಹ್ಮಹತ್ಯೆ ಮಾಡಿದವನ
ಕಳಂಕ ಕಳೆದರು ಶಂಖತೀರ್ಥ ಪ್ರೋಕ್ಷಣದಿ ೨೫

ಸಂದೇಹ ಪರಿಹರಿಸೆ ಮಠದಿ ಜನತಿಳಿವುದಕೆ
ತಂದಿಟ್ಟ ಕಪ್ಪುವಸ್ತ್ರದ ಮೇಲೆ ಶಂಖ
ತೀರ್ಥ ಪ್ರೋಕ್ಷಿಸಿ ಶುಭ್ರ ಬಿಳಿಯಾಗಿ ಮಾಡಿದರು
ಸದಾ ಶರಣು ಇವರಿಗೂ ಶಂಖತೀರ್ಥಕ್ಕೂ ೨೬

ಕಂಜ ಭವಪಿತ ಪಾಂಡುರಂಗನು ಶ್ರೀಪಾದ
ರಾಜರಿಗೆ ತಾನೇ ಒಲಿದದ್ದೇ ಕ್ಷೇತ್ರದ
ಮಂಜೂಷದಲಿ ಭಾಮಾ ರುಕ್ಮಿಣೀ ಸಮೇತ
ರಾಜೀವೇಕ್ಷಣ ರಂಗವಿಠಲನು ಒಲಿದಿಹನು ೨೭

ಸಾಳುವ ನರಸಿಂಹಾದಿ ರಾಜರು ಪ್ರಮುಖರು
ಪಾಳೆಯಗಾರರು ಮಂಡಲೇಶ್ವರರು
ಕೇಳಿ ಈ ಗುರುಗಳ ಪ್ರಭಾವ ನೋಡಿ
ಕಾಲಿಗೆ ಎರಗಿಹರು ಬಹುಭಕ್ತಿಯಿಂದ ೨೮

ಮುಳಬಾಗಿಲು ಮಠಕೆ ಐವತ್ತು ಕ್ರೋಶದೊಳು
ಸಾಳುವ ನರಸಿಂಹ ರಾಜನ ಅರಮನೆಯು
ಎಲ್ಲ ಕಾರ್ಯಗಳನ್ನು ಶ್ರೀಪಾದರಾಜರಲಿ
ತಿಳಕೊಂಡು ಅವರ ಆಜ್ಞೆಯಿಂದ ಆಳಿದನು ೨೯

ಚಂದ್ರಗಿರಿ ಎಂಬುವ ಪಟ್ಟಣದಿ ಆ ರಾಜ
ಮಂದಿರವು ವೇಂಕಟಾಚಲಕೆ ಸಮೀಪ
ಚಂದ್ರಸೋದರಿ ರಮಣ ವೇಂಕಟೇಶನ ಪೂಜೆ
ನಿಂತು ಹೋಗದೆ ಏರ್ಪಾಡು ಮಾಡೆಂದ ೩೦

ಗುರುಸಾರ್ವಭೌಮರು ಶ್ರೀಪಾದರಾಜರು
ಆ ರಾಜನ ಬಿನ್ನಹವನ್ನು ಲಾಲಿಸಿ
ತ್ವರಿತದಿ ಶ್ರೀ ವ್ಯಾಸರಾಜರ ಕಳುಹಿಸಿ
ತಿರುಪತಿ ವೇಂಕಟನ ಪೂಜೆಗೈಸಿದರು ೩೧

ರಾಜನ ಪ್ರಾರ್ಥನೆಗೆ ಒಪ್ಪಿ ಶ್ರೀಪಾದ
ರಾಜರು ಅರಮನೆಗೆ ಪೋಗಲು ಅಲ್ಲಿ
ಗಜ ತುರಗ ವಿಪ್ರಜನ ಪೂರ್ಣಕುಂಭಾದಿ ಸಹ
ರಾಜನು ಸ್ವಾಗತವ ನೀಡಿದನು ಮುದದಿ ೩೨

ವೇದ ಘೋಷಗಳೇನು ಮಂಗಳಧ್ವನಿ ಏನು
ವಾದ್ಯಮೇಳಗಳ ಸುಸ್ವರವು ಏನು
ಬೀದಿಯಲಿ ತೋರಣ ಪುಷ್ಪ ಮಂಟಪವೇನು
ಆದರದಿ ಸ್ವಾಗತದ ವೈಭವ ಏನೆಂಬೆ ೩೩

ಸಾಳುವ ನರಸಿಂಹನು ತನ್ನ ಸಿಂಹಾಸನ
ದಲ್ಲಿ ಶ್ರೀ ಶ್ರೀ ಪಾದರಾಜರನ್ನ
ಕುಳ್ಳಿರಿಸಿ ಕನಕಾಭಿಷೇಕವ ಮಾಡಿದ್ದನ್ನ
ಅಳವೇ ವರ್ಣಿಸಲಿಕ್ಕೆ ನೋಡಲಾನಂದ ೩೪

ಶಿರಿ ರಮಣ ಶಿಂಶುಮಾರನ ಪಾದದಲಿ ಸ್ಥಿರ
ಆಶ್ರಿತರು ಆದುದರಿಂದ ಧರೆಯಲ್ಲಿ
ಹರಿಸಮರ್ಪಿತ ಸರ್ವ ಭೋಗ್ಯಭಾಗ್ಯಂಗಳು
ಅರಣ್ಯದಲ್ಲಿದ್ದರೂ ಜನರಿಗೆ ದೊರೆಯುವವು ೩೫

ರಾಜೀವ ಭವ ಪಿತ ರಾಜರಾಜೇಶ್ವರನು
ರಾಜೀವಾಲಯ ಪತಿಯ ಪ್ರಸನ್ನ ಶ್ರೀನಿವಾಸ
ಪ್ರಜ್ವಲಿಸುತಿಹ ಮಧ್ವರಾಜ ಸಹ ಶ್ರೀಪಾದ
ರಾಜರೊಳು ಇವರಲ್ಲಿ ಶರಣು ಶರನಾದೆ ೩೬

ತೃತೀಯ ಕೀರ್ತನೆ

ಶ್ರೀ ಪಾದರಾಜಗುರು ಸಾರ್ವಭೌಮರ ಪಾದ
ನಾಪೊಂದಿ ಶರಣಾದೆ ಎಮ್ಮ ಪಾಲಿಪರು
ಶ್ರೀಪ ನರಹರಿ ಶಿಂಶುಮಾರ ಹಯಮುಖರಾಮ
ಗೋಪಿವಲ್ಲಭ ರಂಗ ಒಲಿದಿಹ ಮಹಂತ ಪ

ದೀನ ದಯಾಳು ಶ್ರೀ ಪಾದರಾಜರು
ಜನರು ಭಾಗೀರಥೀಯಾತ್ರೆ ಮಾಡಲಿಕೆ
ಹಣವು ತ್ರಾಣವು ಸಾಲದು ಎಂದು ಅರಿತು
ಜಾಹ್ನವಿಯ ತರಿಸಿದರು ನೃಸಿಂಹ ತೀರ್ಥದಲಿ ೧

ಶ್ರೀಮದ್ವಿಷ್ಣಂಘ್ರಿನಿಷ್ಠಾಃ ಅತಿ ಗುಣಗುರುತಮ
ಶ್ರೀಮದಾನಂದ ತೀರ್ಥಃ ಎಂದು ಸಂಸ್ತುತ್ಯ
ಶ್ರೀಮಧ್ವಾಚಾರ್ಯರ ಪ್ರಿಯತಮರು ಕರೆದಲ್ಲಿ
ಅಮರ ತಟನೀ ಬಂದದ್ದೇನು ಆಶ್ಚರ್ಯ ೨

ಶ್ರೀ ಮದ್ವಿಷ್ಣಂಘ್ರಿ ಸಂಭೂತೆಯು ತನ್ನಯ
ವಿಮಲ ತೀರ್ಥವ ನರಸಿಂಹ ತೀರ್ಥದಲಿ
ಧಿಮು ಧಿಮು ಎಂದು ಪ್ರವಹಿಸಲು ಜನಸರ್ವರೂ
ಸಮ್ಮುದದಿ ಪೂಜಿಸಿದರು ವಿಹಿತ ರೀತಿಯಲಿ ೩

ಹಿಂದೆ ಇಂದ್ರನು ತನ್ನಯ ವಜ್ರದಿಂದ
ಅದ್ರಿಗಳ ಪಕ್ಷಿಗಳ ಕಡೆದ ತೆರದಿ
ಇಂದು ಶ್ರೀಪಾದರಾಜರು ಕುಮತ ಹೀರಿ ಪಕ್ಷಗಳ
ಭೇದಿಸಿದರು ತಮ್ಮ ವಾಗ್ವಜ್ರದಿಂದ ೪

ಆನಂದ ತೀರ್ಥರ ನಿಜಾನಂದಪ್ರದ ಶಾಸ್ತ್ರ
ಬಂದು ಬೇಡಿದ ಭಾಗ್ಯ ಅಧಿಕಾರಿಗಳಿಗೆ
ಕುಂದು ಕೊರತೆ ಏನೂ ಇಲ್ಲದೆ ಬೋಧಿಸಿ
ಇಂದಿರೇಶನ ಪ್ರಸಾದವ ಒದಗಿಸಿಹರು ೫

ಚಂದ್ರಿಕಾ ನ್ಯಾಯಾಮೃತ ತರ್ಕತಾಂಡವ
ಮೊದಲಾದ ಗ್ರಂಥಗಳ ರಚಿಸಿದ ಪ್ರಖ್ಯಾತ
ವಾದಿಗಳ ಕೇಸರಿ ವ್ಯಾಸಮುನಿ ಮುಖ್ಯ
ಮೇದಿನಿ ಸುರರಿಗೆ ವಿದ್ಯಾ ಕಲಿಸಿಹರು ೬

ಶ್ರೀರಂಗ ವಿಠಲ ರುಕ್ಮಿಣೀ ಸತ್ಯಭಾಮಾ
ತೋರಿ ತಾವೇ ತಮ್ಮ ಪ್ರತೀಕಗಳೊಳಗೆ ನಿಂತು
ಸೂರಿವರ ಶ್ರೀಪಾದರಾಜರ ಕೈಯಿಂದ
ಭರದಿ ಪೂಜಾ ಸ್ತೋತ್ರ ಕೀರ್ತನೆ ಕೊಂಡಿಹರು ೭

ಅನುಪಮ ಅನುತ್ತಮ ಗುಣಗಣಾರ್ಣವ ರಮಾ –
ನಾಥನು ಜಗಜ್ಜನ್ಮಾದ್ಯಖಿಲೈಕ ಕರ್ತಾ
ವಿಷ್ಣು ಸರ್ವೇಶ್ವರ ಸ್ವತಂತ್ರ ಅನಘ ಮಹಿಮಾ
ಕನ್ನಡ ನುಡಿಯಲಿ ಸಹಸ್ರಾರು ಹಾಡಿಹರು ೮

ಪ್ರತಿ ಒಂದು ಪದ ವಾಕ್ಯ ನುಡಿ ಪದ್ಯ ಕೀರ್ತನೆಯು
ಇಂದಿರಾಪತಿಯಲ್ಲಿ ನಿಶ್ಚಲ ಭಕ್ತಿ
ಬಂಧಮೋಚಕ ಜ್ಞಾನ ಸಾಧನವಾಗಿರುವವು
ಆದರದಿ ಪಠಿಸೆ ಇಹಪರ ಸುಖಪ್ರದವು ೯

'ಸ್ಮರಿಸಿದವರನು ಕಾವ ನಮ್ಮ ಸೂರ್ಯಾನೇಕ ಪ್ರಭಾವ
ಸುರಮುನಿಗಳ ಸಂಜೀವ ಶ್ರೀ ವೆಂಕಟೇಶ ನಮ್ಮ
ಪೊರೆವ' ಎಂದಾರಂಭಿಸುವ ಕೀರ್ತನೆ ಪಠಿಸೆ
ಸುಶ್ರವಣವು ಮಾಳ್ಪರ ಭಾಗ್ಯವೇ ಭಾಗ್ಯ ೧೦

ಶ್ರೀಪಾದರಾಜರು ಶಿರಿ ವೇಂಕಟೇಶನ
ತಾಪೋಗಿ ಕಂಡು ಧ್ಯಾನದಿ ಸದಾ ನೋಡಿ
ಸೌಭಾಗ್ಯ ಪ್ರದ ಈ ಕೀರ್ತನೆ ಹಾಡಿಹರು
ಸುಪುಣ್ಯ ಭಾಗಿಗಳೇ ಪಠಿಸಿ ಕೇಳುವರು ೧೧

ಭಕ್ತಿಯಿಂದ ಪಠಿಸುವ ಕೇಳುವ ಸಜ್ಜನರು
ಓದಿ ಕೇಳಿದ್ದು ಕೃಷ್ಣಗರ್ಪಿಸಲು
ಬದಿಯಲ್ಲೇ ತಾನಿದ್ದು ಯೋಗಕ್ಷೇಮವ ವಹಿಪ
ಶ್ರೀದ ವೇಂಕಟ ಜನಾರ್ದನ ಕೃಷ್ಣ ಶ್ರೀಶ ೧೨

ಧನ ಧಾನ್ಯ ಆರೋಗ್ಯ ಆಯುಷ್ಯ ಕೀರ್ತಿಯ
ಘನ ವಿಘ್ನಕಷ್ಟ ಪರಿಹಾರ ಜಯ ಎಲ್ಲೂ
ಜ್ಞಾನ ಉದ್ಭಕ್ತಿ ಸಂತೋಷ ಹರಿ ಅಪರೋಕ್ಷ
ಸಾಧನವು ಇವರ ಈ ಕೀರ್ತನೆ ಪಠನ ೧೩

ಜಯ ಜಯ ಜಗತ್ರಾಣ ಜಗದೊಳಗೆ ಸುತ್ರಾಣ
ಅಖಿಲ ಗುಣ ಸದ್ಧಾಮ ಶ್ರೀ ಮಧ್ವನಾಮಾ
ಜಯಾ ಸಂಕರುಷಣ ಸಂಭೂತ ಮುಖ್ಯ –
ವಾಯು ಹನುಮ ಭೀಮ ಮಧ್ವನ ಸ್ತೋತ್ರ ೧೪

ಈ ಮಧ್ವನಾಮಾಖ್ಯ ಸ್ತವರಾಜವನ್ನು
ನಮ್ಮ ಶ್ರೀಪಾದ ರಾಜಾರ್ಯ ರಚಿಸಿ
ನಮಗೆಲ್ಲರಿಗಿತ್ತು ನಮಗೆ ಸೌಭಾಗ್ಯವ
ಪ್ರೇಮದಿಂದಲಿ ಒದಗಿಸಿಹರು ಕರುಣಾಬ್ಧಿ ೧೫

ಸ್ಮರಿಸಲಾಕ್ಷಣ ಕಾಯ್ವ ಪುರಂದರ ದಾಸಾರ್ಯರ
ಪರಂಪರೆ ವಿಜಯಾರ್ಯ ಗೋಪಾಲದಾಸಾರ್ಯ
ಸೂರಿ ಗೋಪಾಲಾರ್ಯ ಶಿಷ್ಯರು ಜಗನ್ನಾಥ
ದಾಸರಾಯರು ಫಲಶ್ರುತಿ ಬರೆದಿಹರು ೧೬

ವರ ಮಧ್ವ ನಾಮಕ್ಕೆ ಬರೆದಿರುವ ಫಲಶ್ರುತಿಯ
ಭರದಿ ಪಠಿಸುವವರು ಶ್ರೀ ಮಧ್ವನಾಮ

ಉತ್ಕೃಷ್ಟ ಮಹಾತ್ಮ್ಯ ಉಳ್ಳದ್ದೆಂದರಿವರು
ಬರುವುದು ಅನುಭವಕೆ ಮಧ್ವನಾಮ ಓದಿ ೧೭

ಶ್ರೀ ಲಕ್ಷ್ಮೀನಾರಾಯಣ ರಾಮ ಹಯಶೀರ್ಷ
ಭೈಷ್ಮೀ ಸತ್ಯಾಯುತ ರಂಗ ವಿಠಲ
ಶ್ರೀ ಮದಾಚಾರ್ಯ ಪೂಜಿತ ಗೋಪೀನಾಥನ್ನ
ಸಮ್ಮುದದಿ ಪೂಜಿಸುವ ಯೋಗಿವರ ಆರ್ಯ ೧೮

ಗಂಗೆ ಪ್ರತಕ್ಷ ತೋರಲು ಬಾಗಿನ ಕೊಟ್ಟು
ಜಗ ಜನ್ಮಾದ್ಯಖಿಳ ಕರ್ತನ್ನ ಪೂಜಿಸುತ್ತ
ಜಗದೇಕ ಗುರುಮಧ್ವ ಸಚ್ಛಾಸ್ತ್ರ ಭೋದಿಸಿ
ಝಗಿ ಝಗಿಪ ತೇಜಸ್ಸಲಿ ಹೊಂದಿದರು ಸಮಾಧಿ ೧೯

ಶಾಲಿಶಕ ಹದಿನಾಲ್ಕುನೂರೆಂಟನೆ ವರುಷ
ಶುಕ್ಲ ಚತುರ್ದಶಿ ಜೇಷ್ಠ ಮಾಸದಲ್ಲಿ
ಶೀಲತಮ ಭಾವದಲಿ ಳಾಳುಕನ ಧ್ಯಾನಿಸುತ
ಕುಳಿತರು ಸಮಾಧಿಯಲಿ ಹರಿಪುರಯ್ಯೆದಿದರು ೨೦

ಶಿಂಶುಮಾರ ಪುರವನ್ನಯ್ಯೆದಿತಾ ಮತ್ತೊಂದು
ಅಂಶದಲಿ ಸುಪವಿತ್ರ ವೃಂದಾವನದಿ ಭಾಸಿಸುತ ಇರುತಿಹರು
ಬ್ರಹ್ಮ ವಿದ್ಯಾಲಯ – ಶ್ರೀಶಪ್ರಿಯ
ನರಸಿಂಹ ತೀರ್ಥ ಮಂದಿರದಿ ೨೧

ದರ್ಶನವು ಪಾಪಹರ ಪ್ರದಕ್ಷಿಣೆ ಹರಿಯಾತ್ರೆ
ವಿಶ್ವಾಸದಿಂದ ನಮಸ್ಕಾರ ಸರ್ವೇಷ್ಟ
ಐಶ್ವರ್ಯ ಜ್ಞಾನಾದಿ ಫಲಪ್ರದವು ಯೋಗ್ಯರಿಗೆ
.ಸಂಸ್ಮರಿಸಲು ಸರ್ವ ಸಿದ್ಧಿದಾಯಕವು ೨೨

ಸಿಂಧೂರ ಅಜಮಿಳ ಸುಧಾಮ ಪ್ರಹ್ಲಾದಾದಿ
ಭಕ್ತರ ಪರಿಪಾಲಕರನು ಶ್ರೀರಮಾಪತಿಯ
ಸದಾ ಒಲಿಸಿಕೊಂಡಿಹ ಮಹಂತ ಗುರುವರ
ಶ್ರೀಪಾದರಾಜರೇ ನಮೋ ನಮೋ ಪಾಹಿ ೨೩

ರಾಜೀವ ಭವ ಪಿತ ರಾಜರಾಜೇಶ್ವರನು
ರಾಜೀವಾಲಯ ಪತಿಯು ಪ್ರಸನ್ನ ಶ್ರೀನಿವಾಸ
ಪ್ರಜ್ವಲಿಸುತಿಹ ಮಧ್ವರಾಜ ಸಹ ಶ್ರೀಪಾದ
ರಾಜರೊಳು ಇವರಲ್ಲಿ ಶರಣು ಶರನಾದೆ ೨೪

॥ ಇತಿ ಶ್ರೀ ಪಾದರಾಜರ ಅಣು ಚರಿತೆ ಸಂಪೂರ್ಣಂ॥

ಶ್ರೀ ಪಾದರಾಜರ ಸುತ್ತಿ

೧೦೪

ಶ್ರೀ ಪಾದರಾಜಗುರು ಸಾರ್ವಭೌಮರ ಪಾದ
ನಾಪೊಂದಿ ಶರಣಾದೆ ಎಮ್ಮ ಪಾಲಿಪರು
ಶ್ರೀಪ ನರಹರಿ ಶಿಂಶುಮಾರ ಹಯಮುಖರಾಮ
ಗೋಪಿವಲ್ಲಭರಂಗ ಒಲಿದಿಹ ಮಹಂತ ಪ

ಶ್ರೀಹಂಸ ಲಕ್ಷ್ವೀಶನಾಭನ ದೂರ್ವಾಸ
ಮಹಂತ ಸನಕಾದಿಗಳ ಗುರು ಪರಂಪರೆಯ
ಮಹಾಪುರುಷೋತ್ತಮ ದಾಸ ಶ್ರೀ ಮಧ್ವವನ-
ರುಹ ಪಾದಗಳಲಿ ನಾ ಶರಣು ಶರಣಾದೆ ೧

ರಾಜೀವಭವ ಪಿತ ರಾಜರಾಜೇಶ್ವರನು
ರಾಜೀವಾಲಯ ಪತೆ "ಪ್ರಸನ್ನ ಶ್ರೀನಿವಾಸ"
ರಾಜೀವ ಹೃತ್‌ಪದ್ಮದಲಿ ಜ್ವಲಿಪ ಶ್ರೀಪಾದ
ರಾಜರಿಗೆ ಶರಣಾದೆ ಎಮ್ಮ ಪಾಲಿಪರು ೨

ಶ್ರೀವ್ಯಾಸರಾಜರು

೧೦೫

ಪಾಲಿಸೋ ಯತಿರಾಜ ಪಾಲಿಸೋ
ಪಾಲಿಸೋ ಮುನಿ ವ್ಯಾಸ ರಾಜ । ಜಗ -

ತ್ತಲ್ಲಿ ನಿನ್ಮಹಿಮೆ ಸುಭ್ರಾಜ । ಅಹ ।
ಕಾಲಲ್ಲಿ ಶರಣಾದೆ ಶ್ರೀ ಲೋಲ ಪ್ರಿಯ ನಿನ್ನ
ಆಳೆಂದು ಗಣಿಸಿ ಪಾಲಿಪುದೆನ್ನ ಪ್ರತಿಕ್ಷಣ । ಪಾಲಿಸೋ । ಪ

ದಿನಪ ಸುತೇಜ ಬ್ರಹ್ಮಣ್ಯ । ತೀರ್ಥ
ಮುನಿಸಾರ್ವಭೌಮರ ದಿವ್ಯ । ಚಾರು
ವನರುಹ ಕರದಿಂದ ಉದಯ । ಇನ್ನು
ಏನೆಂಬೆ ನಿನ್ನ ಪ್ರಾಬಲ್ಯ । ಅಹ ।
ದೀನ ವತ್ಸಲ ನಿನ್ನ ಶರಣು ಹೊಕ್ಕೆನು ನಾನು
ಎನ್ನ ಭಾಗ್ಯೋದಯ ತವ ಕಾರುಣ್ಯದಿ ಇನ್ನು ೧

ಕರುಣಿ ಸುಶಾಂತ ಸುವರ್ಣ । ವರ್ಣ
ತೀರುಥಕರ ಕಂಜೋತ್ಪನ್ನ । ಸು
ಸ್ಥಿರ ವರಭಕ್ತಿ ವಿಜ್ಞಾನ । ಸಂ –
ಪನ್ನ ಶ್ರೀ ಪಾದಾರ್ಯರನ್ನ । ಅಹ ।
ಸೇರಿ ಸೇವಿಸಿ ವಾದಿ ಕರಿ ಪಂಚಾನನಾದ
ಸೂರಿ ಸಜ್ಜನನುತ ವ್ಯಾಸ ಮುನೀಂದ್ರ ೨

ಮಾಲೋಲ ಕೃಷ್ಣಸುಪ್ರಿಯರು । ನಿತ್ಯ
ಕಾಳೀಶ ನಿಮ್ಮೊಳ್ ಪ್ರಚುರರು । ಮತ್ತು
ವ್ಯಾಳೇಶ ಅಂಶ ಸಂಯುತರು । ಎಂದು
ಹೇಳೋರು ಹೀಗೆ ವಿಬುಧರು । ಅಹ ।
ಕೀಳುವಿಷಯದಿ ಎನ್ ಮನ ಸೋಲದೇ ಹೊರ
ಒಳಗಿಪ್ಪ ಹರಿರೂಪ ವ್ಯಾಳೆ ವ್ಯಾಳೆಗೆ ತೋರು ೩

ದ್ವಾಸಪ್ತತಿ ಸಹಸ್ರ । ನಾಡಿ
ತತ್ರಸ್ಥ ರೂಪ ಸಮೀರ । ಅವನ
ವಿಂಶತಿ ಮೇಲೇಳು ನೂರು । ಪ್ರತಿಮ
ನೀ ಸ್ಥಾಪಿಸದಿಯೋ ಹೇ ಧೀರ । ಅಹ
ಈ ಸಮಸ್ತ ಹನುಮರೂಪ ಒಂದೊಂದರೊಳ್
ಶತರೂಪ ಸ್ಮರಣೀಯ ಶ್ರೀಶ ಸಾಸಿರ ನಾಮ ೪

ಸಾತ್ಯವತೀಯ ವೇದಾರ್ಥ । ಅರಿತು
ಮಧ್ವಗೇಹನು ವಿವರಿಸಿದ । ಆಗ
ಜಯರಾಯ ತತ್ ಟೀಕೆ ಬರೆದ । ಈಗ
ವ್ಯಾಸರಾಯನು ವಿವರಿಸಿದ । ಅಹ
ಮಿಥ್ಯಾ ತತ್ವವ ಪೇಳ್ದ ಮಾಯ್‌ಗಳ ಬಾಯ್ ಮುಚ್ಚಿ
ನಿತ್ಯ ಸುಖವನೀವ ತತ್ವ ಬೋಧಿಸಿದಿ ೫

ಮಾರ್ತಾಂಡ ಕತ್ತಲೆ ಕಳೆವ । ತರ್ಕ
ತಾಂಡವ ದುಸ್ತರ್ಕ ತರಿವ । ಬಂಡು
ಮಿಥ್ಯಾವಾದಿಗಳ ದುರ್ಮತವ । ತುಂಡು
ತುಂಡುಮಾಡಿದ ನ್ಯಾಯಾಮೃತವ । ಅಹ
ಕೊಂಡಾಡಳಲವೇ ಚಂದ್ರಿಕಾ ಈವ ಆಹ್ಲಾದವ
ಬ್ರಹ್ಮಾಂಡದೊಡೆಯನ ಅಮೃತ ಪ್ರಸಾದವ ೬

ಪ್ರಣವ ಮಂತ್ರದಿ ಲಕ್ಷ್ಮೀರಮಣ । ಎಂಟು
ವರ್ಣ ಮಂತ್ರದಿ ಶ್ರೀರಮಣ । ವಿಷ್ಣು
ಷಡ್ವರ್ಣದಲ್ಲಿ ಸತ್ಯಾರಮಣ ಹಾಗೂ
ವರ್ಣ ಸರ್ವದಿ ರಮಾ ರಮಣ । ಅಹ
ಧ್ವನಿ ವರ್ಣ ಪ್ರತಿಪಾದ್ಯ ಸತ್ತಾದಿ ದಾತ
ಅನುತ್ತಮ ಹರಿ ರೂಪ ಗುಣ ಕ್ರಿಯಾ ಹಾಡಿದಿ ೭

ಭೂಪನ ಹರಿಯಾಸನವ ನೀ ಏರ್ದಿ । ಏರಿ
ನೃಪವರನಪಮೃತ್ಯು ತರಿದಿ । ಯತಿ
ತಪಸ್ವಿಗಳಿಗೆ ಪಾಠ ಪೇಳ್ದಿ । ಸರ್ವ
ವಿಭುದರಿಂದಲಿ ಪೂಜ್ಯನಾದಿ । ಅಹ ।
ಗೋಪಾಲ ಅಸುಪಾಲನ್ನೊಲುಮೆ ನಿನ್ನಲ್ಲೆಷ್ಟೋ
ಶ್ರೀಪನ ದಾಸವೃಂದಬ್ಜ ಕೂಟಕೆ ಸೂರ್ಯ ೮

ನರಸಿಂಹ ಗೋಪಾಲ ಕೃಷ್ಣ । ಯಜ್ಞ
ವರಾಹ ಪಟ್ಟಾಭಿರಾಮನ್ನ । ಬಹು

ಪರಾಶರ್ಯಾದಿ ರೂಪನ್ನ । ನಿತ್ಯ
ನಿರುತ ಸಂಪೂಜಿಪ ಘನ್ನ । ಅಹ
ವರಭಕ್ತಾಗ್ರಣಿ ನೀನು ಸರಸಿಜಾಸನ ಪಿತ
'ಪ್ರಸನ್ನ ಶ್ರೀನಿವಾಸ' ನ್ನೊಲಿಸೋ ಎನಗೆ ಜೀಯ ೯ ಪ

॥ ಸಂಪೂರ್ಣಂ ॥

ಶ್ರೀ ಶೇಷ ಚಂದ್ರಿಕಾರ್ಯರ ಸ್ತೋತ್ರ

೧೦೬

ಶೇಷಚಂದ್ರಿಕಾ ಆರ್ಯರೇ ಶರಣು ಶೇಷಚಂದ್ರಿಕಾ
ಶೇಷಶಾಯಿ ನಿರ್ದೋಷ ಗುಣಾಂಬುಧಿ ಶ್ರೀಶಗೆ –
ಪ್ರಿಯ ರಘುನಾಥ ಯತೀಂದ್ರ –
ಇಂದಿರಾ ಸಹ ಹಂಸ ಬೋಧಿತ ಪ

ಮಂದಜಭವ ಸನಕಾದ್ಯರ ವಂಶಜಾ
ನಂದ ಮುನೀಂದ್ರ ಪರಂಪರ ಲಕ್ಷ್ಮಿ
ನಾರಾಯಣ ಯೋಗೀಂದ್ರ ಸಂಜಾತ ಶೇಷಚಂದ್ರಿಕಾರ್ಯರೇ ೧

ಭೈಷ್ಮಿ ಮೈಥಿಲಿ ಈಶ ಶ್ರೀ ಕೃಷ್ಣ ರಾಮನ್ನ
ತೋಷಿಸಿ ತಂತ್ರ ಸುಸಾರದಿ ಅರ್ಚಿಸಿ
ಭಾಷ್ಯ ದೀಪಿಕಾರ್ಯ ತತ್ ಶಿಷ್ಯ ಶಿಷ್ಯ ಜಗನ್ನಾಥ
ಯತಿ ಸಂಸೇವಿತ ಕಾವೇರಿ ನರ –
ಸಿಂಹ ಕ್ಷೇತ್ರದಿ ಇಷ್ಟ ಶೇಷಚಂದ್ರಿಕಾ ಆರ್ಯರೇ ಶರಣು ೨

ಬಂಧು ಭಯದಿಂದ ಹೊರನಿಂದೆ ಮಂದನ್ನ
ದಯದಿಂದ ಒಳಕರತಂದು ಸದನುಸಂಧಾನ
ಒದಗಿಸಿ ಅರವಿಂದಜ ತಾತ
ಪ್ರಸ್ಸನ ಶ್ರೀನಿವಾಸ ಪ್ರಿಯಕರ ನರಾಂಶ ಸಂಯತ ಗುರುವರ –
ಮಹಂತ ಶರಣು – ೩ ಪ

ಶ್ರೀ ಕೇಶವ ತೀರ್ಥ ಸ್ತೋತ್ರ

೧೦೭

ಸೂರಿ ಪ್ರಾಪ್ಯ ಘೃಣಿ ಶೌರಿ ಶ್ರೀರಮಾಪತಿ ಪ್ರಿಯರು
ಸೂರಿವರ ಬ್ರಹ್ಮಣ್ಯ ತೀರ್ಥ ಆರ್ಯರ ಸುಸರೋಜ
ಕರಜಾತ ಜಗತ್ಖ್ಯಾತ ವ್ಯಾಸರಾಜಾರ್ಯರ ಹಸ್ತ
ಸುವ್ರತ ನಿಜೋತ್ಪನ್ನ ಕೇಶವ ತೀರ್ಥಾರ್ಯರ್ಗೆ ವಂದೇ ಪ

ಮುಖ್ಯಪ್ರಾಣ ಪವಮಾನ ಸುರಮಾತರೀಶ್ವಗುರು
ಪ್ರದ್ಯುಮ್ನ ಅನಿರುದ್ಧ ಪುರುಷ ನರಸಿಂಹ ಶ್ರೀಶ
ಪ್ರಜ್ಯೋತಿರ್ಮಯ ಉಗ್ರವೀರ ವಿಶ್ವವ್ಯಾಪಿ ವಿಷ್ಣುವು
ಮೃತ್ಯು ಮೃತ್ಯು ಸ್ತಂಭದಿಂ ಬಂದು ಪ್ರಹ್ಲಾದನ್ನ ಪೊರೆದ ೧

ನರಸಿಂಹನಾಜ್ಞೆಯಿಂ ಪ್ರಹ್ಲಾದ ಸಿಂಹಾಸನವೇರೆ
ನೆರೆದಿದ್ದ ಸುಮನಸರು ಹರಿಭಕ್ತ ಜನರು
ಸೂರಿಗಳು ಆ ವೈಭವ ಕಂಡು ಕೇಳಿ ಜಯಪರಾಕ್
ಪರಾಕೆಂಬ ದಿವ್ಯಾನುಭವ ಜ್ಞಾನಿ ಕೇಶವ ತೀರ್ಥ ೨

ಹಿಂದಿನ ಪ್ರಹ್ಲಾದ ಇಂದು ವ್ಯಾಸಮುನಿರಾಜರಾಗಿ
ದುಸ್ತರ್ಕ ಧ್ವಂಸಕರ ತರ್ಕತಾಂಡವ ಬೋಧಿಸಿ
ಹಿತಕರ ನ್ಯಾಯ ಪೀಯೂಷವ ಉಣಿಸಿ ಆಹ್ಲಾದ
ಚಂದ್ರಿಕಾಸುಖ ನೀಡಿ ಯತ್ಯಾಶ್ರಮ ಇತ್ತರಿವರ್ಗೆ ೩

ಶ್ರೀವ್ಯಾಸರಾಯರು ಅನುಗ್ರಹಿಸಿ ಕೇಶವ ತೀರ್ಥ
ದಿವ್ಯ ನಾಮಾಂಕಿತವ ಪ್ರಣವಾದಿ ಮಂತ್ರ ಉಪದೇಶ
ನಿರ್ವ್ಯಾಜ ನಿಶ್ಚಲ ಭಕ್ತಿಮಾನ್ ವಿನಯಸಂಪನ್ನ ಈ
ಶಿಷ್ಯನಿಗೆ ಕೊಟ್ಟದ್ದು ಸಜ್ಜನರು ಹೊಗಳಿದರು ೪

ಶ್ರೀರಂಗದಲಿ ಉತ್ತರಾರಣ್ಯ ಬೀದಿಯಲ್ಲಿಹ
ಶ್ರೀ ಕೃಷ್ಣಮಂದಿರದಿ ಶ್ರೀವ್ಯಾಸರಾಯ ಮಠದಿ

ಚಾರುತರ ಚತುರ್ವಿಂಶತ್ ವಿಷ್ಣು ಮೂರ್ತಿಗಳುಂಟು
ತತ್ರಗೋಲಕ ಕ್ರಮದಿ ಶ್ರೀಹರಿಯ ಚಿಂತಿಪರು ೫

ಬ್ರಹ್ಮ ಗಾಯತ್ರಿ ಮನು ಇಪ್ಪತ್ತು ನಾಲ್ಕಕ್ಷರದಲಿ
ತಂ ಆದಿ ಯಾತ್ ಅಂತ ಒಂದೊಂದರಲಿ ಒಂದುಹರಿಯ
ಅಮಲ ಸುಪೂರ್ಣ ಕೇಶವಾದಿ ಕೃಷ್ಣಾಂತ ರೂಪ
ಆ ಮೊದಲು ತಂ ಅಲ್ಲಿ ತಾರಕೇಶವನು ಧ್ಯಾತವ್ಯ ೬

ಬಲದಕೆಳಗಿನ ಕರದಿಪದ್ಮ ಮೇಲೆ ಶಂಖ
ಜ್ವಲಿಪ ಚಕ್ರವು ಮೇಲಿನ ಎಡದ ಹಸ್ತದಲ್ಲಿ
ಕೆಳಗಿನ ಎಡಕರದಿ ಗದೆಯ ಹಿಡಿದಿಹ
ಜಲಜಸಂಭವ ಭವಾದ್ಯರ ಸ್ವಾಮಿ ಕೇಶವನು ೭

ದಶಪ್ರಮತಿ ಸರಸೀರುಹನಾಭ ನರಹರಿ
ಅಸಮ ಮಾಧವ ಅಕ್ಷೋಭ್ಯ ಜಯವಿದ್ಯಾಧಿರಾಜ
ಅಸಚ್ಛಾಸ್ತ್ರಗಿರಿಕುಲಿಶ ರಾಜೇಂದ್ರ ಜಯಧ್ವಜ
ಶ್ರೀಶವಶಿ ಪುರುಷೋತ್ತಮ ಬ್ರಹ್ಮಣ್ಯ ವ್ಯಾಸತೀರ್ಥ ೮

ಹಂಸವಿಧಿ ಸನಕಾದಿಗಳಾರಭ್ಯ ಸನಾತನ
ಸುಶೀಲ ಈ ಗುರು ಪರಂಪರೆಯಲಿ ವ್ಯಾಸಮುನಿ
ಸರೋಜ ಕರಜಾತ ಕೇಶವ ತೀರ್ಥರು ಹೀಗೆ
ಕೇಶವನ್ನ ಧ್ಯಾನಿಸಿ ಒಲಿಸಿ ಕೊಂಡದ್ದು ಸಹಜ ೯

ಹರಿಪ್ರೀತಿ ಸಮರ್ಪಕ ಯತ್ಯಾಶ್ರಮ ಧರ್ಮಗಳ
ಚರಿಸುತ ಗುರು ಸೇವಾರತರಾಗಿ ಇರುತಿಹ
ಬರುವ ಶಿಷ್ಯರಿಗೆ ಸೌಲಭ್ಯ ವಾತ್ಸಲ್ಯ ನೀಡುತ
ಸೇರಿದರು ಪರಮತಿ ವೇಲೂರೆಂಬ ಕ್ಷೇತ್ರವನ್ನು ೧೦

ಶಲ್ಯ ರಾಜನ್ನ ಜ್ಞಾಪಿಸುವ ಶುಕವನ ಕ್ಷೇತ್ರದಿಂ
ಒಳ್ಳೆಯ ರಸ್ತೆ ಹದಿನೈದು ಕ್ರೋಶ ದೂರದಿ ಇಹುದು
ಪ್ರಹ್ಲಾದ ವರದ ನಾರಸಿಂಹ ನಾಮಗಿರಿ ದೇವಿ
ಬಲಜ್ಞಾನರೂಪ ಮಾರುತಿ ಇರುವ ನಾಮಕಲ್ಲು ೧೧

ನಾಮಶೈಲದಿಂದ ರಂಗ ತಾನೇ ತೋರಿದ ವೇಂಕಟ
ರಮಣ ಪಶುಪತಿಕ್ಷೇತ್ರ ಕರೂರಿಗೆ ಹೋಗುವ
ರಮಣೀಯ ಮಾರ್ಗ ಮಧ್ಯದಲ್ಲಿಯೇ ಇರುತಿಹವು
ಪರಮತಿ ವೇಲೂರು ಸುಪುಣ್ಯ ಕಾವೇರಿಯು ೧೨

ಸರ್ವಸುಗುಣಾರ್ಣವನು ಅನಘ ಸರ್ವೋತ್ತಮನು
ಸರ್ವಕರ್ತಾಗಮೋದಿತನು ಜಿಜ್ಞಾಸ ಜನ್ಯ ಜ್ಞಾನ
ಸಂವೃದ್ಧಿ ಸಾಧನಾನುಕೂಲ ಚತುರ್ವೇದಿ ಮಂಗಳ
ದಿವ್ಯ ಪರಮತಿಯು ಅಲ್ಲಿ ಲೌಕೀಕರೇ ತುಂಬ ೧೩

ಸಪರಮತಿ ಸಮೀಪದಲ್ಲೆ ಚನ್ನಕೇಶವ ವೇಲಿ
ಪುರವುಂಟು ಅದನ್ನ ವೇಲೂರೆಂದು ಹೇಳುವರು
ಪರಮತಿ ವೇಲೂರು ಕಾವೇರಿ ಪೋಷಿತವು ತೀರ
ಪರಮ ಭಾಗವತ ಋಷಿ ಸಂಚಾರ ವಾಸಸ್ಥಾನ ೧೪

ರಸಪೂರಿತ ಮಾವು ತೆಂಗು ಕದಲೀಫಲವೃಕ್ಷ
ಬಿಸಜ ಮಲ್ಲಿಗೆ ಜಾಜಿ ಕುಸುಮ ಪರಿಮಳವು
ಹಂಸ ಪಾರಾವತ ತಿತ್ತರಾಶುಕ ಇಂಥಾ ಸುಪಕ್ಷಿ
ಶ್ರೀಶನಂಘ್ರಿ ಸಂಬಂಧಿ ವರಜಾಯುಕ್ ಕಾವೇರೀ ಸರಿತ ೧೫

ಶ್ರೀಮನೋರಮ ಕೇಶವನ್ನ ಆರಾಧಿಸಿ ಧ್ಯಾನಿಸಲು
ಈ ಮನೋಹರ ಶಾಂತ ಸುಪವಿತ್ರ ಕ್ಷೇತ್ರವೆಂದು
ತಮ್ಮಯ ಬಾಹ್ಯ ಚಟುವಟಿಕೆಗಳ ನಿರೋಧಿಸಿ
ಸಮೀರಸ್ಥ ಶ್ರೀಹರಿಯ ಧ್ಯಾನಾದಿರತರಾದರು ೧೬

ಯುಕ್ತಕಾಲದಿ ಈ ಸಂನ್ಯಾಸರತ್ನ ಕೇಶವಾರ್ಯರು
ಭಕ್ತಿವೈರಾಗ್ಯ ಯುಕ್ ಜ್ಞಾನ ಸಂಪನ್ನ ಶ್ರೀಹರಿಯ
ಚಿಂತಿಸುತ ತ್ರಿಧಾಮನ ಪುರವನ್ನ ಯೈದಿದರು
ವೃಂದಾವನದಲ್ಲಿ ಒಂದಂಶದಲಿ ಇರುತಿಹರು ೧೭

ಕಾಲ ಧೀರ್ಘದಲಿ ಗ್ರಾಮಜನ ಬದಲಾವಣೆಯಿಂ
ಎಲ್ಲಿ ವೃಂದಾವನ ಸ್ಥಾನ ಇದೆ ಎಂದು ಸರಿಯಾಗಿ

ಹೇಳುವವರು ಸುಲಭದಿ ದೊರಕುವುದು ಶ್ರಮ
ತಿಳಿದವರ ಸಹಾಯದಿಂ ಗುರುದಯದಿ ಸಾಧ್ಯ ೧೮

ಸದಾಪಾಣಿ ಭೀಮಸೇನ ಆರಾಧ್ಯ ಶ್ರೀಕೃಷ್ಣನು ಮತ್ತು
ಪದ್ಮಾಲಯಾಪತಿ ಪುಂಡರೀಕಾಕ್ಷನ್ನು ಶ್ರೀವಿಶ್ವನ್ನು
ಮಧ್ವಸ್ಥ ಪರಮಾತ್ಮನ್ನು ಸ್ಮರಿಸಿ ವೃಂದಾವನವ
ಸಂದರ್ಶನ ಮಾಡಿ ಸೇವಾ ಸ್ವಗುರೂಪದೇಶ ವಿಧಿ ೧೯

ಸ್ಮರಣ ದರ್ಶನ ಪ್ರದಕ್ಷಿಣ ನಮನ ಕೀರ್ತನ
ಶಾಸ್ತ್ರಾಧ್ಯಯನ ಪ್ರವಚನ ಭಕ್ತಿಯಿಂದಲಿ ಪೂಜಾ
ಪರಿಶುದ್ಧ ನೈವೇದ್ಯ ಎಷ್ಟೆಷ್ಟು ಸಾಧ್ಯವು ಅಷ್ಟು
ಹರಿಗುರು ಪಾದೋದಕ ಶುಭದ ಸರ್ವಾಭೀಷ್ಟದ ೨೦

ಆದರದಿ ಈ ಸ್ತೋತ್ರ ಪಠನ ಶ್ರವಣ ಮಾಳ್ಪರ್ಗೆ
ಭಕ್ತಿ ಮೇಧ ಆಯುಷ್ಯ ಆರೋಗ್ಯ ಸೌಭಾಗ್ಯಗಳೀವ
ಪದ್ಮಜನಪಿತನು ಶ್ರೀ ಪ್ರಸ್ನನ ಶ್ರೀನಿವಾಸನು
ವಂದೇ ವಿಧಿಮಧ್ವ ವ್ಯಾಸಮುನಿ ಕೇಶವಾರ್ಯಾಂತಸ್ಥ ೨೧

॥ ಶ್ರೀ ಶ್ರೀ ಕೇಶವ ತೀರ್ಥ ಸ್ತೋತ್ರ ಸಂಪೂರ್ಣಂ ॥

ಭಾವಿ ಸಮೀರ ಶ್ರೀ ವಾದಿರಾಜ ಸ್ವಾಮಿ ಸ್ತೋತ್ರ

೧೦೮

ಪಾಲಿಸೋ ಗುರುರಾಜ ಪಾಲಿಸೋ
ಪಾಲಿಸೋ ಗುರು ವಾದಿರಾಜ ॥ ಪೊಗಳ –
ಲಳವೇ ನಿನ್‌ಮಹಿಮೆ ಮಹೋಜ ॥ ಅಹ
ಹಂಸ ಹಯಾಸ್ಯ ವರಾಹ ಕೇಶವ ಪ್ರಿಯ
ಹಂಸಾರೂಢ್ಯನೆ ನಮೋ ಶರಣು ಮಾಂಪಾಹಿ ಪ

ವಾಗ್ವಿಭವನು ಗುರುವರ್ಯ ॥ ಮಹಾ
ಯೋಗಿ ವರನು ಯತಿವರ್ಯ ॥ ಶಿರಿ

ವಾಗೀಶ ಕರ ಪದ್ಮದುದಯ ॥ ನಾಗಿ
ಜಗತ್ತಲ್ಲಿ ಮಾಡಿ ದಿಗ್ವಿಜಯ ॥ ಅಹ
ಜಗವನಳೆದ ಮೂರ್ತಿ ತರಿಸಿ ನಿಲ್ಲಿರಿಸಿ
ಪೊಗಳೆ ಮುಕ್ಕಣ್ಣಾದಿ ಸುರರೇಬಲ್ಲರು ೧

ಜೀವೋತ್ತಮ ವಿದ್ಯುತ್ಪತಿಯ ॥ ನಿತ್ಯ
ಅವೇಶಯುತ ವ್ಯಾಸರಾಯ ॥ ಮುನಿ
ಸರ್ವಾಭೌಮರ ಸೇರಿ ದಿವ್ಯ ॥ ವಾದ
ಮಾಧ್ವ ವೈದಿಕ ಬ್ರಹ್ಮವಿದ್ಯ ॥ ಅಹ
ಸುವಿಚಾರ ಪ್ರವಚನರತನಾಗಿ ಭುವಿ
ತತ್ವವ ಶ್ರುತಿ ಯುಕ್ತಿ ಯುಕ್ತದಿ ಬೋಧಿಸಿದ ೨

ಕೂರ್ಮತೀರ್ಥವು ಧವಳಗಂಗೆ ॥ ಅದರ
ನಿರ್ಮಲ ಲಲಿತ ತರಂಗ ॥ ಲಿಪ್ತ
ಚರ್ಮ ತೊಳೆದು ಪಾಪಭಂಗ ॥ ಮಾಡಿ
ಧರ್ಮ ಆಚರಣೆ ನಿಸ್ಸಂಗ ॥ ಅಹ ॥
ಬುದ್ಧಿಯ ಒದಗಿಸಿ ಗುರು ಸೇವಾರತಿಯಿತ್ತು
ಮಧ್ವಾಂತರ್ಗತ ಶ್ರೀಶನಲಿ ಭಕ್ತಿ ತೋರ್ಪುದು ೩
ಧವಳ ಗಂಗೆಗೆ ಪೂರ್ವಾದೇಶ ॥ ದಲ್ಲಿ
ದೇವದೇವೋತ್ತಮ ವ್ಯಾಸ ॥ ದೇವ
ಅವಲೋಕಿಸುತ ಇಹ ಪಂಚ ॥ ವೃಂದಾ
ವನ ಮಧ್ಯದಲ್ಲಿ ಪ್ರವೇಶ ॥ ಅಹ ॥
ಮಾಡಿದಿರಿ ತ್ರಿವಿಕ್ರಮನನಂತ ಗುಣಕ್ರಿಯ
ದೃಢಧ್ಯಾನೋಪಾಸನ ಮಾಳ್ಪ ಮಹಂತ ೪

ಪೂರ್ಣೇಂದು ಪೋಲುವ ಮುಖವ ॥ ಕಮಲ
ಕರ್ಣಿಕೆ ವರ್ಣದಿ ಪೊಳೆವ ॥ ಗಾತ್ರ
ಪೂರ್ಣಲಕ್ಷಣ ಸಂಯುತವ ॥ ದಿವ್ಯ
ಫಣಿಯಲ್ಲಿ ಪುಂಡ್ರವು ಊರ್ಧ್ವ ॥ ಅಹ
ಪೀತ ಸುವರ್ಣ ಸುರೇಶ್ಮಿ ವಸನ ಉಟ್ಟ
ಪದ್ಮಜ ಪಾದಾರ್ಹನೆ ನಿನ್ನ ಕಂಡೆ ನಾ ಶರಣು ೫

ಗುರುವಾದಿರಾಜ ನಿನ್ ದೂತ ॥ ವೀರ
ಭದ್ರನೋಪಮ ಬಲವಂತ ॥ ಬಾಧೆ
ವಿದ್ರಾವ ಕ್ಷಣದಿ ಮಾಳ್ಪಂತ ॥ ಅತಿ
ಶೂರ ಅದ್ಭುತ ಶಕ್ತಿಮಂತ ॥ ಅಹ ॥
ನಾರಾಯಣಾಹ್ವಯ ಭೂತರಾಜನು ಎನ್ನ
ಸಂರಕ್ಷಿಸುವ ಗುರುರಾಜ ನಿನ್ ದಯದಿ ೬

ಒಡೆಯ ಶ್ರೀಪತಿಹಯವದನ ॥ ತಾನೇ
ಕಡಲೆ ಮಡ್ಡಿಯನ್ನು ನಿನ್ನ ॥ ಕೈಯಿಂದ
ಉಂಡದ್ದು ಚತುರ್ದಶ ಭುವನ ॥ ಖ್ಯಾತಿ
ಈಡಿಲ್ಲ ಸ್ಮರಿಸೆ ಪಾವನ್ನ ॥ ಅಹ ॥
ಕುಸುಮಜಪಿತ ಉಕ್ತ ಅಭಯ
ಪ್ರಸನ್ನ ಶ್ರೀನಿವಾಸನ್ನೊಲಿಸೋ ಎನಗೆ ೭ ಪ

ಶ್ರೀ ಭಾವಿ ಸಮೀರ ವಾದಿರಾಜ ಗುರುಗಳ ಸ್ತೋತ್ರ

೧೦೯

ವಾದಿರಾಜ ಗುರುರಾಜರ ಚರಣಕೆರಗಿರೋ
ಸಂದೇಹ ಇಲ್ಲದೇ ಇವರ ಭಜಿಸಿ ಬದುಕಿರೋ ಪ

ಗೌರಿಗದ್ದೆ ಕ್ಷೇತ್ರದಲ್ಲಿ ರಾಮಾಚಾರ್ಯ ಸರಸ್ವತೀ ।
ವಿಪ್ರಶ್ರೇಷ್ಠರ ನಿಮಿತ್ತೀಕರಿಸಿ ಇಳೆಯಲಿ ತೋರಿಹರು ೧

ಯೋಗೀ ವಾಗೀಶ ತೀರ್ಥರಕರ ಕಮಲಜಾತ ॥
ಗಾಗಿ ವಾದಿರಾಜ ತೀರ್ಥರಾದ ವಾದಿಗಜಸಿಂಹ ೨

ವೀರಭದ್ರೋಪಬಲಿ ನಾರಾಯಣ ಭೂತರಾಜ ।
ಪರಿ ಪರಿ ವಿಧದಿ ಇವರಿಗೆ ಸೇವೆ ಮಾಡುವರು ೩

ವಾದಿರಾಜರ ಭಕ್ತರ ಸರ್ವ ಬಾಧೆಗಳ ಪರಿಹರಿಸೆ ।
ಒದಗುವರು ಭಾವಿರುದ್ರರು ಭೂತರಾಜರು ೪

ಯುಕ್ತಿ ಮಲ್ಲಿಕಾದಿ ದಿವ್ಯ ಶ್ರುತಿಸ್ಮೃತಿ ಯುಕ್ತಯುತ ।
ಗ್ರಂಥಗಳ ಕುಮತ ಭಂಜಕ ಜ್ಞಾನ ಪುಂಜವು ೫

ತ್ರಿವ್ಯನ್ನಾಮ ತ್ರಿವಿಕ್ರಮನ ಸೋದೆಯಲ್ಲಿ ನಿಲ್ಲಿರಿಸಿದ ।
ಭಾವಿ ಸಮೀರರ ನೇಮಿಸಿ ಕ್ಷೇಮಾಕಾಂಕ್ಷಿಗಳು ೬

ಧವಳ ಗಂಗೆಯಲಿ ವೇದವ್ಯಾಸನ ಮುಂದೆ
ಪವಿತ್ರ ವೃಂದಾವನದಿ ಇಹರ ನೋಡಿ ಧನ್ಯರು ನಮಸ್ಕರಿಸುತ ೭

ಶ್ರೀ ವಿಜಯೀಂದ್ರ ತೀರ್ಥರ ಚರಿತೆ

೧೧೦

ಪ್ರಥಮ ಕೀರ್ತನೆ

ವಿಜಯೀಂದ್ರ ತೀರ್ಥರ ಪದಯುಗದಿ
ನಿಜಭಕ್ತಿ ಯಿಂ ಶರಣಾದೆ ಸತತ
ಅಬ್ಜಸಂಭವ ಜನಕ ಅಂಬುಜಾಲಯ ಪತಿ
ರಾಜರಾಜೇಶ್ವರಗೆ ಪ್ರಿಯತಮ ಯತೀಂದ್ರ ಪ

ಹಂಸ ಲಕ್ಷ್ಮೀಮಶ ನಾಭಿಭವ ಸನಕಾದಿ
ಮಹಂತರ ಸೂರಿಗಳ ಗುರು ಪರಂಪರೆಯ
ಮಹಾ ಪುರುಷೋತ್ತ ಮದಾಸ ಶ್ರೀಮಧ್ವವನ
ದೃಹ ಪಾದಗಳಲ್ಲಿ ನಾ ಶರಾಣು ಶರಣಾದೆ ೧

ಅರವಿಂದನಾಭ ನರಹರಿ ಮಾಧವತೀರ್ಥ
ಸೂರಿಕುಲ ತಿಲಕ ಅಕ್ಷೋಭ್ಯ ಜಯತೀರ್ಥ
ಪರ ವಿದ್ಯಾಕುಶಲ ಶ್ರೀ ವಿದ್ಯಾದಿರಾಜರ
ಜಯೀಂದ್ರರ ಚರಣಂಗಳಲಿ ನಾ ಶರಣು ೨

ಕೋವಿದ ಶಿರೋಮಣಿ ಕವೀಂದ್ರ ವಾಗೀಶರು
ಭಾವುಕಾಗ್ರಣಿ ರಾಮಚಂದ್ರ ವಿಭುದೇಂದ್ರ

ದೇವ ಹರಿಪ್ರಿಯ ಜಿತಾಮಿತ್ರ ಯತಿವರರು ರಘುನಂದನ
ದೇವಿ ತುಳಸೀಪತಿಯ ಒಲಿಸಿಕೊಂಡ ಸುರೀಂದ್ರರು ೩

ಈ ಸರ್ವ ಗುರುಗಳ ಚರಣ ಕಮಲಗಳಲ್ಲಿ
ನಾ ಸರ್ವದಾ ಶರಣು ಶರಣೆಂಬೆ ಮುದದಿ
ವ್ಯಾಸಮುನಿ ಪ್ರಿಯಮಿತ್ರ ಶ್ರೀಸುರೇಂದ್ರರ ಕರ
ಸರಸಿಜದಿಜಾತ ವಿಜಯೀಂದ್ರರಲಿ ಶರಣು ನಾ ೪

ವಿದ್ಯಾಧಿರಾಜ ಸುತ ರಾಜೇಂದ್ರತೀರ್ಥರ
ಪದ್ಮ ಕರದುದಯ ಜಯಧ್ವಜರ ಹಸ್ತ
ವೃತತಿಜೋತ್ಪನ್ನ ಪುರುಷೋತ್ತಮ ಮಹಾಮಹಿಮ
ಯತಿಕುವರ ಸೂರಿವತ ಬ್ರಹ್ಮಣ್ಯತೀರ್ಥ ೫

ಬ್ರಹ್ಮಣ್ಯತೀರ್ಥಾಖ್ಯ ಖಗಕರದಿ ಅರಳಿತು
ಮಹಿಯಲಿ ಪ್ರಖ್ಯಾತ ವ್ಯಾಸಮುನಿ ಅಬ್ಜ
ಬಹುಮಂದಿ ಈ ಸುಮನ ಪರಿಮಾಳಾಕರ್ಷಿತರು
ಬ್ರಹ್ಮವಿದ್ಯಾ ಮಕರಂದದಿ ಮೋದಿಸಿದರು ೬

ಪೂರ್ವಜನ್ಮದಿ ನಾರದರಿಂದ ಉಪದಿಷ್ಟ
ವ್ಯಾಸರಾಜರು ಶ್ರೀಪಾದರಾಜರಲಿ
ಸರ್ವವಿದ್ಯಾ ಕಲಿತು ವಾದಿಗಜಹರಿ ಆಗಿ
ತತ್ವ ಬೋಧಿಸಿ ಸಜ್ಜನರ ಕಾಯ್ದಿಹರು ೭

ಋಜುಮಾರ್ಗದಲಿ ಇರುವ ಯತಿವಟು ಗೃಹಸ್ಥರು
ನಿಜಭಕ್ತಿ ಶ್ರದ್ಧೆಯಿಂದಲಿ ಶ್ರೀವ್ಯಾಸ–
ರಾಜರಲಿ ವಿದ್ಯಾಭ್ಯಾಸ ಮಾಡಲು ಆಗ
ಪ್ರಜಾಪೇಕ್ಷೆ ಭಿನ್ನೈಸಿದ ವಿಪ್ರಶಿಷ್ಯ ೮

ಆವಿಪ್ರೋತ್ತಮನಿಗೆ ಪ್ರಜಾ ಅನುಗ್ರಹ ಮಾಡಿ
ಪ್ರವರ ಪುತ್ರನ ತಮ್ಮ ಮಠಕ್ಕೆ ಕೊಡಬೇಕು
ಅವರಜರು ಸಂತತಿ ಅಭಿವೃದ್ಧಿಗೆ ಇರಲು
ಈ ವಿಧದಿ ಹೇಳಿದರು ಶ್ರೀ ವ್ಯಾಸಮುನಿಯು ೯

ಕೊಟ್ಟವರ ತಪ್ಪದೇ ವಿಪ್ರಪತ್ನಿಗೆ ಶಿಶು
ಹುಟ್ಟುವ ಸಮಯದಲಿ ಗುರುಗಳು ಕೌಶೇಯ
ತಟ್ಟೆಯ ಕಳುಹಿಸಿ ಭೂಸ್ಪರ್ಶ ಇಲ್ಲದಲೇ
ಹುಟ್ಟಿದ ಮಗುವನ್ನು ಹಿಡಿಯ ಹೇಳಿದರು ೧೦

ಶ್ರೀಮಠಕ್ಕೆ ವಿಪ್ರನು ಆ ಬಾಲಕನನ್ನು
ನೇಮಿಸಿದ ರೀತಿಯಲಿ ಒಪ್ಪಿಸಿ ಅಲ್ಲಿ
ರುಕ್ಮಿಣಿನಾಥ ವಿಠಲನ ಪೆಸರಿಂದ
ವಿಮಲವಟು ವಿದ್ಯಾರ್ಥಿ ಸನ್ಯಾಸಿ ಆದ ೧೧

ವಿಟ್ಠಲಾಚಾರ್ಯನು ಶ್ರೀ ವ್ಯಾಸರಾಜರಲಿ
ಶಿಷ್ಯವಿಲ್ಲದೇ ಅಷ್ಟು ಶಾಸ್ತ್ರ ಕಲಿತು ಚತುಃ
ಷಷ್ಟಿ ವಿದ್ಯಾದಲ್ಲಿ ಸಹನಿಪುಣನಾಗಿ
ಅಷ್ಟ ದಿಕ್ಕುಗಳಲ್ಲಿ ಪ್ರಖ್ಯಾತನಾದ ೧೨

ಇದರಲ್ಲೇನು ಆಶ್ಚರ್ಯ ಇಲ್ಲ ಸ್ವಾಭಾವಿಕವು
ದೇವತೆಗಳು ಧರಣಿಯಲ್ಲಿ ಜನಿಸಿದರೂ
ಶಕ್ತ್ಯಾತ್ಮನ ಸರ್ವ ಅಣಿಮಾದಿ ಐಶ್ವರ್ಯ
ಇದ್ದು ಸುವ್ಯಕ್ತ ವಾಗುವವು ಗುರುಕೃಪದಿ ೧೩

ಈ ವಿಠಲನೇವೇ ವಿಜಯೀಂದ್ರ ನಾಮದಲಿ
ಭುವಿಯಲ್ಲಿ ಬೆಳಗಿದನು ಸುರರಲ್ಲಿ ಶ್ರೇಷ್ಠ
ದೇವತಾ ಕಕ್ಷದವರಾದ ಶ್ರೀವ್ಯಾಸಮುನಿ
ಪ್ರವರ ಸುರಗಣ ವಾದಿರಾಜರ ಸಮೇತ ೧೪

ಸರಸಿಜಾಸನಪಿತ " ಪಸನ್ನ ಶ್ರೀ ನಿವಾಸನು "
ಬರೆಸಿದ ಶ್ರೀಪ್ರಸನ್ನ ರಾಘವೇಂದ್ರ ವಿಲಾಸ
ತರುವಾಯ ಈ ಪರಮಗುರು ವಿಜಯೀಂದ್ರ ಗುರುಚರಿತೆ
ಹರಿಸಿರಿವಾಯು ಗುರು ಪ್ರೀತಿಕರ ಶುಭದ ೧೫ ಪ

–ಇತಿ ಪ್ರಥಮ ಕೀರ್ತನೆ ಸಂಪೂರ್ಣಂ–

ದ್ವಿತೀಯ ಕೀರ್ತನೆ

ವಿಜಯೀಂದ್ರ ತೀರ್ಥರ ಪದಯುಗದಿ
ನಿಜಭಕ್ತಿಯಿಂದ ಶರಣಾದೆಸತತ
ಅಬ್ಜಸಂಭವ ಜನಕ ಅಂಬುಜಾಲಯ ಪತಿ
ರಾಜರಾಜೇಶ್ವರಗೆ ಪ್ರಿಯತಮ ಯತೀಂದ್ರ ಪ

ಶ್ರೀಮನೋಹರ ರಂಗನಾಥನ ಸೇವಿಸಲು
ಶ್ರೀಮಠ ಜರುಗಿತು ರಂಗ ಕ್ಷೇತ್ರಕ್ಕೆ
ಸೋಮ ಪುಷ್ಕರಿಣಿಯಲಿ ಕಾವೇರಿ ಮಧ್ಯದಲಿ
ಕಾಮಿತಪ್ರದ ಶ್ರೀಶರಂಗ ಇರುತಿಹನು ೧

ಕಾವೇರಿ ತೀರದಲ್ಲಿ ಶ್ರೀತುಳಸಿವನ ಬೆಳಸೆ
ಆ ವನ ಸಮೀಪದಲಿ ವ್ಯಾಸಮುನಿ ಮಠವು
ದುರ್ವಾದ ಖಂಡನ ಸಿದ್ಧಾಂತ ಸ್ಥಾಪನ
ದೇವತಾರ್ಚನೆ ಹರಿಕೀರ್ತನೆ ವೈಭವವು ೨

ಒಂದು ದಿನ ಶ್ರೀ ವ್ಯಾಸರಾಯರು ನೋಡಿದರು
ತಂದು ಪೂಜೆಗೆ ಇಟ್ಟ ತುಳಸೀದಳಗಳು
ಇಂದಿರಾಪತಿಗರ್ಪಿತವಾದ ನಿರ್ಮಾಲ್ಯ
ಎಂದು ತಿಳಕೊಂಡರು ವಿಚಾರ ಮಾಡಿದರು ೩

ತಿಳಿಯ ಬಂತು ಅಂದು ಪ್ರಾತಃಕಾಲದಲಿ
ತುಳಸೀಗೆ ಬಂದುರು ಸುರೇಂದ್ರ ಮಠದವರು
ತುಳಸಿ ಕೊಡುವುದಿಲ್ಲ ಎನೆ ಪೋದರು ಆ ಬ್ರಾಹ್ಮಣರು
ಪೇಳಿದರು ಗುರು ಸುರೇಂದ್ರರಿಗೆ ವೃತ್ತಾಂತ ೪

ಭಾವುಕ ಶಿರೋಮಣಿವಿಜ್ಞಾನ ಸೂರಿಗಳು
ತಾವು ಕುಳಿತಲ್ಲೇ ಸುರೇಂದ್ರ ಸ್ವಾಮಿಗಳು
ಭವಜನಯ್ಯನಿಗೆ ವನ ತುಳಸಿ ಪೂರಾವು
ಭಾವಶುದ್ಧದಿ ಅರ್ಪಿಸಲು ಹರಿಕೊಂಡ ೫

ಶ್ರೀ ಸುರೇಂದ್ರರ ಈ ಮಹಿಮೆಯ ಶ್ಲಾಘಿಸಿಬೇಗ
ವ್ಯಾಸರಾಯರು ತಾವೇವೆ ಪೋಗಿ
ಕುಶಲ ಸಂಭಾಷಿಸಿ ತಮ್ಮ ಮಠಕ್ಕೆ ಬಂದು
ಶ್ರೀಶಾರ್ಚನೆ ಚರಿಸಲು ಆಹ್ವಾನ ಮಾಡಿದರು ೬

ಸೂರಿವರ ರಾಜೇಂದ್ರ ರವೀಂದ್ರರು
ಎರಡು ಈ ಗುರುಗಳಿಂದಲಿ ಬಂದ ಮಠಗಳು
ಎರಡು ಸ್ವಾಮಿಗಳು ಶ್ರೀವ್ಯಾಸ ಸುರೇಂದ್ರರ
ಹರಿಪೂಜೆ ವೈಭವವು ವರ್ಣಿಸಲು ಅಶಕ್ಯ ೭

ಥಳಥಳಿಪ ಬ್ರಹ್ಮವರ್ಚಸ್ಸು ಮುಖಕಾಂತಿಯು
ಎಲ್ಲ ಶಾಸ್ತ್ರಜ್ಞಾನ ಪ್ರವಚನ ಪಟುತ್ವ
ಶೀಲತ್ವ ಸೌಲಭ್ಯ ಬಾಲ್ಯ ಚಟುವಟಿಕೆಯು
ಸೆಳೆದವು ಸುರೇಂದ್ರರ ವಿಠಲನ ಬಳಿಗೆ ೮

ರಮೆಯರಸನ ಪೂಜೆತತ್ವಬೋಧವು ಮಾಳ್ಪ
ತಮ್ಮ ಸಂಸ್ಥಾನದ ಉನ್ನತ ಸ್ಥಾನಕ್ಕೆ
ತಮ್ಮ ನಂತರ ವಿಜಯೀಂದ್ರರೇ ಸರಿ ಎಂದು
ನೇಮಿಸಿದರು ಮನದಿ ಸುರೇಂದ್ರ ಗುರುವು ೯

ಅಪರೋಕ್ಷದಲು ಈವಿಠಲನ ಯೋಗ್ಯತೆ
ಆ ಪುಣ್ಯ ಶ್ಲೋಕರು ಅರಿತು ತಾವು
ಅಪೇಕ್ಷಿಸುವಂತ ವಸ್ತು ಬೇಕೆಂದರು
ಶ್ರೀಪನ ಇಚ್ಛೆಯನರಿತು ವ್ಯಾಸರಾಯರಲ್ಲಿ ೧೦

ಕೇಳುವ ವಸ್ತು ಬಿಟ್ಟು ಬೇರೆ ಏನೂ ಕೊಡುವೆ
ಕೇಳೆಲಾರೆನು ಬೇರೆ ಕೊಳ್ಳೆನು ಬೇರೆ
ಇಲ್ಲ ವೆಂದರ ಊಟ ಮಾಡಿಕೊಡುತ್ತೇನೆ ಈ
ಲೀಲಾ ವಿನೋದ ಮಾತುಗಳು ಕ್ರೀಡಾರ್ಥ ೧೧

ವಿಮಲ ವಿರಜಾ ಸಮ ಕಾವೇರಿ ಮಧ್ಯದಲಿ
ರಮಾಯುಕ್ ರಂಗನಾಥನು ಹನುಮಸೇವ್ಯ

ರಾಮ ಪೂಜಿಸಿದಂಥ ರಾಮನು ಪಟ್ಟಾಭಿ
ರಾಮ ಶ್ರೀ ಗೋಪಾಲಕೃಷ್ಣನ ಮುಂದೆ ೧೨

ಶ್ರೀಶನ ಈ ಬಹುರೂಪ ಸನ್ನಿಧಿಯಲ್ಲಿ
ಭೂಸುರ ವಿದ್ವಾಂಸರ ಸಭೆ ಮಧ್ಯದಲಿ
ವ್ಯಾಸಮುನಿದತ್ತ ವಿಠಲನ ಸುರೇಂದ್ರರು
ಸುಸ್ವಾಗತದಿಂದ ಸ್ವೀಕಾರ ಮಾಡಿದರು ೧೩

ವಿಜಯೀಂದ್ರ ತೀರ್ಥ ಶುಭತಮ ನಾಮವಿತ್ತರು
ವಿಜಯಶೀಲರಾಗಿ ವಿಜಯೀಂದ್ರರು
ನಿಜತತ್ವ ಸಿದ್ಧಾಂತ ಸ್ಥಾಪಿಸಿ ದುರ್ಮತ
ದುರ್ಜನ ದುರ್ವಾದ ಚೂರ್ಣ ಮಾಡಿದರು ೧೪

ಬ್ರಹ್ಮ ದಶರಥ ರಾಮಚಂದ್ರನು ಅರ್ಚಿಸಿದ
ಭೂಮಾದಿ ಗುಣಗಣಾರ್ಣವ ದಯಾನಿಧಿಯು
ಕಮಲೆ ಸೀತಾಸೇವ್ಯ ಮೂಲರಾಮನ್ನ
ಸಮ್ಮುದದಿ ಶ್ರೀವಿಜಯೀಂದ್ರರು ಪೂಜಿಸಿದರು ೧೫

ಸರಸಿಜಾಸನಪಿತ " ಪ್ರಸನ್ನ ಶ್ರೀನಿವಾಸ" ನು
ಬರೆಸಿದ ಶ್ರೀಪ್ರಸನ್ನ ರಾಘವೇಂದ್ರ ವಿಲಾಸ
ತರುವಾಯ ಈ ಪರಮಗುರು ವಿಜಯೀಂದ್ರ ಗುರುಚರಿತೆ
ಹರಿಸಿರಿವಾಯು ಗುರು ಪ್ರೀತಿಕರ ಶುಭದ ೧೬

–ಇತಿ ದ್ವಿತೀಯ ಕೀರ್ತನೆ ಸಂಪೂರ್ಣಂ–

ತೃತೀಯ ಕೀರ್ತನೆ

ವಿಜಯೀಂದ್ರ ತೀರ್ಥರ ಪದಯುಗದಿ
ನಿಜಭಕ್ತಿಯಿಂಶರಣಾದೆ ಸತತ
ಅಬ್ಜಸಂಭವ ಜನಕ ಅಂಬುಜಾಲಯ ಪತಿ
ರಾಜರಾಜೇಶ್ವರಗೆ ಪ್ರಿಯತಮ ಯತೀಂದ್ರ ಪ

ಧರೆಯೊಳುತ್ತಮ ಕುಂಭಕೋಣಾಖ್ಯ ನಗರದಿ
ಹರಿದ್ವೇಷಿಯ ಗೆದ್ದು ಅವನ ಮಠ ತೋಟ
ಸ್ಪರ್ಧೆ ಫಣವಾದ್ದವ ತಮ್ಮಲ್ಲಿ ಸೇರಿಸಿಕೊಂಡ
ಧೀರ ವಿಜಯೀಂದ್ರರ ಚರಣಕಾನಮಿಪೆ ೧

ಸಾರಂಗಹಸ್ತ ವರಾಹ ಚಕ್ರಪಾಣಿ ರಾಮ
ಮಂಗಳಾಂಬಿಕೆಯುತ ಕುಂಭೇಶ್ವರ
ತುಂಗಮಹಿಮಳು ಕಾವೇರಿ ಸುಧಾಸರಸ್ಸು
ಈ ಕುಂಭಕೋಣದ ಮಹಿಮೆ ಏನೆಂಬೆ ೨

ಸಂಕ್ರಂದ ಸ್ಮರ ಮೊದಲಾದ ಜಗತ್ತಿಗೆ ಗುರುವಾದ
ಮಂಗಳಾಂಬಿಕೆ ಕುಂಭೇಶ್ವರರ ನೃಹರಿ ಸಾನಿಧ್ಯರ
ಭಂಗವಿಲ್ಲದೆ ಪ್ರತಿದಿನ ಸೇವಿಸುವರು
ಸುರೇಂದ್ರಮಠ ಗುರುವು ವಿಜಯೀಂದ್ರರು ೩

ಭಸ್ಮಧರನು ಸರ್ವೋತ್ತ ಮನೆಂದು ವ್ಯರ್ಥದಿ
ದುಸ್ತರ್ಕ ಮಾಡಿದ ಜಗನ್ಮಿಥ್ಯಾವಾದಿ
ಅಪ್ಪಯ್ಯನ ಮತವ ತೃಣದಂತೆ ಮಾಡಿದ
ತತ್ವವಾದ ಅಸಿಯಿಂದ ವಿಜಯೀಂದ್ರ ಜಯಶೀಲ ೪

ಸ್ವಪಕ್ಷ ಪರಪಕ್ಷ ಸರ್ವವಿದ್ವಾಂಸರು
ಈ ಪುಣ್ಯಶ್ಲೋಕರ ಮಹಿಮೆ ಕೊಂಡಾಡಿ
ತಪ್ಪದೇ ಆಗಾಗ ಬಂದು ಮರ್ಯಾದೆ
ಅರ್ಪಿಸಿ ಪೋಗುವರು ಕೃತಕೃತ್ಯಮನದಿ ೫

ಬಾದರಾಯಣಿ ಮಾಧ್ವ ಗ್ರಂಥಗಳನುಸರಿಸಿ
ವೇದ ವಿರುದ್ಧ ಮತ ಖಂಡನ ಗ್ರಂಥಗಳು
ಚತುರೋತ್ತರ ಶತಮೇಲ್ ತತ್ವ ಬೋಧಕವಾದ
ಗ್ರಂಥಗಳ ರಚಿಸಿದರು ಉತ್ತಮ ರೀತಿಯಲಿ ೬

ಅಂಬುಶಾಯಿ ಸರ್ವ ಮುಕ್ತಾಮುಕ್ತ ಆಶ್ರಯನು
ಅಂಭ್ರಣೀಪತಿ ಶ್ರೀಮನ್ನಾರಾಯಣ
ಗಂಭೀರ ಶಬ್ದಾರ್ಥ ನಿರ್ವಚನ ಮಾಡಿಹರು
ಅಂಬುಜನಾಭ ಒಲಿವ ಪಠಿಸಿದರೆ ೭

ಮಧ್ವಮತ ಪರಿಮಳ ಸುಗಂಧ ಭುವಿಯಲಿ ಹರಡೇ
ಸುಧಾದಿ ಉದ್ಗ್ರಂಥ ಪ್ರವಚನದಿ ಪಟುವು
ಸುಧೀಂದ್ರ ಯತಿವರಗೆ ಸಂಸ್ಥಾನ ಕೊಟ್ಟರು
ಮಧ್ವಮತೋದ್ಧಾರ ವಿಜಯೀಂದ್ರ ಗುರುರಾಟ್ ೮

ಸದ್ಭಕ್ತಿಯಿಂಶುಚಿ ಅಧಿಕಾರಿ ಇವರ ನರಸಿಂಹಾಷ್ಟಕವ
ಪಠಿಸೆ ಭೂತ ಪ್ರೇತ ಪಿಶಾಚಾದಿಗಳ ಉಚ್ಚಾಟನವು
ಚೋರ ವ್ಯಾಧಿ ಮಹಜ್ವರ ಭಯಾದಿ ಕಷ್ಟಗಳು ನಿವಾರಣ
ಸಂಧ್ಯಾಕಾಲ ಪಠನದಿ ಸದ್ಭಕ್ತಿಗೆ ಒಲಿದು ಕಾಯ್ವ ಶ್ರೀ ನರಸಿಂಹ ೯

ಐವತ್ತು ಮೇಲ್ಐದು ವರ್ಷ ಸಂಸ್ಥಾನದಿ
ನಿರ್ವಿಘ್ನ ಪೂಜಾ ಶಿಷ್ಯೋಪದೇಶ
ದೇವ ಲಕ್ಷೀಶಗೆ ತಮ್ಮ ಸೇವೆ ಸಮರ್ಪಣೆ ಮಾಡಿ
ಪವಿತ್ರತಮ ಸುಸಮಾಧಿಯನ್ನು ಹೊಂದಿದರು ೧೦

ಶಾಲಿವಾಹನಶಕ ಹದಿನ್ಐದು ನೂರು ಹದಿ
ನಾಲ್ಕನೇ ವರ್ಷ ಜೇಷ್ಠಬಹುಳ
ಶೀಲತಮ ಭವದಿತ್ರಯೋದಶಿ ದಿನದಿ
ಮಾಲೋಲ ನಾರಾಯಣಪುರಯ್ಐದಿದರು ೧೧

ಮತ್ತೊಂದು ಅಂಶದಲಿ ಕುಳಿತು ವೃಂದಾವನದಿ
ಉತ್ತಮ ಶ್ಲೋಕ ನಾರಾಯಣನ ಧ್ಯಾನಿಸಿ
ಒಲಿದು ಸೇವಿಸುವರಿಗೆ ಸತತ ಔದಾರ್ಯದಲ್ಲಿ
ಇತ್ತು ವರಗಳ ಸದಾ ಸಂರಕ್ಷಿಸುತಿಹರು ೧೨

ಮೂಲರಾಮನ ವಿಮಲ ಭಾವದಲಿ ಅರ್ಚಿಸಿ
ಕುಳಿತು ವೃಂದಾವನದಿ ಧ್ಯಾನಿಸುವ ಇವರು
ಮೂಲ ವೃಂದಾವನ ಮಾತ್ರದಿ ಅಲ್ಲದೇ
ಅಲ್ಲಲ್ಲಿ ಇವರು ಮೃತಿಕೆಯಲ್ಲಿಯೂ ಇಹರು ೧೩

ವಿಜಯೀಂದ್ರರಾಯರ ವೃಂದಾವನದಲಿ
ವಿಜಯಸಖ ಸರ್ವ ಜಗಜ್ಜನ್ಮಾದಿಕರ್ತ
ಅಜಭವಾದಿಗಳಿಂದ ಸೇವ್ಯ ಶ್ರೀನರಹರಿ ಇಹನು
ವಿಜಯೀಂದ್ರಗುರು ಅಂತರ್ಯಾಮಿ ವಾಂಛಿತಪ್ರದನು ೧೪

ಶ್ರೀಶನ ಸಾನಿಧ್ಯ ಪೂರ್ಣ ಇರುವುದರಿಂದ
ಶ್ರೀಶನೊಲಿಮೆ ಪೂರ್ಣಪಾತ್ರ ಇವರಲ್ಲಿ
ಶ್ರೀ ಸುಧೀಂದ್ರಾದಿಗಳು ದೇವವೃಂದದ ಜನರು
ಭೂಸುರರು ಪ್ರತಿದಿನ ಬಂದು ವಂದಿಪರು ೧೫

ವೃಂದಾವನ ದರ್ಶನ ಸೇವೆ ಪಾದೋದಕ
ಕುಂದು ಕೊರತೆ ಇರುವ ಧಾರ್ಮಿಕ ಇಷ್ಟದವು
ಎಂದಿಗೂ ಎನ್ನ ಕುಂದುಗಳ ಎಣಿಸದೆ
ಬಂದು ಪ್ರತಿಕ್ಷಣ ಕಾಯುತಿಹರು ಶರಣು ಶರಣಾದೆ ೧೬

ವಿ ಎಂದರೆ ವಿಠಲ ಜ್ಞಾನಮುದವೀವ
ಜ ಎಂದರೆ ಜಯವು ಪುಟ್ಟು ಸಾವಿಲ್ಲ
ಯೀ ಎಂದರೆ ಜ್ಞಾನಕರ್ಮ ಪೂಜಾಫಲವು
ಇಂದ್ರ ಎಂದರೆ ಐಶ್ವರ್ಯ ಸುಖವೀವ ೧೭

ಸಿಂಧೂರವರದ ಶ್ರೀಕರ ಪುರುಷೋತ್ತಮ
ಬಿಂದುಮಾಧವ ಶ್ರೀಧರ ರಾಮಚಂದ್ರ
ಸೈಂಧವಾಸ್ಯನು ಅಚ್ಯುತಾನಂತ ಗೋವಿಂದ
ಎಂದಿಗೂ ಎಮ್ಮನು ಕಾಯ್ವ ಗುರುಚರಿತೆ ಪಠಿಸೆ ೧೮

ಅಂಬರೀಷ ರಕ್ಷಕನು ಅಜಾಮಿಳ ವರದನು
ಕಂಬದಲಿ ತೋರಿ ಪ್ರಹ್ಲಾದನ್ನ ಕಾಯ್ವವನು
ಈ ವೃಂದಾವನ ಗುರುಚರಿತೆ ಪಠಿಸುವರಿಗೆ
ಸೌಭಾಗ್ಯವೀವನು ಸುಧಾಮಗೊಲಿದವನು ೧೯

ನಾರಾಯಣವಾಸುದೇವ ಸಂಕರುಷಣ
ಪ್ರದ್ಯುಮ್ನ ಅನಿರುದ್ಧ ಲಕ್ಷ್ಮೀ ಸಮೇತ
ವರವಾಯು ಭಾರತೀ ಸುರವೃಂದ ಸಹಿತ
ಇರುತಿಹ ವಿಜಯೀಂದ್ರರಲಿ ಅಭಯವರದ ೨೦

ಸೌಂದರ್ಯಸಾರ ಜಗದೇಕವಂದ್ಯನು ಭೈಷ್ಮೀ
ಸತ್ಯಾಸಮೇತ ವರ ಅಭಯದ ಅಜಿತ
ಇಂದಿರಾಪತಿ ಕೃಷ್ಣಗರ್ಪಿತ ಈ ಗುರುಚರಿತೆ
ಸುದರ್ಶನ ಕಂಬುಧರ ಅಖಿಲಪ್ರದ ಹರಿಗೆ ೨೧

ಸರಸಿಜಾಸನಪಿತ " ಪ್ರಸನ್ನ ಶ್ರೀ ನಿವಾಸ " ನು
ಬರೆಸಿದ ಶ್ರೀ ಪ್ರಸನ್ನ ರಾಘವೇಂದ್ರ ವಿಲಾಸ
ತರುವಾಯ ಈ ಪರಮಗುರು ವಿಜಯೀಂದ್ರ ಗುರುಚರಿತೆ
ಹರಿಸಿರಿವಾಯು ಗುರು ಪ್ರೀತಿಕರ ಶುಭದ

ಪ್ರಸನ್ನ ಶ್ರೀ ವಿಜಯೀಂದ್ರ ಅಣು ಚರಿತ್ರೆ

೧೧೧

ಜಯ ಜಯ ಯತಿರಾಜ ಜಯ ಜಯ
ಜಯ ಜಯ ವಿಜಯೀಂದ್ರ ತೀರ್ಥ ನಿಮ್ಮ
ತೋಯಜ ಸುಪವಿತ್ರ ಪಾದದಲಿ ನಾ
ಕಾಯವಾಕ್ಕು ಮನದಿಂದ ಅಹ
ಶರಣಾದೆ ಪರಮ ಕೃಪಾಕರ ಪೊರೆಯನ್ನ
ಸೂರಿ ಸುರೇಂದ್ರರ ಕರ ಕಂಜ ಜಾತ ಪ

ಹಂಸಾಬ್ಜಭವ ಸನಕಾದಿ ಜ್ಞಾನ
ವಂಶ ಸಂಭವ ದಶಪ್ರಮತಿ ಭಾರ -
ತೀಶ ಮುಖ್ಯ ವಾಯು ಯತಿ ರೂಪ
ವಸುಧೆಯಲ್ಲಿ ತಾ ಪೊಂದಿ ಅಹ
ನಿರ್ದೋಷ ಗುಣ ಗಣಾರ್ಣವ ಸರ್ವೋತ್ತಮ ಹರಿ
ಎಂದು ಸ್ಥಾಪಿಸಿ ಸಾಧುಜನರ ಉದ್ಧರಿಸಿದ ೧

ಮಧ್ವರಾಯರ ಪೀಳಿಗೆಯಲಿ ಬಂದ
ವಿದ್ಯಾಧಿರಾಜ ತೀರ್ಥರಲಿ ಜಾತ ರಾ -
ಜೇಂದ್ರ ಕವೀಂದ್ರರೀರ್ವರಲಿ ಪೂ -
ರ್ವಜ ರಾಜೇಂದ್ರರ ವಂಶದಲ್ಲಿ ಅಹ
ಉದಿತ ಭಾಸ್ಕರ ತೇಜಃಪುಂಜ ಬ್ರಹ್ಮಣ್ಯರ
ಪದುಮ ಕರೋತ್ಥಿತ ವ್ಯಾಸರಾಜಗೆ ನಮೋ ೨

ಶ್ರೀ ಕವೀಂದ್ರರ ಕರ ಪದುಮ ವಂದಿತ
ವಾಗೀಶ ಜಾತರು ರಾಮಚಂದ್ರ
ಯೋಗೀಶರೀರ್ವರೊಳ್ ಪ್ರಥಮರಾದ
ಜಗದ್ ಖ್ಯಾತ ಪಂಡಿತೋತ್ತಮ ಅಹ
ವಿಬುದೇಂದ್ರ ಯತಿಗಳ ಸುತ ಜಿತಾಮಿತ್ರರಿಂ
ಸಂಭೂತರು ರಘುನಂದನ ತೀರ್ಥರು ೩

ರಘುನಂದನರೊಳುತ್ಪನ್ನ ಭಾವು -
ಕಾಗ್ರಣಿ ಸುಗುಣ ಸಂಪನ್ನ ಸರ್ವ
ನಿಗಮಾಂತ ಶಾಸ್ತ್ರ ಪ್ರವೀಣ ಶತ -
ಮುಖ ಸಮ ಬಲ ಯೋಗಿ ಘನ್ನ ಅಹ
ಸೂರಿ ಸುರೇಂದ್ರ ಕಮಲ ಪಾದಗಳಿಗೆ
ಶರಣೆಂಬೆ ಸರ್ವ ಈ ಮಾಧ್ವಯತಿಗಳಿಗೆ ೪

ವ್ಯಾಸರಾಯರ ಅನುಗ್ರಹದಿ ಸಾಧು
ಭೂಸುರನಿಗೆ ಪ್ರಜೋತ್ಪತ್ತಿ ಆಗಿ

ವ್ಯಾಸ ಮುನೀಂದ್ರರ ಮಠದಿ ಬೆಳೆದು
ಭಾಸಿಸಿದನು ವಟು ಕ್ರಮದಿ ಅಹ
ವಿಠ್ಠಲ ನಾಮದಿ ವ್ಯಾಸರಾಯರ ಮುಖದಿಂ
ಪಾಠ ಗ್ರಹಿಸಿ ಉದ್ದಾಮ ಪಂಡಿತನಾದ ೫

ವೇದ ವೇದಾಂತ ವಿದ್ಯಗಳು ಸರ್ವ
ಇತಿಹಾಸಗಳು ಪುರಾಣಗಳು ಅರ
ವತ್ತು ನಾಲ್ಕು ಕಲೆಗಳು ಮೂರು ಮೂ –
ವತ್ತೇಳು ಗ್ರಂಥ ಟೀಕೆಗಳು ಅಹ
ಬಾಲ ವಿಠ್ಠಲನ ಪಾಂಡಿತ್ಯ ವರ್ಚಸ್ಸು
ಸೆಳೆದವು ಶ್ರೀ ಸುರೇಂದ್ರರ ಮನ ಇವನಲ್ಲಿ ೬

ಮೂಲ ರಾಮನ್ನ ಪೂಜಿಸಲು ಸು –
ಶೀಲ ಶಾಸ್ತ್ರವ ಪ್ರಸರಿಸಲು ದುಃ –
ಶ್ಶೀಲ ಮಾತಗಳ ಖಂಡಿಸಲು ವಿ –
ಠ್ಠಲನು ತಮಗೆ ಬೇಕೆನಲು ಅಹ
ಶ್ರೀ ಸುರೇಂದ್ರರ ಈ ಕೋರಿಕೆ ಪೂರೈಸಿ
ಶ್ರೀವ್ಯಾಸ ಮುನಿಗಳು ಕೊಟ್ಟರು ಬಾಲನ್ನ ೭

ಗುರು ಸುರೇಂದ್ರರು ವಿಠ್ಠಲನ್ನ ಕರೆದು
ಕರ ಪದ್ಮ ಪೀಯುಷವನ್ನ ಎರೆದು
ಭಾರಿ ತಮ್ಮಯ ಸಂಸ್ಥಾನದಲ್ಲಿ
ಸೇರಿಸಿ ಉರು ಪ್ರಣವವನ್ನ ಅಹ
ಬೋಧಿಸಿ ವಿಜಯೀಂದ್ರ ತೀರ್ಥನಾಮವನಿತ್ತು
ಕೃತ ಕೃತ ಧನ್ಯ ಮನದಿ ತೋಷಿಸಿದರು ೮

ಮಾತರಿಶ್ವಗ ತ್ರಿಮಾತ್ರನ್ನ ಜಪಿಸಿ
ಪ್ರತಿದಿನ ಪಾಠ ಪ್ರವಚನ ಮಾಡಿ
ಎದುರ್ಗೊಂಡ ದುರ್ವಾದಿಗಳನ್ನ ಗೆದ್ದು
ಸಿದ್ಧಾಂತ ಸತ್ತತ್ವವನ್ನ ಅಹ

ಸ್ಥಾಪಿಸಿ ಜಗವೆಲ್ಲ ವಿಜಯ ಶೀಲರು ಆಗಿ
ಸುಪ್ರಕಾಶಿಸಿದರು ವಿಜಯೀಂದ್ರ ತೀರ್ಥರು ೯

ಧರೆಯೊಳ್ ಉತ್ತಮ ಕುಂಭಕೋಣ ಅಲ್ಲಿ
ಹರಿ ದ್ವೇಷಿಕುಮತ ಪ್ರಮುಖನ್ನ ಗೆದ್ದು
ಸ್ಪರ್ಧೆ ಪಣವು ಆದ ಅವನ ಮಠತೋಟ
ಸರ್ವವ ಕೊಂಡ ಘನ್ನ ಅಹ
ವಾದಿ ಪರ್ವತ ಕುಲಿಶ ಧೀರ ವಿಜಯೀಂದ್ರರ
ಪಾದಕೆ ಶರಣಾದೆ ಸ್ಮರಿಸೆ ಜಯವೀವರು ೧೦

ಪ್ರಸ್ಥಾನತ್ರಯ ಮೊದಲಾದ ಸ –
ಚ್ಛಾಸ್ತ್ರಕ್ಕೆ ವಿರುದ್ಧ ವಾದಂಥ ಮಾಯಾ
ವಾದಿ ಅಪ್ಪಯ್ಯ ದೀಕ್ಷಿತ ಪ್ರ –
ಸಿದ್ಧ ಅದ್ವೈತ ಪಂಡಿತ ಅಹ
ಆ ದುರ್ವಾದಿಯ ಮತ ಛಿಂದಿ ಛಿಂದಿ ಮಾಡಿ
ವೈದಿಕ ಮಧ್ವ ಸಿದ್ಧಾಂತ ಸ್ಥಾಪಿಸಿದರು ೧೧

ಸ್ವಪಕ್ಷ ಪರಪಕ್ಷದವರು ಬಹು
ನಿಪುಣರು ಪಂಡಿತೋತ್ತಮರು ನಮ್ಮ
ಈ ಪುಣ್ಯಶ್ಲೋಕರಲಿ ಬರುವರು ಬಂದು
ತಪ್ಪದೆ ಮಾರ್ಯಾದೆ ಅರ್ಪಿಸುವರು ಅಹ
ಜ್ಞಾನ ಔನ್ನತ್ಯವು ಪಾಂಡಿತ್ಯ ವಿಭವವು
ಏನೆಂಬೆ ಕರುಣಿ ವಿಜಯೀಂದ್ರ ತೀರ್ಥರಲಿ ೧೨

ದುರ್ವಾದಿ ಮತ ಖಂಡನೆಗಳು ಮೂಲ
ಮಾಧ್ವ ಗ್ರಂಥದ ಟಿಪ್ಪಣಿಗಳು ಸತ್
ತತ್ವ ಬೋಧಿಸುವ ಗ್ರಂಥಗಳು ಪ್ರೌಢ
ವಿದ್ವತ್ ಪ್ರತಿಭಾ ರಚನೆಗಳು ಅಹ
ಉತ್ತಮ ಶ್ಲೋಕನ ಪ್ರೀತಿಗಾಗಿಯೆ ಚತು –
ರೋತ್ತರ ಶತ ಗ್ರಂಥಾವಳಿಯ ಮಾಡಿಹರು ೧೩

ಅಂಬುಶಾಯಿ ಮನುಕ್ಷಾಶ್ರಯನ ಶ್ರೀ
ಅಂಭ್ರಣೀ ಪತಿ ನಾರಾಯಣನ ಪೇಳ್ವ
ಗಂಭೀರ ಶಬ್ದ ನಿರ್ವಚನ ಮಾಡಿ
ಅಂಬೋರುಹನಾಭನ್ನ ಅಹ
ಮನನ ಧ್ಯಾನದಿ ಒಲಿಸಿಕೊಳ್ಳುವ ಬಗೆಯನ್ನ
ಘನ ದಯದಲಿ ಒದಗಿಸಿಹರು ಸಜ್ಜನರಿಗೆ ೧೪

ಸರ್ವೋತ್ತಮ ಶ್ರೀ ಲಕ್ಷ್ಮೀಶ ಪ್ರೀತಿ
ಸರ್ವದಾ ಮಾಳ್ಪ ಮುನೀಶ ಹರಿ
ನಿರ್ವಿಘ್ನಪೂಜಾ ಉಪದೇಶ ಗೈದರು
ಐವತ್ತು ಮೇಲ್ಕೈದು ವರ್ಷ ಅಹ
ಶಾಲಿಶಕ ಹದಿನೈದು ನೂರುಹದಿ
ನೇಳು ಜೇಷ್ಠ ಕೃಷ್ಣತ್ರಯೋದಶೀತನಕ ೧೫

ಮಾಧವನಂಘ್ರಿ ತಾಯ್ದೈದಿ ಮತ್
ಒಂದು ಅಂಶದಿ ವೃಂದಾವನದಿ ಶ್ರೀಶ
ಶ್ರೀದ ನಾರಾಯಣ ಮುದದಿ ಸದಾ
ಸುಧ್ಯಾನ ಪರರು ದಿನದಿನದಿ ಅಹ
ಬಂದು ಸೇವಿಸುವರ ವಾಂಛಿತವೀವರು
ಔದಾರ್ಯ ಕರುಣಿಯು ವಿಜಯೀಂದ್ರರಾಯರು ೧೬

ವಿ ಎಂದರೆ ಜ್ಞಾನ ಮುದವು ಲಾಭ
ಜ ಎಂದರೆ ಸರ್ವ ಜಯವು ಮತ್ತು
ಬಂಧ ನಿವೃತ್ತಿ ಸಾಧನವು ಜ –
ನಾರ್ಧನ ಶ್ರೀಶನ ದಯವು ಅಹ
ಯಿ ಎಂದರೆ ಜ್ಞಾನ ಕರ್ಮ ಪೂಜಾಫಲ
ಇಂದ್ರ ಎಂದರೆ ಐಶ್ವರ್ಯ ಸಂತೋಷ ೧೭

ವಿಜಯೀಂದ್ರ ಗುರು ಚರಿತೆಯನ್ನ ಹರಿ
ಚಿರಂಜೀವಿ ಬಿಂದು ಮಾಧವನ ಸ್ಥಳದಿ
ನಿಜದಿ ಬರೆಸಿದ ಘನ್ನ ದಯದಿ

ವಿಜಯೀಂದ್ರ ಅಣು ಚರಿತೆಯನ್ನ ಅಹ
ಅಂಶತೋಸರಸ್ವತೀ ಗಂಗಾ ಸನ್ನಿಹಿತ
ಪ್ರಸನ್ನ ಜಯರಾಮಚಂದ್ರ ದಾಸನಾ ಗೃಹದಿ ೧೮

ವನಜ ಸಂಭವ ಪಿತ ಶ್ರೀಶ ಜಗ
ಜನ್ಮಾದಿ ಕರ್ತ ನಿರ್ದೋಷ ಗುಣ
ಗಣ ಸಿಂಧು ಪ್ರಸನ್ನ ಶ್ರೀನಿವಾಸ ನಿಮ್ಮೊಳ್
ಪ್ರಸನ್ನ ನಾಗಿಹನು ಸರ್ವೇಶ ಅಹ
ಎನ್ನ ಕುಂದಣಿಸದೆ ಪಾಹಿಮಾಂ ಸತತ
ಘನ ದಯಾನಿಧಿ ವಿಜಯೀಂದ್ರಾರ್ಯ ಶರಣು ೧೯

॥ ಇತಿ ಪ್ರಸನ್ನ ಶ್ರೀ ವಿಜಯೀಂದ್ರ ಗುರು ಅಣು ಚರಿತ ಸಂಪೂರ್ಣಂ ॥

ಶ್ರೀ ಪ್ರಸನ್ನ ಸುಧೀಂದ್ರ ಚರಿತ್ರೆ

೧೧೨

ಶ್ರೀ ಸುಧೀಂದ್ರ ತೀರ್ಥ ಯತಿರಾಜರ ಚರಣ
ಬಿಸಜದ್ವಂದ್ವದಲಿ ನಾ ಶರಣಾದೆ ಸತತ
ಅಸಮ ಗುಣವಾರಿನಿಧಿ ಶ್ರೀರಾಮಚಂದ್ರ
ವ್ಯಾಸ ನರಹರಿ ಕೃಷ್ಣಸ್ಯೆಂಧವಾಸ್ಯ ಪ್ರಿಯ ಪ

ಅಶೇಷ ಗುಣಸಿಂಧು ಶ್ರೀ ರಮಣ ಹಂಸನಿಗೆ
ಬಿಸಜಭವ ಸನಕಾದಿ ಗುರುಪರಂಪರೆಗೆ
ದಶ ಪ್ರಮತಿ ಪದಾಂಬುಜ ಯುಗ್ಮಕೆ ಮನಸಾ
ನಾ ಸದಾ ಸನ್ನಮಿಸಿ ಶರಣಾದೆ ಮುದದಿ ೧

ಅರವಿಂದ ನಾಭ ನರಹರಿ ಮಾಧವತೀರ್ಥ
ಸೂರಿಕುಲ ತಿಲಕ ಅಕ್ಷೋಭ್ಯ ಜಯತೀರ್ಥ
ಪರ ವಿದ್ಯಾಕುಶಲ ಶ್ರೀ ವಿದ್ಯಾಧಿರಾಜ ರಾ –
ಜೇಂದ್ರ ಚರಣಂಗಳಲಿ ಶರಣು ಶರಣಾದೆ ೨

ಕೋವಿದ ಶಿರೋಮಣಿ ಕವೀಂದ್ರವಾಗೀಶರು
ಭಾವುಕಾಗ್ರಣಿ ರಾಮಚಂದ್ರ ವಿಭುದೇಂದ್ರ
ದೇವ ಹರಿಪ್ರಿಯ ಜಿತಾಮಿತ್ರ ರಘುನಂದನ
ದೇವಿ ತುಳಸೀಪತಿ ಒಲಿದಿಹ ಸುರೇಂದ್ರ ೩

ಈ ಸರ್ವಗುರುಗಳ ಚರಣಕಮಲಗಳಲ್ಲಿ
ನಾಸರ್ವದಾಶರಣು ಶರಣೆಂಬೆ ಮುದದಿ
ಶ್ರೀ ವ್ಯಾಸಮುನಿ ಮಿತ್ರ ಶ್ರೀ ಸುರೇಂದ್ರರ ಕರ
ಸರಸಿಜಜ ಶ್ರೀ ವಿಜಯೀಂದ್ರರಿಗೆ ನಮಿಪೆ ೪

ತೋಯಜೇಕ್ಷಣ ನಾರಾಯಣ ಲಕ್ಷ್ಮೀಗೆ
ಮುಖ್ಯವಾಯುಗೆ ಭಾರತಿಗೆ ಪ್ರಿಯತಮರು
ಜಯಶೀಲ ವಿಜಯೀಂದ್ರ ತೀರ್ಥರ ಕರದಿಂದ
ಅಭ್ಯುದಯರಾದರು ಸುಧೀಂದ್ರ ಯತಿವರರು ೫

ಆಶ್ರಮೋಚಿತಕರ್ಮ ಜ್ಞಾನಪೂರ್ವಕವಾಗಿ
ಸುಶ್ರದ್ಧೆಯಲಿ ಅಚರಿಸುತ ಭಕ್ತಿಯಲಿ
ಶ್ರೀ ಕೃಷ್ಣಗೆ ಅರ್ಪಿಸುವ ಬ್ರಾಹ್ಮಣನ
ವಿಶ್ವಾಸದಿಂದ ನೇಮಿಸಿದರು ವಿಜಯೀಂದ್ರರು ೬

ಗುರುಗಳ ಸೇವಿಸುತ ಆ ವಿಪ್ರವರನು
ಗುರು ವಿಜಯೀಂದ್ರರ ಮುಖಪದ್ಮದಿಂದ
ವರಮಧ್ವಸಚ್ಛಾಸ್ತ್ರ ಸರ್ವವಿದ್ಯಕಲಿತು
ಪರಾಪರವಿದ್ಯ ಪಾರಂಗತನು ಆದ ೭

ಶ್ರೀ ಸುರೇಂದ್ರರಿಗೂ ಶ್ರೀ ವ್ಯಾಸರಾಜರಿಗೂ
ಈ ಸಾಧು ವಿಪ್ರನು ಪ್ರಿಯತರನಾಗಿದ್ದ
ಶ್ರೀ ಸುರೇಂದ್ರರು ಹೇಳಿ ಶ್ರೀ ವಿಯಯೀಂದ್ರರು
ನಿಶ್ಚಯಿಸಿದರು ಸಂಸ್ಥಾನಕ್ಕೆ ವಿಪ್ರನ್ನ ೮

ಆ ದ್ವಿಜನೇ ವೇದಾಂತ ಪೀಠ ಏರಿ ಬ್ರಹ್ಮ
ಮೊದಲು ಇಕ್ಷ್ವಾಕು ವಂಶಜರು ಪಾಂಡವರು

ಮಧ್ವಮುನಿ ಪೂಜಿತನ ಅರ್ಚಿಸಲು ಯೋಗ್ಯನು
ಎಂದು ವಿಜಯೀಂದ್ರರು ನಿಶ್ಚಯ ಮಾಡಿದರು ೯

ಶುಭದಿನದಿ ಶ್ರೀ ವಿಜಯೀಂದ್ರ ಗುರುವರ್ಯರು
ಆ ಪಂಡಿತೋತ್ತಮ ವಿಪ್ರನ್ನ ಕರೆದು
ಸುಪುಣ್ಯ ತುರೀಯಾ ಶ್ರಮವನ್ನ ಇತ್ತರು
ಸುಪವಿತ್ರ ಪ್ರಣವೋಪದೇಶ ಮಾಡಿದರು ೧೦

ಬುದ್ಧಿತೀಕ್ಷ್ಣಯುತ ಉದ್ದಾಮ ಪಾಂಡಿತ್ಯ
ಮಾಧವ ಮಧ್ವಾನುಗ್ರಹ ಪಾತ್ರತ್ವ
ಶ್ರೀದನಪರೋಕ್ಷ ಯೋಗ್ಯತೆಯನ್ನ ಕಂಡು
ಇತ್ತರು ಗುರುಗಳು ಸುಧೀಂದ್ರ ನಾಮವನು ೧೧

ಗುರು ವಿಯಯೀಂದ್ರರು ಐವತ್ತು ಮೇಲ್ಶೈದು
ವರುಷಸಂಸ್ಥಾನ ಆಳಿದರು ಶಕಶಾಲಿ
ವರುಷ ಹದನೈದು ನೂರ್ ಹದಿನೇಳು ಜೇಷ್ಠಹದಿ
ಮೂರನೇ ದಿನ ಅಸಿತ ಪಕ್ಷದ ವರೆಗೂ ೧೨

ಸ್ಮರಿಸಿದಾಕ್ಷಣ ದುರಿತ ತರಿದು ಶುಭವೀವ
ಗುರು ಸಾರ್ವಭೌಮ ವಿಜಯೀಂದ್ರರು ಶ್ರೀಹರಿ
ಪುರವನ್ನೈದಲು ಸುಧೀಂದ್ರ ತೀರ್ಥರು
ಆರೋಹಿಸಿದರು ಸಂಸ್ಥಾನ ಪೀಠವನು ೧೩

ಅರ್ಧಶತಮಾನಮೇಲ್ ತುರೀಯಾಶ್ರಮವಾಳಿ
ಮಧ್ವಮತವ ಲೋಕಸಜ್ಜನರಲ್ಲಿ
ವರ್ಧಿಸಿ ದುರ್ಮತ ಆಗಾಗ ಖಂಡಿಸುತ
ಸುಧೀಂದ್ರ ತೀರ್ಥರು ಕೀರ್ತಿಯ ಹೊಂದಿದರು ೧೪

ಶ್ರೀ ವಿಜಯೀಂದ್ರರನುಗ್ರಹ ಪೂರ್ಣಪಾತ್ರರು
ದೇವತಾಂಶರು ಶ್ರೀ ಸುಧೀಂದ್ರ ಯತಿಯು
ದಿಗ್ವಿಜಯದಲಿ ಇವರ ಮಹಿಮೆಗಳ ಕಂಡು
ಸರ್ವರು ಎಲ್ಲೆಲ್ಲು ಮಾಡಿದರ್ ಮರ್ಯಾದೆ ೧೫

ತಂಜಾವೂರ್ ಚೆಂಜಿ ಪೆನುಕೊಂಡ ವಿಜಯನಗರ
ರಾಜರು ಪಾಳೆಯಗಾರರು ಪಂಡಿತರು
ಪ್ರಜೆಗಳು ಸರ್ವರು ಸುಧೀಂದ್ರರ ಚರಣ
ಪೂಜಿಸಿ ಕೊಟ್ಟರು ಜಹಗೀರು ಕಾಣಿಕೆ ೧೬

ಪೆನುಕೊಂಡ ಅಧಿಪತಿ ವೇಂಕಟರಾಯ
ರತ್ನಾಭಿಷೇಕ ಅನೇಕಸಲ ಮಾಡ್ದ
ರಘುನಾಥರಾಜನು ತಂಜಾವೂರಧಿಪ
ಕನಕಾಭೀಷೇಕಗಳ ಮಾಡಿದ ಇವರಿಗೆ ೧೭

ಬಿಸಿಲಲ್ಲಿ ಬಾಡಿದ ಬಿಜಾಪುರದಲ್ಲಿ
ಶ್ರೀ ಸುಧೀಂದ್ರರು ಒಳ್ಳೆ ಮಳೆಯನ್ನ ಕರೆಸಿ
ಕಾಸಿಸುವ ಸೂರ್ಯನ್ನ ಘನಕಪ್ಪು ಮೇಘದಿಂ
ಮುಸುಕ್ಹಾಕಿದಂತೆ ಮಾಡಿದರು ಈ ಧೀರ ೧೮

ಮ್ಲೇಚ್ಛರಾಜ ಮಂತ್ರಿ ಮಳೆಕತ್ತಲೆ ನೋಡಿ
ಆಶ್ಚರ್ಯ ಚಕಿತರು ಆಗಿ ಸುಧೀಂದ್ರರ
ರಾಜ ಮರ್ಯಾದೆಯಿಂದಲಿ ಪೂಜಿಸಿದರು
ರಾಜನು ಜಹಗೀರ ಒದಗಿಸಿದ ಮುದದಿ ೧೯

ಅಸುರರ ಸಸುತರು ದರಿದ್ರರ ಧನಿಕರು
ಬುಸು ಬುಸು ರೋಗಿಗಳ ಆರೋಗ್ಯವಂತರು
ಸಮಸ್ತ ಕೊರತೆ ಅಪಮೃತ್ಯುನೀಗಿಸಿ ಕರುಣಿ
ಶ್ರೀ ಸುಧೀಂದ್ರರು ಅದ್ಯಾಪಿಕಾಯ್ತಿಹರು ೨೦

ಪದುಮಭವಪಿತ ಶ್ರೀ ಪದುಮಾಲಯಾಪತಿ
ನಿರ್ದೋಷ ಗುಣನಿಧಿ ಪ್ರಸನ್ನ ಶ್ರೀನಿವಾಸ
ಯದುಪತಿಗೆ ಪ್ರಿಯತರ ಸುಧೀಂದ್ರ ಗುರುವರ ನಿಮ್ಮ
ಪದುಮಾಂಘ್ರಿಯುಗ್ಮದಲಿ ಶರಣು ಮಾಂಪಾಹಿ ೨೧ ಪ

-ಇತಿ ಪ್ರಥಮ ಕೀರ್ತನೆ-

ದ್ವಿತೀಯ ಕೀರ್ತನೆ

ಶ್ರೀ ಸುಧೀಂದ್ರ ತೀರ್ಥ ಯತಿರಾಜರ ಚರಣ
ಬಿಸಜದ್ವಂದ್ವದಲಿ ನಾ ಶರಣಾದೆ ಸತತ
ಅಸಮ ಗುಣವಾರಿನಿಧಿ ಶ್ರೀರಾಮಚಂದ್ರ
ವ್ಯಾಸ ನರಹರಿ ಕೃಷ್ಣಸೈಂಧವಾಸ್ಯ ಪ್ರಿಯ ಪ

ಭಾರಿತರ ಜ್ಞಾನಸಾಹಿತ್ಯ ರಸ ಗ್ರಂಥಗಳ
ಸಂ ರಚಿಸಿ ಶ್ರೀ ಕೃಷ್ಣಗರ್ಪಿಸಿ ಸರ್ವ
ಸೂರಿ ಕವಿಜನರಿಂ ಪ್ರಶಸ್ತಿ ಕೊಂಡಿಹರು
ಸೂರಿ ಕುಲತಿಲಕ ಸುಧೀಂದ್ರ ಗುರುವರರು ೧

ಸುಭದ್ರಾಪರಿಣಯದ ಸೊಬಗು ಬಹು ರಸತರವು
ಈ ಭಾರಿ ಕವಿಗಳ ಸಾಮರ್ಥ್ಯ ಏನೆಂಬೆ
ಗಂಭೀರಧಾಟಿಯಲಿ ವ್ಯಾಸರಾಜಾಭ್ಯುದಯ
ಸದ್ಭಕ್ತಿವೈರಾಗ್ಯ ಬೋಧಿಪ ಗ್ರಂಥಗಳು ೨

ವ್ಯಾಖ್ಯಾನ ಮಾಡಿದರು ಶ್ರೀ ಭಾಗವತದ
ಏಕಾದಶಸ್ಕಂಧ ದ್ವಿತೀಯ ಸ್ಕಂಧ
ತರ್ಕತಾಂಡವಕೆ ವ್ಯಾಖ್ಯಾನ ಇನ್ನು ಬಹು
ಅಲಂಕಾರ ಮಂಜರಿಯಾದಿ ಗ್ರಂಥಗಳು ೩

ಪೂರ್ವಾಶ್ರಮದಲ್ಲಿ ಸುಧೀಂದ್ರ ತೀರ್ಥರು
ಶ್ರೀ ವಿಜಯೀಂದ್ರರು ವಿದ್ಯೆ ಕಲಿತಂತೆ
ದೇವಸ್ವಭಾವನು ವಿಪ್ರವರ ಓರ್ವನು
ಸೇವಿಸಿ ಸುಧೀಂದ್ರರಲಿ ವಿದ್ಯೆಯಕಲಿತ ೪

ಆ ದ್ವಿಜನ ಯೋಗ್ಯತೆ ಬಲುಭಾರಿ ಎಂದರಿತು
ಸುಧೀಂದ್ರರು ಅವಗೆ ತುರೀಯಾಶ್ರಮವ
ಇತ್ತು ಶ್ರೀಯಾದವೇಂದ್ರ ತೀರ್ಥನಾಮವನು
ಮಂತ್ರ ಪ್ರಣವಾದಿ ಉಪದೇಶ ಮಾಡಿದರು ೫

ವೃಂದಾವನಸ್ಥ ವಿಜಯೀಂದ್ರರ ಸೇವಿಸುತ
ಮಧ್ವಶಾಸ್ತ್ರ ಶಿಷ್ಯರಿಗೆ ತಾ ಬೋಧಿಸುತ್ತ
ಇದ್ದ ಸುಧೀಂದ್ರರು ದಿಗ್ವಿಜಯ ಮಾಡೆಂದು
ಯಾದವೇಂದ್ರರಿಗೆ ಅನುಗ್ರಹವ ಮಾಡಿದರು ೬

ದಿವ್ಯ ಕೃಷ್ಣಾತೀರ ಮುಡುಮಾಲ್ ಕ್ಷೇತ್ರದಿ ಇರುವ
ಶ್ರೀ ಯಾದವೇಂದ್ರ ಗುರುಪಾದಪದ್ಮದಲಿ
ಕಾಯವಾಕ್ ಮನಸ್ಸಿಂದ ಶರಣಾದೆ ಸಂತತ
ತೋಯಜಾಕ್ಷ ಯದುಪತಿಗೆ ಪ್ರಿಯತರರು ಸರರು ೭

ಪದುಮಭವಪಿತ ಶ್ರೀ ಪದುಮಾಲಯಾಪತಿ
ನಿರ್ದೋಷ ಗುಣನಿಧಿ ಪ್ರಸನ್ನ ಶ್ರೀನಿವಾಸ
ಯದುಪತಿಗೆ ಪ್ರಿಯತರ ಸುಧೀಂದ್ರ ಗುರುವರ ನಿಮ್ಮ
ಪದುಮಾಂಘ್ರಿಯುಗ್ಮದಲಿ ಶರಣು ಮಾಂಪಾಹಿ ೮ ಪ

–ಇತಿ ದ್ವಿತೀಯ ಕೀರ್ತನೆ–

ತೃತೀಯ ಕೀರ್ತನೆ

ಶ್ರೀ ಸುಧೀಂದ್ರ ತೀರ್ಥಯತಿರಾಜರ ಚರಣ
ಬಿಸಜ ದ್ವಂದ್ವದಲಿ ನಾ ಶರಣಾದೆ ಸತತ
ಅಸಮಗುಣವಾರಿನಿಧಿ ಶ್ರೀರಾಮಚಂದ್ರ
ವ್ಯಾಸ ನರಹರಿ ಕೃಷ್ಣಸೈಂಧವಾಸ್ಯಪ್ರಿಯ ಪ

ಸುಧೀಂದ್ರ ಗುರುಗಳಲಿ ಪಾಠ ಓದುವುದಕ್ಕೆ
ಬಂದಿದ್ದರು ವೇಂಕಟನಾಥಾಚಾರ್ಯ
ಸಾಧು ದೀಮಂತರು ವಿನಯ ಸಂಪನ್ನರು
ಶ್ರೀದನಿಗೆ ಪ್ರಿಯತಮ ಭಕ್ತ ವಿಜ್ಞಾನಿ ೧

ಹೀಂಕಾರ ಸಾಮ ಪ್ರತಿಪಾದ್ಯ ಪ್ರದ್ಯುಮ್ನನನ್ನ
ಓಂಕಾರಸಹಿತ ಸ್ಮರಿಸುತ ಗುರುವರ್ಯ

ಅಂಗಣ ಸಮೀಪದಲಿ ಬಂದಾಗ ನೋಡಿದರು
ವೇಂಕಟನಾಥ ಬರೆದಿದ್ದ ವಾಲೆಗಳ ೨

ಸುಧೀಂದ್ರರು ಆ ವಾಲೆಗಳೊಳ್ ಕಂಡರು
ಅದ್ಭುತ ರೀತಿಯಲಿ ಸುಧಾಪಾಠ ವಿಷಯ
ಅಂದಿನವರೆಗೂ ತಾ ಬೋಧಿಸಿದ್ದು ಸರ್ವವೂ
ಪೂರ್ತಿಯಾಗಿ ವಿವರದಿ ಬರೆಯಲ್ಪಟ್ಟಿತ್ತು ೩

ಇಂಥಾ ರೀತಿಯಲ್ಲಿ ಬರೆಯುವ ಅಭ್ಯಾಸ ಮುಂದಕ್ಕೆ
ಒದಗಿತು ಪರಿಮಳಾದಿ ಗ್ರಂಥ ರಚನೆಗೆ
ಸುಧೀಂದ್ರ ತೀರ್ಥರ ಆನಂದಕ್ಕೆಣೆಯುಂಟೆ
ಇಂಥಾ ಶಿಷ್ಯನ ಹರಿಯೇ ಒಲಿದು ಕೊಟ್ಟ ೪

ಸುಧೀಂದ್ರರು ತಮ್ಮ ಸಂಸ್ಥಾನ ಆಡಳಿತ
ದಿಂದ ಬಿಡುಗಡೆ ಆಗಿ ಏಕಾಂತದಲ್ಲಿ
ಶ್ರೀದನ್ನ ಧ್ಯಾನಿಸುತ ಇರಲು ಇಚ್ಛೆಕೊಂಡು
ಸಂಸ್ಥಾನ ಇತ್ತರು ವೇಂಕಟನಾಥನಿಗೆ ೫

ಯಾದವೇಂದ್ರಾರ್ಯರು ದಿಗ್ವಿಜಯ ಗತಿಯಲ್ಲಿ
ಇದ್ದರು ಬಹುದೂರ ಆ ಕಾಲದಲ್ಲಿ
ಮೊದಲು ಒಪ್ಪದೆ ಅನಂತರ ದೈವ ಇಚ್ಛೆ
ಯೆಂದುಕೊಂಡರು ಪೀಠ ವೇಂಕಟನಾಥಾರ್ಯ ೬

ರಾಘವನ ಪ್ರೇರಣೆಯಿಂ ಸಂನ್ಯಾಸವನ್ನಿತ್ತು
ರಾಘವೇಂದ್ರ ತೀರ್ಥಾಖ್ಯ ನಾಮವ ಕೊಟ್ಟು
ಮುಖ್ಯ ವಿದ್ವಜ್ಜನ ಭೂಪಾಲರ ಮುಂದೆ
ಶಂಖದಿ ಸುಧೀಂದ್ರರಭಿಷೇಕ ಮಾಡಿದರು ೭

ನುಡಿಯಲು ಮನಸಾ ಶ್ರೀ ರಾಘವೇಂದ್ರ ಎಂದು
ಒಡಹುಟ್ಟಿ ದವರಂತೆ ಬಂದು ಬದಿ ಇದ್ದು
ಎಡಬಿಡದೆ ಎನ್ನನ್ನು ಕಾಯುತಿಹ ಗುರುಕರುಣಿ
ಜಡಜಾಂಘ್ರಿಯುಗ್ಮದಲಿ ಶರಣಾದೆ ಸತತ ೮

ಮೂಲೋಕದಿ ಖ್ಯಾತ ಪ್ರಹ್ಲಾದ ರಾಜನು
ತರುವಾಯ ಬಾಲ್ಹೀಕದೇಶಾಧಿಪತಿಯು
ಮೂರನೆಯದಾಗಿ ಶ್ರೀ ವ್ಯಾಸರಾಯರು ಈ
ಶ್ರೀರಾಘವೇಂದ್ರಾರ್ಯ ವೇಂಕಟನಾಥ ೯

ಪರಾಕ್ ಪರಾಕ್ ಪ್ರಹ್ಲಾದ ಸಮ್ರಾಟನೆ
ನರಸಿಂಹ ಶ್ರೀಪತಿಯ ನೀನು ಸ್ತುತಿಸಿದ್ದು
ವರ್ಷಿಸುತೆ ಕಿವಿಯಲ್ಲಿ ಅಮೃತ ಧಾರೆಯಂತೆ
ಬರದೋದಿ ಹಿಗ್ಗುವರ ಭಾಗ್ಯ ಏನೆಂಬೆ ೧೦

ಕೃಷ್ಣಭೀಮರ ಭಕ್ತ ಬಾಲ್ಹೀಕರಾಜನು
ರಣರಂಗದಲು ಭಕ್ತಿ ಪ್ರಚುರ ಮಾಡಿದನು
ಕೃಷ್ಣನೇ ನೇರವಾಗಿ ಬಂದು ನಲಿದನು ವ್ಯಾಸ
ಮುನಿರಾಜರ ಮುಂದೆ ಶರಣು ಶರಣೆಂಬೆ ೧೧

ಇಂಥಾ ಮಹಾಭಾಗ್ಯ ವೇಂಕಟನಾಥನಿಗೆ
ಇಂದು ಶ್ರೀ ರಾಘವೇಂದ್ರ ತೀರ್ಥನಾಮವನು
ಇತ್ತು ಮಠ ಒಪ್ಪಿಸಿ ಯುಕ್ತಕಾಲದಿ ತಾವು
ಹೊರಟರು ಸುಧೀಂದ್ರರು ತುಂಗಾ ತೀರಕ್ಕೆ ೧೨

ಭೂದೇವಿ ರಮಣನು ಭೂರ್ಭುವಃ ಸ್ವಃಪತಿಯು
ನಾದ ಪ್ರತಿಪಾದ್ಯ ತುರೀಯ ವಾಂಛಿತದ
ನಿರ್ದೋಷ ಗುಣನಿಧಿ ವರಾಹನ ವಕ್ತ್ರದಿಂ
ಬಂದಿಹಳು ಅಮೃತ ತರಂಗಿಣಿ ತುಂಗಾ ೧೩

ತುಂಗಾನದಿಯಲ್ಲಿ ವೃಂದಾವನಗಳು
ಪಂಕಜನಾಭರು ನರಹರಿ ಕವೀಂದ್ರ
ವಾಗೀಶರು ವ್ಯಾಸರಾಯರು ಇಹರು
ತಾ ಕುಳಿತಿರುವಲ್ಲೇವೆ ಶ್ರೀ ಸುಧೀಂದ್ರಾರ್ಯ ೧೪

ಫಾಲ್ಗುಣ ಕೃಷ್ಣ ತೃತೀಯ ಪುಣ್ಯದಿನ
ಳಾಳುಕನ ಸ್ಮರಿಸುತ ಹರಿಪುರಐದಿ

ಇಲ್ಲಿ ವೃಂದಾವನದಿ ಒಂದಂಶದಿ ಇಹರು
ಬಲು ಭಕ್ತಿಯಿಂ ನೆನೆಯೆ ಒದಗುವರು ಬಂದು ೧೫

ಪದುಮಭವ ಪಿತ ಶ್ರೀ ಪದುಮಾಲಯಾಪತಿ
ನಿರ್ದೋಷಗುಣನಿಧಿ ಪ್ರಸನ್ನ ಶ್ರೀನಿವಾಸ
ಯದುಪತಿಗೆ ಪ್ರಿಯತರ ಸುಧೀಂದ್ರ ಗುರುವರ ನಿಮ್ಮ
ಪದುಮಾಂಘ್ರಿ ಯುಗ್ಮದಲಿ ಶರಣುಮಾಂಪಾಹಿ ೧೬ ಪ

॥ ಇತಿ ಶ್ರೀ ಸುಧೀಂದ್ರ ಚರಿತೆ ಸಂಪೂರ್ಣಂ ॥

ಶ್ರೀ ರಾಘವೇಂದ್ರ ಅಭಯ ವರದ ಸ್ತೋತ್ರ

೧೧೩

ಮಂತ್ರ ಸದನ ವಿರಾಜ ।
ಶ್ರೀರಾಘವೇಂದ್ರ ತ್ವಚ್ಚರಣ ವಿಕಸಿತ ಕಂಜದಲ್ಲಿ
ಶರಣುನಾ ಪಾಹಿ ಮಾಂಗುರುರಾಜ ।
ಶ್ರಿ ಸುಧೀಂದ್ರಕರಜ । ಇಂದಿರಾಪತಿ ವ್ಯಾಸ –
ಪ್ರಿಯತಮಾನಂದ ತೀರ್ಥರಾನಂದಪ್ರದ ಸಿದ್ಧಾಂತಪಾದ ಸರ್ವ
ಸುಜನವೃಂದಕೆ ಬೀರಿದಂಥ ಮಹಂತ ಶರಣು ಪ

ಸಾಧುಕವಿ ಜನಮಿತ್ರ ಅಜ್ಞಾನ ತಿಮಿರಾರಣ್ಯ ವೀತಿಹೋತ್ರ ।
ತವಪಾದ ಸ್ಮರಣೆಯು ಭಾಗ್ಯಪ್ರದ ಸುಪವಿತ್ರ ।
ಶರಣಾದೆ ನಿನ್ನಲ್ಲಿ ಭಾವಿಸುತತವ ಮಂತ್ರ । ಸುಭ್ರಾಜ ಸುಚರಿತ್ರ ॥
ಬಾದರಾಯಣೀ ಮಾಧ್ವತತ್ವವ ಬೋಧಿಸಿದಿ ಅಧಿಕಾರಿಗಳಿಗೆ
ಸರ್ವವೈದಿಕ ಶಬ್ದವರ್ಣ ಘೋಷಧ್ವನಿ ಪ್ರತಿಪಾದ್ಯನಾಗಿಹ
ಅದ್ವಿತೀಯ ಸ್ವತಂತ್ರ ಸರ್ವ ದೋಷದೂರನು –
ಉರುಗುಣಾರ್ಣವ ಮುಕ್ತಾ ಮುಕ್ತ ನಿಯಂತ್ಯ –
ಸರ್ವಾಧಾರ ಜಗಜ್ಜನ್ಮಾದಿ ಕರ್ತನ –
ಸಾಧು ಸಜ್ಜನ ಜ್ಞಾನವಿಷಯ ಸಂಪ್ರಾಪ್ಯ ಶ್ರೀಶಮುಕುಂದ

ಭೇದ ಪಂಚ ತಾರತಮ್ಯ ಈಶ ಈಶಿತವ್ಯ
ಜ್ಞಾನಾದಿ ಸಾಧು ಯೋಗ್ಯ ಉಪಾಸನದ ಬಗೆ ತೋರಿ
ಪರಮ ಪ್ರಸಾದ ಕೊಂಡಿಹ ಹೇದಯಾಂಬುಧೇ –
ಪಾಲಿಸೆನ್ನ ಶರಣು ಹೊಕ್ಕೆ ಔದಾರ್ಯ ಸಿಂಧು ೧

ರಾಘವೇಂದ್ರ ಮಹಂತ । ನಿನ್ನಲ್ಲಿ ನಿನ್ನ ನಾಮ –
ವರ್ಣದಿ ಶ್ರೀದ ಇರುತಿಹನು –
ಸುಪ್ರಸನ್ನ ನಾಗಿ ಪ್ರಮೋದ ।
ರಾ ಸ್ವರತ ಶ್ರೀರಾಮಚಂದ್ರ ಆನಂದ ।
ಘ ಎನಲು ಅಘಘಾತ
ವೇಂ ಗಂಗಾಪಿತ ಹರಿಪರಾತ್ಪರ –
ಮೃತ್ಯುವರ್ಜಿತ ಅಮೃತ ಶ್ರೀಶನು ।
ಇಂದ್ರ ಪರಮೈಶ್ವರ್ಯ ರಾಮನೃಸಿಂಹ ವ್ಯಾಸ ಕೃಷ್ಣ ಹಯಮುಖ –
ಜಗದಿಸುಪ್ರಖ್ಯಾತ ನ್ಯಾಯಸುಧೆಯ –
ಪರಿಮಳ ಪ್ರಸರಿಸಿ ಉಪನಿಷದ್ಖಂಡಾರ್ಥಗಳ –
ನ್ಯಾಯ ಮುಕ್ತಾವಳಿಯು ಉಪರಿ ಬಹು ಬಹು –
ಗ್ರಂಥರಚಿಸಿ ದಿಕ್ಕುವಿಜಯದಿ ಲೋಕ –
ಪೂಜಿತನಾದ ಗುರುವೇ –
ತುಂಗೆ ತೀರ ಮಂತ್ರಾಲಯದಿ ವೃಂದಾವನದಲಿ –
ಕುಳಿತು ಮೂಜಗದೇಕ ಗುರುತಮ ಮಧ್ವರಾಯರ
ಹೃಸ್ಥವಾಸುದೇವ ಕೃಷ್ಣನ ಬಹುಗುಣ ಕ್ರಿಯಾರೂಪ
ಸ್ಮರಿಸುತ ಬೇಡುವವರಿಗಭೀಷ್ಟವೀವಿ ೨

ಪ್ರಣವ ಬೋಧ ಶ್ರೀದನ್ನ । ಒಂದು ಎಂಟು ಏಳು
ಆರು ವರ್ಣಮೂವತ್ತೆರಡು –
ಮೂವತ್ತು ಮೂರು ಘನ್ನ । –
ಹನ್ನೆರಡು ಮತ್ತು ಅನೇಕ ಸುಶುಭವರ್ಣ ।
ಮಂತ್ರ ಪ್ರತಿಪಾದ್ಯನ್ನ । ಶ್ರೀಮನ್ನಾರಾಯಣ –
ಹಯಾಸ್ಯವ್ಯಾಸ ಶ್ರೀ ಕೃಷ್ಣರಾಮ –

ಶ್ರೀ ನೃಸಿಂಹ ವರಾಹ ಹಂಸ – ಇನ್ನು –
ಅಜ ಆನಂದಾದ್ಯಮಿತ ಭಿನ್ನ ರಹಿತ ಸುಪೂರ್ಣ –
ನಿರ್ಮಲ ಸ್ವಸ್ವದೇಕ ವಿಷ್ಣುರೂಪ –
ಅನಂತಗುಣ ಕ್ರಿಯಾ ಸರ್ವದಾಉಪಾಸಿಸುವ –
ವಿಧಿ ಮುಖ್ಯ ವಾಯು ಮಧ್ವಮುನಿ ಸದ್ವಂಶ –
ಸಂಭವ ಕುಮತ ಪರ್ವತ ಕುಲಿಶ –
ಕುಮತ ಪರ್ವತ ಕುಲಿಶ
ಶ್ರೀ ವಿಜಯೀಂದ್ರ ವನರುಹಪಾಣಿ ಜಾತ –
ವಿಜ್ಞಾನ ವಿದ್ವನ್ಮಣಿ ಸುಧೀಂದ್ರರ –
ಪದ್ಮಕರ ಸಂಜಾತ ನಿನ್ನಲಿ ಶರಣು ಹೊಕ್ಕೆನಾ –
ನಿನ್ನಧೀನನು – ಪದ್ಮಜನಪಿತ –
ಪ್ರಸನ್ನ ಶ್ರೀನಿವಾಸನಿಗೆ ಪ್ರಿಯತರನೆ ಪಾಹಿ ೩

ಮಂತ್ರಸದನವಿರಾಜ

ಶ್ರೀ ರಾಘವೇಂದ್ರ ಅಣು ವಿಲಾಸ

೧೧೪

ಜಯ ಜಯ ಗುರುರಾಜ ಜಯ ಜಯ
ಜಯತು ರಾಘವೇಂದ್ರ ತೀರ್ಥ ನಿಮ್ಮ
ತೋಯಜ ಸುಪವಿತ್ರ ಪಾದದಲಿ ನಾ
ಕಾಯ ವಾಕ್ಕು ಮನದಿಂದ ಆಹ
ಶರಣಾದೆ ಪರಮಕೃಪಾಕರ ಗುಣನಿಧಿ
ಶಿರಿ ಮಾಧವ ಮಧ್ವಪ್ರಿಯತಮ ಜೀಯ ಪ

ಅರದೂರ ಗುಣಗಣಸಿಂಧು ರಮೆ
ಯರಸ ಶ್ರೀ ನರಸಿಂಹ ಬಂದು ತನ್ನ
ವರಭಕ್ತ ಬಾಲನ್ನ ಕಾಯ್ದು ಬಹು
ಕ್ರೂರ ಹಿರಣ್ಯನ ಕೊಂದು ಆಹ

ಲೋಕ ಸರ್ವಕ್ಕೂ ಸುಕ್ಷೇಮವಿತ್ತನು ವಿಭು
ಲೋಕತ್ರಯಾಶ್ರಯ ವಿಧಿಭವಾದೀಡ್ಯ ೧

ಆ ಬಾಲ ಭಕ್ತ ಪ್ರಹ್ಲಾದ ಮತ್ತು
ಈ ಭುವಿಯಲ್ಲಿ ಜನಿಸಿದ ವಾದಿ
ಇಭ ಮೃಗರಾಜನೆನಿಸಿದ ಮುನಿ
ತ್ರಿಭುವನದಲ್ಲಿ ಪ್ರಖ್ಯಾತ ಆಹ
ವ್ಯಾಸ ರಾಜನೆ ರಾಘವೇಂದ್ರ ತೀರ್ಥರು ಆದ
ಶ್ರೀ ಸುಧೀಂದ್ರರ ಕರಕಂಜ ಸಂಜಾತ ೨

ಗೋಪಿಕಾಂಬಾ ತಿಮ್ಮಣ್ಣಾರ್ಯ ಸಾಧು
ದಂಪತಿಗಳ ಗರ್ಭದುದಯನಾಗಿ
ಉಪನಿಷತ್ ವೇದಾಂತ ವಿದ್ಯಾ ಓದಿ
ಸುಪವಿತ್ರೆ ಸರಸ್ವತಿ ಕೈಯ್ಯ ಆಹ
ಪಿಡಿದು ಗೃಹಸ್ಥ ಸದ್ಧರ್ಮ ಚರಿಸಿದನು
ಪೊಡವಿಯಲ್ಲುತ್ತಮ ಕುಂಭಕೋಣದಲಿ ೩

ಶಾರ್ಙ್ಗ ಸುದರ್ಶನಿ ಕುಂಭ ಈಶ
ಮಂಗಳ ನಾಯಕೀ ಅಂಬಾ ವಾದಿ
ಇಭಸಿಂಗ ವಿಜಯೀಂದ್ರರೆಂಬ ಯತಿ
ಪುಂಗವರಾಲಯ ಕುಂಭ ಆಹ
ಕೋಣ ಪುರಿಯಲ್ಲಿ ಇರುವುವು ಅಲ್ಲವೇ
ಮುನಿಪ ಸುಧೀಂದ್ರರು ವಾಸಿಸುತ್ತಿದ್ದರು ೪

ಉದ್ದಾಮ ಪಂಡಿತಾಗ್ರಣಿಯು ವೀಣಾ
ವಾದ್ಯಲಲಿತ ಕಲಾನಿಧಿಯು ಆ
ಸಾಧ್ವಿ ಸರಸ್ವತಿ ಪತಿಯು ಆಹ
ಉತ್ತಮ ಚತುರ್ಥಾಶ್ರಮಿಯು ಆಹ
ಗುರುಸುಧೀಂದ್ರರ ಕರಕಮಲ ಪೀಯೂಷದಿ
ವರವೇದ ಸಾಮ್ರಾಜ್ಯ ಅಭೀಷೇಕ ಕೊಂಡ ೫

ಚೋಳದೇಶದ ರಾಜಸ್ಥಾನ ಅಲ್ಲಿ
ಫಲ ಪುಷ್ಪತರು ಲತಾ ನಾನಾ ವಿಧ
ಒಳ್ಳೆಸಲೀಲ ತೀರ ಉದ್ಯಾನ ವನ
ದಲಿ ಕೊಂಡ ಸಂನ್ಯಾಸವನ್ನ ಆಹ
ಹಿಂದೆ ವೇಂಕಟನಾಥ ಎಂದು ಕರೆಯಲ್ಪಟ್ಟು
ಇಂದು ರಾಘವೇಂದ್ರ ತೀರ್ಥನಾಮವ ಕೊಂಡ ೬

ಶ್ರೀ ಮಠ ಬಿರುದು ಚಿಹ್ನೆಗಳು ಮೂಲ
ರಾಮಾದಿ ಹರಿ ವಿಗ್ರಹಗಳು ಸ್ಫುರತ್
ಹೇಮ ರತ್ನಾಭರಣಗಳು ಶ್ರೀ
ವಿಮಲ ತುಳಸೀ ಪೂಮಾಲೆಗಳು ಆಹ
ಪಾಂಚರಾತ್ರಾಗಮ ತಂತ್ರ ಸಾರದರೀತಿ
ಪೂಜಾ ವೈಭವ ಹರಿ ಸಾನಿಧ್ಯಯೇನೆಂಬೆ ೭

ತೀರ್ಥಯಾತ್ರೆ ದಿಕ್ಕು ವಿಜಯ ಪ್ರಾಚೀನ
ಮೊದಲಾದ ದಿಶೆಯಲಿ ನಿಲಯ ಕೊಂಡ
ಮೂರ್ತಿ ದರ್ಶನ ಪುಣ್ಯತೋಯದಲ್ಲಿ
ನಿತ್ಯಾನುಷ್ಠಾನ ನೈವೇದ್ಯ ಆಹ
ಸತ್ತತ್ವವಾದ ಪ್ರವಚನ ವಾಕ್ಯಾರ್ಥವು
ಸತ್ ಶಿಷ್ಯರಿಗೆ ಉಪದೇಶ ವೈಭವವು। ೮

ಶ್ರೀರಂಗಕ್ಷೇತ್ರಕ್ಕೆ ಬಂದು ಇಲ್ಲಿ
ಶ್ರೀರಂಗನಾಥನ ಮುಂದು ಮಧ್ವ
ಶಾಸ್ತ್ರ ಪ್ರವಚನಗೈದು ಶಿರಿ
ಹರಿಕೃಷ್ಣ ಅರ್ಪಣೆಯೆಂದು ಆಹ
ಯಾತ್ರೆ ಮುಂದುವರಿಸಿ ದುರ್ವಾದಿಗಳಗೆದ್ದು
ಮಾರ್ಯಾದೆಕೊಂಡು ಸಿದ್ಧಾಂತ ಸ್ಥಾಪಿಸಿದರು ೯

ದಕ್ಷಿಣ ದ್ವಾರಕೆಯಲ್ಲಿ ಶ್ರೀ
ಕೃಷ್ಣನಾಲಯದಲಿ ಪ್ರ -

ದಕ್ಷಿಣ ನಮನ ಮಾಡುತಲಿ ಅಪ –
ರೋಕ್ಷದಿ ಹರಿಯ ಕಾಣುತಲಿ ಆಹ
ಚಂದ್ರಿಕಾ ಪ್ರವಚನ ಚಂದ್ರಿಕಾವಿವರಣ
ತಂತ್ರ ದೀಪಿಕಾ ಮುಕ್ತಾವಳಿಯ ಮಾಡಿದರು ೧೦

ಅಪಮೃತ್ಯು ದಾರಿದ್ರ್ಯ ತರಿದು ಬಹು
ತಾಪತ್ರಯಾದಿಗಳಳಿದು ನಿಜ
ಅಪವರ್ಗಪ್ರದ ಜ್ಞಾನವಿತ್ತಾಶ್ರಿತ
ಸದ್ಭಕ್ತ ಜನರನ್ನು ಕಾಯ್ದು ಆಹ
ದಿಕ್ಕು ವಿಜಯದಲ್ಲೆಲ್ಲೂ ಪೂಜಿತರಾದ
ಲೋಕಖ್ಯಾತ ಗುರು ಸಾರ್ವಭೌಮಗೆ ನಮೋ ೧೧

ಮಂತ್ರ ಪವಿತ್ರ ಸುಕ್ಷೇತ್ರ ತುಂಗಾ
ತೀರ ಮಂತ್ರಾಲಯ ಕ್ಷೇತ್ರ ಮೂಲ
ಮಂತ್ರ ಪ್ರತಿಪಾದ್ಯ ಸನ್ನಿಹಿತ ರಾಘ
ವೇಂದ್ರರು ಕುಳಿತು ಈ ಕ್ಷೇತ್ರ ಆಹ
ಮಂತ್ರ ಸದನದಿ ವೃಂದಾವನದೊಳು ಇರುತ
ಬಂದು ಸೇವಿಪರ ವಾಂಛಿತ ವರಕೊಡುವರು ೧೨

ರಾಘವೇಂದ್ರ ರೂಪ ಧರಿಸಿ ಹರಿ
ರಾಘವೇಂದ್ರ ಎಂದು ಕರೆಸಿಕೊಂಡು
ರಾಘವೇಂದ್ರರಲಿ ಪ್ರಾಕಾಶಿಸುತಿಹ
ರಾಘವ ಹನುಮ ಹೃದ್ವಾಸಿ ಆಹ
ದರುಶನ ಅಘಹರ ಪ್ರದಕ್ಷಿಣೆ ಹರಿಯಾತ್ರೆ
ನಮಸ್ಕಾರ ಸರ್ವಾರ್ಥ ಸಿದ್ಧಿದಾಯಕವು ೧೩

ಅಮಲ ವೃಂದಾವನ ತೀರ್ಥ ಕುಕ್ಷಿ
ಆಮಯ ಕಳೆದು ಸರ್ವತ್ರ ಕಾಯ
ನಿರ್ಮಲ ಮಾಳ್ಪುದು ಸತ್ಯ, ಕ್ರೋಧ

ಕಾಮಾದಿ ಅರಿಗಳಹಂತ ಆಹ
ಈ ನುಡಿಗಳು ಇಂಥಾ ಸ್ತೋತ್ರ ಪಠಿಸೆ ಕೇಳೆ
ವನಜೇಶ ಗುರುದ್ವಾರ ಈವಸೌಭಾಗ್ಯ ೧೪

ಶ್ರೀ ರಾಘವೇಂದ್ರಾಯ ನಮಃ ಎಂಟು
ಅಕ್ಷರ ಮಂತ್ರವು ನೇಮದಿಂದ
ವಿಪ್ರರು ಪ್ರಣವ ಉತ್ತಮವನ್ನ
ಸೇರಿಸಿ ಜಪಿಸೋದು ಕ್ರಮ ಆಹ
ನಾರೀರು ಪ್ರಣವಕ್ಕೆ ಬದಲಾಗಿ ಶ್ರೀಂ ಎಂದು
ಸ್ಮರಿಸುವುದು ಶ್ರೀ ಕೃಷ್ಣ ಮಂತ್ರ ತೆರದಿ ೧೫

ರಾಘವೇಂದ್ರ ನಾಮವರ್ಣಗಳಲಿ
ರಾಘವಾದಿ ಅನಿರ್ವಿಣ್ಣ ರೂಪ
ಅಘದೂರ ಆನಂದ ಜ್ಞಾನ ಪ್ರಚುರ
ಅಗಣಿತ ಉರು ಗುಣಪೂರ್ಣ ಆಹ
ಉಂಟೆಂದು ಸ್ಮರಿಸೋದು ನಿರ್ವ್ಯಾಜ ಭಕ್ತಿಯಿಂ
ನೆಂಟನಾಗಿ ಕಾಯ್ವಂ ರಂ ಕ್ಷಂ ಕ್ಲೀಂವ್ಯಾಂ ೧೬

ಶ್ರೀ ರಾಘವೇಂದ್ರ ತೀರ್ಥರಲಿ ಮಹಾ
ಕಾರುಣ್ಯ ಸ್ವಾಭಾವಿಕದಲಿ ಇರುವ
ಕಾರಣ ಬಂದು ಇವರಲಿ ಜನ
ಕೊರತೆಗಳ ಮನಸಾ ಪೇಳಿ ಆಹ
ಇಷ್ಟಾರ್ಥ ಪಡೆವದು ಪ್ರತಿದಿನ ಕಾಣುತ್ತೆ
ಕೃಷ್ಣನ ಒಲುಮೆ ಈ ಗುರುಗಳೊಳ್ ಪೂರ್ಣ ೧೭

ಮೂಲ ಮೃತ್ತಿಕೆ ಬೃಂದಾವನವು ಬಹು
ಯೆಲ್ಲ ಊರಲ್ಲಾ ಇರುವುವು ಭಕ್ತ
ರೆಲ್ಲರು ಸೇವಿಸಿ ಫಲವು ಹೊಂದಿ
ಬಾಳುತಿಹದು ಕಾಣುತಿಹವು ಆಹ
ಹರಿಶಿರಿಯು ಪ್ರಾಣದೇವಾದಿಗಳ ಕೂಡಿ
ಇರುತಿಹರಿವರಲ್ಲಿ ಕರದಲ್ಲಿ ಬರುವರು ೧೮

ಜಯ ಜಯ ಜಯ ರಾಘವೇಂದ್ರ ಜಯ
ಜಯತು ಪ್ರಹ್ಲಾದ ರಾಜೇಂದ್ರ ಜಯ
ಜಯ ಜಯ ವ್ಯಾಸಮುನೀಂದ್ರ ಜಯ
ಜಯ ಮಧ್ವಮತ ಅಬ್ಧಿ ಚಂದ್ರ ಆಹ
ವನಜಜ ಪಿತ ಶ್ರೀ ಪ್ರಸನ್ನ ಶ್ರೀನಿವಾಸ
ವನಜೇಶ ಪ್ರಿಯ ಗುರೋಶರಣು ಮಾಂ ಪಾಹಿ ೧೯ ಪ

॥ ಶ್ರೀ ರಾಘವೇಂದ್ರ ಅಣು ವಿಲಾಸ ಚರಿತ್ರೆ ಸಂಪೂರ್ಣಂ ॥

ಶ್ರೀ ರಾಘವೇಂದ್ರ ವಿಲಾಸ

ಪೂಜ್ಯಾಯ ರಾಘವೇಂದ್ರಾಯ ಸತ್ಯ ಧರ್ಮ ರತಾಯಚ
ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನುವೆ

೧೧೫

ಶ್ರೀ ರಾಘವೇಂದ್ರ ತೀರ್ಥರೆ ನಿಮ್ಮ ಅರವಿಂದ
ಚರಣ ಯುಗಳದಿ ನಾನು ಶರಣು ಶರಣಾದೆ
ಶ್ರೀ ರಮಾಯುತ ನಾರಾಯಣ ಕೃಷ್ಣ ನಿಮ್ಮೊಳಗೆ
ಭಾರತೀರಮಣ ಸಹ ಜ್ವಲಿಸುತಿಹ ಸತತ ಪ

ಶ್ರೀರಾಮ ಹಯವದನ ಶ್ರೀಶ ವೆಂಕಟರಮಣ
ನರಸಿಂಹ ಕೃಷ್ಣ ಶ್ರೀಕರ ಕಪಿಲವ್ಯಾಸ
ಧರೆಯಲ್ಲಿ ಅವತರಿಸಿ ಸಜ್ಜನರಿಗೊಲಿದು
ಪೊರೆದು ಯೋಗ್ಯತೆ ಅರಿತು ಈವನು ಸದ್ಗತಿಯ ೧

ಹರಿವ್ಯಾಸ ತ್ರಯುಗನು ಬೋಧಿಸಿದ್ದಕ್ಕೆ ವಿರುದ್ಧ
ಪರಿಪರಿ ಕುಶಾಸ್ತ್ರವು ಸುಜನರ ಮನ ಕೆಡಿಸಿ
ಪರಸುಖಪ್ರದ ಜ್ಞಾನ ಮುಚ್ಚಿ ಪೋಗಲು ಆಗ
ಹರಿಯ ಪ್ರಥಮಾಂಗ ವರ ವಾಯು ಉದಿಸಿದನು ೨

ಉದಿಸಿದನು ವರ ವಾಯು ಆನಂದ ಮುನಿಯಾಗಿ
ಹೃದಯಗತ ಅಜ್ಞಾನ ತಿಮಿರ ಭಾಸ್ಕರನು
ಬಂದಿಹರು ಸೂರಿಗಳು ಈತನ ಪರಂಪರೆಯೊಳ್
ಸಾಧು ಸಜ್ಜನರಿಗೆ ನಿಜ ಸುಖ ಒದಗಿಸೆ ೩

ಮಂಗಾಳಾಂಬಿಕೆ ನಾಮ ಉಮಾ ಕುಂಭೇಶ್ವರವಿನುತ
ಮಂಗಳಕೆ ಮಂಗಳನು ಲಕ್ಷ್ಮೀ ನಾರಾಯಣನ್ನ
ತಾಕುಳಿತು ಕುಂಭಕೋಣದಿ ಒಲಿಸಿಕೊಂಡಿಹರು
ಅಖಿಳ ಬಗೆ ಬಗೆ ವಿದ್ಯಾ ನಿಪುಣ ವಿಜಯೀಂದ್ರ ೪

ದುಷ್ಟ ಮತ ಗಿರಿ ಕುಲಿಶ ನ್ಯಾಯ ಸುಧೆಯನ್ನ
ಶ್ರೇಷ್ಠತಮ ರೀತಿಯಲಿ ವಿವರಿಸಿ ಬೋಧಿಸುವ
ವೈಷ್ಣವ ಯತಿಕುಲ ಶಿರೋಮಣಿ ಸುಧೀಂದ್ರ ಶಶಿ
ಪುಟ್ಟಿದರು ವಿಜಯೀಂದ್ರಾಭಿದ ಕ್ಷೀರಾಬ್ಧಿಯಲ್ಲಿ ೫

ವಿಜಯೀಂದ್ರರಲಿ ಶರಣು ಹೊಕ್ಕೆನು ಸುಧೀಂದ್ರರ
ರಾಜೀವ ಚರಣ ಯುಗಳಕೆ ಆ ನಮಿಪೆ
ತಂಜಾನಗರದಲ್ಲಿ ಗುರುವರ ಸುಧೀಂದ್ರಕರ
ಕಂಜಭವ ರಾಘವೇಂದ್ರ ತೀರ್ಥರಿಗೆ ನಮಿಪೆ ೬

ಸುತಪೋನಿಧಿ ಗೌತಮರ ಗೋತ್ರಜರು
ತಿಮ್ಮಣ್ಣಾಚಾರ್ಯರ ಗೋಪಿಕಾಂಬ ದಂಪತಿಯು
ನಿರ್ಮತ್ಸರ ಮನದಿ ಸದ್ಧರ್ಮ ಆಚರಿಸಿ
ಸಮ್ಮುದದಿ ಭಜಿಸುತ್ತಿದ್ದರು ಶ್ರೀವೇಂಕಟನ್ನ ೭

ವೆಂಕಟೇಶನ ದಯದಿಂದ ಮಕ್ಕಳು ಪುಟ್ಟಿ
ಮಗಳಿಗೆ ವೆಂಕಟಮ್ಮ ಮಗಗೆ ಗುರುರಾಜ
ಅಂಕವ ಹೀಗಿಟ್ಟು ಸುಖದಿ ವಾಸಿಸಿದರು
ಬಿಂಕವಿಲ್ಲದೆ ವಿಜಯನಗರಾಖ್ಯಪುರದಿ ೮

ವಿದ್ವನ್ಮಣಿಯು ಮತ್ತು ವೈಣಿಕ ನಿಪುಣರು
ಸಾಧುಜನ ಮಾನ್ಯರು ತಿಮ್ಮಣ್ಣಾಚಾರ್ಯ

ಶ್ರೀದ ವೆಂಕಟಪತಿ ಶ್ರೀನಿವಾಸನು ಒಲಿದು
ಮತ್ತೊಂದು ಪುತ್ರ ಸುರತ್ನನ್ನ ಹೊಂದಿದರು ೯

ವೆಂಕಟರಮಣನ ಪ್ರಸಾದದಿಂ ಹುಟ್ಟಿದ
ಅಕಳಂಕ ಈ ಶಿಶುವಿಗೆ ವೆಂಕಟನಾಥ
ಶ್ರೀಕರ ಈ ಹೆಸರು ನಾಮಕರಣವ ಮಾಡಿ
ಯುಕ್ತ ಕಾಲದಿ ವಿಹಿತ ವಿದ್ಯಾ ಕಲಿಸಿದರು ೧೦

ವೆಂಕಟನಾಥ ಶಿಶು ಹುಟ್ಟಲಿಕ್ಕೆ ಹಿಂದೆಯೇ
ಶ್ರೀ ಕಂಚೀಪುರಕೆ ಕುಟುಂಬವು ಬಂದು
ಅಗ್ರಹಾರದಿ ವಾಸ ಮಾಡುತ್ತಿದ್ದರು ನರ –
ಸಿಂಗ ಕರಿವರದ ಮಹಾದೇವಿ ಆಶ್ರಯದಿ ೧೧

ಮಧುರೆಯೆಂಬುವ ಪಾಂಡ್ಯ ದೇಶದ ಪಟ್ಟಣದ
ವೈದಿಕ ಕುಲಮಣಿ ಲಕ್ಷ್ಮೀ ನರಸಿಂಹ
ಎಂದೆನಿಪ ವರನಿಗೆ ವೆಂಕಟಮ್ಮನ ಕೊಟ್ಟು
ಮದುವೆ ಮಾಡಿದರು ತಿಮ್ಮಣ್ಣಾರ್ಯ ಸಾಧು ೧೨

ಅಣ್ಣ ಗುರುರಾಜನು ತಮ್ಮ ವೆಂಕಟನಿಗೆ
ತಾನೇ ಉಪನಯನ ವಿಧಿಯುಕ್ತದಲ್ಲಿ ಮಾಡಿ
ತನ್ನ ಅಕ್ಕನ ಗಂಡ ಪಂಡಿತೋತ್ತಮರಲ್ಲಿ
ಘನವಿದ್ಯೆ ಕಲಿಯಲು ಕಳುಹಿಸಿದ ವಟುವ ೧೩

ವೆಂಕಟನಾಥ ಕ್ಷಿಪ್ರದಲ್ಲೇ ಕಲಿತು
ಪಟು ಪಟೀಯಸವಾಗಿ ಪ್ರತಿಭೆ ತೋರಿಸಿದ
ಸಾಟಿ ಸಮಬಾಲರಲಿ ಇಲ್ಲದೆ ಇವನು
ಪಾಠ ಓದಿ ಬಾಲಪಂಡಿತನು ಆದ ೧೪

ಸತ್ಕುಲ ಪ್ರಸೂತಳು ಸುಸ್ವಭಾವಳು ಸಾಧ್ವಿ
ಸಾತ್ವಿಕ ಸುಗುಣ ಶೀಲೆ ಸರಸ್ವತಿಯೆಂಬ
ವಧುವ ಕೈಪಿಡಿದು ಈ ವೆಂಕಟನಾಥನು
ಸಾಧು ಧಾರ್ಮಿಕ ಗೃಹಸ್ಥಾಶ್ರಮವ ಕೊಂಡ ೧೫

ಕುಂಭಿಣಿಯಲಿ ಶ್ರೇಷ್ಠತರ ಕ್ಷೇತ್ರ ಕುಂಭಪುರಿ
ಅಂಬುಶಾಯಿ ಶಾರ್ಙ್ಗಪಾಣಿ ಸುದರ್ಶನೀಯು
ಕಂಭೇಶ್ವರ ಅಮೃತ ಸರಸ್ ಕಾವೇರಿಯು
ಗಂಭೀರ ವೃಂದಾವನದಿ ವಿಜಯೀಂದ್ರ ೧೬

ಈ ಕುಂಭಕೋಣಾಖ್ಯ ಕ್ಷೇತ್ರಕೆ ವೆಂಕಟನಾಥ
ಪೋಗಿ ಗುರುವರ್ಯ ಸುಧೀಂದ್ರರಿಗೆ ನಮಿಸಿ
ನಿಖಿಳ ಶಾಸ್ತ್ರಂಗಳ ಓದಿ ಗುರುಮುಖದಿಂದ
ಪ್ರಕಾಶಿಸಿದ ಉದ್ದಾಮ ಪಾಂಡಿತ್ಯದಿಂದ ೧೭

ಶಾಸ್ತ್ರ ವಿದ್ಯಾ ಕಲಿಯುವಾಗಲೇ ಈ ದ್ವಿಜನು
ಪರಮತೀಯನೋರ್ವ ಯತಿಯ ದುರ್ವಾದ
ನಿರ್ಯಾಸ ಮಾಡಿ ರಾಜಮನ್ನಾರು ಗುಡಿಯಲ್ಲಿ
ಗುರು ಸುಧೀಂದ್ರರ ಸಂತೋಷ ಪಡಿಸಿದ ೧೮

ವಿತ್ತ ಸಂಗ್ರಹದಲ್ಲಿ ಚಿತ್ತವನ್ನು ಇಡದೆ
ಯದೃಚ್ಛಾಲಾಭಾದಿ ತುಷ್ಟನಾಗಿ ಹರಿದತ್ತ –
ವಾದದನ್ನೇ ಕೊಂಡು ಡಂಭತನ ಇಲ್ಲದಲೆ
ಮಧ್ವಮಾಧವರಲ್ಲಿ ರತ ಸದಾ ಆದ ೧೯

ಸುಧೀಂದ್ರ ಗುರುರಾಜರ ಮುಖಾಂಬುಜದಿಂದ
ಸುಧಾಪಾತ ಪೀಯೂಷ ಸವಿದು ಪ್ರತಿದಿನವು
ಆದವಾಕ್ಯಾರ್ಥವು ಗ್ರಹಿಸಿ ಆ ವಿಷಯಗಳ
ಪ್ರತಿರಾತ್ರಿಯಲ್ಲಿ ಬರೆಯುತ್ತಿದ್ದ ಧೀಮಂತ ೨೦

ಲೆಕ್ಕಿಸದೆ ಡಾಂಭಿಕರ ಉದಾಸೀನ
ಏಕಾಂತ ಭಕ್ತ ಈ ವಿಜ್ಞಾನಿವರನು
ಏಕದಾ ರಾತ್ರಿಯಲ್ಲಿ ನಿದ್ರೆವಶನಾಗಲು
ಶ್ರೀಗಳು ಯದೃಚ್ಛಯಾ ನೋಡಿದರು ಪತ್ರ ೨೧

ಪತ್ರದಲ್ಲಿ ಹಿಂದಿನವರಿಗೂ ವಾಕ್ಯಾರ್ಥ
ಮಾತ್ರವಲ್ಲದೇ ಅಂದು ಬಿಟ್ಟ ಪ್ರಕರಣವು

ಅತಿಗಹನ ವಿಷಯವು ಸ್ಪಷ್ಟವಿಸ್ತಾರದಿ
ಪತ್ರದಲ್ಲಿ ಬರೆದಿದ್ದ ಕಂಡರು ಮುದದಿ ೨೨

ಮರುದಿನ ಪಾಠ ಹೇಳುವ ಸಮಯದಲ್ಲಿ
ಕರೆದು ವಿದ್ಯಾರ್ಥಿಗಳ ಸಹ ವೆಂಕಟನ್ನ
ಸುಪ್ರತಿಭಾ ಸಾಮರ್ಥ್ಯ ಉತ್ತಮ ಪಾಂಡಿತ್ಯವ
ಹೊರಪಡಿಸಿ ಯುಕ್ತ ಮರ್ಯಾದೆ ಮಾಡಿದರು ೨೩

ವಿಪ್ರಜನ ವಿದ್ವಾಂಸ ಸಹಪಾಠಿ ಸರ್ವರೂ
ಅರಿತು ಈ ವೆಂಕಟಭಟ್ಟನ್ನ ಶ್ಲಾಘಿಸಿ
ಮರಿಯಾದೆ ಮಾಡಿದರು ಅಂಥಾ ಬರವಣಿಗೆಗಳು ಮುಂದಕೆ
ಪರಿಮಳಾದಿ ಗ್ರಂಥಗಳ ರಚನೆಗೆ ಸಹಾಯವಾದವು ೨೪

ಸರಸಿಜಪಿತ ರಾಮ ವ್ಯಾಸ ಹಯಮುಖ ಕೃಷ್ಣ
ಶಿರಿನಾರಸಿಂಹ ಶ್ರೀ ಪ್ರಸನ್ನ ಶ್ರೀನಿವಾಸ
ಭಾರತಿಪತಿ ಸಹ ಜ್ವಲಿಸುತಿಹ ನಿಮ್ಮೊಳು
ಶ್ರೀ ರಾಘವೇಂದ್ರ ತೀರ್ಥರೆ ಶರಣು ನಮೋ ಶರಣು ಪ. ೨೫

–ಪ್ರಥಮ ಕೀರ್ತನೆ ಸಮಾಪ್ತಿ–

ದ್ವಿತೀಯ ಕೀರ್ತನೆ

ಶ್ರೀ ರಾಘವೇಂದ್ರ ತೀರ್ಥರೆ ನಿಮ್ಮ ಅರವಿಂದ
ಚರಣಯುಗಳದಿ ನಾನು ಶರಣು ಶರಣಾದೆ
ಶ್ರೀ ರಮಾಯುತ ನಾರಾಯಣ ಕೃಷ್ಣ ನಿಮ್ಮೊಳಗೆ
ಭಾರತೀರಮಣ ಸಹ ಜ್ವಲಿಸುತಿಹ ಸತತ ಪ.

ವಿಜಯನಗರದವರು ತಿಮ್ಮಣ್ಣಾಚಾರ್ಯರಿಗೆ
ಕಂಚಿನಗರಕೆ ಸೇರಿದ ಅಗ್ರಹಾರ
ದ್ವಿಜರು ವಾಸಿಪ ಭುವನಗಿರಿಯಲ್ಲಿ ಪುಟ್ಟಿ
ನಿಜಸತಿ ಸಹ ಕುಂಭಕೋಣದಿ ಇಹನು ೧

ಈ ವೆಂಕಟಭಟ್ಟ ಸರಸ್ವತಿ ದಂಪತಿಗೆ
ಈಶ್ವರಾನುಗ್ರದಿ ಜನಿಸಿದನು ಬಂದು
ದಿವ್ಯ ಲಕ್ಷ್ಮೀನಾರಾಯಣ ವಿಗ್ರಹ ವೋಲ್
ಸರ್ವಾಂಗ ಸುಂದರನು ಮುದ್ದು ಮುಖ ಗಂಡು ೨

ಗುರು ಸುಧೀಂದ್ರರು ವೆಂಕಟನ ಯೋಗ್ಯತೆಅರಿತು
ಹರಿಯ ಪ್ರೇರಣೆಯಿಂದ ಈ ಕೋವಿದನಿಗೆ
ತುರೀಯಾಶ್ರಮ ಕೊಂಡು ತಮ್ಮಯ ವೈದಿಕ
ಸಾಮ್ರಾಜ್ಯ ಆಳೆಂದು ಅಪ್ಪಣೆ ಮಾಡಿದರು ೩

ಮಹಾ ಪತಿವ್ರತೆ ತನ್ನ ಪತ್ನಿಗೆ ಇನ್ನೂ
ಸ್ವಹಸ್ತ ಪತಿ ಸೇವಾ ಯೋಗವನ್ನರಿತು
ಬ್ರಹ್ಮೋಪದೇಶ ಸುತಗಿನ್ನೂ ಆಗಿಲ್ಲವೆಂದೂ
ವಿಹಿತ ವಿನಯದಿ ಬೇಡ ಸನ್ಯಾಸವೆಂದ ೪

ದ್ವಿತೀಯಾಶ್ರಮದ ಸದ್ಧರ್ಮ ಆಚರಿಸಿ
ಯುಕ್ತಕಾಲದಿ ಸುತಗೆ ಉಪನಯನ ಮಾಡಿ
ವಾತಸುತ ಸೇವ್ಯ ಸೀತಾಪತಿಯ ನಿಯಮನದಿ
ಪೋದ ವೆಂಕಟನಾಥ ಗುರು ಸುಧೀಂದ್ರರಲ್ಲಿ ೫

ತಂಜಾ ಪಟ್ಟಣದಲ್ಲಿ ಪುರಿಯ ಮುಖದ್ವಾರಕ್ಕೆ
ಕೊಂಚ ದೂರವೇ ಕ್ರೋಶದ್ವಯದೊಳಗೆ
ರಂಜಕವಾತಾವರಣ ಸ್ವಚ್ಛ ನದಿ ಶ್ರೀಮಠ
ಗೊಂಚಲು ಫಲಪುಷ್ಪ ತೋರಣವು ೬

ತುರೀಯಾಶ್ರಮ ಪೂರ್ವ ಸಂಸ್ಕಾರ ಸರ್ವವ
ಚರಿಸಿ ಗುರುವರ್ಯರ ಕರ ಕಂಜದಿಂದ
ಪಾರಿವ್ರಾಜಕ ಪಟ್ಟ ಅಭಿಷೇಕ ಕೊಂಡರು
ಸೂರಿಕುಲ ತಿಲಕ ವೆಂಕಟನಾಥ ಆರ್ಯ ೭

ಆಗ ಕೊಟ್ಟರು ಗುರವರ್ಯ ಸುಧೀಂದ್ರರು
ರಾಘವೇಂದ್ರ ತೀರ್ಥರೆಂಬ ನಾಮಾಂಕಿತವ

ನಿಗಮ ಸಾಮ್ರಾಜ್ಯದ ಬಿರುದುಗಳು ಸರ್ವವ
ಯುಕ್ತ ಕಲ್ಯಾಣತಮ ಶ್ರೀಮಠ ಚಿಹ್ನೆಗಳ ೮

ಭೇರಿ ನಗಾರೀ ಮೃದಂಗ ವಾದ್ಯಗಳು
ದಾರಿ ನಡೆಯುವಾಗ ಕೊಂಬು ಮೇಳಗಳು
ಹರಿಕ್ಷೇತ್ರ ತೀರ್ಥಯಾತ್ರೆಯ ಗೈದು ಮುದದಿಂದ
ಪುರಿಶ್ರೇಷ್ಠ ಕುಂಭಕೋಣವನ್ನು ಸೇರಿದರು ೯

ಒಳ್ಳೆ ರೇಷ್ಮೆ ಮಕಮಲ್ಲು ಕಿಂಕಾಪು
ಶೀಲ ಪೀತಾಂಬರ ಪಿಶಂಗ ವಸ್ತ್ರಗಳು
ಪಲ್ಲಕ್ಕಿಯಲ್ಲಿ ಮಾಲೋಲನ ಮಂಜೂಷ
ಮೆಲ್ಲ ಮೆಲ್ಲನೆ ಕುಲಿಶಧರ ದಿಕ್ಕು ವಿಜಯ ೧೦

ಐಂದ್ರಸ್ತ ಆಲಯಗಳ್ ವಿದ್ಯುಪುರೀ ಆದಿ
ಕ್ಷೇತ್ರಗಳಿಗೆ ಹೋಗಿ ಮೂರ್ತಿಗಳ ನೋಡಿ
ಆದರದಿ ಶಂಖ ಮುಖ ಸಂಗಮ ಕಾವೇರಿ
ಸಿಂಧು ತೀರಕ್ಕೆ ತೀರ್ಥಯಾತ್ರೆ ಮಾಡಿದರು ೧೧

ಆಕಾಶ ನಗರದ ಶ್ರೇಷ್ಠತ್ವ ಏನೆಂಬೆ
ಅಕಳಂಕ ತುಳಸೀ ನಾಮಕ ಲಕ್ಷ್ಮೀ
ಶ್ರೀಕರನ ಸೇವೆಗೆ ವನವಾಗಿ ನಿಂತಿಹಳು
ಮಾರ್ಕಂಡೇಯರಿಗೆ ಒಲಿದಳು ಭೂದೇವಿ ೧೨

ಮಾರ್ಕಂಡೇಯರು ತುಳಸೀ ತರು ಮೂಲದಲ್ಲಿ
ಪ್ರಕಾಶಿಪ ಹೆಣ್ಣು ಮಗು ಒಂದನ್ನು ಕಂಡು
ತಾಕೋರಿದ ವರ ಒದಗಿ ಬಂದದ್ದು ಅರಿತು
ಮಗಳಾಗಿ ಕೊಂಡರು ಆ ಶಿಶು ಭೂದೇವಿಯನು ೧೩

ವೃದ್ಧ ಬ್ರಾಹ್ಮಣ ರೂಪದಲ್ಲಿ ಹರಿಯೇ ಬಂದು
ಆ ತಪೋಧನಗೊಲಿದು ಪುತ್ರಿ ಕೈಪಿಡಿದು
ನಿಂತನು ಅಲ್ಲಿಯೇ ಭೂದೇವಿ ಸಹಿತದಿ
ವೇದಮಯ ಶ್ರೀದ ಭಕ್ತೇಷ್ಟದಾಯಕನು ೧೪

ಆಕಾಶಪುರಿಯಲ್ಲಿ ಅಹೋರಾತ್ರಿ ಪುಷ್ಕರಣಿ
ಅಘಹರವು ಶುಭದವು ಹರಿ ಒಲಿಮೆಯಿಂದ
ಗಗನ ಪುರೀಶ್ವರ ಶ್ರೀ ಶ್ರೀನಿವಾಸನಿಗೆ
ಬಾಗಿ ಶರಣಾದೆನು ಮಮ ಸರ್ವಸ್ವಾಮಿ ೧೫

ಅಮಲೋರು ಸೌಂದರ್ಯಸಾರ ಹರಿಪ್ರಿಯೆಯು
ಕಮಲೆ ಮಾಲಕ್ಷ್ಮೀಗೆ ಆನಮಿಸುವೆ
ಕಮಲಾಲಯ ಎಂಬ ಸರಸು ಬಹು ದೊಡ್ಡದು
ಸುಮಾರು ಮೂವತ್ತೆರಡು ಏಕರಾಮೇಲೆ ೧೬

ಕಮಲೇಶನಂಘ್ರಿ ಕಮಲಗಳ ಧ್ಯಾನಿಸುವ
ಉಮೇಶ ವಲ್ಮೀಕನಾಥ ನಾಮದಲ್ಲಿ
ಕಮಲಾಲಯ ತೀರ ಆಲಯದಿ ಇರುತಿಹನು
ಸಮೀಪದಲಿ ಅಲ್ಲೇ ತ್ಯಾಗೇಶನಿಹನು ೧೭

ಹರಿ ವಿರಜೆ ಸನ್ನಿಹಿತ ಕಾವೇರಿಗೆ ನಮಿಪೆ
ಸ್ಮರಿಸಿದ ಮಾತ್ರದೆ ಪವಿತ್ರ ಮಾಡುವಳು
ವಾರಿಧಿಯ ವಿಸ್ತಾರ ಗಾಂಭೀರ್ಯ ಏನೆಂಬೆ
ಶಿರಿಯ ಜನಕನೆಂದು ಪ್ರಖ್ಯಾತನೆ ಸಿಂಧು ೧೮

ಶ್ರೀ ರಾಘವೇಂದ್ರ ಗುರುರಾಜರೀ ಪೂರ್ವದಿಕ್
ಕ್ಷೇತ್ರ ತೀರ್ಥಯಾತ್ರೆಯನ್ನು ತಾಗೈದು
ನರವರ್ಯರಿಗೆ ಸತ್ತತ್ವ ಬೋಧಿಸುತ
ಶ್ರೀ ರಾಮೇಶ್ವರ ಸೇತು ದರ್ಶನ ಮಾಡಿದರು ೧೯

ದರ್ಶನವೆಂದರೆ ದರ್ಶನ ಮಾತ್ರವು ಅಲ್ಲ
ಶ್ರೀಶನಿಗೆ ಪ್ರಿಯತಮ ಪೂಜಾದಿ ಸರ್ವ
ಆಶ್ರಮ ವರ್ಣೋಚಿತಗಳ ಸಮ್ಯಕ್ ಮುದದಿಂದ
ಆಚರಿಸಿದರು ಸ್ವಾಭಾವಿಕ ಭಕ್ತಿಯಲಿ ೨೦

ದರ್ಶನ ಮಾತ್ರದಲ್ಲೇವೆ ಬ್ರಹ್ಮ ಹತ್ಯಾದಿ ಬಹು
ದುರಿತಗಳ ಪರಿಹಾರ ಮಾಳ್ಪುದು ಸೇತು

ಕಾರುಣ್ಯದಿ ರಾಮ ಶಿವನಿಗೆ ಒಲಿದಿಹನು
ಶ್ರೀರಾಮ ಮಾಧವ ಹನುಮ ಶಿವಶರಣು ೨೧

ಪಶ್ಚಿಮ ತರುವಾಯ ಉತ್ತರದಿ ತರುವಾಯ
ದಕ್ಷಿಣದಿ ಅಚ್ಯುತನ ಮೂರ್ತಿ ಸಂದರ್ಶನ ಅಲ್ಲಲ್ಲಿ
ಸ್ವಚ್ಛ ವೈದಿಕ ಸತ್ತತ್ವ ಪ್ರಸಾರವು
ನೀಚರ ದುಸ್ತರ್ಕ ದುರ್ಮತ ನಿರ್‍ಯಾಸ ೨೨

ಅನಂತಶಯನನ ಪರಶುರಾಮನ ಜನಾರ್ಧನನ
ವನಜ ಪಾದಗಳ ಶರಣು ಶರಣಾದೆ
ಅನವರತ ಎಮ್ಮ ಪಾಲಿಪ ತೋತಾದ್ರೀಶನು
ಘನಮಹಿಮ ವೈಕುಂಠನಾಥ ವನಮಾಲಿ ೨೩

ಅಳಗಿರಿ ಎಂಬುವ ವೃಷಭಾದ್ರಿವಾಸ ಶ್ರೀ
ಮಾಲಕ್ಷ್ಮೀ ರಮಣ ಶ್ರೀ ಸುಂದರರಾಜ
ಶೈಲದಿಂದಲಿ ಬರುವ ನಿರ್ಮಲ ತೋಯವು
ಬೆಳಗುವುದು ನೂಪುರ ಗಂಗೆ ನಾಮದಲಿ ೨೪

ದೇವದೇವೋತ್ತಮ ಸುಂದರ ವದನನು
ಶ್ರೀವರ ಸುಂದರರಾಜನಿಗೆ ಶರಣು
ಭುವಿಯಲ್ಲಿ ಶ್ರೇಷ್ಠತಾಮ್ರಪರ್ಣಿ ನದಿಯು
ನವಮೂರ್ತಿ ವೈಭವ ವಿಶೇಷ ಏನೆಂಬೆ ೨೫

ಉಮಾ ಉಮೇಶನು ಹನುಮ ವೆಂಕಟಕೃಷ್ಣ
ಸುಮನೋಹರ ಮಧುರೆ ನರಗದಿ ಇಹರು
ಈ ಮಧುರಾಪುರಿ ದ್ರವಿಡ ದೇಶದಿ ಮುಖ್ಯವು
ರಮಣೀಯ ಕೃತಮಾಲ ಸರಿದ್ವರದಿ ತೀರ ೨೬

ವೈಗೆ ಎನ್ನುವ ಹೆಸರು ದ್ರಾವಿಡ ಭಾಷೆಯಲ್ಲಿ
ವೇಗವತಿ ಎಂದು ಪೇಳ್ವುದುವುಂಟು
ಅಘ ಪಂಕ ಕಳೆಯುವ ಕೃತಕಮಾಲಿಕಾನದಿಯ
ಹೇಗೆ ಕರೆದರೆ ಏನು ಪುಣ್ಯದೇ ಸುಚರಿತೆ ೨೭

ಕೃತಮಾಲಾ ಕೀರ್ತಿಯು ಪುರಾಣ ಪ್ರಸಿದ್ಧವು
ಮತ್ಸ್ಯರೂಪದಿ ಶ್ರೀಶ ಈ ಸರಿಜ್ಜಲದಿ
ಸತ್ಯವ್ರತ ಅಂಜಲಿಯಲಿ ಆವಿರ್ಭವಿಸಿದನು
ನಿರ್ದೋಷ ಅನಿಮಿತ್ತ ಬಂಧು ಗುಣಸಿಂಧು ೨೮

ಇಂದಿನ ಮನುವು ವೈವಸ್ವತ ಮನುವು
ಹಿಂದೆ ಸತ್ಯವ್ರತ ದ್ರಾವಿಡ ಸಾಮ್ರಾಟ
ಇಂದಿರೇಶನ ಭಕ್ತವರ ರಾಜಋಷಿಯು
ಉದಕತರ್ಪಣ ಗೈದ ಕೃತಮಾಲಾದಲ್ಲಿ ೨೯

ಶ್ರೀದ ಹರಿ ಪ್ರೀತ್ಯರ್ಥ ಸತ್ಯವ್ರತ ತರ್ಪಣಕೆ
ಉದಕ ಅಂಜಲಿಯಲಿ ತುಂಬಲು ಅಲ್ಲಿ
ಮುದ್ದುಮರಿ ಮೀನೊಂದು ಕಂಡು ಅದು ಪ್ರಾರ್ಥಿಸಲು
ನದಿಯಲ್ಲಿ ಬಿಡದೆ ಕಮಂಡಲದೊಳಿಟ್ಟ ೩೦

ಅಂದು ರಾತ್ರಿಯಲೇ ಕಮಂಡಲು ವ್ಯಾಪಿಸಿತು
ಉದಕ ತುಂಬಿರುವ ಕುಂಟೆ ಸರೋವರದಿ
ಮತ್ಸ್ಯವ ಬಿಡಲು ಅದು ಅವು ಪೂರಾ ವ್ಯಾಪಿಸಿದ
ಅತಿಶಯ ಲೀಲಾ ವಿನೋದವ ಕಂಡ ೩೧

ಕೊಳ ಸರೋವರದಿ ಜಲಾಶಯದಿ ಬಿಡಲು ಅದು
ಅಲ್ಲಲ್ಲಿ ಆಶ್ಚರ್ಯಕರದಿ ವ್ಯಾಪಿಸಲು
ಜಲಧಿಯಲಿ ಬಿಟ್ಟನು ರಾಜನು ಆಗ
ತಿಳಕೊಂಡ ಶ್ರೀ ಹರಿಯೇ ಆ ಮತ್ಸ್ಯನೆಂದು ೩೨

ಉದಧಿಯಲಿ ಬಿಡಲು ಅದು ನೂರು ಯೋಜನವಾಯ್ತು
ಅದು ನೋಡಿ ರಾಜನು ಕ್ಷೀರಾಬ್ಧಿಶಾಯಿ ಹರಿ
ಪದುಮೇಶನೇ ಮತ್ಸ್ಯರೂಪದಿ ಕ್ರೀಡಿಸುತ
ಬಂದು ತೋರಿಹನೆಂದು ತಿಳಿದು ಸ್ತುತಿಸಿದನು ೩೩

ಲೀಲಾ ಅದ್ಭುತ ರೂಪ ಮತ್ಸ್ಯ ಚಿನ್ಮಯ ಪೇಳ್ದ
ಏಳು ದಿನದಲಿ ಪ್ರಳಯ ಬರುವುದು ನಾವೆಯಲಿ

ಬಳ್ಳಿ ಬೀಜಗಳ ಕೊಂಡು ಸಪ್ತ ಋಷಿಗಳ ಸಹ
ಕುಳಿತು ನೌಕವ ತನ್ನ ಶೃಂಗಕ್ಕೆ ಕಟ್ಟೆಂದು ೩೪

ಉಕ್ತಕಾಲದಿ ಸಿಂಧು ಉಕ್ಕಿ ಮಳೆ ಸುರಿದು
ಸುತ್ತಿ ಸುಳಿವ ನೀರ್ ಮೇಲೆ ನೌಕದಲ್ಲಿ
ಸತ್ಯವ್ರತ ಬೀಜಗಳ ಸಪ್ತಋಷಿಗಳ ಸಹ
ಹತ್ತಿ ಕುಳಿತು ಶ್ರೀ ಹರಿ ಪೇಳ್ದಂತೆ ಮಾಡಿದ ೩೫

ಆನಂದ ಜ್ಞಾನಮಯ ಮತ್ಸ್ಯವಪು ಶ್ರೀಹರಿಯು
ಘನದಯಾದಿ ಪ್ರಳಯಾಪಾಯವ ನೀಗಿಸಿ
ಮನುಪದವ ಸಾಮ್ರಾಟ ಸತ್ಯವ್ರತಗಿತ್ತ
ಆಮ್ನಾಯ ನಿಗಮೊದ್ಧರಗೆ ನಮೋ ನಮೋ ೩೬

ಸ್ವಪ್ರಯೋಜನ ರಹಿತ ಜಗದ್ರಕ್ಷ ಕನು
ಸುಹೃದ ವಿಶ್ವೇಶ್ವರ ರಮೇಶ ಸುಖಪೂರ್ಣ
ಚಾರು ಚಿನ್ಮಯ ಮೀನ ಅವತಾರ ಪ್ರಕಟಿಸಿದ್ದು
ಸರಿಚ್ಛೇಷ್ಟಕೃತಮಾಲಾ ಸಲಿಲದಲ್ಲೇವೆ ೩೭

ಶ್ರೀ ಪುಷ್ಪಭವ ಭವಾದ್ಯಮರ ಸಂವಿನುತನು
ಸುಪ್ರಣಮ ಪ್ರತಿಪಾದ್ಯ ಚಾರ್ವಾಂಗ ಛಂದೋಗಮ್ಯ
ಫಣೀಪಶಾಯಿ ರಂಗ ರಾಮ ಧನ್ವಂಗರಿಗೂ
ಸುಭಕ್ತ ಪಾಲಕೆ ಶ್ರೀ ರಂಗನಾಯಕಿಗೂ ಆನಮಿಪೆ ೩೮

ಯಾರು ವರ್ಣಿಸೆ ಸಮರ್ಥರು ಈ ದಿವ್ಯ
ಕ್ಷೇತ್ರದ ಯಾಮ್ಯ ಸೌಮ್ಯದಿ ಹರಿವ ಕಾವೇರಿ
ಸರಿದ್ವಾರಾ ಮಧ್ಯರಂಗದಲಿ ಇಂದು ಪುಷ್ಕರಿಣಿ
ತೀರಸ್ಥ ಶ್ರೀರಂಗನಾಥ ವಿಭು ಕರುಣಿಯನ್ನ ೩೯

ಪೂಷೋಪಮ ಜ್ವಲಿಪ ಯಶಸ್ವಿ ವಿಜಯೀಂದ್ರರನ್ನ
ಈಕ್ಷಿಸಿ ವೃಂದಾವನದಿ ಪೂಜಿಸಲು
ಹರ್ಷಯುಕ್ ಭಕ್ತಿಯು ರಾಘವೇಂದ್ರ ತೀರ್ಥರು
ರಂಗಕ್ಷೇತ್ರದಿಂದ ಬಂದರು ಕುಂಭಪುರಿಗೆ ೪೦

ಉತ್ತರ ದಿಶಿಯಲಿ ತರುವಾಯ ದಿಗ್ವಿಜಯ ಮಾಡಿ
ಹಾದಿಯಲಿ ದುಷ್ಟಮತ ದುರ್ವಾದ ತರಿದು
ಸತ್ತತ್ವ ಸಿದ್ಧಾಂತ ಸ್ಥಾಪಿಸಿ ಪುರಿಪ –
ರಿಂದ ಪೂಜೆಗೊಂಡು ಬಂದರು ಪಂಢರಿಗೆ ೪೧

ಸಮಪಾದದ್ವಯ ಪದುಮ ಆನಂದ ಜ್ಞಾನಮಯ
ರೇಶ್ಮೆ ಪೀತಾಂಬರ ಉಟ್ಟಿರುವ ಉಡಿಯು
ಸಂಮ್ಮೋದ ಚಿನ್ಮಯ ಕಟಿ ತಟಿ ಕರಗಳಲಿ
ಅಮೃತ ವರವನಜ ಧನ ಜ್ಞಾನಪ್ರದ ಶಂಖ ೪೨

ಎಳೆತುಳಸಿದಳಮಾಲೆ ಕಂಬುಗ್ರೀವದಿ ಮುಖ
ಕಳಂಕವಿಲ್ಲದ ಇಂದು ಶುಭಮಂದಹಾಸ
ನಳಿನಾಯತೇಕ್ಷಣ ಕಾರುಣ್ಯ ನೋಟವು
ಎಲ್ಲ ಭಕ್ತರ ಕ್ಲೇಶ ಕಳೆಯುವ ಕೇಶ ೪೩

ಪೂಣ ಪರಮೈಶ್ವರ್ಯ ರೂಪ ಸರ್ವೋತ್ತಮನು
ದಾನವಾರಣ್ಯಾಗ್ನಿ ದುರಿತವನು ಅಸಿಯು
ಧನ ಜ್ಞಾನ ಆನಂದದಾತ ಲಕ್ಷ್ಮೀರಮಣ
ಘನದಯಾಂಬುಧಿ ವಿಟ್ಠಲಗೆ ಶರಣು ೪೪

ಚರಣಾದಿ ಕೇಶಾಂತ ಚಾರ್ವಂಗ ಸೌಂದರ್ಯ
ಸ್ಫುರತ್ತಮ ಸರ್ವಾಭರಣ ಪ್ರಜ್ವಲಿಸುತಿವೆಯು
ಸಿರಿದೇವಿ ರುಕ್ಮಿಣಿ ಸರ್ವಾಲಂಕಾರಳು
ಹರಿಭಕ್ತರ ಸದಾ ಪಾಲಿಪಳು ಶರಣು ೪೫

ಶ್ರೀ ಪಾಂಡುರಂಗ ವಿಠ್ಠಲನ್ನ ರುಕ್ಮಿಣಿಯ
ತಪ್ಪದೇ ಸ್ಮರಿಸುವೆ ಮನಸಾ ನಮಿಸುವೆ
ಆಪತ್ತು ಬರದ್ಹಾಗೆ ರಕ್ಷಿಪರು ಬೆಂಬಲರಾಗಿ
ಸುಭದ್ರ ಸೌಭಾಗ್ಯಪ್ರದರು ಕರುಣಿಗಳು ೪೬

ಚಂಡ ವಿದ್ವತ್ ಶಿರೋಮಣಿಯು ಗುರುವರ್ಯರು
ದಂಡಿಗರು ಅನುಚರ ವಿದ್ವಾಂಸರ ಸಮೇತ

ಬಂಡು ದುರ್ವಾದಿಗಳ ಖಂಡಿಸಿ ಐದಿದರು
ಪಂಢರಿಪುರದಿಂದ ಕರವೀರಪುರವ ೪೭

ಕರವೀರಪುರವೆಂಬ ಕೊಲ್ಹಾಪುರದಲ್ಲಿ
ಶಿರಿದೇವಿ ಮಹಾಲಕ್ಷ್ಮೀ ಕುಳಿತಿಹಳು ಮುದದಿ
ಬರುವ ಭಕ್ತರಿಗೆ ವರ ಈವಳು ವರಲಕ್ಷ್ಮೀ
ಹರಿಯ ಬಿಟ್ಟಗಲದ ಅನಘೆ ಸುಖಪೂರ್ಣೆ ೪೮

ಅಂದು ಪ್ರಹ್ಲಾದನಿಗೆ ಒಲಿದು ಪುರುಷೋತ್ತಮನು
ಇಂದಿರೇಶನು ಕಂಬದಲಿ ತೋರಿದವನು
ಇಂದು ಆ ನರಸಿಂಹ ನಾಮಶೈಲದಿ ಇಹುದು
ಬಂದು ಕಂಡರು ಗುರು ಪೂರ್ವಪ್ರಹ್ಲಾದ ೪೯

ನಾಮಗಿರಿ ಮಹಾಲಕ್ಷ್ಮೀ ಚರಣದಲಿ ಶರಣಾದೆ
ನಮಿಪರ ತಾಪಂಗಳ ತರಿದು ಶುಭವೀವ
ಕಾಮಿತಪ್ರದೆ ಸದಾ ಎಮ್ಮ ಪಾಲಿಸುವಳು
ಹೇಮಗರ್ಭನ ಮಾತೆ ಸರ್ವಜಗಜ್ಜನನೀ ೫೦

ಖಗಪ ಭುಜಗಪ ಶಿವಾದ್ಯಮಿತ ಜೀವೋತ್ತಮನು
ಮುಗಿದು ಕರ ನಿಂತಿಹನು ಹರಿಯ ಸೇವಿಸುತ
ಜಗದೇಕ ಗುರು ಭಾವಿಬ್ರಹ್ಮ ಈ ಹನುಮನಿಗೆ
ಬಾಗಿ ಶರಣಾದೆ ಎಡಬಿಡದೆ ಕಾಯ್ವ ೫೧

ಭಾವಿ ಸರಸಿಜಭವ ಪ್ರಭಂಜನ ಸಮೀರನ
ಅವತಾರ ಶ್ರೀಮಧ್ವ ಮುನಿಗಳ ಅಂಘ್ರಿಗಳ
ಸೇವಿಸಿದ ಜಯಸಿಂಹ ರಾಜನ ಪಟ್ಟಣವು
ಆ ವಿಷ್ಣು ಮಂಗಳಕೆ ಪೋದರು ಗುರುಗಳು ೫೨

ವಿಷ್ಣು ಮಂಗಳದಿಂದ ಶ್ರೀ ಮಠ ಜರುಗಿತು
ಶ್ರೀ ವಿಷ್ಣು ತೀರ್ಥಪ್ರಿಯ ಸುಬ್ರಹ್ಮಣ್ಯಕ್ಕೆ
ವನಸ್ಪತಿ ತರುನಿಬಿಡ ಕುಮಾರ ಪರ್ವತವು
ತನ್ನಾಮ ದಿವ್ಯ ನದಿ ಹರಿಯುತ್ತೆ ಇಲ್ಲಿ ೫೩

ಕುಮಾರಧಾರಾ ಸರಿದ್ವರದಿ ಸ್ನಾನವು
ಕುಮಾರದೇವನ ದರ್ಶನಸೇವೆ
ಕರ್ಮಜ ದುರಿತ ವ್ಯಾಧಿ ಸರ್ವದ ಕಳೆಯುವುದು
ನೇಮದಲಿ ಆಚರಿಸೆ ಕ್ಷೇತ್ರದ ವಿಧಿಯ ೫೪

ಆನಂದತೀರ್ಥ ಶ್ರೀಮಧ್ವ ಮುನಿ ಅವರಜರು
ವಿಷ್ಣು ತೀರ್ಥರು ತಸ್ಯಕರಕಂಜಜಾತ
ಅನಿರುದ್ಧತೀರ್ಥರ ಮಠವು ಇಲ್ಲಿಹುದು
ಶ್ರೀನಾರಸಿಂಹನು ಪೂಜೆಗೊಳ್ಳುತಿಹನು ೫೫

ಉಮಾ ಉಮೇಶನು ಇಹರು ಈ ಸ್ಥಳದಲ್ಲಿ
ಕುಮಾರ ಕ್ಷೇತ್ರದ ಮಹಿಮೆ ಗುರುತರವು ಖರೆಯು
ಈ ಮನೋಹರ ಕ್ಷೇತ್ರದಲಿ ರಾಘವೇಂದ್ರರು
ತಮ್ಮ ಮಠ ಸಹ ಕೆಲವು ಕಾಲದಿ ವಾಸಿಸಿದರು ೫೬

ದ್ವಾರಕೋಪಮ ಇರುವ ಉಡುಪಿ ಸುಕ್ಷೇತ್ರವ
ತರುವಾಯ ಐದಿದರು ಕೃಷ್ಣನ್ನ ಸೇವಿಸಲು
ಶ್ರೀರುಕ್ಮಿಣಿ ಕರಕಮಲ ಪೂಜಿತ ಕೃಷ್ಣ
ಮೂರುತಿಯ ಶ್ರೀಮಧ್ವ ಸ್ಥಾಪಿಸಿಹರಲ್ಲಿ ೫೭

ಶ್ರೀಭೈಷ್ಮೀ ಕರಾಂಬುರುಹ ಪೂಜಿತ ಪಾದ ಪದ್ಮಂ
ಶ್ರೀಚಕ್ರ ಚಿಹ್ನ ಪರಿಪೂರಿತ ಸರ್ವಗಾತ್ರಂ
ಬ್ರಹ್ಮಾದಿ ದೇವ ನಿಕರೈಃ ಪರಿಸೇವ್ಯ ಮಾನಂ
ಧ್ಯಾಯೇತ್ ಸದಾ ಯದುವರಂ ಪುರುಷೋತ್ತಮಂ ತಂ ೫೮

ಈ ಸ್ತೋತ್ರ ಸ್ಕಾಂದದಲಿ ಉಡುಪಿ ಮಹಾತ್ಮೆಯಲಿ
ಇದೆ ಎಂದು ಕೇಳಿಹೆನು ಪಠಿಸಬೇಕಾದ್ದು
ಉತ್ತಮ ಈ ಪುಟ್ಟ ಸ್ತೋತ್ರದ ಮಹಿಮೆಯ
ಭಕ್ತಿಯಲಿ ಪಠಿಸುವರ್ಗೆ ಸೌಭಾಗ್ಯ ಲಾಭ ೫೯

ಶ್ರೀಕೃಷ್ಣ ಹನುಮಂತ ಪಕ್ಷೀಶ ದರ್ಶನ
ಉತ್ಕೃಷ್ಟಮಧ್ವ ಸರೋವರದಿ ಸ್ನಾನ

ಯತಿವರರ ಕೈಯಿಂದ ತೀರ್ಥ ಪ್ರಸಾದವು
ಮತ್ತೆಲ್ಲೂ ದೊರೆಯದು ಇಂಥಾ ಸೌಭಾಗ್ಯ ೬೦

ಅನಂತಾಖ್ಯ ಶೇಷಪದ ಅರ್ಹನಾಗಿರುವಂಥ
ಜಾಹ್ನವೀಜಟಿ ಚಂದ್ರಮೌಳೀ ಉಮೇಶ
ಅನಂತೇಶ್ವರ ನಾಮ ಶ್ರೀಯಃಪತಿಯ ಸೇವಿಸುತ
ತಾನು ನಿಂತಿಹನಿಲ್ಲಿ ವೈಷ್ಣವಾಗ್ರಣಿಯು ೬೧

ಅನಂತೇಶ್ವರ ನಾಮ ವಿಷ್ಣು ಒಬ್ಬನಿಗೇವೆ
ಅನವಕಾಶದಿ ಮುಖ್ಯ ವಾಚಕವಾಗಿಹುದು
ಗುಣದೇಶಕಾಲ ಅಪರಿಚ್ಛಿನ್ನ ಅನಂತನು
ಅನುಪಮೈಶ್ವರ್ಯ ಪ್ರಭು ರಮೇಶ ಸರ್ವೇಶ್ವರ ೬೨

ದಶಪ್ರಮತಿಕೃತ ಗ್ರಂಥ ಟೀಕಾಟಿಪ್ಪಣಿಗಳ
ದಶಾವರ್ತಿ ಚಂದ್ರಿಕಾ ಪ್ರವಚನ ಮಾಡಿ
ಸಚ್ಛಿಷ್ಯ ವೃಂದಕ್ಕೂ ವಿದ್ವಜ್ಜನರಿಗೂ
ಶ್ರೀ ಸುಧೀಂದ್ರರಸುತ ಉಪದೇಶ ಮಾಡಿದರು ೬೩

ಚಂದ್ರಿಕಾ ವಿವರಣ ನ್ಯಾಯಮುಕ್ತಾವಳಿ
ಮೊದಲಾದವುಗಳ ಉಡುಪಿಯಲ್ಲಿ ರಚಿಸಿ
ಮಧ್ವ ಆರಾಧಿತ ಪದಾಂಬೋಜ ಯುಗ್ಮಕ್ಕೆ
ಮುದದಿ ಶ್ರೀ ರಾಘವೇಂದ್ರರು ಅರ್ಪಿಸಿದರು ೬೪

ನದಿ ಶ್ರೇಷ್ಠಭೀಮಾತೀರಸ್ಥ ರಂಗನ್ನ
ಮತ್ತೊಮ್ಮೆ ಕೊಲ್ಹಾಪುರ ಸಿರಿಯ ಸೇವಿಸಿ
ಗೋದಾವರಿ ಕೃಷ್ಣಾ ಸ್ನಾನವ ಮಾಡಿ
ರುದ್ರಯುಕ್ ಶ್ರೀಶೈಲ ಹರಿಯ ನುತಿಸಿದರು ೬೫

ಕೃತತ್ರೇತಾದ್ವಾಪರ ಕಲಿಯುಗಗಳಲ್ಲಿ
ಖ್ಯಾತ ವೃಷ ಅಂಜನ ಶೇಷ ವೆಂಕಟವು
ಎಂದು ಕ್ರಮದಲಿ ಪೆಸರು ಕೊಂಡ ವರಗಿರಿಗೆ
ಐದಿದರು ಪರಿಮಾಳಾಚಾರ್ಯ ಗುರುವರರ‍್ಯರು ೬೬

ಹದಿನಾಲ್ಕು ಲೋಕದಲು ಉತ್ತಮ ಪರ್ವತವು
ಈ ತಿರುಪತಿ ಭೂವೈಕುಂಠ ಕ್ಷೇತ್ರ
ಆದಿಯಲಿ ತೀರ್ಥಗಳು ಸುಪವಿತ್ರ ಪುಣ್ಯದವು
ಮುತ್ತಿ ಇರುವರು ಸುರರು ನಾನಾ ರೂಪದಲಿ ೬೭

ಕಪಿಲ ತೀರ್ಥಕೆ ನಮೋ ಕಪಿಲೇಶಗೆ ನಮೋ
ಶ್ರೀಪನ್ನ ಒಲಿಸುವ ಹನುಮಗೆ ಶರಣು
ಪಾಪ ಹರ ಶ್ರೀಕರಾಸ್ವಾಮಿ ತೀರ್ಥಕೆ ನಮೋ
ತಪ್ಪದೆ ಅಶ್ವತ್ಥಗೆ ನಮೋ ಎಂಬೆ ೬೮

ಜಯ ವಿಜಯಗೆ ನಮೋ ಭೂಧರ ವರಾಹನಿಗೆ
ಕಾಯ ವಾಙ್ಮನಸಾ ನಮಿಸಿ ಶರಣಾದೆ
ತೋಯಜಾಸನ ವಂದ್ಯ ಆದಿವರಾಹನು
ಕಾಯಜ ದೋಷಗಳಳಿದು ಸಂಪತ್ತು ಈವ ೬೯

ದುರಿತಹರ ಭಾಗ್ಯಪ್ರದ ವೆಂಕಟೇಶನ ಗುಡಿ
ಹೊರಗಿನ ಮಹಾದ್ವಾರ ಗೋಪುರಕೆ ವಂದೇ
ಪರಿಪರಿಪೀಡೆಯ ಕಳೆವ ಬಲಿಪೀಠಕ್ಕೆ
ಪುರುಟಧ್ವಜ ಸ್ತಂಭಕ್ಕೆ ಕರಗಳು ಮುಗಿವೆ ೭೦

ಬೆಳ್ಳಿ ಬಾಗಿಲಿಗೆ ಸುತ್ತು ಪ್ರಾಕಾರಕ್ಕೆ ।
ಳಾಳುಕನ ಮಂದಿರದ ವೈಕುಂಠದ್ವಾರ ।
ಥಳಥಳಿಪ ಸ್ವರ್ಣವಿಮಾನ ಸರ್ವಕ್ಕೂ ।
ಅಲ್ಲಿರುವ ಮೂರ್ತಿಗಳಿಗೂ ನಮೋ ಎಂಬೆ । ೭೧

ಕಾಣಿಕೆ ಸಲ್ಲಿಸುವ ಗೋಳಕಕೆ ನಮೋ ಎಂಬೆ ।
ಅನನ್ಯ ಭಕ್ತರಿಗೆ ಯಥಾಯೋಗ್ಯ ವಂದೇ ।
ಅನಿಷ್ಟ ದೂರ ಇಷ್ಟಪ್ರದ ಯೋಗನರಸಿಂಹನಿಗೆ ।
ಘನ ದಯಾನಿಧೆ ವರದರಾಜನಿಗೆ ನಮಿಪೆ ೭೨

ಅಕ್ಷ ರಕ್ಷ ರೋತ್ತ ಮನ ಪುರತಃ ನಿಂತಿರುವ ।
ಪಕ್ಷಿವಿಪ ಸೌಪರ್ಣಿಪತಿಗೆ ಆ ನಮಿಪೆ ।

ದಕ್ಷಕರದಲಿ ಸುಧಾ ವಾಮಕರ ಅಭಯದವು ।
ರಕ್ಷಿಸುವ ಸರ್ವವಿಷ ಪರಿಹರಿಸಿ ಎಮ್ಮ ೭೩

ನಮಿಪೆ ಜಯ ವಿಜಯರ ಚರಣಯುಗಳದ್ವಯಕೆ ।
ನಾಮಾಡಿದ ಉದಾಸೀನ ಲೋಭಗಳ ।
ಸುಮನದಿಮನ್ನಿಸಿ ಸರ್ವದಾ ಪೊರೆದೆನ್ನ ।
ಮಾಪತಿಯ ದರ್ಶನ ಒದಗಿಸಲಿ ಎಂದು ೭೪

ಭಂಗಾರ ಬಾಗಿಲಿಗೆ ಕರಮುಗಿವೆ ಹಾಗೇವೆ ।
ರಂಗನಮಂದಿರ ಗೋಡೆ ಕಂಬಗಳಿಗೆ ।
ರಂಗುರಂಗಲಿ ಜ್ವಲಿಪ ಮುಕುಟಕುಂಡಲ ಕೃಪಾ–
ಪಾಂಗ ನೋಟವು ಮಂದಹಾಸ ಕಾಣುತಿದೆ ೭೫

ಶ್ರೀದೇವಿ ಕರಕಮಲದಿಂದ ಅರ್ಚಿತಪಾದ
ದ್ವಂದ್ವಾರವಿಂದದಲಿ ಶರಣು ಶರಣಾದೆ
ಪದುಮಭವ ಶಿವ ಶಕ್ರಾದ್ಯವರ ಸನ್ನುತಪಾದ
ಶ್ರೀದವೆಂಕಟರಮಣ ಶ್ರೀನಿವಾಸಂದು ೭೬

ಪೂರ್ಣಜ್ಞಾನಾತ್ಮನು ಪೂರ್ಣೈಶ್ವರ್ಯಾತ್ಮಾ
ಪೂರ್ಣ ಪ್ರಭಾನಂದ ತೇಜಸ್ಸಕ್ತ್ಯಾತ್ಮ
ಅನಘ ವೆಂಕಟರಮಣ ಶ್ರೀ ಶ್ರೀನಿವಾಸನು
ಆನಮಿಪೆ ಲಕ್ಷ್ಮೀ ಪದ್ಮಾವತೀಶನಿಗೆ ೭೭

ಪೊಳೆವ ನವರತ್ನದಿ ಜ್ವಲಿಸುವ ಕಿರೀಟವು
ಥಳಥಳಿಪ ಮಿಂಚುವೋಲ್ ಕರ್ಣ ಕುಂಡಲಗಳ್
ಗಲ್ಲ ಕೆನ್ನೆ ಕದಪು ಮುಗುಳನಗೆ ಸುಂದರವು
ಪಾಲಿಸುವ ಕಾರುಣ್ಯ ಶುಭತಮ ನೋಟ ೭೮

ಕೊರಳಲ್ಲಿ ವನಮಾಲೆ ಕೌಸ್ತುಭಮಣಿಯು
ಉರದಲ್ಲಿ ಶ್ರೀವತ್ಸ ಇಂದಿರಾದೇವಿ
ಕರದಕ್ಷದಲಿ ಮೇಲೆ ಚಕ್ರ ವಾಮದಿ ಶಂಖ
ಗೆರೆ ಮೂರು ಉದರದಲಿ ವೈಜಯಂತಿಮಾಲಾ ೭೯

ಸಾಲಿಗ್ರಾಮದ ಹಾರ ಸುಮನ ಸುಂದರಮಾಲಾ
ಕೆಳಗಿನ ಬಲಕರ ವರದ ಅರವಿಂದ
ಕೆಳಗೆ ಎಡ ಕಟಿತಟ ಕರದಿ ಗದೆ ಅಭಯದವು
ಶೀಲತಮ ಸುಮನೋಹರ ಪೀತಾಂಬರವು ೮೦

ಚಾರು ಅಂಗಗಳಲ್ಲಿ ಸರ್ವ ಆಭರಣಗಳು
ಚರಣ ಯುಗಳದಿ ಪೊಳೆವ ನೂಪುರ ತೊಟ್ಟಿಹನು
ಸಿರಿಕರಾರ್ಚಿತ ಜ್ಞಾನ ಸುಖವಯ ಪಾದದ್ವಯವು
ಸ್ಮರಿಪರಿಗೆ ಸೌಭಾಗ್ಯಪ್ರದ ಸರ್ವವಿಧದಿ ೮೧

ಶ್ರೀ ವೆಂಕಟರಮಣ ಶ್ರೀ ಶ್ರೀನಿವಾಸನ
ಸರ್ವಾಂಗ ಶಿರಮಧ್ಯ ಬಾಹು ಪಾದಗಳು
ಸರ್ವದಾನಂದಮಯ ಅಪ್ರಾಕೃತ ಕಾಯ
ಅವಿಕಾರ ಗುಣಪೂರ್ಣ ಸರ್ವ ಜಗತ್ಕರ್ತ ೮೨

ಅಂಗಾಂಗ್ಯಭಿನ್ನ ಈ ಆನಂದಮಯ ಹರಿ
ಗಂಗಾಜನಕ ಶ್ರೀನಿವಾಸನ ದರ್ಶನಕೆ
ತುಂಗ ಯತಿವರ ರಾಘವೇಂದ್ರರು ಬಂದರು
ಕಂಗಳಾನಂದಾಶ್ರು ಮನದಲ್ಲಿ ಭಕ್ತಿ ೮೩

ಮುಪ್ಪು ಇಲ್ಲದ ಅಪ್ಪ ತಿರುಪತಿ ತಿಮ್ಮಪ್ಪ
ಮುಪ್ಪು ಇಲ್ಲದ ತಾಯಿ ಅಲಮೇಲು ಮಂಗಾಯಿ
ಮುಪ್ಪು ಇಲ್ಲದ ಗುರು ಶ್ರೀ ಮಧ್ವಾಚಾರ್ಯರು
ಮುಪ್ಪು ಇಲ್ಲದ ಸದನ ದಿವ್ಯ ಅನಂತಾಸನ ೮೪

ಮುಪ್ಪು ಮುಪ್ಪೇ ಇಲ್ಲ ನಮ್ಮ ಸೌಭಾಗ್ಯಕ್ಕೆ
ಮುಪ್ಪುರವ ಗೆಲೆದಂಥ ಅನಘ ವಿಜಯವಿಠ್ಠಲರೇಯ
ಅಪ್ಪ ತನ್ನ ಭಕ್ತರೊಡನಾಡುವುದು ತಪ್ಪ
ಈ ಪದ್ಯ ಎರಡು ಶ್ರೀ ವಿಜಯದಾಸರಾಜರು ಹೇಳಿದ್ದು ೮೫

ನರಸಿಂಹ ಶ್ರೀವರದರಾಜಾದಿ ಮೂರ್ತಿಗಳ
ಧರೆಯಲ್ಲಿ ಶ್ರೇಷ್ಠತರ ಕಂಚಿಯಲಿ ಕಂಡು

ಅರುಣಾಚಲದಿ ಈಶ್ವರನ ದರ್ಶನ ಮಾಡಿ
ಪರಿಜನ ಸಹ ವೃದ್ಧಾಚಲವ ನೈದಿದರು ೮೬

ಮಾರ್ಗದಲಿ ದ್ರಾವಿಡದಿ ತಿರುಕೋಯಿಲೂರೆಂಬ
ನಗರದಲಿ ತ್ರಿವಿಕ್ರಮನು ಶ್ರೀ ಸಹ ಇಹನು
ಅಘಹರೆ ಪಿನಾಕಿನೀ ತೀರದಲಿ ಕುಳಿತಿಹರು
ರಘೂತ್ತಮರು ಬೃಂದಾವನದಿ ತಪಶ್ಚರಿಸುತ ೮೭

ರಘುವರಣ್ಯ ತೀರ್ಥರ ಕರಕಂಜ ಜಾತರು
ರಘೂತ್ತಮ ತೀರ್ಥರು ಬಾಲ ಸನ್ಯಾಸಿ
ಅಘ ಕಳೆದು ಬೇಡಿದಿಷ್ಟಾರ್ಥಗಳ ಕೊಡುವರು
ಬಾಗಿ ಶಿರ ಶರಣಾದೆ ಎಮ್ಮ ಕಾಯುವರು ೮೮

ಶ್ರೀ ತ್ರಿವಿಕ್ರಮ ವಿಶ್ವರೂಪನಿಗೆ ಶರಣಾದೆ
ಶ್ರೀ ರಮಾ ಕಮಲೇಶಗೆ ಶರಣು ಶರಣು
ಗುರು ಮುಖ್ಯ ಪ್ರಣ ಶಿವಸ್ಕಂಧ್ಧರಿಗೆ ಶರಣಾದೆ
ಸರಿದ್ವರಾ ಸುಪುಣ್ಯದಾ ಪಿನಾಕಿನಿಗೆ ನಮಿಪೆ ೮೯

ಶ್ರೀ ರಾಘವೇಂದ್ರರ ಶ್ರೀ ಮಠವು ಮುಂದೆ
ಜರುಗಿತು ಮಾರ್ಗಸ್ಥ ಕ್ಷೇತ್ರಗಳ ನೋಡಿ
ದಾರಿಯಲಿ ಎದಿರುಗೊಂಡ ಪುಣ್ಯ ಭಾಗಿಗಳಿಗೆ
ಭಾರಿ ಯೋಗವು ಈ ಗುರುಗಳ ದಿಗ್ವಿಜಯ ೯೦

ಮಣಿ ಮುಕ್ತಾನದಿ ತಟದಿ ದೊಡ್ಡಮಂದಿರದಲ್ಲಿ
ದೀನವತ್ಸಲ ವೃದ್ಧಾಚಲ ಮಹಾದೇವ
ದೀನ ಕರುಣಾಕರೀ ವೃದ್ಧಾಂಬಿಕಾಸಹ
ತಾನಿಂತು ಭಕ್ತರ ಪೋಷಿಸುತಿಹನು ೯೧

ದಕ್ಷಿಣ ಕಾಶಿಯು ಈ ವೃದ್ಧಾಚಲ ಕ್ಷೇತ್ರ
ಪಕ್ಷಿವಾಹನ ಬಿಂದು ಮಾಧವನು ಇಲ್ಲಿ
ಸುಕ್ಷೇಮ ಒದಗುತಿಹ ತನ್ನ ವಂದಿಪರಿಗೆ
ಅಕ್ಷ ರಕ್ಷ ರೋತ್ತಮನು ಬ್ರಹ್ಮ ಶಿವ ವಂದ್ಯ ೯೨

ಸೇರಿದರು ಶ್ರೀ ಮುಷ್ಣ ಭೂವರಾಹನು ಇಲ್ಲಿ
ಶಿರಿದೇವಿ ಅಂಬುಜವಲ್ಲಿ ಸಹ ಇಹನು
ಭಾರತೀರಮಣ ಮುಖ್ಯ ಪ್ರಾಣ ಹನುಮನಿಗೂ
ಗಿರಿಜಾರಮಣ ಶಿವಗೂ ಆಲಯ ಇಲ್ಲುಂಟು ೯೩

ನಿತ್ಯ ಪುಷ್ಕರಣಿ ಸರೋವರದಲ್ಲಿ ಇದೆ
ಹದಿನಾರು ತೀರ್ಥಂಗಳು ಗಂಗಾ ಸಮೇತ
ಒಂದು ಗಾವುದ ದೂರ ದಂಡ ತೀರ್ಥವು ಉಂಟು
ಮಧ್ವಮುತಿ ದಂಡಗೆರೆಯಿಂದಲುತ್ಪನ್ನ ೯೪

ನಿತ್ಯ ಪುಷ್ಕರಣೀ ಸರೋವರದ ತೀರದಲಿ
ನಿಂತಿರುವನು ಕಲ್ಪತರು ಅಶ್ವತ್ಥವೃಕ್ಷ
ಮಾಧವ ವರಾಹನು ಅಲ್ಲಿ ತಾನೇ ಇದ್ದು
ಒದಗಿ ಫಲವೀವ ಪ್ರದಕ್ಷಿಣೆ ಮಾಳ್ಪರಿಗೆ ೯೫

ಕಟಿಯಲಿ ಜ್ಞಾನ ಸುಖಮಯ ಕರಗಳೆರಡನ್ನ
ಇಟ್ಟು ನಿಂತಿಹ ಕೋರೆಹಲ್ಲ ತೋರುತ್ತ
ಎಡಪಾರ್ಶ್ವ ಬಲಪಾರ್ಶ್ವ ಶಿರಿಯು ಭೂದೇವಿಯು
ಜಡಜಭವ ಮೃಡ ಮುಖ್ಯ ಸುರವೃಂದ ವಂದ್ಯ ೯೬

ದೇವತೆಗಳೊಳ್ ಪ್ರವರ ಭಾರತೀ ಪತಿಯಿಂದ
ಸೇವಿತನು ಪೂಜಿತನು ಭೂವರಾಹ
ದೇವ ದೇವೋತ್ತಮನ ಮೂರ್ತಿ ಇದೆ
ದಿವ್ಯ ಅಶ್ವತ್ಥ ಮೂಲದಿ ಸರೋವರದಿ ೯೭

ಭೂರ್ಭುವಃ ಸ್ವಃಪತಿ ಭೂವರಾಹನು ಸರ್ವ
ಅಭೀಷ್ಟಗಳ ಪೂರೈಸುವನು ಭಕ್ತರಿಗೆ
ಅಂಬುಜವಲ್ಲಿಯು ಒಡನುಡಿಯುತಿಹಳಿಲ್ಲಿ
ಅಭಯ ವರದಾ ಸರ್ವ ವಿಧದಿ ಪಾಲಿಪಳು ೯೮

ಗುರುರಾಘವೇಂದ್ರ ತೀರ್ಥರ ಅನುಗ್ರಹದಿ
ಶಿರಬಾಗಿ ನಮಿಸುವೆ ಭೂವರಾಹನಿಗೆ

ಕ್ಷಿಪ್ರದಲೆ ಸರ್ವಾವಾಂಛಿತದಾತನಾಗಿಹನು
ಧರೋದ್ಧರ ಕೃಪಾನಿಧಿ ವಿಧಿ ಋಜುವರ್ಯರಿಂ ಪೂಜ್ಯ ೯೯

ಹರಿಭೂವರಾಹನ್ನ ಸೇವಿಸಿ ಗುರುಗಳು
ತಿರುಗಿದರು ತಮ್ಮ ಮಠ ಕುಂಭಕೋಣಕ್ಕೆ
ಪರಿವಾರ ಸಹ ಶ್ರೀ ಮಠ ಬಿರುದು ಲಾಂಛನವು
ಪರಿಜನರಿಂ ಸ್ವಾಗತ ಶುಭ ಘೋಷಗಳು ೧೦೦

ಗುರು ಸುಧೀಂದ್ರರ ನೆನೆದು ಪರಮಗುರುಗಳ ಸ್ಮರಿಸಿ
ಪರಮಗುರು ಶ್ರೀ ವಿಜಯೀಂದ್ರರ ಮಠದಿ
ಮಾರುತಿಯ ಭಕ್ತಿ ಪ್ರವಾಹದಲಿ ಪೂಜಿಸಿ
ಸ್ಫುರದಮಲ ವೃಂದಾವನ ಬಳಿ ಬಂದರು ೧೦೧

ವೃಂದಾವನಸ್ಥ ಶ್ರೀ ವಿಜಯೀಂದ್ರರ ದ್ವಾರ
ಇಂದಿರಾಪತಿ ಲಕ್ಷ್ಮೀನಾರಾಯಣನಿಗೆ
ಮುದದಿಂದ ಅರ್ಪಣೆ ಮಾಡಿದರು ದಿಗ್ವಿಜಯ
ಯಾತ್ರೆಫಲ ತಾವು ರಚಿಸಿದ್ದ ಗ್ರಂಥಗಳ ೧೦೨

ರಾಮ ನರಹರಿ ವ್ಯಾಸ ಕೃಷ್ಣ ಹಯಗ್ರೀವ
ಶ್ರೀ ಮನೋಹರ ಲಕ್ಷ್ಮೀ ನಾರಾಯಣನು
ತಮ್ಮ ಶ್ರೀ ಸಹ ಸ್ವೀಕರಿಸಿದರು ಅರ್ಪಿತವ
ರಮಾರಮಣ ಏಕ ಬಹುರೂಪನು ಈಶ ೧೦೩

ಸರಸಿಜಪಿತರಾಮ ವ್ಯಾಸಹಯಮುಖ ಕೃಷ್ಣ
ಸಿರಿನಾರಸಿಂಹ 'ಶ್ರೀ ಪ್ರಸನ್ನ ಶ್ರೀನಿವಾಸ'
ಭಾರತೀಪತಿ ಸಹ ಜ್ವಲಿಸುತಿಹ ನಿಮ್ಮೊಳು
ಶ್ರೀ ರಾಘವೇಂದ್ರ ತೀರ್ಥರೆ ಶರಣು ಶರಣು ೧೦೪ಪ

–ದ್ವಿತೀಯ ಕೀರ್ತನೆ ಸಮಾಪ್ತಿ–

ತೃತೀಯ ಕೀರ್ತನೆ

ಶ್ರೀ ರಾಘವೇಂದ್ರ ತೀರ್ಥರೆ ನಿಮ್ಮ ಅರವಿಂದ
ಚರಣಯುಗಳದಿ ನಾನು ಶರಣು ಶರಣಾದೆ
ಶ್ರೀರಮಾಯುತ ನಾರಾಯಣ ಕೃಷ್ಣ ನಿಮ್ಮೊಳಗೆ
ಭಾರತೀಪತಿ ಸಹ ಜ್ವಲಿಸುತಿಹ ಸತತ ಪ.

ಶ್ರೀ ರಾಘವೇಂದ್ರರ ಪ್ರಭಾವವು ಜಗತ್ತೆಲ್ಲ
ಹರಡಲು ಅಲ್ಲಲ್ಲಿ ನಾಡು ನಾಡವರು
ಗುರುಗಳ ಕರೆತಂದು ಸೇವಿಸಬೇಕೆಂದು
ಹರುಷದಿಂದಲಿ ನಿಶ್ಚಯಿಸಿ ಬೇಡಿದರು ೧

ಮಾಧ್ವಯತಿಗೆ ವಿಹಿತ ಧರ್ಮ ಆಚರಿಸುತ್ತ
ವೈದೀಕ ತತ್ತ್ವವ ಮಾಧ್ವಗ್ರಂಥಗಳ
ಬೋಧಿಸುತ್ತ ಕುಂಭಪುರಿಯಿಂದ ಮತ್ತು
ಭಕ್ತಜನಕೊಲಿಯೆ ದಿಗ್ವಿಜಯ ಮಾಡಿದರು ೨

ವೈದೀಕ ಸಮ್ರಾಜ್ಯದ ರಾಜಾಧಿರಾಜರು
ವಿದ್ವಾಂಸ ಪರಿಜನ ಸಮೇತ ಶ್ರೀಮಠವು
ಮುಂದು ಚರಿಸಿತು ಸ್ವಾಗತಕೊಂಡು ಅಲ್ಲಲ್ಲಿ
ಮೃದಂಗ ಭೇರಿ ಕೊಂಬು ಮಂಗಳ ವಾದ್ಯಗಳು ೩

ವಾದ ಪ್ರಕ್ರಿಯೆಯಿಂದ ಭೇದಿಸಿ ಸಂಶಯವ
ಒದಗಿಸಿ ಧಾರುಢ್ಯಜ್ಞಾನ ಯೋಗ್ಯರಿಗೆ
ಸಿದ್ಧಾಂತ ಸ್ಥಾಪಿಸಿ ಅಲ್ಲಲ್ಲಿ ಸಜ್ಜನರ
ಉದ್ಧಾರ ಮಾಡಿದರು ಗುರು ಸಾರ್ವಭೌಮ ೪

ಹರಿಯೇ ಸರ್ವೋತ್ತಮನು ಗುಣಾರ್ಣವನು ಅನಘನು
ಶಿರಿ ನಿತ್ಯ ಮುಕ್ತೆ ನಿರ್ದೋಷೆ ಸುಖಪೂರ್ಣೆ
ಭಾರತೀಪತಿ ಮುಖ್ಯವಾಯು ಜೀವೋತ್ತಮನು
ಮೂರು ವಿಧ ಜೀವರು ನೀಚೋಚ್ಚವುಂಟು ೫

ನಿತ್ಯ ತರತಮ ಸರ್ವ ಮುಕ್ತಾಮುಕ್ತರಲ್ಲಿ
ಸತ್ಯಜಗತ್ ಭೇದ ಪಂಚಕವು ಸತ್ಯ
ಮುಕ್ತಾ ಮುಕ್ತ ಜೀವರು ಜಡಗಳು ಸರ್ವ
ಚಿಚ್ಚೇತ್ ಅಯಂತ ಹರಿ ಸರ್ವರಿಗೂ ಸ್ವಾಮಿಯು ಏಕ ಸ್ವರಾಟ್ ೬

ನಿಗಮೈಕ ವೇದ್ಯ ಹರಿಯಲ್ಲಿ ಅಮಲಭಕ್ತಿಯೇ
ಯೋಗ್ಯರಿಗೆ ಮುಕ್ತಿ ನಿಜಸುಖಕ್ಕೆ ಸಾಧನವು
ಆಗಮ ಪ್ರತ್ಯಕ್ಷ ಅನುಮಾನವೆಂಬುವ
ಮುಖ್ಯ ಪ್ರಮಾಣಗಳು ಮೂರು ಉಂಟು ೭

ಸದಾಗಮಗಳಲ್ಲಿ ಈ ಪ್ರಮೇಯಗಳು
ಸಂದೇಹವಿಲ್ಲದೇ ಇರುವುದನ್ನೇವೇ
ಮಧ್ವ ಮುನಿ ಪೇಳಿದ್ದ ಶ್ರೀ ರಾಘವೇಂದ್ರರು
ಬೋಧಿಸಿದರು ತಮ್ಮ ದಿಗ್ವಿಜಯದಲ್ಲಿ ೮

ಸತ್ತತ್ವಜ್ಞಾನ ದಾನವು ಮಾತ್ರ ಅಲ್ಲದೇ
ವ್ಯಾಧಿ ದಾರಿದ್ರ್ಯಾದಿ ಕಷ್ಟ ಪರಿಹರಿಸಿ
ಬಂದು ಬೇಡಿದವರಿಗೆ ಒಲಿದವರು ದಯಾದಿಂದ
ಇಂಥಾ ಕಾರುಣ್ಯ ಔದಾರ್ಯ ಏನೆಂಬೇ ೯

ದಾರಿದ್ರ್ಯ ದೋಷದಲಿ ಮದುವೆ ಆಗಿಲ್ಲೆಂದು
ಗುರುರಾಘವೇಂದ್ರರಲಿ ಬಂದು ಓರ್ವ
ಗುರುರಾಜರು ದಯದಿ ಅನುಗ್ರಹ ಮಾಡುವರೆಂದು
ಅರಿಕೆ ಮಾಡಿಕೊಂಡ ತನ್ನಯ ಕೋರಿಕೆಯ ೧೦

ಕೇಳಿ ವಿಷಯವ ಶ್ರೀ ರಾಘವೇಂದ್ರಾರ್ಯರು
ಲೀಲೆಯಿಂದಲಿ ಮುಷ್ಟಿ ಮಣ್ಣನ್ನು ಕೊಡಲು
ಒಳ್ಳೇ ಕೃತಜ್ಞತೆಯಲ್ಲಿ ಧನ್ಯ ಮನದಿಂದಲಿ
ಚೀಲದಲ್ಲಿ ಕಟ್ಟಿಕೊಂಡ ಆ ಭಕ್ತ ೧೧

ಗುರುಗಳು ಮಾಡಿದ ರಾಮಾರ್ಚನೆ ನೋಡಿ
ಗುರುಗಳ ಕೈಯಿಂದ ತೀರ್ಥ ಸ್ವೀಕರಿಸಿ

ಹರಿ ಗುರು ಪ್ರಸಾದವುಂಡು ಅರ್ಪಣೆಗೊಂಡು
ಆ ರಾತ್ರಿ ಮತ್ತೊಂದು ಪಟ್ಟಣ ಸೇರಿದನು ೧೨

ತನ್ನ ಊರಿಗೆ ಪೋಪ ಮಾರ್ಗ ಆ ಪಟ್ಟಣಧೀ
ಮನೆಯೊಂದರ ದಿಣ್ಣೆಯಲ್ಲಿ ಮಲಗಿದನು
ಮನೆಯ ಬಾಗಿಲು ಮುಚ್ಚಿ ಒಳಗಗಳಿ ಹಾಕಿತ್ತು
ಜನರ ನಡೆದಾಟವೇ ಬೀದಿಯಲ್ಲಿ ಇಲ್ಲ ೧೩

ಝುಗಿಝುಗಿ ಝುಗಿ ಜಗ್ಗು ಪಟ್ ಪಠೀ ಪಟ್ ಪುಟ್ಟು
ಝುರ್ಜರೀ ಝುರೀಝುರೀ ದಿಂ ಧಿಮಿ ಧಿಮುಕು
ಗೆಜ್ಜೆ ಸರಪಳಿ ಚಪ್ಪಾಳೆ ಕುಣಿತ ಶಬ್ದವು
ಗರ್ಜಿಸುತ ಬಂದು ನಿಂತಿತು ಒಂದು ವ್ಯಕ್ತಿ ೧೪

ಬ್ರಹ್ಮರಾಕ್ಷಸನೋ ಪಿಶಾಚ ಭೇತಾಳವೋ
ಮಹಾಭಯಂಕರವು ಅದು ಹೇಳಿತು ವಿಪ್ರನಿಗೆ
ಬ್ರಾಹ್ಮಣನೇ ಹೋಗಾಚೆ ನಿನ್ನ ಮೃತ್ತಿಕೆಗಂಟು
ಧಹಿಸುತಿದೆ ದಾರಿ ಬಿಡು ಶಿಶು ಕೊಂಬೆ ಎಂದು ೧೫

ಶ್ರೀ ರಾಘವೇಂದ್ರ ಸ್ಪರ್ಶಿತಮಣ್ಣಿಗೆ ಇಂಥ
ಘೋರತರ ಬ್ರಹ್ಮರಾಕ್ಷಸನ್ನ ದಹಿಪಂಥ
ವೀರ್ಯ ಇರುವುದು ಕಂಡು ದಾರಿ ಬಿಡದೆ ವಿಪ್ರ
ಗುರುಗಳ ಸ್ಮರಿಸುತ ಕುಳಿತನು ಅಲ್ಲೇ ೧೬

ಕೊಡತುಂಬ ಬಂಗಾರ ಕಾಸು ತಂದು ಕೊಟ್ಟು
ಬೇಡಿತು ದಾರಿಯ ಬಿಡಲಿಲ್ಲ ವಿಪ್ರ
ಓಡಿ ಪೋಯಿತು ತನ್ನ ಯತ್ನ ವ್ಯರ್ಥವು ಎಂದು
ಕೊಡವ ಅಲ್ಲೇ ಬಿಟ್ಟು ಬ್ರಹ್ಮರಾಕ್ಷಸನು ೧೭

ಮರುದಿನ ಉದಯದಲಿ ಆ ಮನೆ ಜನಗಳು
ಅರಿತರು ಸರ್ವವ ವಿಪ್ರಮುಖದಿಂದ
ಬಾರಿ ಬಾರಿ ಅಲ್ಲಿ ಪ್ರಸವಿಸಿದ ಶಿಶುಗಳು
ಮರೆಯಾಗಿ ಪೋದ ಮಾಯೆಯ ವಿವರಿಸಿದರು ೧೮

ಬ್ರಾಹ್ಮಣನಿಗೆ ಕನ್ಯಾದಾನವ ಚರಿಸಿ
ಅಹರ್ನಿಶಿ ರಾಘವೇಂದ್ರರ ಕೊಂಡಾಡಿ
ಮಹಾಪುಣ್ಯ ಭಾಗಿಗಳು ಆದರು ಜನರು
ಮಹಂತ ಗುರುವರ್ಯರ ಮಹಿಮೆ ಏನೆಂಬೆ ೧೯

ಮತ್ತೊಂದು ಸಮಯದಲಿ ಗುರು ಕಾವಿ ಶಾಠಿಯ
ಓದು ಬರೆಯಿಲ್ಲದ ಮಠದ ದಾಂಡಿಗನು
ನದಿಯಲ್ಲಿ ತೋಯಿಸುವಾಗ ಪಂಡಿತನಂತೆ
ತತ್ತ್ವವಾದವ ಮಾಡಿದ ಪ್ರೌಢಿಮೆಯಿಂದ ೨೦

ವಸ್ತ್ರ ಸಂಬಂಧವು ಬಿಟ್ಟು ಆ ಕ್ಷಣದಲ್ಲೇ
ವಸ್ತ್ರ ಮೂಲಕ ಬಂದ ಆ ಮಹಾಜ್ಞಾನ
ಲೇಶವೂ ನಿಲ್ಲಲಿಲ್ಲ ಆ ಸೇವಕನಲ್ಲಿ
ಅಶಕ್ಯ ವರ್ಣಿಸಲು ಈ ಗುರುಗಳ ಮಹಿಮೆ ೨೧

ದೇವತಾ ಈ ಮಹಾಪುರುಷರ ಸಂಬಂಧಿ
ಯಾವ ವಸ್ತುವಿನಲ್ಲೂ ಇವರ ಪ್ರಭಾವ
ದೇವ ದೇವೋತ್ತಮ ಶ್ರೀ ಹರಿಯ ಒಲಿಮೆಯು
ಇವರಲ್ಲಿ ಪೂರ್ಣವು ಎಲ್ಲ ಕಾಲದಲ್ಲೂ ೨೨

ಸದಾ ಮುಖ್ಯ ಪ್ರಾಣನು ಆವಿಷ್ಟ ಇವರಲ್ಲಿ
ಸಾಧಾರಣವಲ್ಲ ಶ್ರೀ ರಾಘವೇಂದ್ರರು
ಚೂತರಸ ಕೊಳಗದಲ್ಲಿ ಬಿದ್ದಿದ್ದ ಬಾಲಕನ
ಬದುಕಿಸಿದ ಮಹಾತ್ಮ್ಯ ಲೋಕ ಪ್ರಸಿದ್ಧ ೨೩

ಜಮೀನುದಾರನು ಆಸ್ತಿಕ ಗೃಹಸ್ಥನು
ಈ ಮುನಿವರ್ಯರ ಭಿಕ್ಷಕ್ಕೆ ಕರೆದು
ಬ್ರಾಹ್ಮಣ ಸಮೂಹವು ನೂರಾರು ಮಂದೀರು
ಬೃಹತ್ಸಭಾ ಕೂಡಿತು ಗುರುಗಳ ಸೇವಿಸಲು ೨೪

ದೊಡ್ಡಮನೆ ಗೃಹಸ್ಥರು ಅಲ್ಲಿ ಹರಿಪೂಜೆಯ
ಮಾಡಿದರು ಗುರುಗಳ ಭಕ್ತಜನ ಮುಂದೆ

ಅಡಿಗೆ ಗೃಹ ಹೊರಗೆ ಪರ್ಣಶಾಲೆಯಲ್ಲಿ
ಬಡಿಸಲಿಕೆ ಫಲಭಕ್ಷ ಇಟ್ಟಿದ್ದರಲ್ಲಿ ೨೫

ಆ ಗೃಹಸ್ಥನ ಮಗ ಬಹು ಸಣ್ಣ ಬಾಲಕನು
ಪೋಗಿ ಓಡಾಟದಿ ಫಲರಸ ತುಂಬಿದ್ದ
ಗಂಗಾಳ ದೊಡ್ಡದರೊಳು ಅಕಸ್ಮಾತ್ ಬಿದ್ದನು
ಆಗ ಯಾರೂ ಅದನ್ನ ನೋಡಲೇ ಇಲ್ಲ ೨೬

ಈಜಲಾರದೆ ಮಗು ರಸದಲ್ಲಿ ಮುಳಗಿತು
ಪೂಜೆಯ ಪೂರೈಸಿ ತೀರ್ಥ ಕೊಟ್ಟಾಯ್ತು
ಭೋಜನ ಹಸ್ತೋದಕ ಸಮಯ ಆಗಲು ಆಗ
ಪಾಚಕರು ದುರ್ಘಟನೆ ನೋಡಿ ಹೇಳಿದರು ೨೭

ಯಜಮಾನ ಗೃಹಣಿಯು ದುಃಖ ಅಡಗಿಸಿಕೊಂಡು
ಭೋಜನ ಗುರು ಬ್ರಾಹ್ಮಣರಿಗಾಗೆನಲು
ವಾಜಿವಕ್ತ್ರನ ಸ್ಮರಿಸಿ ಗುರುಗಳು ಹೇಳಿದರು
ಯಜಮಾನನೇ ನಿನ್ನ ಮಗನ ಕರೆಯೆಂದು ೨೮

ಗುರು ಆಜ್ಞಾವಹಿಸಿ ವೃತ್ತಾಂತ ಹೇಳಿದನು
ಗುರುಗಳು ಆಜ್ಞದಿ ಶಿಶುವ ತಂದಿಟ್ಟ
ಬೆರೆತು ಹೋದಂತಿತ್ತು ತೀರ್ಥವ ಹಾಕಿ
ಗುರು ರಾಘವೇಂದ್ರರು ಬಿಡಿಸಿದರು ಅಪಮೃತ್ಯು ೨೯

ನೆರೆದಿದ್ದ ಜನರೆಲ್ಲ ನೋಡುತಿರೆ ಮಗು ಎದ್ದು
ಗುರುಗಳಿಗೆ ನಮಿಸಿ ಮಂತ್ರಾಕ್ಷತೆ ಕೊಂಡು
ಹರಿಪ್ರಸಾದವ ಉಂಡು ಆಟವ ಆಡಿತು
ಗುರುರಾಘವೇಂದ್ರರ ಮಹಿಮೆ ಏನೆಂಬೆ ೩೦

ಈ ರೀತಿ ಅದ್ಭುತ ಮಹಾ ಮಹಿಮೆಗಳ ಇವರು
ತೋರಿ ಆಶ್ರಿತ ಜನರ ಕಷ್ಟ ಪರಿಹರಿಸಿ

ಪರಿಪರಿ ಜನರ ಉದ್ಧಾರಕ್ಕೆ ಉಪದೇಶ
ಅರುಹಿ ನಿಜಯೋಗ್ಯ ಸುಖಮಾರ್ಗ ತೋರಿದರು ೩೧

ನಂಬಿದವರಿಗೆ ಒಲಿದು ಕೈ ಬಿಡದೆ ಕಾಯುತ್ತಾ
ಬೆಂಬಲವಾಗಿಹರು ಈ ದೀನದಯಾಪರರು
ಹಂಬಲವ ಹೇಳದೆ ನಿರ್ವ್ಯಾಜ ಭಕ್ತಿಯಿಂ
ನಂಬಿ ಪ್ರತಿದಿನ ಬಂದು ವಂದಿಸಿದ ಬಾಲ ೩೨

ಬಾಲನ ಹೆಸರು ವೆಂಕಣ್ಣನೆಂಬುವರೆಂದು
ಕೇಳಿಹೆನು ಗುರುಗಳು ಕರೆದು ಅವನ್ನ
ಬಾಲನೇ ನೀ ಯಾರು ಏನು ನಿನಗೆ ಬೇಕು
ಇಲ್ಲಿ ದಿನ ಬರುತ್ತೀ ಎಂದರು ವಾತ್ಸಲ್ಯದಲ್ಲಿ ೩೩

ವೆಂಕಣ್ಣ ಭಟ್ಟನು ಓದು ಬರೆ ತಿಳಿಯದವ
ಆಕಳ ಮೇಸುವೆ ನಾನು ಪ್ರತಿದಿನ ಗುರುಗಳ
ಭಕುತಿ ಪೂರ್ವಕ ಸ್ಮರಿಸಿ ದರ್ಶನ ಕೊಂಡು ನಾ
ಕೃತಕೃತ್ಯನಾಗಿರುತಿಹೆ ಎಂದನು ಬಾಲ ೩೪

ಹರಿ ಶ್ರೀ ಕೃಷ್ಣನು ಗುರುಗಳೋಳ್ ಸರ್ವದಾ
ಇರುತಿಹನು ಸುಪ್ರಚರನಾಗಿ ಎಂದರಿತು
ಸ್ಮರಿಸು ಗುರುಗಳ ಚರಣ ಆಪತ್ಕಾಲದಲ್ಲಿ
ಸಂರಕ್ಷಿಸಲ್ಪಡುವಿ ಎಂದರು ಗುರುಗಳು ೩೫

ಓದು ಬರೆ ತಿಳಿಯದ ಬುದ್ಧಿಮಾನ್ ಸುಲ್ತಾನ
ಕುದುರೆ ಮೇಲೇರಿ ಯದೃಚ್ಛೆಯಾ ಬಂದು
ಒಂದು ಪತ್ರವ ತೋರಿಸಿ ಬರೆದಿರುವ ದೋದೆನಲು
ಓದು ಬರುವುದಿಲ್ಲ ಎಂದ ವೆಂಕಣ್ಣ ೩೬

ಕುಪಿತನಾಗಿ ಆ ಆದವಾನಿ ನವಾಬ
ವಿಪ್ರ ಬಾಲನು ಓದು ಬರುವುದಿಲ್ಲವೆಂದು
ಕಪಟ ನುಡಿದಿಹನೆಂದು ನೆನೆದು ಖಡ್ಗವನೆತ್ತೆ
ಕಾಪಾಡಿತು ರಾಘವೇಂದ್ರರ ಸ್ಮರಣೆ ೩೭

ಗುರುಗಳ ಸ್ಮರಿಸಿದನು ಓದಲಿಕೆ ಬಂತು
ಪತ್ರದಲಿ ಸಂತೋಷಕರ ವಿಷಯವಿತ್ತು
ಪರಮ ಸಂತುಷ್ಟಿಯಲಿ ರಾಜ ವೆಂಕಣ್ಣನಿಗೆ
ಅರಮನೆಯಲ್ಲಿ ಒಳ್ಳೆ ಉದ್ಯೋಗ ಕೊಟ್ಟ ೩೦

ಗುರು ಅನುಗ್ರಹ ಪಡೆದ ವೆಂಕಣ್ಣನಲ್ಲಿ
ಆ ರಾಜನಿಗೆ ಒಳ್ಳೇ ವಿಶ್ವಾಸ ಹೆಚ್ಚಿ
ತರುವಾಯ ಯುಕ್ತ ಕಾಲದಲ್ಲಿ ವೆಂಕಣ್ಣನಿಗೆ
ಮಂತ್ರಿ ಪದವಿ ಸರ್ಕಾರ ಆಡಳಿತವಿತ್ತ ೪೦

ಸ್ಥಾಲೀ ಪುಲೀಕ ನ್ಯಾಯದಿ ಒಂದು ಎರಡನ್ನೆ
ಪೇಳಿರುವುದಿಲ್ಲಿ ಮಹಿಮೆಗಳು ಅಸಂಖ್ಯ
ಅಲ್ಲಲ್ಲಿ ಸ್ಥಳದವರು ರಾಜರು ನೈಜಾಮರು
ಎಲ್ಲರೂ ಶ್ರೀ ರಾಘವೇಂದ್ರರ ಪೂಜಿಸಿದರು ೪೧

ಅನಿಶ್ಚಿತ ಉದಾಸೀನ ದೋಷದಿಂ ಕಷ್ಟಾದ
ಮಂತ್ರಾಕ್ಷತೆ ಶ್ರೀನಿವಾಸತೀರ್ಥರು ಕಂಡು
ಪುನಃ ಗುರುರಾಜರಲಿ ಪೋಗಿ ಕ್ಷಮೆ ಬೇಡಿ
ಅನುಗ್ರಹ ಪಡೆದಿದ್ದು ಲೋಕ ಅರಿಯುವುದು ೪೨

ಮಂದಮತಿ ತಾಮಸ ಪ್ರಚುರ ದುರ್ಜನರು
ನಂಬದೇ ಕುಚೇಷ್ಟೆಯ ಮಾಡಿ ಶಿಕ್ಷೆಯನು
ಹೊಂದಿ ಈ ಗುರುಗಳ ಮಹಾಮಹಿಮೆ ಅರಿತರು
ಇಂದಿರಾಪತಿ ಒಲಿಮೆ ಏನೆಂಬೆ ಇವರೋಳ್ ೪೩

ಸುಪುಣ್ಯವಂತ ಮುಕ್ತಿ ಯೋಗ್ಯಾಧಿಕಾರಿಗಳಿಗೆ
ಉರುಸುಗುಣ ಗಣಾರ್ಣವನು ಸರ್ವ
ದೋಷೋರ್ಜಿತ ಸುಕಲ್ಯಾಣತಮ ಶ್ರೀಯಃಪತಿ ಪುರು –
ಷೋತ್ತಮ ಮುಕುಂದ ಪ್ರಸಾದ
ಒದಗಿಸುವ ಮಧ್ವ ಪ್ರಿಯತಮರು ೪೪

ಕಮಲಾಸನ ಶಿವ ಇಂದ್ರ ನಾರದಾದಿ ವಂದ್ಯ
ಶ್ರೀಮಹಾಲಕ್ಷ್ಮೀಶ ನರಸಿಂಹನು ಬ್ರಹ್ಮಣ್ಯ ಪೂಜ್ಯ
ಭೈಷ್ಮೀ ಸತ್ಯಾರಮಣ ಗೋಪಾಲಕೃಷ್ಣ ಹಯಶೀರ್ಷ
ರಾಮ ವೇದವ್ಯಾಸ ವರಾಹನುಗ್ರಹ ಪೂರ್ಣಪಾತ್ರ ೪೫

ಮಧ್ವ ಜಯತೀರ್ಥೀಯ ಗ್ರಂಥ ಟಿಪ್ಪಣಿಗಳು
ಚಂದ್ರಿಕಾ ತರ್ಕತಾಂಡವ ಟಿಪ್ಪಣಿಗಳು
ಸ್ವತಂತ್ರ ಗ್ರಂಥಗಳು ತ್ರಿವೇದಿ ವಿವರ್ತಿಗಳು
ವೈದೀಕ ಸೂಕ್ತಗಳು ವ್ಯಾಖ್ಯಾನಗಳು ೪೬

ಶ್ರೀ ಕೃಷ್ಣ ಶ್ರೀರಾಮ ಚರಿತೆ ಮಂಜರಿಗಳು
ಋಗರ್ಥ ಗೀತಾರ್ಥ ಮಂಜರಿ ಪ್ರಾತಃ
ಸಂಕಲ್ಪಗದ್ಯವು ಹರಿವಾಯು ಮಹಿಮಾ
ಸುಖಜ್ಞಾನ ಸರ್ವೇಷ್ಟಪ್ರದವು ಪಠನೀಯ ೪೭

ಉಪನಿಷತ್ ಖಂಡಾರ್ಥಗಳು ವಿವರ್ಣಗಳು
ತಾತ್ಪರ್ಯ ನಿರ್ಣಯದ ಸಂಗ್ರಹ ಭಾವಾರ್ಥ
ಉಪರಿ ಇನ್ನೂನು ಬಹು ಗ್ರಂಥಗಳ ರಚಿಸಿಹರು
ಅಬಾಲ ವೃದ್ಧರಿಗೆ ಜ್ಞಾನ ಸಿದ್ಧಿಸಿದವು ೪೮

ಕಾಲ ಪ್ರವಾಹ ವಾತಾವರಣ ಸುಳಿಯಲ್ಲಿ
ಸಿಲುಕಿ ಗ್ರಹಣ ಸಾಮರ್ಥ್ಯ ಮಾತ್ರ
ಉಳ್ಳ ಅಧಿಕಾರಿಗಳು ಪಂಡಿತ ಪಾಮರರಿಗೂ
ಒಳ್ಳೇತತ್ತ್ವವ ಸಮ್ಯಕ್ ಬೋಧಿಸುವವು ೪೯

ಶ್ರೀ ರಾಘವೇಂದ್ರ ಗುರು ಸಾರ್ವಭೌಮರ ಚರಣ
ಅರವಿಂದದಲಿ ವೆಂಕಣ್ಣನು ನವಾಬನು
ಗುರುಗಳಿಗೆ ಪ್ರಿಯವಾದ ಕಾಣಿಕೆ ಎಂದೆನಿಸಿ
ಮಂತ್ರಾಲಯ ಕ್ಷೇತ್ರ ದಾನ ಮಾಡಿದರು ೫೦

ಭೂರ್ಭುವಃ ಸ್ವಃಪತಿ ವರಾಹನು ವಕ್ತ್ರದಿಂ
ಉದ್ಭುತಾ ಸರಿಚ್ಛ್ರೇಷ್ಠಾ ಶ್ರೀತುಂಗಭದ್ರಾ

ಉಭಯ ತೀರದಿ ಒಂದು ಮಂತ್ರಾಲಯ ಗ್ರಾಮ
ಸೌಭಾಗ್ಯನಿಧಿ ಹನುಮ ಕ್ಷೇತ್ರ ಮತ್ತೊಂದು ೫೧

ಐದು ಮುಖ ಹನುಮನ ಪಾದದಲಿ ಶರಣಾದೆ
ಔದಾರ್ಯ ಕಾರುಣ್ಯದಿ ಕಾಯ್ವ ಎಮ್ಮ
ಮೋದಮಯ ಶ್ರೀರಾಮಚಂದ್ರನ ದೂತನು
ಬದರ ಶೇಖರ ವಿಪಾದ್ಯಮರರಿಗುತ್ತಮನು ೫೨

ಮಂತ್ರದಿ ಪವಿತ್ರವಾದದ್ದು ಮಂತ್ರಾಲಯವು
ಮಂತ್ರ ವರ್ಣದಿ ಯಾಗ ಮಾಡಿದ್ದ ಸ್ಥಳವು
ಮಂತ್ರ ಪ್ರತಿಪಾದ್ಯ ಹರಿ ಸನ್ನಿಹಿತನಾಗಿಹನು
ಮಂತ್ರ ತಂತ್ರಕ್ಕೆ ತಕ್ಕ ಹರಿಪೂಜೆ ಸ್ಥಳವು ೫೩

ಶ್ರೀ ರಾಘವೇಂದ್ರರೀ ಮಂತ್ರಾಲಯಯ್ಕೈದು
ಹರಿಪೂಜೆ ಜಪತಪ ಧ್ಯಾನ ಪ್ರವಚನವು
ಆಶ್ರಮೋಚಿತಗಳಾಚರಿಸುತ್ತ ದಿನ ದಿನದಿ
ಬರುವ ಜನರಿಗೆ ಅನುಗ್ರಹ ಮಾಡಿದರು ೫೪

ಬಾಹ್ಯ ಚಟುವಟಿಕೆಗಳ ನಿಲ್ಲಿಸೆ ಕಾಲವು ಬರಲು
ಮಹಾಮಂತ್ರ ಜಪಿಸುತ್ತ ಏಕಾಂತದಲ್ಲಿ
ಅಹರ್ನಿಶಿ ಹರಿಧ್ಯಾನ ಪರರಾಗಿ ಕುಳಿತರು
ಶ್ರೀಹರಿಯ ಸದ್ಮವೃಂದಾವನ ಕಟ್ಟಿಸಿದರು ೫೫

ವೈದೀಕ ಸತ್ಸಂಪ್ರದಾಯ ಶಿಷ್ಟಾಚಾರ
ಮುಂದುವರೆಸಿ ಬಾದರಾಯಣ ಮಾಧ್ವ
ಸಿದ್ಧಾಂತ ಬೋಧಿಸಲು ಯೋಗೀಂದ್ರರಿಗೆ ಮಠ
ಅಧಿಪತ್ಯ ಇತ್ತರು ಗುರು ರಾಘವೇಂದ್ರರು ೫೬

ಶ್ರೀ ಶಕದಿ ಹದಿನೈದುನೂರತ್ತೊಂಬತ್ಮೂರು
ವತ್ಸರ ವಿರೋಧಿಕೃತ್ ಮಾಸ ಶ್ರಾವಣವು
ಅಸಿತ ಪಕ್ಷದಿ ದ್ವಿತೀಯ ತಿಥಿ ವೃಂದಾವನದೋಳು
ಶ್ರೀಶನ್ನಸ್ಮರಿಸುತ್ತ ಪ್ರವೇಶ ಮಾಡಿದರು ೫೭

ಜ್ಞಾನ ಪ್ರಕಾಶದ ವರ್ಚಸ್ಸು ಮುಖದಲ್ಲಿ
ಫಣಿಯಲ್ಲಿ ಊರ್ಧ್ವಪುಂಡ್ರವು ಶ್ರೀ ಮುದ್ರಾ
ಮಣಿಗಣಾ ಪದ್ಮಾಕ್ಷ ಶ್ರೀ ತುಳಸೀ ಮಾಲೆಯು
ಪಾಣಿಯಲಿ ಜಪ ಮಾಲಾ ಮಂತ್ರಮಂಡಿತವು ೫೮

ದಿನಪ ತೇಜಃಪುಂಜ ಗಾತ್ರದಲ್ಲಿ ಬೆಳಗುತಿದೆ
ವಿಷ್ಣು ಚಿಹ್ನೆ ಪಂಚಮುದ್ರ ಪುಂಡ್ರಗಳು
ದಂಡ ಬದಿಯಲಿ ಕಮಂಡಲ ಮಂತ್ರ ಅಮೃತವು
ಜ್ಞಾನಸುಖ ಭಕ್ತಿಯಲಿ ಪುಳಕ ರೋಮಗಳು ೫೯

ಭಕ್ತಿ ವಿಜ್ಞಾನದಿ ಪ್ರಜ್ವಲಿಪ ನೇತ್ರಗಳು
ಚಿತ್ತದಲಿ ಹಯಶೀರ್ಷ ಶಿಂಶುಮಾರ
ವೇದವ್ಯಾಸನು ಕೃಷ್ಣ ರಾಮ ನರಸಿಂಹನು
ಹತ್ತಾವತಾರ ಬಹುರೂಪ ಗುಣಧ್ಯಾನ ೬೦

ಗುರುಸಾರ್ವಭೌಮ ಶ್ರೀ ರಾಘವೇಂದ್ರರ ಆಜ್ಞ
ಶಿರಸಾವಹಿಸಿ ವೃಂದಾವನದದ್ವಾರ
ಹರಿಗುರುಗಳ ಸ್ಮರಿಸಿ ಪೂಜಾದಿಗಳಿಂ
ಆರಾಧಿಸಿದರು ಶ್ರೀ ಯೋಗೀಂದ್ರಾದಿಗಳು ೬೧

ರಾಘವೇಂದ್ರರು ಎಂಬ ರೂಪವನು ಧರಿಸಿ
ರಾಘವೇಂದ್ರ ಎಂದು ತಾ ಕರೆಸಿಕೊಂಡು
ರಾಘವೇಂದ್ರರಲಿ ತಾ ಪ್ರಜ್ವಲಿಸುತಿಹನು
ರಾಘವನು ಹನುಮನ ಹೃತ್ಪದ್ಮವಾಸಿ ೬೨

ಆನಂದಜ್ಞಾನಮಯ ಹರಿಶಿರಿ ಸಹ ಇವರೋಳ್
ವೃಂದಾವನದಲ್ಲಿ ಸನ್ನಿಹಿತನಾಗಿ
ಬಂದು ಸೇವಿಪರಿಗೆ ರಾಘವೇಂದ್ರರದ್ವಾರ
ಕುಂದುಗಳ ನೀಗಿಸಿ ಇಷ್ಟಾರ್ಥವೀವ ೬೩

ದರ್ಶನವು ಪಾಪಹರ ಪ್ರದಕ್ಷಿಣೆ ಹರಿಯಾತ್ರೆ
ಸರ್ವಾರ್ಥ ಸಿದ್ಧದವು ಭಕ್ತಿಯುಕ್ ನಮನ

ತೀರ್ಥ ಸೇವನ ಕುಕ್ಷಿ ಆಮಯ ನಿವಾರಕವು
ಗಾತ್ರ ದೋಷಗಳೆಲ್ಲ ಪರಿಹಾರ ಮಾಡುವುದು ೬೪

ರಾಘವೇಂದ್ರ ತೀರ್ಥರ ಕಥಾ ಶ್ರವಣವು
ಶ್ರೀ ರಾಘವೇಂದ್ರರ ಮಹಾತ್ಮೆ ಸ್ಮರಣ
ಶ್ರೀ ರಾಘವೇಂದ್ರರ ಸ್ತೋತ್ರ ಈ ನುಡಿಗಳ
ಸುಶ್ರವಣ ಪಠನಗಳು ಸೌಭಾಗ್ಯಪ್ರದವು ೬೫

ಶ್ರೀ ರಾಘವೇಂದ್ರಾಯ ನಮಃ ಎಂಬುವ ಈ
ಮಂತ್ರ ಅಷ್ಟಾಕ್ಷರಿಯು ಶುಚಿಯಿಂದ ಜಪ್ಯ
ವಿಪ್ರರು ಮಾತ್ರ ಪ್ರಣವ ಸೇರಿಸಿ ಜಪಿಸುವುದು ಕ್ರಮವಾ
ಚರಿಸುವುದು ವೇದಾಧಿಕಾರಿಗಳಿದನ್ನ ೬೬

ವಿಪ್ರನಾರಿಯರು ಶ್ರೀಂ ಕ್ಲಿಂ ಕೃಷ್ಣಾಯ ನಮಃ
ಮಂತ್ರ ಷಡಕ್ಷರಿಯ ಜಪಿಸಿ ತರುವಾಯ
ಶ್ರೀಂ ಶ್ರೀರಾಘವೇಂದ್ರಾಂತರ್ಯಾಮಿ
ಶ್ರೀ ಕೃಷ್ಣನಿಗೆ ಜಪ ಫಲವ ಅರ್ಪಿಸುವುದು
ಯೋಗ್ಯ ಅಧಿಕಾರಿಗಳು ಮಾತ್ರ ಅರ್ಹರು ಅನ್ಯರಲ್ಲ ೬೭

ನಿರ್ದೋಷ ಸರ್ವಗುಣಪೂರ್ಣ ಅಕ್ಷರ ಆತ್ಮಾ
ಪ್ರಕೃತಿಪರ ಹರಿಪ್ರತಿಪಾದಕ ಪ್ರಣವವ
ವೇದಾಧಿಕಾರವಿಲ್ಲದ ವರ್ಣಪುರುಷರು
ಮತ್ತೆ ನರಸ್ತ್ರೀಯರು ಜಪ ಮಾಡಕೂಡದು ೬೮

ಶ್ರೀ ರಾಘವೇಂದ್ರ ತೀರ್ಥ ಗುರುರಾಜರಲ್ಲಿ
ಕಾರುಣ್ಯ ಔದಾರ್ಯ ಗುಣ ಸ್ವಾಭಾವಿಕವು
ಇರುವ ಕಾರಣ ಜನರು ವೃಂದಾವನಗತ
ಗುರುಗಳ ಸೇವಿಸಿ ಸುಫಲ ಹೊಂದುವರು ೭೦

ಮೂಲ ಮೃತ್ತಿಕಾ ವೃಂದಾವನಗಳು ಬಹು ಬಹು
ಎಲ್ಲ ಊರುಗಳಲ್ಲೂ ಇರುವವು ಕಾಣುತಿವೆ

ಅಲ್ಲಿ ಶೂನ್ಯಾದಿ ಕೃತಿ ದುಷ್ಟಗ್ರಹ ಪೈಶಾಚ
ಘಾಳಿ ಭೂತ ಪ್ರೇತ ಪೀಡೆ ಕಳೆಯುವರು ೭೧

ಪುತ್ರಧನ ಆಯುಷ್ಯ ಕೀರ್ತಿ ಜೀವನ ಯಶಸ್
ಆರೋಗ್ಯ ಜ್ಞಾನ ವಿಜ್ಞಾನ ಅಪರೋಕ್ಷ
ಪರಿಪರಿ ಭಕ್ತರು ಸೇವಿಸಿ ಇಷ್ಟಾರ್ಥ
ದೊರೆಯುವುವು ಆದ್ಯಾಪಿ ಪ್ರತ್ಯಕ್ಷ ಸಿದ್ಧ ೭೨

ಮಂತ್ರಾಲಯದಲ್ಲಿ ಶ್ರೀ ರಾಘವೇಂದ್ರರ
ವೃಂದಾವನ ಮಂದಿರದಿ ಬದಿಯಲ್ಲೇ
ವಾದೀಂದ್ರ ಯತಿವರರ ವೃಂದಾವನವುಂಟು
ಸಂದರ್ಶನ ಸೇವೆ ಭಾಗ್ಯ ಅಭ್ಯುದಯ ೭೩

ಮಂಗಳ ಸುರೂಪನು ಚಾರ್ವಾಂಗ ಶಿಪಿವಷ್ಟ
ಗಂಗಾಪಿತ ವಿಶ್ವರೂಪನ್ನ ಮನಾಂತ –
ರಂಗದಿ ಪೂಜಿತ ವಾದೀಂದ್ರ ತೀರ್ಥಯತಿ
ಪುಂಗವರು ರಾಘವೇಂದ್ರ ಪ್ರಿಯತಮರು ೭೪

ಔದಾರ್ಯ ಗುಣಶೀಲ ದೀನದಯಾಳುಗಳು
ಬಂದು ಒದಗಿಹರು ಈ ಗ್ರಂಥರಚನೆಯಲ್ಲಿ
ಸದಾ ಕೃತಜ್ಞತೆಯಿಂದ ವಾದೀಂದ್ರರಲ್ಲಿ ಶರಣು
ಆದೆ ನಾನು ಎಮ್ಮ ಸಂತೈಸುವರು ಸತತ ೭೫

ತಿಮ್ಮಣ್ಣಾರ್ಯ ಗೋಪಿಕಾಸುತ ವೆಂಕಟನಾಥ
ವಿಮಲ ತುರೀಯಾಶ್ರಮ ಸುಧೀಂದ್ರರ ಹಸ್ತ
ಕಮಲದಿಂದಲಿ ಕೊಂಡು ಶ್ರೀ ರಾಘವೇಂದ್ರ
ನಾಮದಲಿ ಮೆರೆದಿಹ ಹರಿ ಪ್ರೀತಿಗಾಗಿ ೭೬

ಶ್ರೀ ರಾಘವೇಂದ್ರ ತೀರ್ಥರು ದಿಕ್ಕು ವಿಜಯ
ಹರಿಕ್ಷೇತ್ರ ಪುಣ್ಯನದಿ ತೀರ್ಥಯಾತ್ರೆಗಳ
ಚರಿಸಿ ವೈದಿಕ ತತ್ತ್ವ ಮಧ್ವ ಸಿದ್ಧಾಂತವ
ಅರುಹಿ ಸಜ್ಜನರ ಉದ್ಧಾರ ಮಾಡಿದರು ೭೭

ವಿದ್ಯಪುರಿ ದೇವಪುರಿ ಕಾವೇರಿ ಸಂಗಮ
ಸೇತು ಜನಾರ್ಧನ ಶ್ರೀ ಅನಂತಶಯನ
ತೋತಾದ್ರಿ ತೋಯಾದ್ರಿ ವೃಷಭಾದ್ರಿ ಮಧುರೆ
ಕ್ಷೇತ್ರವರ ಶ್ರೀರಂಗ ಕುಂಭಕೋಣ ೭೮

ತಾಮ್ರಪರ್ಣಿ ಕಂಚಿ ಉಡುಪಿ ಪಂಢರಿಕ್ಷೇತ್ರ
ಅಂಬುಜಾಕ್ಷಿ ಲಕ್ಷ್ಮೀಕರವೀರ ನಗರ
ಅಂಬುಜೇಕ್ಷಣ ರಾಮ ಕ್ಷೇತ್ರ ಗೋದಾವರೀ
ಸಂಭ್ರಮದಿ ಕೃಷ್ಣಾತೀರ್ಥ ಪರ್ಯಟನ ೭೯

ಜಗದೇಕ ಗುರು ಮಧ್ವ ಅರ್ಚಿತ ರುಕ್ಮಿಣೀ ಅರ್ಚಿತ
ಶ್ರೀ ಕೃಷ್ಣಮೂರ್ತಿಯ ಉಡುಪಿಯಲಿ ಸ್ಥಾಪಿಸಿದ
ನಿಗಮ ಪುರಾಣಗಳಲ್ಲಿ ಪೇಳಿರುವಂತೆ
ಜಗದೇಕ ಗುರು ಮುಖ್ಯ ವಾಯುವೇ ಮಧ್ವ ೮೦

ವೆಂಕಟಾದ್ರಿಯಲಿ ವರಾಹವೆಂಕಟನ
ಪಂಕಜಾಂಘ್ರಿಗಳಿಗೆ ವಂದಿಸಿ ಮುದದಿ
ಪಂಕೇರುಹೇಕ್ಷಣನ ಸ್ಮರಿಸಿಕೊಂಡಾಡಿದರು
ಶ್ರೀ ಕೃಷ್ಣರಾಮ ಸುಚರಿತ್ರ ಸ್ಮರಿಸಿ ೮೧

ದೇವ ದೇವೋತ್ತಮ ದೇವ ಶಿಖಾಮಣಿಯು
ನವರತ್ನ ಜ್ವಲಿಸುವ ಕಿರೀಟ ತಟಿದಂಡ
ಕಿವಿಯಲಿ ಕುಂಡಲ ಕಾರುಣ್ಯ ನೋಟವು
ಸೇವಿಸುವವರ ಪಾಲಿಸುವ ಮಂದಹಾಸ ೮೨

ಅಕಳಂಕ ಇಂದುಮುಖ ಕಂಠದಲಿ ಕೌಸ್ತುಭ
ಪ್ರಕಾಶಿಸುವ ವನಮಾಲೆ ಶ್ರೀವತ್ಸವಕ್ಷ
ಶಂಖ ಕಟಿತಟವರದ ಚಕ್ರಧರ ಹಸ್ತ ಪಿ –
ಶಂಗವಾಸ ಸಜ್ಞಾನ ಸುಖಮಯ ಪಾದಾಬ್ಜಾ ೮೩

ಪೂರ್ಣಜ್ಞಾನಾತ್ಮನು ಪೂರ್ಣ ಐಶ್ವರ್ಯಾತ್ಮ
ಪೂರ್ಣ ಪ್ರಭಾನಂದ ತೇಜಸ್ ಶಕ್ತ್ಯಾತ್ಮ

ಆನಮಿಸಿದರು ಅಚ್ಯುತಾನಂತ ಗೋವಿಂದ
ಕೃಷ್ಣ ಜನಾರ್ಧನ ಠಲಕ ಡರಕನ್ನ ೮೪

ಶ್ರೀನಿವಾಸನ್ನ ಹೀಗೆ ನಮಿಸಿ ಶ್ರೀ ಸ್ವರ್ಣಮುಖಿ
ಪುಣ್ಯನದಿ ತೀರಸ್ಥಪದ್ಮಸರೋವರದಿ
ಘನ ಮಹಿಮ ಶ್ರೀನಿವಾಸನ ನಿಜಪತ್ನಿ
ಅನಘಪದ್ಮಾವತಿಯ ಕಂಡು ನಮಿಸಿದರು ೮೫

ಕೃಷ್ಣನಾಲಯ ವಾಮ ಪಾರ್ಶ್ವಮಂದಿರದಲ್ಲಿ
ವನಜಾಸನದಲ್ಲಿ ಶ್ರೀ ಪದ್ಮಾವತಿಯು
ದೀನ ಕರುಣಾಕರೀ ವರ ಅಭಯ ತೋರುತ್ತಾ
ಶ್ರೀನಿವಾಸನ ಬದಿಯಲ್ಲಿ ಕುಳಿತಿಹಳು ೮೬

ದ್ವಾದಶಾಕ್ಷರ ಕಮಲವಾಸಿನೀ ಮಂತ್ರ ಪ್ರತಿ –
ಪಾದ್ಯಳು ಪದ್ಮಾವತಿ ಕಮಲವಾಸಿನಿಯು
ಪದ್ಮಲೋಚನೆ ಸರ್ವಾಲಂಕಾರ ಸಂಪನ್ನೆ
ಸದಾ ಎಮ್ಮ ಪಾಲಿಸುವವಳಿಗೆ ನಮೋ ಶರಣು ೮೭

ಈ ಕ್ಷೇತ್ರ ತೀರ್ಥಗಳ ಇನ್ನೂ ಬಹುವನ್ನ
ಲಕ್ಷ್ಮೀರಮಣನ ಮೂರ್ತಿಗಳ ಅಲ್ಲಿ
ಈಕ್ಷಿಸುತ ಸತ್ತತ್ವ ಸುಜನರಿಗೆ ಬೋಧಿಸಿ
ಸ್ವಕ್ಷೇತ್ರವಾಗಿ ಕೊಂಡರು ಮಂತ್ರಾಲಯವ ೮೮

ಮುಕುತಿ ಸುಖಪ್ರದ ಮಧ್ವಶಾಸ್ತ್ರ ಉಪದೇಶಿಸುತ
ಕಾಕು ದುರ್ಮತಗಳ ಖಂಡಿಸಿ ಅಲ್ಲಲ್ಲಿ
ಭಕ್ತರ ಅಪಮೃತ್ಯು ವ್ಯಾಧಿ ದಾರಿದ್ರ್ಯಾದಿ
ಸಕಲ ಕಷ್ಟಗಳಳಿದು ದಯದಿ ಪೊರೆಯುತಿಹರು ೮೯

ನ್ಯಾಯ ಮುಕ್ತಾವಳಿ ಉಪನಿಷತ್ ಖಂಡಾರ್ಥಗಳು
ನ್ಯಾಯ ಸುಧೆ ಪರಿಮಳವ ಜಗತ್ತಿನಲ್ಲಿ ಹರಡಿ
ಶ್ರೀವ್ಯಾಸ ಮಧ್ವಗ್ರಂಥಗಳ ಟಿಪ್ಪಣಿಗಳು
ದಿವ್ಯ ಇನ್ನೂ ಬಹು ಗ್ರಂಥ ರಚಿಸಿಹರು ೯೦

ಮಂತ್ರ ಪ್ರತಿಪಾದ್ಯ ಹರಿಪ್ರಿಯ ಕ್ಷೇತ್ರವಾಗಿಹುದು
ಮಂತ್ರ ಶುದ್ಧಿ ಕ್ಷೇತ್ರ ಮಂತ್ರಾಲಯವು
ಮಂತ್ರ ತಂತ್ರ ವಿಹಿಪ ಜಪ ಪೂಜೆ ಚರಿಸಿ
ವೃಂದಾವನದಿ ತಾನೇ ಪ್ರವೇಶ ಮಾಡಿಹರು ೯೧

ದುರಿತಹರ ನರಹರಿ ಧನ ರಾಜ್ಯ ಸುಖಪ್ರದ
ಶ್ರೀರಾಮ ಪುತ್ರಾದಿ ಇಷ್ಟದ ಶ್ರೀಕೃಷ್ಣ
ಪರವಾದಿ ಜಯ ಜ್ಞಾನಪ್ರದ ವೇದವ್ಯಾಸನು
ತುರಗಾಸ್ಯ ಅಖಿಳಪ್ರದ ಜ್ವಲಿಪ ಇವರಲ್ಲಿ ೯೨

ಕರೆದಲ್ಲಿ ಬರುವರು ಕೊರತೆ ನೀಗಿಸುವರು
ಪರಿಪರಿ ಇಷ್ಟಗಳ ಪೂರ್ಣ ಮಾಡುವರು
ಹರಿವಿಶ್ವ ಉದ್ದಾಮ ಆತ್ಮಾಸಾಮಗೆ ಶ್ರೀಗೆ
ಭಾರತೀಶಗೆ ನಮೋ ಗುರುರಾಜರಿಗೆ ೯೩

ಗುರು ಗುಣಸ್ತವನಾದಿ ಪುಷ್ಪಮಾಲೆಗಳೆಷ್ಟೋ
ಸೂರಿಗಳರ್ಪಿಸಿಹರು ಭಕ್ತಿ ಪೂರ್ವಕದಿ
ಶ್ರೀ ರಾಘವೇಂದ್ರಸ್ಥ ಶ್ರೀಕೃಷ್ಣ ವಿಶ್ವನಿಗೆ
ಈ ಗ್ರಂಥ ದುರ್ವಾಂಕುರವು ಅರ್ಪಿತವು ೯೪

ಸೂರಿವರ ವಾದೀಂದ್ರ ತಮ್ಮ ವೃಂದಾವನದಿ
ಇರುತಿಹರು ಗುರುರಾಜರ ಎಡದ ಪಾರ್ಶ್ವ
ಗುರುರಾಜರ ಮುಂದೆ ಬಲಪಾರ್ಶ್ವ
ಸೂರಿಗಳು ವಸುದೇಂದ್ರಾದಿಗಳು ನಿಂದು ಸೇವಿಪರು ೯೫

ಕರುಣಿ ವಿಜಯಾರ್ಯರ ಗೋಪಾಲ ದಾಸಾರ್ಯರು
ಚರಣ ನಂಬಿದ ಎನ್ನಲ್ಲಿ ದಯವನ್ನ
ಬೀರಿ ವಾದೀಂದ್ರಗುರು ಬಂದು ಅನುಗ್ರಹಿಸಿದರು
ವಾರಿಜಾಲಯ ಪತಿಯೇ ಬರೆಸಿದ ಈ ಗ್ರಂಥ ೯೬

ಭಾರತೀಶಗೆ ಪ್ರಣವ ಕೇಶವಾದಿಗಳ ಪ್ರಥಮ
ಎರಡರಲ್ಲಿ ವಿಜಯೀಂದ್ರ ಗುರು ಕೃತಗ್ರಂಥಸ್ಥ
ಹರಿ ರೂಪ ನಾರಾಯಣಾದಿ ಶತ ತೃತೀಯದಲಿ
ಮೂರಧ್ಯಾಯ ನುಡಿಯಲ್ಲಿಹ ಶ್ರೀಶ ಈ ರೀತಿ ೯೭

ಇಪ್ಪತ್ತೈದು ನುಡಿ ತೃತೀಯಾಧ್ಯಾಯದಲಿ
ಎಪ್ಪತ್ತಾರರಿಂನೂರನೇವರೆಗೂ
ತಪ್ಪದೇ ಮತ್ತೂ ಸ್ಮರಿಸುವುದು ಕೇಶವಾದಿ ಪ್ರಣವ
ಶ್ರೀಪತಿ ಇಹನು ಈ ಗ್ರಂಥದಸುಸಾರ ೯೮

ಶ್ರೀ ರಾಘವೇಂದ್ರಾಯ ನಮಃ ಎಂಟಕ್ಷರ
ಮಂತ್ರ ಚಿಂತಾಮಣಿಯು ಸ್ಮರಿಪ ಸುಜನರಿಗೆ
ಶ್ರೀ ರಾಘವೇಂದ್ರರ ಟಿಪ್ಪಣಿಗಳು
ಸುರಧೇನು ಪಠಿಸುವವರ್ಗೆ ನಮಿಪರ್ಗೆ ಸುರತರು ೯೯

ಸರಸಿಜ ಪಿತ ರಾಮ ವ್ಯಾಸ ಹಯಮುಖ ಕೃಷ್ಣ
ಸಿರಿನಾರಸಿಂಹ ಶ್ರೀ ಪ್ರಸನ್ನ ಶ್ರೀನಿವಾಸ
ಭಾರತೀಪತಿ ಸಹ ಜ್ವಲಿಸುತಿಹ ನಿಮ್ಮೊಳು
ಶ್ರೀ ರಾಘವೇಂದ್ರ ತೀರ್ಥರೆ ಶರಣು ಶರಣು ೧೦೦ಪ

: ಶ್ರೀ ಕೃಷ್ಣಾರ್ಪಣಮಸ್ತು :

ಶ್ರೀ ರಾಘವೇಂದ್ರ ತೀರ್ಥರು

೧೧೭

ನಿನ್ನ ದಯದಿಂದಲೇ ನಿನ್ನ ಬಳಿ ಬಂದೆ ।
ಘನ್ನದಯದಲಿ ಎನ್ನ ಉದ್ಧರಿಸೊ ಗುರುವೇ ಪ

ಅಜನು ನಿಜಸಚ್ಛಕ್ತಿ ಪೂರ್ಣ ವಿಶ್ವಸ್ಥನ ।
ನಿಜಭಕ್ತಾಗ್ರಣಿ ನಿನಗೆ ಶರಣು ಶರಣಾದೆ ।

ಮೂರ್ಜಗದಿ ಪ್ರಖ್ಯಾತ ನಿನ್ನ ನಂಬಿದೆ ಎನ್ನ ।
ಅಂಜಿಕೆಗಳ ತರಿದು ದೇಹಿಮೇ ಭದ್ರಂ ೧

ಏನು ಅರಿಯದ ಮಂದಹೀನ ಮಾನವ ನಾನು
ಜ್ಞಾನಿಕುಲ ಶಿರಮಣಿಯು ಗುರುರಾಜ ನೀನು ।
ಎನ್ನತ್ವಕ್ ಮಜ್ಜಾಂತ ಸರ್ವರೋಗಂಗಳನು ।
ಘನದಯದಿ ಪರಿಹರಿಸೊ ತ್ವರಿತದಿ ಕೃಪಾಳು ೨

ಎನ್ನ ಜಿಹ್ವೆಯಲಿ ಹರಿ ಮನಸಲ್ಲಿ ನಾರಿಯರು ।
ಎನ್ನ ತಿದ್ದಿಸೊ ಸೂರಿರಾಜ ಕರುಣಾಳು ।
ಎನ್ನ ಸರ್ವೇಂದ್ರಿಯವು ವಿಷಯಲಂಪಟವಾಯ್ತು ।
ನಿನ್ನ ಸ್ಮರಣೆಯು ಸರ್ವ ದುರಿತಹವು ಸತ್ಯ ೩

ದುರ್ವಾದ ತಿಮಿರಮಾರ್ತಾಂಡ ಗ್ರಂಥವ ರಚಿಸಿ ।
ಸಾತ್ವಿಕರಿಗೆ ನ್ಯಾಯಪೀಯೂಷ ಉಣಿಸಿ ।
ಸರ್ವದಾಹ್ಲಾದಕರ ಚಂದ್ರಿಕೆಯಲಿರಿಸಿದೆ ।
ದೇವಕೀನಂದನಗೆ ಪ್ರಿಯತರನೆ ಶರಣು ೪

ಉಪನಿಷತ್ ಖಂಡಾರ್ಥಗಳ ಮುಕ್ತಾವಲಿ ಮಾಲ ।
ಶ್ರೀಯಃಪತಿಗೆ ಪ್ರಿಯತರವು ಸುಧೆಯ ಪರಿಮಳವ ।
ಗೋಪಾಲ ಪೇಳಿಹ ಸುಗೀತೆಯ ವಿವರಣವ ।
ಉಪರಿ ಬಹುಗ್ರಂಥಗಳ ರಚಿಸಿದ ಸುಮೇಧ ೫

ಕ್ರೋಡಮುಖಜಾತೀರ ಮಂತ್ರಸದ್ಮಸ್ಥನೀ ।
ಬೇಡುವವರಿಗೆ ಕಲ್ಪಪಾದನೆ ಶರಣು ।
ನಡುಮನೆಯ ಸುತ ಶಾಸ್ತ್ರ ಕಡಲಿಗೇ ಉಡುಪ ನೀ ।
ಬಡತನವ ಬಿಡಿಸೆನಗೆ ಕೊಡು ಭಕ್ತಿ ಜ್ಞಾನ ೬

ಅಸಮ ಗುಣವಾರಿನಿಧಿ ನಿರ್ದೋಷ ಪವನಸ್ಥ ।
ವ್ಯಾಸ ನರಹರಿ ವಂಶಯಷ್ಟಿಧರ ಧನ್ವಿ ।
ಕುಸುಮಸಂಭವಪಿತ ಪ್ರಸನ್ನ ಶ್ರೀನಿವಾಸನು ।
ಭಾಸ ನಿನ್ನಲಿ ಸದಾ ಶರಣು ಮಾಂಪಾಹಿ ಪ ೭

ಶ್ರೀ ಗುರು ರಾಘವೇಂದ್ರ

೧೧೭-೧

ಶರಣು ಶರಣು ಪಾಲಯ ಮಾಂ ।
ಶ್ರೀ ಶ್ರೀ ಗುರು ರಾಘವೇಂದ್ರ ಕೃಪಾಂಬುಧೇ ಪಾಲಯ ಮಾಂ ಪ

ಸುಧೀಂದ್ರ ಯತಿವರ ಕರಕಮಲಜ ವರ ।
ಯೋಗೀಂದ್ರ ಹಸ್ತ ಸರೋರುಹ ಪೂಜಿತ ಪಾಲಯ ಮಾಂ ೧

ತಾರಕ ಸುಖದ ಸುಮಧ್ವಮತಾರ್ಣವ ।
ದುಗ್ಧ ತರಂಗ ಪ್ರವರ್ಧಕ ಚಂದ್ರ ಪಾಲಯ ಮಾಂ ೨

ಸುಂದರ ಸ್ತಂಭಜ ರಾಮ ದೇವಕೀಸುತ ।
ಸೈಂಧವಮುಖ ದ್ವೈಪಾಯರಾಧಕ ಪಾಲಯ ಮಾಂ ೩

ಪರಿಮಳ ವಿವೃತ್ತಿ ಮುಕ್ತಾವಲಿ ಬಹು ।
ತಾರಕಗ್ರಂಥ ಸುಕರ್ತೃ ಸುಮೇಧ ಭೋ ಪಾಲಯ ಮಾಂ ೪

ಮಂದಜಭವಪಿತ ಪ್ರಸನ್ನ ಶ್ರೀನಿವಾಸ ।
ಸಿಂಧುಜಾಪತಿ ಸಿಂಧೂರ ವರದಪ್ರಿಯ ಪಾಲಯ ಮಾಂ ೫

॥ ಶ್ರೀಕೃಷ್ಣಾರ್ಪಣಮಸ್ತು ॥

೧೧೭-೨

ಶ್ರೀ ರಾಘವೇಂದ್ರ ಅಭಯವರದ ಸ್ತೋತ್ರ

ಶ್ರೀ ರಾಘವೇಂದ್ರ ತ್ವಚ್ಚರಣ ವಿಕಸಿತ ಕಂಜದಲ್ಲಿ
ಶರಣು ನಾ ಪಾಹಿ ಮಾಂಗುರುರಾಜ
ಶ್ರೀ ಸುಧೀಂದ್ರ ಕರಾಜ। ಇಂದಿರಾಪತಿ ವ್ಯಾಸ
ಪ್ರಿಯತಮಾನಂದ ತೀರ್ಥರಾನಾಂದ ಪ್ರದ ಸಿದ್ಧಾಂತ ಪಾದ
ಸುಜಿನ ವೃಂದಕೆ ಬೀರಿದಂಥ ಮಹಂತ ಶರಣು ಪ

ಸಾಧುಕವಿ ಜನಮಿತ್ರ ಅಜ್ಞಾನ ತಿಮಿರಾರಾಣ್ಯವೀತಿಹೋತ್ರ।
ತವಪಾದಸ್ಮರಣೆಯು ಭಾಗ್ಯಪ್ರದ ಸುಪವಿತ್ರ।
ಶರಣಾದೆ ನಿನ್ನಲ್ಲಿ ಭಾವಿಸುತತವಮಂತ್ರ।
ಸುಭ್ರಾಜ ಸುಚರಿತ್ರ॥ ೧

ಬಾದರಾಯಣೀ ಮಾಧ್ವತತ್ವವ ಬೋಧಿಸಿದಿ ಅಧಿಕಾರಿಗಳಿಗೆ
ವೈದಿಕ ಶಬ್ದವರ್ಣ ಘೋಷಧ್ವನಿ ಪ್ರತಿಪಾದ್ಯನಾಗಿಹ
ಅದ್ವಿತೀಯ ಸ್ವತಂತ್ರ ಸರ್ವದೋಷದೂರನು ಉರುಗುಣಾರ್ಣವ
ಮುಕ್ತಾ ಮುಕ್ತಾ ನಿಯಂತೃ ಸರ್ವಧಾರ ಜಗಜ್ಜನ್ಮಾದಿ ಕರ್ತನ
ಸಾಧು ಸಜ್ಜನ ಜ್ಞಾನವಿಷಯ ಸಂಪ್ರಾಪ್ಯ ಶ್ರೀಶಮುಕುಂದ
ಭೇದ ಪಂಚತ ತಾರತಮ್ಯ ಈಶಈಶಿತವ್ಯ
ಜ್ಞಾನಾದಿ ಸಾಧುಯೋಗ್ಯ ಉಪಾಸನದಬಗೆತೋರಿ
ಪರಮ ಪ್ರಸಾದ ಕೊಂಡಿಹ ಹೇದಯಾಂಬುಧೆ
ಪಾಲಿಸೆನ್ನ ಶರಣು ಹೊಕ್ಕೆ
ಔದಾರ್ಯ ಸಿಂಧು॥ ೨

೧೧೭-೩

ರಾಘವೇಂದ್ರ ಮಹಂತ।
ನಿನ್ನಲ್ಲಿ ನಿನ್ನ ನಾಮ ವರ್ಣದಿ ಶ್ರೀದ ಇರುತಿಹನು
ಸುಪ್ರಸನ್ನನಾಗಿ ಪ್ರಮೋದ।
"ರಾ" ಸ್ವರತ ಶ್ರೀರಾಮ ಚಂದ್ರ ಆನಂದ ।
"ಘ" ಎನಲು ಅಘಧಾತ
"ವೇಂ" ಗಂಗಪಿತ ಹರಿ ಪರಾತ್ಪರ
ಮೃತ್ಯುವಜೀತ ಅಮೃತ್ರೇಶನು ।

ಇಂದ್ರ ಪರಮೈಶ್ವರ್ಯ ರಾಮನೃಸಿಂಹ
ವ್ಯಾಸಕೃಷ್ಣ ಹಯಮುಖ
ಜಗದಿ ಸುಪ್ರಖ್ಯಾತ ನ್ಯಾಯಸುಧೆಯ
ಪರಿಗಳ ಪ್ರಸರಿಸಿ ಉಪನಿಷದ್ಖಂಡಾರ್ಥಗಳ

ನ್ಯಾಯಮಕ್ತಾವಳಿಯು ಉಪರಿ ಬಹು ಬಹು
ಗ್ರಂಥರಚಿಸಿ ದಿಕ್ಕುವಿಜಯದಿ ಲೋಕಪೂಜಿತನಾದ ಗುರುವೇ
ತುಂಗಾ ತೀರ ಮಂತ್ರಾಲಯದಿ ವೃಂದಾವನದಲಿ
ಕುಳಿತು ಮುರ್ಜಗದೇಶ ಗುರುತಮ ಮಧ್ವರಾಯರ
ಹೃಸ್ಥ ವಾಸುದೇವ ಕೃಷ್ಣನ ಬಹುಗುಣ ಕ್ರಿಯರೂಪ
ಸ್ಮರಿಸುತ ಬೇಡುವವರಿಗೆ ಅಭೀಷ್ಟ ವೀವ ೩

ಪ್ರಣವ ಭೋದ ಶ್ರೀದನ್ನ। ಒಂದು ಎಂಟು ಏಳು
ಆರು ವರ್ಣ ಮೂವತ್ತೆರಡು ಮೂವತ್ತು ಮೂರು ಘನ್ನ।
ಹನ್ನೆರಡು ಮತ್ತು ಅನೇಕ ಸುಶುಭವರ್ಣ।
ಮಂತ್ರ ಪ್ರತಿಜಪಾದ್ಯನ್ನ । ಶ್ರೀ ಮನ್ನಾರಾಯಣ ಹಯಾನ್ನವ್ಯಸ
ಶ್ರೀಕೃಷ್ಣರಾಮ ಶ್ರೀನೃಸಿಂಹ ವರಾಹ ಹಂಸ ಇನ್ನು ಅಜ ಅನರದಾ
ದ್ಯಮಿತ ಭಿನ್ನರಹಿತ ಸುಪುರ್ಣೆ ನಿರ್ಮಲ ಸ್ವಸ್ವದೇಕ ವಿಷ್ಣುರೂಪ
ಅನಂತಗುಣ ಕ್ರಿಯಾಸ ವೇದಾ ಉಪಾಸಿಸುವ
ವಿಧಿಮುಖ್ಯವಾಯು ಮಧ್ವಮುನಿ ಸದ್ವಂಶ ಸಂಭವ
ಕುಮತ ಪದೇತಕುಲಿಶ ಶ್ರೀ ವಿಜಯೀಂದ್ರ ವನರುಹ ಪಾಣಿಜಾತ
ವಿಜ್ಞಾನ ವಿದ್ಮನ್ಮಣಿ ಸುಧೀಂದ್ರರ ಪದ್ಮಕರ ಸಂಜಾತ ನಿನ್ನಲಿ
ಶರಣು ಹೊಕ್ಕೆನಾ ನಿನ್ನಧೀನನು
ಪದ್ಮಜನಪಿತ ಪ್ರಸನ್ನ ಶ್ರೀನಿವಾಸನಿಗೆ ಪ್ರಿಯತರನೆ ಪಾಹಿ ೪

"ಮಂತ್ರಸದನವಿರಾಜ"

೧೧೭–೪

ಸುಧೀಂದ್ರ ಯತಿವರ ಕರಕಮಲಜ ವರ
ಯೋಗೀಂದ್ರ ಹಸ್ತಸರೋರುಹ ಪೂಜಿತ ಪಾಲಯ ಮಾಂ ೧

ತಾರಕ ಸುಖದ ಸುಮಧ್ವಮತಾರ್ಣವ
ದುಗ್ಧತರಂಗ ಪ್ರವರ್ಧಕ ಚಂದ್ರ ಪಾಲಯ ಮಾಂ ೨

ಸುಂದರ ಸ್ತಂಭಜ ರಾಮ ದೇವಕೀಸುತ
ಸೈಂದವಮುಖ ದ್ವೈಪಾಯನಾರಾಧಕ ಪಾಲಯ ಮಾಂ ೩

ಪರಿಮಳ ವಿವೃತ್ತಿ ಮುಕ್ತಾವಲಿ ಬಹು
ತಾರಕಗ್ರಂಥ ಸುಕರ್ತೃ ಸುಮೇಧ ಭೋ ಪಾಲಯ ಮಾಂ ೪

ಮಂದಜಭವಪಿತ ಶ್ರೀ ಪ್ರಸನ್ನ ಶ್ರೀನಿವಾಸ
ಸಿಂಧೂರ ವರದಪ್ರಿಯ ಪಾಲಯ ಮಾಂ ಪ. ೫

ಶ್ರೀ ಧೀರೇಂದ್ರ ತೀರ್ಥಾರ್ಯ ಚರಿತ

೧೧೮

ವಂದಿಸುವೆ ಧೀರೇಂದ್ರ ತೀರ್ಥಾರ್ಯರ ಪಾದ
ದ್ವಂದ್ವಾರವಿಂದದಿ ಭಕ್ತಿಪೂರ್ವಕದಿ
ವಂದಿಪರ್ಗೆ ಸುರಧೇನು ದುರ್ವಾದಿ ಗಜಸಿಂಹಾ
ನಂದಮುನಿ ಸತ್ತತ್ವವಾದಾಬ್ಧಿ ಚಂದ್ರ ಪ

ಅಶೇಷ ಗುಣಗಣಾಧಾರನು ನಿರ್ದೋಷ
ಹಂಸ ಶ್ರೀಪತಿ ಬ್ರಹ್ಮ ಸನಕಾದಿ ಗುರುಗಳ
ವಂಶಜರು ಅಚ್ಯುತ ಪ್ರೇಕ್ಷ ತೀರ್ಥಾರ್ಯರ
ಬಿಸಜ ಕರಜಾತರು ಆನಂದ ಮುನಿಯು ೧

ಆನಂದ ತೀರ್ಥರು ಮಧ್ವಮುನಿ ಜಗದ್ಗುರು
ಅನಿಲ ದೇವನವತಾರ ಸಜ್ಜನೋದ್ಧಾರಿ
ವನರುಹನಾಭ ನರಹರಿ ಮಾಧವಾಕ್ಷೋಭ್ಯ
ಘನ ಮಹಾ ಟೀಕಾಕೃತ್ಪಾದ ಜಯ ಮುನಿಯು ೨

ವಿದ್ಯಾಧಿರಾಜ ರಾಜೇಂದ್ರರು ಕವೀಂದ್ರರು
ವಿದ್ಯಾ ಕುಶಲ ವಾಗೀಶ ರಾಮಚಂದ್ರ
ಯತಿಗಳು ಮಧ್ವಮುನಿ ವಂಶಜರ ಸರ್ವರಿಗು
ವಂದಿಸುವೆ ಎನ್ನ ವೈಷ್ಣವ ತನದಿ ಇಡಲಿ ೩

ಶ್ರೀರಾಮಚಂದ್ರಜರು ವಿಬುಧೇಂದ್ರರು ವಿದ್ಯಾನಿಧಿಯು
ಶಿರಿ ವಿಬುಧೇಂದ್ರರು ಪೂರ್ವಜರು ಆ ಗುರು
ಕರಕಮಲ ಜಾತರು ಜಿತಾಮಿತ್ರರು ಅವರ
ಕರ ಪದ್ಮದುದಿಸಿದರು ರಘುನಂದನರು ೨

ಸೂರಿ ಕುಲತಿಲಕ ರಘುನಂದನ ತೀರ್ಥರಸುತ
ಸುರೇಂದ್ರ ಯತಿವರರ ಹಸ್ತಾರವಿಂದಜರು
ಧರೆಯಲ್ಲಿ ಪ್ರಖ್ಯಾತ ವಿಜಯೀಂದ್ರ ತೀರ್ಥರು
ಶಿರಬಾಗಿ ಶರಣೆಂಬೆ ಈ ಗುರುವೃಂದಕ್ಕೆ ೩

ಭುವಿಯಲ್ಲುತ್ತಮ ಕುಂಭಕೋಣ ಪುರಿಯಲ್ಲಿ
ಶ್ರೀವರ ಲಕ್ಷ್ಮೀನಾರಾಯಣನ ನೋಡುತ್ತಾ
ಶ್ರೀ ವೃಂದಾವನದಲ್ಲಿ ಕುಳಿತು ಸ್ವೀಕರಿಸಿಹರು
ದಿವ್ಯ ತಮ್ಮ ವಂಶದಿ ಧೀರೇಂದ್ರ ಸೂರಿಗಳ ೪

ಶಿಪಿವಿಷ್ಟ ಕಾಶ್ಯಪಿ ವಿಶ್ವರೂಪಗೆ ಪ್ರಿಯ
ತಪೋಧನ ವಾದೀಂದ್ರರ ಪೂರ್ವಾಶ್ರಮ ಸುತನಾಗಿ
ಈ ಪುಣ್ಯ ಶ್ಲೋಕರು ಜನಿಸಿ ದುರ್ಮತ ತರಿದು
ಸುಪ್ರಸಿದ್ಧರಾದರು ವಿಪಶ್ಚಿತಾಗ್ರಣಿಯು ೫

ವಿದ್ಯಾನಿಧಿಗಳ ವಂಶ ಸಂಭವ ಸತ್ಯ –
ಬೋಧಾರ್ಯರಲಿ ಹಿತ ಮೈತ್ರಿಯ ಬೆಳೆಸಿ
ಈ ವಿಜ್ಞಾನ ಭಕ್ತಿಮಾನ್ ವೈರಾಗ್ಯ ಮನದಿಂದ
ಹೊಂದಿದರು ಆಶ್ರಮ ವಿಜಯೀಂದ್ರರಲ್ಲಿ ೬

ಋಜು ಮಾರ್ಗದಲಿ ಶ್ರೀ ನಾರಾಯಣನ ಧ್ಯಾನಿಸುವ
ವಿಜಯೀಂದ್ರ ಗುರು ಈ ಋಜು ಮಾರ್ಗದಿ ಚೌರಿ
ದ್ವಿಜವರಗೆ ಅನುಗ್ರಹಿಸಿ ಪೌರಜ್ಞಾಶ್ರಮ ಒದಗೆ
ರಾಜಿಸಿದರಿವರು ಧೀರೇಂದ್ರ ನಾಮದಲಿ ೭

ಪೂರ್ವ ಜಯರಾಮಾರ್ಯ ಕೋವಿದೋತ್ತಮರೀಗ
ದಿವ್ಯ ಶ್ರೀ ಧೀರೇಂದ್ರ ತೀರ್ಥ ನಾಮದಲಿ

ಭುವಿಯಲ್ಲಿ ದಿಗ್ವಿಜಯ ಜಯಶೀಲರಾಗಿ
ಮಧ್ವ ಮತ ತತ್ವ ಯೋಗ್ಯರಿಗೆ ಅರುಹಿದರು ೧೦

ವಿಟ್ಠಲನ ಕ್ಷೇತ್ರ ಕರ್ಜಗಿಗೆ ಸಮೀಪದಲ್ಲಿ
ಹಟ್ಟಿರಿತ್ತಿ ಉಂಟು ವರದಾ ತೀರದಲಿ
ಮಠದಲ್ಲಿ ನೆಲಸಿ ಶ್ರೀ ಧೀರೇಂದ್ರ ತೀರ್ಥರು
ಪಾಠಬೋಧ ಗ್ರಂಥ ರಚನೆ ವಿಮರ್ಶನಾದಿ ಮಾಡಿದರು ೧೧

ಅಕ್ಕರದಿ ಹರಿಪೂಜಾ ಪ್ರವಚನದ ಸೊಬಗು
ವಾಕ್ಯಾರ್ಥ ವೈಖರಿ ಪಾಠಬೋಧ ರೀತಿ
ಮುಖ ವಿಲಾಸವು ಔದಾರ್ಯ ಗಾಂಭೀರ್ಯವು
ಭಕ್ತರಲಿ ವಾತ್ಸಲ್ಯ ಸೌಲಭ್ಯ ಏನೆಂಬೆ ೧೨

ವಸುಧೇಂದ್ರ ವರದೇಂದ್ರ ಭುವನೇಂದ್ರ ಸತ್ಯಬೋಧ
ವಾಸುದೇವ ವಿಟ್ಠಲದಾಸ ವಿಷ್ಣು ತೀರ್ಥಾದಿಗಳು
ದಾಸಾರ್ಯ ಕೋವಿದರು ವಿಜಯದಾಸರು ಶಿಷ್ಯರು
ಶ್ರೀಶನಿಗೆ ಪ್ರಿಯತರರು ಸರ್ವಕಾಲದವರು ೧೩

ವಿಜಯದಾಸಾರ್ಯರು ಕೃಪೆಮಾಡಿ ಗೋಪಾಲ
ದಾಸಾರ್ಯರು ದಯದಿ ಪಾಲಿಸಿದಂಥಾ
ದಾಸವರ್ಯ ಜಗನ್ನಾಥ ದಾಸರು ರಿತ್ತಿಯಲಿ
ವಾಸಮಾಡಿ ಧೀರೇಂಧ್ರ ಗುರುಗಳ ಸೇವಿಸಿಹರು ೧೪

ಸರ್ವಜ್ಞ ಸಾರಾತ್ಮ ಸರ್ವೇಶ್ವರ ಧನ್ವಿ
ದೇವೀ ಸೀತಾರಮಣರತರಲ್ಲಿ ಶ್ರೇಷ್ಠರು
ಭಾವುಕಾಗ್ರಣೀ ಧೀರೇಂದ್ರರು ಯೈದಿದರು
ದಿವಪುರವ ಫಲ್ಗುಣಸಿತ ತ್ರಯೋದಶಿಯಲ್ಲಿ ೧೫

ಮತ್ತೊಂದು ಅಂಶದಲಿ ರಿತ್ತಿವೃಂದಾವನದಿ
ಹತ್ತಾವತಾರ ಹರಿ ಹನುಮಂತರ್ಗತನ್ನ
ಮಂತ್ರ ಜಪಿಸಿ ಧ್ಯಾನಿಸಿ ಕುಳಿತು
ಬಂದು ಸೇವಿಪರ್ಗೆ ವಾಂಛಿತವ ಕೊಡುತಿಹರು ೧೬

ವೃಂದಾವನ ಸೇವೆ ನಮನಾದಿಗಳ್ ಮಾಳ್ಪ
ಮಂದಿಗಳು ಅದ್ಯಾಪಿ ಅನುಕೂಲ ಬಹಳ
ಹೊಂದಿ ಕೊರತೆ ನೀಗಿ ಇರುವುದು ಕಾಣುತೆಯು
ಪಾದೋದಕ ಮೃತ್ತಿಕೆ ಮಹಿಮೆ ಏನೆಂಬೆ ೧೭

ಧೀರೇಂದ್ರರು ವೃಂದಾವನದಿಂದ ಉಷಃಕಾಲ
ವರದಾ ನದಿಯಲ್ಲಿ ಮಜ್ಜನಕೆ ಪೋಗೆ
ಮೊರೆ ಹೊಕ್ಕ ಮಾರ್ಗದಲ್ಲಿ ದೈನ್ಯದಿ ಓರ್ವನು
ಬರಿದಾಗಿ ಹೊಲ ಇದೆ ಮಳೆಯಿಲ್ಲ ಎಂದ ೧೮

ಕರುಣಾಸಮುದ್ರರು ಧೀರೇಂದ್ರ ಗುರುಗಳು
ಆ ಕೃಷಿಕಗೆ ಅಭಯವಿತ್ತು ಹೇಳಿದರು
ಯಾರಿಗೂ ತನ್ನನ್ನು ಕಂಡ ವೃತ್ತಾಂತವ
ಊರಲ್ಲಿ ಹೇಳಲಿ ಬೇಡವು ಎಂದು ೧೯

ಮರುದಿನ ಆ ಕೃಷಿಕ ತನ್ನ ಭೂಮಿಯಲ್ಲೆ ಮಾತ್ರ
ಜೋರು ಮಳೆ ಹೊಯ್ದು ಪೈರು ತುಂಬಾ ಬೆಳೆದು
ನೆನೆಹೊರೆ ಸುತ್ತು ಭೂಮಿಯು ಇದ್ದಾಗ್ಗಿದ್ದದ್ದು
ಅರಿತು ಆಶ್ಚರ್ಯದಿ ಮುಳುಗಿದ ಕೃತಜ್ಞ ಮನದಿ ೨೦

ಇದು ಇನ್ನೂ ಇಂಥ ಮಹಿಮೆ ಬಹು ಪೇಳುವರು
ಅದ್ಯಾಪಿ ರಿತ್ತಿ ಜನರು ಮತ್ತು ಯಾತ್ರಿಕರು
ಒಂದನ್ನೇ ಮಾತ್ರ ಸ್ಥಾಲೀಪುಲಾಕ ನ್ಯಾಯದಿ ಇಲ್ಲಿ
ಆದರದಿ ಹೇಳಿಹುದು ಮಹಿಮೆ ಬಹು ಬಹುವು ೨೧

ಭಕ್ತಿ ಪೂರ್ವಕ ಈ ನುಡಿಗಳ ದೇವರ
ಮುಂದೆ ಪಠಿಸಲು ಆಗ ದೇವರ ದೀಪ
ಮೊದಲಿಗಿಂತ ಕಿಂಚಿತ್ ಹೆಚ್ಚಾಗಿ ಜ್ವಲಿಪುದು
ಎಂದು ಶುಭಸೂಚನಾನುಭವಿಗಳು ಪೇಳ್ವರು ೨೨

ಜಗದಂತರ್ಬಹಿರ್ವ್ಯಾಪ್ತ ವಿಜ್ಞಾನ ಜ್ಯೋತಿರ್ಮಯ
ಜಗದೇಕ ಮೂಲಗುರು ವ್ಯಾಸಾಖ್ಯ ಸೂರ್ಯ

ಹೃದ್ಗತನು ತಾನಿಂತು ನುಡಿಸಿಹನು ಈ ನುಡಿಗಳ್
ಜಗತ್ಸ್ವಾಮಿ ಶ್ರೀ ಕೃಷ್ಣ ವ್ಯಾಸಗರ್ಜಿತವು ೨೩

ಧೀ ಎನ್ನೆ ಅಜ್ಞಾನಹರ ಜ್ಞಾನಪ್ರಾಚುರ್ಯ
ರೇ ಎನ್ನೆ ಸುಖಪ್ರಾಪ್ತಿ ಕಲುಷ ಪರಿಹಾರ
ಇಂದ್ರ ಎನ್ನೆ ಸಂಪತ್ ಉತ್ಸಾಹ ಶ್ರೀಪತಿ
ಧೀರೇಂದ್ರರೊಳು ಇದ್ದು ಒದಗಿಪ ತನ್ನಾಮ ೨೪

ಆನಂದ ಜ್ಞಾನಾದಿ ನಿಖಿಲ ಗುಣ ಪರಿಪೂರ್ಣ
ಅನಘವಿಧಿಪಿತ ಶ್ರೀಶ 'ಪ್ರಸನ್ನ ಶ್ರೀನಿವಾಸ'
ಜಗನ್ನಾಥನಿಗೆ ಪ್ರಿಯ ಧೀರೇಂದ್ರ ಗುರು ನಮೋ
ಎನ್ನ ಮನ್ನಿಸಿ ಕೃಪದಿ ಪಾಹಿಮಾಂ ಕರುಣಿ ೨೫

ಶ್ರೀ ವಿದ್ಯಾಧೀಶ ತೀರ್ಥ ವಿಜಯ

೧೧೯

ವಿದ್ಯಾಧೀಶರ ಪಾದ ಪದ್ಮದಲಿ ಶರಣಾದೆ
ಶ್ರೀದ ಯದುಪತಿ ನೃಹರಿ ಪ್ರಿಯತರ ಮಹಂತ
ಔದಾರ್ಯ ಕರುಣಿಯು ಸವೈರಾಗ್ಯ ಭಕ್ತಿಮಾನ್
ಉದ್ದಾಮ ಪಂಡಿತ ದಿಕ್ ವಿಜಯ ಜಯಶೀಲ ಪ

ನಿರ್ದೋಷ ಗುಣಪೂರ್ಣ ಶ್ರೀರಮಣ ಹಂಸನಿಗೆ
ವಿಧಿ ಸನಕ ಮೊದಲಾದ ಗುರು ಪರಂಪರೆಗೆ
ಯತಿವರ್ಯ ಅಚ್ಯುತ ಪ್ರೇಕ್ಷರಿಗೆ ಆನಂದ
ತೀರ್ಥರಾಂಬುಜ ಪಾದಗಳಿಗೆ ನಮಿಪೆ ೧

ಪಂಕೇರುಹ ನಾಭ ನರಹರಿ ಮಧ್ವ
ಅಕ್ಷೋಭ್ಯ ಜಯತೀರ್ಥ ವಿದ್ಯಾಧಿರಾಜ
ವಾಗ್ವಜ್ರ ರಾಜೇಂದ್ರಕವಿ ಕವೀಂದ್ರ
ವಾಗೀಶರಿಗೆ ನಮೋ ರಾಮಚಂದ್ರರಿಗೆ ೨

ಶ್ರೀರಾಮ ಪ್ರಿಯ ರಾಮಚಂದ್ರರ ಕರಜರು
ಸೂರಿಗಳು ವಿಭುದೇಂದ್ರ ವಿದ್ಯಾನಿಧಿಗೆ
ಎರಗಿ ವಿದ್ಯಾನಿಧಿಯ ಸುತ ರಘುನಾಥರಿಗೂ
ಕರುಣಾಳು ರಘುವರ್ಯರಿಗೂ ಆನಮಿಪೆ ೩

ವೇದಾಂತ ಕೋವಿದ ರಘೂತ್ತಮ ತೀರ್ಥರಿಗೆ
ವೇದವ್ಯಾಸಾಭಿದ ಯತಿಗಳಿಗೆ ನಮಿಪೆ
ವೇದವ್ಯಾಸ ತೀರ್ಥರ ಕರಕಮಲ ಸಂಜಾತ
ವಿದ್ಯಾಧೀಶರ ಚರಣಕಾನಮಿಪೆ ೪

ಮೊದಲು ಪುಣ್ಯಸ್ತಂಭ ಪಟ್ಟಣದ ಬ್ರಾಹ್ಮಣರು
ಆನಂದ ಭಟ್ಟರು ಇವರ ವಂಶಜರು
ಮುದದಿ ಸೇವಿಸಿ ಪಾಂಡುರಂಗನ್ನ ಬಹುಕಾಲ
ಹೊಂದಿದರು ಪಾಂಡುರಂಗೀಯ ನಾಮವನು ೫

ವೈರಾಗ್ಯ ಯಕ್‌ಜ್ಞಾನ ಭಕ್ತಿ ಸಂಪನ್ನರು
ಭಾರಿ ಪಂಡಿತರತ್ನ ಆನಂದ ಭಟ್ಟ
ಶಿರಿ ವ್ಯಾಸಮುನಿ ವಾದಿರಾಜರಿಗೆ ಪ್ರಿಯತಮರು
ಪರಪಕ್ಷ ಗಿರಿವಜ್ರ ಸ್ವಪಕ್ಷ ಸ್ಥಾಪಕರು ೬

ತಿಳಿಯಬಾರದು ಈ ಆನಂದ ಭಟ್ಟರ
ಈ ಲೋಕ ಸಾಮಾನ್ಯ ನರರು ಎಂದು
ಇಳೆಯ್ಲಲಿ ಸುರಕೂಟದವರು`ಈ ಋಷಿಯ
ಮಾಲೋಲ ಪುಟ್ಟಿಸಿಹ ಕರ್ಮಗಿರಿಯಲ್ಲಿ ೭

ಕರ್ಮ ಸುಳಿಯಲಿ ಸಿಲುಕಿ ಆನಂದಭಟ್ಟರು
ತಮ್ಮ ಗೃಹಬಿಟ್ಟು ಕೊಲ್ಹಾಪುರ ಪೋಗಿ
ರಮೆಯ ಪೂಜಿಸೆ ಹನ್ನೆರಡು ವರುಷಗಳು
ಲಕ್ಷ್ಮೀಸ್ವಪ್ನದಿ ಅನುಗ್ರಹ ಮಾಡಿದಳು ೮

ಸ್ವಪ್ನ ಸೂಚನೆಯಂತೆ ಪೂಜಾಕಾಲದಲ್ಲಿ
ಸರ್ಪ ರೂಪದಿ ಸಿರಿ ಬರಲು ಕಂಡಂಜಿ

ಸರ್ಪ ಪೊದರೊಳು ಪೋಗೆ ಸ್ವಪ್ನನೆನಪಿಗೆ ಬಂದು
ವಿಪ್ರವರ್ಯರು ಪುಚ್ಛವ ಸ್ಪರ್ಶಿಸಿದರು ೯

ಸರ್ಪರೂಪದಿ ಬಂದ ಲಕ್ಷ್ಮಿಯ ಪಾದವ
ಈ ಪುಣ್ಯವಂತರು ಸ್ಪರ್ಶಿಸಿದಾರಭ್ಯ
ತಪ್ಪದೇ ಬುದ್ಧಿ ಕೌಶಲ್ಯ ಐಶ್ವರ್ಯವು
ಶುಭೋದಯವಾಗಿ ಪೋದರು ಕಾಶಿಗೆ ೧೦

ವಾರಣಾಸಿಯಲ್ಲಿ ವ್ಯಾಸಮಾಧವ ಶಿವಾ -
ನುಗ್ರಹದಿ ಉದ್ದಾಮ ಪಾಂಡಿತ್ಯ ಹೊಂದಿ
ಗುರುವ್ಯಾಸ ರಾಜರ ವಾದಿರಾಜರದಯದಿ
ಭಾರಿ ಜಯಶೀಲರಾದರು ದಿಗ್ವಿಜಯದಿ ೧೧

ದುರ್ವಾದಿ ಗಜಸಿಂಹ ಶ್ರೀವ್ಯಾಸರಾಜರು
ಅದ್ವಿತೀಯ ಶೂರರು ಅಜೇಯರು ವಾದದಲಿ
ಆದ ಶ್ರೀ ವಾದಿರಾಜರು ಅನುಗ್ರಹ ಮಾಡಿ ಆ
ನಂದ ಭಟ್ಟಗೆ ಪುಟ್ಟಿದನು ನರಸಿಂಹ ೧೨

ನರಸಿಂಹಾಭಿದನು ಎರಡನೇ ಮಗನು
ಅಗ್ರಜನು ಶ್ರೀನಿವಾಸನು ಕೊನೆಯವನು
ಗುರುರಾಜೀಯ ಪ್ರಖ್ಯಾತನು ಕೇಶವನು
ಮೂರು ಈ ಸೂರಿಗಳ ಚರಣಕಾನಮಿಪೆ ೧೩

ಶ್ರೀನಿವಾಸಾಚಾರ್ಯರು ಕೇಶವಾಚಾರ್ಯರು
ಸಂನ್ಯಾಸ ಕೊಳಲಿಲ್ಲ ನರಸಿಂಹಾಚಾರ್ಯ
ಓಂದೆ ವಾದಿರಾಜರು ಮಾಡಿದಂತೆಯೇ
ಘನ ಮಹಾ ಸಂಸ್ಥಾನ ಹೊಂದಿದನು ಮುದದಿ ೧೪

ವಿದ್ಯಾಪತಿಗಳು ಕೃಷ್ಣದ್ವೈಪಾಯನರು
ವೇದೇಶತೀರ್ಥರು ಈ ಮೂವರಲ್ಲಿ
ವಿದ್ಯಾಪತಿಗೆ ಸಂಸ್ಥಾನ ಕೊಡಲಾ ಎಂದು
ವೇದವ್ಯಾಸ ತೀರ್ಥರು ಯೋಚನೆ ಮಾಡಿದರು ೧೫

ಸ್ಮರಿಸಿ ಗುರುಗಳ ಚರಣ ಬೇಡಿದರು ಸ್ವಾಮಿಗಳು
ಅರುಹಿದರು ಸ್ವಪ್ನದಿ ಗುರು ರಘೂತ್ತಮರು
ಭರದಿ ಸ್ವಾಮಿಗಳು ನರಸಿಂಹಚಾರ್ಯರ
ಕರೆದು ಕೊಟ್ಟರು ತುರೀಯ ಆಶ್ರಮವ ಮುದದಿ ೧೬

ವೇದವ್ಯಾಸತೀರ್ಥರು ನರಸಿಂಹಾಚಾರ್ಯರಿಗೆ
ವಿದ್ಯಾಧೀಶ ತೀರ್ಥನಾಮವನ್ನಿತ್ತು
ಉತ್ತಮ ಪ್ರಣವ ಮಂತ್ರವು ಬೋಧಿಸಿ ತಮ್ಮ
ಸಂಸ್ಥಾನ ಪೀಠಕ್ಕೆ ನಿಯಮನ ಮಾಡಿದರು ೧೭

ಹದಿನೈದು ನೂರು ನಲವತ್ತೊಂದು ಶಾಲಿ ಶಕವು
ಸಿದ್ಧಾರ್ಥ ಸಂವತ್ಸರ ಚೈತ್ರ ಸಿತ ತದಿಗೆ
ವೇದಾವ್ಯಾಸತೀರ್ಥರು ಹರಿಪುರ ಐದಲು
ವಿದ್ಯಾಧೀಶರು ಕೊಂಡರು ಸಂಸ್ಥಾನ ೧೮

ರಘುನಾಥ ರಘುವರ್ಯರ ರಘೂತ್ತಮ ತೀರ್ಥರು
ಮಾರ್ಗಅನುಸರಿಸುತ್ತ ಶ್ರೀ ಮಠ ಆಳಿ
ಯೋಗ್ಯರಿಗೆ ಉಪದೇಶ ದುರ್ಮತ ಖಂಡನ
ವಾಕ್ಯಾರ್ಥ ಕೌಶಲ್ಯ ವರ್ಣಿಸಲಳವೇ ೧೯

ಮಠದ ಆಡಳಿತದ ವಿಜೃಂಭಣದಲ್ಲಿ ಒಡ -
ನಾಟವಿಲ್ಲದೇ ಈ ವೈರಾಗ್ಯ ನಿಧಿಯು
ನಾಡಿನಲಿ ಇರುವಂತೆ ತೀರ್ಥ ಕ್ಷೇತ್ರಾಟನ
ಮಾಡಲು ನೆನೆದರು ಹರಿಯ ಸೇವಿಸಲು ೨೦

ವೇದನಿಧಿ ತೀರ್ಥರಿಗೆ ಆಶ್ರಮವಕೊಟ್ಟು
ಪೋದರು ಉತ್ತರ ದೇಶಗಳ ಕುರಿತು
ಯದುಪತಿ ರಘುಪತಿ ಅವತಾರ ಸ್ಥಳಗಳಲಿ
ರತಿ ಪ್ರಚುರವಾಯಿತು ಸಂಸ್ಕಾರ ಬಲದಿ ೨೧

ಮಾರ್ಗದಲೂ ಕಾಶೀಲೂ ಅದ್ವೈತ ಪಂಡಿತರು
ರಂಗೋಜಿ ಭಟ್ಟಾಜಿ ಸರ್ವರನು ಗೆದ್ದು

ನಿಗಮಾಂತ ಸತ್ತತ್ವ ಮಧ್ವ ಸಿದ್ಧಾಂತದ
ಝುಗಿಝುಗಿಪ ಧ್ವಜವನ್ನು ಎತ್ತಿ ತೋರಿದರು ೨೨

ಕಾಶೀಲಿ ಪರಪಕ್ಷ ಸ್ವಪಕ್ಷ ಜನರಿಂದ
ಅಸದೃಶ ಮರ್ಯಾದೆ ಪೂಜೆಗಳ ಕೊಂಡು
ವಾಸಮಾಡಿ ಅಲ್ಲಿ ಕೆಲವು ಕಾಲದ ಮೇಲೆ
ವಿಷ್ಣು ಪಾದಕ್ಷೇತ್ರ ಗಯಾವನ್ನು ಸೇರಿದರು ೨೩

ಗಯಾ ವಾಳರು ಅಹಂ ಮಮಕಾರಕೊಳಗಾಗಿ
ಗಯಾಕ್ಷೇತ್ರ ಯಾತ್ರಿಕರಿಗೆ ಕಷ್ಟಕೊಡಲು
ದಯದಿ ವಿದ್ಯಾಧೀಶರು ಮಠದಿಯಾತ್ರಿಕರ್ಗೆ
ಗಯಾ ಅನುಷ್ಠಾನದ ಫಲ ಒದಗಿಸಿದರು ೨೪

ಗಯಾಕ್ಷೇತ್ರದಲ್ಲಿಯೇ ಮನೆಯೊಂದನ ಮಾಡಿ
ನಿತ್ಯ ಪೂಜಾನುಷ್ಠಾನಗಳಾಚರಿಸಿ
ಗಯಾ ಕ್ಷೇತ್ರದಲ್ಲಿ ರಾಮಗಯಾ ತಮ್ಮ ಮಠವೆಂದು
ಗಯಾ ಯಾತ್ರಿಕರುಗಳಿಗೆ ಒದಗಿಸಿದರು ದಯದಿ ೨೫

ಒಂದಾನೊಂದು ದಿನ ವಿದ್ಯಾಧೀಶರು
ಬಂದು ಜನರಿಗೆ ತೀರ್ಥ ಕೊಡುವ ಸಮಯದಲಿ
ಬಿಂದು ಶಂಖೋದಕ ಯದೃಚ್ಛಯಾ ಹಾರಿ
ನಿಂದಿದ್ದ ಒಣ ಮೋಟ ಮರದ ಮೇಲ್ ಬಿತ್ತು ೨೬

ಶಂಖ ತೀರ್ಥವು ಬಿದ್ದ ಆಕ್ಷಣದಲ್ಲೇವೆ
ಶುಷ್ಕ ಆಬಹು ಹಳೇ ಮೋಟ ಮರವು
ಚಿಗಿದು ಎಲೆಗಳು ತೋರಿದವು ಜನರು ಕಂಡು
ಚಕಿತರಾದರು ಆಶ್ಚರ್ಯದಲಿ ಮುಳುಗಿ ೨೭

ನೇರವಾಗಿ ಕಂಡು ಈ ಅದ್ಭುತ ಚರ್ಯೆ
ಅರಿತು ವಿದ್ಯಾಧೀಶರ ಪ್ರಭಾವವನ್ನ
ನಮ್ರ ಭಾವದಿ ಗಯಾವಾಳರು ಕ್ಷಮೆಬೇಡಿ
ಕೋರಿದರು ಶಿಷ್ಯತ್ವ ಕರುಣಿಸಿ ಎಂದು ೨೮

ಧೀರ ವೈರಾಗ್ಯ ನಿಧಿ ವಿಜ್ಞಾನಯೋಗಿಗಳು
ಹರಿ ಒಲಿಮೆ ಪೂರ್ಣರು ವಿದ್ಯಾಧೀಶರು
ಶರಣಾದ ಗಯಾವಾಳರಿಗೆ ಮುದ್ರೆ ಕೊಟ್ಟು
ಸೇರಿಸಿಕೊಂಡರು ಶಿಷ್ಯಜನ ಮಾಡಿ ೨೯

ಗಯಾವಾಳರು ಮಾತ್ರವಲ್ಲದೇ ಇನ್ನೂ
ಈ ಯತಿವರ್ಯರು ಹೋದ ಕಡೆಯಲ್ಲಿ
ವಿನಯದಿ ಬೇಡಿದ ಮಿಶ್ರ ಮಿಥಿಲಾದಿಗಳ
ದಯದಿ ಸ್ವೀಕರಿಸಿದರು ಶಿಷ್ಯತ್ವ ಇತ್ತು ೩೦

ಗುರು ಸಾರ್ವಭೌಮರು ವಿದ್ಯಾಧೀಶರು
ಧರೆಯಲುನ್ನತ ಬದರಿ ಕ್ಷೇತ್ರಕ್ಕೆ ಪೋಗಿ
ನರ ನಾರಾಯಣ ವ್ಯಾಸನಿಗೆ ಸನ್ನಮಿಸಿ
ಅರ್ಪಿಸಿದರು ತಾನು ರಚಿಸಿದ ಗ್ರಂಥಗಳ ೩೧

ತಿಥಿತ್ರಯ ನಿರ್ಣಯವು ವಾಕ್ಯಾರ್ಥ ಚಂದ್ರಿಕಾ
ಮೊದಲೈದು ಅಧಿಕರಣ ಸುಧಾ ಟಿಪ್ಪಣಿಯು
ದ್ವಿತ್ವ ಓಂಕಾರ ವಾದಾರ್ಥವು ಕೇನೋಪ –
ನಿಷತ್ತೆಂಬುವ ತಲವ ಕಾರದ ಖಂಡಾರ್ಥ ೩೨

ಬಾದರಾಯಣ ಮಧ್ವ ಪ್ರೀತಿ ಸೇವಾರ್ಥವು
ಅಧಿಕಾರಿಗಳಿಗೆ ಸತ್ತತ್ವ ಬೋಧಾರ್ಥ
ವಿದ್ಯಾಧೀಶ ಧೀಮಂತರ ಗ್ರಂಥಗಳು
ಶ್ರೀದನು ಒಪ್ಪಿದ ಅನುಗ್ರಹ ಮಾಡಿದನು ೩೩

ಬದರಿಯಿಂದ ತಿರುಗಿ ಯಮುನೆ ಉತ್ತರತೀರ
ವೈದರ್ಭಿ ಪತಿ ಬಾಲಲೀಲೆಯಗೈದ
ಉತ್ತಮ ಕ್ಷೇತ್ರಕ್ಕೆ ಪೋಗಿ ಬಾಲ್ಹಿಕದೇಶ
ಪ್ರಾಂತ್ಯ ಸಮೀಪಕ್ಕೆ ಬಂದು ಸೇರಿದರು ೩೪

ಏಕಚಕ್ರಪುರ ಇದು ಪವಿತ್ರ ಯಮುನಾತೀರ
ಏಕಾಗ್ರಚಿತ್ತದಲಿ ಶ್ರೀಶನ ಧ್ಯಾನಿಸಲು

ತಕ್ಕಸ್ಥಳ ಇದು ಎಂದು ಇಲ್ಲಿಯೇ ಕುಳಿತರು
ಶ್ರೀಕರ ನಾರಾಯಣನ ಪಾದ ಭಜಿಸುತ್ತಾ ೩೫

ವಿದ್ಯಾಧೀಶರು ಶ್ರೀಹರಿಯ ಸೇವಿಸಿ
ಹದಿನೈದು ನೂರ್ವೈತ್ತೂರು ಶಕಶಾಲಿ
ಚತುರ್ದಶ ಅಸಿತ ಪೌಷ್ಯಪ್ರಜಾಪತಿಯಲ್ಲಿ
ಯದುಪತಿ ತ್ರಿಧಾಮನ ಪುರವ ಐದಿದರು ೩೬

ಪದುಮ ಭವಪಿತನು 'ಶ್ರೀ ಪ್ರಸನ್ನ ಶ್ರೀನಿವಾಸ'
ಯದುಪತಿ ನೃಹರಿರಾಮ ವ್ಯಾಸಪ್ರಿಯತರರು
ವಿದ್ಯಾಧೀಶರ ಪಾದ ಪದ್ಮದಲಿ ಶರಣಾದೆ
ಬಂದು ಕಾಯ್ವರು ಎಮ್ಮ ನೆನೆದ ಮಾತ್ರದಲಿ ೩೭

ಐಜಿ ಶ್ರೀ ವ್ಯಾಸ ತತ್ವಜ್ಞರ ಸ್ತೋತ್ರ

೧೨೦

ಸೂರಿವರ ಕುಲ ರತುನ ತಾರಾನಿಕರ ಬದರ
ವಾಸುದೇವಗೆ ಪ್ರಿಯ ಜೀಯಾ
ಧೀರ ಶ್ರೀವಾಸ ತತ್ವಜ್ಞ ಗುರು ದಯದಿಂದ
ಭಾರಿತರ ಜ್ಞಾನ ಹೊಂದಿದೆ ದಾಸನಾದೆ ಪ

ಪಂಡಿತಾಗ್ರಣಿ ಐಜಿ ವೇಂಕಟ ನೃಸಿಂಹಾರ್ಯ
ಗಂಡು ರಾಮನ ಮಾಂದ್ಯ ಕಂಡು ಭಯಗೊಂಡು
ಹೆಂಡತಿ ಕೋರಿಕೆಯಿಂ ಬ್ರಹ್ಮಾಂಡ ನಾಯಕನ
ಮಂದಿರದಿ ಗೋಪಾಲಾರ್ಯರ ಕಂಡು ಅಭಯಕೊಂಡು
ಪಂಡಿತವರ್ಯರು ಪಠಿಸೆ ಸುತ ಶ್ರವಣ ಮಾತ್ರದಲೆ
ಚಂಡ ಪಂಡಿತನಾದ ವೇಂಕಟರಾಮಾರ್ಯ ೧

ವಾತಸುತ ಸಖ ತ್ರೇತೆ ಕೃಷ್ಣ ಬಂಧು ದ್ವಾಪರದಿ
ವೇದವ್ಯಾಸ ಯತಿಪ್ರಿಯನು ಭುವನೇಂದ್ರ ಕಂದ

ವೈದಿಕ ಸುಮಧ್ವ ಮತ ದುಗ್ಧಾಬ್ಧಿಚಂದ್ರಮ
ಸಾಧುಸ್ತುತ ವ್ಯಾಸ ತತ್ವಜ್ಞ ತೀರ್ಥ ಸಮರ್ಥ
ಮೋದ ತೀರ್ಥಗ ಮೂಲ ರಾಮಗೋಪಾಲನ್ನ
ಹೃದಯದಿ ಕಾಂಬುವ ಬಗೆ ತೋರ್ವ ಕಾವ ೨

ವಾಯು ನಾಭಿ ಹೃದಯ ಉರತಾಳು ಭ್ರೂಮಧ್ಯ ಶಿರ
ಕಾಯಸ್ಥ ನರರುಧಿರ ಮಾಂಸ ಆಂಶ
ತ್ರೈಯರಸ ತೇಜಸ್ ಜಲ ಪೃಥ್ವಿ ನಿರಾಮಯವು
ಪೃಥಿವ್ಯಾದಿ ಪ್ರವರ್ತಕರು ರುದ್ರವಾಯು ಶ್ರೀಯು
ತೋಯಜ ದಳಾಹ್ವಯ ಏಳು ಸ್ಥಾನ ಮನ್ವಾಧ್ಯಭಿಮನ್ಯ –
ಧ್ಯೇಯ ಅಲ್ಲಿ ಪಂಚರೂಪಹರಿಯು ಸಿರಿಧೊರೆಯು ೩

ಈ ರೀತಿ ಜ್ಞಾನೋಪಾಸನದ ಬಗೆ ಇನ್ನೂ
ಅರುಹಿಹರು ಬಹುವಾಗಿ ಶ್ರವ್ಯಂಗೆ ಸ್ಪಷ್ಟಪಟಿಷ್ಟ
ಹರಿಯ ಪ್ರತಿಪಾದಿಸುವ ವರ್ಣವರ್ಣನೆಗಳ
ಶರೀರಾಂಗ ಸ್ಥಾನಗಳಲ್ಲಿ ನೀ ತಿಳಿ
ಹರಿರೂಪ ಎಂದು ಶಿಷ್ಯರಿಗೆ ಬೋಧಿಸಿ
ಹೊರ ಒಳಗೆ ಸ್ವರೂಪ ಬಿಂಬವ ಕಾಂಬುವ ಬಗೆ
ಹೇಳಿಹರು ಮುದದಿ ದಯದಿ ೪

ಸಾಮ್ರಾಜ್ಯ ಆಡಳಿತ ಲೆಕ್ಕಿಸದೆ ವಿರಾಗದಲಿ
ಈ ಮಹಾನ್ ಸುಧಾರಿ ಗ್ರಂಥಗಳೋದಿ –
ಓದಿಸಿದ ಮೋದಿ
ಶ್ರೀ ಮಧ್ವಮತೋದ್ಧಾರ ಸುಗುಣಗುಣ ಗಂಭೀರ
ಪ್ರೇಮ ವಾತ್ಸಲ್ಯ ಕೃಪಾಸಾಗರ ಅಪಾರ
ಹೇಮಗರ್ಭನ ಪಿತ ಶ್ರೀ ಪ್ರಸನ್ನ ಶ್ರೀನಿವಾಸನ
ಸುಮನಪಾದ ಮಧುಪ ಶ್ರೀವ್ಯಾಸ ತತ್ವಜ್ಞ ಆರ್ಯ –
ನಮೋ ಜೀಯ ೫ ಪ

ಶ್ರೀ ವರದೇಂದ್ರ ವಿಜಯ

೧೨೧

ವರದೇಂದ್ರ ತೀರ್ಥಾರ್ಯ ಗುರುವರರ ಪದಯುಗ್ಮ ।
ಸರಸೀರುಹದಲ್ಲಿ ಸತತ ನಾ ಶರಣಾದೆನು ।
ವರ ಸಮೀರಗ ಕೃಷ್ಣ ರಾಮ ಹಯ ಮುಖವ್ಯಾಸ ।
ನರಹರಿ ಪ್ರಿಯರಿವರು ಸಾಧುವರಪ್ರದರು ಪ

ರಂಗನ ಪಾದೋದಕವು ಸುಪವಿತ್ರ ತಮವೆಂದು
ಗಂಗೆಯನು ಶಿರದ ಮೇಲಿಟ್ಟುಕೊಂಡಿಹ ಶಿವನು ।
ಲಿಂಗ ಮೂರುತಿ ಶಿವಗೆ ಸುಪೂರ್ಣಮತಿ ಗುರುವು
ಶಂಕೆ ಇಲ್ಲ ಬ್ರಹ್ಮಗುರು ಶಿವ ಶಿಷ್ಯ ಕೇಳಿ ಕೇನ ೧

ರಜತ ಜಾಂಬೂನವ ತಾಮ್ರವನು ಮರಗದವ ।
ವಜ್ರ ಮಾಣಿಕ್ಯವನು ತನ್ನ ಗರ್ಭದಲಿ ನಿಲ್ಲಿರಿಸಿ ।
ದುರ್ಜನರಿಗೆ ಸುಲಭದಿ ಕಾಣಿಸದೆ ಈ ಕ್ಷೇತ್ರ ।
ರಾಜಿಸುತೆ ರವಿ ಸೋಮ ತಾರೆಗಳ ಜ್ಯೋತಿಯಿಂದ ೨

ರಾಘವ ಯಾದವ ವೇಂಕಟಧಾಮ ಹನುಮ ಭೀಮ ।
ಈ ಗ್ರಾಮ ರಕ್ಷಣೆ ಮಾಡುತಿರೆ ಶಿವ ಜಪಿಸುವ ।
ಅಘದೂರ ಗುಣನಿಧಿ ಸಮೀರಗ ಮಹಿದಾಸ – ।
ನಿಗೆ ಪ್ರಿಯ ಬೃಹತಿ ಋಕ್ ಶ್ರೀ ವಿಷ್ಣು ಸಾಸಿರ ನಾಮ ೩

ಈ ರೀತಿ ಬಹಿರ್ ಮುಖರ್ಗೆ ಪ್ರಿಯ ಲಿಂಗಸುಗೂರಲ್ಲಿ
ಸುರವೃಂದದವರು ಮರುದ್ಗಣದವರು ತೋರಿ ।
ಇರುತಿದ್ದ ಕಾಲದಲಿ ವಿಜ್ಞಾನ ಭಕ್ತಿ ಯೋಗೀಶ ।
ವರದೇಂದ್ರ ತೀರ್ಥ ಗುರುರಾಜ್ ವಿಜಯ ಮಾಡಿದರು ೪

ಜಗನ್ನಾಥದಾಸರ ಸಖಿ ಶಿಷ್ಯರಾಗಿಹ ನಮ್ಮ ।
ಜಗಖ್ಯಾತ ಪ್ರಾಣೇಶದಾಸರು ಶ್ರೀ ಸ್ವಾಮಿಗಳಿಗೆ ।
ಸ್ವಾಗತ ವಿನಯ ಪೂರ್ವಕ ನೀಡಲು ಮುದದಿಂದ ।
ಶ್ರೀಗಳು ತಮ್ಮ ದಿಗ್ವಿಜಯ ತಾತ್ಪರ್ಯ ಹೇಳಿದರು ೫

ತಮ್ಮ ದ್ವಿತೀಯ ಸವನ ಮಧ್ಯ ಬ್ಯಾಗವಟ್ಟಿ ನರ – ।
ಸಿಂಹ ದಾಸರ ಯುವ ಆಟೋಪ ವಿದ್ಯಾವಾನ್ ಸುಗುಣಿ
ಶ್ರೀ ಮಾಧ್ವ ಬಾದರಾಯಣಿ ಪರ ವಿದ್ಯಾಗ್ರಂಥಗಳ ।
ತಮ್ಮಲ್ಲಿ ಸಂಯಕ್ ಓದಿ ಈಗಲೂ ಬರುವ ಆಗಾಗ ೬

ಈ ತಮ್ಮ ಪ್ರಿಯ ಶ್ರೀನಿವಾಸಾಚಾರ್ಯರ ಪ್ರೀತಿ ಪಾತ್ರ ।
ಸಾತ್ವಿಕ ಶಿಷ್ಯರಲಿ ಶ್ರೀಮಠ ಬಂದದ್ದು ಸರಿಯೇ ।
ಇಂದಿಲ್ಲಿ ರಾಮ ವೇದವ್ಯಾಸ ಪೂಜೆ ಚರಿಸುವುದು ।
ಮುಂದಿಲ್ಲಿ ತತ್ತ್ವವಾದ ಸಜ್ಞಾನ ವೃದ್ಧಿಯಾಗೆ ಹೇತು ೭

ಪಾದಪೂಜೆ ಸಭ್ಯರಿಂದಲಿ ಗುರು ಮರ್ಯಾದೆಗಳು ।
ಇಂಥ ಕಾರ್ಯಗಳ ನಿಮಿತ್ತ ವರದೇಂದ್ರ ಗುರುವು ।
ಮತ್ತು ಪೇಳುವ ಮಾತು ಪೂಜಾನಂತರ ಎನ್ನುತಲೆ ।
ಬಂದು ನೆರೆದ ಜನರಲಿ ಗಮನ ಬೀರಿದರು ೮

ಲಿಂಗಸುಗೂರು ಮತ್ತು ಸುತ್ತ ಮುತ್ತ ಗ್ರಾಮ ಜನರ ।
ಕಂಗಳಿಗೆ ಹಬ್ಬವು ಮನಸ್ಸಿಗಾನಂದಕರವು ।
ಭಂಗಾರ ನವರತ್ನ ಮಂಟಪದಿ ಯತಿ ಕೃತ್ ಪೂಜೆ ।
ಶೃಂಗಾರ ದೀಪಾವಳಿ ತೋರಣ ವಿಪ್ರಜನ ಗುಂಪು ೯

ಮನೋದಾರ ವಾಕ್ಚತುರ ಶ್ರದ್ಧಾಳು ಭಕ್ತಿ ಭರಿತ ।
ಪ್ರಾಣೇಶದಾಸಾರ್ಯರ ಸೇವೆ ಮೆಚ್ಚಿದರು ಶ್ರೀಗಳು ।
ಅನಪೇಕ್ಷರು ಸ್ವಯಂ ತಾನೇ ವದಾನ್ಯರು ಕೇಳ್ದರು ।
ಮನೆ ಸ್ಥಳ ತಮಗೆ ದಾನಮಾಡೆಂದು ದಾಸರನ್ನ ೧೦

ಜ್ಞಾನಿವರ ಪ್ರಾಣೇಶದಾಸರಾಯರು ಎಂಥ ಭಾಗ್ಯ ।
ಎನ್ನುತ ಅನವಶ್ಯ ಹೆಚ್ಚು ಸೊಲ್ಲು ವೆಚ್ಚ ಮಾಡದೇ ।
ದಾನ ಮಾಡಿದರು ರಾಮಕೃಷ್ಣ ವ್ಯಾಸಾರ್ಪಣವೆಂದು ।
ಕನಿಕರದಿ ಸ್ವೀಕರಿಸಬೇಕೆಂದು ಬೇಡಿದರು ೧೧

ಜ್ಞಾನಿಕುಲ ತಿಲಕರು ದೇವ ಸ್ವಭಾವರು ನಮ್ಮ ।
ಘೃಣಿ ಶ್ರೀ ವರದೇಂದ್ರ ತೀರ್ಥಾರ್ಯರ್ ಗುರು ಮಹಂತರು ।
ದಾನ ಸ್ವೀಕರಿಸಿ ಬಹ್ವನುಗ್ರಹಿಸಿ ಹೊರಟರು ।
ಇನ್ನುಳಿದ ತಮ್ಮ ವಿಜಯ ಯಾತ್ರೆ ಕ್ಷೇತ್ರಗಳಿಗೆ ೧೨

'ಶ್ರದ್ಧ ಯಾಧೇಯಂ' ಎಂಬ ಶೃತಿ ಶಾಸನ ಅನುಸಾರ ।
ಈ ದಾನ ದಾಸರು ಮಾಡಿದ್ದು ಲೋಕ ಕೊಂಡಾಡುತಿದೆ ।
ಅಂದಿನಾರಭ್ಯ ಲಿಂಗಸುಗೂರು ಪ್ರಾಣೇಶದಾಸರ ।
ಮಂದಿರ ವ್ಯಾಸದಾಸ ತತ್ತ್ವವಾದ ಪೋಷಕವಾಯ್ತು ೧೩

ಶ್ರೀ ಮಠದ ಆಡಳಿತ ಪಾಠ ಪ್ರವಚನ ಇಂಥ ।
ತಮ್ಮ ಸ್ಥಾನಾಶ್ರಮ ಕೆಲಸ ಮಾಡುತ ಬಹುದಿನ ।
ತಮಗೆ ದತ್ತವಾದ ಲಿಂಗಸುಗೂರು ಭೂಮಿಯನ್ನು ।
ಸುಮ್ಮನೆ ಖಾಲಿಯಾಗಿ ಇಟ್ಟು ಪುಣೆಯಲ್ಲಿ ಗುರು ನಿಂತರು ೧೪

ನಿಯಮೇನ ಹರಿಪುರ ಯೈದಿ ಪುಣೆ ಮಠದಲ್ಲಿ ।
ದಿವ್ಯ ವೃಂದಾವನಸ್ಥರಾಗಿ ದಾಸರಿಗೆ ಸ್ವಪ್ನದಿ ।
ದಯಪಾಲಿಸಿದರು ತುಳಸಿ ವೃಕ್ಷ ಕುರುಹಲ್ಲಿ ।
ಶ್ರೀಯಃ ಪತಿಯ ಧ್ಯಾನಿಸುತ ಬಂದಿಹೆವು ವಾಸಕ್ಕೆ ೧೫

ಶ್ರೀ ಸ್ವಾಮಿಗಳ ಸ್ವಾಪ್ನ ಆಜ್ಞಾನುಸಾರವಾಗಿಯೇ । ವಿ
ಶ್ವಾಸ ಉಕ್ಕುತ ಪ್ರಾಣೇಶದಾಸರು ವೃಂದಾವನವ ।
ಹಸನಾಗಿ ನಿರ್ಮಾಣ ಮಾಡಿ ಯೋಗ್ಯದಿನ ವಿಹಿತ ।
ಸಂಸ್ಕಾರದಿಂದ ಆವಾಹನ ಪ್ರತಿಷ್ಠೆ ಮಾಡಿದರು ೧೬

ಮಹಾನ್ ವರದೇಂದ್ರರು ಸ್ವಾಪ್ನ ಸಂದೇಶ ಪ್ರಕಾರವೇ ।
ಮಹಾನುಗ್ರಹ ಮಾಡಿ ತಾವೇ ಒಂದಂಶದಿ ಕುಳಿತು ।
ಅಹರಹ ಬಂದು ಸೇವಿಸುವರ್ಗೆ ವಾಂಛಿತವಿತ್ತು ।
ಸಲಹುತಲಿಹರು ಅದ್ಯಾಪಿ ಲಿಂಗಸುಗೂರಲ್ಲಿ ೧೭

ಈ ಪುಣ್ಯಶ್ಲೋಕ ವರದೇಂದ್ರ ತೀರ್ಥರಲಿ ತೀರ್ಥತ್ವ ।
ಇಪ್ಪುದರಿಂ ಪವಿತ್ರಕರ ಇವರ ಪಾದಸೇವಾ ।
ಪಾಪಹಾರಿಣಿ ಪುಣ್ಯದಾ ತುಳಸಿಯ ಮೂಲದಲಿ ।
ಸುಪವಿತ್ರಕರ ಸರ್ವತೀರ್ಥಗಳಿಪ್ಪುದು ಸಿದ್ಧ ೧೮

ಉರುಗಾಯ ಧನ್ವಂತರಿಯ ಆನಂದ ಬಾಷ್ಪಬಿಂದು ।
ಅಪ್ರಾಕೃತವಾದ್ದು ಹಸ್ತಸ್ಥ ಪ್ರಾಕೃತ ಪೀಯೂಷದೋಳ್ ।
ಪ್ರಕ್ಷಿಪ್ತವಾಗಿ ಧರೆಯಲ್ಲಿ ತುಳಸೀ ವೃಕ್ಷವಾಯ್ತು ।
ಹರಿ ಕೊಟ್ಟ ವರದಿಂ ವೃಂದಾದೇವಿ ತುಳಸಿಕಟ್ಟೆ ೧೯

ದೋಷೋಜ್ಝಿತ ಗುಣ ಪೂರ್ಣ ಶ್ರೀಹರಿ ತುಳಸೀನಾಮ ।
ಲಕ್ಷ್ಮೀಸಮೇತ ಆ ವೃಕ್ಷ ಮಧ್ಯದಿ ಅಮೃತಾಂಧಸ್ ।
ಶ್ರೇಷ್ಠರ ಸಹ ಇರುವಂತೆ ವರದೇಂದ್ರರೋಳ್ ಛಂದಸಾಂ ।
ವೃಷಭ ಶ್ರೀಯಕ್ ಸಪರಿವಾರ ಜ್ವಲಿಸುತಿಹನು ೨೦

ಉತ್ತಮ ಶ್ಲೋಕ ಪರಮೈಶ್ವರ್ಯ ರೂಪ ವಿಷ್ಣುವೇ ಅಧಿ ।
ಅಂದರೆ ಸರ್ವೋತ್ತಮು ಇಂಥಾ ಗುಣಜ್ಞಾನ ಪುಂಜವು ।
ವೇದಗಳು ತುಳಸ್ಯಾಗ್ರದಿ ಇರುವಂತೆ ಇವರೋಳ್ ।
ಮೇಧಾ ಪ್ರೌಢಿಮೆ ಇಹುದು ಮಧ್ವಸ್ಥವ್ಯಾಸಾನುಗ್ರಹ ೨೧

ಸುಮನಸ ವಂದಿತ ತುಳಸೀನಾಮಕ ಲಕ್ಷ್ಮಿಯು ।
ಸನ್ಮಂತ್ರವು ದ್ವಾದಶಾಕ್ಷರದಿ ಇರುವುದು ಅದು ।
ನಿರ್ಮಮ ನಿರ್ಮತ್ಸರ ಯೋಗ್ಯ ಅಧಿಕಾರಿಗಳಿಂದ ।
ರಮಾಮಾಧವ ಪ್ರೀತಿಗೆ ಜಪ್ಯ ಇಹಪರೇಷ್ಟಲಾಭ ೨೨

ಬಾದರಾಯಣ ತಾನೇ ನುಡಿಸಿದೀ ನುಡಿಗಳ್ ಭಕ್ತಿ । –
ಯಿಂದೋದಿ ಕೇಳ್ವರ್ಗೆ ವರದೇಂದ್ರ ಮಧ್ವಸ್ಥ ಅಜನ – ।
ಪಿತ 'ಶ್ರೀ ಪ್ರಸನ್ನ ಶ್ರೀನಿವಾಸ' ಶ್ರೀಶ ತುಳಸೀಶ ।
ವಿತ್ತ ವಿದ್ಯಾಯುರಾರೋಗ್ಯ ಜ್ಞಾನ ಭಕ್ತ್ಯಾದಿಗಳೀವ ೨೩ ಪ

॥ ಇತಿ ಶ್ರೀ ವರದೇಂದ್ರ ವಿಜಯ ಸಂಪೂರ್ಣಂ ॥

ಶ್ರೀ ಪ್ರಸನ್ನ ರಘೂತ್ತಮ ತೀರ್ಥರ ಚರಿತ್ರೆ

೧೨೨

ಶ್ರೀ ರಘೂತ್ತಮರಂಘ್ರಿ ರಾಜೀವಯುಗ್ಮದಲಿ
ಶಿರಬಾಗಿ ಶರಣಾದೆ ಧನ್ಯನಾದೆ
ಶ್ರೀರಾಮಚಂದ್ರನ ಪೂರ್ಣಾನುಗ್ರಹ ಪೂರ್ಣ
ಪಾತ್ರರು ಎಮ್ಮ ಪಾಲಿಸುವ ಕರುಣಾಳು ಪ

ಶ್ರೀ ಹಂಸ ಲಕ್ಷ್ಮೀಶ ಪರಮಾತ್ಮ ಸರ್ವೇಶ
ಬ್ರಹ್ಮ ಸನಕಾದಿಗಳ ಗುರುಪರಂಪರೆಯ
ಬ್ರಹ್ಮಪದ ಐದುವ ಶ್ರೀ ಆನಂದತೀರ್ಥರ
ನೀರುಹ ಚರಣಂಗಳಲ್ಲಿ ಶರಣಾದೆ ೧

ಪಂಕೇರುಹನಾಭ ನರಹರಿಮಾಧವ
ಅಕ್ಷೋಭ್ಯ ಜಯತೀರ್ಥ ವಿದ್ಯಾಧಿರಾಜ
ವಾಗ್ವಜ್ರ ರಾಜೇಂದ್ರ ಕವಿವರ ಕವೀಂದ್ರ
ವಾಗೀಶ ಶ್ರೀ ರಾಮಚಂದ್ರರಿಗೆ ಶರಣು ೨

ಶ್ರೀ ರಾಮಚಂದ್ರರ ಕರಜರು ಈರ್ವರಿಗೂ
ಎರಡನೇಯವರು ವಿದ್ಯಾನಿಧಿಯ ಹಸ್ತ
ಅರವಿಂದೋತ್ಪನ್ನ ರಘುನಾಥರಿಗೆ ನಮೋ ಎಂಬೆ
ಸೂರಿವರ ರಘುವರ್ಯರಲ್ಲಿ ಶರಣಾದೆ ೩

ರಘುವರ್ಯ ಗುರುರಾಜ ಕರಕಮಲ ಸಂಜಾತ
ರಘೂತ್ತಮ ತೀರ್ಥರ ಚರಣಕಾನಮಿಪೆ
ಅಗಣಿತ ಗುಣಾಂಬುಧಿ ಅಘದೂರ ರಘುಪತಿಯ
ಹೃದ್ಗುಹಾ ಒಳಹೊರಗೆ ಕಾಂಬುವಧೀರ ೪

ರಾಮಚಂದ್ರಾಚಾರ್ಯ ನಾಮ ಬಾಲಕನು
ಬ್ರಹ್ಮಚಾರಿಯು ಧೃಢವ್ರತನು ಹರಿಭಕ್ತ
ಸುಮನೋಹರಮೂರ್ತೇ ಗುಣಗುಣಾಲಂಕೃತನು
ಈ ಮಹಾವೇದಾಂತ ಪೀಠಕ್ಕೆ ಅರ್ಹ ೫

ತಮ್ಮ ಮಠ ಶಿಷ್ಯರಲು ಮಾಧ್ವ ಸಜ್ಜನರಲ್ಲೂ
ಸುಮಹಾಪಂಡಿತರು ಇರುತಿದ್ದರೂನು
ಈ ಮಹಾ ಪುರುಷ ಬಾಲನೇ ತಕ್ಕವನೆಂದು
ನೇಮಿಸಿದರು ಪೀಠಕ್ಕೆ ರಘುವರ್ಯ ಗುರುವು ೬

ರಘೂತ್ತಮತೀರ್ಥ ನಾಮದಿ ತುರೀಯಾಶ್ರಮ
ರಘುವರ್ಯರೀ ರಾಮಚಂದ್ರಗೆ ಇತ್ತು
ರಾಘವನ ಪೂಜಾದಿ ಸಂಸ್ಥಾನ ಅಧಿಕಾರ
ನಿಗಮಾಂತ ಗುರುಗಳು ನಿಯಮನ ಮಾಡಿದರು ೮

ವೇದವೇದಾಂತ ಸಚ್ಛಾಸ್ತ್ರ ಪಂಡಿತನು
ವಿದ್ಯಾರ್ಥಿ ಬಹುಮಂದಿಗೆ ಪಾಠ ಪೇಳುವ
ವಿದ್ವಾಂಸ ಓರ್ವನ್ನ ರಘುವರ್ಯ ತೀರ್ಥರು
ವಿದ್ಯೆ ಕಲಿಸಲು ಏರ್ಪಾಡು ಮಾಡಿದರು ೯

ಶೇಷಪ್ಪನಾಯಕರ ಮಕ್ಕಳು ಈರ್ವರಲಿ
ಜ್ಯೇಷ್ಠ ಪುತ್ರನು ವಿದ್ವಾಂಸರಲಿ ಪ್ರಮುಖ
ಶಿಷ್ಯರೂ ಬಹು ಜನರು ಈತನಿಗೆ ಉಂಟು
ಭೂಷಣವೆಂದೆನಿಸಿದನು ಮಾಧ್ವ ಸಮೂಹಕ್ಕೆ ೧೦

ಸಾವಿರದ ನಾನ್ನೂರು ಎಪ್ಪತ್ತ ಒಂಭತ್ತು
ಸಂವತ್ಸರದಲಿ ಶಾಲಿವಾಹನದಿ
ದಿವಸ ತದಿಗೆ ಕೃಷ್ಣ ಜ್ಯೇಷ್ಠ ಪಿಂಗಳದಿ
ಶ್ರೀವರನಪುರಕೆ ತೆರಳಿದರು ರಘುವರ್ಯರು ೧೧

ದಯಾಳು ರಘುವರ್ಯರು ಸಮಾಧಿಸ್ಥರಾಗಲು
ಬಾಲ್ಯಾವಸ್ಥೆಯಲಿ ಇದ್ದ ರಘೂತ್ತಮರು
ವಿದ್ಯಾವ್ಯಾಸಂಗ ಗುರು ನಿಯಮನದಂತೇಯೆ
ಗೈಯಲಿ ಪೋದರು ಆ ವಿದ್ವಾಂಸನಲ್ಲಿ ೧೨

ಮಣೂರು ಎಂದ್ಹೆಸರು ಉಳ್ಳ ಆ ಊರಲ್ಲಿ
ಘನ ವಿದ್ವನ್ಮಣಿಯಲ್ಲಿ ಕಲಿಯುವಾಗ
ಧನವಂತ ಊರು ನಾಯಕ ರಘೂತ್ತಮರಲ್ಲಿ
ಬಿನ್ನೈಸಿದ ಭೋಜನಕೆ ಬರಬೇಕೆಂದು ೧೩

ಸ್ವಾಮಿಗಳಿಗೆ ಪಾಠ ಹೇಳುವ ವಿಪ್ರನೂ
ಆ ಮನೆಯಲಿ ಊಟಕ್ಕೆ ಬಂದಿದ್ದ
ನೇಮ ಆಹ್ನೀಕ ಮುಗಿಸಿ ಬರಲಿಕ್ಕೇ
ತಾಮಸವು ಆಯಿತು ವಿಲಂಬವು ಸ್ವಲ್ಪ ೧೪

ಸ್ವಾಮಿಗಳ ಬಾಲ್ಯತ್ವ ವಿದ್ಯಾರ್ಥಿತ್ವವು
ಆ ಮನೆಯಲಿ ಗೃಹಸ್ಥನನ್ನೂ ವಿಪ್ರನನ್ನೂ ಮೋಹಿಸಿತು
ತಮ್ಮ ಯೋಗ್ಯತೆ ಸ್ಥಾನ ಮರೆತು ಗರ್ವದಿ ವಿಪ್ರ
ಸ್ವಾಮಿಗಳ ಲೆಕ್ಕಿಸದೆ ಕುಳಿತನು ಭೋಜನಕೆ ೧೫

ಅಂದು ರಾತ್ರಿಸ್ವಪ್ನದಲಿ ರಘುವರ್ಯ ಗುರುಗಳು
ಬಂದು ಪೇಳಿದರ್ತಮ್ಮ ಪ್ರೇಮಿಶಿಷ್ಯರಿಗೆ
ಇಂದಿನಾರಭ್ಯ ಪಾಠವ ನಿಲಿಸು ವಿಪ್ರನಲಿ
ಕುಂದು ಇಲ್ಲದೆ ಹೇಳುವೆ ನೀನೇವೆ ೧೬

ಈ ರೀತಿ ಸ್ವಪ್ನವು ಆಗೇ ರಘೂತ್ತಮರು
ವಿಪ್ರನಲಿ ಪಾಠಕ್ಕೆ ಪೋಗುವುದು ತೊರೆದು
ಆ ಪಂಡಿತವರ್ಯರಿಗಿಂತ ಉತ್ತಮ ರೀತಿ
ತಾಪೇಳಿದರು ಪಾಠ ಮಠದಿ ಶಿಷ್ಯರಿಗೆ ೧೭

ಗುರುಗಳಲಿ ಹರಿ ಇಷ್ಟ ಗುರುದ್ವಾರ ಒಲಿವನು
ಗುರು ಅನುಗ್ರಹ ಇದ್ದರೇ ಹರಿ ಅನುಗ್ರಹ
ಗುರು ಪ್ರಸಾದವ ಪಡೆದ ಶ್ರೀ ರಘೂತ್ತಮರಿಗೆ
ಶಾಸ್ತ್ರ ಜ್ಞಾನವು ಪ್ರಜ್ವಲಿಸಿತು ಪೂರ್ಣದಲಿ ೧೮

ಜಾತಾಪರೋಕ್ಷಿಗಳು ದೇವತಾಂಶರಿಗೇವೆ
ಜ್ಞಾತವಾಗುವ ಪದ ವಾಕ್ಯದ ತಾತ್ಪರ್ಯ
ಈ ದೇವತಾಂಶ ಶ್ರೀ ರಘೂತ್ತಮ ಗುರುವರರು
ಸಂದೇಹವಿಲ್ಲದೆ ತಿಳಿದು ಬೋಧಿಸಿದರು ೧೯

ತನ್ನಲ್ಲಿ ವ್ಯಾಸಂಗ ಪೂರೈಸದ ಬಾಲ
ಏನು ಪಾಠವ ಹೇಳೇ ಶಕ್ತನೆಂದರಿಯೆ
ಕಾಣದೆ ಮರೆಯಾಗಿ ನಿಂತು ಆ ವಿಪ್ರ
ಶ್ರವಣ ಮಾಡಿದ ಗುರುಗಳು ಬೋಧಿಸುವುದು ೨೦

ಸಂದಿಗ್ಧವಾಗಿ ತನಗಿದ್ದ ವಿಷಯಗಳನ್ನೂ
ಅದ್ಭುತ ರೀತಿಯಲಿ ಅನಾಯಾಸವಾಗಿ
ಅತಿವಿಶದದಿ ರಘೂತ್ತಮರು ಪೇಳಲು ಕೇಳಿ
ಬಂದು ಮುಂದೆ ನಿಂತು ನಮಿಸಿದನು ವಿಪ್ರ ೨೧

ತಾನು ಮಾಡಿದ ಉದಾಸೀನ ಅಪರಾಧಗಳ
ಘನ ದಯದಿ ಕ್ಷಮಿಸಬೇಕೆಂದು ಬೇಡುತ್ತ
ತನು ದಂಡವತ್ ಭುವಿಯಲಿ ಬಿದ್ದು ನಮಿಸಿದನು
ದೀನದಯಾಳು ಗುರು ಅಭಯ ನೀಡಿದರು ೨೨

ದಿಗ್ವಿಜಯ ಮಾಡುತ್ತ ಅಲ್ಲಲ್ಲಿ ದುರ್ಮತ
ದುರ್ವಾದಿಗಳನ್ನು ಖಂಡಿಸಿ ಸಿದ್ಧಾಂತ
ತತ್ವಬೋಧಿಸಿ ಜಗತ್ ಪ್ರಖ್ಯಾತರಾದರು
ಶಾಶ್ವತ ನಿಜಸುಖ ಮಾರ್ಗದರ್ಶಕರು ೨೩

ರಘುವರ್ಯ ಗುರುಗಳು ನೇರಲ್ಲು ಸ್ವಪ್ನದಲು
ರಘೂತ್ತಸಮರಿಗೆ ಪೇಳಿದ ಪ್ರಕಾರ
ದಿಗ್ವಿಜಯ ಸಮಯದಿ ಸಂಸ್ಥಾನಕ್ಕೆ ಭೂಷಣ
ಬಗೆಬಗೆ ವಸ್ತು ಪರಿವಾರ ಸೇರಿಸಿದರು ೨೪

ವೇದಾಂತ ಸಾಮ್ರಾಜ್ಯ ರಾಜಗುರುರಾಜರು
ಹಸ್ತಿ ಘೋಟಕ ಕೊಂಬು ವಾದ್ಯಮೇಳಗಳು
ಸುತ್ತಲೂ ವಿದ್ವಜ್ಜನ ವೇದಘೋಷದ ಮಧ್ಯ
ಮುತ್ತು ಪಲ್ಲಕ್ಕಿಯೊಳು ಕುಳಿತರು ದೇವರ ಸಹ ೨೫

ಪೋದ ಕಡೆಗಳಲಿ ದಿಗ್ವಿಜಯ ರಾಮಾರ್ಚನೆ
ವಿದ್ವಜ್ಜನ ಸಭೆ ವಾಕ್ಯಾರ್ಥ ಪಾಠ
ಸಿದ್ಧಾಂತ ಸ್ಥಾಪನೆ ದುರ್ಮತ ನಿರಾಸವು
ಸಾಧು ಸಜ್ಜನರ ಉದ್ಧಾರ ಪ್ರತಿದಿನವು ೨೬

ಬಾದರಾಯಣ ನಿರ್ಣೀತ ರೀತಿಯಲಿ
ಮಧ್ವರಾಯರು ಬರೆದ ಗ್ರಂಥಗಳಿಗೆ
ಅದ್ಭುತ ಟೀಕೆ ಜಯತೀರ್ಥರು ಮಾಡಿಹರು
ಸದ್ಭಾವ ಬೋಧವು ರಘೂತ್ತಮರ ರಚನೆ ೨೭

ಟೀಕಾ ಭಾವಬೋಧರು ಎಂದು ಪ್ರಖ್ಯಾತ
ರಘೂತ್ತಮರ ಎಲ್ಲೆಲ್ಲೂ ವಿದ್ವಜ್ಜನರು
ನಗರ ಪಟ್ಟಣ ಗ್ರಾಮ ನಾಯಕರು ಪ್ರಮುಖರು
ಸ್ವಾಗತ ಅರ್ಪಿಸಿ ಪೂಜಿಸಿದರು ಮುದದಿ ೨೮

ಪುಟ್ಟಿದಾರಭ್ಯ ಹರಿ ಪಾದ ಕಮಲದಿ ಮನ
ಇಟ್ಟು ರಘುವರ್ಯರು ಕೊಟ್ಟ ಸಂಸ್ಥಾನ

ಪಟ್ಟ ಆಳಿ ಸರ್ವೋತ್ತಮನನ್ನ ಸೇವಿಸಿ
ಶ್ರೇಷ್ಠತಮ ಸುಖಪ್ರದ ಮಾರ್ಗ ತೋರಿಹರು ೨೯

ಹದಿನೈದು ನೂರು ಹದಿನೇಳು ಶಕ ಮನ್ಮಥ
ಶುದ್ಧ ಏಕಾದಶಿ ಪೌಷ್ಯದಲಿ ಹರಿಯ
ಪಾದಸೇರಿದರು ಸಂಸ್ಥಾನ ಆಡಳಿತ
ವೇದವ್ಯಾಸ ತೀರ್ಥರು ಮಾಡಲಿಕೆ ಬಿಟ್ಟು ೩೦

ಮತ್ತೊಂದು ಅಂಶದಲಿ ವೃಂದಾವನದೊಳು
ಹತ್ತಾವತಾರ ಹರಿ ಧ್ಯಾನಪರರಿಹರು
ಭಕ್ತರು ಅಲ್ಲಲ್ಲಿ ಅರ್ಚಿಸಿ ಸೇವಿಸುವ
ಮೃತ್ತಿಕೆಯಲ್ಲು ಸಹ ಇದ್ದು ಪಾಲಿಪರು ೩೧

ವೃಂದಾವನ ತಿರುಕೋಯಿಲೂರ್ ಮಣಂಪೂಂಡಿ
ಎಂದು ಕರೆಯಲ್ಪಡುವ ಗ್ರಾಮದಲಿ ಇಹುದು
ಇಂದುಶೇಖರ ಚಾಪದಿಂದ ಉದಿಸಿದ ಪುಣ್ಯ
ನದಿಯು ಹರಿಯುತ್ತೆ ಮಜ್ಜನವು ಅಘಹರವು ೩೨

ಮಂದಜಾಸನ ಮೊದಲಾದ ಸುರವೃಂದ
ವಂದಿತ ರಮಾಪತಿಯು ರಘೂತ್ತಮಾಂತಸ್ಥ
ವೃಂದಾವನದಿ ಗುರು ಹರಿಭಕ್ತಿ ಪೂರ್ವಕದಿ
ಬಂದು ಸೇವಿಪರಿಗೆ ವಾಂಛಿತಗಳೀವ ೩೩

ಗಾಳಿ ಬಿಸಿಲು ಮಳೆ ಮಂಜುಗಳ ಲೆಕ್ಕಿಸದೆ
ಮಾಲೋಲನ ಧ್ಯಾನಿಸುತ ವೃಂದಾವನದೊಳು
ಕುಳಿತಿಹರು ಪರಮ ಕಾರುಣಿಕ ಈ ಗುರುಗಳು
ಪಾಲಿಸುತಿಹರು ಎಮ್ಮ ಅನುಗಾಲ ದಯದಿ ೩೪

ವೃಂದಾವನ ದರ್ಶನ ತೀರ್ಥ ನಮಸ್ಕಾರ
ಪ್ರದಕ್ಷಿಣೆ ಅರ್ಚನೆ ಹಸ್ತೋದಕ
ವಂದನೆ ಸೇವಾದಿಗಳ ಮಾಳ್ಪ ಸಜ್ಜನರ
ಕುಂದು ಕೊರತೆಗಳಳಿವ ಇಷ್ಟಾರ್ಥ ಪ್ರದರು ೩೫

ಪಿಲ್ಲಿ ಶೂನ್ಯಾದಿ ವಾಮಾಚಾರ ಪೀಡೆಗಳು
ಗಾಳಿದುಷ್ಟಗ್ರಹ ಪೈಶಾಚಾದಿಗಳು
ಕಳವಳಿಕೆ ಬುದ್ಧಿಭ್ರಮೆ ವ್ಯಾಧಿದಾರಿದ್ರ್ಯಾದಿ
ಎಲ್ಲ ದೋಷಗಳನ್ನ ಪರಿಹರಿಸುವರು ೩೬

ಸವೈರಾಗ್ಯ ಜ್ಞಾನವ ಭಕುತಿ ಅಪರೋಕ್ಷವ
ಸೇವಿಪ ಯೋಗ್ಯರಿಗೆ ಒದಗಿಸಿ ಉದ್ಧರಿಸಿ
ಸರ್ವವಿಧದಲು ಭಾಗ್ಯ ಆಯುಷ್ಯ ಆರೋಗ್ಯ
ಈವರು ಭಕ್ತಯಲಿ ಸ್ಮರಿಸಿ ವಂದಿಪರ್ಗೆ ೩೭

ಉತ್ತಮ ತರಗತಿ ದೇವತಾಂಶರು ಇವರು
ಮಧ್ವಮತದುಗಾಬ್ಧಿ ಪೂರ್ಣಚಂದ್ರ
ಹತ್ತು ತಿಂಗಳು ಹೊತ್ತು ಹೆತ್ತ ಉತ್ತಮ ಸಾಧ್ವಿ
ಮಾತೆಯ ಭಾಗ್ಯ ಏನೆಂಬೆ ಇಂಥವರ ೩೮

ಸೂರಿ ಸುರವರ ಶ್ರೀ ರಘೂತ್ತಮರ ಚರಣದಲಿ
ಶರಣಾದೆ ಎನ್ನಯ ಎನ್ನಸೇರಿದವರ
ಪರಿಪರಿ ಪೀಡೆಗಳ ಪಾಪಗಳ ಅಳಿದು
ಕಾರುಣ್ಯ ಔದರ್ಯದಿ ಪಾಲಿಸುವರು ೩೯

ಸರಿದ್ವರ ಪಿನಾಕಿನಿಯಲಿ ಕೇಶವ ಜಗವ
ಈರಡಿಯಲಿ ಅಳೆವ ತ್ರಿವಿಕ್ರಮನು ಶಿರಿಯು
ಇರುತಿಹರು ಹನುಮ ಶಿವಸ್ಕಂಧ ತೀರಗಳಲಿ
ಶರಣೆಂಬೆ ಇವರೆಲ್ಲರ್ಗು ಶ್ರೀ ರಘೂತ್ತಮರಿಗೂ ೪೦

ಕಮಲಭವಪಿತ 'ಶ್ರೀ ಪ್ರಸನ್ನ ಶ್ರೀನಿವಾಸ '
ಕಮಲಾಯುತ ವಿಶ್ವ ರೂಪ ತ್ರಿವಿಕ್ರಮಗೂ
ಭೀಮ ಶಿವಸ್ಕಂಧರಿಗು ಪ್ರಿಯತಮ ರಘೂತ್ತಮರ
ಈ ಮಂಗಳ ಚರಿತ ಶ್ರೀ ಕೃಷ್ಣಾರ್ಪಿತವು ೪೧ ಪ

॥ ಇತಿ ಶ್ರೀ ರಘೂತ್ತಮ ತೀರ್ಥ ಚರಿತ್ರೆ ಸಂಪೂರ್ಣಂ ॥

ಶ್ರೀ ರಘೂತ್ತಮ ಗುರು ಸ್ತೋತ್ರ

೧೨೩

ಗುರುರಾಜ ರಘೂತ್ತಮ ಗುರುರಾಜ
ಗುರುರಾಜ ನಮೋ ನಮೋ ನಿನ್ನ ಪಾದ
ಸರಸಿಜಯುಗಳದಿ ನಾ ಶರಣು ಅಹ
ಧರಣಿಜಾಪತಿ ರಾಮ ಭದ್ರಗೆ ಪ್ರಿಯ ನೀನು
ಕರುಣದಿ ಸಲಹೆನ್ನ ದುರಿತಗಳಳಿದು ಪ

ನಿರ್ವ್ಯಾಜ ಕರುಣಿ ರಘುವರ್ಯ ಗುರು
ವರ್ಯ ಸುಮೇಧರ ದಿವ್ಯ ಚಾರು
ತೋಯಜ ಕರದಿಂದ ಉದಯನಾಗಿ
ಯ್ಯೆದಿದಿ ನಿಗಮ ಸಾಮ್ರಾಜ್ಯ ಅಹ
ಮಾಯೇಶ ಕಾಳೀಶ ಗುರುಗಳ ಪ್ರಿಯ ಬಾಲ
ವಯಸ್ಸಲ್ಲೇ ಉದ್ದಾಮ ಪಂಡಿತನಾದಿಯೋ ೧

ಬದರೀಶ ನಿರ್ಣೀತತತ್ವ ಅರ್ಥ
ವಿಸ್ತಾರ ಮಾಡಿದ ಮಧ್ವ ಟೀಕೆ
ಜಯತೀರ್ಥ ಬರೆದ ತದ್ಭಾವ ಪೇಳಿ
ಒದಗಿಸಿದೆಯೊ ಜ್ಞಾನ ಸುಖವ ಅಹ
ಮುದ ಜ್ಞಾನ ಸೌಭಾಗ್ಯ ಸಾಧು ವೈಷ್ಣವತನ
ಇತ್ತು ಪಾಲಿಪುದೆನ್ನ ಕುಂದುಗಳೆಣಿಸದೆ ೨

ಧರೆಯಲ್ಲಿ ದಕ್ಷಿಣಕಾಶಿ ಸ್ವರ್ಗ
ಧರೆಯಳದವನ ಸೇವಿಸಿ ಗಂಗಾ
ಧರಷಡಾನನ ಇಲ್ಲಿ ವಾಸಿಸುವ ಈ
ಕ್ಷೇತ್ರ ವೃಂದಾವನ ವಾಸಿ ಅಹ
ಪರಮೇಶ ಕೇಶವ ಪ್ರಿಯಾ ಪಿನಾಕಿನಿಯಿಂದ್ರಾ
ತೀರ ಮಧ್ಯದಿ ತಪಗೈದು ಭಕ್ತರ ಕಾಯ್ವಿ ೩

ಸುರವೃಂದ ಶ್ರೇಷ್ಠ ನೀನಹುದು ಎನ್ನ
ಪರಿ ಪರಿ ಬಾಧೆಯ ತರಿದು ಸರ್ವ
ಕೊರತೆನೀಗಿಸಿ ಸಿರಿ ಇತ್ತು ಹರಿ
ಗುರು ಭಕ್ತಿ ಬೆಳೆಸಿ ಪಾಲಿಪುದು ಅಹ
ಹರ ಸಮೀಪಕೆ ಒಳ್ಳೆ ಸಾಧನ ಸರ್ವದಾ
ಕಾರುಣ್ಯದಲಿ ಎನ್ನೊಳ್ ನಿಂತು ಮಾಡಿಸೋ ಗುರೋ ೪

ರಾಮನೃಕೇಸರಿ ವ್ಯಾಸ ಸತ್ಯ
ಭಾಮ ರುಕ್ಮೀಣಿ ದೇವಿ ಅರಸ ಭೂಮ
ಶ್ರೀಮಂತ ಕ್ಷೀರಾಬ್ಧಿವಾಸ ಮಧ್ವ
ಭೀಮಹನುಮ ವಂದ್ಯ ಶ್ರೀಶ ಅಹ
ಹೇಮಗರ್ಭನ ತಾತ 'ಪ್ರಸನ್ನ ಶ್ರೀನಿವಾಸ'
ರಮೆಯರಸನ ಪ್ರಿಯತಮ ಜೀಯ ೫

॥ ಶ್ರೀ ಕೃಷ್ಣಾರ್ಪಣಮಸ್ತು ॥

ಶ್ರೀ ಸತ್ಯಪ್ರಿಯ ತೀರ್ಥ ವಿಜಯ

೧೨೪

ಸತ್ಯಪ್ರಿಯ ತೀರ್ಥಾರ್ಯರಂಘ್ರಿ ವೃತತಿಜ ಯುಗ್ಮ
ನಿತ್ಯ ಸ್ಮರಿಸುವೆ ಎನ್ನ ಹಿತದಿ ಕಾಯುತಿಹರು ।
ಸತ್ಯಾರುಕ್ಮಿಣೀ ರಮಣ ವ್ಯಾಸ ನರಹರಿ ಹಯ
ವಕ್ತ್ರ ಶ್ರೀರಾಮನಿಗೆ ಪ್ರಿಯತರ ಮಹಂತ ಪ

ಅಶೇಷಗುಣಗಣಾಧಾರ ವಿಭು ನಿರ್ದೋಷ
ಹಂಸ ಶ್ರೀ ಪತಿಯಿಂದುದಿತ ಗುರುಪರಂಪರೆಗೆ
ಬಿಸಜಭವ ಸನಕಾದಿ ದೂರ್ವಾಸ ಮೊದಲಾದ
ವಂಶಜರು ಅಚ್ಯುತ ಪ್ರೇಕ್ಷರಿಗೆ ನಮಿಪೆ ೧

ಪುರುಷೋತ್ತಮ ತೀರ್ಥ ಅಚ್ಯುತ ಪ್ರೇಕ್ಷರ
ಕರಕಮಲ ಜಾತರೂ ಮಹಾಭಾಷ್ಯಕಾರರು
ವರವಾಯು ಅವತಾರ ಆನಂದ ತೀರ್ಥರ
ಚರಣವನಜದಿ ನಾ ಸರ್ವದಾ ಶರಣು ೨

ಪದ್ಮನಾಭ ನರಹರಿ ಮಾಧವ ಅಕ್ಷೋಭ್ಯ
ಅದ್ವಿತೀಯ ಸುಸ್ಪಷ್ಟ ಟೀಕಾಗಳಿತ್ತ
ಮೇಧಾ ಪ್ರವೀಣ ಜಯ ತೀರ್ಥಾರ್ಯರಿಗೂ
ವಿದ್ಯಾಧಿರಾಜರಿಗೂ ನಮೋ ನಮೋ ಶರಣು ೩

ವಿದ್ಯಾಧಿರಾಜರಿಗೆ ಶಿಷ್ಯರು ಈರ್ವರು
ಮೊದಲನೆಯವರು ರಾಜೇಂದ್ರ ತೀರ್ಥಾರ್ಯ
ನಂತರ ಕವೀಂದ್ರ ತೀರ್ಥಾರ್ಯ ಇವರುಗಳ
ಪಾದಾರವಿಂದಗಳಿಗೆ ನಾ ನಮಿಪೆ ೪

ವಾಗೀಶ ತೀರ್ಥರು ಕವೀಂದ್ರ ಹಸ್ತಜರು
ವಾಗೀಶ ಕರಜರು ರಾಮಚಂದ್ರಾರ್ಯ
ಈ ಗುರುಗಳಿಗೀರ್ವರು ಶಿಷ್ಯರು ಇಹರು
ಬಾಗುವೇ ಇವರ್ಗಳಿಗೆ ಸಂತೈಸಲೆಮ್ಮ ೫

ಮೊದಲನೆಯವರು ವಿಭುದೇಂದ್ರ ತೀರ್ಥಾರ್ಯರು
ವಿದ್ಯಾನಿಧಿ ತೀರ್ಥಾರ್ಯರು ಅನಂತರವು
ವಿದ್ಯಾನಿಧಿ ಸುತ ರಘುನಾಥ ತೀರ್ಥರು
ವಂದಿಸುವೆ ಈ ಸರ್ವಗುರು ವಂಶಕ್ಕೆ ೬

ರಘುನಾಥ ಕರಕಮಲ ಜಾತ ರಘುವರ್ಯರಿಗೂ
ರಘೂತ್ತಮ ವೇದವ್ಯಾಸ ವಿದ್ಯಾಧೀಶ
ವೇದನಿಧಿ ಸತ್ಯವ್ರತ ಸತ್ಯನಿಧಿ ಸತ್ಯನಾಥ
ಸತ್ಯಾಭಿನವ ಸತ್ಯಪೂರ್ಣರಿಗೆ ನಮಿಪೆ ೭

ಸತ್ಯಪೂರ್ಣ ತೀರ್ಥರಿಗೆ ಶಿಷ್ಯರು ಇಬ್ಬರು
ಸತ್ಯವರ್ಯ ತೀರ್ಥರು ಮೊದಲನೆಯವರು

ಸತ್ಯವಿಜಯ ತೀರ್ಥರು ಎರಡನೆ ಶಿಷ್ಯರು
ವಂದನಾದಿ ಮರ್ಯಾದೆ ಮಾಳ್ಪುದು ಜೇಷ್ಠರಿಗೆ ೮

ಸತ್ಯವರ್ಯ ತೀರ್ಥರೇ ಮುಂದಕ್ಕೆ ಸತ್ಯಪ್ರಿಯ
ರೆಂದು ಕರೆಸಿಕೊಂಡರು ವಿರಾಗಿಕೋವಿದರು
ಸುಂದರ ದೇಶವು ಗೋದಾವರೀ ಕ್ಷೇತ್ರಕ್ಕೆ
ಸತ್ತತ್ವ ಬೋಧಿಸಲು ವಿಜಯ ಮಾಡಿದರು ೯

ಸತ್ಯ ವಿಜಯರು ಗುರು ಆಜ್ಞೆಯಿಂ ತಾವೂನೂ
ತತ್ವ ಬೋಧ ಸಂಚಾರ ಮಾಡಿದರು ಆಗ
ಸತ್ಯಪೂರ್ಣ ತೀರ್ಥರು ತಾವೇ ಕರ್ನಾಟಕ
ಪ್ರಾಂತ್ಯಕ್ಕೆ ಹೊರಟರು ದಿಗ್ವಿಜಯಕಾಗಿ ೧೦

ಸತ್ಯವರ್ಯ ತೀರ್ಥರು ಭಾವಿ ಸತ್ಯಪ್ರೀಯರು
ಗೋದಾವರೀ ತೀರ ವಿಜಯ ಮಾಡುವಾಗ
ಭೂದೇವ ನರದೇವಪುರಿ ನಗರ ಪ್ರಮುಖರು
ಉತ್ಸಾಹದಿ ಭಕ್ತಿ ಮರ್ಯಾದೆ ಮಾಡಿದರು ೧೧

ಬಿಸಾಜಿಪಂತ ನಾರಾಯಣ ನರಳೀಪಂತ
ವಿಶ್ವಾಸದಿ ಇಂಥಾ ಪ್ರಮುಖ ಜನರು
ಈ ಸಂನ್ಯಾಸ ರತ್ನ ಸತ್ಯಪ್ರಿಯ ಆರ್ಯರಿಗೆ
ಸ್ವಾಗತ ಪೂಜೆ ಮಾಡಿದ್ದು ಖ್ಯಾತ ೧೨

ಸಜ್ಜನರು ದೊಡ್ಡವರು ನಾಯಕರು ಗುರುಗಳ
ಪೂಜಿಸುವ ಸಮಯ ಬಂದು ಅಲ್ಲಿ ಮೊದಲನೆ
ಬಾಜೀರಾವ್ ಎಂಬಂಥ ಅರಸನು ಅವನೂ ಸಹ
ನಿಜ ಭಕ್ತಿ ಭಾವದಿಂದಲಿ ಪೂಜಿಸಿದ ೧೩

ತಾನು ಪೂಜಿಸಿ ಗ್ರಾಮ ದಾನ ಮಾಡಿದ್ದಲ್ಲದೆ
ಘನ ಮಹಾತ್ಮ ಸ್ವಾಮಿಗಳ ಪೂಜಿಸಿರೆಂದು
ತ್ನನ ಮುದ್ರೆ ಪತ್ರ ಬೇರೆ ರಾಜರ್ಗೆ ಕಳುಹೆಂದು
ತನ್ನ ಸಹ ಬಂದಿದ್ದ ಮಂತ್ರಿಗೆ ಹೇಳಿದನು ೧೪

ಗೋದಾವರೀ ತೀರ ಸ್ಥಳಗಳಲಿ ಈ ರೀತಿ
ಸತ್ಯಪ್ರಿಯ ಆರ್ಯರು ಸಂಚರಿಸಲಾಗ
ಸತ್ಯ ಪೂರ್ಣ ತೀರ್ಥರು ದಕ್ಷಿಣದಲ್ಲಿ
ಕ್ಷೇತ್ರಾಟನದಿ ಇರುತಿದ್ದರು ಮುದದಿ ೧೫

ಸತ್ಯಪೂರ್ಣರಿರುತ್ತಿದ್ದ ಸಂಚಾರ ಸ್ಥಳದ
ಹತ್ತಿರವೆ ಕೊಂಗು ನಾಡು ತೋಂಡ ದೇಶ
ಸತ್ಯವಿಜಯರು ಅಲ್ಲಿ ಸಂಚರಿಸಿ ಬಂದರು
ಸತ್ಯ ಪೂರ್ಣರು ಹರಿ ಪಾದ ಸೇರುವಾಗ ೧೬

ಸತ್ಯವಿಜಯರ ಕೈಗೆ ಸಂಸ್ಥಾನ ಬರಲು
ಸತ್ಯಭಿನವ ಸತ್ಯಪೂರ್ಣರ ಪದ್ಧತಿ
ಯಂತೆ ಸಂಸ್ಥಾನ ಆಡಳಿತ ಮಾಡುತ್ತಾ
ಮತ್ತೂ ತೋಂಡ ದೇಶ ಸಂಚಾರಕ್ಕೆ ಹತ್ತಿದರು ೧೭

ಎನ್ನ ಎನ್ನಂಥವರ ಅನಂತ ಅಪರಾಧಗಳ
ಘನ ದಯದಿ ಕ್ಷಮಿಸಿ ಬಹು ಕೃಪದಿ ಪಾಹೀ
ವನರುಹಾಸನಪಿತ ಮಧ್ವಸ್ಥ ಶ್ರೀಪತಿ
'ಪ್ರಸನ್ನ ಶ್ರೀನಿವಾಸ' ಪ್ರಿಯ ಸತ್ಯಪ್ರಿಯ ಆರ್ಯ ೧೮ ಪ

೧೨೪–೧

ಸತ್ಯಪ್ರಿಯ ತೀರ್ಥಾರ್ಯರಂಘ್ರಿ ವೃತತಿಜ ಯುಗ್ಮ
ನಿತ್ಯ ಸ್ಮರಿಸುವೆ ಎನ್ನ ಹಿತದಿ ಕಾಯುತಿಹರು ।
ಸತ್ಯಾರುಕ್ಮಿಣೀ ರಮಣ ವ್ಯಾಸ ನರಹರಿ ಹಯ
ವಕ್ತ್ರ ಶ್ರೀರಾಮನಿಗೆ ಪ್ರಿಯತರ ಮಹಂತ ಪ

ಸತ್ಯವರ್ಯ ತೀರ್ಥರು ಭಾವಿ ಸತ್ಯಪ್ರಿಯರು
ಗೋದಾವರಿಯಿಂದ ರಾಯಚೂರು ಪೋಗಿ
ಆ ದೇಶ ಅಧಿಪತಿ ಪೀತಾಸಿಂಗನಿಗೆ
ಒದಗಿ ಅನುಗ್ರಹಿಸಿ ಬಂದರು ಮೇಲುಕೋಟೆ ೧

ಮೇಲುಕೋಟೆ ರಾಜನು ಸ್ವಾಮಿಗಳಲಿ ಬಹು
ಭಕ್ತಿಯಿಂದಲಿ ಪೂಜೆ ಮಾಡಿದನು ಆಗ್ಗೆ
ಮೇಲುಕೋಟೆ ಗಿರಿ ಮೇಲೆ ನರಸಿಂಹನ ಗುಡಿ
ಬೀಗ ಹಾಕಿತ್ತು ಸ್ವಾಮಿಗಳು ಹೋದಾಗ ೨

ಶ್ರೀ ಸ್ವಾಮಿಗಳು ಬಾಗಿಲ ಸ್ಪರ್ಶ ಮಾಡಿದರು
ಸ್ಪರ್ಶಮಾತ್ರದಿ ಬಾಗಿಲು ತೆರೆಯಿತು ಆಗ
ಶ್ರೀಸ್ವಾಮಿ ನರಸಿಂಹನ ಮುದದಿ ಪೂಜಿಸಲು
ಶ್ರೀ ಸ್ವಾಮಿಗಳ ಅರಸ ಪೂಜಿಸಿದನು ೩

ತರುವಾಯ ಶ್ರೀರಂಗಪಟ್ಟಣಕೆ ಬಂದು
ಶ್ರೀರಂಗನಾಥನ್ನ ಸೇವಿಸಲು ಮುದದಿ
ಶ್ರೀರಂಗಪಟ್ಟಣದ ಅರಸನು ಭಕ್ತಿಯಿಂ
ಪರಿಪರಿವಿಧದಿ ಕಾಣಿಕೆಗಳ ಅರ್ಪಿಸಿದ ೪

ರತ್ನ ಖಚಿತ ಪೂಜಾ ಸಾಧನಗಳು ಸ್ವರ್ಣ
ರಜತ ದಂಡಗಳು ಶ್ವೇತ ಛತ್ರ
ಇಂಥಾವು ಸಂಸ್ಥಾನ ಚಿಹ್ನೆಗಳ ರಾಜನು
ಇತ್ತನು ಶ್ರೀಗಳಿಗೆ ಭಕ್ತಿಪೂರ್ವಕದಿ ೫

ನಂತರ ಸ್ವಾಮಿಗಳು ಶ್ರೀತುಂಗಭದ್ರಾದಿ
ತೀರ್ಥಾಟನ ಮಾಡಿ ಗದ್ವಾಲು ಸೇರಿ
ಮತ್ತೆ ತೋಂಡ ದೇಶದ ಆರ್ಕಾಟಿಗೆ ಹೋಗಿ
ಆದೇಶ ಮಂತ್ರಿಯಿಂದ ಕೊಂಡರು ಸೇವ ೬

ಈ ಸಮಯ ಶ್ರೀ ಸತ್ಯವಿಜಯ ತೀರ್ಥಾರ್ಯರು
ಸಂಸ್ಥಾನ ಸಹ ಹತ್ತಿರ ಪ್ರಾಂತದಲ್ಲಿ
ಶಿಷ್ಯೋದ್ಧಾರಕ್ಕೆ ವಿಜಯ ಮಾಡುತ್ತಿರಲು
ಶ್ರೀ ಸತ್ಯವರ್ಯರು ಬಂದರು ಆರಣಿಗೆ ೭

ಆರಣೀರಾಯನು ವೇಂಕಟನು ಸ್ವಾಮಿಗಳ
ಚರಣಕ್ಕೆ ಎರಗಿ ಪೂಜೆಯನ್ನು ಸಲ್ಲಿಸೇ

ವಸ್ತ್ರಾಭರಣ ಹೇಮಾಭೀಷೇಕಾದಿಗಳ
ಅರ್ಪಿಸಿದ ಭಕ್ತಿಯಿಂ ಕೃಷ್ಣಾಜಿಪಂತ ೮

ಈ ರೀತಿ ಪೂಜೆ ಮರ್ಯಾದೆಗಳ ತಾ ಕೊಂಡು
ಹರಿ ಕೃಷ್ಣ ಶ್ರೀಶನಿಗೆ ಸಮಸ್ತ ಅರ್ಪಿಸುತ
ಹೊರಟರು ಮುಂದಕ್ಕೆ ದಿಗ್ವಿಜಯ ಕ್ರಮದಲ್ಲಿ
ಪುರಿ ಜನರು ಜಯ ಘೋಷ ಮಾಡುತಿರಲು ೯

ಎನ್ನ ಎನ್ನಂಥವರ ಅನಂತ ಅಪರಾಧಗಳ
ಘನ ದಯದಿ ಕ್ಷಮಿಸಿ ಬಹು ಕೃಪದಿ ಪಾಹೀ
ವನರುಹಾಸನಪಿತ ಮಧ್ವಸ್ಥ ಶ್ರೀಪತಿ
'ಪ್ರಸನ್ನ ಶ್ರೀನಿವಾಸ' ಪ್ರಿಯ ಸತ್ಯಪ್ರಿಯ ಆರ್ಯ ೧೦ ಪ

೧೨೪-೨

ಸತ್ಯಪ್ರಿಯ ತೀರ್ಥಾರ್ಯರಂಘ್ರಿ ವೃತತಿಜ ಯುಗ್ಮ
ನಿತ್ಯ ಸ್ಮರಿಸುವೆ ಎನ್ನ ಹಿತದಿ ಕಾಯುತಿಹರು ।
ಸತ್ಯಾರುಕ್ಮಿಣೀ ರಮಣ ವ್ಯಾಸ ನರಹರಿ ಹಯ
ವಕ್ತ್ರ ಶ್ರೀರಾಮನಿಗೆ ಪ್ರಿಯತರ ಮಹಂತ ಪ

ಆರಣೀ ಸಜ್ಜನರ ಸೌಭಾಗ್ಯ ಏನೆಂಬೆ
ಸೂರಿವರ ಸತ್ಯವರ್ಯ ಭಾವಿ ಸತ್ಯಪ್ರಿಯರ
ಆರಾಧಿಸಿ ಕಳುಹಿಸಿದ ಸ್ವಲ್ಪ ಕಾಲದಲೆ
ಆರಣಿಗೆ ಬಂದರು ಸತ್ಯವಿಜಯಾರ್ಯ ೧

ಸಂಸ್ಥಾನ ಮೂರ್ತಿಸ್ಥ ಹರೀಪೂಜೆ ವೈಭವವು
ನಿತ್ಯ ಪ್ರವಚನ ಪಾಠ ಕೀರ್ತನೆ ಏನೆಂಬೆ
ಸತ್ಯವಿಜಯರು ಯುಕ್ತ ಕಾಲದಲಿ ದೇಹ
ಅದಾರುಢ್ಯ ಹೊಂದಿದರು ರಾಜಗೆ ಹೇಳಿದರು ೨

ತಮ್ಮ ತರುವಾಯ ಸಂಸ್ಥಾನ ಸರ್ವಾಡಳಿತ
ಶ್ರೀಮನೋಹರ ಹರಿಪ್ರಿಯರು ಸತ್ಯವರ್ಯ
ಸುಮನೋಹರ ಸತ್ಯಪ್ರಿಯ ತೀರ್ಥ ನಾಮದಲಿ
ರಮಾರಮಣನ ಸೇವೆಗೆ ವಹಿಸಬೇಕೆಂದು ೩

ಆದ ಕಾರಣ ಆ ಸ್ವಾಮಿಗಳ ಕರೆತರಿಸಿ
ಭಕ್ತಿ ವಿನಯದಿ ಮಠವ ಒಪ್ಪಿಸಬೇಕೆಂದು
ಹಿತದಿ ಆಜ್ಞಾಪಿಸಿ ಹರಿಪುರಯ್ದೈದಿದರು
ಚೈತ್ರ ಕೃಷ್ಣ ಪುಣ್ಯದಿನ ಏಕಾದಶಿ ದ್ವಾದಶಿಲಿ ೪

ಆರಣೀರಾಜನು ಸತ್ಯವರ್ಯ ತೀರ್ಥರಲಿ
ಅರಿಕೆ ಮಾಡಿ ಸ್ವಾಮಿಗಳು ಕೆಲವು ದಿನಮೇಲ್
ಆರಣಿಗೆ ಪೋದರು ಶ್ರೀಮಠದ ಆಡಳಿತ
ಹರಿ ಪ್ರೀತಿ ಸೇವೆಗೆ ಕೊಂಡರು ತಾವು ೫

ಮೊದಲೇವೆ ಶ್ರೀ ಸತ್ಯವರ್ಯ ತೀರ್ಥರ ಮಠ
ಸಂಸ್ಥಾನ ವೈಭವದಿ ಪ್ರಕಾಶಿಸುತ್ತಿತ್ತು
ಸತ್ಯ ವಿಜಯರ ಕೋರಿಕೆಯಂತೆ ಈವಾಗ
ಹೊಂದಿದರು ಸತ್ಯವಿಜಯರ ಸಂಸ್ಥಾನ ೬

ಸತ್ಯಾಭಿನವರ ಪದ್ಧತಿಯಲ್ಲಿ ಶ್ರೀಮಠ
ಸತ್ಯಪೂರ್ಣ ಸತ್ಯವಿಜಯರಿಂದ ವೈಭವದಿ
ಇದ್ದ ಆಮಠ ಪೀಠ ಅಲಂಕರಿಸಿದರೀಗ
ಸತ್ಯವರ್ಯ ವೈರಾಗ್ಯ ನಿಧಿಯು ಶ್ರೀಮಾನ್ ೭

ಬಾದರಾಯಣ ರಾಮ ಯದುಪತಿಯ ಸೇವೆಗೆ
ಪ್ರೀತಿಗೆ ಸ್ವಾಮಿಗಳು ಮಠವನ್ನು ಹೊಂದಿ
ಸತ್ಯವಿಜಯರು ಕೋರಿದಂತೆ ತಮ್ಮಯನಾಮ
ಸತ್ಯಪ್ರಿಯತೀರ್ಥರೆಂದು ಕೊಂಡರು ಮುದದಿ ೮

ಧನ ಸತ್ಯಪ್ರಿಯ ತೀರ್ಥರು
ವಿಜೃಂಭಣೆಯಿಂದ ಚರಿಸಿ ಪುರಜನಗೂ

ರಾಜನಿಗೂ ಫಲ ಮಂತ್ರಾಕ್ಷತೆಗಳ ಕೊಟ್ಟು
ರಾಜ ಮಾರ್ಯಾದೆ ಕೊಂಡುಹೊರಟರು ಅಲ್ಲಿಂದ ೯

ಆಂಧ್ರದೇಶದ ಕಡಪ ಉತ್ತರ ಕರ್ನಾಟಕ
ಮತ್ತು ದಕ್ಷಿಣ ಕರ್ನಾಟಕ ಶ್ರೀರಂಗ
ಇಂಥ ಸ್ಥಳಗಳಲ್ಲಿ ಸಂಚಾರ ಮಾಡುತ್ತಾ
ಹಿತದಿ ಅನುಗ್ರಹಿಸಿದರು ಭಕ್ತವೃಂದಕ್ಕೆ ೧೦

ಪೀತಾಸಿಂಗ ರಾಘವಜಿ ಮುರಾರಿ ಮೊದಲಾದ
ಕೃತಜ್ಞ ಜನ ಪ್ರಮುಖರ ಭಕ್ತಿ ಯುತವಾದ
ಭೂದಾನ ಗ್ರಾಮದಾನ ಮಾಡಿದ್ದ ಸ್ವೀಕರಿಸಿ
ಶ್ರೀದನಿಗೆ ಅರ್ಪಿಸುತ ಒಲಿದರು ಸಜ್ಜನಕೆ ೧೧

ರಾಯಚೂರು ಹರಿಯಾಚಾರ್ಯರೆಂಬ ವೈಷ್ಣವ
ಕಾಯವಾಙ್ಮನ ಇದ್ದ ಬ್ರಾಹ್ಮಣ ದಂಪತಿಯು
ಪ್ರಿಯ ವತ್ಸರುಗಳೊಡೆ ಸ್ವಾಮಿಗಳ ಕಡೆ ಬಂದು
ವಿನಯದಿ ನಮಿಸಿ ನಿಂತರು ಮಠದಲ್ಲಿ ೧೨

ಹರಿಯಾಚಾರ್ಯರ ಮಕ್ಕಳಲಿ ರಾಮಾರ್ಯ
ಸ್ಫುರದ್ವರ್ಚಸ್ ಯುತ ಬಹುಚೂಟಿಯಾದ ಮಗನು
ಶ್ರೀ ಶ್ರೀಗಳು ಆ ಹುಡುಗಗೆ ಮಠದಲ್ಲಿ
ಶಾಸ್ತ್ರಾಭ್ಯಾಸಾದಿಗಳ ಒದಗಿಸಿದರು ೧೩

ಕಾಲಕ್ರಮದಲ್ಲಿ ವಟುಗೆ ವಿವಾಹ ಮಾಡಿದರು
ಮಕ್ಕಳು ರಾಮಚಾರ್ಯರಿಗೆ ಎರಡು
ಮಾಲೋಲ ಇಚ್ಛೆಯಿಂ ಸ್ವಾಮಿಗಳು ದಕ್ಷಿಣ
ಸ್ಥಳ ಯಾತ್ರೆ ಗೈದರು ಸೇತು ಸಮೀಪ ೧೪

ಮಾನಾಮಧುರೆಯ ವೇಗವತೀ ತೀರವು
ತನ್ನ ಮಠವನ್ನು ಸ್ಥಾಪಿಸಿದರು ಅಲ್ಲಿ
ಘನ ಮಹಾ ಸೂರಿಯು ರಾಮಚಾರ್ಯರನ್ನ
ತನ್ನ ಸಮೀಪದಲ್ಲೇ ನಿಲ್ಲಿಸಿದರು ೧೫

ಬಹು ವರ್ಷ ಸಂನ್ಯಾಸ ರತ್ನರಾಗಿ ಬೆಳಗಿ
ವಹಿಸಿ ಸಂಸ್ಥಾನವ ಏಳು ವರ್ಷ
ಶ್ರೀಹರಿಗೆ ಪ್ರಿಯರಾಮಾಚಾರ್ಯರಿಗೆ ಸಂನ್ಯಾಸ
ವಿಹಿತದಿ ಇತ್ತರು ಶ್ರೀ ಸ್ವಾಮಿಗಳು ೧೬

ಸತ್ಯಪ್ರಿಯ ಗುರುವರ್ಯ ತಮ್ಮ ಪ್ರಿಯ ಶಿಷ್ಯರಿಗೆ
ಸತ್ಯಬೋಧ ತೀರ್ಥವೆಂಬ ಸಂನ್ಯಾಸ ನಾಮವನ್ನಿತ್ತು
ಚೈತ್ರ ಶುದ್ಧ ಹದಿಮೂರನೆ ಪುಣ್ಯ ದಿನದಿ
ಯದುಪತಿಯ ಧ್ಯಾನಿಸುತ ಹರಿಪುರಯ್ಯೆದಿದರು ೧೭

ಮತ್ತೊಂದು ಅಂಶದಲಿ ಬೃಂದಾವನದಲ್ಲಿ
ನಿಂತಿಹರು ಅಶ್ವಾಸ್ಯಧ್ಯಾನಪರರಾಗಿ
ಹಿತದಿ ಕೊಡುತಿಹರು ವಾಂಛಿತವ ಶರಣರಿಗೆ
ಸದಾನಮೋ ಮಾಂಪಾಹಿ ಗುರುವರ್ಯ ಶರಣು ೧೮

ಎನ್ನ ಎನ್ನಂಥವರ ಅನಂತ ಅಪರಾಧಗಳ
ಘನ ದಯದಿ ಕ್ಷಮಿಸಿ ಬಹು ಕೃಪದಿ ಪಾಹೀ
ವನರುಹಾಸನಪಿತ ಮಧ್ವಸ್ಥ ಶ್ರೀಪತಿ
'ಪ್ರಸನ್ನ ಶ್ರೀನಿವಾಸ' ಪ್ರಿಯ ಸತ್ಯಪ್ರಿಯ ಆರ್ಯ ೧೯ ಪ

ಶ್ರೀ ಸತ್ಯ ವಿಜಯತೀರ್ಥ ಚರಿತ್ರೆ

೧೨೫

ನಮೋ ಸತ್ಯ ವಿಜಯಾರ್ಯ ತೀರ್ಥರೇ
ಸುಮಹ ಕಾರುಣ್ಯದಿಂ ಎನ್ನ ಪಾಪಗಳ
ಮನ್ನಿಸಿ ವಿಮಲ ವಾಙ್ಮನೋಕಾಯದಲಿ ಶ್ರೀ
ರಾಮ ಯದುಪತಿ ಸ್ಮರಣೆ ಇತ್ತು ಪಾಲಿಪುದು ಪ

ಅಶೇಷ ಗುಣಗಣಾಧಾರ ವಿಭು ನಿರ್ದೋಷ
ಹಂಸ ಶ್ರೀಪತಿಯಿಂದುದಿತ ಗುರುಪರಂಪರೆಗೆ
ಬಿಸಜಭವ ಸನಕಾದಿ ದೂರ್ವಾಸ ಮೊದಲಾದ
ವಂಶಜರು ಸರ್ವರಿಗೂ ಶರಣು ಶರಣೆಂಬೆ ೧

ಪುರುಷೋತ್ತಮ ತೀರ್ಥ ಅಚ್ಯುತ ಪ್ರೇಕ್ಷರಿಗೂ
ಪರವಾಯು ಅವತಾರಾನಂದ ತೀರ್ಥರಿಗೂ
ಉತ್ಕೃಷ್ಠ ಗುರುತಮ ಮಧ್ವ ಆನಂದ ಮುನಿಗಳ
ಕರಕಂಜಭವ ಸರ್ವ ಯತಿಗಳಿಗು ಶರಣು ೨

ಪದ್ಮನಾಭ ನರಹರಿ ಮಾಧವ ಅಕ್ಷೋಭ್ಯ
ಅದ್ವಿತೀಯ ಸುಸ್ಪಷ್ಟ ಟೀಕಾಗಳಿತ್ತ
ಮೇಧಾಪ್ರವೀಣ ಜಯತೀರ್ಥಾರ್ಯರಿಗೂ
ವಿದ್ಯಾಧಿರಾಜರಿಗೂ ನಮೋ ನಮೋ ಶರಣು ೩

ವಿದ್ಯಾಧಿರಾಜರ ಶಿಷ್ಯರು ಈರ್ವರಲಿ
ಮೊದಲನೆಯವರು ರಾಜೇಂದ್ರ ತೀರ್ಥರಿಗು
ನಂತರ ಕೋವಿದೋತ್ತಮ ಕವೀಂದ್ರರಿಗೂ
ತತ್ವಜ್ಞ ಶಿಷ್ಯವಾಗೀಶ ತೀರ್ಥರಿಗು ಶರಣು ೪

ವಾಗೀಶ ತೀರ್ಥರು ಕವೀಂದ್ರ ಕರಜರು
ವಾಗೀಶ ಕರಜರು ರಾಮಚಂದ್ರಾರಾರ್ಯರು
ಈ ಗುರುಗಳಿಗೆ ಈರ್ವರು ಶಿಷ್ಯರು ಇಹರು
ಬಾಗಿ ಶರಣಾದೆ ಈ ಈರ್ವರಿಗೂ ೫

ಮೊದಲನೆಯವರು ವಿಭುದೇಂದ್ರತೀರ್ಥಾರ್ಯರು
ವಿದ್ಯಾನಿಧಿ ತೀರ್ಥಾರ್ಯರ ಅನಂತರವು
ವಿದ್ಯಾನಿಧಿ ಸುತರು ರಘುನಾಥತೀರ್ಥರು
ವಂದಿಸಿ ಶರಣೆಂಬೆ ಇವರಿಗು ಇವರ ವಂಶಕ್ಕು ೬

ರಘುನಾಥ ಕರಕಮಲಜಾತರಘುವರ್ಯರಿಗೆ
ರಘೂತ್ತಮ ವೇದವ್ಯಾಸ ವಿದ್ಯಾಧೀಶ

ವೇದನಿಧಿ ಸತ್ಯವ್ರತ ಸತ್ಯನಿಧಿ ಸತ್ಯನಾಥ
ಸತ್ಯಭಿನವ ಸತ್ಯಪೂರ್ಣರಿಗೆ ನಮಿಪೆ ೭

ಸತ್ಯಾಭಿನವತೀರ್ಥರ ಮಹಿಮೆ ಬಹುಬಹುವು
ಸುತಪೋನಿಧಿಯು ಶ್ರೀನಿವಾಸನ್ನೊಲಿಸಿಕೊಂಡಿಹರು
ಸತ್ಯಪೂರ್ಣರಿಗೆ ಶಿಷ್ಯರು ಈರ್ವರು
ಸತ್ಯವರ್ಯರು ಸತ್ಯವಿಜಯರು ಎಂದು ೮

ಸತ್ಯ ಪೂರ್ಣಾರ್ಯರು ತಮ್ಮ ಗುರು ಸತ್ಯಾಭಿನವರ
ಪದ್ಧತಿ ಅನುಸರಿಸಿ ಶ್ರೀಮಠ ಆಳುತ್ತ
ಸತ್ಯವರ್ಯರನ್ನು ಗೋದಾವರಿ ಕ್ಷೇತ್ರ ವಿಜಯ ಮಾಡೆಂದು
ಸತ್ಯವಿಜಯರನ್ನ ಕಳುಹಿದರು ಪೂರ್ವದಿಸೆಗೆ ೯

ಸತ್ಯವರ್ಯರು ಗೋದಾವರಿ ಪಂಚವಟಿ ನಾಸಿಕ
ತ್ರಿಯಂಬಕಾದಿ ಕ್ಷೇತ್ರ ಸಮೀಪ ವಿಜಯಮಾಡೆ
ಸತ್ಯವಿಜಯರು ತೋಂಡದೇಶ ಚೋಳ
ಪಾಂಡ್ಯಾದಿ ನಾಡಲ್ಲಿ ವಿಜಯ ಮಾಡಿದರು ೧೦

ಸತ್ಯಪೂರ್ಣರು ಕರ್ನಾಟಕ ಪ್ರಾಂತ್ಯದಲಿ
ಜಯಶೀಲರಾಗಿ ದಿಗ್ವಿಜಯಮಾಡಿ
ತೋಯಜಾಕ್ಷನಪಾದಐದಿದರು ನಿಯಮೇನ
ಸತ್ಯವಿಜಯರು ಅಲಂಕರಿಸಿದರು ಪೀಠ ೧೧

ಸತ್ಯಾಭಿನವ ಆರ್ಯರ ಸತ್ಯಪೂರ್ಣ ಗುರುಗಳ
ಪದ್ಧತಿಯಲಿ ಸತ್ಯವಿಜಯಾರ್ಯರು
ವೇದಾಂತವಾಖ್ಯಾರ್ಥ ದುರ್ವಾದ ಖಂಡನ
ಅಧಿಕಾರಿಗಳಿಗು ಉಪದೇಶ ಮಾಡಿದರು ೧೨

ಸೇತುಯಾತ್ರೆ ಮಾಡಲು ದಿಗ್ವಿಜಯ ಕ್ರಮದಲಿ
ಬಂದರು ಆರಣಿಗೆ ತೋಂಡದೇಶದಲಿ
ಸಾಧುವೈಷ್ಣವ ವಿಪ್ರ ಆರಣಿ ರಾಜನು
ಸಂತಾನ ವೃದ್ಧಿಗೆ ಕೊರಗುತ್ತಿದ್ದ ೧೩

ಯುಕ್ತಮರ್ಯಾದೆಗಳ ವೈಭವದಿಂದಲಿ
ಸತ್ಯವಿಜಯರಿಗೆ ಮಾಡಿ ದೇವಾರ್ಚನೆ
ಭೂದೇವರಿಗೆ ಭೋಜನಮಾಡಿಸಿದ ರಾಜನು
ವೇದ್ಯವಾಯಿತು ಗುರುಗಳಿಗೆ ರಾಜನ ಕೊರತೆ ೧೪

ಸತ್ಯವಿಜಯತೀರ್ಥಾರ್ಯರ ಗುರುವರ್ಯರು
ಸಪ್ತದಶ ಅಕ್ಷರ ಮಂತ್ರ ಪ್ರತಿಪಾದ್ಯಹರಿದಯೆಯಿಂದ
ಒದಗಿಸುವ ವಂಶವೃದ್ಧಿ ಎಂದು ಅನುಗ್ರಹಿಸಿ
ಪೋದರು ದಿಗ್ವಿಜಯಕೆ ವರವು ಪೂರ್ಣವಾಯಿತು ೧೫

ಸೇತುಯಾತ್ರೆ ದಿಗ್ವಿಜಯ ಪೂರಯಿಸಿ ಆ ಗುರುಗಳು
ಮತ್ತು ಬಂದರು ಆರಣಿ ಕ್ಷೇತ್ರಕ್ಕೆ
ಕೃತಜ್ಞ ಆ ರಾಜನು ಎದುರುಗೊಂಡು ಗುರುಗಳ
ಪಾದದಲಿ ಶಿರವಿಟ್ಟು ಸ್ವಾಗತವನಿತ್ತ ೧೬

ಸಂಸ್ಥಾನ ಮೂರ್ತಿಸ್ಥ ಹರಿಪೂಜಾ ವೈಭವವು
ನಿತ್ಯ ಪ್ರವಚನ ಪಾಠಕೀರ್ತನೆ ಏನೆಂಬೆ
ಸತ್ಯವಿಜಯರನ್ನ ರಾಜ ಅಲ್ಲಿಯೇ ಇರಬೇಕು
ಎಂದು ಕೋರಿ ಒದಗಿಸಿದ ತಕ್ಕ ಸೌಕರ್ಯ ೧೭

ಸತ್ಯವಿಜಯಾರ್ಯರಿಗೆ ದೇಹ ಅಧಾರೂಢ್ಯ
ವೇದ್ಯವಾಯಿತು ಆರಣಿರಾಜನಿಗೆ
ಭಕ್ತಿಶ್ರದ್ಧೆಯಿಂದಲಿ ಉಪಚಾರ ಮಾಡಿದನು
ಮಾಧವಗೆ ಅರ್ಪಿಸುತಕೊಂಡರು ಗುರುಗಳು ೧೮

ಶ್ರೀ ಸತ್ಯವಿಜಯತೀರ್ಥರ ಮಹಿಮೆ ಬಹು ಉಂಟು
ಒಂದು ಮಾತ್ರ ಸ್ಥಾಲಿಪುಲಿಕನ್ಯಾಯದಲಿ
ಈ ದಿವ್ಯ ಸಣ್ಣ ನುಡಿಗಳಲಿ ಪೇಳಿಹುದು
ಮಾಧ್ವಯತಿ ಹರಿದಾಸ ಮಹಿಮೆಗಳಿಗೆ ಅಳವುಂಟೆ ೧೯

ತಮ್ಮ ತರುವಾಯ ಸಂಸ್ಥಾನ ಆಡಳಿತವ
ಶ್ರೀ ಮನೋಹರ ಹರಿ ಪ್ರಿಯರು ಸತ್ಯವರ್ಯ

ಸುಮನೋಹರ ಸತ್ಯಪ್ರಿಯ ತೀರ್ಥನಾಮದಲಿ
ರಮಾರಮಣಸೇವೆಗೆ ವಹಿಸಬೇಕೆಂದು ೨೦

ಭಕ್ತಿಮಾನ್ ಆರಣಿ ರಾಜನಿಗೆ ಹೇಳಿ
ಹಿತದಿ ಅನುಗ್ರಹಿಸಿ ಗುರುವರ್ಯ
ಸತ್ಯವಿಜಯರು ಧ್ಯಾನದಿಂ ಐದಿದರು ಹರಿಪುರ
ಚೈತ್ರ ಕೃಷ್ಣಪುಣ್ಯದಿನ ಏಕಾದಶಿ ದ್ವಾದಶಿಲಿ ೨೧

ಮತ್ತೊಂದು ಅಂಶದಲಿ ಸತ್ಯವಿಜಯ ನಗರಾಖ್ಯ
ಕ್ಷೇತ್ರ ಆರಣಿ ಸಮೀಪ ವೃಂದಾವನದೀ
ಇದ್ದು ಸೇವಿಸುವ ಸುಜನರಿಗೆ ವಾಂಛಿತ
ಒದಗಿಸುತ ಕುಳಿತಿಹರು ಹರಿಧ್ಯಾನ ಪರರು ೨೨

ಸತ್ಯಲೋಕೇಶಪಿತ ಶ್ರೀಪ್ರಸನ್ನ ಶ್ರೀನಿವಾಸ
ಪ್ರಿಯ ಸತ್ಯಾಭಿನವತೀರ್ಥ ಕರಕಂಜ ಜಾತ
ಸತ್ಯಪೂರ್ಣ ಕರ ಪದ್ಮಜಾತ ಸತ್ಯವಿಜಯಾರ್ಯರೇ
ಕಾಯವಾಙ್ಮನದಿ ನಮೋ ಶರಣು ಮಾಂಪಾಹಿ ೨೩

ಶ್ರೀ ಸತ್ಯಬೋಧತೀರ್ಥ ವಿಜಯ

೧೨೬

ಪ್ರಥಮ ಕೀರ್ತನೆ

ಸತ್ಯ ಬೋಧಾರ್ಯರ ವೃತತಿಜಾಂಘ್ರಿಗಳಲ್ಲಿ
ಸತತ ಶರಣಾದೆ ನಾಹಿತದಿ ಪಾಲಿಪರು
ಪ್ರತತ ಭೂಮಾದಿ ಗುಣಸಿಂಧು ಪುರುಷೋತ್ತಮನ
ವಿತತ ಮನದಲಿ ಧ್ಯಾನಿಸಿ ಒಲಿಸಿಕೊಂಡ ಪ

ಹಂಸನಾಮಕ ವಿಷ್ಣು ವನರುಹಾಸನ ಸನಕ
ದೂರ್ವಾಸ ಮೊದಲಾದ ಗುರು ವಂಶಜಾತ

ದಶಪ್ರಮತಿ ಸರಸಿಜನಾಭ ನರಹರಿತೀರ್ಥ
ಬಿಸಜ ಚರಣಂಗಳಲಿ ಸತತ ನಾ ಶರಣು । ೧

ಮಾಧವ ಅಕ್ಷೋಭ್ಯ ಜಯವಿದ್ಯಾಧಿರಾಜ ರಾ –
ಜೇಂದ್ರ ಕವೀಂದ್ರ ವಾಗೀಶ ರಾಮಚಂದ್ರ
ವಿಭುದೇಂದ್ರ ವಿದ್ಯಾನಿಧಿಗಳು ಈ ಸರ್ವ
ಸತಪೋನಿಧಿ ಯತಿವರ್ಯರಿಗೆ ನಮಿಪೆ ೨

ವೇದಾಂತ ಕೋವಿದರು ರಘುನಾಥ ರಘುವರ್ಯ
ಪದವಾಕ್ಯತತ್ವಜ್ಞ ರಘೂತ್ತಮಾರ್ಯರಿಗೆ
ವೇದವ್ಯಾಸ ಯತಿಗಳಿಗೆ ವಿದ್ಯಾಧೀಶರಿಗೆ
ವೇದನಿಧಿಗಳಿಗೆ ನಾ ಬಾಗುವೆ ಶಿರವ ೩

ಸತ್ಯವ್ರತ ಸತ್ಯನಿಧಿ ಸತ್ಯನಾಥರಿಗೆ
ಸತ್ಯಭಿನವ ಸತ್ಯ ಪೂರ್ಣರಿಗೆ ನಮಿಪೆ
ಸತ್ಯವಿಜಯರಿಗೆ ಸತ್ಯಪ್ರಿಯ ಸತ್ಯಬೋಧರಿಗೆ
ಭೃತ್ಯ ನಾ ಎನ್ನ ವಂದನೆಗಳರ್ಪಿಸುವೆ ೪

ಸತ್ಯಬೋಧರ ಮಹಿಮೆ ಬಹು ಬಹು ಬಹುಳವು
ವೇದ್ಯ ಎನಗೆ ಅತಿ ಸ್ವಲ್ಪ ಮಾತ್ರ
ಆದರಲ್ಲೂ ಬಿಟ್ಟದ್ದು ಬಹು ಇಲ್ಲಿ ಪೇಳಿಹುದು
ಅತಿ ಕಿಂಚಿತ್ ಅಣುಮಾತ್ರ ಸುಜನರು ಲಾಲಿಪುದು ೫

ರಾಮಾಚಾರ್ಯರು ಸಣ್ಣ ವಯಸ್ಸಿನವರು
ನೇಮದಿಂದಾಶ್ರಮೋಚಿತ ಕರ್ಮಪರರು
ರಾಮ ಹಯಶೀರ್ಷ ನರಸಿಂಹನ ಗುಣರೂಪ
ಸಮ್ಮುದದಿ ಜ್ಞಾನಭಕ್ತಿಯಲಿ ಧ್ಯಾನಿಪರು ೬

ಈ ರಾಯಚೂರು ರಾಮಾಚಾರ್ಯರೇ ಸತ್ಯಪ್ರಿಯ
ಗುರುಗಳ ಸಂಸ್ಥಾನ ಪೀಠಕ್ಕೆ ಬಂದು
ಸೂರಿವರ್ಯರು ಸತ್ಯಬೋಧ ತೀರ್ಥರು ಎಂದು
ಧರೆಯಲ್ಲಿ ಪ್ರಖ್ಯಾತರಾಗಿಹರು ಕರುಣಿ ೭

ಬಾದರಾಯಣ ಮಾಧ್ವ ಸಚ್ಛಾಸ್ತ್ರ ಬೋಧಿಸಿ
ಅಧಿಕಾರಿಗಳ ಉದ್ಧರಿಸಿ ಅಲ್ಲಲ್ಲಿ
ವೇದ ವಿರುದ್ಧ ದುರ್ವಾದಗಳ ಕತ್ತರಿಸಿ
ಮೇದಿನಿಸಜ್ಜನರ ಪೊರೆದಂಥ ಧೀರ ೮

ಪೀಠ ಆರೋಹಿಸಿದ ಪೂರ್ವಗುರುಗಳ ಪೋಲು
ಮಠಕ್ಕೆ ಮಾನ್ಯಗಳ ಅಭರಣಗಳನ್ನ
ಪಟ್ಟಣ ಪ್ರಮುಖರು ಧನಿಕರು ಭೂಪಾಲರು
ಕೊಟ್ಟದ್ದು ಅಲ್ಲಲ್ಲಿ ಸ್ವೀಕರಿಸಿದರು ೯

ಸತ್ಯಪ್ರಿಯರಾರಾಧನೆಗಾಗಿ ಬಂದಿದ್ದ
ಸತ್ಯಬೋಧರ ಮಹಿಮೆಯನ್ನು ಲೆಕ್ಕಿಸದೆ
ಬಂಧಿಸಿದ ಶ್ರೀಮಠವ ರಾಮೇಶ್ವರ ರಾಜ
ಬಂತು ಸೈನ್ಯವು ತಿರುಚಿನಾಪಳ್ಳಿಯಿಂದ ೧೦

ತಿರುಚಿನಾಪಳ್ಳಿಯಿಂದ ಜಾನೋಜಿರಾವ್ ನಿಂಬಳ್
ಕಾರನು ಸೈನ್ಯವನು ಕಳುಹಿಸಿದನು
ವಿರೋಧ ಬಿಡುಗಡೆ ಮಾಡಿ ಆ ರಾಜನ್ನ ಶಿಕ್ಷಿಸಿ
ಗುರುಗಳ ಕರೆತಂದ ತಿರುಚಿನಾಪಳ್ಳಿಗೆ ೧೧

ತಿರುಚಿನಾಪಳ್ಳಿಯ ಮ್ಲೇಛ್ಛರಾಜನು ಈ
ಗುರುಗಳ ಪ್ರಭಾವವ ಅರಿಯದೆ ಮೌಢ್ಯದಲಿ
ವರಧನಾಪಹಾರಿಯು ಎಂದು ಆಪಾದಿಸಿ
ನಿರೋಧಿಸಿದ ಶೋಧನೆ ಮಾಡುವ ನೆವದಿ ೧೨

ಪರಿಶೋಧನೆಯಲ್ಲಿ ಮೈಲಿಗೆ ಆಗದಿರೆ
ಗುರುಗಳು ರಾಮದೇವರ ಪೆಟ್ಟಿಗೆಯ
ತಿರುಕಾಟ್ಟು ಪಳ್ಳೀಗೆ ಕಳುಹಿಸಿ ಉಪೋಷಣದಿ
ಹರಿಯ ಮಾನಸ ಪೂಜೆ ಮಾಡುತ ಕುಳಿತರು ೧೩

ಜಾನೋಜಿರಾಯನು ವಾದಿಸೆ ಸುಲ್ತಾನ
ತನ್ನ ಸರ್ಕಾರ ಶೋಧಕರ ಕಳುಹಿಸಿದ

ತನ್ನ ಹಿರಿಯರ ಮತ್ತು ಇತರ ರಾಜರುಗಳ
ಚಿಹ್ನೆ ಮುದ್ರಿತ ಒಡವೆ ಮಾತ್ರವೆ ಕಂಡ ೧೪

ವಿರೋಧ ನೀಗಿಸಿ ನಿಂಬಳ್ಕರನ ಕೈಯಿಂದ
ಹರಿ ಪೂಜೆ ಗುರು ಪೂಜೆ ಮಾಡಿಸಿ ಕಾಣಿಕೆಯು
ಗುರುತರದಿ ಅರ್ಪಿಸಿದ ಆ ಮ್ಲೇಚ್ಛರಾಜನು
ಗುರು ಸತ್ಯಬೋಧರ ಕೀರ್ತಿವರ್ಧಿಸಿತು ೧೫

ತಿರುಕಾಟ್ಟುಪಳ್ಳಿಯಿಂದಲಿ ಪೂಜೆ ಪೆಟ್ಟಿಗೆಯ
ತರಿಸಿ ಹರಿಪೂಜೆಯ ಮಾಡಿ ಮುದದಿಂದ
ಮರ್ಯಾದೆ ಕಾಣಿಕೆಗಳಕೊಂಡು ದಿಗ್ವಿಜಯ
ಚರಿಸಿದರು ಹರಿಗುರು ತೀರ್ಥಸ್ಥಳಗಳಿಗೆ ೧೬

ಮಾರ್ಗದಲಿ ತಂಜಾವೂರಿನ ರಾಜನು
ಶ್ರೀ ಗುರುಗಳಿಗೆ ಸೇವೆಸಲ್ಲಿಸಿದ
ನಗರದಲಿ ಪ್ರಮುಖ ಪಂಡಿತ ಗೋಸಾಯಿಯ
ನಿಗಮಾಂತ ವಾದದಲಿ ಸೋಲಿಸಿದರು ೧೭

ಕುಂಭಕೋಣದಿ ಬ್ರಾಹ್ಮಣರ ಬೀದಿಯಲ್ಲಿ
ಗಂಭೀರತರ ದೊಡ್ಡ ಮಂಟಪ ಕಟ್ಟಿ
ಸಂಭ್ರಮದಿ ಹರಿಪೂಜೆಗೈದು ವಿದ್ವಜ್ಜನ
ಸಭೆಯಕೂಡಿ ವಾಕ್ಯಾರ್ಥ ನಡೆಸಿದರು ೧೮

ಶ್ರೀರಂಗ ಕ್ಷೇತ್ರ ತಂಜಾವೂರು ತರುವಾಯ
ಸಾರಂಗಪಾಣಿ ಕುಂಭೇಶ್ವರ ಕ್ಷೇತ್ರ
ಪರಿಕಲ್ಲು ತಿರುಕೋಯಿಲೂರು ಮಾರ್ಗದಿ ಬಂದು
ಸೇರಿದರು ತಿರುಪತಿ ವೇಂಕಟಾಚಲಕ್ಕೆ ೧೯

ಶ್ರೀರಂಗನಾಥನಿಗೆ ಶ್ರೀರಂಗನಾಯಕಿಗೆ
ಕ್ಷೀರಾಬ್ಧಿಯಲಿತೋರ್ದ ಧನ್ವಂತರಿಗೆ
ನೀರುಮಧ್ಯದಿ ಇರುವ ಜಂಬುಕೇಶ್ವರನಿಗೆ
ಭಾರಿ ಪುಣ್ಯದೆ ಕಾವೇರಿಗೆ ನಮಿಪೆ ೨೦

ಶಾರ್ಙ್ಗಧರ ಚಕ್ರಧರ ಕುಂಭೇಶ್ವರ ಅಂಬ
ಮಂಗಳನಾಯಕಿ ವಿಜಯೀಂದ್ರರಿಗೆ
ನಾಗೇಶ್ವರನಿಗೆ ವಿದ್ಯುಪುರಿ ಶ್ರೀಶನಿಗೆ
ಭೃಗುಸುತಪತಿ ಶ್ರೀನಿವಾಸನಿಗೆ ನಮಿಪೆ ೨೧

ಪರಿಕಲ್ಲು ಎಂಬುವ ಗ್ರಾಮದಲಿ ನರಸಿಂಹ
ಶ್ರೀರಮಾಪತಿ ಇಹನು ಸರ್ವೇಷ್ಟದಾತ
ಪರಿಪರಿ ಭಕ್ತರ ಪೀಡೆಗಳ ಪರಿಹರಿಪ
ಶರಣಾದೆ ಶ್ರೀ ಲಕ್ಷ್ಮಿ ನರಸಿಂಹನಲ್ಲಿ ೨೨

ತಿರುಕೋಯಿಲೂರಲ್ಲಿ ಮೂಲೋಕ ಅಳೆದವನ
ಭಾರಿ ಆಲಯ ಉಂಟು ಶಿವಕುಮಾರರಿಗೂ
ಪಾತ್ರ ವಿಶಾಲವು ದಕ್ಷಿಣ ಪಿನಾಕಿನಿಯ
ತೀರದಲಿ ಶ್ರೀರಘೂತ್ತಮರು ಕುಳಿತಿಹರು ೨೩

ಪಿನಾಕಜಾ ಈ ಪಿನಾಕಿಯಲ್ಲಿಹನು
ಅನಿಮಿತ್ತ ಬಂಧು ಶ್ರೀಕೇಶವ ಸರ್ವೇಶ
ಸ್ನಾನ ಜಪದಾನಗಳು ಪಣ್ಯಪ್ರದತತ್ತೀರ
ವನದಲ್ಲಿ ಶ್ರೀ ರಘೂತ್ತಮರ ವೃಂದಾವನ ೨೪

ಶ್ರೀಯುತ ತ್ರಿವಿಕ್ರಮ ವಿಶ್ವರೂಪಗೆ ನಮೋ
ಕಾತ್ಯಾಯನಿ ಶಿವಗೂ ಸ್ಕಂಧವಲ್ಲಿಗೂ
ಕಾಯವಾಕ್ಕು ಮನದಿ ಟೀಕಾ ಭಾವ ಬೋಧರಿಗೂ
ಕಾಯಮನ ಶುದ್ಧಿಕರ ಪಿನಾಕಿನಿಗೂ ನಮಿಪೆ ೨೫

ತಿರುಕೋಯಿಲೂರಿಗೆ ಕ್ರೋಶತ್ರಯದೊಳಗೇವೆ
ವೀರ ಚೋಳಪುರದಲ್ಲಿ ಶ್ರೀ ಸತ್ಯನಾಥ
ತೀರ್ಥರು ಅಭಿನವ ಚಂದ್ರಿಕಾಕಾರರು
ಇರುತಿಹರು ವೃಂದಾವನದಲ್ಲಿ ವಂದೇ ೨೬

ತಿರುಕೋಯಿಲೂರಿಂದ ತಿರುವಣ್ಣಾಮಲೆಯೆಂಬ
ಅರುಣಾಚಲಕೆ ಪೋಗಿ ಅಲ್ಲಿ ರಾಜಿಸುವ

ಕರುಣಾಬ್ಧಿ ಗಿರಿಜಾರಮಣನ್ನ ವಂದಿಸಿ
ತಿರುಪತಿಗೆ ಹೊರಟರು ಗುರುಸರ್ವಭೌಮ ೨೭

ಹೇಮಗರ್ಭನ ತಾತ ಶ್ರೀಪತಿ ಜಗನ್ನಾಥ
ಅಮಲಗುಣಗಣಸಿಂಧು ಪ್ರಸನ್ನ ಶ್ರೀನಿವಾಸ
ರಾಮ ಹಯಮುಖವ್ಯಾಸನೃಹರಿಗೆ ಪ್ರಿಯತಮರೆ
ನಿಮ್ಮಲ್ಲಿ ಶರಣಾದೆ ಸತ್ಯಬೋಧಾರ್ಯ ೨೮ ಪ

೧೨೬-೧

ದ್ವಿತೀಯ ಕೀರ್ತನೆ

ಸತ್ಯ ಬೋಧಾರ್ಯರ ವ್ರತತಿಜಾಂಘ್ರಿಗಳಲ್ಲಿ
ಸತತ ಶರಣಾದೆ ನಾಹಿತದಿ ಪಾಲಿಪರು
ಪ್ರತತ ಭೂಮಾದಿ ಗುಣಸಿಂಧು ಪುರುಷೋತ್ತಮನ
ವಿತತ ಮನದಲಿ ಧ್ಯಾನಿಸಿ ಒಲಿಸಿಕೊಂಡ ಪ

ವೇಲೂರು ಚಿತ್ತೂರು ಚಂದ್ರಗಿರಿ ಮಾರ್ಗದಲಿ
ಅಲ್ಲಲ್ಲಿ ಪ್ರಮುಖ ಭೂಪಾಲರ ಕೈಯಿಂದ
ಬಲು ಭಕ್ತಿಯುತ ಪೂಜೆ ಮರ್ಯಾದೆಕೊಂಡು
ವ್ಯಾಳಗಿರಿ ವೇಂಕಟನ ತಿರುಪತಿ ಸೇರಿದರು ೧

ತಿರುಪತಿಯಲಿ ಹನುಮದಾದಿ ಲಕ್ಷ್ಮಣ ಸೇವ್ಯ
ಶ್ರೀರಾಮಸೀತಾ ಸಮೇತನಿಗೆ ನಮಿಪೆ
ಉರುಗೇಶಶಯ್ಯ ಶ್ರೀ ಗೋವಿಂದರಾಜನಿಗು
ಶಿರಬಾಗುವೆ ಶ್ರೀ ಲಕ್ಷ್ಮೀಗೂ ಸತತ ೨

ಒಂದು ಗಾವುದ ದೂರದೊಳಗೇವೆ ಇರುತಿಹುದು
ಪದ್ಮ ಸರೋವರವು ತತ್ತೀರದಲ್ಲಿ
ವೇದವಿಗ್ರಹ ಘೃಣಿ ಆದಿತ್ಯ ಸೂರ್ಯನು
ನಿಂತಿಹನು ಸರ್ವೇಷ್ಟ ಶ್ರೀದವೃಷ್ಟಿದನು ೩

ಸಮೀಪದಲಿ ದೊಡ್ಡ ಆಲಯವಿಹುದಲ್ಲಿ
ಬೊಮ್ಮಾದಿ ಸುಮನಸಾರ್ಚಿತ ಕೃಷ್ಣ ಅಣ್ಣ
ರಾಮನ ಸಹಕುಳಿತು ವಂದಿಸುವ ಸಜ್ಜನರ
ಕ್ಷೇಮಲಾಭವ ಸದಾ ಪಾಲಿಸುತಿಹನು ೪

ದಕ್ಷಪಾರ್ಶ್ವದ ಗುಡಿಯಲ್ಲಿ ಸುಂದರರಾಜ
ಲಕ್ಷ್ಮೀಸಮೇತನು ಕಾರುಣ್ಯ ಶರಧಿ
ಪಕ್ಷ್ಮಗಳು ಅಕ್ಷಿಗಳ ರಕ್ಷಿಸುವ ತೆರದಲ್ಲಿ
ವಿಷ್ಣು ಭಕ್ತರ ಸದಾಕಾಯುತಿಹನು ೫

ಕೃಷ್ಣನಾಲಯ ವಾಮಪಾರ್ಶ್ವ ಮಂದಿರದಲ್ಲಿ
ವನಜ ಆಸನದಲ್ಲಿ ಶ್ರೀ ಪದ್ಮಾವತಿಯು
ದೀನ ಕರುಣಾಕರಿಯು ವರ ಅಭಯ ನೀಡುತ್ತ
ಶ್ರೀನಿವಾಸನ ಬದಿಯಲ್ಲಿ ಕುಳಿತಿಹಳು ೬

ದ್ವಾದಶಾಕ್ಷರ ಕಮಲವಾಸಿನಿ ಮಂತ್ರಪ್ರತಿ
ಪಾದ್ಯಳು ಪದ್ಮಾವತಿ ಕಮಲವಾಸಿನಿಯು
ಪದ್ಮಲೋಚನೆ ಸರ್ವಾಲಂಕಾರ ಸಂಪನ್ನೆ
ಸದಾಯೆಮ್ಮ ಪಾಲಿಸುವಳಿಗೆ ನಮೋ ಎಂಬೆ ೭

ವೇಂಕಟಾಚಲದ ಅಡಿವಾರದಲಿ ಇರುತಿದೆ
ಅಕಳಂಕ ಸುಪವಿತ್ರ ಕಪಿಲತೀರ್ಥ
ಲಿಂಗ ಆಕಾರದಲಿ ಕಪಿಲೇಶ್ವರ ಇಹನು
ಬಾಗುವೆ ಶಿರ ಶಿವಗು ಉಮಾಮಹೇಶ್ವರಿಗೂ ೮

ಕಪಿಲೇಶ್ವರಾನುಗ್ರಹದಿಂದ ಗಿರಿ ಏರಿ
ಗೋಪುರಾಲಯದಲ್ಲಿ ನೃಸಿಂಹನ ನಮಿಸಿ
ಶ್ರೀಪ ವರಾಹ ವೇಂಕಟನ ಕಾಣಿಸುವಂತ
ಆ ಭೇಟಿ ಹನುಮನಿಗೆ ಶರಣು ಶರಣೆಂಬೆ ೯

ಸ್ವಾಮಿವೇಂಕಟನ ಆಲಯದ ಗೋಪುರಕಂಡು
ಸ್ಮರಿಸಿದ ಮಾತ್ರದಲೆ ಪಾಪ ನೀಗಿಸುವ

ಸ್ವಾಮಿ ತೀರ್ಥಕು ಭೂರಾಹಕರುಣಾಬ್ಧಿಗೂ
ನಮಿಸುವೆ ಅಶ್ವತ್ಥನಾರಾಯಣಗು ೧೦

ಕಪಿಲೇಶ್ವರಾನುಗ್ರಹದಿ ಹನುಮಂತನ
ಅ ಪವನಜನ ದಯದಿ ಭೂಧರಾ ವರಾಹನ
ಪುಷ್ಪಭವ ಪೂಜಿತ ಶ್ರೀ ಶ್ರೀನಿವಾಸನ
ಶ್ರೀ ಪದ್ಮ ಪದಯುಗದಿ ಶರಣು ಶರಣಾದೆ ೧೧

ಶ್ರೀವಕ್ಷ ವೇಂಕಟೇಶನ್ನ ಧ್ಯಾನಿಸಿ ನಮಿಪೆ
ದೇವ ದೇವ ಶಿಖಾಮಣಿ ಕೃಪಾನಿಧಿ ಸುಹೃದ
ನವರತ್ನ ಖಚಿತ ಆಭರಣ ಕಿರೀಟಿಯು
ಶಿವದ ವರ ಅಭಯ ಕರಕಟಿ ಚಕ್ರಿಶಂಖಿ ೧೨

ಭಕ್ತವತ್ಸಲ ದಯಾನಿಧಿ ಶ್ರೀನಿವಾಸನ್ನ
ಸತ್ಯಬೋಧತೀರ್ಥಾರ್ಯರು ವಂದಿಸಿ ಸುತ್ತಿಸಿ
ಆ ದೇವಸ್ಥಾನದಲಿ ಮಾರ್ಯಾದೆಗಳ್ ಕೊಂಡು
ಪದುಮ ಸರೋವರಾಲಯಗಳ ಐದಿದರು ೧೩

ವೇಂಕಟಗಿರಿಯಿಂದ ಕರ್ನೂಲು ಗದ್ವಾಲ
ಪೋಗಿ ಸತ್ತತ್ವ ಸಿದ್ಧಾಂತವ ಬೋಧಿಸಿ
ಭಕುತರಿಗೆ ದರ್ಶನ ಉಪದೇಶ ಕೊಟ್ಟರು
ಮಾರ್ಗದಲಿ ಹನುಮಂತ ಕ್ಷೇತ್ರ ಇಹುದು ೧೪

ಕ್ಷೇತ್ರಗಂಡಿಗ್ರಾಮ ತತ್ರಸ್ಥ ಹನುಮನಿಗೆ
ಶರಣೆಂಬೆ ಸ್ಮರಿಸಲು ಬುದ್ಧಿರ್ಬಲ ಯಶಸ್ಸು
ಧೈರ್ಯವು ನಿರ್ಭಯತ್ವವು ಆರೋಗ್ಯವು
ದೊರೆಯುವುದು ನಿಶ್ಚಯ ಆಜಾಡ್ಯ ವಾಕ್ಪಟುತ್ವ ೧೫

ಹೇಮಗರ್ಭನ ತಾತ ಶ್ರಿಪತಿ ಜಗನ್ನಾಥ
ಅಮಲಗುಣಗಣಸಿಂಧು ಪ್ರಸನ್ನ ಶ್ರೀನಿವಾಸ
ರಾಮ ಹಯಮುಖವ್ಯಾಸನೃಹರಿಗೆ ಪ್ರಿಯತಮರೆ
ನಿಮ್ಮಲ್ಲಿ ಶರಣಾದೆ ಸತ್ಯಬೋಧಾರ್ಯ ೧೬ ಪ

॥ ಇತಿ ದ್ವಿತಿಯ ಕೀರ್ತನೆ ॥

೧೨೬-೨

ತೃತೀಯ ಕೀರ್ತನೆ

ಸತ್ಯ ಬೋಧಾರ್ಯರ ವೃತತಿಜಾಂಘ್ರಿಗಳಲ್ಲಿ
ಸತತ ಶರಣಾದೆ ನಾಹಿತದಿ ಪಾಲಿಪರು
ಪ್ರತತ ಭೂಮಾದಿ ಗುಣಸಿಂಧು ಪುರುಷೋತ್ತಮನ
ವಿತತ ಮನದಲಿ ಧ್ಯಾನಿಸಿ ಒಲಿಸಿಕೊಂಡ ಪ

ಗ್ರಾಮ ಪಟ್ಟಣ ನಗರ ಪ್ರಮುಖರು ಅಲ್ಲಲ್ಲಿ
ಶ್ರೀಮಠಕ್ಕೆ ಆಹ್ವಾನ ಸ್ವಾಗತಕೊಟ್ಟು
ಸ್ವಾಮಿಗಳ ಆದರದಿ ಸೇವಿಸಿ ಪೂಜೆಯ
ಸಮ್ಮುದದಿ ವೈಭವದಿ ಮಾಡಿಸಿದರು ೧

ಗದ್ವಾಲ ಕಡೆಯಿಂದ ಹೈದರಾಬಾದು
ಗೋದಾವರಿ ರಾಯಚೂರು ಮಂತ್ರಾಲಯ
ಇಂಥಾ ಹರಿಗುರು ಕ್ಷೇತ್ರಗಳಿಗೆ ಪೋಗಿ
ಬಂದರು ಸವಣೂರು ರಾಜಧಾನಿಗೆ ೨

ಸವಣೂರು ರಾಜನು ಒಳ್ಳೆ ನವಾಬನು
ದಿವಾನ್ ಎಂಬುವ ಮುಖ್ಯಮಂತ್ರಿ
ಸಾತ್ವಿಕ ದ್ವಿಜವರ್ಯ ಖಂಡೇರಾಯನು
ಆಹ್ವಾನ ಸ್ವಾಗತ ಗುರುಗಳಿಗರ್ಪಿಸಿದ ೩

ತೆಂಗು ಮಾವು ಬಾಳೆಕಂಬ ತೋರಣಗಳು
ಮಂಗಳವಾದ್ಯಗಳು ವೇದಘೋಷ
ತಿಂಗಳ ತಾರೆಗಳ ಮಧ್ಯ ಜ್ವಲಿಪಂತೆ ರಾ -
ಜಾಂಗಣದಿ ಜ್ವಲಿಸಿದರು ಗುರುಸಾರ್ವಭೌಮ ೪

ನವಾಬನ ಮತ್ತು ಖಂಡೇರಾಯನ ಪುಣ್ಯ
ಸವಣೂರಲ್ಲಿ ಸಜ್ಜನರ ಪುಣ್ಯ ಏನೆಂಬೆ
ದೇವತಾಂಶರು ಜ್ಞಾನಿವರರು ಈ ಗುರಗಳ
ಸವಣೂರು ಚಾತುರ್ಮಾಸಕ್ಕಿರಿಸಿದರು ೫

ಹರಿಭಕ್ತಿ ಗುರುಭಕ್ತಿ ಸಜ್ಜನರು ಬೆಳೆಸುತಿರೆ
ಎರಡೊಂದು ದುರ್ಜನರು ಹೊಟ್ಟೆಕಿಚ್ಚಿನಲ್ಲಿ
ದುರುಳತನದಲಿ ಪೀಠ ಅಪಹರಿಸಲು ನೆನೆದು
ಗರಳ ಹಾಕಿಸಿದರು ರಹಸ್ಯದಿ ಪಾಯಸದೊಳ್ ೬

ಏಕಾಗ್ರಚಿತ್ತದಲಿ ಪ್ರತಿಮಾಸ್ಥ ಹರಿಯನ್ನು
ಪಾಕಪದಾರ್ಥಸ್ತ ಶ್ರೀಯಃಪತಿಯನ್ನು
ಐಕ್ಯಚಿಂತನೆ ಪರರಾಗಿ ಗುರುವರ್ಯರು
ಅಕಳಂಕ ಮಹಿಮ ಶ್ರೀಹರಿಗೆ ನೈವೇದ್ಯ ಮಾಡಿದರು ೭

ತತ್ತತ್ ಪದಾರ್ಥಾಭಿಮಾನಿಗಳ ತಿಳಿಯುತ್ತ
ತತ್ರ ತತ್ರಸ್ಥಿತ ವಿಷ್ಣು ರೂಪ ವಿಶೇಷ
ಚಿಂತಿಸುತಲಿದ್ದ ಕಾರಣದಿ ವಿಷಮಿಗಳ
ಕೃತ್ಯವು ಗಮನಕ್ಕೆ ಬರಲಿಲ್ಲ ಆಗ ೮

ಪ್ರೋಚ್ಚಗುಣನಿಧಿ ಅನಘ ಅಪ್ರಾಕೃತ ಹರಿಯ
ಅಚಲ ಪ್ರಾಕೃತ ಪ್ರತೀಕದ ಕಂಠದಲ್ಲಿ
ಪಚ್ಚೆವರ್ಣದಿ ರೇಖಾ ವಿಷ ಸೂಚನೆ ಕಂಡು
ಎಚ್ಚರಿತು ಅಡಿಗೆಯ ಪರೀಕ್ಷೆಗೈಸಿದರು ೯

ವಿಷವು ಪರಮಾನ್ನದಲಿ ಬೆರೆತಿರುವುದು ಕಂಡು
ಶಿಷ್ಯರು ಸುಜನರು ಉಣಬೇಡ ಎಂದರು
ಶೇಷಶಾಯಿಗೆ ನಿವೇದಿತ ಪ್ರಸಾದವು ಎಂದು
ವೃಷಾಕಪಿಯ ಸ್ಮರಿಸುತ್ತ ಉಂಡರು ಗುರುವು ೧೦

ಸ್ಮರಣಾತ್ ಸರ್ವ ಪಾಪಘ್ನ ಖದ್ರೂಜಾದಿ
ಸರ್ವವಿಷಹರ ಶ್ರೀಹರಿಯು ಒಲಿದಿರುವ
ಗುರು ಸತ್ಯಬೋಧರಿಗೆ ವಿಷದಿಂದ ಬಾಧೆಯು
ಬರಲಿಲ್ಲ ಆದರೂ ವೈದ್ಯನ ಕರೆಸಿದರು ೧೧

ನರಲೋಕದಲಿ ರೋಗಿಗಳಿಗೂ ವಿಷಗ್ರಸ್ತರಿಗೂ
ಮಂತ್ರಮಣಿ ಔಷಧ ಪಥ್ಯ ಉಪಾಯ

ಪರಿಹಾರಕ್ಕಾಗಿ ಮಾಡುವುದುಂಟು ಆ ರೀತಿ
ಗುರುಗಳು ಪಥ್ಯ ಮಾಡಲಿಕೆ ಒಪ್ಪಿದರು ೧೨

ಪಥ್ಯವು ನಿದ್ರೆ ಮಾಡಕೂಡದೆನಲು
ಅದರಂತೆ ರಾತ್ರಿ ಜಾಗರದಲ್ಲಿ ಇರುತ
ರಾತ್ರಿಯೇ ಪೂಜೆ ನೈವೇದ್ಯಾದಿಗಳಾಚರಿಸಿ
ಪಥ್ಯ ಆಚರಿಸಿದರು ವಿಹಿತಕಾಲಕ್ಕೆ ೧೩

ಮಂದಮತಿಯಲಿ ಕೆಲವು ಜನರು ಇದು ಏನು
ರಾತ್ರಿ ನೈವೇದ್ಯ ಭೋಜನ ಅವೇಳೆಯಲಿ
ಎಂದು ಗುಸುಗುಸು ಮಾತಾಡಿ ನಗಲಿಕ್ಕೆ
ಅತಿಶಯ ಭಾವಿಸಿತು ರಾತ್ರಿವೇಳೆಯಲಿ ೧೪

ಆಕ್ಷೇಪಿಸಿದವರನ್ನ ರಾತ್ರಿ ಗುರುಗಳ್ ಕರೆದು
ನಕ್ಷತ್ರ ಮಾನದಿ ವೇಳೆ ಏನು ಈಗ
ಈಕ್ಷಿಸಿ ನಭಮಂಡಲ ಎಂದು ಹೇಳಿ
ಲಕ್ಷ್ಮೀಶ ಶಿಂಶುಮಾರನ್ನ ಸ್ಮರಿಸಿದರು ೧೫

ಅಂಗಳ ಬಯಲಿಗೆ ಹೋಗಿ ಆ ಜನರು
ಗಗನವ ಕಣ್ಣೆತ್ತಿ ನೋಡಲು ಅಲ್ಲಿ
ಝುಗಿಝುಗಿಪ ಸೂರ್ಯನ್ನ ಕಂಡು ಚಕಿತರು ಆಗಿ
ಶ್ರೀಗಳಸನ್ನಮಿಸಿ ಕ್ಷಮಿಸೆ ಬೇಡಿದರು ೧೬

ಮಹಿಮೆಗಳ್ ಅನೇಕದಲಿ ಇದು ಒಂದು ಸಾಲದೆ
ಮಹಂತ ಈ ಗುರುಗಳ ಪ್ರಭಾವ ತಿಳಿವುದಕೆ
ಅಹಿಭೂಷಣ ಅಹಿಪ ವಿಪವಾಯು ಬ್ರಹ್ಮನುತ
ಮಹಿಶಿರಿ ಪತಿಯ ಅನುಗ್ರಹ ಪೂರ್ಣರಿವರು ೧೭

ಹೇಮಗರ್ಭನ ತಾತ ಶ್ರೀಪತಿ ಜಗನ್ನಾಥ
ಅಮಲಗುಣಗಣಸಿಂಧು ಪ್ರಸನ್ನ ಶ್ರೀನಿವಾಸ
ರಾಮ ಹಯಮುಖವ್ಯಾಸನೃಹರಿಗೆ ಪ್ರಿಯತಮರೆ
ನಿಮ್ಮಲ್ಲಿ ಶರಣಾದೆ ಸತ್ಯಬೋಧಾರ್ಯ ೧೮ ಪ

॥ ಇತಿ ತೃತೀಯ ಕೀರ್ತನೆ ॥

೧೨೬ – ೩

ಚತುರ್ಥ ಕೀರ್ತನೆ

ಸತ್ಯ ಬೋಧಾರ್ಯರ ವೃತತಿಜಾಂಘ್ರಿಗಳಲ್ಲಿ
ಸತತ ಶರಣಾದೆ ನಾಹಿತದಿ ಪಾಲಿಪರು
ಪ್ರತತ ಭೂಮಾದಿ ಗುಣಸಿಂಧು ಪುರುಷೋತ್ತಮನ
ವಿತತ ಮನದಲಿ ಧ್ಯಾನಿಸಿ ಒಲಿಸಿಕೊಂಡ ಪ

ಸತ್ಯಬೋಧಾರ್ಯರು ಭಾಗೀರಥಿ ಕುರಿತು
ಯಾತ್ರೆ ಮಾಡಲು ಮನದಿ ಯೋಚಿಸುತಲಿದ್ದಾಗ
ಇದ್ದ ಕಡೆಯಲ್ಲೆ ಗಂಗಾ ಬಂದು ಒದಗುವಳು
ಎಂದು ಸ್ವಪ್ನವು ಆಯಿತು ಅಂದು ರಾತ್ರಿಯಲಿ ೧

ಶ್ರೀ ಮಠಕ್ಕೆ ಅರ್ಧಗಾವುದ ದೂರ ಇರುವಂಥ
ಭೂಮಿಯಲಿ ಕೃಷಿಕೂಪ ಬಹು ದೊಡ್ಡದಲ್ಲಿ
ಸಮೀಪಸ್ತ ಔದುಂಬರ ತರು ಮೂಲದಿಂ
ಅಮರ ತಟನೀ ಬರುವ ವೇಳೆಯು ತಿಳಿಯಿತು ೨

ಶ್ರೀಗುರು ನವಾಬನಿಗೂ ಖಂಡೇರಾಯನಿಗು
ನಗರ ಜನರಿಗು ತಿಳಿಸಿ ಆ ಸ್ಥಳಕ್ಕೆ ಪೋಗೆ
ಗಂಗಾವತರಣವು ಆಯಿತು ಸೂಚಿತವೇಳೆ
ಕಂಗೊಳಿಸುವ ಬಾಗೀರಥೀ ಧಾರಾಸುರಿದು ೩

ತ್ರಿವಿಕ್ರಮ ಸುಪಾದಜಾ ತ್ರಿಜಗತ್ ಪಾವನಿಗಂಗಾ
ತ್ರಿದಶೇಶ್ವರಿ ನಳಿನಿ ಸೀತಾನಮಸ್ತೆ
ತ್ರಾಹಿ ಜಾಹ್ನವಿ ಭಾಗೀರಥೀ ನಮೋ ಭೋಗವತಿ
ತ್ರಿಪಥ್‌ಗಾಮಿನಿ ಪಾಹಿ ಮಾಲತಿ ನಂದಿನಿ ೪

ನವಾಬನು ಮಂತ್ರಿಯು ನೆರೆದಿದ್ದ ಜನರೆಲ್ಲ
ದೇವ ತಟಿನಿ ಧಾರಾ ಸುರಿದದ್ದು ನೋಡಿ
ದೈವೀಕ ಈ ಮಹಿಮೆ ಕೊಂಡಾಡಿ ಸ್ನಾನಜಪ
ಸೇವೆದಾನಾದಿಗಳ ಮಾಡಿದರು ಮುದದಿ ೫

ವಿಷ್ಣುತೀರ್ಥ ಎಂಬ ನಾಮ ಈ ತೀರ್ಥಕ್ಕೆ
ವಿಷ್ಣು ಭಕ್ತಾಗ್ರಣಿ ಸದಾಶಿವನ ಲಿಂಗ
ವಿಷ್ಣು ತೀರ್ಥದ ದಡದಿ ಇಹುದು ಶರಣೆಂಬೆ
ವಿಷ್ಣ್ವಂಘ್ರಿ ಜಾತೆಗೂ ಉಮೇಶನಿಗೂ ಶ್ರೀಶಗೂ ೬

ಶ್ರೀ ಸತ್ಯಬೋಧರು ಗಂಗೆಯ ತರಿಸಿದ್ದು
ಶ್ರೀ ಸತ್ಯಬೋಧರ ಬಹು ಇಂಥ ಮಹಿಮೆ
ವಸುಮತಿಯಲಿ ಹರಡಿ ದೇಶ ದೇಶಗಳಿಂದ
ಭೂಸುರರು ಸಜ್ಜನರು ಬಂದು ಸೇವಿಪರು ೭

ಪಟ್ಟಣದ ಮಧ್ಯದಿ ನವಾಬ ಕೊಡಿಸಿದ ಸ್ಥಳದಿ
ಕಟ್ಟಡವು ಶ್ರೀಮಠ ವಿಸ್ತಾರವಾದ್ದು
ಮಠದಲ್ಲೇ ಉಂಟೊಂದು ಸೋಪಾನ ಭಾವಿಯು
ಕಟ್ಟೆಯಲಿ ಶಿವಲಿಂಗ ಭಾವಿಯಲಿ ಗಂಗಾ ೮

ಭೃಗು ಅಂಶ ವಿಜಯದಾಸಾರ್ಯರ ಪ್ರಭಾವವು
ಏಕದಂತಾಂಶ ಗೋಪಾಲ ದಾಸಾರ್ಯರ ಪ್ರಭಾವ
ಭಾಗಣ್ಣಾನುಜರು ಈರ್ವರು ಪ್ರಭಾವವ
ಶ್ರೀ ಗುರುಗಳು ಮೆಚ್ಚಿ ಮಾನ್ಯ ಮಾಡಿದರು ೯

ವಿದ್ವತ್ಸಭೆಯಲಿ ಗೋಪಾಲದಾಸಾರ್ಯರು
ಆ ದಾಸವರ್ಯರ ಅನುಜರು ಈರ್ವರು
ದೇವತಾಂಶದವರು ಅಪರೋಕ್ಷ ಪ್ರಚುರರು
ಎಂದು ಜನರಿಗೆ ನಿದರ್ಶನ ತೋರಿಸಿದರು ೧೦

ವಿಠ್ಠಲ ನೃಹರಿವ್ಯಾಸ ಶ್ರೀಸಹ ವೇಂಕಟರಾಮ
ಘೋಟಕಾಸ್ಯ ಮಧ್ವೇಶನ್ನರಾಧಿಪಂತ
ಮಠದಲ್ಲಿ ಜಗನ್ನಾಥ ದಾಸಾರ್ಯರ ಸೇವೆ
ಕೊಂಡು ಬಹು ಪ್ರೀತಿಯಲಿ ಅನುಗ್ರಹ ಮಾಡಿಹರು ೧೧

ಅಮಲ ವೈದಿಕ ತತ್ವ ಮಧ್ವಸಿದ್ಧಾಂತವ
ಭೂಮಿ ದೇವರಿಗೆ ಬೋಧಿಸಿ ಸರ್ವಜನರ್ಗು

ಕ್ಷೇಮ ಒದಗಿಸಿ ರಮಾಕಾಂತನ್ನ ಸ್ಮರಿಸುತ
ಈ ಮಹಿಯೋಳ್ ಸರ್ವಜನ ಪ್ರಿಯತಮರಾಗಿಹರು ೧೨

ಒಳ್ಳೆರೀತಿಯಲಿ ಚತ್ವಾರಿ ವತ್ಸರ ಮಠ
ಆಳಿ ಶಾಲಿಶಕ ಹದಿನೇಳ್ ನೂರೈದು
ಫಾಲ್ಗುಣ ಕೃಷ್ಣ ಪ್ರತಿಪದ ದಿನ ಹರಿಧ್ಯಾನ
ದಲ್ಲಿ ಕುಳಿತರು ಲೋಕ ಚಟುವಟಿಕೆ ತೊರೆದು ೧೩

ಸತ್ಯಬೋಧರ ವೃಂದಾವನದಿ ಅವರೊಳಿಹನು
ಸತ್ಯಬೋಧಾಹ್ವಯನು ಶ್ರೀಸಹಹಯಾಸ್ಯ
ವಾತಸೇವಿತ ರಾಮಕೃಷ್ಣನೃಹರಿ ವ್ಯಾಸ
ಭೃತ್ಯವತ್ಸಲ ವಾಮದೇವನುತನಾಗಿ ೧೪

ದರ್ಶನ ಪ್ರದಕ್ಷಿಣೆ ನಮನ ಪಾದೋದಕ
ಸಂಸ್ಕೃತಿ ಸುಚರಿತ್ರೆ ಪಾರಾಯಣ
ಸಚ್ಛಾಸ್ತ್ರ ಪ್ರವಚನ ಜಪತಪದಾನಾದಿಗಳು
ವಾಂಛಿತಪ್ರದ ಸರ್ವ ಪೀಡಹರವು ೧೫

ಪುತ್ರಧನ ಆರೋಗ್ಯ ಆಯುಷ್ಯ ಮಾಂಗಲ್ಯ
ತಾಪತ್ರಯ ಪರಿಹಾರ ರೋಗ ನಿವೃತ್ತಿ
ಕ್ಷಿಪ್ರಲಭಿಸುವುವು ಹರಿಗುರುಗಳ ದಯದಿಂದ
ಸುಶ್ರವಣ ಪಠನ ಈ ಗ್ರಂಥಮಾಳ್ಪರಿಗೆ ೧೬

ಸತ್ಯಸಂಧಾರ್ಯರು ಮಹಾಮಹಿಮ ಶಿಷ್ಯರು
ಸತ್ಯಬೋಧರ ಆರಾಧನ ಭಕ್ತಿ
ಉತ್ಸಾಹದಿ ಮಾಡಿದರು ಅದ್ಯಾಪಿ ಸಹಸ್ರಾರು
ಭಕ್ತರು ಸೇವಿಸುತಿಹರು ಪ್ರೇಮದಲಿ ೧೭

ಹೇಮಗರ್ಭನ ತಾತ ಶ್ರೀಪತಿ ಜಗನ್ನಾಥ
ಅಮಲಗುಣಗಣಸಿಂಧು ಪ್ರಸನ್ನ ಶ್ರೀನಿವಾಸ
ರಾಮ ಹಯಮುಖವ್ಯಾಸನೃಹರಿಗೆ ಪ್ರಿಯತಮರೆ
ನಿಮ್ಮಲ್ಲಿ ಶರಣಾದೆ ಸತ್ಯಬೋಧಾರ್ಯ ೧೮ ಪ

॥ ಇತಿ ಶ್ರೀ ಸತ್ಯಬೋಧ ಚರಿತ್ರೆ ಸಂಪೂರ್ಣಂ ॥

ಶ್ರೀ ಸತ್ಯ ಸಂಧರ ಚರಿತ್ರೆ

೧೨೭

ಸತ್ಯ ಸಂಧಾರ್ಯರೆ ಶರಣಾದೆ ನಿಮ್ಮಲ್ಲಿ
ಭೃತ್ಯನಾ ಎಂದೆಣಿಸಿ ನಿತ್ಯ ಪಾಲಿಸುವುದು
ಸತ್ಯಾರುಕ್ಮಿಣೀ ರಮಣ ಕೃಷ್ಣನೃಹರಿ ರಾಮ
ಸತ್ಯಜ್ಞಾನಾನಂತನಿಗೆ ಪ್ರಿಯ ಯತೀಂದ್ರ ಪ

ನಿರ್ದೋಷ ಗುಣಸಿಂಧು ಸುಖಪೂರ್ಣ ಹಂಸನಿಗೆ
ವಿಧಿ ಸನಕ ಮೊದಲಾದ ಗುರು ಪರಂಪರೆಗೆ
ಯತಿವರ್ಯ ಅಚ್ಯುತಪ್ರೇಕ್ಷರಿಗೆ ಆನಂದ
ತೀರ್ಥರಾಂಬುಜ ಪಾದಗಳಿಗೆ ಆನಮಿಪೆ ೧

ಪದ್ಮನಾಭ ನರಹರಿ ಮಾಧವ ಅಕ್ಷೋಭ್ಯರ
ಪದ್ಮಾಂಘ್ರಿಗಳ ನಮಿಸಿ ಜಯತೀರ್ಥರ
ವಿದ್ಯಾಧಿರಾಜರ ಪಾದ ಪಂಕಜಕ್ಕೆರಗಿ
ವಿದ್ಯಾಧಿರಾಜರು ಈರ್ವರಿಗೂ ನಮಿಪೆ ೨

ನಮಿಸುವೆ ರಾಜೇಂದ್ರ ಕವೀಂದ್ರ ವಾಗೀಶರಿಗೆ
ರಾಮಚಂದ್ರರಿಗೆ ಆ ಯತಿವರರ ಹಸ್ತ
ಕಮಲಜರು ವಿಭುದೇಂದ್ರ ವಿದ್ಯಾನಿಧಿಗಳಿಗೆ
ನಮೋ ಎಂಬೆ ವಿದ್ಯಾನಿಧಿಗಳ ವಂಶಕ್ಕೆ ೩

ವೇದಾಂತ ಕೋವಿದರು ರಘುನಾಥ ರಘುವರ್ಯ
ಪದವಾಕ್ಯ ತತ್ವಜ್ಞ ರಘೂತ್ತಮಾರ್ಯರಿಗೆ
ವೇದ ವ್ಯಾಸಾಭಿದ ಯತಿ ವಿದ್ಯಾಧೀಶರಿಗೆ
ವೇದನಿಧಿಗಳಿಗೆ ನಾ ಬಾಗುವೆ ಶಿರವ ೪

ಸತ್ಯವ್ರತ ಸತ್ಯನಿಧಿ ಸತ್ಯನಾಥರಿಗೆ
ಸತ್ಯಾಭಿನವ ಸತ್ಯ ಪೂರ್ಣರಿಗೆ ನಮಿಪೆ

ಸತ್ಯ ವಿಜಯರಿಗೆ ಸತ್ಯ ಪ್ರಿಯರಿಗೆ ಸತ್ಯ
ಬೋಧರಿಗೆ ಎನ್ನ ವಂದನೆ ಅರ್ಪಿಸುವೆ ೫

ಸತ್ಯಬೋಧಾರ್ಯರ ಕರಕಮಲ ಸಂಜಾತ
ಸತ್ಯಸಂಧರ ಮಹಿಮೆ ಬಹು ಬಹು ಬಹಳ
ವೇದ್ಯ ಕಿಂಚಿತ್ ಮಾತ್ರ ಎನಗೆ ಶ್ರೀಹರಿ ವಾಯು
ಪ್ರೀತಿಯಾಗಲಿ ಇಲ್ಲಿ ಪೇಳಿರುವೆ ಸ್ವಲ್ಪ ೬

ಪೂರ್ವಾಶ್ರಮದಲ್ಲಿ ರಾಮಚಂದ್ರಾಚಾರ್ಯ
ಹಾವೇರಿಯವರು ಈ ಯತಿವರ ಮಹಂತ
ದೇವ ಸ್ವಭಾವರು ವೇದಾಂತ ಕೋವಿದರು
ಸರ್ವದಾ ಹರಿನಾಮ ಸಂಸ್ಮರಿಸುವವರು ೭

ರಾಮಚಂದ್ರಾಚಾರ್ಯ ಸರ್ವಪ್ರಕಾರದಲು
ತಮ್ಮ ಸಂಸ್ಥಾನ ಪೀಠಾರ್ಹರು ಎಂದು
ನೇಮದಿಂ ಪ್ರಣವೋಪದೇಶ ಅಭಿಷೇಕ
ಸಂಮುದದಿ ಮಾಡಿದರು ಸತ್ಯಬೋಧಾರ್ಯ ೮

ಹರಿಕ್ಷೇತ್ರ ತೀರ್ಥಯಾತ್ರೆ ಮಾಡಿ ಅಲ್ಲಲ್ಲಿ
ಹರಿತತ್ವ ಯೋಗ್ಯರಿಗೆ ಸಮ್ಯುಕ್ ಬೋಧಿಸುತ
ಧರೆಯಲ್ಲಿ ಜ್ಞಾನಿ ಶ್ರೇಷ್ಠರು ಎಂದು ಸ್ತುತಿಕೊಂಡ
ಧೀರ ಗುರುವರ ಸತ್ಯಸಂಧರಿಗೆ ನಮಿಪೆ ೯

ಸತ್ಯಂ ವಿದಾತಂ ನಿಜ ಭೃತ್ಯ ಭಾಷಿತಂ
ಅಂದು ಕಂಬದಿ ತೋರ್ದ ಹರಿ ಪ್ರಹ್ಲಾದನಿಗೆ
ಇಂದು ವಟು ರೂಪದಿ ಬಂದು ವಿಠ್ಠಲ ಸತ್ಯ
ಸಂಧರಿಗೆ ತೋರಿದನು ತನ್ನಿಚ್ಛೆಯಿಂದ ೧೦

ವಿಠ್ಠಲನ್ನ ವಂದಿಸಿ ಪಂಡರೀಪುರದಿಂದ
ಮಠ ಪರಿವಾರ ಸಹ ಇನ್ನೂ ಬಹು ಕ್ಷೇತ್ರ
ಅಟನ ಮಾಡಿ ಬಾಗೀರಥಿ ಪೂಜೆ ಮಾಡುತ್ತ
ಪಠವಾಳಿ ಉಡುಗೊರೆಯ ಕೊಟ್ಟರು ಗಂಗೆಗೆ ೧೧

ಕಾಶಿ ನಗರದಿ ಜನರು ಪ್ರತ್ಯಕ್ಷ ನೋಡಿಹರು
ವಸ್ತ್ರಾದಿಗಳ ಗಂಗೆ ಮೂರ್ತಿಮತ್ ಬಂದು
ನಸುನಗುತ ತುಷ್ಟಿಯಲಿ ಕರದಿಂ ಸ್ವೀಕರಿಸಿದ್ದು
ಯಶವೇ ವರ್ಣಿಸಲು ಈ ಮಹಾತ್ಮರ ಮಹಿಮೆ ೧೨

ಶ್ರೀವಿಷ್ಣು ಪಾದ ಮಂದಿರದ ಮುಖದ್ವಾರ
ಅವಿವೇಕದಲಿ ಗಯಾವಾಳರು ಬಂಧಿಸಲು
ಶ್ರೀವರನ್ನ ಸ್ಮರಿಸಿ ನಿಂತರು ಸತ್ಯಸಂಧರು
ವಿಶ್ವವಿಷ್ಣು ವಷಟ್ಕಾರನು ವಲಿದ ೧೩

ನೆರೆದಿದ್ದ ಜನರೆಲ್ಲ ನೋಡುತಿರೆ ಬಾಗಲ
ಭಾರಿ ಕೀಲುಗಳೆಲ್ಲ ಬಿದ್ದವು ಕೆಳಗೆ
ಈ ರೀತಿ ಅದ್ಭುತವು ಜರುಗಿದ್ದು ಕಂಡು
ಎರಗಿ ಕೊಂಡಾಡಿದರು ಅಲ್ಲಿದ್ದ ಜನರು ೧೪

ತಮ್ಮ ತಪ್ಪುಗಳನ್ನು ಮನ್ನಿಸೆ ಕ್ಷಮೆ ಬೇಡಿ
ತಮ್ಮನ್ನು ಕರಕೊಂಡು ಹೋಗಿ ಗುರುಗಳಿಗೆ
ಹೇಮ ರತ್ನಾದಿಗಳ ಕಾಣಿಕೆ ಅರ್ಪಿಸಿ
ನಮಿಸಿ ಪೂಜಿಸಿದರು ಗಯಾವಾಳರು ೧೫

ಸೂರಿ ಕುಲ ತಿಲಕರು ಸತ್ಯ ಸಂಧಾರ್ಯರು
ಹರಿ ಪೂಜೆ ಮಾಡುವಾಗ ಹರಿ ಶಿರಿ ವಾಯು
ಸುರನಿಕರ ಸಾನಿಧ್ಯ ಇರುವುದು ಅನುಭವಕ್ಕೆ
ಬರುವುದು ನೋಡುವ ಯೋಗ್ಯ ಭಕ್ತರಿಗೆ ೧೬

ಶ್ರೀ ಹರಿ ಅರ್ಚನೆಗೆ ಸ್ವಾಮಿಗಳು ಕುಳಿತರು
ಬ್ರಾಹ್ಮಣ ಮಹಾಪುರುಷ ಓರ್ವನು ಬಂದ
ಸಹಸ್ರದಳ ಸುಂದರತರ ಕಮಲಪುಷ್ಪವ
ಶ್ರೀಹರಿಗರ್ಪಿಸೆ ಕೊಟ್ಟು ಅದೃಶ್ಯನು ಆದ ೧೭

ಪ್ರಣವ ಅಷ್ಟಾಕ್ಷರಿ ಮೊದಲಾದ ಮಂತ್ರಗಳ
ಆಮ್ನಾಯ ಋಗ್ ಯಜುಸ್ಸಾಮಾಥರ್ವಣದ

ಅನುಪಮ ಮಹಾ ಇತಿಹಾಸ ಎರಡರಸಾರ
ವಿಷ್ಣು ಸಹಸ್ರನಾಮಗಳಿರುತಿವೆಯು ೧೮

ಉತ್ಕೃಷ್ಟತಮ ವಿಷ್ಣು ಸಹಸ್ರ ನಾಮಂಗಳ
ಶ್ರೀ ಕೃಷ್ಣ ಸುಪ್ರೀತಿ ಕರ ವ್ಯಾಖ್ಯಾನ
ಸಂ ರಚಿಸಿ ಪ್ರತಿನಿತ್ಯ ಅರ್ಚಿಪರು ವಿಷ್ಣು
ಸೂರಿವರಧೀರರು ಸತ್ಯ ಸಂಧಾರ್ಯ ೧೯

ವೇದಾಂತ ಸಾಮ್ರಾಜ್ಯ ದಶವತ್ಸರ ಆಳಿ
ವೃಂದಾವನದಿ ಕೂಡುವ ಕಾಲ ಬರಲು
ಭೂದೇವಿ ಪತಿ ವಕ್ತ್ರದಿಂದುದಿತ
ಸಾಧು ಸುಪವಿತ್ರ ತೀರಕ್ಕೆ ಬಂದಿಹರು ೨೦

ಹದಿನೇಳು ನೂರು ಹದಿನಾರನೇ ಶಾಲಿ ಶಕ
ಆನಂದ ಸಂವತ್ಸರ ಜೇಷ್ಠ ಶುದ್ಧ
ದ್ವಿತೀಯ ಪುಣ್ಯತಮ ದಿನದಲ್ಲಿ ಶ್ರೀಹರಿಯ
ಪಾದ ಯೆಯ್ದಿದರು ಈ ಗುರುವರ ಮಹಂತ ೨೧

ಉಡುಪಿಯಿಂದುತ್ತರಕ್ಕೆ ಬರುವ ಮಾರ್ಗದಲಿ
ದೊಡ್ಡದಲ್ಲದ ಗ್ರಾಮ ಮಹಿಷಿ ಎಂಬುವಲಿ
ಕ್ರೋಡಜಾ ತೀರಸ್ಥ ವೃಂದಾವನ ಸದನ
ಮಾಡಿ ಕುಳಿತರು ಮತ್ತೊಂದು ಅಂಶದಲಿ ೨೨

ವೃಂದಾವನದೊಳು ಇಹ ಸತ್ಯಸಂಧರೊಳು
ನಿಂತಿಹನು ಸತ್ಯಸಂಧನು ಮುಖ್ಯವಾಯು
ವಾತ ದೇವನೊಳು ಸತ್ಯಸಂಧ ನಾಮಾವಿಷ್ಣು
ಸತ್ಯಜ್ಞಾನಾನಂತಾನಂದ ವಾಯು ಇಹನು ೨೩

ವೃಂದಾವನಸ್ಥರ ಈ ರೀತಿ ತಿಳಿಯುತ್ತ
ಬಂದು ಸೇವಿಸುವವರಿಗೂ ಸ್ಮರಿಸುವವರಿಗೂ
ಕುಂದು ಕೊರತೆ ನೀಗಿ ಇಷ್ಟಾರ್ಥ ಲಭಿಸುವವು
ಇಂದಿರಾಪತಿ ದಯಾಸಿಂಧು ಪಾಲಿಸುವನು ೨೪

ಹನುಮಸ್ತ ಅಜನಪಿತ 'ಶ್ರೀ ಪ್ರಸನ್ನ ಶ್ರೀನಿವಾಸ'
ಮೀನ ಕಮಠ ಕ್ರೋಡ ನೃಹರಿ ವಟು ಪರಶು
ದನುರ್ಧರ ಶ್ರೀಕೃಷ್ಣ ಜಿನ ಕಲ್ಕಿ ಶ್ರೀಶ
ಗುಣನಿಧಿ ಪ್ರಿಯ ಸತ್ಯ ಸಂಧಾರ್ಯ ಶರಣು ೨೫ ಪ

॥ ಇತಿ ಶ್ರೀ ಸತ್ಯಸಂಧ ಚರಿತ್ರೆ ಸಂಪೂರ್ಣಂ ॥

ಶ್ರೀ ಸತ್ಯಧರ್ಮತೀರ್ಥರ ಚರಿತ್ರೆ

೧೨೮

ಶ್ರೀ ಸತ್ಯಧರ್ಮ ತೀರ್ಥರ ಪಾದಯುಗ್ಮದಲಿ
ನಾ ಶರಣು ಎನ್ನ ಪಾಲಿಪರು ಎಡಬಿಡದೆ
ಅಸಮ ಅನುಪಮ ಸರ್ವಗುಣ ಗುಣಾರ್ಣವ ಅನಘ
ಬಿಸಜಜಾಂಡದ ಒಡೆಯ ಶ್ರೀಶನಿಗೆ ಪ್ರಿಯರು ಪ

ಹಂಸನಾಮಕ ವಿಷ್ಣುವನರುಹಾಸನ ಸನಕ
ದೂರ್ವಾಸ ಮೊದಲಾದ ಗುರುವಂಶಜಾತ
ದಶಪ್ರಮತಿ ಸರಸಿಜನಾಭ ನರಹರಿ ತೀರ್ಥ
ಬಿಸಜ ಚರಣಂಗಳಲಿ ಸತತ ನಾ ಶರಣು ೧

ಮಾಧವ ಅಕ್ಷೋಭ್ಯಜಯ ವಿದ್ಯಾಧಿರಾಜ
ರಾಜೇಂದ್ರ ಕವೀಂದ್ರ ವಾಗೀಶ ರಾಮಚಂದ್ರ
ವಿಭುದೇಂದ್ರ ವಿದ್ಯಾನಿಧಿಗಳು ಈ ಸರ್ವ
ಸುತಪೋನಿಧಿ ಯತಿವರ್ಯರಿಗೆ ನಮಿಪೆ ೨

ವೇದಾಂತ ಕೋವಿದರು ರಘುನಾಥ ರಘುವರ್ಯ
ಪದವಾಕ್ಯ ತತ್ವಜ್ಞ ರಘೂತ್ತಮಾರ್ಯರಿಗೆ
ವೇದಾವ್ಯಾಸಾಭಿದ ಗುರುವಿದ್ಯಾಧೀಶರಿಗೆ
ವೇದನಿಧಿಗಳಿಗೆ ಬಾಗುವೆ ಶಿರವ ೩

ಸತ್ಯವ್ರತ ಸತ್ಯನಿಧಿ ಸತ್ಯನಾಥರಿಗೆ
ಸತ್ಯಭಿನವಸತ್ಯಪೂರ್ಣರಿಗೆ ನಮಿಪೆ
ಸತ್ಯವಿಜಯರಿಗೆ ಸತ್ಯಪ್ರಿಯಸತ್ಯಬೋಧರಿಗೆ
ಸತ್ಯ ಸಂಧರಿಗೆ ನಾ ಶರಣಾದೆ ಎಂದೂ ೪

ಸತ್ಯವರತೀರ್ಥರಿಗೆ ಸತ್ಯವರ ಕರಜಾತ
ಸತ್ಯಧರ್ಮರಿಗೆ ನಾ ಮನಸಾ ಆನಮಿಪೆ
ಸತ್ಯಧರ್ಮರ ಮಹಿಮೆ ಬಹು ಬಹು ಬಹಳವು
ಕಿಂಚಿತ್ತು ಅಂಶಮಾತ್ರ ಸೂಚಿತವು ಇಲ್ಲಿ ೫

ಉದ್ದಾಮ ಪಂಡಿತರು ನವರತ್ನ ವಂಶಜರು
ವಿದ್ವತ್ ಶಿರೋಮಣಿ ಅಣ್ಣ ಆಚಾರ್ಯರು
ವೈದಿಕ ಸದಾಚಾರಿ ತ್ರಿಕರಣದಿ ಶುದ್ಧರು
ನಂದಿನಿಧರ ಮಧ್ವಮಾಧವ ಪ್ರಿಯರು ೬

ವಿತ್ತಸಂಗ್ರಹದಲ್ಲಿ ಚಿತ್ತವನು ಇಡದಲೆ
ಸತ್ಯಧರ್ಮದಿರತರು ಸಂತತ ಇವರು
ಸದಾಗಮಿಕ ಭಾಗವತ ಮಾಧ್ವ ಸಚ್ಛಾಸ್ತ್ರದಿ
ಮುದದಿಂದ ಕಾಲ ಉಪಯೋಗ ಮಾಡುವರು ೭

ಇಂಥಾ ಭಾಗವತರಲ್ಲಿ ಗಂಗಾಧರನೇವೇ
ಬಂದು ಔತಣ ಉಂಡು ಉಡುಗೊರೆಯಕೊಂಡು
ಸಂತತ ತಾ ಧ್ಯಾನಿಸುವ ರಾಮನ್ನ ಇವರು
ಮುಂದು ಪೂಜಿಪ ಯೋಗ ಅನುಗ್ರಹ ಮಾಡಿದರು ೮

ಅಣ್ಣಾಚಾರ್ಯರ ಮನೆಯಲ್ಲಿ ಅಕ್ಕಿ
ಉಣಲಿಕ್ಕೆ ಸಾಲದೆ ಇರುವಾಗ ಬಂದ
ಬ್ರಾಹ್ಮಣ ಓರ್ವನು ಭಸ್ಮಧರ ಅವನು
ಅನ್ನಬೇಕೆಂದನು ಮಧ್ಯಾಹ್ನಕಾಲ ೯

ಅನ್ನ ಅನ್ನದ ಅನ್ನಾದನ್ನ ಸ್ಮರಿಸುತ್ತ
ಅಣ್ಣಾಚಾರ್ಯರು ಅಡಿಗೆ ತಾಮಾಡಿ

ಬ್ರಾಹ್ಮಣನಿಗೆ ಬಡಿಸಿ ಧೋತ್ರಗಳ ಕೊಟ್ಟರು
ಪೂರ್ಣ ಉಂಡು ಪೋದ ವಿಪ್ರನು ತುಷ್ಟಿಯಲ್ಲಿ ೧೦

ಹಿಂದೆ ಆಚಾರ್ಯರು ಪೋಗಿ ನೋಡಲು ಶಿವನ
ಮಂದಿರದಿ ವಿಪ್ರ ಅಂತರ್ಧಾನನಾದ
ಮಂದಾಕಿನಿಧರನ ಮೂರ್ತಿಯಲಿ ಧೋತ್ರಗಳು
ಚಂದದಿ ಇದ್ದವು ದಕ್ಷಿಣೆ ಸಮೇತ ೧೧

ಸವಣೂರು ರಾಜ್ಯದ ಮಂತ್ರಿ ಖಂಡೇರಾಯ
ದಿವಿಜರ ಲೋಕಯಾತ್ರೆಯು ಮಾಡಲಾಗ
ದೇವರ ನೈವೇದ್ಯಯಕ್ಕಾದರಣೆ ತಪ್ಪಲು
ಸವಣೂರು ಪ್ರಾಂತವ ಬಿಟ್ಟು ತೆರಳಿದರು ೧೨

ದೇವತಾಂಶರು ಇವರು ಮಾನುಷ ಜನ್ಮವ
ಭೂಮಿಯಲ್ಲಿ ಕೊಂಡು ಮಾನುಷ್ಯ ಜನರಂತೆ
ಭವಣೆಗಳ ಹರಿಸ್ಮರಣೆಯಿಂ ತಾಳಿ ತಪ್ಪಸ್ಸಂತೆ
ದಿವ್ಯ ಮಂತ್ರಾಲಯ ಕ್ಷೇತ್ರ ಐದಿದರು ೧೩

ಔದಾರ್ಯಗುಣನಿಧಿ ಶ್ರೀ ರಾಘವೇಂದ್ರ
ತೀರ್ಥರ ವೃಂದಾವನ ಸೇವೆ ಮಾಡಿ
ಕೃತಕೃತ್ಯರಾದರು ಅಣ್ಣಾಚಾರ್ಯರು
ಒದಗಿ ಅನುಗ್ರಹಿಸಿದರು ಗುರುಗಳು ಬೇಗ ೧೪

ಶ್ರೀ ರಾಘವೇಂದ್ರ ತೀರ್ಥಾರ್ಯಕರುಣಿಗಳು
ತೋರಿ ಸ್ವಪ್ನದಿ ಸತ್ಯವರರಲ್ಲಿ ಪೋಗೆ
ದೊರೆಯುವುದು ಇಷ್ಟಾರ್ಥ ಎಂದು ಪೇಳಿದರು
ಹೊರಟರು ಆಚಾರ್ಯರು ಸತ್ಯವರರಲ್ಲಿ ೧೫

ಆ ಸಮಯ ಶ್ರೀ ಸತ್ಯವರ ತೀರ್ಥರ ಮಠದಿಂ
ಶ್ರೀ ಸ್ವಾಮಿ ಮಂಜೂಶ ಕಳವು ಆಗಿ
ವ್ಯಸನದಲಿ ಉಪೋಶಣದಿ ಸತ್ಯವರರಿದ್ದರು
ಭಾಸವಾಗದೆ ಮೂರ್ತಿಗಳಿರುವ ಸ್ಥಳವು ೧೬

ಮಾರ್ಗದಲಿ ಅಣ್ಣಾಚಾರ್ಯರು ಮೂರ್ತಿಗಳ
ಝುಗ ಝುಗಿಪ ಕಾಂತಿಯ ತಾ ಕಂಡು ಮಠಕ್ಕೆ
ಪೋಗಿ ಶ್ರೀ ಸತ್ಯವರರಲ್ಲಿ ಪೇಳಿದರು
ಹೇಗೆ ವರ್ಣಿಸುವೆ ಆ ಗುರುಗಳ ಆನಂದ ೧೭

ನಿಗಮ ಘೋಷಂಗಳು ವಿಪ್ರಜನ ಮುಖದಿಂದ
ಮಂಗಳ ಧ್ವನಿ ಮೇಳ ತಾಳವಾದ್ಯಗಳು
ಕಂಗೊಳಿಸುವ ಮೆರವಣಿಗೆ ಮಠಮಂದಿರಕ್ಕೆ
ಗಂಗಾಜನಕನ ಮೂರ್ತಿಗಳ ತಂದರು ೧೮

ಯುಕ್ತಕಾಲದಿ ಅಣ್ಣಾಚಾರ್ಯಸೂರಿಗಳು
ಸತ್ಯವರರ ಅಮೃತ ಹಸ್ತಾಭಿಷೇಕ
ಯತಿ ಆಶ್ರಮ ಸತ್ಯಧರ್ಮತೀರ್ಥ
ರೆಂದು ನಾಮಾ ಪ್ರಣವ ಉಪದೇಶಕೊಂಡರು ೧೯

ಪ್ರಣವೋಪದೇಶ ಗುರು ಹಸ್ತದಿಂ ಅಭಿಷೇಕ
ಘನ ಮಹಾವೇದಾಂತ ಪೀಠವು ಲಭಿಸಿ
ಈ ನಮ್ಮ ಸತ್ಯಧರ್ಮರ ದೇಶದಿಗ್ವಿಜಯ
ಜ್ಞಾನೋಪದೇಶ ಹರಿಪೂಜಾ ಮಾಡಿದರು ೨೦

ಭಾವುಕರ ಪ್ರಿಯತಮಸನತ್ಸುಜಾತೀಯವು
ಭಾವದೀಪಿಕ ಶ್ರೀಮದ್ ಭಾಗವತಕೆ
ತತ್ವಸಂಖ್ಯಾನ ಶ್ರೀ ವಿಷ್ಣು ತತ್ವನಿರ್ಣಯ
ಇವು ಎರಡಕ್ಕೂ ಟಿಪ್ಪಣಿ ಬರೆದು ಇಹರು ೨೧

ವಾಗ್ವಜ್ರ ಧಾರಾವು ದುರ್ವಾದಿ ಗಿರಿಕುಲಿಶ
ಜಗತಲ್ಲಿ ಹೋದಕಡೆ ಎಲ್ಲೂ ಮರ್ಯಾದೆ
ಬಾಗುವ ಯೋಗ್ಯರಿಗೆ ಸತ್ತತ್ವ ಉಪದೇಶ
ಜಗಕ್ಷೇಮಕರ ಪೂಜಾ ವರವು ದೀನರಿಗೆ ೨೨

ಮೂವತ್ತು ಮೇಲ್ಮೂರು ವತ್ಸರವು ಶ್ರೀಮಠ
ಸುವಿತರಣೆಯಿಂದ ಆಡಳಿತ ಮಾಡಿ

ಸುವರ್ಣ ರತ್ನಾಭರಣ ಮಠತೋಟಂಗಳ
ದೇವಪ್ರೀತ್ಯರ್ಥ ಸೇರಿಸಿದರು ಮಠಕೆ ೨೩

ಹದಿನೇಳನೂರು ಐವತ್ತೆರಡು ಶಾಲಿಶಕ
ತ್ರಯೋದಶಿ ಶ್ರಾವಣ ಕೃಷ್ಣಪಕ್ಷ
ಇಂಥಾ ಸುಪುಣ್ಯ ದಿನದಲ್ಲಿ ಶ್ರೀ ಹರಿಯ
ಪಾದವನೈದಿದರು ಹರಿಯಧ್ಯಾನಿಸುತ ೨೪

ಮತ್ತೊಂದು ಅಂಶದಲಿ ವೃಂದಾವನದಲ್ಲಿ
ಬಂದು ಸೇವಿಸುವವರ ವಾಂಛಿತವೀಯುತ್ತ
ನಂದಿನಿಧರ ಮಧ್ವ ಮಾಧವನ ಒಲಿಮೆಯಿಂ
ನಿಂತಿಹರು ಸ್ಮರಿಪರ ಗೋಕಲ್ಪತರುವು ೨೫

ಕನ್ನಡಪ್ರದೇಶದಲಿ ಮಹಿಷೂರು ರಾಜ್ಯ ಹೊಳೆ
ಹೊನ್ನೂರು ಕ್ಷೇತ್ರದಲಿ ವೃಂದಾವನ
ಅಹ್ನುಕನ್ಯಾ ಬಿಂದು ರೂಪದಲಿ ವರ್ಷಿಪಳು
ಜಾಹ್ನವಿಧರ ಉಸುವು ಕಣರೂಪದೊಳಗೆ ೨೬

ಒಲಿವ ಶಿವ ಸತ್ಯ ಧರ್ಮರ ನಾವು ಸ್ಮರಿಸಲು
ಒಲಿವರು ಮಧ್ವಮುನಿ ಶಿವನು ನಮಗೊಲಿಯೆ
ಒಲಿವನು ಅಜಪಿತ 'ಶ್ರೀ ಪ್ರಸನ್ನ ಶ್ರೀನಿವಾಸನು'
ಒಲಿವ ಬೋಧರು ಮಧ್ವಮುನಿ ಒಲಿದರೇವೇ ೨೭ ಪ

॥ ಸಂಪೂರ್ಣಂ ॥

ಸತ್ಯಧರ್ಮತೀರ್ಥರ ಸ್ತುತಿ

೧೨೯

ಸ್ಮರಿಸಿ ಬದುಕಿರೊ ಸತ್ಯ ಧರ್ಮತೀರ್ಥರ
ಚರಣಕೆರಗಿರೊ ಹರಿದಾಸವರ್ಯರ ಪ

ಸತ್ಯವರ ಕರ ಸರಸಿಜಾತರ
ಸತ್ಯಾರಮಣನ ಒಲಿಸಿಕೊಂಡ ಧೀರರ ೧

ಸತ್ಯ ಸಂಕಲ್ಪರ ಧರೆಗೆ ಇತ್ತವರ
ಭೃತ್ಯರಘಗಳ ತರಿದು ಕಾಯ್ವರ ೨

ದೇವಕೇಯನ ಕಥಾ ಭಾಗವತಾರ್ಥಸು
ವ್ಯಾಖ್ಯ ಮಾಡಿದ ಪ್ರಖ್ಯಾತ ಮಹಿಮರ ೩

ನೆನೆದಮಾತ್ರದಿ ಎನ್ತಷ್ಟು ಎಣಿಸದೆ
ಕ್ಷಣದಿ ತಾಪದಿ ಪರಿಹರಿಸಿ ಪೊರೆವರ ೪

ಸಲಿಲ ಕಾಂಚನ ಪುರದಲ್ಲಿರುವರ ।
ಒಲಿದು ಕಾಯ್ವರ ಕರೆದ ಮಾತ್ರದಿ ಬಂದು ೫

ಸತ್ಯಬೋಧರ ಸತ್ಯಸಂಧರ
ಸತ್ಯವರರಸುಕುಲ ಸುಜಾತರ ೬

ಮಧ್ವಹೃತ್ಪದ್ಮ ದಾಸವಿಧಿಪಿತ ।
ಶ್ರೀದ ಪ್ರಸನ್ನ ಶ್ರೀನಿವಾಸ ಪ್ರೀಯರ ೭

ಶ್ರೀ ವಿಷ್ಣು ತೀರ್ಥ ವಿಜಯ

೧೩೦

ಪ್ರಥಮ ಕೀರ್ತನೆ

ಶ್ರೀ ಹರಿಪಾದಾಬ್ಜರತ ಶ್ರೀ ವಿಷ್ಣು ತೀರ್ಥ ವನ –
ರುಹ ಅಂಘ್ರಿಯುಗ್ಮದಲಿ, ಶರಣಾದೆ ಸತತ ಪ

ಮಹಾಕರುಣಿಯು ಪರಮಹಂಸ ಕುಲತಿಲಕರು
ಅಪರ್ನಿಶಿ ಒದಗುವರು ಶರಣು ಸುಜನರಿಗೆ ಅ ಪ

ನಿರ್ದೋಷ ಗುಣಪೂರ್ಣ ಶ್ರೀ ರಮಣ ಹಂಸನಿಗೆ
ವಿಧಿಸನಕ ಮೊದಲಾದ ಗುರುಪರಂಪರೆಗೆ,
ಯತಿವರ್ಯ ಅಚ್ಚುತ ಪ್ರೇಕ್ಷರಿಗೆ ಆನಂದ
ತೀರ್ಥರ ಪದಾಂಬುಜಗಳಿಗೆ ಆನಮಿಪೆ ೧

ಪಂಕೇರುಹನಾಭ ನರಹರಿ ಮಾಧವ
ಅಕ್ಷೋಭ್ಯ ಜಯತೀರ್ಥ ವಿದ್ಯಾಧಿರಾಜ
ವಾಗ್ವಜ್ರ ರಾಜೇಂದ್ರ ಕವಿವರ ಕವೀಂದ್ರ
ವಾಗೀಶರಿಗೆ ನಮೋ ರಾಮಚಂದ್ರರಿಗೆ ೨

ಶ್ರೀರಾಮ ಪ್ರಿಯ ರಾಮಚಂದ್ರರ ಕರಜರು
ಸೂರಿಗಳು ವಿಭುದೇಂದ್ರ ವಿದ್ಯಾನಿಧಿಗೆ
ಎರಗಿ ವಿದ್ಯಾನಿಧಿಯ ಸುತ ರಘುನಾಥರಿಗು
ಕರುಣಾಳು ರಘುವರ್ಯರಿಗು ಆನಮಿಪೆ ೩

ವೇದಾಂತ ಕೋವಿದ ರಘೂತ್ತಮ ತೀರ್ಥರಿಗೆ
ವೇದವ್ಯಾಸಾಭಿದ ಯತಿಗಳಿಗೆ ನಮಿಪೆ
ವೇದವ್ಯಾಸ ತೀರ್ಥರ ಕರಕಮಲ ಸಂಜಾತ
ವಿದ್ಯಾಧೀಶರ ಚರಣಕಾ ನಮಿಪೆ ೪

ವೇದನಿಧಿ ಸತ್ಯವ್ರತ ಸತ್ಯನಿಧಿ ಸತ್ಯ –
ನಾಥ ಸತ್ಯಾಭಿನವ ಸತ್ಯಪೂರ್ಣರಿಗೆ
ಸತ್ಯವಿಜಯ ಸತ್ಯಪ್ರಿಯ ಸತ್ಯಬೋಧರಿಗೆ
ಸತ್ಯಸಂಧ ಈ ಸರ್ವ ಗುರುಗಳಿಗೆ ನಮಿಪೆ ೫

ಸತ್ಯವರ ತೀರ್ಥರ ಚರಣಕಾ ನಮಿಸುವೆ
ಸತ್ಯವರ ಕರಕಂಜ ಸಂಜಾತರಾದ
ಸತ್ಯರಮಣ ಪ್ರಿಯ ಶ್ರೀ ವಿಷ್ಣುತೀರ್ಥರ
ವೃತತಿಜಾಂಘ್ರಿಗಳಲ್ಲಿ ಶರಣಾದೆ ಸತತ ೬

ಶ್ರೀ ತ್ರಿವಿಕ್ರಮ ಪಾದ ಅಬ್ಜಜಾಸರಿತವ
ಶಿರದ ಮೇಲ್ ಧರಿಸಿದ ಗಿರಿಜೇಶನಂತೆ

ಹರಿಭಕ್ತಾಗ್ರಣಿ ವೈರಾಗ್ಯ ನಿಧಿಯು ಈ
ಸೂರಿ ಕುಲತಿಲಕ ಶ್ರೀ ವಿಷ್ಣು ತೀರ್ಥಾರ್ಯ ೭

ಸವಣೂರು ಪ್ರಾಂತದ ಸಿದ್ಧಾಪುರದವರು
ಮಾಧ್ವದಂಪತಿ ಭಾಗೀರಥಿ ಬಾಳಾಚಾರ್ಯ
ಸೇವಿಸಿದರು ಟೀಕಾಚಾರ್ಯರ ಭಕ್ತಿಯಿಂ
ದೇವಸ್ವಭಾವ ಮಗ ಪುಟ್ಟಬೇಕೆಂದು ೮

ರಾಘವಾನಂದ ಮುನಿ ಅಕ್ಷೋಭ್ಯ ತೀರ್ಥರಾ –
ನುಗ್ರಹ ಸದಾಪೂರ್ಣ ಜಯತೀರ್ಥ ಮುನಿಯು
ಬಾಗಿ ಬೇಡಿದ ಈ ಸಾಧುದಂಪತಿಗೊಲಿದು
ಯುಕ್ತ ಕಾಲದಿ ದೊರೆಯಿತು ಪುತ್ರ ಭಾಗ್ಯ ೯

ಸ್ಫಟಿಕನಿಭ ಅಕಳಂಕ ಕಾಂತಿಯುಕ್ ಮಗನಿಗೆ
ಇಟ್ಟು ಜಯತೀರ್ಥನಾಮವ ಮುಂಜಿ ಮಾಡಿ
ಪಾಠ ಓದುವುದಕ್ಕೆ ಐಜಿ ಆಚಾರ್ಯರಲಿ
ವಟುವ ಕಳುಹಿಸಿದರು ಕೃತಕೃತ್ಯ ತಂದೆ ೧೦

ಜಯತೀರ್ಥರನುಗ್ರಹದಿ ಜಯತೀರ್ಥ ವಟುವು
ವಿದ್ಯಾಭ್ಯಾಸ ಐಜಿ ಆರ್ಯರಲ್ಲಿ
ಗೈಯುವಾಗ ಇತರ ವಿದ್ಯಾರ್ಥಿಗಳಿಗಧಿಕ
ದಿವ್ಯ ಪ್ರತಿಭಾವನ್ನ ತೋರಿಸುತ್ತಿದ್ದ ೧೧

ಶ್ರೀದ ಒಲಿದಿಹ ಇವನ ಯೋಗ್ಯತೆ ದೊಡ್ಡದು,
ವೈದಿಕ ಸುಪೂರ್ಣ ಬೋಧರ ಶಾಸ್ತ್ರವೆಲ್ಲ,
ಓದಿ ಶ್ರೀ ಐಜಿ ವೇಂಕಟರಾಮಾರ್ಯರಲ್ಲಿ
ಉತ್ತಮ ಜ್ಞಾನಿಯು ಆದ ಜಯತೀರ್ಥ ೧೨

ಸುರವೃಂದದಲಿ ದೊಡ್ಡ ಸ್ಥಾನದವ ಇವನೆಂದು
ಹರಿಯೇ ಈ ಜಯತೀರ್ಥನಲಿ ತೋರಿಹನು
ಗುರು ಐಜಿಯರ ಸುತನ ಅಪಮೃತ್ಯು ತರಿದಿಹನು
ಭಾರಿತರ ಆಶ್ಚರ್ಯ ಇನ್ನೂ ತೋರಿಹನು ೧೩

ಬೃಹತಿ ಸಹಸ್ರಪ್ರಿಯ ಮಹಿದಾಸ ಜಗದೀಶ
ಬ್ರಹ್ಮಪಿತ ಭಕ್ತಪಾಲಕ ಪರಮಹಂಸ
ಮಹಿಶಿರಿಕಾಂತ 'ಶ್ರೀ ಪ್ರಸನ್ನ ಶ್ರೀನಿವಾಸ'
ಮಹಾಭಕ್ತ ಶ್ರೀ ವಿಷ್ಣು ತೀರ್ಥಾಯಶರಣು ೧೪ ಪ

೧೩೦-೧

ದ್ವಿತೀಯ ಕೀರ್ತನೆ

ಶ್ರೀ ಹರಿಪಾದಾಬ್ಜರತ ಶ್ರೀ ವಿಷ್ಣು ತೀರ್ಥ ವನ -
ರುಹ ಅಂಘ್ರಿಯುಗ್ಮದಲಿ ಶರಣಾದೆ ಸತತ ಪ

ಮಹಾಕರುಣಿಯು ಪರಮಹಂಸ ಕುಲತಿಲಕರು
ಅಹರ್ನಿಶಿ ಒದಗುವರು ಶರಣು ಸುಜನರಿಗೆ ಅ ಪ

ದ್ವಿತೀಯಾಶ್ರಮವನ್ನು ಯುಕ್ತ ಕಾಲದಿ ಕೊಂಡು
ಸದ್ಧರ್ಮ ಆಚರಿಸಿ ಗೃಹಕೃತ್ಯದಲ್ಲಿ
ಇದ್ದರು ಜಯತೀರ್ಥ ಆಚಾರ್ಯ ಆದರು
ಸದಾ ಹರಿಯಲ್ಲೇ ಧಾವಿಸಿತು ಮನಸ್ಸು ೧

ಕ್ಷೀರ ಫೇಣವೊಲ್ ತೂಲಿಕ ಹಂಸ ತಲ್ಪವು
ಶುಭ್ರ ಕನ್ನಡಿ ಚಿತ್ರಾಲಂಕಾರಗಳು
ಕೊರತೆ ಏನೂ ಇಲ್ಲ ಐಹಿಕ ಸಂಪತ್ತಿಗೆ
ಸ್ಫುರದ್ರೂಪಿಣಿ ಸತಿ ಸುಶೀಲೆ ಸುಗುಣೆ ೨

ಪ್ರಾರಬ್ಧ ಕರ್ಮನಿಮಿತ್ತ ಶ್ರೀಹರಿಯೇವೆ
ಪರಿಪರಿಭೋಗಗಳ ಒದಗಿಸಿದ್ದೆಲ್ಲ
ಹರಿಗೆ ಅರ್ಪಿಸುತ ಅನುಭವಿಸುತಿರಲಾಗ
ಹೊರಗಿಂದ ಓರ್ವನು ಹಾಡಿದನು ನುಡಿಯ ೩

ಮಂಚಬಾರದು ಮಡದಿಬಾರಳು ಕುಂಚುಕನ್ನಡಿ ಬಾರದು
ಸಂಚಿತಾರ್ಥವು ಮತ್ತೆ ಬಾರದು ಮುಂಚೆ ಮಾಡಿರಿ ಧರ್ಮವ

ಕಂಚಿನ ಗಂಟೆ ಧ್ವನಿ ಅಂದದಿ ಈ ನುಡಿ ಕೇಳಿ
ಮಂಚದಿಂದಿಳಿದರು ಕುಳಿತರು ಚಿಂತೆಯಲಿ ೪

ಅಕಳಂಕ ಗುಣನಿಧಿ ನಾರಾಯಣ ಮಾಯೇಶ
ಸಂಕರುಷಣ ಪ್ರದ್ಯುಮ್ನ ಅನಿರುದ್ಧ
ಶ್ರೀಕರಾರ್ಚಿತ ಪಂಚರೂಪನ ಪ್ರೇರಣೆಯೆಂದು
ಮಾಕಳತ್ರನ ಸ್ಮರಿಸಿ ಹೊರಟರು ಹೊರಗೆ ೫

ಲೌಕಿಕ ವಿಷಯ ವಿಜೃಂಭಣಾಡಂಬರವ
ಲೆಕ್ಕಿಸದೆ ವೈರಾಗ್ಯ ಮನಪಕ್ವದಿ
ಭಕುತಿ ಉನ್ಮಾಹದಿ ಅವಧೂತಚರ್ಯದಿ
ಶ್ರೀಕರ ನಾರಾಯಣನ ಸೇವಿಸಿದರು ೬

ತೀರ್ಥಕ್ಷೇತ್ರಾಟನ ಮಾಡಲಿಕೆ ಹೊರಟರು
ಹಾದಿಯಲಿ ಸರ್ಪವು ಅಡ್ಡ ಬರಲು
ವೇದ್ಯವಾಯಿತು ಜಯತೀರ್ಥ ಮುನಿಗಳು ತಾವೇ
ಬಂದು ತಡೆದರು ಸರ್ಪರೂಪದಲಿಯೆಂದು ೭

ಈ ಪುಣ್ಯ ಶ್ಲೋಕರು ಜಯತೀರ್ಥ ವಿಪ್ರ
ಸರ್ಪರೂಪಶೇಷದೇವರ ಜಯಮುನಿಗಳ
ಅಭಿಪ್ರಾಯವನ್ನರಿತು ಶಾಸ್ತ್ರಪ್ರವಚನ
ಶಿಷ್ಯೋಪದೇಶದಿ ಹರಿಯ ಸೇವಿಸಿದರು ೮

ಮಲಾಪಹಾರಿಣಿ ತೀರಸ್ಥ ಮುನವಳ್ಳಿ
ಶೀಲತಮ ಅಡವಿ ಪ್ರದೇಶ ಗ್ರಾಮದಲಿ
ಕುಳಿತು ಶಿಷ್ಯರಿಗೆ ಸುಧಾದಿಗಳ ಪೇಳಿದರು
ಪೊಗಳ ಬಲ್ಲೆನೆ ಇವರ ಮಹಿಮೆ ಸಾಕಲ್ಯ ೯

ಸುಮಧ್ವವಿಜಯ ಪಾರಾಯಣ ಮಾಡುತ್ತ
ಕಲ್ಮಷ ಕಿಲುಬು ಹತ್ತಿದ ಪಾತ್ರೆಯನ್ನ
ಕಲ್ಮಷ ಕಿಲಬನ್ನ ತ್ವರಿತದಿ ನೀಗಿಸಿ
ಹೇಮಮಯ ಮಾಡಿದರು ಜನರು ಕಂಡಿಹರು ೧೦

ಹನ್ನೆರಡು ಬಾರಿ ಸುಧಾದಿಗಳ ಪ್ರವಚನ ಮಾಡಿ
ವಿನಯ ಸಂಪನ್ನಶ್ರದ್ಧಾಳು ಶಿಷ್ಯರಿಗೆ
ಹನ್ನೆರಡಾವರ್ತಿ ಸುಧಾ ತತ್ವ ಪ್ರಕಾಶಿಕ ಪೇಳಿ
ಘನ ಮಹಿಮ ಟಿಪ್ಪಣಿ ಮಾಡಿಹರು ಎರಡಕ್ಕೂ ೧೧

ಭುಜಗಶಾಯಿ ಕ್ಷೀರಾಬ್ಧಿವಾಸನ ಪ್ರೀತಿಗೂ
ಸುಜನ ಅಧಿಕಾರಿಗಳ ಉದ್ಧಾರಕ್ಕು
ರಚಿಸಿ ಗ್ರಂಥಗಳನ್ನ ಕೃತಕೃತ್ಯ ಮನದಲ್ಲಿ
ರಾಜರಾಜೇಶ್ವರಿ ಶ್ರೀ ಹರಿಗರ್ಪಿಸಿದರು ೧೨

ಸತ್ಯಸಂಧಾರ್ಯರ ಹಸ್ತಪದ್ಮೋತ್ಪನ್ನ
ಸತ್ಯವರ ತೀರ್ಥರ ಕರಕಂಜದಿಂದ
ಜಯತೀರ್ಥಾಚಾರ್ಯರು ಕೊಂಡರು ತುರ್ಯಾಶ್ರಮ
ತೋಯಜಾಕ್ಷ ಶ್ರೀ ವಿಷ್ಣುತೀರ್ಥ ನಾಮದಲಿ ೧೩

ಬೃಹತಿ ಸಹಸ್ರಪ್ರಿಯ ಮಹಿದಾಸ ಜಗದೀಶ
ಬ್ರಹ್ಮಪಿತ ಭಕ್ತಪಾಲಕ ಪರಮಹಂಸ
ಮಹಿಶಿರಿಕಾಂತ 'ಶ್ರೀ ಪ್ರಸನ್ನ ಶ್ರೀನಿವಾಸ'ನ
ಮಹಾಭಕ್ತ ಶ್ರೀ ವಿಷ್ಣು ತೀರ್ಥಾರ್ಯಶರಣು ೧೪ ಪ

೧೩೦–೨

ತೃತೀಯ ಕೀರ್ತನೆ

ಶ್ರೀ ಹರಿಪಾದಾಬ್ಜರತ ಶ್ರೀ ವಿಷ್ಣು ತೀರ್ಥ ವನ –
ರುಹ ಅಂಘ್ರಿಯುಗ್ಮದಲಿ ಶರಣಾದೆ ಸತತ ಪ

ಮಹಾಕರುಣಿಯು ಪರಮಹಂಸ ಕುಲತಿಲಕರು
ಅಹರ್ನಿಶಿ ಒದಗುವರು ಶರಣು ಸುಜನರಿಗೆ ಅ ಪ

ಸ್ಥೂಲ ಪ್ರವಿವಿಕ್ತ ಆನಂದ ಭುಕ್ ಅವ್ಯಯನ
ಶೀಲತಮ ಮಂತ್ರ ಶ್ರೀ ಸತ್ಯವರವದನ

ಸಲಿಲೋರುಹದಿಂದ ಶ್ರೀ ವಿಷ್ಣು ತೀರ್ಥರು
ಬಲುಭಕ್ತಿಯಿಂದಲಿ ಕೊಂಡರುಪದೇಶ ೧

ಪೂರ್ವಾಶ್ರಮದಲ್ಲಾಚರಿಸಿದ ರೀತಿಯಲಿ
ತತ್ವಪ್ರಕಾಶಿಕಾ ಸುಧಾಭಾಗವತ
ಸರ್ವಸಚ್ಛಾಸ್ತ್ರ ಬೋಧಿಸುತ ಕುಶಾವತಿಯ
ಪವಿತ್ರ ತೀರದಿ ಮಾದನೂರು ಸೇರಿದರು ೨

ಸುಧಾವನ್ನು ತತ್ವಪ್ರಕಾಶಿಕವನ್ನು
ಒಂದು ನೂರೆಂಟು ಅವರ್ತಿ ಪಠಿಸುತ
ಮಧ್ವಹೃತ್ಪದ್ಮಸ್ಥ ಮಾಧವನ ಅರ್ಚಿಸುತ
ಮಾದನೂರಲ್ಲೇವೆ ವಾಸಮಾಡಿದರು ೩

ಪೂರ್ವಾಶ್ರಮ ನಾಮ ಜಯತೀರ್ಥಾಂಕದಲ್ಲಿ
ತತ್ವಪ್ರಕಾಶಿಕಾ ಸುಧಾ ಟಿಪ್ಪಣಿಯು
ಮೂವತ್ತು ಪ್ರಕರಣ ಶ್ರೀ ಭಾಗವತ ಸಾರೋ -
ದ್ಧಾರವ ಚತುರ್ದಶಿ ಷೋಡಶಿ ಬರೆದಿಹರು ೪

ತತ್ವಬೋಧಕ ಸುಸ್ತೋತ್ರ ಬಿನ್ನಹ ರೂಪ
ಆಧ್ಯಾತ್ಮ ರಸರಂಜಿನಿ ಅಮೃತ ಫೇಣ
ಭಕ್ತಿಯಲಿ ಪಠಿಸಲು ಅಪರೋಕ್ಷ ಪುರುಷಾರ್ಥ
ಸಾಧನವಾಗಿಹುದನ್ನ ರಚಿಸಿಹರು ಇವರು ೫

ಹದಿನಾರು ನೂರೆಪ್ಪತೆಂಟು ಶಾಲಿಶಕ
ಯದುಪತಿ ಅಷ್ಟಮಿ ಈಶ್ವರ ಶ್ರಾವಣದಿ
ಜಾತರಾಗಿ ಶ್ರೀ ಹರಿ ಪಾದಾಂಬುಜದಲ್ಲಿ
ಸದಾರತರಾದರು ಐವತ್ತು ವರುಷ ೬

ಕೃತಕೃತ್ಯ ಧನ್ಯ ಮನದಿಂದಲಿ ಈ ಮಹಾನ್
ಐದೆ ಹರಿಪುರ ಲಯವ ಚಿಂತನೆ ಮಾಡಿ
ಹದಿನೇಳ್ ನೂರಿಪ್ಪತ್ತು ಎಂಟು ಶಕ ಮಾಘ ತ್ರ -
ಯೋದಶಿ ಕೃಷ್ಣದಲ್ಲಿ ಕೃಷ್ಣನ ಸೇರಿದರು ೭

ಮತ್ತೊಂದು ಅಂಶದಿ ವೃಂದಾವನದಲ್ಲಿಹರು
ಭಕ್ತಿಯಿಂ ಸ್ಮರಿಸಿದರೆ ಬಂದು ಸಲಹುವರು
ಬಹುದೂರ ಧಾರವಾಡ ಕುಶನೂರು ಮತ್ತೆಲ್ಲ
ಬಹುದೂರದವರ ಸಹ ಸೇವಿಪರು ಇವರ ೮

ಬೃಹತಿ ಸಹಸ್ರಪ್ರಿಯ ಮಹಿದಾಸ ಜಗದೀಶ
ಬ್ರಹ್ಮಪಿತ ಭಕ್ತಪಾಲಕ ಪರಮಹಂಸ
ಮಹಿಶಿರಿಕಾಂತ 'ಶ್ರೀ ಪ್ರಸನ್ನ ಶ್ರೀನಿವಾಸ'
ಮಹಾಭಕ್ತ ಶ್ರೀ ವಿಷ್ಣು ತೀರ್ಥಾರ್ಯಶರಣು ೯ ಪ

ಶ್ರೀ ವಿಷ್ಣು ತೀರ್ಥ ಅಣು ವಿಜಯ

೧೩೧

ಅರಣ್ಯಕಾಚಾರ್ಯ ಶ್ರೀವಿಷ್ಣು ತೀರ್ಥಾರ್ಯರ
ಚರಣಸರಸೀರುಹದಿ ಶರಣಾದೆ ಸತತ
ಹೊರ ಒಳಗೆ ಪ್ರಜ್ವಲಿಪ ಅನಘಗುಣ ಪರಿಪೂರ್ಣ
ಸಿರಿವರ ಹರಿಕೃಪಾ ಪ್ರಸಾದವೊದಗಿಸುವ ಪ

ಟೀಕಾಚಾರ್ಯರ ಪಾದ ಸೇವಿಸಿದ ಫಲವಾಗಿ
ಭಾಗೀರಥಿ ಬಾಳಾಚಾರ್ಯರಲಿ ಜನಿಸಿ
ವೇಂಕಟರಾಮಾರ್ಯ ಐಜಿಯವರ ಸುಪವಿತ್ರ
ಮುಖ ಪಂಕಜದಿಂದ ಕಲಿತರು ಸಚ್ಛಾಸ್ತ್ರ ೧

ಜಯತೀರ್ಥ ನಾಮದಲಿ ಮೊದಲೆರಡು ಆಶ್ರಮ
ನಿಯಮದಿ ಚರಿಸಿ ಈ ವೈರಾಗ್ಯ ನಿಧಿಯು
ಸತ್ಯಸಂಧರಸುತ ಸತ್ಯವರ ತೀರ್ಥರಿಂ
ತುರೀಯಾಶ್ರಮಕೊಂಡ ವಿಷ್ಣು ತೀರ್ಥಾರ್ಯ ೨

ಏನು ಧನ್ಯರೋ ಸತ್ಯಧರ್ಮತೀರ್ಥರು ಮತ್ತು
ವಿಷ್ಣು ತೀರ್ಥರು ಈ ಸೂರಿ ಈರ್ವರಿಗೆ

ಅನಘಮಧ್ವಸ್ಥ ಶ್ರೀ ಹಂಸ ವೇದವ್ಯಾಸ
ತಾನೇ ಸತ್ಯವರ ದ್ವಾರ ಉಪದೇಶ ಕೊಟ್ಟ ೩

ಪೂರ್ವಾಶ್ರಮ ನಾಮ ಜಯತೀರ್ಥಾಂಕಿತದಲ್ಲಿ
ತತ್ವಪ್ರಕಾಶಿಕ ಸುಧಾ ಟಿಪ್ಪಣಿಯ
ಮೂವತ್ತು ಪ್ರಕರಣ ಶ್ರೀ ಭಾಗವತ – ಸಾರೋ
ದ್ಧಾರವ ಶೋಡಶಿ ಚತುರ್ದಶಿ ಬರೆದಿಹರು ೪

ತತ್ವಬೋಧಕ ಸ್ತೋತ್ರ ಬಿನ್ನಹ ರೂಪವು
ಆಧ್ಯಾತ್ಮ ರಸರಂಜಿನಿ ಅಮೃತಫೇಣ
ಭಕ್ತಿಯಲಿ ಪಠಿಸಲು ಅಪರೋಕ್ಷ್ಯ ಪುರುಷಾರ್ಥ
ಸಾಧನವಾಗಿಹುದನ್ನು ರಚಿಸಿಹರು ಇವರು ೫

ಹದಿನಾರು ಪ್ರಕರಣ ಶೋಡಶಿ ಎಂಬುದರಲಿ
ಹದಿನಾಲ್ಕು ಪ್ರಕರಣ ಚತುರ್ದಶಿಯಲ್ಲಿ ಬಂಧ
ಮೋಕ್ಷಾಂತ ಶೋಡಶಿಯಲ್ಲಿಹುದು
ಭಕ್ತಿ ಶುಚಿಯಲಿ ಪಠನೀಯ ರಹಸ್ಯವು ೬

ಬಂಧಕವು ಬಂಧ ನಿವೃತ್ತಿಯು ಬಿಂಬ
ಪ್ರತಿಬಿಂಬ ಭಾವವು, ಬಿಂಬಸಂಸ್ಥಾಪನವು
ಐದನೇ ಪ್ರಕರಣ ಸ್ಥೂಲ ದೇಹ ಸೃಷ್ಟಿಯು,
ಅವಸ್ಥಾತ್ರಯ ನಿರ್ಮಾಣ ಆರನೆಯದು ೭

ಪ್ರಾಣವ್ಯಾಪಾರವು ಭೋಜನ ಪ್ರಕರಣವು
ಇಂದ್ರಿಯ ವ್ಯಾಪಾರವು ತತ್ವಕಾರ್ಯಹತ್ತು
ತನು ಅಧಿಷ್ಠಾನ ರಥಾಧಿ ಪ್ರಕರಣವು
ಹನ್ನೆರಡಲಿ ಬೋಧ್ಯ ಜಾಗೃತ್ ಪ್ರಕರಣವು ೮

ಸ್ವಪ್ನವು ಸುಷುಪ್ತಿಯು ಗಮನಾಗಮನವು
ಇನಿತು ಶುಭ ಮೋಕ್ಷ ಪ್ರಕರಣ ಷೋಡಶವು
ಇನ್ನು ಚತುರ್ದಶಿಯಲಿ ಜೀವಹೋಮ ಮೊದಲಾಗಿ
ರತ್ನಗಳು ಗುರು ಪ್ರಸಾದ ಲಾಭ ಪರ್ಯಂತ ೯

ಜೀವಹೋಮ – ಉಪನಯನ ಸೂರ್ಯಗತಿ ಯಜ್ಞ
ಪವಿತ್ರತಮ ವೇದಾಧ್ಯಯನ ಭಿಕ್ಷಾಟನ
ವೈಶ್ವಾನರ ಪ್ರಿಯ ಭೋಜನ ಪಾಪಲೇಪ
ಜೀವ ಪ್ರಯಾಣ ಮಾರ್ಗವು ನವಮ ೧೦

ಹತ್ತನೆಯದು ಬ್ರಹ್ಮಯಜ್ಞಲಯ ಚಿಂತನಾಕ್ರಮ
ಶುದ್ಧಯಜ್ಞ 'ಸ್ವರೂಪಯಜ್ಞ' ಸುಲಭಪೂಜಾ
ಹದಿನಾಲ್ಕಲಿ ಗುರುಪ್ರಾಸಾದ ಲಾಭದಲಿ
ಆದಿತ್ಯಗ ಮಧು ಸುಖ ಪೂರ್ಣ ವಿಷಯ ೧೧

ಯೋಗ್ಯ ಆಧಿಕಾರಿಗೆ ಮಾತ್ರ ಈಸೌ –
ಭಾಗ್ಯಪ್ರದ ಜ್ಞಾನ ಪುಷ್ಟಿಕರಣ
ಯುಗುಳ ಮಾತ್ರೆಗಳನ್ನ ವಿನಿಯೋಗಿಸುವುದು
ಅಯೋಗ್ಯರಿಗೆ ಸರ್ವಥಾ ಕೊಡಕೂಡದು ೧೨

ಕೃತ ಕೃತ್ಯ ಧನ್ಯಮನದಿಂದಲಿ ಈ ಮಹಾನ್
ಐದಿಹರಿಪುರಲಯವ ಚಿಂತನೆಮಾಡಿ
ಹದಿನೇಳ್ ನೂರಿಪ್ಪತ್ತೆಂಟು ಶಕ ಮಾಘ
ತ್ರಯೋದಶಿ ಕೃಷ್ಣದಲಿ ಕೃಷ್ಣನ ಸೇರಿದರು ೧೩

ಮತ್ತೊಂದು ಅಂಶದಿ ವೃಂದಾವನದಿಹರು
ಭಕ್ತಿಯಿಂ ಸ್ಮರಿಸಿದರೆ ಬಂದು ಸಲಹುವರು
ಮಾದನೂರು ಕ್ಷೇತ್ರಸ್ಥ ವೃಂದಾವನ ಸೇವೆ
ಭಕ್ತಿಯಲಿ ಮಾಳ್ಪರು ದೇಶ ದೇಶ ಜನರು ೧೪

ಬೃಹತೀಸಹಸ್ರ ಪ್ರಿಯ ಮಹಿದಾಸ ಜಗದೀಶ
ಬ್ರಹ್ಮಪಿತ ಭಕ್ತಪಾಲಕ ಪರಮ ಹಂಸ
'ಮಹಿಸಿರಿ' ಶ್ರೀ ಪ್ರಸನ್ನ ಶ್ರೀನಿವಾಸನ
ಮಹಾಭಕ್ತಿ ಶ್ರೀ ವಿಷ್ಣು ತೀರ್ಥಾರ್ಯರೇ ಶರಣು ೧೫ ಪ

॥ ಸಂಪೂರ್ಣಂ॥

ಶ್ರೀ ಪುರಂದರದಾಸರು

೧೩೨

ಶರಣು ಪುರಂದರ ದಾಸರಾಯರೆ ಶರಣು ಶರಣು ದಯಾನಿಧೆ
ಶರಣು ವ್ಯಾಸಮುನೀಂದ್ರ ಪ್ರಿಯತಮ ಶರಣು ಮನ್ಮನೋಭೀಷ್ಟದ
ಪ.

ಜ್ಞಾನಭಕ್ತಿವೈರಾಗ್ಯ ಶಮದಮ
ಗುಣಗಣಾದಿ ಸಂಪನ್ನ ನೀ
ಹೀನ ವಿಷಯಗಳಲ್ಲಿ ರತನು
ಬೂಟಕನು ಗುಣಹೀನ ನಾ ೧

ನಿನ್ನ ಸುಸ್ವಭಾವವಾದ ಔ
ದಾರ್ಯಗುಣದಿಂದ ಎನ್ನನ್ನು
ಇನ್ನು ಮುಂದೆ ಕೊರತೆ ಸರ್ವವ
ಪರಿಹರಿಸಿ ಪಾಲಿಸೋ ೨

ಶ್ರೀ ಪುರಂದರ ವಿಜಯ ವಿಠ್ಠಲ
ಗೋಪಾಲ ಕಪಿಲ ಶ್ರೀಶಗೆ
ಪುಷ್ಪ ಜನಪಿತ ಶ್ರೀ ಪ್ರಸನ್ನ
ಶ್ರೀನಿವಾಸಗೆ ಪ್ರಿಯತಮ ೩

ಶ್ರೀ ಪುರಂದರ ದಾಸಾರ್ಯ ಸ್ತೋತ್ರ

೧೩೩

ಹರಿದಾಸ ಶ್ರೇಷ್ಠ ಶ್ರೀ ಪುರಂದರ ದಾಸಾರ್ಯರ
ಸರಸೀರುಹಾಂಘ್ರಿಯಲಿ ಶರಣಾದೆ ಸತತ ॥
ವೈರಾಗ್ಯ ಯುಕ್‍ಜ್ಞಾನ ಭಕ್ತ್ಯಾದಿ ಸಂಪತ್ತು
ಕರುಣದಲಿ ಒದಗಿಸಿ ಶ್ರೀಕೃಷ್ಣ ನ್ನೊಲಿಸುವರು ॥

ಈ ಪುಣ್ಯತಮ ಭರತಖಂಡದಲಿ ಪ್ರಖ್ಯಾತ ॥
ಕೃಪಾಂಬುಧಿ ಜಗನ್ನಾಥವಿಠ್ಠಲ ರುಕ್ಮಿಣೀಶ ॥
ರೂಪಗುಣ ಭೇಧವಿಲ್ಲದ ಪೂರ್ಣನಿರ್ದೋಷ
ಶ್ರೀಪ್ರಸನ್ನ ವೇಂಕಟನೇ ನಮೋ ಪದ್ಮಾವತೀಶ ೧

ಪುರುಷರೂಪತ್ರಯ ಕ್ಷರಾ ಕ್ಷರೋತ್ತಮ ಭೂಮ ।
ಅರದೂರ ಗುಣನಿಧಿ ನಾರಾಯಣಗೆ ಶರಣು ।
ಸುಪ್ರೇಮಾತಿಶಯದಲಿ ಸದಾ ಪತಿಯ ಸೇವಿಸುವ
ನಿರಾಮಯಳು ಸುಖಪೂರ್ಣಲಕ್ಷ್ಮಿಗೆ ಶರಣು ೨

ದ್ವಿಷೋಡಶ ಲಕ್ಷಣದಿ ರಾಜಿಪವಿಧಿ
ದಶಪ್ರಮತಿಗು ವಾಣಿ ಭಾರತಿಯರಿಗು ನಮಿಪೆ
ಶ್ರೀಶನ ಪೂರ್ಣಾನುಗ್ರಹ ಪೂರ್ಣಪಾತ್ರರು
ಉತ್ಕೃಷ್ಟರಜು ಸ್ತೋಮ ಚರಣಕಾನಮಿಪೆ ೩

ಉತ್ತಮ ಶ್ಲೋಕನ್ನ ಜಪಿಸಿ ಪೂಜಿಪ ಶಿವ
ಹೊತ್ತು ಸೇವಿಪಗರುಡ ಪರ್ಯಂಕ ಶೇಷ
ಭಕ್ತಾಗ್ರಣಿ ಈ ಸರ್ವರಿಗು ನಮಿಸುವೆನು
ಮಾಧವನ ಷಣ್ಮಹಿಷಿಯರಿಗು ನಮಿಪೆ ೪

ವಿಮಲ ಚರಿತರು ಉಮಾಸೌಪರ್ಣಿ ವಾರುಣಿಗು ।
ಅಮರೇಂದ್ರ ಮನ್ಮಥಮುನಿಗು ನಮನಮಾಡಿ
ನಮಿಸುವೆ ಅಹುಪ್ರಾಣದೇವನಿಗೆ ಗುರು ಶಚಿ
ಕಾಮಸತಿ ಸುತದತ್ತ ಸ್ವಾಯಂಭುವಗೆ ೫

ಶ್ರೀ ವಿಜಯದಾಸರು

೧೩೪

ವಿಜಯದಾಸರೆ ನಿಮ್ಮ ಪಾದವನಜಗಳನ್ನು
ಭಜಿಸೆ ಭಾಗ್ಯವದೆಂದು ಸಾಧುಜನಮತವು ಪ

ವಸುಧೆ ವೈಕುಂಠಪತಿ ವಿಜಯ ವೆಂಕಟಕೃಷ್ಣ
ಬಿಸಜಭವಪಿತ ಬಿಂದು ಮಾಧವಗೆ ಪ್ರಿಯ
ವಾಸವಾಹ್ವಯ ದಾಸಶ್ರೇಷ್ಠರಿಗೆ ಪ್ರಿಯತಮರೆ
ದಾಸವರ ಸುರವರ್‍ಯ ವಿಜಯಾರ್ಯ ಶರಣು ೧

ಮೃತ್ಯು ಅಪಮೃತ್ಯುಗಳ ತರಿದು ನಂಬಿದವರಿಗೆ
ಸತ್ಯಾರಮಣನೊಲುಮೆ ಒದಗಿಸಿದಿರಿ
ಮರ್ತ್ಯರಲಿ ನಾ ಮಂದ ನಿಮ್ಮ ನಂಬಿದೆ ಎನ್ನ
ಭೃತ್ಯನೆಂದೆನಿಸಿ ವಾತ್ಸಲ್ಯದಿ ಪಾಲಿಪುದು ೨

ಎನ್ನ ಸರ್ವೇಂದ್ರಿಯವು ಹೀನವಿಷಯದಿ ರತವು
ಬಿನ್ನಹವ ಮಾಡಲ್ಕೆ ಬಗೆ ಏನು ಕಾಣೆ
ಘನ ಔದಾರ್‍ಯನಿಧಿ ನಿಮಗೆ ಶರಣೆಂಬುವುದು
ಒಂದನ್ನೆ ನಾ ಬಲ್ಲೆ ಶರಣು ಸುರಧೇನು ೩

ಇಷ್ಟಧನ ಆಯುಷ್ಯ ಕೀರ್ತಿ ಉನ್ನತಜಯ
ದುಷ್ಟಭಯ ಬಂಧನಿಗ್ರಹವು ವೈರಾಗ್ಯ
ಉತ್ಕೃಷ್ಟ ಹರಿಭಕ್ತಿ ಜ್ಞಾನವೀವುವು ನಿಮ್ಮ
ಶ್ರೇಷ್ಠಪದ ಕೀರ್ತನೆ ನಾಮ ಸಂಸ್ಮರಣೆ ೪

ಅಜನ ಜನಕನು ಶ್ರೀ ಪ್ರಸನ್ನ ಶ್ರೀನಿವಾಸನು
ಅಜಿತ ಅಜನಂದಿನೀಪಿತನು ಗೋಪಾಲ
ಅಬ್ಜ ಶಂಖವ ಪಿಡಿದ ವರ ಅಭಯಹಸ್ತ ಶ್ರೀ
ವಿಜಯ ವಿಜಯಾಪತಿಯ ದಾಸರಿಗೆ ಶರಣು ೫

ಶ್ರೀ ವಿಜಯ ದಾಸಾರ್ಯ ಚರಿತ್ರೆ

೧೩೫

ಶರಣು ಶರಣು ಶರಣು ವಿಜಯದಾಸಾರ್ಯರೆ
ಶರಣಾದೆ ತವ ವಾರಿಜಾಂಘ್ರಿಯುಗ್ಮದಲಿ

ಸೂರಿ ಸುರ ಜನ ಗಂಗಾಧರ ವಾಯು ವಿಧಿ ಎನುತ
ಶಿರಿವರಸರ್ವೋತ್ತಮನೆ ಪ್ರಿಯತರ ದಾಸಾರ್ಯ ಪ

ಅಶೇಷ ಗುಣಗಣಾರ್ಣವ ಅನಘ ಶ್ರೀರಮಣ
ಶ್ರೀ ಶ್ರೀನಿವಾಸ ನರಹರಿ ವ್ಯಾಸ ಕೃಷ್ಣ
ಹಂಸ ನಾಮಕ ಪರಂ ಬ್ರಹ್ಮ ವಿಧಿ ಸನಕಾದಿ
ದಶಪ್ರಮತಿ ಗುರುವಂಶ ಸರ್ವರಿಗೂ ನಮಿಪೆ ೧

ವ್ಯಾಸರಾಜರ ಮುಖ ಕಮಲದಿಂದುಪದಿಷ್ಟ
ದಾಸರಾಜರು ಪುರಂದರದಾಸಾರ್ಯ
ವಸುಧೆಯಲ್ಲಿ ನಾರದರೇ ಪುರಂದರ ದಾಸರು ಎನಿಸಿ
ಶ್ರೀಶನ್ನ ಸೇವಿಸುತ ಭಕ್ತನ್ನ ಕಾಯ್ತಿಹರು ೨

ಹರಿ ಸಮೀರರೂ ಸದಾ ಪ್ರಚುರರಾಗಿಹ
ಪುರಂದರ ದಾಸಾರ್ಯರ ವರ ಶಿಷ್ಯರೇವೆ
ಧರೆಯಲ್ಲಿ ಪ್ರಖ್ಯಾತ ವಿಜಯದಾಸಾರ್ಯರು
ಸುರವೃಂದ ಮಹಾ ಋಷಿಯು ಭೃಗು ಮಹಾ ಮುನಿಯು ೩

ಋಗ್ ಜಯಾಸಿತ ಯಜುಸ್ ಸಿತ ಯಜುಸ್ಸಾಮ
ಅರ್ಥರ್ವಾಂಗಿರಸಕೆ ಕ್ರಮದಲಿ ಪ್ರವರ್ತಕರು
ಬಾಗುವೆ ಶಿರ ಪೈಲಗೆ ವೈಶಂಪಾಯನನಿಗೆ
ಅರ್ಕಗೆ ಜೈಮಿನಿಗೆ ಸುಮಂತು ಸಿಂಧುಜಗೆ ೪

ನಮೋ ಬ್ರಹ್ಮ ವಾಯು ವಿಪ ಫಣಿಪ ಶುಕ ಸಂಕ್ರಂದ
ಕಾಮಾರ್ಕ ನಾರದ ಭೃಗು ಸನತ್‌ಕುಮಾರಾದಿ
ಕಾಮಯುಕ್ ಸೂತ ಗಂಧರ್ವ ನೃಪ ಶ್ರೇಷ್ಠರಿಗೆ
ಭೂಮಿ ಸುರ ನರರಿಗೆ ಶ್ರೀಶ ಚಲಪ್ರತಿಕ ೫

ಸ್ವರ್ಣಾಂಡ ಬಹಿರಂತರ್ವ್ಯಾಪ್ತ ತೇಜ ಪುಂಜ
ಜ್ಞಾನ ಸುಖ ಪೂರ್ಣ ಶ್ರೀಪತಿ ವೇದ ವ್ಯಾಸ
ಜ್ಞಾನ ಸಂಯುತ ಕರ್ಮಯೋಗ ಪ್ರವರ್ತಿಸುವುದಕೆ
ತಾನೇ ಸೇವಿಸಿದನು ಭೃಗು ಋಷಿಯು ಅಂದು ೬

ಸುರ ನದಿ ತೀರದಲಿ ಭೂಸುರರು ಋಷಿಗಳು
ಸತ್ರಯಾಗ ಎಂಬಂಥ ಜ್ಞಾನ ಕರ್ಮ
ಚರಿಪೆ ಜಿಜ್ಞಾಸದಲಿ ನಾರದರು ಪ್ರೇರಿಸಿ
ಹೊರಟರು ಭೃಗು ಮುನಿಯು ತತ್ವ ನಿರ್ಣಯಕೆ ೭

ಶೃತಿ ಸ್ಮೃತಿ ಪುರಣೇತಿಹಾಸಾದಿಗಳಲ್ಲಿ
ಅದ್ವಿತೀಯನು ಸರ್ವೋತ್ತಮ ಹರಿ ಶ್ರೀಶ
ಪದುಮಭವ ರುದ್ರಾದಿ ಸುರರು ತಾರ ತಮ್ಯದಲಿ
ಸದಾ ಅವರಂಬುದನು ಪರಿಕ್ಷೆ ಮಾಡಿದರು ೮

ನೇರಲ್ಲಿ ತಾ ಪೋಗಿ ಅರಿತು ಪೇಳಿದರು
ಹರಿಃ ಸರ್ವೋತ್ತಮ ಸಾಕ್ಷಾತ್ ರಮಾದೇವಿ ತದನಂತರ
ಸರಸಿಜಾಸನ ವಾಣಿ ರುದ್ರಾದಿ ಸುರರು
ತರತಮದಿ ಅವರವರು ಸಂಶಯವಿಲ್ಲ ಎಂದು ೯

ಈ ರೀತಿ ಹಿಂದೆ ಈ ಭೃಗು ಹರಿಯ ನಿಯಮನದಿ
ಅರುಹಿದಂತೆ ಈಗ ವಿಜಯ ದಾಸಾರ್ಯ
ನಾರದ ಪುರಂದರ ದಾಸಾರ್ಯರನ್ನನುಸರಿಸಿ
ಹರಿ ಮಹಿಮೆ ಸತ್ ತತ್ವ ಅರುಹಿದರು ಜನಕ್ಕೆ ೧೦

ವಿಜಯರಾಯರ ಶಿಷ್ಯ ಸೂರಿಗಳೊಳ್ ಪ್ರವರನು
ಧೂರ್ಜಟೆ ಉಮಾಸುತನು ಕ್ಷಿಪ್ರ ಪ್ರಸಾದ
ಗಜ ಮುಖನೆ ಗೋಪಾಲ ದಾಸಾರ್ಯರಾಗಿ
ಪ್ರಜ್ವಲಿಸುತಿಹ ನಮೋ ಗುರುವರ್ಯ ಶರಣು ೧೧

ಪುರಂದರ ದಾಸಾರ್ಯರು ವಿಜಯರಾಯರಲ್ಲಿ
ಇರುವರು ಒಂದಂಶದಿಂದ ಜ್ವಲಿಸುತ್ತ
ಬರೆಸಿಹರು ಇಪ್ಪತ್ತು ಮೇಲೈದು ಸಾವಿರ
ಶ್ರೀವರನ ಸಂಸ್ತುತಿ ತತ್ವ ಕವಿತೆಗಳ ೧೨

ಕೃತ ತ್ರೇತ ದ್ವಾಪರ ಕಲಿಯುಗ ನಾಲ್ಕಲ್ಲಿಯೂ
ಸುತಪೋನಿಧಿ ಭೃಗು ಮೂಲ ರೂಪದಲು

ತ್ರೇತಾದಿ ಮೂರಲ್ಲಿಯೂ ಅವತಾರ ರೂಪದಲು
ಗಾಯತ್ರಿ ನಾಮನ್ನ ಸಂಸೇವಿಸುವರು ೧೩

ಪುರಂದರಾರ್ಯರ ಮನೆಯಲ್ಲಿ ಗೋವತ್ಸ
ತರುವಾಯು ಸುಕುಮಾರ ಮಧ್ವಪತಿಯಾಗಿ
ಸರಿದ್ವರ ಶ್ರೀ ತುಂಗಭದ್ರ ತೀರದಿ ಪುನಃ
ಅರಳಿ ನೃಸಿಂಹ ಕ್ಷೇತ್ರದಲಿ ತೋರಿಹರು ೧೪

ಅಶ್ವತ್ಥ ನರಸಿಂಹ ಕ್ಷೇತ್ರಕ್ಕೆ ಮತ್ತೊಂದು
ಹೆಸರುಂಟು ರೂಢಿಯಲಿ ಚೀಕಲಾಪುರಿಯು
ಕುಸುಮ ಭವ ಪಿತ ಅಂಭ್ರಣಿ ಪತಿ ಎನ್ನ
ಪ್ರಶಾಂತ ಚಿತ್ತದಿ ಧ್ಯಾನಿಸೆ ತಕ್ಕ ಸ್ಥಳವು ೧೫

ಶ್ರೀ ಪದ್ಮನಾಭ ತೀರ್ಥರ ಕರ ಕಂಜದಿಂದ
ಉದ್ಭೂತ ಲಕ್ಷ್ಮೀಧರರ ವಂಶಜರು
ಶ್ರೀಪಾದ ರಾಜರೂ ಈ ಕ್ಷೇತ್ರದಲಿ
ಸ್ಥಾಪಿಸಿದರು ಅಶ್ವತ್ಥ ನರಹರಿಯ ೧೬

ಹುಂಬೀಜ ಪ್ರತಿಪಾದ್ಯ ಭೂಪತಿಯ ವಕ್ತ್ರದಿಂ
ಸಂಭೂತ ತುಂಗಾ ಸರಿದ್ವರದ ತೀರ
ಗಂಭೀರ ಭೂ ಕಲ್ಪತರುವು ಅಶ್ವತ್ಥವು
ಸಂರಕ್ಷಿಸುವ ನಾರಸಿಂಹ ಭದ್ರದನು ೧೭

ನಾರಾಯಣ ಬ್ರಹ್ಮರುದ್ರಾದಿ ದೇವರ್‌ಗಳು
ಇರುತಿಹರು ಅಶ್ವತ್ಥ ಕಲ್ಪ ವೃಕ್ಷದಲಿ
ನಾರಾಯಣ ಶ್ರೀ ನರಸಿಂಹ ಪುರುಷೋತ್ತಮನೆ
ಶರಣಾದೆ ಪೊರೆಯುತಿಹ ವಾಂಛಿತ ಪ್ರದನು ೧೮

ಕಾಶಿ ಬದರಿಯಂತೆ ಇರುವ ಈ ಕ್ಷೇತ್ರದಲಿ
ಭೂಸುರವರರು ಶ್ರೀನಿವಾಸಾಚಾರ್ಯರಲಿ
ಶ್ರೀ ಶ್ರೀನಿವಾಸನ ಪ್ರಸಾದದಿ ಜನಿಸಿಹರು
ಶ್ರೀಶ ಭಕ್ತಾಗ್ರಣಿ ಈ ಹರಿದಾಸವರರು ೧೯

ಕುಸುಮಾಲಯ ಪದ್ಮಾವತಿ ನೆನಪು ಕೊಡುವ
ಕುಸುಮ ಕೋಮಲ ಮುಖಿ ಆದ ಕಾರಣದಿ
ಕೂಸಮ್ಮ ನೆಂದು ಕರೆಯಲ್ಪಟ್ಟ ಸಾಧ್ವಿಯ
ಈ ಶ್ರೀನಿವಾಸ ಆಚಾರ್ಯ ಕರ ಹಿಡಿದರು ೨೦

ಪತಿವ್ರತಾ ಶಿರೋಮಣಿ ಕೂಸಮ್ಮನ ಗರ್ಭ
ಅಬ್ಧಿಯಿಂ ಹುಟ್ಟಿತು ಉತ್ತಮ ರತ್ನ
ಹತ್ತು ದಿಕ್ಕಲು ಪ್ರಕಾಶಿಸುವ (ದ್ಯುತಿವಂತ) ಕೀರ್ತಿಮಾನ್
ಪುತ್ರ ರತ್ನನು ಬೆಳೆದ ದಾಸಪ್ಪ ನಾಮಾ ೨೧

ಕೂಸಮ್ಮ ಶ್ರೀನಿವಾಸಪ್ಪ ದಂಪತಿಗೆ
ದಾಸಪ್ಪನಲ್ಲದೆ ಇನ್ನೂ ಕೆಲಪುತ್ರರು
ಕೇಶವಾನುಗ್ರಹದಿ ಹುಟ್ಟಿ ಸಂಸಾರದಿ
ಈಜಿದರು ಯದೃಚ್ಛಾ ಲಾಭ ತುಷ್ಟಿಯಲಿ ೨೨

ಯಾರಲ್ಲೂ ಕೇಳದಲೇ ಅನಪೇಕ್ಷ ದಂಪತಿಯು
ಹರಿದತ್ತ ಧನದಲ್ಲಿ ತೃಪ್ತರಾಗುತ್ತ
ಅರಳಿ ನೃಸಿಂಹನ್ನ ಸೇವಿಸುತ ಮಕ್ಕಳಲಿ
ಹರಿ ಮಹಿಮೆ ಹೇಳುತ್ತ ಭಕ್ತಿ ಬೆಳಸಿದರು ೨೩

ನಮ್ಮ ದಾಸಪ್ಪನಿಗೆ ಹದಿನಾಲ್ಕು ಮಯಸ್ಸಾಗೆ
ಕರ್ಮ ಸುಳಿಯು ಮೆಲ್ಲ ಮೆಲ್ಲನೆ ತೋರಿ
ಸಮುದ್ರ ಶಯನನ ಅಧೀನವು ಎಲ್ಲ ಎನ್ನುತ್ತ
ಒಮ್ಮೆಗೂ ಲೆಕ್ಕಿಸಲಿಲ್ಲ ಬಡತನವನ್ನ ೨೪

ಬದರ ಮುಖ ಬ್ರಹ್ಮವರ್ಚಸ್ವಿ ದಾಸಪ್ಪ
ಹದಿನಾರುವತ್ಸರದ ಬ್ರಹ್ಮಚಾರಿ
ಮಾಧವನೆ ಹಾದಿ ತೋರುವ ತನಗೆ ಎಂದು
ಹೋದರು ಪೂರ್ವದಿಕ್ಕಿನ ಕ್ಷೇತ್ರಗಳಿಗೆ ೨೫

ಜಲರೂಪಿ ಕೃಷ್ಣನ್ನ ನೆನೆದು ಕೃಷ್ಣಾನದಿ
ಯಲ್ಲಿ ಮಿಂದು ಅಲ್ಲಿಂದ ಮಂತ್ರಾಲಯ

ಅಲ್ಲಿ ಶ್ರೀ ರಾಘವೇಂದ್ರರ ವಾದೀಂದ್ರರ ದಿವ್ಯ
ಜಲಜಪಾದಗಳಿಗೆ ಬಾಗಿದರು ಶಿರವ ೨೬

ಆದವಾನಿ ನಗರ ನವಾಬನ ಸರ್ಕಾರ
ಅಧಿಕಾರಿ ಡಾಂಭಿಕ ಓರ್ವನ ಗೃಹದಿ
ಮದುವೆ ಪೂರ್ವದ ದೇವರ ಸಮಾರಾಧನೆಯು
ಹೋದರು ಆ ಮನೆಗೆ ದಾಸಪ್ಪ ಆರ್ಯ ೨೭

ಇತ್ತದ್ದು ಹರಿಯೆಂದು ತಂದೆ ಮಾಡುವ ಅತಿಥಿ
ಸತ್ಕಾರ ನೋಡಿದ್ದ ದಾಸಪ್ಪಾರ್ಯನಿಗೆ
ಇಂದು ಆದವಾನಿ ಗೃಹಸ್ಥ ದಾಸಪ್ಪನ
ಉದಾಸೀನ ಮಾಡಿದ್ದು ನೂತನಾನುಭವ ೨೮

ತೇನ ತ್ಯಕ್ತೇನ ಭುಂಜೀಥಾಃ ಮಾಗೃಥೇಃ
ಕಸ್ಯ ಸ್ವಿದ್ಧನಂ ಎಂದು ಮನಸ್ಸಿಗೆ ತಂದು
ಆದವಾನೀಯಿಂದ ಹೊರಟು ಮಾರ್ಗದಲಿ
ಇದ್ದ ಭಾಗಿ ಎಂಬ ಗ್ರಾಮ ಸೇರಿದರು ೨೯

ಉಪೋಷಣದಿ ತನುವು ಬಾಡಿದ್ದರೂ ಮುಖ
ಸ್ವಲ್ಪವೂ ಮ್ಲಾನ ವಿಲ್ಲದೆ ಹರಿಯ ಸ್ಮರಿಸಿ
ಬಪ್ಪ ದಾಸಪ್ಪನ್ನ ನೋಡಿ ಕೇಶವರಾಯ
ಎಂಬ ವಿಪ್ರನು ಕರೆದ ತನ್ನ ಮನೆಗೆ ೩೦

ಭಾಗಿ ಗ್ರಾಮದ ಪ್ರಮುಖ ಕೇಶವರಾಯನು
ಆ ಗೃಹಸ್ಥನ ತಾಯಿ ಕುಟುಂಬಜನರೆಲ್ಲಾ
ಭಗವಂತನ ಶ್ರೇಷ್ಠ ಪ್ರತೀಕ ಇವರೆಂದು
ಭಾಗಿ ಶಿರ ಆತಿಥ್ಯ ನೀಡಿದರು ಮುದದಿ ೩೧

ಆ ಮನೆಯ ದೊಡ್ಡ ಆಕೆಯು ಪಾಕ ಮಾಡಿ
ಶ್ರೀ ಮನೋಹರನಿಗೆ ದಾಸಪ್ಪ ಅದನ್ನ
ಸಂಮುದದಿ ನೈವೇದ್ಯ ಅರ್ಪಿಸಿ ಉಂಡರು
ರಮಾ ಪತಿ ನಿತ್ಯ ತೃಪ್ತಗೆ ತೃಪ್ತಿ ಆಯ್ತು ೩೨

ಭಿನ್ನಸ್ವಭಾವಿಗಳು ಭಿನ್ನಜೀವರುಗಳಲಿ
ಭಿನ್ನ ಕರ್ಮವ ಮಾಡಿ ಮಾಡಿಸುವ ಅನಘ
ಘನ್ನ ಗುಣನಿಧಿ ಸರ್ವ ಜಡಜೀವ ಭಿನ್ನ
ಶ್ರೀನಿಧಿಯ ಸ್ಮರಿಸುತ್ತೆ ಹೊರಟರು ವೇಂಕಟಕೆ ೩೩

ಭೂವೈಕುಂಠ ಈ ತಿರುಪತಿ ಕ್ಷೇತ್ರದಲಿ
ದೇವದೇವೋತ್ತಮ ದೇವಶಿಖಾಮಣಿಯ
ಮೂವತ್ತೆರಡು ಮುವತ್ತಾರು ಬಾರಿ ಮೇಲೆ
ಸೇವಿಸಿಹರು ಎಂದು ಕೇಳಿಹೆನು ೩೪

ದಾಸಪ್ಪ ನಾಮದಲೂ ವಿಜಯರಾಯರೆನಿಸಿಯೂ
ದೇಶದೇಶದಿ ಹರಿಕ್ಷೇತ್ರ ಪೋಗಿಹರು
ಕಾಶೀಗೆ ಮೂರು ಸಲ ಪೋಗಿ ಬಂದಿರುವರು
ಕಾಶಿ ಬದರಿ ನಮಗೆ ಇವರ ಸಂಸ್ಮರಣೆ ೩೫

ಪಂಕೇರುಹೇಕ್ಷಣ ವರಾಹ ವೆಂಕಟ ಪತಿಯ
ವೇಂಕಟಗಿರಿಯಲ್ಲಿ ಭಕ್ತಿಯಿಂ ಪುನಃ
ತಾ ಕಂಡು ಆನಂದಪುಲಕಾಶ್ರು ಸುರಿಸಿ
ಶಂಕೆಯಿಲ್ಲದೆ ಧನ್ಯ ಮನದಿ ತಿರುಗಿದರು ೩೬

ತಿರುಗಿ ಚೀಕಲಪುರಿ ಬಂದು ಹೆತ್ತವರ
ಚರಣ ಪದ್ಮಗಳಲ್ಲಿ ನಮಿಸಿ ಅಲ್ಲಿ
ನರಹರಿ ಶ್ರೀ ಶ್ರೀನಿವಾಸನ್ನ ಸೇವಿಸುತ
ಪರಿತೋಷಿಸಿದರು ಗಾರ್ಹ ಧರ್ಮದಲಿ ೩೭

ರಾಜೀವಾಸನಪಿತ ಶ್ರೀ ಪ್ರಸನ್ನ ಶ್ರೀನಿವಾಸ
ರಾಜೀವಾಲಯಾಪತಿಗೆ ಪ್ರಿಯತರ ದಾಸಾರ್ಯ
ವಿಜಯರಾಯರೇ ನಿಮ್ಮ ರಾಜೀವಾಂಘ್ರಿಗಳಲ್ಲಿ
ನಿಜದಿ ಶರಣು ಶರಣು ಶರಣಾದೇ ಸತತ ೩೮

–ಇತಿಃ ಪ್ರಥಮಾಧ್ಯಾಯಃ–

ದ್ವಿತೀಯಾಧ್ಯಾಯ

ಶರಣು ಶರಣು ಶರಣು ವಿಜಯದಾಸಾರ್ಯರೆ
ಶರಣಾದೆ ತವ ವಾರಿಜಾಂಘ್ರಿಯುಗ್ಮದಲಿ
ಸೂರಿ ಸುರ ಜನ ಗಂಗಾಧರ ವಾಯು ವಿಧಿ ಎನುತ
ಶಿರಿವರಸರ್ವೋತ್ತಮನ ಪ್ರಿಯತರ ದಾಸಾರ್ಯ ಪ

ತಿರುಪತಿ ಘಟಿಕಾದ್ರಿ ಕಾಶಿ ಮೊದಲಾದ
ಕ್ಷೇತ್ರಾಟನೆ ಮಾಡಿ ಬಂದ ಪುತ್ರನಿಗೆ
ಭಾರಿಗುಣ ಸಾಧ್ವಿಯ ಮದುವೆ ಮಾಡಿಸಿದರು
ವಿಪ್ರರ ಮುಂದೆ ಶುಭ ಮುಹೂರ್ತದಲಿ ತಂದೆ ೧

ಗುಣರೂಪವಂತಳು ವಧು ಅರಳಿಯಮ್ಮ
ಘನಮಹಾ ಪತಿವ್ರತಾ ಶಿರೋಮಣಿಯು ಈಕೆ
ತನ್ನ ಪತಿಸೇವೆಯ ಪೂರ್ಣ ಭಕ್ತಿಯಲಿ
ಅನವರತ ಮಾಡುವ ಸೌಭಾಗ್ಯವಂತೆ ೨

ಪುತ್ರೋತ್ಸವಾದಿ ಶುಭ ಸಂಭ್ರಮಗಳು ಆದುವು
ನಿತ್ಯ ಹರಿತುಳಸೀಗೆ ಪೂಜಾ ವೈಭವವು
ತ್ರಾತಹರಿ ಸಾನ್ನಿಧ್ಯ ಅನುಭವಕೆ ಬರುತ್ತಿತ್ತು
ಶ್ರೀದಹರಿವಿಠ್ಠಲನು ತಾನೇವೆ ಒಲಿದ ೩

ಧನಸಂಪಾದನೆಗಾಗಿ ಅನ್ಯರನು ಕಾಡದೆ
ಅನಪೇಕ್ಷ ಮನದಿಂದ ಹರಿಕೊಟ್ಟದ್ದಲ್ಲೇ
ದಿನಗಳ ಕಳೆದರು ಹೀಗೆ ಇರುವಾಗ
ಫಣಿಪಗಿರಿವೇಂಕಟನು ಮನದಲ್ಲಿ ನಲಿದ ೪

ನರಹರಿಗೆ ಸನ್ನಮಿಸಿ ಅಪ್ಪಣೆ ಪಡೆದು
ಹೊರಟರು ವೇಂಕಟನಾಥನ್ನ ನೆನೆದು
ಸೇರಿದರು ಶೇಷಗಿರಿ ನಮಿಸಿ ಭಕ್ತಿಯಲಿ
ಏರಿದರು ಎರಗಿದರು ನಾರಸಿಂಹನಿಗೆ ೫

ನರಸಿಂಹನಿಗೆ ಗುಡಿ ಗಾಳಿಗೋಪುರದಲ್ಲಿ
ಕರೆವರು ಬಾಷಿಂಗನರಸಿಂಹನೆಂದು
ಹರಿದಾಸರಿಗೊಲಿವ ಕಾರುಣ್ಯಮೂರ್ತಿಯು
ಕರುಣಿಸಿದ ಜಗನ್ನಾಥದಾಸರಿಗೆ ಪೀಠ ೬

ದಾಸಪ್ಪ ವಿಜಯದಾಸರು ಆದ ತರುವಾಯ
ಈಶಾನುಗ್ರಹವ ಬ್ಯಾಗವಟ್ಟಿಯವರ್ಗೆ
ಶಿಷ್ಯರದ್ವಾರಾ ಒದಗಿ ಜಗನ್ನಾಥ
ದಾಸರಾಗಿ ಮಾಡಿಹರು ಪರಮದಯದಿಂದ ೭

ನರಸಿಂಹನಪಾದ ಭಜಿಸಿ ಅಲ್ಲಿಂದ
ಗಿರಿ ಅರೋಹಣವನ್ನ ಮುಂದುವರಿಸಿ
ಶ್ರೀ ಶ್ರೀನಿವಾಸನ ಭೇಟಿ ಒದಗಿಸುವಂತೆ
ವರ ಅಂಜನಾಸೂನು ಹನುಮಗೆರಗಿದರು ೮

ಮಹಾತ್ಮ್ಯೆ ಶ್ರೀ ನಿಧಿ ಶ್ರೀ ಶ್ರೀನಿವಾಸನ್ನ
ಮಹಾದ್ವಾರ ಗೋಪುರದಲ್ಲಿ ಸಂಸ್ಮರಿಸಿ
ಮಹಾದ್ವಾರದಲಿ ಕರಮುಗಿದು ಉತ್ತರದಿ
ಇಹ ಸ್ವಾಮಿತೀರ್ಥದಲಿ ಸ್ನಾನ ಮಾಡಿದರು ೯

ಭೂರ್ಭುವಃ ಸ್ವಃಪತಿ ಭೂಧರ ವರಾಹನ್ನ
ಉದ್ಭಕ್ತಿ ಪೂರ್ವಕದಿ ವಂದಿಸಿ ಸರಸ್ಯ
ಇಭರಾಜವರದನ್ನ ಸ್ಮರಿಸುತ್ತ ಸುತ್ತಿ
ಶುಭಪ್ರದಪ್ರದಕ್ಷಿಣೆ ಮಾಡಿದರು ಮುದದಿ ೧೦

ಪ್ರದಕ್ಷಿಣೆಗತಿಯಲ್ಲಿ ಸಾಕ್ಷಿಅಶ್ವತ್ಥನ್ನ
ಭೂಧರನ್ನ ನೋಡುತ್ತ ನಿಂತ ಹನುಮನ್ನ
ವಂದಿಸಿ ಮಹಾದ್ವಾರ ಸೇರಿ ಕೈಮುಗಿದು
ಇಂದಿರೇಶನ ಆಲಯದೊಳು ಹೋದರು ೧೧

ಬಲಿಪೀಠ ಧ್ವಜಸ್ತಂಭ ತತ್ರಸ್ಥ ಹರಿಯನೆನೆದು
ಬೆಳ್ಳಿ ಬಾಗಿಲದಾಟಿ ಗರುಡಗೆ ನಮಿಸಿ

ಒಳಹೋಗೆ ಅಪ್ಪಣೆ ಜಯವಿಜಯರ ಕೇಳಿ
ಬಲಗಾಲ ಮುಂದಿಟ್ಟು ಹೋದರು ಒಳಗೆ ೧೨

ಬಂಗಾರ ಬಾಗಿಲ ದಾಟಲಾಕ್ಷಣವೇ
ಕಂಗೊಳಿಸುವಂತ ಪ್ರಾಜ್ವಲ್ಯ ಕಿರೀಟ
ಚಂಚಲಿಸುವ ತಟಿನ್ನಿಭಕರ್ಣಕುಂಡಲವಿಟ್ಟ
ಗಂಗಾಜನಕ ವೆಂಕಟೇಶನ್ನ ನೋಡಿದರು ೧೩

ಆನಂದಜ್ಞಾನಮಯ ಪಾದಪಂಕಜತತ್ರ
ಸುನೂಪುರ ಉಡಿ ವಡ್ಯಾಣ ಕೌಶೇಯ
ಮಿನುಗುವಾಂಬರ ಸಾಲಿಗ್ರಾಮದ ಹಾರ
ಘನ ಮಹಾ ಹಾರಗಳು ಸರಿಗೆ ವನಮಾಲೆ ೧೪

ಶ್ರೀವತ್ಸ ಕೌಸ್ತುಭಮಣಿ ವೈಜಯಂತೀ
ದಿವ್ಯ ಪ್ರಜ್ವಲಿಸುವ ಪದಕಂಗಳು
ಕಿವಿಯಲ್ಲಿ ಮಿಂಚಿನಂದದಿ ಪೊಳೆವ ಕುಂಡಲ
ಸರ್ವಾಭರಣಗಳ ವರ್ಣಿಸಲು ಅಳವೇ ೧೫

ಅಕಳಂಕ ಪೂರ್ಣೇಂದು ಮುಖಮುಗುಳುನಗೆಯು
ಕಂಗಳು ಕಾರುಣ್ಯ ಸುರಿಸುವನೋಟ
ಕಾಕು ಇಲ್ಲದ ನೀಟಾದ ಫಣೆ ತಿಲಕವು
ಚೊಕ್ಕ ಚಿನ್ನದಿ ನವರತ್ನ ಜ್ವಲಿಪ ಕಿರೀಟ ೧೬

ಬ್ರಹ್ಮಪೂಜಿತಶ್ರೀ ಶ್ರೀನಿವಾಸನ್ನ
ಮಹಾನಂದದಿ ನೋಡಿ ಸನ್ನಮಿಸಿ ಮುದದಿ
ಬಹಿರದಿ ಬಂದು ಮತ್ತೊಮ್ಮೆ ಪ್ರದಕ್ಷಿಣೆ ಮಾಡಿ
ಮಹಾಪ್ರಾಕಾರದಲಿ ಕೊಂಡರು ಪ್ರಸಾದ ೧೭

ಹೇಮಮಯ ಆನಂದನಿಲಯ ವಿಮಾನ ಗೋಪುರದಿ
ಶ್ರೀಮನೋಹರ ಶ್ರೀ ಶ್ರೀನಿವಾಸನ್ನ ಪುನಃ
ನೆಮ್ಮದಿದಿ ನೋಡಿ ಸನ್ನಮಿಸಿ ಶ್ರೀನಾರ
ಸಿಂಹನ್ನ ವಂದಿಸಿ ಹೋದರು ಒಳಗೆ ೧೮

ಏಕಾಂತ ಸೇವೆ ಶಯ್ಯೋತ್ಸವವ ನೋಡಿ
ಅಕಳಂಕ ಭಕ್ತಿಯಲಿ ಮನಸಾ ಸ್ತುತಿಸಿ
ಶ್ರೀಕರಾಲಯ ಪ್ರಕಾರ ಮಂಟಪದಲ್ಲಿ
ಭಕುತವತ್ಸಲನ್ನ ನೆನೆದು ಮಲಗಿದರು ೧೯

ಬಂಗಾರಬಾಗಿಲು ಅರ್ಧಮಂಟಪವು ಪುರಂದರ ದಾಸಾರ್ಯರು
ಯೋಗ ನಾರಸಿಂಹನ ಸ್ಥಾನ ಬಲಪಾರ್ಶ್ವ
ಏಕಾಂತ ಮಂಟಪವು ಪುರಂದರ ದಾಸಾರ್ಯರು
ಶ್ರೀಕರನ ಭಜಿಸುತ್ತಾ ಇರುವರು ಅಲ್ಲಿ ೨೦

ಅರ್ಧ ಮಂಟಪ ಹೊರಗೆ ಉತ್ತರ ಪ್ರಾಕಾರದಿ
ಎತ್ತರ ಮಂಟಪದ ಜಗುಲಿಯಲ್ಲೂ
ಆಸ್ಥಾನ ಮಂಟಪಕೆ ಪಶ್ಚಿಮ ಮಂಟಪದಲ್ಲೂ
ಆಸ್ಥಾನ ಶ್ರೇಷ್ಠರು ಕುಳಿತದ್ದು ಉಂಟು ೨೧

ಮನುಷ್ಯ ಲೋಕದಿ ಹುಟ್ಟಿ ಮಾನುಷಾನ್ನವನುಂಡು
ಮಾನುಷಾನ್ನದ ಸೂಕ್ಷ್ಮ ಭಾಗ ಪರಿಣಮಿಸಿ
ಮನಖಿನ್ನನಾದಂತೆ ಇದ್ದ ದಾಸಪ್ಪನಿಗೆ
ಶ್ರೀ ಶ್ರೀನಿವಾಸನು ಬಂದು ತಾ ಒಲಿದ ೨೨

ಶ್ರೀನಿಧಿಃ ಶ್ರೀ ಶ್ರೀನಿವಾಸವೇಂಕಟಪತಿ
ಘನದಯದಿ ಸೂಚಿಸಿದ್ದು ತಿಳಕೊಂಡರು
ಸ್ವಪ್ನದಿ ಭಾಗೀರಥಿಯ ಪುರಂದರ ದಾಸಾರ್ಯರ
ಬಿಂದುಮಾಧವ ಅಂಭ್ರಣೀಶನ್ನ ನೋಡಿದರು ೨೩

ಭೂವರಾಹವೆಂಕಟರಮಣನ್ನ ಮರುದಿನ
ಸೇವಿಸಿ ಹನುಮಂತನಿಗೆ ನಮಸ್ಕರಿಸಿ
ದೇವಾನುಗ್ರಹದಿ ಐದಿದರು ವಾರಣಾಸಿ
ದೇವ ತಟಿನೀಸ್ನಾನ ಮೂರ್ತೀ ದರ್ಶನವು ೨೪

ಜಾಗ್ರತೆ ಅಲ್ಲ ನಿದ್ರೆಯೂ ಅಲ್ಲ ಸಂಧಿ
ಆ ಕಾಲದಲಿ ಆನಂದ ಅನುಭವವು

ಹೇಗೆಂದರೆ ವಿಠ್ಠಲ ಶ್ರೀನಿವಾಸನು
ಝುಗಿಝುಗಿಸಿ ತೋರ್ವನು ವಿಜಯಸಾರಥಿಯು ೨೫

ತೃಟಿ ಮಾತ್ರದಲಿ ಮುಂದೆ ನಿಂತರು ಪುರಂದರ
ವಿಟ್ಠಲ ದಾಸರು ಕೃಪೆಯ ಬೀರುತ್ತ
ತಟ್ಟನೇ ಎದ್ದರು ದಾಸಪ್ಪ ಆರ್ಯರು
ಸಾಷ್ಟಾಂಗ ನಮಿಸಿದರು ಗುರುವರ್ಯರೆಂದು ೨೬

ಕರಕೊಂಡು ಹೋದರು ಆಚೆದಡದಲ್ಲಿರುವ
ಕ್ಷೇತ್ರಕ್ಕೆ ಅಲ್ಲಿ ಶ್ರೀಪತಿವ್ಯಾಸನ್ನ
ತೋರಿಸಿದರು ಆ ವ್ಯಾಸ ಮೂರ್ತಿಯಲ್ಲಿ
ಸುಪ್ರಕಾಶಿಪ ಹರಿ ರೂಪಗಳ ಕಂಡರು ೨೭

ವಿಜಯ ಸಾರಥಿ ಕೃಷ್ಣ ವಾಶಿಷ್ಠ ಮಾಧವ
ಅಜಭುಜಗಭೂಷಣಾದಿಗಳಿಂದ ಸೇವ್ಯ
ರಾಜರಾಜೇಶ್ವರಿ ಶ್ರೀನಿಧಿಯ ಮನದಣಿಯ
ಭಜಿಸಿ ಸ್ತುತಿಸಲು ಯತ್ನಿಸಿದರು ದಾಸಪ್ಪ ೨೮

ಸೌದಾಮಿನಿಗಮಿತ ರಂಜಿಸುವ ಜ್ಯೋತಿಯು
ಬದರೀಶನಿಂ ಪುರಂದರದಾಸರ ದ್ವಾರ
ಬಂದು ನೆಲಸಿತು ದಾಸಪ್ಪನ ಜಿಹ್ವೆಯ
ತುದಿಯಲ್ಲಿ ವಿಜಯಾಖ್ಯ ಸುಶುಭನಾಮ ೨೯

ರಾಜೀವಜಾಂಡದೊರೆ ರಾಜೀವಾಲಯ ಪತಿ
ವಿಜಯವಿಠ್ಠಲ ನಿಮ್ಮ ಹೃದ್‌ರಾಜೀವದಲಿ
ಪ್ರಜ್ವಲಿಸುತಿಹ ಸರ್ವತೋಮುಖನೆಂದು
ನೈಜವಾತ್ಸಲ್ಯದಿ ಪೇಳಿದರು ಗುರುವು ೩೦

ಗುರುಗತುರಗಾಸ್ಯ ವಿಠ್ಠಲವ್ಯಾಸ ತನ್ನ ಹೊರವೊಳು
ಪ್ರಕಾಶಿಪುದು ಅನುಭವಕೆ ಬಂತು
ಎರಗಿದರು ವಿಜಯ ದಾಸರು ಪುರಂದರಾರ್ಯರಿಗೆ
ಸರಿ ಏಳು ಎಂದರು ಗುರುವರ್ಯ ಹಿತದಿ ೩೧

ಎದ್ದರು ಎಚ್ಚರಿಕೆ ಆಗಿ ವಿಜಯಾರ್ಯರು
ವೇದ್ಯವಾಯಿತು ಶ್ರೀಯಃಪತಿಯು ಗುರುವು
ಹಿತದಿ ತಾವೇ ಬಂದು ಅನುಗ್ರಹ ಮಾಡಿದ್ದು
ಇಂಥ ಭಾಗ್ಯವು ಎಲ್ಲರಿಗೂ ಲಭಿಸುವುದೇ ೩೨

ಶ್ರೀಕಾಂತ ಕಪಿಲ ಶ್ರೀ ಶ್ರೀನಿವಾಸನ್ನ
ಹಿಂಕಾರ ಪ್ರತಿಪಾದ್ಯ ಕೃತಿಪತಿ ಪ್ರದ್ಯುಮ್ನ
ಶ್ರೀಕರ ವಿಠ್ಠಲ ವ್ಯಾಸಹಯಮುಖನ್ನ ಸ್ಮರಿಸುತ್ತ
ಗಂಗೆಯ ಸೇರಿದರು ಮಿಂದರು ಮುದದಿ ೩೩

ವಿಧಿಪೂರ್ವಕ ಸ್ನಾನ ಅರ್ಘ್ಯಾಧಿಗಳಿತ್ತು ಅರ್ಘ್ಯಾದಿ
ಆ ದೇವತಟನೀಯ ದಡದಲ್ಲಿ ಕುಳಿತು
ಸದ್ವೈಷ್ಣವಚಿನ್ನಾಲಂಕೃತರು ಜಪಿಸಿದರು
ಮಧ್ವಸ್ಥ ವಿಜಯವಿಠ್ಠಲಶ್ರೀಪತಿಯ ೩೪

ಪದುಮಜನ ಸುತ ಭೃಗುವೆ ಅವನಿಯಲಿ ಅವತರಿಸಿ
ಬಂದಿಹನು ಮಾಧವನು ಒಲಿದಿಹನು ಎಂದು
ಮಂದಾಕಿನಿ ವ್ಯಜನ ಚಾಮರಗಳ್ ಬೀಸುವಂತೆ
ಬಂದು ಪ್ರವಹಿಸಿದಳು ದಾಸರ ಆವರಿಸಿ ೩೫

ಜನರೆಲ್ಲ ನೋಡುತಿರೆ ಪ್ರವಾಹವು ಉಕ್ಕಿ
ಪೂರ್ಣ ಆವರಿಸಿತು ವಿಜಯರಾಯರನ್ನ
ಏನು ಅದ್ಭುತ ಇದು ಶಾಂತವಾಗಲು ಕ್ಷಣದಿ
ನೆನೆಯಲಿಲ್ಲ ವಸ್ತ್ರ ಊರ್ಧ್ವ ಪುಂಡ್ರಗಳು ೩೬

ಹರಿಆಜ್ಞೆಯಲಿ ಸುರರು ಸಜ್ಜನೋದ್ಧಾರಕ್ಕೂ
ಪ್ರಾರಬ್ಧಕರ್ಮ ಕಳೆಯಲು ಜನಿಪರು ಭುವಿಯೋಳ್
ಇರುವುವು ಅಣಿಮಾದಿಗಳು ಶಕ್ತ್ಯಾತ್ಮನಾ
ಗುರು ಒಲಿಯೆ ವ್ಯಕ್ತವಾಗುವುವು ಆಗಾಗಾ ೩೭

ಸುರರು ಭೃಗುದಾಸಪ್ಪ ಜಾತಾಪರೋಕ್ಷಿಗೆ
ಪುರಂದರದಾಸ ನಾರದರೊಲಿದ ಮೇಲೆ

ಇರುತ್ತಿದ್ದ ಅಪರೋಕ್ಷ ಅಣಿಮಾದಿ ಮಹಿಮೆಯು
ಸುಪ್ರಕಟವಾದವು ಶ್ರೀಶನ ದಯದಿ ೩೯

ವರ್ಣಪ್ರತಿಪಾದ್ಯ ಹರಿ ಒಲಿಯೆ ವರ್ಣಂಗಳು
ಆಮ್ನಾಯ ನಿಗಮತತಿ ಸತ್‌ತತ್ವಜ್ಞಾನ
ಅನಾಯಸದಿಂದೊದಗಿ ವಿಜಯದಾಸಾರ್ಯರು
ಅನಿಲಸ್ಥ ಶ್ರೀವರನ್ನ ಸ್ತುತಿಸಿ ಹಾಡಿದರು ೪೦

ಜನಗಳು ವಿಜಯದಾಸಾರ್ಯರು ಶ್ರೀಹರಿಯ
ಧ್ಯಾನಿಸಿ ಶ್ರೀಪತಿಯ ರೂಪಕ್ರಿಯೆಗಳನ್ನು
ಗುಣಗಳನ್ನು ಗಂಗಾದಡದಲ್ಲಿ ಕುಳಿತು
ಗಾನಮಾಡುವುದನ್ನ ಕೇಳಿದರು ಮುದದಿ ೪೧

ಘನ ಮಹಾತ್ಮರು – ಇವರು ಸಜ್ಜನೋದ್ಧಾರಕರು
ಶ್ರೀನಿಧಿಯ ಸತ್‌ತತ್ವಜ್ಞಾನ ಪೂರ್ವಕದಿ
ಗಾನಮಾಡಿ ಲೋಕಕ್ಷೇಮಕ್ಕೊದಗುವರೆಂದು
ಧನ ದ್ರವ್ಯ ಕಾಣಿಕೆ ಇತ್ತರು ಜನರು ೪೨

ಪೋದಕಡೆ ಎಲ್ಲೆಲ್ಲೂ ಮರ್ಯದೆ ಪೂಜೆಗಳು
ಸಾಧುಸಜ್ಜನರ ಕೈಯಿಂದ ತಾ ಕೊಂಡು
ಮಾಧವ ಮಧ್ವಮುನಿ ಪುರಂದರಾರ್ಯರ ಭಾಗ್ಯ
ಎಂದು ಶ್ರೀ ಕೃಷ್ಣಂದೇ ಸರ್ವವೆಂಬುವರು ೪೩

ಭಾರಿ ಬಹು ಬಹುವುಂಟು ವಿಜಯರಾಯರ ಮಹಿಮೆ
ಅರಿಯೆನಾ ಅಲ್ಪಮತಿ ಹೇಗೆ ವರ್ಣಿಸಲಿ
ಹರಿಗೆ ಪ್ರಿಯತರ ಈ ಸುಮಹಾತ್ಮರು ತನಗೆ
ಎರಗಿದವರನ್ನ ಕಾಯ್ವರು ಕೈಬಿಡದೆ ೪೪

ವಾರಣಾಸಿರಾಜ ಪೂಜಿಸಿದ ಇವರನ್ನ
ಎರಗಿ ಜನರು ಶಿಷ್ಯ ರಾದರಲ್ಲಲ್ಲಿ
ಊರಿಗೆ ಬರುವಷ್ಟರಲ್ಲೇ ಇವರ ಕೀರ್ತಿ
ಹರಡಿತು ಹರಿದಾಸಜ್ಞಾನಿವರರೆಂದು ೪೫

ರಾಜೀವಾಸನಪಿತ ಶ್ರೀ ಪ್ರಸನ್ನ ಶ್ರೀನಿವಾಸ
ರಾಜೀವಾಲಯಾಪತಿಗೆ ಪ್ರಿಯತರ ದಾಸಾರ್ಯ
ವಿಜಯರಾಯರೇ ನಿಮ್ಮ ರಾಜೀವಾಂಘ್ರಿಗಳಲ್ಲಿ
ನಿಜದಿ ಶರಣು ಶರಣು ಶರಣಾದೇ ಸತತ ೪೬

–ಇತಿಃ ದ್ವಿತಿಯಾಧ್ಯಾಯಃ–

ತೃತೀಯಾಧ್ಯಾಯ

ಶರಣು ಶರಣು ಶರಣು ವಿಜಯದಾಸಾರ್ಯರೆ
ಶರಣಾದೆ ತವ ವಾರಿಜಾಂಘ್ರಿಯುಗ್ಮದಲಿ
ಸೂರಿ ಸುರ ಜನ ಗಂಗಾಧರ ವಾಯು ವಿಧಿ ಎನುತ
ಶಿರಿವರಸರ್ವೋತ್ತಮನೆ ಪ್ರಿಯತರ ದಾಸಾರ್ಯ ಪ

ಕಾಶಿ ಗಯಾ ಪಿತೃಕಾರ್ಯ ಪೂರೈಸಿ ಬರುವಾಗ
ದೇಶ ದೇಶದಿ ಹರಿಯ ಮಹಿಮೆ ತೋರುತ್ತಾ
ಅಸಚ್ಛಾಸ್ತ್ರ ವಾದಗಳ ಕತ್ತರಿಸಿ ಬಿಸುಡುತ್ತ
ಸುಚ್ಛಾಸ್ತ್ರ ಬೋದಿಸುತ್ತ ಬಂದರು ಮನೆಗೆ ೧

ಸಕುಟುಂಬ ತಿರುಪತಿಗೆ ಪೋಗಿ ಶ್ರೀನಿಧಿಯ
ಭಕುತಿಯಿಂದಲಿ ಸ್ತುತಿಸಿ ಊರಿಗೆ ತಿರುಗಿ
ಶ್ರೀಕರನ ಪ್ರೀತಿಕರ ಶಿಷ್ಯೋದ್ಧಾರಕ್ಕೆ
ಬೇಕಾದ ಯತ್ನಗೈದರು ದಾಸ ಆರ್ಯ ೨

ಈ ಪುಣ್ಯ ಶ್ಲೋಕರು ಷಷ್ಠ್ಯಪರಿಸಂಖ್ಯಾ
ಸುಪುಣ್ಯ ಶಿಷ್ಯರಿಗೆ ಬಲುದಯದಿಂದ
ಅಪರೋಕ್ಷ ಒದಗಲು ಉಪದೇಶವಿತ್ತಿಹರು
ಅಪವರ್ಗಯೋಗ್ಯರಿಗೆ ಮಾರ್ಗ ತೋರಿಹರು ೩

ಮೊದಲು ಗೋಪಾಲ ವೇದವ್ಯಾಸ ಹಯವದನ
ಶ್ರೀದನ ಈ ಮೂರು ಉತ್ಕೃಷ್ಟನಾಮ

ಅಂಕಿತವ ನಾಲ್ವರಿಗೆ ವಿಜಯದಾಸಾರ್ಯರು
ಉತ್ತುಂಗಮಹಿಮರು ಇತ್ತಿಹರು ದಯದಿ ೪

ಸಾಧುವರ್ಯ ತಮ್ಮನಿಗೆ ಹಯವದನಾಂಕಿತ ನಾಮ
ಉತ್ತನೂರು ಭಾಗಣ್ಣ ರಾಯರ್ಗೆ ಗೋಪಾಲ
ಆದವಾಣಿ ತಿಮ್ಮಣ್ಣರ್ಗೆ ವೇಣುಗೋಪಾಲ
ಆದವಾಣಿಯವರದ್ವಾರಾ ವ್ಯಾಸ ಸುಬ್ಬಣ್ಣರ್ಗೆ ೫

ಗುರುವರ್ಯ ಗೋಪಾಲದಾಸಾರ್ಯರ ಚರಣ
ಸರಸಿಜಯುಗ್ಮನಾ ನಂಬಿದೆ ನಿಶ್ಚಯದಿ
ಕಾರುಣ್ಯ ಔದಾರ್ಯ ನಿಧಿಗಳು ಇವರಲ್ಲಿ
ಶರಣಾದೆ ಸಂತತಸ್ಮರಿಸೆ ಪಾಲಿಪರು ೬

ಗಾಯತ್ರಿಯಲಿ ಕೇಶವಾದಿ ಇಪ್ಪತ್ತನಾಲ್ಕು
ಹಯಗ್ರೀವರೂಪಗಳು ಆರನ್ನೂ ಸ್ಮರಿಸಿ
ಗಾಯತ್ರಿನಾಮ ಶ್ರೀವೇಂಕಟಕೃಷ್ಣನಿಗೆ
ಪ್ರಿಯಗಾಯತ್ರಿಮಂತ್ರ ಸಿದ್ಧಿಪಡೆದವರು ೭

ಇಂಥಾ ಮಹಾಭಕ್ತ ಭಾಗಣ್ಣನ ಬಳಿ
ಬಂದು ವಿಜಯಾರ್ಯರು ಇತ್ತರು ದಯದಿ
ಸೌಂದರ್ಯಸಾರ ಗೋಪಾಲವಿಠ್ಠಲ ನಾಮ
ಇಂದಿರಾಪತಿ ಅಖಿಳಪ್ರದನ ಅಂಕಿತವ ೮

ಆದವಾಣಿಸುಲ್ತಾನನ ಮಂತ್ರಿಯು
ಸಾಧುಶೀಲನು ತಿಮ್ಮಣ್ಣರಾಯ
ಈತನು ವೀರ ವೈಷ್ಣವಮಾಧ್ವಬ್ರಾಹ್ಮಣನು
ಭಕ್ತಿಮಾನ್ ಜ್ಞಾನವಾನ್ ವೈರಾಗ್ಯಶಾಲಿ ೯

ಹಿಂದಿನ ಜನ್ಮದಿ ಆದಿಕೇಶವನನ್ನ
ವಂದಿಸಿ ಸ್ತುತಿಸಿದ ರಾಮಾನುಜೀಯ
ಇಂದು ಸದ್ವೈಷ್ಣವಕುಲದಲ್ಲಿ ಹುಟ್ಟಿಹನು
ಇಂದಿರೇಶನ ನಾಮಾಂಕಿತ ಬೇಡಿದ್ದ ಮೊದಲೇ ೧೦

ಮೊದಲೇವೆ ತಾಳೆಂದು ಹೇಳಿ ಈಗ ವಿಜಯಾರ್ಯ
ಇತ್ತರೂ ಶ್ರೀ ವೇಣುಗೋಪಾಲವಿಠ್ಠಲ ಈ
ಉತ್ತಮ ಈ ನಾಮ ಉಪದೇಶ ಮಾಡಿದರು
ಈ ತಿಮ್ಮಣ್ಣ ರಾಯರಿಗೆ ನಮೋ ನಮೋ ಎಂಬೆ ೧೧

ಕಲ್ಲೂರು ಸುಬ್ಬಣ್ಣಾಚಾರ್ಯರು ನ್ಯಾಯಸುಧಾ
ಮಂಗಳ ಅನುವಾದ ಚರಿಸಿ ವಿಜಯಾರ್ಯ
ಅಲ್ಲಿ ಪಾಚಕ ವೇಷದಲಿ ಪೋಗಿ ಮಂಡಿಗೆ
ಗಳ ಮಾಡಿದರು ಮಧುಸೂದನನ ಪ್ರೀತಿಗೆ ೧೨

ಸುಬ್ಬಣ್ಣಾಚಾರ್ಯರು ಮಹಾದೊಡ್ಡ ಪಂಡಿತರು
ಶುಭತಮಸುಧಾಮಂಗಳದ ಅನುವಾದ
ಸಂಭ್ರಮದಿ ಕದಡಿದ್ದ ಬಹು ಬಹು ಮಂದಿಯ
ಸಭೆಯೊಳು ಪ್ರವೇಶಿಸಿದರು ವಿಜಯಾರ್ಯ ೧೩

ನೆರೆದಿದ್ದವರಲ್ಲಿ ವಿಜಯರಾಯರ ಮಹಿಮೆ
ಅರಿತಿದ್ದಜನ ನಮ್ರಭಾವದಲಿ ಎದ್ದು
ಮರ್ಯಾದೆ ಮಾಡಿದರು ಅದನೋಡಿ ಆಚಾರ್ಯ
ಪ್ರಾಕೃತ ಹಾಡುವವಗೆ ಪೂಜೆಯೇ ಎಂದ ೧೪

ವ್ಯಾಸಪೀಠದ ಮುಂದೆ ವಿಜಯರಾಯರು ಪೋಗಿ
ವ್ಯಾಸಗೆ ಮಧ್ವಗೆ ಜಯಾರ್ಯಗೆ ನಮಿಸಿ
ಸಂಶಯ ಕಳೆದು ಯಥಾರ್ಥಜ್ಞಾನವನೀವ
ಶ್ರೀಸುಧಾ ಕೇಳುವೆ ಎಂದು ಪೇಳಿದರು ೧೫

ಕನ್ನಡ ಕವನಮಾಡುವ ನಿಮಗೆ ಈ ಸುಧಾ
ಘನವಿಷಯಗಳು ತಿಳಿಯಲಿಕೆ ಬೇಕಾದ
ಜ್ಞಾನನಿಮಗೆ ಏನು ಇದೆ ಹೇಳಿ ಎಂದು ಆಚಾರ್ಯ
ತನ್ನ ಪಾಂಡಿತ್ಯದ ಗರ್ವದಿ ಕೇಳಿದನು ೧೬

ಸುಬ್ಬಣ್ಣಾಚಾರ್ಯನ ಈ ಮಾತು ಕೇಳಿ
ಒಬ್ಬ ಪರಿಚಾರಕನ ಕರೆದು ವಿಜಯಾರ್ಯ

ಅವನಿಗೆ ವಿಧ್ಯಾಭ್ಯಾಸ ಉಂಟೇ ಎನ್ನೆ
ಅಪದ್ಧ ಅಡದೇ ಅವ ವಿದ್ಯಾಹೀನನೆಂದ ೧೭

ಸಭ್ಯರು ನೋಡುತಿರೆ ವಿಜಯದಾಸಾರ್ಯರು
ಕಪಿಲ ಖಪತಿ ಗರುಡಾಸನ ಘರ್ಮ
ಶ್ರೀಪತಿ ಆಜ್ಞಾಸಾರ ವರಾಹನ್ನ ಸ್ಮರಿಸಿದರು
ಆ ಪರಮದಡ್ಡನ ಶಿರದಿ ಕರವಿಟ್ಟು ೧೮

ಕರವಿಡಲು ವಿಜಯರಾಯರ ಜ್ಞಾನಪೀಯೂಷ
ಧಾರೆ ಆ ಪುರುಷನ ಶರೀರದೊಳು ಪೊಕ್ಕು
ರುಧಿರ ನಾಳಂಗಳು ತನುನರನಾಡಿ ಶಾಖೆಗಳು
ತೀವ್ರಸುಪವಿತ್ರವಾದವು ತತ್ಕಾಲ ೧೯

ವರ್ಣಾಭಿಮಾನಿಗಳು ಭಾರತೀ ಸಹವಾಯು
ವರ್ಣಪ್ರತಿಪಾದ್ಯ ಹರಿರಮಾಸಮೇತ
ತನು ಮನವಾಕ್ಕಲ್ಲಿ ಪ್ರಚುರರಾಗಿ ಅವನು
ಘನತರ ಸುಧಾಪಂಕ್ತಿಗಳ ಒಪ್ಪಿಸಿದನು ೨೦

ಅಣುವ್ಯಾಖ್ಯಾನ ಸುಧಾ ನ್ಯಾಯ ರತ್ನಾವಳೀ
ಇನ್ನು ಬಹುಗ್ರಂಥಗಳ ವಾಕ್ಪ್ರವಾಹದಲಿ
ಘನಮಹ ವಿಷಯಗಳ ಸಂದೇಹ ಪರಿಹರಿಪ
ಅನುವಾದಮಾಡಿದ ಅದ್ಭುತ ರೀತಿಯಲ್ಲಿ ೨೧

ಸುಬ್ಬಣ್ಣಾಚಾರ್ಯರು ದಾಸಾರ್ಯರಲ್ಲಿ
ಉದ್ಭಕ್ತಿಗುರುಭಾವದಿಂದೆದ್ದು ನಿಲ್ಲೆ
ಸೌಭಾಗ್ಯ ಪ್ರದಸುಧಾ ಮಂಗಳವ ಪೂರೈಸು
ಶುಭೋದಯವು ನಿನಗೆಂದು ಪೇಳಿದರು ದಾಸಾರ್ಯ ೨೨

ಮಂಗಳಪ್ರಸಾದವ ಸಭ್ಯರಿಗೆ ಕೊಟ್ಟಮೇಲ್
ಕಂಗಳಲಿ ಭಕ್ತಿಸುಖ ಬಾಷ್ಪ ಸುರಿಸುತ್ತ

ಗಂಗಾಜನಕಪ್ರಿಯ ವಿಜಯರಾಯರ ಪಾದ
ಪಂಕಜದಿ ಶರಣಾದರು ಸುಬ್ಬಣ್ಣಾರ್ಯ ೨೪

ರಾಜೀವಾಸನಪಿತ ಶ್ರೀ ಪ್ರಸನ್ನ ಶ್ರೀನಿವಾಸ
ರಾಜೀವಾಲಯಾಪತಿಗೆ ಪ್ರಿಯತರ ದಾಸಾರ್ಯ
ವಿಜಯರಾಯರೇ ನಿಮ್ಮ ರಾಜೀವಾಂಘ್ರಿಗಳಲ್ಲಿ
ನಿಜದಿ ಶರಣು ಶರಣು ಶರಣಾದೆ ಶರಣು ೨೫

–ಇತಿಃ ತೃತೀಯಾಧ್ಯಾಯಃ–

ಚತುರ್ಥ ಅಧ್ಯಾಯ

ಶರಣು ಶರಣು ಶರಣು ವಿಜಯದಾಸಾರ್ಯರೆ
ಶರಣಾದೆ ತವ ವಾರಿಜಾಂಘ್ರಿಯುಗ್ಮದಲಿ
ಸೂರಿ ಸುರ ಜನ ಗಂಗಾಧರ ವಾಯು ವಿಧಿ ಎನುತ
ಶಿರಿವರಸರ್ವೋತ್ತಮನ ಪ್ರಿಯತರ ದಾಸಾರ್ಯ ಪ

ರಾಜರು ಸಂಸ್ಥಾನ ಮಂಡಲೇಶ್ವರರೆಲ್ಲ
ವಿಜಯ ದಾಸಾರ್ಯರಿಗೆ ಎರಗಿ ತಮ್ಮ
ರಾಜಧಾನಿಗೆ ಕರೆದು ಕೃತಕೃತ್ಯರಾದರು
ವಿಜಯ ಸಾರಥಿ ಒಲುಮೆ ಏನೆಂಬೆ ಇವರೊಳ್ ೧

ಅಲ್ಲಲ್ಲಿ ಪೋದ ಸ್ಥಳದಲ್ಲಿ ನರಹರಿ ಮಹಿಮೆ
ಎಲ್ಲ ಸಜ್ಜನರಿಗೂ ಕೀರ್ತಿಸಿ ತೋರಿಸಿ
ಕಲಿ ಕಲ್ಮಷ ಪೀಡಿತ ಜನರ ಕಷ್ಟಗಳ
ಎಲ್ಲವ ಪರಿಹಾರ ಮಾಡಿ ಕಾಯ್ದಿಹರು ೨

ಹರಿನಾಮಾ ಐನೂರು ಸಾವಿರ ಕೀರ್ತನೆ ಗ್ರಂಥಗಳೊಳು
ತಾನೇ ಸ್ವತಮಾಡಿದ್ದಲ್ಲದೆ ಮಿಕಿಲಾದ್ದು
ಇನ್ನೂರೈವತ್ತುನೂರು ವಿಜಯರಾಯರಲಿ ನಿಂತು
ಪೂರ್ಣ ಮಾಡಿಸಿಹರು ಶ್ರೀ ಪುರಂದರದಾಸಾರ್ಯ ೩

ಹರಿನಾಮ ಜಿಹ್ವೆಯಲಿ ಭೂತದಯಾ ಮನಸಿನಲ್ಲಿ
ಹರಿಮೂರ್ತಿ ಗುಣರೂಪ ಅಂತಃಕರಣದಲಿ
ಪುರಂದರಾರ್ಯರು ಇವರು ರಚಿಸಲೆ ಬಿಟ್ಟಿದ್ದ
ಭಾರಿ ಸಂಕೀರ್ತನೆಗಳನ್ನ ಹಾಡಿಹರು ೪

ಪ್ರಿಯತಮ ಶಿಷ್ಯರು ಗೋಪಾಲ ದಾಸರೊಡೆ
ತೋಯಜಾಕ್ಷನ ಸ್ಮರಿಸಿ ನಡಿಯುತಿರುವಾಗ
ಬಾಯಾರಿಕೆ ಪೀಡಿತ ಕರ್ತೇಗೆ ದಯಮಾಡಿ
ತೋಯವನು ಕುಡಿಸಿಹರು ಕಾರುಣ್ಯ ಶರಧಿ ೫

ಬಹುಕಾಲದ ಹಿಂದೆ ತಾ ಕೇಶವರಾಯನ
ಗೃಹದಲ್ಲಿ ಹುಗ್ಗಿಯ ಉಂಡದ್ದು ನೆನಪಾಗಿ
ಆ ಗೃಹಕ್ಕೆ ಪೋದರು ಗೋಪಾಲ ದಾಸರ ಸಹ
ಹಾಹಾ ಅಲ್ಲಿಸ್ಥಿತಿ ಏನೆಂಬೆ ಆಗ ೬

ಏಳು ಜನ್ಮದ ಕರ್ಮ ಗತಿ ಸುಳಿಯಲ್ಲಿ
ಸಿಲುಕಿ ಆ ಮನೆಯ ಯುವಕನು ಅಸು ಬಿಟ್ಟ
ತಲೆ ಸ್ಫೋಟನವಾಗಿ ತಾಕಿ ಬೋದಿಗೆಗೆ
ಅಳುತ್ತಿದ್ದರು ಜನರು ದುಃಖದಲಿ ಮುಳಗಿ ೭

ಕರುಣಾ ಸಮುದ್ರರು ಭೂತದಯಾ ಪರರು
ಎರದರು ತಮ್ಮ ಆಯುಷ್ಯದಿ ಮೂರು ವರುಷ
ವರಾಹ ಭಿಷಕ್ ನರಹರಿಯ ಜಪವನ್ನು ಗೈದು
ನರಸಿಂಹನ ಸ್ತುತಿಸಿ ಬದಕಿಸಿದರು ಯುವಕನ್ನ ೮

ಅಳುತ್ತಿದ್ದ ಜನರೆಲ್ಲ ಆನಂದ ಬಾಷ್ಪದ
ಮಳೆ ಸುರಿಸಿ ಬಲು ಕೃತಜ್ಞತೆ ಭಾವದಿಂದ
ಮಾಲೋಲ ಪ್ರಿಯ ವಿಜಯ ದಾಸರ ಪದಯುಗಳ
ನಳಿನದಲಿ ನಮಿಸಿದರು ಭಕ್ತಿ ಪೂರ್ವಕದಿ ೯

ಚೀಕಲ ಪರವಿಯಿಂದಲಿ ನಾಲಕು ಕ್ರೋಶ
ನಗರವು ಮಾನವಿ ಎಂಬುದು ಅಲ್ಲಿ

ಪ್ರಖ್ಯಾತ ಪಂಡಿತನು ಶ್ರೀನಿವಾಸಾಚಾರ್ಯನು
ಪುಷ್ಕಲ ಶ್ರೀಮಂತ ಬಹು ಶಿಷ್ಯ ಸೇವ್ಯ ೧೦

ಸುರಗಂಧರ್ವಾಂಶರು ಬ್ಯಾಗವಟ್ಟೀಯವರು
ನರಸಿಂಹ ದಾಸರು ಅವರ ಮಗನು
ಈ ಶ್ರೀನಿವಾಸನು ಕೇಳಿದ್ದ ಮೊದಲೇವೇ
ಹರಿದಾಸವರ್ಯ ವಿಜಯಾರ್ಯರ ಪ್ರಭಾವ ೧೧

ಹರಿಭಕ್ತಾಗ್ರಣಿ ಪ್ರಹ್ಲಾದನ ಭ್ರಾತನು
ಧೀರ ಸಂಹ್ಲಾದನೆ ಈ ಧೀರ ಶ್ರೀನಿವಾಸ
ಭಾರಿ ಸಾಧನೆ ಇವಗೆ ಒದಗಿಸ ಬೇಕೆಂದು
ಹರಿದಾಸವರ್ಯರು ಪೋದರು ಮಾನವಿಗೆ ೧೨

ಮಾನವಿಯಲ್ಲಿ ವಿಜಯಾರ್ಯರು ಮುಖಾಂ ಹಾಕಿ
ಜನರಲ್ಲಿ ಹರಿಭಕ್ತಿ ಜ್ಞಾನ ಬೆಳಸುತ್ತ
ದೀನರಿಗೆ ಯೋಗ್ಯ ವಾಂಛಿತವ ಒದಗಿಸುತ್ತ
ಘನ ಮಹಿಮ ಹರಿ ಸೇವೆ ಮಾಡುತ್ತ ಇದ್ದರು ೧೩

ಶ್ರೀನಿವಾಸಾಚಾರ್ಯನಿಗೆ ಉದ್ಧಾರ ಕಾಲವು
ಶ್ರೀನಿಧಿಯ ನಿಯಮನದಿ ಬಂದಿಹುದು ಎಂದು
ಶ್ರೀನಿವಾಸಾಚಾರ್ಯನಲಿ ಪೋಗಿ ವಿಜಯಾರ್ಯರು
ಬನ್ನಿರಿ ಹರಿಪ್ರಸಾದ ಕೊಳ್ಳಿರಿ ಎಂದರು ೧೪

ವಿಜಯ ದಾಸಾರ್ಯರ ಆಹ್ವಾನ ಲೆಕ್ಕಿಸದೆ
ರಾಜಸದಿ ತಾನು ಪಂಡಿತನೆಂಬ ಗರ್ವದಿ
ವಿಜಯಾರ್ಯರ ಕುರಿತು ಅವಜ್ಞ ಮಾಡಿದನು
ಬೊಜ್ಜೆಯಲಿ ರೋಗವು ತನ್ನಿಮಿತ್ತ ಬಂತು ೧೫

ಸೋತ್ತಮಾಪರಾಧದಿಂ ವ್ಯಾಧಿ ಪೀಡಿತನಾಗಿ
ಸೋತು ತತ್ ಪರಿಹಾರ ಯತ್ನ ಸರ್ವದಲೂ
ಬಂದು ವಿಜಯಾರ್ಯರಲಿ ಶರಣಾಗಿ ಕ್ಷಮಿಸೆನ್ನೆ
ಹಿತದಿಂದ ವಿಜಯಾರ್ಯರು ಕರುಣಿಸಿದರು ೧೬

ಗೋಪಾಲ ದಾಸರು ಉದ್ಧರಿಸುವರು ಪೋಗೆಂದು
ಕೃಪೆಯಿಂದಲಿ ವಿಜಯಾರ್ಯರು ಪೇಳಿ ಶ್ರೀನಿವಾಸ
ಗೋಪಾಲದಾಸರಲಿ ಪೋಗಿ ಶರಣಾಗಲು ದಾಸಾರ್ಯರಲಿ
ಶ್ರೀಪನ್ನ ಸ್ತುತಿಸೆ ಗುರುಗಳು ಒಲಿದರು ಆಗ ೧೭

ಗೋಪಾಲ ವಿಜಯ ವಿಠ್ಠಲನನ್ನ ವಿಜಯಾರ್ಯ
ಸುಪವಿತ್ರ ಚೀಕಲಪರವಿಯಲಿ ಸ್ತುತಿಸೆ
ಗೋಪಾಲ ದಾಸಾರ್ಯರು ಅರಿತು ಶ್ರೀನಿವಾಸನಿಗೆ
ಉಪದೇಶ ಮಾಡಿದರು ತನ್ನ ಗುರು ಪೇಳ್ದ ರೀತಿ ೧೮

ಶ್ರೀನಿವಾಸಾಚಾರ್ಯರು ಗೋಪಾಲ ದಾಸಾರ್ಯರ ದಯದಿ
ಪುನರಾರೋಗ್ಯ ಆಯುಷ್ಯವು ಹೊಂದಿ
ಶ್ರೀನಿಧಿ ಭೀಮರತಿ ತೀರಸ್ಥ ವಿಠ್ಠಲನ್ನ
ಸನ್ನಮಿಸಿ ಸಂಸ್ತುತಿಸಿ ಖ್ಯಾತರಾದರು ಜಗನ್ನಾಥ ದಾಸರೆಂದು ೧೯

ವಿಜಯನಗರಾದಿ ರಾಜ ಜಮೀನುದಾರಗಳು
ವಿಜಯರಾಯರನ್ನ ತಮ್ಮ ಸ್ಥಳಕ್ಕೆ ಕರೆತಂದು
ನಿಜಭಕ್ತಿಯಲಿ ಮರ್ಯಾದೆಗಳ ಮಾಡಿದರು
ವಿಜಯದಾಸರ ಮಹಿಮೆ ನೇರಲ್ಲಿ ಕಂಡು ೨೦

ತಿರುಗಿ ಬರುವಾಗ ಶ್ರೀದಾಸ ಮಹಂತರು
ಚಕ್ರತೀರ್ಥದಿ ಸತ್ರಯಾಗ ಮಾಡಿದರು
ಪುರಂದರದಾಸಾರ್ಯರು ಇದ್ದ ಸ್ಥಳ ಈ ಕ್ಷೇತ್ರ
ಹರಿಶಿರಿಗೆ ಹನುಮಗೆ ಶಿವಗೆ ಆನಮಿಪೆ ೨೧

ಸತ್ರಯಾಗ ಕಾಲದಲಿ ಒಂದು ದಿನ ರಾತ್ರಿ
ವಿಧವೆ ಓರ್ವಳು ತನ್ನ ಕಜ್ಜಿ ಮಗು ಸಹಿತ
ನದಿಯಲ್ಲಿ ಬೀಳಲು ಯತ್ನಿಸಲು ಅದು ಕಂಡು
ಇತ್ತು ಅಭಯವ ವಿಜಯಾರ್ಯರು ಕಾಯ್ದರು ೨೨

ಭೀಮಪ್ಪ ನಾಯಕ ಧನವಂತ ಬ್ರಾಹ್ಮಣನ
ಧರ್ಮಪತ್ನಿಯು ಆಕೆ ಪತಿಯ ಕಳಕೊಂಡ್ಲು

ತಾಮಸ ಪ್ರಚುರ ಮೈದುನ ಬಂದು ಬಹಳ ಕ್ರೂರ
ಹಿಂಸೆ ಕೂಡಲು ನದಿಯೊಳು ಬೀಳೆ ಬಂದಿಹಳು ೨೩

ಸಾಧ್ವಿಯೂ ಆಕೆಯೂ ಶಿಶು ಮಹಾ ಭಾಗವತ
ಎಂದು ಜ್ಞಾನ ದೃಷ್ಟಿಯಲಿ ಅರಿತರು ವಿಜಯಾರ್ಯ
ಎಂಥವರು ಆದರೂ ಆತ್ಮಹತ್ಯೆ ಶಿಶುಹತ್ಯ
ಯತ್ನ ತಡೆದು ರಕ್ಷಿಪುದು ಭೂತದಯವು ೨೪

ತಾಯಿಶಿಶು ಈರ್ವರನು ಮಠಕೆ ಕರಕೊಂಡು ಹೋಗಿ
ಭಾರ್ಯೆ ಅರಳಿಯಮ್ಮ ಕೈಲಿ ಒಪ್ಪಿಸಿ ಆಕೆ
ಹಯವದನ ಆಕೆಯ ಮೃತಮಗನ ಪ್ರತಿಯಾಗಿ
ದಯದಿ ಕೊಟ್ಟಿಹ ಶಿಶುವ ಎಂದು ಪೋಷಿಸಿದಳು ೨೫

ಔದಾರ್ಯ ಕರುಣದಿ ಶಿಶುವನ್ನು ತಾಯಿಯನ್ನು
ಆದರಿಸಿ ದಾಸಾರ್ಯ ದಂಪತಿಯು ಮಗುವ
ಹಿತದಿ ಮೋಹನನೆಂದು ಹೆಸರಿಟ್ಟು ಆಶಿಸಿ
ಒದಗಿದರು ಇಹ ಪರ ಉದ್ಧಾರವಾಗೆ ೨೬

ಯುಕ್ತ ಕಾಲದಿ ಮುಂಜಿ ಮದುವೆ ಮೋಹ ಮೋಹನನಿಗೆ
ಶ್ರೀಕರನ್ನ ಅನುಗ್ರಹದಿ ಮಾಡಿಸಿ ಹರಿಯು
ಉತ್ಕೃಷ್ಟ ನಾಮಾಂಕಿತ ಮೋಹನ ವಿಠಲ ಎಂದು
ಕೃಪಾಕರ ದಾಸಾರ್ಯರು ಇತ್ತರು ಮುದದಿ ೨೭

ಒಂದು ಸಮಯದಿ ಮೋಹನನಿಗೆ ಅಪಮೃತ್ಯು ಬರಲಿರಲು
ಶ್ರೀ ದಾಸರಾಯರು ಮೊದಲೇ ಹೇಳಿದರು
ಶ್ರೀ ಬಿಂದು ಮಾಧವನ್ನು ಸೇವಿಸೆ ಹೋಗಿ ನಾ ಬರುವೆ
ಮೃತನಾದ ದೇಹವ ಕಾಪಾಡು ಹರಿಯ ಸ್ಮರಿಸೆಂದು ೨೮

ಅದರಂತೆ ಮೋಹನಗೆ ಅಪಮೃತ್ಯು ಸೋಕಲು
ಸಾಧ್ವಿಸತಿ ದೇಹವ ಹೊರತಂದು ರಕ್ಷಿಸೆ
ಕದನಗೈದು ಓರ್ವ ಸಾಗಿಸಲು ಯತ್ನಿಸೆ
ಸತಿಯು ವಿಜಯಾರ್ಯರನ್ನು ಸ್ಮರಿಸಿ ಮೊರೆಯಿಟ್ಟಳು ೨೯

ಶ್ರೀಬಿಂದುಮಾಧವನ್ನ ಸೇವಿಸಿ ದಾಸಾರ್ಯರು
ತಾಪೋಗಿ ಧರ್ಮರಾಜನಲಿ ಅರಿಕೆ ಮಾಡಿ
ಕ್ಷಿಪ್ರದಲಿ ಅಸು ತಿರುಗಿ ತರಿಸಿ ಬದುಕಿಸಿದರು
ಆರ್ಭಟದಿ ಬಲುತ್ಕಾರ ಮಾಡಿದವ ಬಿದ್ದ ೩೦

ಈ ರೀತಿ ಅಪಮೃತ್ಯು ಪರಿಹರಿಸಿದ್ದನ್ನ ಕೇಳಿ ಮೋಹನ
ಭಾರಿ ಕರುಣಾಳು ವಿಜಯಾರ್ಯರ ಸ್ತುತಿಸಿ
ಉತ್ಕೃಷ್ಟ ಕೀರ್ತನೆ ಹಾಡಿರುವುದು ಲೋಕ
ಅರಿವುದು ಅದ್ಯಾಪಿ ಹೊಗಳುವರು ಜನರು ೩೧

ಶ್ರೀ ವಿಜಯದಾಸರ ಅನುಗ್ರಹದಿ ಮೋಹನ
ಕೋವಿದವರ್ಯನು ಶ್ರುತಿಯುಕ್ತ ಯುತವಾದ
ತತ್ವಬೋಧಕ ಕೀರ್ತನೆಗಳು ಶ್ರೀಹರಿಯ
ಅವತಾರಲೀಲಾನು ವರ್ಣನ ಮಾಡಿಹರು ೩೨

ರಾಜೀವಾಸನ ಪಿತ ಪ್ರಸನ್ನ ಶ್ರೀನಿವಾಸ ಶ್ರೀ
ರಾಜೀವಾಲಯ ಪತಿಗೆ ಪ್ರಿಯಕರ ದಾಸಾರ್ಯ
ವಿಜಯರಾಯರೇ ನಿಮ್ಮ ರಾಜೀವಾಂಘ್ರಿಗಳಲ್ಲಿ
ನಿಜದಿ ಶರಣು ಶರಣು ಶರಣು ಶರಣಾದೆ ೩೩

– ಇತಿ ಚತುರ್ಥಾಧ್ಯಾಯ ಸಮಾಪ್ತಿ –

ಪಂಚಮ ಅಧ್ಯಾಯ

ಶರಣು ಶರಣು ಶರಣು ವಿಜಯದಾಸಾರ್ಯರೆ
ಶರಣಾದೆ ತವ ವಾರಿಜಾಂಘ್ರಿಯುಗ್ಮದಲಿ
ಸೂರಿ ಸುರ ಜನ ಗಂಗಾಧರ ವಾಯು ವಿಧಿ ವಿನುತ
ಶಿರಿವರಸರ್ವೋತ್ತಮನೆ ಪ್ರಿಯತರ ದಾಸಾರ್ಯ ಪ

ವಿಜಯದಾಸಾರ್ಯರು ದೇವ ವೃಂದದವರೆಂದು
ನಿಜವಾಗಿ ಅರಿವುದಕೆ ಇತಿಹಾಸ ಬಹು ಉಂಟು

ನಿಜಭಕ್ತರಲ್ಲದೆ ಪಾಮರರು ಸಹ ಅರಿತ
ಸಜ್ಜನರು ಹೊಗಳುವ ಇತಿಹಾಸ ಕೇಳಿ ೧

ಬಾಲ ವಿಧವೆಯು ಕರ್ಮ ಸುಳಿಯಲ್ಲಿ ಸಿಲುಕಿ
ಬಲು ನೀಚ ವೃತ್ತಿಯವಳಂತೆ ತೋರಿ
ಕಲುಷವಂತಳು ಎಂದು ಬಹಿಷ್ಕೃತಳಾದವಳ
ಆಲಯದಿ ವಿಜಯಾರ್ಯ ಕೊಂಡರು ಅವತನವ ೨

ತಮ್ಮ ಆಹ್ವಾನವ ಲೆಕ್ಕಿಸದೆ ಮೊದಲೇ ಈ
ಆಧಮಳ ಆಹ್ವಾನ ಮನ್ನಣೆ ಮಾಡಿ
ಆ ಮನೆಯಲ್ಲಿ ಪೂಜಾನ್ನೈವೇದ್ಯ ಮಾಡಿದರೆಂದು
ಶ್ರೀಮಠದ ಭೂಸುರರು ಕೋಪ ಹೊಂದಿದರು ೩

ಶ್ರೀವರನು ವಿಧಿವಾಯು ಅಮರ ಶ್ರೇಷ್ಠರ ಸಹ
ಯಾವ ದಾಸಾರ್ಯರಲಿ ಪ್ರಚುರನಾಗಿಹನೋ
ಯಾರನ್ನ ಸ್ಮರಿಸಲು ದುರಿತಹರ ಪುಣ್ಯದವೋ
ಅವರು ಭೋಜನ ಮಾಡುತಿರೆ ನಿಂತಳು ಬಾಲೆ ೪

ಮಹಾನ್ ದಾಸರಿಗೆ ಆಕೆ ಮಾಡಿಸಿದ ಪೂಜೆಯಿಂ
ದೇಹಜದುರಿತಗಳು ಪರಿಹಾರವಾಗಿ
ಶ್ರೀ ಹರಿಯದಾಸರಿಗೆ ಮನಸಾ ಸನ್ನಮಿಸಿ
ದೇಹೇಂದ್ರಿಯಗಳ ಲಯವ ಚಿಂತಿಸಿದಳು ೫

ದಾಸಾರ್ಯರು ಭೋಜನವ ಪೂರೈಸಲು
ಅಸು ಆಕೆ ಗಾತ್ರ ಬಿಟ್ಟು ಹೊರಟು ಹೋಯಿತು
ದಾಸವರ್ಯರು ತಾವೇ ಆಕೆಗೆ ಸಂಸ್ಕಾರ
ಶ್ರೀಶ ಹರಿ ಪ್ರೀತಿಯಾಗಲಿಕೆ ಮಾಡಿದರು ೬

ದೂಷಿತ ಬಹಿಷ್ಕೃತ ಸ್ತ್ರೀ ಮನೆಯಲ್ಲಿ ಉಂಡು
ದೂಷಣಾರ್ಹ ಕ್ರಿಯಾ ಚರಿಸಿಹರು ಎಂದು
ದೀಕ್ಷಾ ಪ್ರವರ್ಧಕ ಶ್ರೀ ಮಠಾಧಿಕಾರಿಗಳು
ಬಹಿಷ್ಕಾರ ಮಾಡಿದರಂತೆ ದಾಸಾರ್ಯರಿಗೆ ೭

ತಪೋನಿಧಿಗಳು ಸೂರಿ ವರ ಸ್ವಾಮಿಗಳು
ಶ್ರೀಪನ್ನ ಪೂಜಿಸಿ ಪ್ರತಿಮೆಯಲ್ಲಿ
ಅಪರೋಕ್ಷ ಜ್ಞಾನದಿ ಸರ್ವವ ಅರಿತು
ಶ್ರೀಪ ಪ್ರಿಯ ವಿಜಯಾರ್ಯರನ್ನು ಬರಮಾಡಿದರು ೮

ಜ್ಞಾನಿವರ್ಯ ದಾಸಾರ್ಯರು ಇದು ಮೊದಲೇ ಅರಿತು
ತನ್ನ ಶಿಷ್ಯರೊಡೆ ಹೇಳೆ ಆಹ್ವಾನ ಬಂದು
ತನ್ನವರ ಸಹ ಶ್ರೀ ಮಠಕೆ ಪೋಗಿ ಸ್ವಾಮಿಗಳ
ಅನುಗ್ರಹ ಹೊಂದಿ ಸಂಭಾಷಿಸಿದರು ಮುದದಿ ೯

ಪ್ರತಿಮೆಯಲಿ ಶ್ರೀಹರಿಯ ಸಾನ್ನಿಧ್ಯ ಲಕ್ಷಣ
ವೇದ್ಯವಾಗುವಿಕೆ ದಾಸಾರ್ಯರು ಒದಗಲಿಕ್ಕೇ ಎಂದು
ಸುತಪೋನಿಧಿ ಸ್ವಾಮಿಗಳು ಹೇಳಿ ದಾಸಾರ್ಯರು
ಇಂದಿರೇಶ ಸುಪ್ರಚುರ ವ್ಯಾಪ್ತನೂ ಎಂದರು ೧೦

ಪ್ರತಿಮೆಯಲಿ ಹಿಂದಿನ ದಿನಕ್ಕಿಂತ ಆಗ
ಆದಿಯಂತೇವೆಯೇ ಶ್ರೀಯಃಪತಿ ಜ್ವಲಿಸಿ
ಮುದ ಮನದಿ ಶ್ರೀಗಳು ಪೂಜಾದಿ ಪೂರೈಸಿ
ಕೇಳ್ದರು ದಾಸರನ್ನ ಬಾಲೆಯ ವೃತ್ತಾಂತವ ೧೧

ದಾಸವರ್ಯರು ಹೇಳಿದರು ಆ ಬಾಲೆಯು
ಸುಮನಸ ವೃಂದದಿ ಓರ್ವಳು ಪೂರ್ವ
ವಸುಧೆಯಲಿ ಪುಟ್ಟುವೆನು ಎನ್ನನುದ್ಧರಿಸಿರಿ
ವಾತ್ಸಲ್ಯದಿ ಎಂದು ಬೇಡಿದ್ದಳೆಂದು ೧೨

ತತ್ಕಾಲ ಮುಗಿಯಬೇಕಾದ ಪ್ರಾರಬ್ಧ ಕರ್ಮ
ಆಕೆಗೆ ಮುಗಿಯುವ ಸಮಯ ವಿಜಯಾರ್ಯ
ಆಕೆ ಮನೆಗೆ ಹೋಗಿ ಸಾಧನ ಸಂಪತ್ತೊದಗಿ
ಆಕೆಗೆ ಗತಿಯ ಕಲ್ಪಿಸಿಹರು ದಯದಿ ೧೩

ಪ್ರಾರಬ್ಧ ಕಳೆಯಲಿಕೋ ಶಾಪ ನಿಮಿತ್ತವೋ
ಸುರರು ಭುವಿಯಲ್ಲಿ ಪುಟ್ಟಿ ಒಮ್ಮೊಮ್ಮೆ ನಿಷಿದ್ದ
ಕರ್ಮ ಚರಿಸಿದರೂ ಪಾಪ ಲೇಪವಾಗವು
ಇತರರಿಗೆ ಲೇಪವುಂಟು ಹರಿ ಪರಾನ್ಮುಖರ್ಗೆ ೧೪

ಹರಿಗೆ ಪ್ರಿಯಕರ ವಿಜಯರಾಯ ಪ್ರಭಾವ
ತೋರಿಸಿದ ಈ ವೃತ್ತಾಂತ ದಿಕ್ಕು ದಿಕ್ಕು
ಹರಡಿತು ಜನರೆಲ್ಲ ವಿಜಯದಾಸಾರ್ಯರು
ಸುರರೇವೇ ನರರಲ್ಲೆಂದು ನಿಶ್ಚಯಿಸಿದರು ೧೫

ತಿರುಪತಿಯಲ್ಲಿ ಶ್ರೀ ಶ್ರೀನಿವಾಸನ ರಥ
ದಾರಿಯಲ್ಲಿ ನಿಲ್ಲಲು ವಿಜಯದಾಸಾರ್ಯರು
ಹರಿತತ್ವ ಮಹಿಮೆಯ ಕವನ ರೂಪದಿ ಸ್ತುತಿಸೆ
ಗರುಡ ಗಮನನು ರಥದಿ ಸರಸರನೆ ಬಂದ ೧೬

ಮೂರು ಬಾರಿ ಕಾಶಿಗೆ ಹೋದಾಗಲೂ ಗಂಗೆ
ಅರಿತು ಭೃಗುಮುನಿ ಅವತಾರವೆಂದು
ಹರುಷ ತೋರಿ ಉಕ್ಕಿದಳು ಭೃಗು ವಿಜಯರಾಯರು
ವರ ಅತಿಥಿ ಶಿವತಾತ ಪ್ರಿಯರೆಂದು ೧೭

ವೇದ ವೇದಾಂತ ಪುರಾಣಾರ್ಥ ರಹಸ್ಯಗಳು
ಸದಾಗಮ ಸರ್ವಾರ್ಥಗಳ ಸಾರೋದ್ಧಾರವು
ಈ ದಾಸ ಮಹಂತರ ಗ್ರಂಥ ಸುಳಾದಿಗಳು
ಓದಿ ಕೇಳ್ವವರಿಗೆ ಇಹ ಪರ ಉದ್ಧಾರ ೧೮

ಇಂದ್ರಾದಿ ಜಗದ್ಗುರು ಸದಾಶಿವನ್ನ ಸೇವಿಸುತ್ತ
ರುದ್ರಾಂತರ್ಯಾಮಿ ನರಹರಿಯ ಅರ್ಚಿಸುತ್ತ
ವಂದಿಸುತ್ತ ಚಿಪ್ಪಗಿರಿ ವಾಸಿಷ್ಠ ವಿಜಯವಿಠ್ಠಲ ಕೃಷ್ಣನ್ನ
ಹೊಂದಿದರು ದಾನವಾಗಿ ಆಕ್ಷೇತ್ರವನ್ನು ಮೂರ್ತಿಯನ್ನು ೧೯

ಪಾಲಸಾಗರಪೋಲು ಆ ವಾಪಿ ಸುಪವಿತ್ರ
ತಟದಲ್ಲಿಯೇ ವಾಸಸ್ಥಾನ ಮಾಡಿಕೊಂಡು

ಅಲ್ಲೇ ಇದ್ದರು ದಾಸಾರ್ಯರು ಪಾಠ ಪ್ರವಚನ ಭಜನೆ
ಮಾಲೋಲ ಸುಪ್ರೀತಿಕರವಾಗಿ ಮಾಡುತ್ತ ೨೦

ಮೋದಮಯ ಶ್ರೀ ಶ್ರೀನಿವಾಸನ್ನ ಸೇವಿಸುತ
ಮೇದಿನಿಯಲಿ ಸುಜರನ್ನ ಉದ್ಧರಿಸಿ
ಕಾರ್ತೀಕ ಶುದ್ಧ ದಶಮಿಯಲ್ಲಿ ಸ್ವಸ್ಥಾನ
ಯೈದಿದರು ಹರಿಪಾದ ಧ್ಯಾನಿಸುತ್ತ ಧೀರ ೨೧

ವಿಜಯರಾಯರ ನೆನೆದರೆ ಆಯುಷ್ಯ ಆರೋಗ್ಯಶ್ರೀ
ನಿಜಭಕ್ತಿ ಜ್ಞಾನವು ವಿಜಯ ಎಲ್ಲೆಲ್ಲೂ
ವಿಜಯದಾಸಾಂತಸ್ಥ ಮಧ್ವಾಂತರ್ಗತ ಶ್ರೀಶ
ವಿಜಯಸಾರಥಿ ಶ್ರೀನಿವಾಸನು ಈವ ೨೨

ಧೀರ ಭಕ್ತಾಗ್ರಣಿ ಶ್ರೀಮದ್ ಗುರುವರ್ಯರು
ಭೂರಿ ಕರುಣಿಯು ಗೋಪಾಲದಾಸಾರ್ಯ
ಹರಿದಾಸವರ ಹಯವದನ ವಿಠ್ಠಲ
ವಿರಾಗಿ ವೇಣುಗೋಪಾಲ ಜಗನ್ನಾಥದಾಸರು ೨೩

ಹರಿದಾಸ ವೃಂದದಿ ಖ್ಯಾತ ಸೂರಿಗಳೆಲ್ಲರೂ
ಗುರುಶ್ರೀಶ ವಿಠ್ಠಲಾಂಕಿತ ಕುಂಠೋಜಿ ಆರ್ಯ
ಶ್ರೀ ರಘುಪತಿ ವಿಠ್ಠಲ ಇಂಥ ಸರ್ವರೂನೂ
ಪರಿಪರಿ ವಿಧದಿ ಸ್ತುತಿಸಿಹರು ವಿಜಯಾರ್ಯರನ್ನ ೨೪

ವಿಜಯಾರ್ಯ ರಕ್ಷಿತ ಪೋಷಿತ ಉಪದಿಷ್ಟ
ನಿಜದಾಸವರ್ಯ ಮೋಹನ್ನ ದಾಸಾರ್ಯ
ವಿಜಯದಾಸಾರ್ಯನುಗ್ರಹದಿ ಬಹುಕವನಗಳ
ಭುಜಗ ಭೂಷಣ ಈಡ್ಯನ್ನ ಸ್ತುತಿಸಿ ರಚಿಸಿಹರು ೨೫

ಉತ್ತಮಶ್ಲೋಕ ಸ್ತುತಿಶತ ಸಹಕೀರ್ತನೆಗಳ್
ಭಕ್ತಿಜ್ಞಾನ ವರ್ಧಿಪುದು ಮಹಾನ್ ಮೋಹನ್ನ ರಚಿಸಿದ್ದು
ಗ್ರಂಥಗಳು ಪಂಡಿತ ಪಾಮರರಿಗೂ ಸಹ ಸುಬೋಧಕವು
ಸುಧಾರಸ ಪೋಲು ಹಾಡಿ ರಸಿಕರೇ ಪಠಿಸಿ ೨೬

ನಿರ್ಮತ್ಸರ ಸಾತ್ವಿಕನು ಹರಿಭಕ್ತನು
ವಿಮಲ ಹರಿದಾಸ ಸಾಹಿತ್ಯ ಸೂತ್ರಭಾಷ್ಯ
ಕ್ರಮದಿ ಕಲಿತ ಆನಂದಾಚಾರ್ಯ ಎನ್ನಲಿ ಬಂದು
ಪ್ರೇಮದಿಂ ಪಠಿಸೆ ನಾ ಕೇಳಿ ಸುಖಿಸಿಹೆನು ೨೭

ಪ್ರಸನ್ನರಾಮ ಶ್ರೀನಿವಾಸ ಅಖಿಳ ಸದ್ಗುಣನಿಧಿಯೇ
ದೋಷದೂರನೇ ಗುರಗ ದಯದಿ ಸಲಹೋ ಇವನ್ನ
ದಾಸದೀಕ್ಷೆ ಜ್ಞಾನ ಪ್ರವಚನ ಪಟುತ್ವವೀಯೋ
ಕುಸುಮಭವ ಪಿತ ನಮೋ ಶ್ರೀ ಪ್ರಸನ್ನ ಶ್ರೀನಿವಾಸ ೨೮ ಪ

– ಇತಿ ಪಂಚಮೋದ್ಯಾಯ ಸಮಾಪ್ತ–

ಶ್ರೀ ಗೋಪಾಲದಾಸರು

೧೩೬

ನಿನ್ನ ದಯದಿಂದಲೇ ಎನ್ನ ಜೀವನವು
ಘನ್ನ ಗೋಪಾಲ ವಿಠ್ಠಲ ದಾಸರಾಯ ಪ

ತುಂಗೆ ಕೃಷ್ಣೆ ಮಧ್ಯರಂಗ ಕ್ಷೇತ್ರದಿ ಮುದದಿ
ತುಂಗ ವಿಜಯಾರ‍್ಯರ ಪದಂಗಳಿಗೆ ಎರಗಿ
ಗಂಗೆಪಿತ ಮಾತಂಗ ವರದನಾಮನ ಅಂತ
ರಂಗದಿ ನೋಡಿ ಗುಣಗಳನು ಪಾಡಿದೆಯೊ ೧

ಅನುಜರಿಗು ಅಚಲ ಮಾತೆಗು ಶರಣು ಸುಜನರಿಗು
ಮೌನಿ ಪಂಡಿತರಿಗೂ ಎನ್ನಂಥ ಪಾಮರಗು
ಜ್ಞಾನ ಸುತತ್ವ ಸನ್ಮಾರ್ಗ ಬೋಧಿಸಿ ಜಗ
ನ್ನಾಥನ ಮನಸಿನ ಅನುಭವಕೆ ತಂದೆ ೨

ಬೇಸರದಿ ನಾ ಸೀತಾಪತಿಪಲ್ಲಿಯಲಿ ಮಲಗೆ
ಏಸು ಕರುಣವೊ ದಾಸರಾಜ ನೀ ಬಂದು
ವ್ಯಾಸಮುನಿಮಠ ಗುರುಪೂಜೆಗೆ ಕರೆದೊಯ್ದು
ದಶಪ್ರಮತಿ ಭಾಷ್ಯಪಠನಾರ್ಚನೆಯ ತೋರಿಸಿದೆ ೩

ಗೋ ಎನಲು ಗರುಡವಾಹನ ಪೀಡೆ ಪರಿಹರಿಪ
ಪಾ ಎನಲು ಪರಮಪೂರುಷ ಪಾಲಿಸುವ
ಲ ಎನಲು ಲಕ್ಷ್ಮೀಶ ನಿಖಿಳೇಷ್ಟಗಳನೀವ
ಅನವರತ ಗೋಪಾಲದಾಸರಿಗೆ ಶರಣು ೪

ಆನಂದಮುನಿಹೃಸ್ಥ ವನಜಸಂಭವಪಿತ ಪ್ರ
ಸನ್ನ ಶ್ರೀನಿವಾಸ ಜಗನ್ನಾಥ ನಿನ್ನ
ನಿನ್ನವರ ಪಾದ ಸಂಸ್ಮರಿಸುವ ಸುಜನರನು
ಅನವರತ ಪಾಲಿಸುವ ಸಂದೇಹವಿಲ್ಲ ೫

ಶ್ರೀ ಗೋಪಾಲ ದಾಸಾರ್ಯ ವಿಜಯ

ಶ್ರೀ ಲಕ್ಷ್ಮೀ

೧೩೭

ಭಾಗಣ್ಣ ಗೋಪಾಲ ದಾಸಾರ್ಯರ್ ಪಾದಕ್ಕೆ
ಬಾಗಿ ಶರಣಾದೆನು ಸತತ ನಿಶ್ಚಯದಿ
ಜಗದಾದಿ ಕರ್ತ ಅಜ ಅಘದೂರ ಸುಗುಣಾಬ್ಧಿ
ತುರಗಾಸ್ಯ ವಿಜಯ ಶ್ರೀನಿವಾಸ ಪ್ರಿಯತಮರು ॥ ಭಾಗಣ್ಣ ಪ

ನಾರ ಸುಗುಣಾರ್ಣವನು ಶ್ರೀರಮಾಪತಿ ಹಂಸ
ಸರಿಸಿಜಾಸನ ಸನಕ ದೂರ್ವಾಸ ಇಂಥಾ
ಪರಮೋತ್ಕೃಷ್ಟ ಗುರು ಪರಂಪರೆಗೆ ಶರಣೆಂಬೆ
ಪುರುಷೋತ್ತಮಾಚ್ಯುತ ಪ್ರೇಕ್ಷರಿಗೆ ಶರಣು ೧

ಸದಾಗಮಾಮಾಯಗಳು ಬ್ರಹ್ಮ ಧಾಮವೆಂದು
ಉದ್ಘೋಷಿಸುತಿವೆ ಮುಖ್ಯವಾಯುದೇವ
ಮಾತರಿಶ್ವ ಸೂತ್ರ ಪವಮಾನ ಮುಖ್ಯಪ್ರಾಣ
ಪ್ರತಿರಹಿತ ಬಲಜ್ಞಾನ ರೂಪ ಹನುಮ ಭೀಮ ಮಧ್ವನ್ನ ೨

ಪ್ರೋಚ್ಚಸುರವರ ವಾಯುವಿನ ತೃತೀಯಾವತಾರ ಮಧ್ವ
ಅಚ್ಯುತ ಪ್ರೇಕ್ಷರಲಿ ಸಂನ್ಯಾಸಕೊಂಡು
ಪ್ರಚ್ಛನ್ನ ಬೌದ್ಧಾದಿ ಮತ ಪಂಕದಿ ಬಿದ್ದಿದ್ದ
ಸಜ್ಜನರನ್ನುದ್ಧರಿಸಿ ಸತ್‌ಜ್ಞಾನವಿತ್ತ ೩

ಶ್ರೀ ಮಧ್ವಗುರು ವಂಶಸ್ಥ ಪದ್ಮನಾಭ ನರಹರಿ
ಮಾಧವಾಕ್ಷೋಭ್ಯಜಯ ವಿದ್ಯಾಧಿರಾಜ
ವಿದ್ಯಾಧಿರಾಜರ ಶಿಷ್ಯರು ಈರ್ವರು
ಸಾಧು ಉತ್ಕೃಷ್ಟರೀ ತೀರ್ಥರ್‌ಗಳಿಗೆ ಶರಣು ೪

ಶ್ರೀ ವಿದ್ಯಾಧಿರಾಜರ ಪ್ರಥಮ ಶಿಷ್ಯ ರಾಜೇಂದ್ರ
ಹಸ್ತ ಪದ್ಮ ಜಾತರು ಜಯಧ್ವಜಾರ್ಯ
ಮಾಧವನ ಏಕಾಂತ ಭಕ್ತ ಪುರುಷೋತ್ತಮರು
ತತ್ಸುತ ಬ್ರಹ್ಮಣ್ಯರೀ ಸರ್ವರಿಗೂ ಶರಣು ೫

ಪದ್ಮನಾಭ ತೀರ್ಥಜ ಲಕ್ಷ್ಮೀಧರರ ವಂಶ
ಜಾತ ಸುವರ್ಣವರ್ಣ ತೀರ್ಥಾಭಿದರ
ಸುತಲಕ್ಷ್ಮೀ ನಾರಾಯಣ ಯತಿವರ್ಯ ಶ್ರೀ
ಪಾದರಾಜರು ಈ ಸರ್ವರಿಗೂ ಶರಣು ೬

ಶಿಂಶುಮಾರ ಪುಚ್ಛಶ್ರಿತರ ಅವತಾರರೇ
ವಸುಮತೀಖ್ಯಾತ ಶ್ರೀಪಾದರಾಜರಲಿ
ಭಾಷ್ಯಾಧಿಗಳ ಕಲಿಯೇ ಬ್ರಹ್ಮಣ್ಯ ತೀರ್ಥರ
ಶಿಷ್ಯವರ್ಯ ವ್ಯಾಸರಾಜರು ಸೇರಿದರು ೭

ವಾದಿಗಜ ಕೇಸರಿ ಮಧ್ವಮತೋದ್ಧಾರರು
ಮೇದಿನೀ ಪ್ರಖ್ಯಾತ ಮಹಾಭಾಗವತರು
ಸಾಧುಜನ ಆಹ್ಲಾದ ಶ್ರೀ ವ್ಯಾಸರಾಜರಲಿ
ಸದಾ ಶರಣು ಪಾಲಿಪರು ಪ್ರತಿ ಕ್ಷಣ ದಯದಿ ೮

ಆನಂದ ಮುನಿಕರ ಅರವಿಂದ ಸಂಜಾತ
ವಿಷ್ಣುತೀರ್ಥ ವಂಶಜ ವಾಗೀಶರ ಹಸ್ತ
ವನರುಹೋತ್ಪನ್ನರು ಸುಮಹಾಮಹಿಮರು
ಘನ ದಯಾನಿಧಿ ವಾದಿರಾಜ ಸ್ವಾಮಿಗಳು ೯

ಯುಕ್ತಿಮಲ್ಲಿಕಾ ಮೊದಲಾದ ತತ್ವಬೋಧಕವಾದ
ಗ್ರಂಥ ಪದ್ಯ ಕೀರ್ತನೆಗಳ್ ಸಜ್ಜನರಿಗಿತ್ತು
ಸೋದೆಯಲ್ಲಿ ತ್ರಿವಿಕ್ರಮಮೂರ್ತಿ ನಿಲ್ಲಿಸಿಹರು
ಭೂಧಗ ಹಯಾಸ್ಯ ಪ್ರಿಯತಮ ಶ್ರೀ ವಾದಿರಾಜಾರ್ಯ ೧೦

ತೀರ್ಥಪಾದ ಶ್ರೀಪತಿಯು ಬ್ರಹ್ಮ ಶಿವಾದ್ಯಮರ ಸಹ
ಸದಾ ಸನ್ನಿಹಿತವಾಗಿರುವ ಮತ್ತು
ತೀರ್ಥವನ ಕ್ಷೇತ್ರಗಳೊಳುತ್ತಮ ವೃಂದಾವನದಿ
ಅತ್ಯಕ್ತ ದೇಹದಿ ಕುಳಿತಿಹರು ಗುರುರಾಟ್ ೧೧

ಬುಧರು ತಿಳಿದಂತೆಯೇ ಬ್ರಹ್ಮಾಂಡ ಪುರಾಣದಲ್ಲಿ
ವಾದಿರಾಜರು ಭಾವೀಕಲ್ಪ ಮುಖ್ಯವಾಯು
ಎಂದು ಪ್ರಸಿದ್ಧರೀ ಸುದುಪಾಸ್ಯ ಮದ್ಗುರುವರ್ಯರಲ್ಲಿ ಶರಣಾದೆ
ಸದಾನಮೋ ಲಾತವ್ಯಾಚಾರ್ಯ ಕರುಣಾಬ್ಧೆ ೧೨

ವಿದ್ಯಾಧಿರಾಜರ ಎರಡನೇ ಶಿಷ್ಯರು
ಕವೀಂದ್ರ ಪೀಳಿಗೆಯ ಶ್ರೀರಾಮಚಂದ್ರ
ದ್ವಿತೀಯ ಶಿಷ್ಯ ವಿದ್ಯಾನಿಧಿ ವಂಶಜಾತರು
ಆದ್ಭುತಮಹಿಮರು ಕರುಣಿ ರಘೋತ್ತಮರು ೧೩

ಕಾಮಿತಪ್ರದ ಟೀಕಾಭಾವ ಬೋಧಾರ್ಯರು
ಎಮ್ಮಪಾಲಿಪ ರಘೋತ್ತಮರಿಗೆ ಶರಣು
ರಾಮಚಂದ್ರರ ಮೊದಲನೆ ಶಿಷ್ಯ ವಿಬುಧೇಂದ್ರ
ಈ ಮಹಾತ್ಮರ ವಂಶಜರು ಸರ್ವರಿಗೂ ನಮಿಪೆ ೧೪

ದುರ್ಜನರ ಕುಮತಗಿರಿವಜ್ರ ವಿಜಯೀಂದ್ರರು
ಸಜ್ಜನರುದ್ಧಾಕರು ಸುಧೀಂದ್ರಸೂರಿ

ನಿಜವಿರಾಗಿ ಯಾದವೇಂದ್ರ ವಿಜ್ಞಾನಿಯು
ಭಜಕಜನ ಸುರಧೇನು ರಾಘವೇಂದ್ರಾರ್ಯ ೧೫

ಯಾರುಹಿಂದೆ ಏಡಮೂಕ ಬ್ರಾಹ್ಮಣನಾಗಿದ್ದಾಗ
ಯಾರದ್ವಾರಾ ಶ್ರೀ ವಾದಿರಾಜರು ಸ್ವಪ್ನದಲ್ಲಿ
ಉತ್ಕೃಷ್ಟ ಶುಭತಮ ವೃಂದಾವನಾಖ್ಯಾನ ತಾವೇ ಹೇಳಿದರು
ಆಸೂರಿ ವಿಶ್ವಪ್ರಿಯಾರ್ಯರಿಗೆ ಶರಣು ೧೬

ಸೂರಿಕುಲತಿಲಕರು ವಾದಿಕರಿಹರಿ ಖ್ಯಾತ
ಸಿರಿವ್ಯಾಸರಾಯರಲಿ ಮುದ್ರಿಕೆಯ ಕೊಂಡ
ನಾರದರ ಅವತಾರರೆಂದು ಪ್ರಸಿದ್ಧರು
ಪುರಂದರ ದಾಸಾರ್ಯ ಕರುಣಾಂಬುಧಿಗೆ ಆನಮಿಪೆ ೧೭

ನಿರ್ಝರ ವೃಂದ ಋಷಿ ಭೃಗುಮುನಿಯೇ ಧರೆಯಲ್ಲಿ
ವಿಜಯದಾಸಾರ್ಯರಾಗಿ ಮೆರೆದವರ್ಗೆ ಶರಣು
ವಿಜಯವಿಟ್ಠಲನೊಲಿಯೆ ಜ್ಞಾನ ಭಕ್ತಿಸತ್ತತ್ವ
ಸಜ್ಜನರಿಗೆ ಬೋಧಿಸಿದ ನಿರ್ವ್ಯಾಜ ಕರುಣಿ ೧೮

ಆಲಸ್ಯದಿನಾ ಮೈಥಿಲೀಪತಿ ಪಲ್ಲಿಯಲ್ಲಿ
ಮಲಗಿರಲು ಶ್ರೀ ಗೋಪಾಲದಾಸಾರ್ಯರು
ಬಲುಕರುಣದಲ್ಲಿ ಮುಂದೆ ನಿಂತು ಯತಿಕೃತ
ಮಾಲೋಲ ಪೂಜೆನೋಡಿ ಒದಗಿದ ಗುರುವರ್ಯ ೧೯

ಉಮಾಸೂನು ವಿಘ್ನಹರ ಕ್ಷಿಪ್ರಪ್ರಸಾದನು
ಈ ಮಹೀಯಲ್ಲಿ ಗೋಪಾಲದಾಸರಾಗಿ
ರಮಾಪತಿಯ ಸೇವಿಸಿ ಸಜ್ಜರನ್ನುದ್ಧರಿಸಿಹರು
ನಮಿಸಿ ಶರಣಾದೆ ಈ ಉದಾರ ಕರುಣಿಗೆ ೨೦

ಸುಪವಿತ್ರ ಸೌಭಾಗ್ಯಪ್ರದ ಮಂತ್ರಗಳನೆಗೆ
ಉಪದೇಶಮಾಡಿದ ಕಪಿಗೋತ್ರದವರು
ಸುಪುಣ್ಯ ಶೇಶ್ಲೀಕರು ಉದಾರ ಸಾತ್ವಿಕರು
ಶ್ರೀಪತಿ ಕೃಷ್ಣಪ್ರಿಯ ಶ್ರೀರಾಮಾಚಾರ್ಯರಿಗೆ ಶರಣು ೨೧

ತರುಣತನಾರಭ್ಯ ಹರಿದಾಸತ್ವ ಒದಗಿಸಿ
ಪರಿಪರಿ ವಿಧದಲ್ಲಿ ಔದಾರ್ಯದಿಂದ
ಕಾರುಣ್ಯಬೀರಿ ಕಾಪಾಡುತಿರುವಂಥಾ ಈ
ಹರಿಪ್ರತಿಮಾರೂಪ ಗುರುಸರ್ವರಿಗೂ
ತಂದೆ ತಾಯಿಗೂ ಶರಣು ೨೨

ದಧಿಶಿಲಾ ಎಂಬುವರು ಆಡಂಬರ ಪ್ರಿಯರು
ಮಂದಿಗಳು ಮೊಸರು ಕಲ್ಲೆಂದು ಕರೆಯುವರು
ಸಾಧು ವೈಷ್ಣವ ವಿಪ್ರ ಮುರಾರಿರಾಯರು
ಸಾಧ್ವಿ ವೆಂಕಮ್ಮ ದಂಪತಿ ಇದ್ದ ಕ್ಷೇತ್ರ ೨೩

ಪುತ್ರ ರತ್ನಗಳು ನಾಲ್ಕು ಈ ದಂಪತಿಗೆ
ಅಗ್ರಜ ಭಾಗಣ್ಣ, ಸೀನಪ್ಪ, ದಾಸಪ್ಪ
ತರುವಾಯ ರಂಗಪ್ಪ ನಾಲ್ಕನೆಯವನಾಗಿ
ಗೌರವದಿ ಚರಿಸಿತು ಮುರಾರಿರಾಯರ ಕುಟುಂಬ ೨೪

ಸಂಸಾರಾವಸ್ಥೆಯಲ್ಲಿ ನಶ್ವರ ಸುಖ ದುಃಖ
ಮಿಶ್ರವಾಗಿಯೆ ಉಂಟು ಆ ನಿಯತಿಯಲ್ಲಿ
ಭೂಸುರವರ್ಯರು ಮುರಾರಿರಾಯರು ಸ್ವರ್ಗ
ತಾ ಸೇರಿದರು ಸತಿ ಸುತರನ್ನು ಬಿಟ್ಟು ೨೫

ಬಾಲಕರನ್ನು ಪ್ರಿತ್ರವ್ಯರು ಲೆಕ್ಕಿಸದಿರಲು
ಮಾಲೋಲ ಪಾಲಿಸುವ ಕರ್ತನ್ನೇ ನಂಬಿ
ಶೀಲೆ ವೆಂಕಮ್ಮ ಮಕ್ಕಳನ್ನ ಕರಕೊಂಡು
ಒಳ್ಳೆಯ ಜನಪದ ಶಂಖಪುರವೈದಿದಳು ೨೬

ಶಂಖಪುರ ಹತ್ತಿರವೇ ಹನೂಮಂತನ ಗುಡಿ
ಮಕ್ಕಳ ಸಹ ಅಲ್ಲಿ ವಾಸಮಾಡಿ
ಮುಖ್ಯ ಪ್ರಾಣದೇವರ ಸೇವಿಸಿದ ಫಲವಾಗಿ
ಚಿಕ್ಕ ಜಮೀನು ಕೊಂಡಳು ದಾನವಾಗಿ ೨೭

ದಾನ ಕೊಟ್ಟವನಿಗೆ ಬಲು ಪುಣ್ಯ ದೊರೆಯಿತು
ದಾನಿಗಳು ಭಾಗವತ ಶ್ರೇಷ್ಠರಾದ್ದರಿಂದ
ಹನುಮ ಗೋಪಾಲಾನುಗ್ರಹದಿಂದ ಐವರೂ
ಧಾನ್ಯಸಮೃದ್ಧಿ ತೊರೆದರು ಆತಂಕ ೨೮

ಕುಲ್ಕರ್ಣಿ ಎಂಬಂಥ ಸರ್ಕಾರ ಅಧಿಕಾರಿ
ವೆಂಕಮ್ಮನಲ್ಲಿ ಮಾತ್ಸರ್ಯ ದ್ವೇಷ ಬೆಳೆಸಿ
ಸರ್ಕಾರ ಕೆರೆ ನೀರು ಕದ್ದು ಹೊಯಿಸಿದಳೆಂದು ಆ
ಚಿಕ್ಕ ಜಮೀನ ಒಡಮೆ ಕಿತ್ತಿಕೊಂಡ ೨೯

ಸಾಧ್ವೀ ವೆಂಕಮ್ಮನಿಗೂ ಮಹಾತ್ಮ ತತ್ಪುತ್ರರಿಗೂ
ಅಧಮ ಅಧಿಕಾರಿ ಮಾಡಿದ ದ್ರೋಹದಿಂದ
ಪುತ್ರ ಸಂತಾನ ವಂಶಕ್ಷೀಣವಾಯಿತು ಅವಗೆ
ಅಂದಿನಿಂದ ಕೆರೆ ಅದ್ಯಾಪಿ ನೀರಿಲ್ಲ ಆ ಕೆರೆಯಲ್ಲಿ ೩೦

ದೀನರಿಗೂ ಸಾಧು ಮಹಾತ್ಮರಿಗೂ ಮಾಳ್ಪ
ಸಣ್ಣದೋ ದೊಡ್ಡದೋ ದ್ರೋಹಕ್ಕೆ ದಂಡನಾ
ಅನುಭವ ಕ್ಷಿಪ್ರದಲ್ಲೋ ಮೆಲ್ಲಗೋ ಅಪರಾಧಿ ಮೂರ್ಖಗೆ
ದೀನ ರಕ್ಷಕ ಸತ್ಪತಿ ಶ್ರೀ ಹರಿ ಈವ ೩೧

ಭಾಗಣ್ಣ ಸೀನಪ್ಪ ದಾಸಪ್ಪ ರಂಗಪ್ಪ
ಲೌಕಿಕ ವಿದ್ಯಾ ಕಲಿತು ಉಪಾಧ್ಯಾಯರಲ್ಲಿ
ಭಾಗಣ್ಣನಿಗೆ ಶಾನುಭೋಗ ಮುಂಜಿಮಾಡಿ
ಭಗವದ್ವಿಷಯ ಕಲಿತರೂ ಭಾಗಣ್ಣ ೩೨

ತತ್ಕಾಲ ಲೌಕಿಕ ಶ್ರೀತನ ಕೊರತೆ ನೋಡಿ
ಬಂಧುಗಳಿವರನ್ನುದಾಸೀನಮಾಡಿದರು
ಇಂದಿರಾ ಪತಿ ವೆಂಕಟಕೃಷ್ಣಗೋಪಾಲ
ಬಂದು ಶ್ರೀ ಒದಗಿಸಿದ ಕ್ಷಿಪ್ರದಲೆ ಇವರ್ಗೆ ೩೩

ಬ್ರಹ್ಮಚಾರಿ ಭಾಗಣ್ಣ ಗಾಯತ್ರೀ ಮಂತ್ರವ
ಅಹರಹ ಸೂಕ್ಷ್ಮಾರ್ಥ ಅನುಸಂಧಾನ

ವಿಹಿತ ಶ್ರದ್ಧಾ ಉದ್ಭಕ್ತಿಪೂರ್ವಕ ಜಪಿಸೆ
ಶ್ರೀ ಹಯಾಸ್ಯ ನಾರಾಯಣನು ಒಲಿದ ಕ್ಷಿಪ್ರದಲೆ ೩೪

ವೇದೋಚ್ಚಾರಣವೇ ಗಾನವು ಜಗದ್ರಕ್ಷಣೆಯೇ ತ್ರಾಣವು
ಮಾಧವನೇ ಗಾಯತ್ರಿನಾಮ ಹಯಗ್ರೀವ
ಭೂತಪೂರ್ಣವಾಗ್ವಶ್ರೀ ಪೃಥ್ವೀ ಆಶ್ರಯ ಶರೀರವ್ಯಾಪ್ತನು
ಹೃದಯ ಪ್ರಾಣಾಧಾರದಿವ ಪರಸ್ವರೂಪ
ಪಾದತ್ರಯವು ಜಗತ್ ಪಾದ ಸದೃಶ ೩೫

ಜ್ಞಾನಸುಖ ಬಲಪೂರ್ಣ ಸರ್ವ ಜಗದಾದಿಕರ್ತ
ದಿನಪತೇಜ ಸ್ಫೂರ್ತಿದ ಚೇಷ್ಟಕಾಧಾರ
ಶ್ರೀ ನಾರಾಯಣದೇವ ನಿನ್ನ ಚಿಂತಿಪೆ ಭಜಿಪೆ
ಅನುಪಮ ಸರ್ವೋತ್ತಮ ನಮೋ ಕೇಶವಾದಿ ನಾಮ ೩೬

ಲೌಕಿಕ ವಿಷಯಗಳೊಳ್ ಮನವಾಕ್ಕು ಚಲಿಸದೆ
ಏಕಚಿತ್ತದಿ ಗಾಯತ್ರೀ ಪ್ರತಿಪಾದ್ಯ
ಶ್ರೀ ಗಾಯತ್ರೀನಾಮ ನಾರಾಯಣನನ್ನ
ಭಾಗಣ್ಣ ಜಪಿಸಿದರು ಕಂಡರು ಶ್ರೀಕರನ್ನ ೩೭

ಏಕಾಂತದಲ್ಲಿ ವೃಕ್ಷಮೂಲದಲ್ಲಿ ಕುಳಿತಿದ್ದ
ಭಾಗಣ್ಣನ ಜಪಕೆಡಿಸಿ ಓರ್ವ ದುಷ್ಟ
ಹಾಕಿದನು ಕುದಿನೀರು ಬೊಬ್ಬೆಗಳ್ ಅವನ ಮೇಲೆದ್ದವು
ಚಕಿತರಾಗಿ ಜನರು ಹೊಗಳಿದರು ಭಾಗಣ್ಣನ ೩೮

ಮತ್ತೊಂದುದಿನ ಇದಕೆ ಮುಂದೆಯೋ ಹಿಂದೆಯೋ
ಸುತ್ತಿ ಭಾಗಣ್ಣ ವೃಕ್ಷಮೂಲದಲಿ ಸರ್ಪ
ಹಿತದಿ ಆಶೀರ್ವದಿಸಿ ಪೋದಂತೆ ಪೋಯಿತು
ಇದು ನೋಡಿ ಜನರು ಕೊಂಡರು ಭೀತಿ, ಆಶ್ಚರ್ಯ ಮರ್ಯಾದೆ ೩೯

ಅಂದು ಮೃತಸರ್ಪ ಅರಿಯರಿಯರು ಶಮೀಕರು ಸಮಾಧಿಯಲಿ
ಇಂದು ತನ್ನ ಸರ್ಪ ಸುತ್ತಿರುವುದು ಭಾಗಣ್ಣ ಅರಿಯರು

ಇಂದಿರೇಶ ಒಲಿದವನಿವನೆಂದು ಶೇಷನೇ ಆಲಿಂಗಿಸಿದನೋ
ಸ್ಕಂಧ ತನ್ನಯ ಸಹೋದರನೆಂದಪ್ಪಿ ಕೋಂಡನೋ ೪೦

ತತ್ವಮಾತೃಕಾನ್ಯಾಸಗಳ ಚರಿಸಿ
ಮಂತ್ರ ಮೂಲ ಪ್ರಣವ ಅಷ್ಟಾಕ್ಷರೀ ಗಾಯತ್ರೀ
ಭಕ್ತಿ ಪೂರ್ವಕ ಜಪಿಸಿ ಹೊರ ಒಳಗೆ ಶ್ರೀಹರಿಯ
ವ್ಯಾಪ್ತಿ ವಿಜ್ಞಾನ ಪುಟ್ಟಿತು ಈ ಚೌತಾಪರೋಕ್ಷಿಗೆ ೪೧

ವ್ಯಾಪ್ತಿ ದರ್ಶಿಯು ಇವರು ಶ್ರೀ ವಿಷ್ಣು ಅನುಗ್ರಹದಿ
ಇಂದಿನ ಹಿಂದಿನ ಮುಂದಿನ ವಿಷಯ ಜ್ಞಾನ
ವೇದ್ಯವಾಯಿತು ಹರಿಸ್ಮರಣಾ ಪೂರ್ವ ಆಲೋಚನದಿ
ಬಂದು ಕೇಳುವವರಿಗೆ ಯೋಗ ಪೇಳಿದರು ೪೨

ಯೋಗಕ್ಷೇಮ ಸರ್ವಕೂ ನಿಯಾಮಕನು ಹರಿಯೇವೆ
ಭಾಗಣ್ಣ ಈತತ್ವಜ್ಞಾನ ಪೂರ್ವಕದಿ
ಲೌಕಿಕ ಧನ ಅಪೇಕ್ಷಿಸದಿದ್ದರೂ ಜನರು
ಬಾಗಿ ದ್ರವ್ಯಗಳಿತ್ತು ಬೇಡಿದರು ಸ್ವೀಕರಿಸೆ ೪೩

ಭವಿಷ್ಯ ಪೇಳುವುದರಲ್ಲಿ ಖ್ಯಾತಿ ಹರಡಿದ್ದಲ್ಲದೆ
ಸರ್ವೇಶನ ಸ್ತೋತ್ರಕವನ ಪಟು ಎಂದು
ಸರ್ವರೂ ಕೊಂಡಾಡಿ ಆ ಊರಿಗೆ ಬಂದ ಪ್ರಖ್ಯಾತ
ಕವಿಯನ್ನ ನಿಗ್ರಹಸಿ ಓಡಿಸಿದರು ಧೀರ ೪೪

ದಿಗ್ವಜಯ ಜಯಶೀಲನೆಂದು ಖ್ಯಾತ ಆ ಕವಿ
ಭಾಗಣ್ಣ ಸೋಲಿಸಿ ಓಡಿಸಿದ್ದು
ಭಾಗಣ್ಣನ ಪ್ರಭಾವವ ಹರಡಿಸಿತು ನಾಡಲ್ಲಿ
ಭಾಗಣ್ಣಗೆ ಸನ್ಮಾನ ಮಾಡಿದರು ೪೫

ಗದ್ವಾಲರಾಜನು ಇನ್ನೂ ಬಹು ಪ್ರಮುಖರು
ಬಂದು ನೇರವಾಗಿ ಭಾಗಣ್ಣನಲ್ಲಿ
ವಂದಿಸಿ ಸನ್ಮಾನ ಪ್ರಶಸ್ತಿಗಳ ಅರ್ಪಿಸಿ
ಪೋದರು ಶ್ಲಾಘಿಸುತ ತಮ್ಮ ತಮ್ಮ ಸ್ಥಳಕೆ ೪೬

ಹಿಂದೆ ದ್ರವ್ಯ ಹೀನನಾಗಿದ್ದ ಭಾಗಣ್ಣನಿಗೆ
ಇಂದು ಶ್ರೀಕೃಷ್ಣನ ಒಲುಮೆಯಿಂದ
ಬಂದು ಸೌಭಾಗ್ಯ ಶ್ರೀ ದ್ರವ್ಯಗಳು
ಔದಾರ್ಯದಿ ದಾನಾದಿಗಳ್ ಮಾಡಿದರು ೪೭

ಇಷ್ಟರಲ್ಲೇ ಸೀನಪ್ಪ ದಾಸಪ್ಪ ರಂಗಪ್ಪ
ಪ್ರೌಢವಯಸ್ಐದಿ ಗದ್ವಾಲು ಹೋಗೆ ಅಲ್ಲಿ
ಮೌಢ್ಯ ಮಾತ್ಸರ್ಯದಿ ರಾಜ್ಯಾಧಿಕಾರಿಗಳು
ಕಡು ನಿರೋಧ ಮಾಡಿದರು ಮೂವರನ್ನು ೪೮

ವೆಂಕಟೇಶನ ಇಚ್ಛಾ ಈಮೂವರು ಅಣ್ಣ
ಭಾಗಣ್ಣ ನಾಶ್ರಯದಲ್ಲೇವೆ ಇದ್ದು
ಅಗಲದೆ ಶ್ರೀಹರಿಗುಣಾನುವರ್ಣನಾಗಳ
ಸುಗಾನ ಮಾಡುತ್ತಾ ಇರಬೇಕು ಎಂದು ೪೯

ಭಾಗಣ್ಣ ಅರ್ಯರು ಗದ್ವಾಲಿಗೆ ಪೋಗಿ
ಸುಗುಣವಂತ ತಮ್ಮಂದಿರನ್ನ ಕರೆತಂದು
ಅಗಣಿತ ಗುಣಾರ್ಣವ ಶ್ರೀಯಃ ಪತಿಯ ಸೇವೆಗೆ
ಯೋಗ್ಯೋಪದೇಶ ಪೂರ್ವಕ ತಯಾರು ಮಾಡಿದರು ೫೦

ದಾಸಪ್ಪ ಸೀನಪ್ಪ ರಂಗಪ್ಪ ತಮ್ಮ ಜ್ಞಾನಭಕ್ತಿ
ಕಾಶಿಸಿ ವರ್ಧಿಪುದು ದಿನೇ ದಿನೇ ಹೆಚ್ಚಿ
ಶ್ರೀ ಶ್ರೀನಿವಾಸನ ಪ್ರೀತಿಗೆ ಭಾಗಣ್ಣ
ಚರಿಸುವ ಅನ್ನದಾನಾದಿಗಳಲ್ಲಿ ಸೇವಿಸಿದರು ೫೧

ದ್ರವ್ಯ ಧಾನ್ಯರಾಶಿಗಳು ತುಂಬಿದ್ದು ಕಂಡು
ದೇವ ಬ್ರಾಹ್ಮಣ ಸೇವೆಗೆ ಅಕ್ಕಿ ಹೆಚ್ಚು ಬೇಡೆಂದು
ಯಾವರೂ ಕಾಣದೆ ವೆಂಕಮ್ಮ ಮುಚ್ಚಿಡಲು
ಯಾವತ್ತೂ ಅಕ್ಕಿಯು ಹುಳುವಾಯ್ತು ಮರುದಿನ ೫೨

ಹರಿಬಲುಮೆಯಿಂದ ಭಾಗಣ್ಣ ಈ ರೀತಿ ತೋರಿಸಲು
ಹರಿಭಕ್ತಿ ವೈರಾಗ್ಯ ಹೆಚ್ಚಿತು ಮಾತೆಗೆ

ಭಾರಿತರ ಕೀರ್ತನಾ ಸೇವೆ ಅತಿಶಯ ಚರ್ಯ
ಅರಿತು ನಾಡೆಲ್ಲವೂ ಕೊಂಡಾಡಿತು ಭಾಗಣ್ಣನ ೫೩

ಉತ್ತನೂರು ಸಮೀಪವು ಐಜೀ ಎಂಬುವ ಗ್ರಾಮ
ಉತ್ತಮ ಬ್ರಾಹ್ಮಣ ವೇಂಕಟನರಸಿಂಹಾಚಾರ್ಯ
ದಂಪತಿಗೆ ಪುತ್ರರತ್ನ ವೇಂಕಟರಾಮಾಚಾರ್ಯ
ಮಂದತನ ತೋರಿಸಿದ ಪುಸ್ತಕ ವಿದ್ಯೆಯಲ್ಲಿ ೫೪

ಭಾಗಣ್ಣ ಆರ್ಯರ ಪ್ರಭಾವದಲಿ ಆದರ
ವೇಂಕಟನೃಸಿಂಹಾರ್ಯರ ಭಾರ್ಯೆಗೆ ಉಂಟು
ಭಾಗಣ್ಣನಲಿ ಪೋಗಿ ಮಗನ ತಿದ್ದುವ ಬಗೆ
ಹೇಗೆಂದು ಅರಿಯಿರಿ ಎಂದಳು ಸಾಧ್ವೀ ೫೫

ಸಾಧ್ವೀ ಆಸ್ತ್ರೀರತ್ನಳಿಗೆ ಭಾಗಣ್ಣನು
ಔದಾರ್ಯದಿ ಒದಗುವ ಜ್ಞಾನಿವರ್ಯನೆಂದು
ಸುದೃಢದಿ ನಂಬಿದರೂ ಆಚಾರ್ಯ ಅರ್ಧಮನಸಿಂ
ಪೋದರು ಕಂಡರು ಭಾಗಣ್ಣನ ಗುಡಿಯಲ್ಲಿ ೫೬

ವೇಂಕಟನೃಸಿಂಹಾರ್ಯ ತನ್ನ ಪಾಂಡಿತ್ಯ ಗುರುತನ ನೆನದು
ಆಕಸ್ಮಿಕ ಬೇಟಿಯಂತೆ ತೋರ್ಪಡಿಸಿ
ವೇಂಕಟೇಶ ತುಳಸೀ ಸನ್ನಿಧಾನದಿ ಸಂಭಾಷಿಸಲು
ಶೀಘ್ರ ಕಂಡರು ಭಾಗಣ್ಣನ ಜ್ಞಾನಪ್ರಭಾವ ೫೭

ಭಾಗಣ್ಣ ಅಭಯವನಿತ್ತು ಆಚಾರ್ಯರನ್ನ
ಹೋಗಿ ಬನ್ನಿ ಆತಂಕಬೇಡ ಮಹಾತ್ಮ
ಮಗ ಸೂರಿಕುಲ ರತ್ನನು ವೇಂಕಟರಾಮ
ಪ್ರಕಾಶಿಪುದು ಆತನ ಜ್ಞಾನಕ್ಷಿಪ್ರದಲೇ ಎಂದರು ೫೮

ಭಾಗಣ್ಣ ಆರ್ಯರು ಹೇಳಿದ ರೀತಿಯಲ್ಲೇ
ವೇಂಕಟರಾಮಾರ್ಯ ಏಕವಾರ ಶ್ರವಣದಲ್ಲೇ
ವೇಂಕಟನರಸಿಂಹಾಚಾರ್ಯ ಚಕಿತರಾಗುವಂತೆ
ಅಕಳಂಕ ಪಾಂಡಿತ್ಯಪ್ರೌಢಿಮೆ ತೋರಿಸಿದ ೫೯

ಪ್ರತಿದಿನ ಐಜಿಯವರು ಭಾಗಣ್ಣ ದಾಸರೂ ಈರ್ವರು
ತತ್ವ ವಿಚಾರ ಹರಿಭಜನೆ ಮಾಡಿ
ಒಂದು ದಿನ ಬ್ರಹ್ಮ ಜಿಜ್ಞಾಸ ಸ್ವಾರಸ್ಯದಲಿ ಸಾಯಂ
ಸುಧ್ಯಾಕಾಲ ಅತಿಕ್ರಮವು ಆಯಿತು ೬೦

ಸೂರ್ಯಾಸ್ತ ಮನಃಪೂರ್ವಕರ್ತವ್ಯ ಕರ್ಮ ಬಿಟ್ಟದೋಷ
ಪ್ರಾಯಶ್ಚಿತ್ತಾರ್ಘ್ಯ ಕೊಡಲಿಕ್ಕೆ ಇರಲು
ಭಯಬೇಡ ದೋಷವಿಲ್ಲ ಎಂದು ಭಾಗಣ್ಣಾರ್ಯ
ಸೂರ್ಯನ್ನ ತಾನು ನೋಡಿ ತೋರಿಸಿದರು ಐಜೀಗೆ ೬೧

ಇಂದ್ರಜಾಲವಲ್ಲವು ಕ್ಷುದ್ರೋಪಾಸನಾದಿಗಳಿಂದಲ್ಲ
ಅರ್ಧರಾತ್ರಿಯಲಿ ಸೂರ್ಯನ್ನ ನೋಡಿ ನೋಡಿಸಿದ್ದು
ಮಾಧವ ಶ್ರೀ ಮುಖ್ಯ ವಾಯುದೇವರು ರುದ್ರ
ಸದಾ ಒಲಿದಿರುವ ಭಾಗಣ್ಣಗೆ ಇದು ಆಶ್ಚರ್ಯವಲ್ಲ ೬೨

ತೇಜೋಜಲ ಪೃಥ್ವೀಮುನಿಗಳು ಶ್ರೀ ಪ್ರಾಣರುದ್ರರು
ವಜ್ರ, ಅಗ್ನಿ, ವರುಣ ಪೃಥಿವ್ಯಾದಿ ಸರ್ವರೊಳಗೊ
ರಾಜನೆ ನಿಯಮಿಸುವ ಅನಿರುದ್ಧ ಜಗದೀಶ
ಜಗಜ್ಜನ್ಮಾದಿಕರ್ತ ಗಾಯತ್ರೀ ಭರ್ಗಸರ್ವಗನು ೬೩

ತೀರ್ಥಯಾತ್ರೆಯ ತೀರ್ಥರೂಪ ಭಾಗಣ್ಣ ತನ್ನ
ಭ್ರಾತರೊಡಗೂಡಿ ಹೊರಟಿಹರು
ಮಂತ್ರಾಲಯ ವೇಂಕಟಗಿರಿ ಘಟಿಕಾದ್ರಿ
ಹಸ್ತಿವರದ ಕಂಚಿ ಮೊದಲಾದ ಕ್ಷೇತ್ರ ೬೪

ವೇಂಕಟ ಕೃಷ್ಣನ ಮುದ್ರೆಯಿಂ ಕವನಗಳ
ಉತ್ಕೃಷ್ಟ ರೀತಿಯಲ್ಲಿ ರಚಿಸಿ ಭಜಿಸುತ್ತಾ
ಭಾಗಣ್ಣ ಆದವಾನೀಯಲ್ಲಿ ತಿಮ್ಮಣ್ಣಾರ್ಯರಲ್ಲಿ
ಮುಕ್ಕಾಮು ಹಾಕಿದರು ಸ್ವಲ್ಪಕಾಲ ೬೫

ದಿವಾನು ತಿಮ್ಮಣ್ಣ ರಾಯರ ಉಪಚಾರ
ಸರ್ವ ಅನುಕೂಲ ಆತಿಥ್ಯಕೊಳ್ಳುತ್ತಾ

ದಿವ್ಯಮಾರುತೀ ಗುಡಿಗೆ ಪ್ರತಿದಿನ ಪೋಗಿ
ಸೇವೆಸಲ್ಲಿಸಿದರು ಭಾಗಣ್ಣ ಶ್ರೀಹನುಮನಿಗೆ ೬೬

ಶ್ರೀ ವಿಜಯದಾಸಾರ್ಯರು ಶ್ರೀ ವ್ಯಾಸದೇವರ ಕಂಡು
ಶ್ರೀವರ ಒಲಿದು ಪುರಂದರಾರ್ಯರ ಕೈಯಿಂದ
ದಿವ್ಯನಾಮಾಂಕಿತ ಬೀಜಾಕ್ಷರಗಳ ಹೊಂದಿ
ಭುವಿಯಲಿ ಪ್ರಖ್ಯಾತರಾಗಿ ಬಂದಿದ್ದರಾಗ ೬೭

ವಿಜಯ ವಿಟ್ಠಲದಾಸರಾಯರು ತಮ್ಮ
ನಿಜ ಶಿಷ್ಯವೃಂದದಲಿ ವ್ಯಾಸ
ವಿಜಯ ಸಾರಥಿ ಗೋಪಾಲಹಯವದನ
ಭಜನೀಯ ಈ ಮೂರು ಅಂಕಿತಕೊಡಬೇಕಾಗಿತ್ತು ೬೮

ಗೋಪಾಲವಿಠ್ಠಲ ಸುನಾಮ ಭಾಗಣ್ಣಗೆ
ಸುಪ್ರಿಯ ಮನದಿಂದ ಇತ್ತು ಹಯವದನ
ಸುಪವಿತ್ರ ಅಂಕಿತ ಚೀಕಲಪರವಿ ಆನಂದನಿಗೆ
ಕೃಪಾಂಬುಧಿ ವಿಜಯದಾಸಾರ್ಯ ಇತ್ತರು ೬೯

ಶ್ರೀಪುರಂದರದಾಸಾರ್ಯರನುಗ್ರಹದಲಿ
ಸುಪುಣ್ಯವಂತನು ಸಹನ ಶಾಲಿಯಾದ
ಶ್ರೀಪಪ್ರಿಯ ತಿಮ್ಮಣ್ಣ ವೇಣುಗೋಪಾಲನಾಮ
ತಾಪೊಂದಿದ ವಿಜಯದಾಸರು ಕೃಪದಿ ಕೊಡಲು ೭೦

ಶೋಭನ ಜ್ಞಾನಪ್ರದ ವ್ಯಾಸ ನಾಮಾಂಕಿತವ
ಸುಬ್ಬಣ್ಣ ಕಲ್ಲೂರು ಪಂಡಿತೋತ್ತಮಗೆ
ಲಭಿಸುವಂತೆ ವಿಜಯದಾಸ ಮಹಂತರು
ಕೃಪೆಯಿಂದ ಒದಗಿಸಿದರು ಔದಾರ್ಯನಿಧಿಯು ೭೧

ಗೋಪಾಲ ವಿಟ್ಠಲಾಂಕಿತದಲಿ ಭಾಗಣ್ಣ
ಶ್ರೀಪಪ್ರಿಯತಮ ಪದ್ಯ ಸುಳಾದಿಗಳ ರಚಿಸಿ
ಸುಪುಣ್ಯವಂತ ಸೀನಪ್ಪ ದಾಸಪ್ಪ ಈರ್ವರಿಗೂ
ಉಪದೇಶ ಮಾಡಿದರು ಮಂತ್ರೋಪೇತ ನಾಮಾಂಕಿತಗಳನ್ನು ೭೨

ಕರಿರಾಜವರದನು ಗರುಡವಾಹನ ಸಿರಿ
ವರವಾಸು ದೇವನೇ ವರದರಾಜನೆಂದೂ
ಧರೆಯಲುತ್ತಮ ಕಂಚೀಪುರದಿ ಇರುವವನು ನಾಮ
ವರದಗೋಪಾಲ ವಿಟ್ಠಲನಾಮ ಶ್ರೀನಿವಾಸನಿಗೆ ೭೩

ಇತರಾದೇವಿಯ ಸುತನೆನಿಸಿ ಮಹಿದಾಸನಾಮದಲಿ
ಪ್ರಾದುರ್ಭವಿಸಿದ ಶ್ರೀಯಃಪತಿಗೆ ಪ್ರಿಯತಮವು
ಬೃಹತೀ ಸಹಸ್ರದಲಿ ವಿಷ್ಣು ನಾಮ ವಿಶ್ವಶಬ್ದಕ್ಕೆ
ವಾಯುದೇವಾಂತರ್ಗತನು ಎಂದು ಜ್ಞೇಯ ೭೪

ಮಧ್ವಾ್ಯಖ್ಯ ವಾಯುದೇವರ ಗುರು ಮಹಿದಾಸ
ವೇದವ್ಯಾಸ ಹಂಸಾಖ್ಯ ಕಪಿಲ ಶ್ರೀಪತಿಯ
ಉತ್ತಮನಾಮ ಗುರುಗೋಪಾಲ ವಿಟ್ಠಲನಾಮ
ಅಕಳಂಕ ಯದುಪತಿಯ ನಾಮವ ಕೊಟ್ಟರು ೭೫

ಭಂಗಾರದಂಥ ವೈಷ್ಣವ ಸಂತತಿಯ ಪಡೆದು
ರಂಗನಾಥನನುಗ್ರಹದಿ ಪಾಲಿಸುವಂಥಾ
ರಂಗಪ್ಪರಾಯರಿಗೆ ತಂದೆ ಗೋಪಾಲವಿಟ್ಠಲನಾಮ
ಅಕಳಂಕ ಯದುಪತಿಯ ನಾಮವ ಕೊಟ್ಟರು ೭೬

ವಿಜಯರಾಯರ ಪರಮಭಕ್ತಾನುಗ್ರಹಿ
ವಿಜಯ ಸಾರಥಿಪ್ರಿಯ ಗೋಪಾಲರಾಯರು
ವಿಜಯಾರ್ಯರ ಸುಪ್ರಸಾದದ ಬಲದಿಂದ
ಅನುಜರಿಗೆ ಒದಗಿಸಿದರು ಅಪರೋಕ್ಷ ೭೭

ಗೋಪಾಲ ವರದಗುರು ಗೋಪಾಲದಾಸರ್ಗಳ
ಅಪರೋಕ್ಷ ಮಹಿಮೆಗಳ ಸಾಧು ಸಜ್ಜನಗಳ
ತೋರ್ಪಡಿಸಿ ಬೇರೆ ಬೇರೆಯಾಗಿಟ್ಟು ಮೂವರನ್ನು
ಶ್ರೀಪಪ್ರಿಯ ಕವನವ ರಚಿಸಿ ಗುರು ಹೇಳಿದರು ೭೮

ಗುರು ಅಂತರ್ಗತನಾದ ಗೋಪಾಲನೃಹರಿಯ
ಸ್ಮರಿಸಿ ಮೂವರೂ ಗುರುನಾಮವೂ ತದಂತಸ್ಥ

ಹರಿಗೆ ಸುಪ್ರೀತಿಕರಯೆಂದು ರಚಿಸಿದರು
ಗುರು ಸತ್ಯಬೋಧರ ಪ್ರಭಾವತೋರ್ಪಡಿಸಿ ೭೯

ಸೂರಿಗಳು ಗೋಪಾಲದಾಸಾದಿ ಮೂವರೂ
ಬರೆದ ಕೀರ್ತನೆಯಲ್ಲಿ ಸತ್ಯಬೋಧಾರ್ಯರ
ಸ್ವರೂಪವ ಸೂಕ್ಷ್ಮದಲಿ ಸೂಚಿಸಿಹರು ಎಂದು
ಅರಿವರು ಜ್ಞಾನಿಗಳು ಬಲ್ಲೇನೇ ನಾನು? ೮೦

ನೆರೆದಿದ್ದ ಜನರೆಲ್ಲ ಆಶ್ಚರ್ಯ ಚಕಿತರು
ಪರಿಪರಿ ವಿಧದಲ್ಲಿ ಮೂವರನ್ನು ಕೊಂಡಾಡೆ
ಗುರು ಸತ್ಯಬೋಧರು ಯುಕ್ತ ರೀತಿಯಲ್ಲಿ
ಭಾರಿತರ ಭೂಷಣಾನುಗ್ರಹ ಮಾಡಿದರು ೮೧

ತಂದೆ ಗೋಪಾಲದಾಸಾರ್ಯರು ಮನೆಯಲ್ಲೇ
ನಿಂದು ಸತಿ ಸುತರಿಗೆ ಹರಿಸೇವೆಯನ್ನ
ಒದಗಿಸುತ ಮಾತ್ರಂತರ್ಯಾಮಿ ಹರಿಯನ್ನ ತಾನು
ಭಕ್ತಿಪೂರ್ವಕ ಮಾಡುತ್ತಿದ್ದರು ಸೇವಾ ಸುಧ್ಯಾನ [illegible] ೮೨

ಹರಿಕ್ಷೇತ್ರ ಹರಿತೀರ್ಥಯಾತ್ರೆಯಗೈಯ್ಯಲು
ಸಿರಿವಿಜಯರಾಯರ ಅನುಗ್ರಹ ಕೊಂಡು
ಹೊರಟರು ಗೋಪಾಲದಾಸಾರ್ಯರು
ವರದ ಗುರು ಗೋಪಾಲದಾಸರ ಸಮೇತ ೮೩

ಉಡುಪಿ ಕ್ಷೇತ್ರಸ್ಥ ಹರಿಮೂರ್ತಿಸ್ಥ ತೀರ್ಥಸ್ಥ
ಕಡಲಶಯನನ್ನ ನೋಡಿ ಸೇವಿಸಲಿಕ್ಕೆ
ಒಡಹುಟ್ಟಿದವರ ಸಹ ನಡೆಯುತ್ತಿರುವಾಗ
ಅಡ್ಡಗಟ್ಟಿದ ಕ್ರೂರನು ಭೀಮಾಭಿದನು ೮೪

ಶ್ರೀ ವಿಜಯದಾಸರಿಂ ಮೊದಲೇ ಅನುಗ್ರಹೀತ
ಭಾವುಕಾಗ್ರಣೀ ಗೋಪಾಲಾರ್ಯರು ಹರಿಗುರುಗಳಿತ್ತ
ದಿವ್ಯ ಸಾಮರ್ಥ್ಯದಿಂ ಸಸೈನ್ಯ ಭೀಮನ್ನ
ತೀವ್ರ ನಿಶ್ಶೇಷಗೈಸಿ ಶರಣರ ಮಾಡಿದರು ೮೫

ಉಡುಪಿ ಸುಕ್ಷೇತ್ರದಲ್ಲಿ ಗೋಪಾಲಾರ್ಯರು
ಮಾಡಿದ್ದು ವರ್ಣಿಸಲು ಬಲ್ಲೆನೇ ನಾನು ?
ಆಟದಲಿ ಜಗಪಡೆವ ಕೃಷ್ಣ ತಾಸುತನಂತೆ
ಆಟವಾಡಿದ ಬಾಲರೂಪದಿ ಕೃಪಾಳು ೮೬

ಪೂರ್ವ ದಕ್ಷಿಣ ವರುಣ ದಿಶೆಯಾತ್ರೆಮಾಡಿ
ಶ್ರೀ ವೇಣೀಸೋಮಪುರಕೆ ಮರಳಿ ಬಂದು
ಕೋವಿದ ಕುಲರತ್ನ ವಾಸುದೇವವಿಟ್ಠಲ ರಾಮ
ಶ್ರೀವೇಂಕಟರಾಮಾರ್ಯರನ್ನು ಕಂಡರು ೮೭

ಉತ್ತನೂರು ಪೋಗಿ ವೇಂಕಟಕೃಷ್ಣನ್ನ
ವಂದಿಸಿ ಬಂಧುಗಳ ಕೂಡ ತಾ ಇದ್ದು
ಒಂದುದಿನ ನಿಶ್ಚೈಸಿದರು ಪಂಡರೀಪುರಕ್ಕೆ ಪೋಗಿ
ಇಂದಿರಾಪತಿಯನ್ನ ನೋಡಿ ಸೇವಿಸಲು ೮೮

ಪತ್ರಪೂ ಪಲ್ಲವ ಫಲವೃಕ್ಷ ದೇಶವು
ಸುಪವಿತ್ರ ಶ್ರೀ ತುಳಸೀ ಉತ್ಕೃಷ್ಟವನದಿ
ಸುಪುಣ್ಯ ಶ್ಲೋಕ ಶ್ರೀದಾಸಾರ್ಯರನ್ನ ಸುತ್ತಿ ಅಟ್ಟಿ
ಶ್ರೀಪತಿ ಕೇಳ್ದ ಅಲೇನಾಹಿ ಎಂದು ೮೯

ಶ್ರೀಹರಿ ಸ್ವೇಚ್ಛೆಯಿಂ ಪ್ರಕೃತಿ ಕ್ಷೋಭಿಸಿ ತ್ರಿಗುಣ ಬೆರೆಸಿ
ಮಹದಹಂಕಾರಾದಿ ತತ್ವ ಸೃಷ್ಟಿಗೈದು
ಬ್ರಹ್ಮಾಂಡ ನಿರ್ಮಿಸಿ ತದಾಶ್ರಯನಾಗಿ ಇಪ್ಪವನು ತಾನೇ
ಮಹಾದ್ಭುತ ಕುದುರೆ ಸವಾರನಾಗಿ ತೋರಿ ಮರೆಯಾದ ೯೦

ಆಲೋಚಿಸಿ ತಿಳಿದು ವಿಟ್ಠಲನೇ ಬಂದವನೆಂದು
ನೀಲಕುದುರೆ ಎಂಬ ಸ್ತೋತ್ರ ಮಾಡಿದರು
ಪೇಳ್ವರು ವ್ಯಾಪ್ತೋಪಾಸಕ ಜ್ಞಾನಿಗಳು ಇದರ ರ್ಥ
ಮೊದಲನೇ ನುಡಿಯು ಮೇಲೆ ಹೇಳಿದ
ಹರಿಮಹಿಮೆಯೆಂದು ಬಲ್ಲೆನೇ ನಾನು ೯೧

ಭೀಮರಥಿ ಸ್ನಾನವು ಪುರಂದರಾರ್ಯರ ನಮಿಸಿ
ಭೂಯಾದಿ ಗುಣಗಣಾರ್ಣವ ವಿಟ್ಠಲನ್ನ
ಪ್ರೇಮೋತ್ಸಾಹದಲಿ ಸನ್ನಮಿಸಿಸ್ತುತಿಸಿ
ರಮ ರುಕ್ಮಿಣಿಯ ನಮಿಸಿದರು ದಾಸಾರ್ಯ ೯೨

ಕೋಲ್ಹಾಪುರ ಪೋಗಿ ಮಹಾಲಕ್ಷ್ಮಿ ಮಂದಿರದಿ
ಶೀಲ ಪರಮಾದರದಿ ಲಕ್ಷ್ಮೀನಾರಾಯಣರನ್ನ
ಕೀಲಾಲಜಾದಿ ಪುಷ್ಪಾರ್ಚನೆಗೈದು ಕಾಪಾ
ಡೆಂದು ಕೀರ್ತನೆಗಳಿಂದ ಸ್ತುತಿಸಿದರು ೯೩

ಇನ್ನು ಬಹು ಬಹು ಕ್ಷೇತ್ರಯಾತ್ರೆ ಸೋದರರ ಕೂಡಿ
ಅನವರತ ಸುವ್ರತ ಧ್ಯಾನಪರರಾಗಿ
ಘನಮಹಿಮ ಗೋಪಾಲ ವಿಟ್ಠಲನ ಸ್ತುತಿಸುತ್ತ
ವೇಣೀ ಸೋಮಪುರಕ್ಕೆ ಬಂದರು ತಿರುಗಿ ೯೪

ಗುರುಗಳು ವಿಜಯದಾಸಾರ್ಯರ ದ್ವಾರಾ
ಯಾತ್ರಫಲ ಕೃಷ್ಣನಿಗೆ ಸಮರ್ಪಿಸಿ
ಉದ್ದಾಮ ಪಂಡಿತ ವೇಂಕಟರಾಮಾರ್ಯರಲಿ
ಇದ್ದು ಪೋದರು ಉತ್ತನೂರ ಸ್ವಕ್ಷೇತ್ರ ೯೫

ಉತ್ತನೂರು ವೇಂಕಟಕೃಷ್ಣನಾಲಯ ಮುಂದೆ
ನಿಂತು ತುಳಸೀ ವನದಿಂದ ಸುಳ್ಳಿ ತೆಗೆವಾಗ
ಬಂದರು ಭ್ಯಾಗವಟ್ಟಿ ಶ್ರೀನಿವಾಸಾಚಾರ್ಯ
ವಂದಿಸಿ ನಿಂತರು ಕೈಮುಗಿದು ವಿನಯದಿ ೯೬

ಜ್ಞಾನದಲಿ ಋಜುಮಾರ್ಗ ಗರ್ವದಲ್ಲಿ ನಿತ್ಯ ಸಂಸಾರಿಮಾರ್ಗ
ಜ್ಞಾನ ಬೋಧಿಸುವುದರಲ್ಲಿ ಪಂಡಿತರ ಮಾರ್ಗ
ಮಾನುಷಾನ್ನವನುಂಡು ಮಂದಧೀಯಲ್ಲಿ ಗುರುನಿಂದಾ
ಈ ಶ್ರೀನಿವಾಸಾಭಿದನು ಮಾಡಿ ನರಳುತಿದ್ದ ೯೭

ಭಾಗಣ್ಣ ಆರ್ಯರು ಶ್ರೀನಿವಾಸಾಚಾರ್ಯಗೆ
ಅಘನಾಶ ವಿಜ್ಞಾನ ಲಭಿಸುವ ಸಾಧನವು

ನಿಗಮಾರ್ಥ ಬೋಧಕ ಉಪದೇಶ ಮಾಡಿ ಪಂಡರಿಪುರ ಪೋಗಿರಿ
ಜಗನ್ನಾಥ ವಿಟ್ಠಲ ಒಲಿದು ಕಾಂಬ ಎಂದರು ೯೮

ಶ್ರೀನಿವಾಸಾಚಾರ್ಯರು ದಾಸಾರ್ಯಾರ್ ಹೇಳಿದಂತೆ
ಸುನಿರ್ಮಲ ಭೀಮ ರಥಿಯಲ್ಲಿ ಸ್ನಾನಗೈದು
ಇನನಲಿ ಅನಿಲಾಂತರ್ಗತ ನಾರಾಯಣನ್ನ
ಧ್ಯಾನಿಸಿ ಭಕ್ತಿಜ್ಞಾನದಿಂದ ಕೊಟ್ಟರು ಅರ್ಘ್ಯ ೯೯

ಐದೆರಡು ಸಾಧು ಭಕ್ತಿ ಪ್ರತಿಪಾದ್ಯ ಶ್ರೀ ನಾರಾಯಣನು
ವಾಗ್ದೇವಿ ವರವಾಯುಗಳಿಂದ ಋಕ್‌ಸಾಮದಿಂಸ್ತುತ
ಇಪತ್ತೆರಡಕ್ಷರದಲ್ಲಿ ಎರಡನೇ ಮೂರಕ್ಷರ ಬೋಧಿತ
ಆದಿತ್ಯಸ್ಥ ವಾಯುಸ್ಥನ್ನ ಸ್ಮರಿಸಿಕೊಟ್ಟರು ಅರ್ಘ್ಯ ೧೦೦

ಜಗನ್ನಾಥದಾಸರ್ಗೆ ಗೋಪಾಲದಾಸಾರ್ಯಗುರು
ಜಗತ್ತಲ್ಲಿ ಕಂಡಿಲ್ಲದ ಉದಾರದಲಿ
ತೆಗೆದು ತನ್ನಾಯುಷ್ಯದಿಂ ಚತ್ವಾರಿವರ್ಷಕೊಟ್ಟರು
ಗುರುಗ ಶ್ರೀ ವಿಜಯ ಗೋಪಾಲ ಶ್ರೀನಿವಾಸನ ಪ್ರೀತಿಗೆ ೧೦೧

ಭಕ್ತಿಯಲ್ಲಿ ಭಾಗಣ್ಣನೆಂದು ಸುಪ್ರಖ್ಯಾತ
ಭಕ್ತ ಶಿರೋಮಣಿಯು ಗೋಪಾಲ ದಾಸಾರ್ಯ
ಬೀದಿಯಲಿ ಜರುಗದ ರಥಕೂಢನ್ನ ಬಾರೈಯ್ಯ
ಎಂದು ಸ್ತುತಿಸೆ ರಥ ಓಡೋಡಿ ಬಂತು ೧೦೨

ತಿರುಪತಿ ಶ್ರೀ ಶ್ರೀನಿವಾಸನ ರಥವು
ಸರಸರ ಬಂದದ್ದು ಜನರು ನೋಡಿ
ಹರಿಭಕ್ತಾಗ್ರೇಸ ಗೋಪಾಲ ದಾಸರನ್ನ
ಪರಿಪರಿ ವಿಧದಿ ಕೊಂಡಾಡಿದರು ಮುದದಿ ೧೦೩

ಕಂಚೀ ವರದರಾಜನ ದೇವಾಲಯದಲ್ಲಿ
ಕಿಚ್ಚು ಸೋಕಿ ಚೀಲ ಉರಿಯಲು ಅದನ್ನ
ದಾಸವರ್ಯ ದೂರದೇಶದಲಿದ್ದರೂ । ತನ್ನ ಚೀಲ ।
ಕಸಕಿ ಶಾಂತ ಮಾಡಿದರು ಕಂಚಿಯ ಉರಿಯ ೧೦೪

ದಾರಿದ್ರ್ಯ ಋಣರೋಗ ಅಪಮೃತ್ಯು ಅಪಿಚಾರ
ಪರಿಪರಿ ಕಷ್ಟೋಪಟಳ ವಿಘ್ನಗಳ
ಗುರು ವಿಜಯ ರಾಯಾಂತರ್ಗತ ಗೋಪಾಲನ ಒಲುಮೆಯಿಂದ
ಎರಗುವರ್ಗೆ ಕಳೆದಿಹರು ಅದ್ಯಾಪಿ ಒದಗುತಿಹರು ೧೦೫

ಗೋಪಾಲದಾಸರಿಗೆ ವಿಜಯ ದಾಸರಲ್ಲಿ
ಇಪ್ಪ ಭಕ್ತಿಯ ವರ್ಣಿಸಲಶಕ್ಯ
ಗೋಪಾಲ ದಾಸರನ್ನು ನಂಬಿದವರನ್ನ ವಿಜಯಾರ್ಯ ಕೈ ಬಿಡರು
ಗೋಪಾಲ ವಿಜಯ ವಿಟ್ಠಲ ಬಂದು ತಾನೇ ಒಲಿವ ೧೦೬

ಗೋಪಾಲ ದಾಸಾರ್ಯರೇ ನೀವು ವಿಜಯಾರ್ಯರಲ್ಲಿ
ತಪ್ಪದೇ ಮಾಡಿದ ಭಕ್ತಿಯಿಂದದಿ ಎನಗೆ
ಸ್ವಲ್ಪವಾದರೂ ನಿಮ್ಮಲ್ಲಿ ಪುಟ್ಟುವಂತೆ ಮಾಡಿರಿ
ಗೋಪಾಲ ಪ್ರಿಯತಮರೇ ಪಾಹಿಮಾಂ ಶರಣು ೧೦೭

ಹೆಳವನಕಟ್ಟೆ ಗಿರಿಯಮ್ಮ ಮೊದಲಾದ
ಶೀಲ ಶಿಷ್ಯರು ಬಹುಮಂದಿಗಳು
ಬಲು ಭಕ್ತಿಶ್ರದ್ಧೆಯಿಂ ಉಪದೇಶಗೊಂಡು
ಜಲಜನಾಭನ ಒಲುಮೆ ಪಾತ್ರರಾಗಿಹರು ೧೦೮

ಜ್ಞಾನ ಭಕ್ತಿ ವೈರಾಗ್ಯವಂತಳು ಗಿರಿಯಮ್ಮ
ಕೃಷ್ಣ ಮಂತ್ರ ಉಪದೇಶ ದಾಸಾರ್ಯರಿಂದ
ಕೊಂಡು ಶ್ರೀ ರಂಗವಿಟ್ಠಲ ಕೃಷ್ಣನ್ನ ಪ್ರತ್ಯಕ್ಷ
ಕಾಣುವಂಥ ಸೌಭಾಗ್ಯ ಶಾಲಿಯಾಗಿಹಳು ೧೦೯

ಅದ್ವಿಜನು ಶೈವನು ಪತ್ನಿ ಸಹಸೇವಿಸಿ
ಮಂತ್ರಾಲಯ ಗುರುಗಳಿಂ ಅನುಕೂಲ ಹೊಂದಿ
ಕೃತಜ್ಞಭಾವದಿ ಲಕ್ಷ ಬ್ರಾಹ್ಮಣ ಭೋಜನ ಮಾಡಿಸುವೆನು
ಎಂದು ಹರಕೆ ಮಾಡಿಸಲಿಕ್ಕಾಗಲಿಲ್ಲ ೧೧೦

ಸ್ವಪ್ನದಲಿ ಹೇಳಿದರು ಕರುಣಿ ಶ್ರೀ ರಾಘವೇಂದ್ರ ಗುರು
ತಪ್ಪದೇ ಹರಕೆ ಸಲ್ಲುವುದು ಮೂವರು ಬ್ರಾಹ್ಮಣರು

ಸುಪುಣ್ಯವಂತರು ಮಹಾತ್ಮರು ಮರುದಿನ ಬೆಳಿಗ್ಗೆ
ಈ ಪಥದಿ ಬರುವರ್ಗೆ ಭೋಜನ ಮಾಡಿಸೆಂದು ೧೧೧

ವರದ ಗುರು ಗೋಪಾಲದಾಸರು ದಾಸಾರ್ಯರು
ಅರಿತು ಅಪರೋಕ್ಷ ಸಾಮರ್ಥ್ಯದಿ ಈ ಸ್ವಪ್ನ
ನೇರಾಗಿ ಬರಲಾಗ ಆಶೈವ ಗುರು ಭಕ್ತನು
ನಾರೀ ಸಹನಮಸ್ಕರಿಸಿ ಸ್ವಾಗತವನಿತ್ತ ೧೧೨

ಮೂವರಿಗೂ ಅಧಿಕವಾದ ಪದಾರ್ಥಗಳನರ್ಪಿಸಿ
ದೇವರ ನೈವೇದ್ಯ ಮೂವರಿಗೂ ಭೋಜನ
ದೇವಗುರು ಬ್ರಾಹ್ಮಣ ಪ್ರೀತಿಯಾಗಲಿ ಎಂದು ನಮಿಸಿದರು
ಶೈವ ಕುಲೀನ ದಂಪತಿ ಭಕ್ತಿ ಪೂರ್ವಕದಿ ೧೧೩

ಅಂದು ರಾತ್ರಿ ಆ ಭಕ್ತ ದಂಪತಿಗೆ ಸ್ವಪ್ನದಲಿ
ಪ್ರೀತಿ ಆಯಿತು ಕೃಷ್ಣನಿಗೆ ಹರಕೆ ಪೂರ್ಣ ಆಯ್ತು
ಎಂದು ರಾಘವೇಂದ್ರ ತೀರ್ಥ ಸ್ವಾಮಿಗಳು ಹೇಳಿ
ಮುದದಿ ದಂಪತಿಯ ಕೃತ ಕೃತ್ಯ ಮಾಡಿದರು ೧೧೪

ಮೊದಲು ಆದರ ರಹಿತ ವೆಂಕಟನೃಸಿಂಹಾರ್ಯ
ನಿಂದು ಗೋಪಾಲ ದಾಸಾರ್ಯರ ಹರಿ ಪೂಜಾ
ಪದ್ಧತಿಯ ನೋಡುತಿರೆ ಹನುಮಂತ ದೇವರು
ಮೂರ್ತಿಮತ್ ಕುಳಿತಿದ್ದುದು ಕಂಡರು ೧೧೫

ಬಂದು ವೆಂಕಟ ನೃಸಿಂಹಾಚಾರ್ಯರು ಮತ್ತು
ನಿಂದಿಸಿದ ವೈದಿಕರು ತತ್ವ ಕೀರ್ತನೆಗಳ
ಅದ್ಭುತ ಸುಳಾದಿ ಕೇಳಿ ನಿರ್ಮತ್ಸರರಾಗಿ
ಬಂದು ಶಿಷ್ಯತ್ವ ಬೇಡಿದರು ಆರ್ಯರಲಿ ೧೧೬

ವೈರಾಗ್ಯನಿಧಿ ಗಂಗಾಧರನ ಅನುಗ್ರಹದಿ
ವೈರಾಗ್ಯ ಯುಕ್ ಜ್ಞಾನ ಹರಿ ಭಕ್ತಿ ಲಭಿಸಿದ್ದ

ಸೂರಿವರ ಗೋಪಾಲ ದಾಸಾರ್ಯ ಜರಿಗೆ ಶಾಲು ರೇಷ್ಮೆ
ಭಾರಿ ಪಲ್ಲಕ್ಕಿ ವೈಭವದಿ ಮೆರೆದರು ಹರಿ ಪ್ರೀತಿಗಾಗಿ ೧೧೭

ಪನ್ನಗಾಚಲ ಶ್ರೀ ಶ್ರೀನಿವಾಸನ ಭಕ್ತ
ಅನಿಮಿಷಾಂಶರು ಗೋಪಾಲ ದಾಸಾರ್ಯ
ಶ್ರೀನಿವಾಸನಪ್ಪಣೆಕೊಂಡು ಊರಿಗೆ ಬಂದು
ಅವನೀಸುರರಿಗೆ ಔತಣವಿತ್ತು ಧ್ಯಾನದಿ ಕುಳಿತರು ೧೧೮

ಮುಖ್ಯಕಾರಣ ವಿಷ್ಣು ಸ್ವತಂತ್ರ ಎಂದುತಾ ಭಜಿಸಿ
ಶಿಷ್ಯರಿಗೆ ಬೋಧಿಸಿ ಸಜ್ಜನರ ಪೊರೆದು
ಪುಷ್ಯ ಬಹುಲಾಷ್ಟಮೀಯಲ್ಲಿ ಪೂಷಯದುಪತಿಧಾಮ
ಕೃಷ್ಣ ಭಕ್ತರಿಗೌತಣವಿತ್ತು ಐದಿದರು ೧೧೯

ಗದ್ವಾಲ ರಾಜ ಮೊದಲಾದ ರಾಜ ಪ್ರಮುಖರಿಂದ
ಮೇದಿನೀ ಪ್ರಖ್ಯಾತ ಯತಿಗಳು ಪಂಡಿತರಿಂ
ಎದುರಿಲ್ಲದ ಸೂರಿ ಐಜೀಯವರಿಂದಲು
ಸದಾ ಮರ್ಯಾದೆ ಕೊಂಡವರು ದಾಸಾರ್ಯ ೧೨೦

ವಿಜಯ ದಾಸಾರ್ಯ ಪೂಜಿಸಿದ ಹರಿ ಮೂರ್ತಿ
ವಿಜಯ ವಿಟ್ಠಲ ಪ್ರತಿಮೆ ಅಂತರ್ಗತನ್ನ
ವಿಜಯ ಸಾರಥಿಪ್ರಿಯ ಗೋಪಾಲ ದಾಸರು ಪೂಜಿಸಿ
ರಾಜಿಸುತಿಹ ಮೂರ್ತಿಇಹುದು ಅವರ ಮನೆಯಲ್ಲಿ ೧೨೧

ಜ್ಞಾನ ಸುಖ ಬಲ ಪೂರ್ಣ ಜನ್ಮಾದಿಕರ್ತ ಅಜ
ವನರುಹಜ ಪಿತ ಶ್ರೀಶಪ್ರಸನ್ನ ಶ್ರೀನಿವಾಸ
ಅನಘ ಹಯಮುಖ ವಿಜಯ ಗೋಪಾಲ ಸರ್ವಗಗೆ
ಘನ್ನ ಪ್ರಿಯ ಗೋಪಾಲ ದಾಸಾರ್ಯ ಶರಣು ೧೨೨

॥ ಸಂಪೂರ್ಣಂ॥

ಶ್ರೀ ಜಗನ್ನಾಥದಾಸರ ಸ್ತೋತ್ರ

೧೩೮

ಬಾಗುವೆ ಶಿರ ಪುರಂದರ ವಿಜಯ ಗೊಪಾಲ
ಜಗನ್ನಾಥ ನಿನಗೂ ನಿನ್ನ ದಾಸರು ಸರ್ವರಿಗೂ ಪ

ಜಗನ್ನಾಥದಾಸರ ನಾಮವರ್ಣಂಗಳಲಿ
ಜಗನ್ನಾಥ ನೀಪೋಳೆದು ಸ್ಮರಿಪರ ಪಾಲಿಸುವಿ ಅ ಪ

'ಜ' ಎನಲು ಅಜ ಅಭಯ ಅಮೃತ ಉರುಕ್ರಮ ಅನಘ
ಘನ ದಯದಿ ಭವವ ನದಿ ಸುಲಭದಿದಾಟಿಸುವಿ
'ಗ' ಎನಲು ನಿಗಮೈಕ ವೇದ್ಯ ಪೀಡೆಗಳಳಿದು
ಜ್ಞಾನಭಕುತಿಗಳಿತ್ತು ಕಾಯ್ವ ವಿಪಗಮನ ೧

'ನಾ' ಎನಲು ಶ್ರೀಶಹರಿ ಬ್ರಹ್ಮಶಿವ ಮುಖವಂದ್ಯ
ಆನತೇಷ್ಟಪ್ರದನೇ ಸೌಭಾಗ್ಯವೀವಿ
'ಥ' ಎನಲು ರಕ್ಷಿಸುವಿ ಶ್ರೀ ಕೃಷ್ಣ ಗೋವಿಂದ
ಅನ್ನಾದ ಅನ್ನದನೆ ಗಿರಿಧರ ಅನೀಶ ೨

ನರನರಪ ಗಂಧರ್ವ ಪಿತೃ ಋಷಿ ಸುರವೃಂದ
ಸ್ಮರ ಗೋಪ ಗೌರೀಶ ಭಾರತೀ ವಾಣಿ
ವರವಾಯು ವಿಧಿವಿನುತ ಶ್ರೀವಿಭಾವ ನವಿಭೋ
ಪ್ರಸನ್ನ ಶ್ರೀನಿವಾಸ ಜಗನ್ನಾಥ ಶರಣು ೩

ಶ್ರೀ ಜಗನ್ನಾಥದಾಸರ ಕೀರ್ತನೆ

೧೩೯

ಶ್ರೀ ರಮಣಿ ಕರಕಮಲ ಪೂಜಿತ ಪದಾಂಬೋಜ
ಸರಸಿಜಾಸನ ಶಿವಾದ್ಯಮರ ಜನವಿನುತ
ಉರು ಗುಣಾರ್ಣವ ಜಗಜ್ಜನ್ಮಾದಿ ಕರ್ತ ನರ –
ಹರಿಗೆ ಪ್ರಿಯ ಜಗನ್ನಾಥದಾಸಾರ್ಯ ಶರಣು ಪ.

ಮೂಲ ಗುರು ಅಗುರು ಶ್ರೀ ಹಂಸನಾಮಕ ಶ್ರೀಶ
ಸಲಿಲ ಜಾಸನ ಸನಕ ದೂರ್ವಾಸಾದಿಗಳ
ಪೀಳಿಗೆಯಲಿ ಬಂದ ಮರುದಂಶ ಮಧ್ವನ
ಕಾಲಿಗೆ ಎರಗಿ ಶರಣಾದೆ ನಾ ಸತತ ೧

ಮಧ್ವ ಕರ ಕಂಜಭವ ಕಂಜನಾಭ ನೃಹರಿ
ಮಾಧವ ಅಕ್ಷೋಭ್ಯ ಜಯತೀರ್ಥರಿಗೆ ನಮಿಪೆ
ವಿದ್ಯಾಧಿರಾಜರಿಗೆ ರಾಜೇಂದ್ರತೀರ್ಥರಿಗೆ
ಜಯಧ್ವಜರಿಗೆ ಮನೋ ಪುರುಷೋತ್ತಮರ್ಗೆ ೨

ಪುರುಷೋತ್ತಮ ಕುವರ ಬ್ರಹ್ಮಣ್ಯ ತೀರ್ಥರಿಗೆ
ಸರಸೀರುಹ ನಾಭ ತೀರ್ಥಜರು ಲಕ್ಷ್ಮೀ –
ಧರರ ಪರಂಪರೆ ಜಾತ ಸ್ವರ್ಣ ವರ್ಣರ ಕರ
ಸರೋಜ ಭವ ಶ್ರೀ ಪಾದರಾಜರಿಗೆ ಶರಣು ೩

ಸುಪುಣ್ಯ ಲಕ್ಷ್ಮೀ ನಾರಾಯಣ ತೀರ್ಥರಿಗೆ
ಶ್ರೀಪಾದ ರಾಜತ್ವ ಯೋಗ್ಯತಾಲಿಂಗ
ಶ್ರೀ ಭೂ ಸಮೇತ ಶ್ರೀ ರಂಗವಿಠ್ಠಲ ತಾನೆ
ಈ ಪುಣ್ಯ ಶ್ಲೋಕರಲಿ ಬಂದು ನಿಂತಿಹನು ೪

ದಿನತೇಜಃ ಪುಂಜ ಬ್ರಹ್ಮಣ್ಯ ತೀರ್ಥರ
ವನಜ ಕರಜರು ವ್ಯಾಸರಾಜಸ್ವಾಮಿಗಳು
ಘನ ಮಹಾ ಹರಿಭಕ್ತ ವಾದಿಗಳ ಸಿಂಹರು
ಆ ನಮಿಪೆ ಈ ಹರಿದಾಸಯತಿಗಳಿಗೆ ೫

ಪೂರ್ಣ ಪ್ರಜ್ಞಾನಂದ ತೀರ್ಥ ಮಧ್ವಾಚಾರ್ಯ
ಕ್ಷೋಣಿಯ ಸಜ್ಜನರ ಉದ್ಧಾರಕಾಗಿ
ಘನ ಮೂಲ ಗ್ರಂಥಗಳ ಸಹ ಪ್ರಾಕೃತದಲ್ಲೂ
ಅನಘ ಲಕ್ಷ್ಮೀಶನ ಸ್ತೋತ್ರ ರಚಿಸಿಹರು ೬

ಪೂರ್ಣಪ್ರಜ್ಞರ ಜ್ಞಾನ ವಂಶಸ್ಥಯತಿಗಳು
ಕನ್ನಡದಿ ನುಡಿದಿರುವ ಕೀರ್ತನೆ ಪದ್ಯಗಳು
ಘನ ತರವು ಆ ರೀತಿ ಆದ್ಯ ಹರಿದಾಸರುಗಳು
ಕನ್ನಡದಿ ನುಡಿದಿಹರು ಹರಿ ಪ್ರೀತಿಗಾಗಿ ೭

ಸರ್ವದಾ ಶರಣಾದೆ ಎನ್ನ ಕಾಯುವ ತಂದೆ
ದೇವ ಋಷಿ ನಾರದ ಪುರಂದರ ದಾಸರಲಿ
ಶ್ರೀ ವ್ಯಾಸರಾಜರಲಿ ಉಪದೇಶ ಕೊಂಡಿಹರು
ನಿರ್ವಾಜ್ಯ ಭಕ್ತಿಮಾನ್ ಕಾರುಣ್ಯ ಶರಧಿ ೮

ವಿಷ್ಣು ಸರ್ವೋತ್ತಮ ತದಂತರ ರಮಾದೇವಿ
ವನು ರುಹಾಸನ ವಾಣಿ ತದಧೌ ಎಂದು
ತಾನೆ ನೇರಲ್ಲರಿತು ಲೋಕಕ್ಕೆ ಪೇಳಿದ
ಘನ ದಯಾನಿಧಿ ಭೃಗುವೇ ವಿಜಯದಾಸಾರ್ಯ ೯

ವಿಜಯ ದಾಸಾರ್ಯರ ರಾಜೀವ ಪದಯುಗಕೆ
ನಿಜ ಭಕ್ತಿ ಪೂರ್ವಕ ಶರಣಾದೆ ಸತತ
ವಿಜಯರಾಯರ ಗುರು ಪುರಂದರ ದಾಸಾರ್ಯರು
ವಿಜಯರಾಯರ ಶಿಷ್ಯ ಗೋಪಾಲದಾಸರು ೧೦

ಪರಮ ಭಾಗವತರು ಹರಿ ಭಕ್ತಾಗ್ರಣಿ ಕರುಣಿ
ಹರಿ ಶಿರಿ ಒಲಿದಿಹ ದಾಸ ಮಹಂತ
ವರ ವಾಯು ಗೋಪಾಲದಾಸರೊಳು ಸರ್ವದಾ
ಸುಪ್ರಚುರನಾಗಿಹನು ಶರಣು ಗುರುವರ್ಯ ೧೧

ಕ್ಷಿಪ್ರಪ್ರಸಾದರು ವ್ಯಾಪ್ತೋಪಾಸಕರು
ಶ್ರೀಪತಿ ವೆಂಕಟ ಕೃಷ್ಣನಲಿರತರು

ಆಪತ್ತುಗಳ ಕಳೆದು ಕಾಮಿತಾರ್ಥಗಳೀವ
ಕೃಪಾಳು ಇವರಲ್ಲಿ ನಾ ಶರಣು ಶರಣಾದೆ ೧೨

ಈ ನಮ್ಮ ಗುರುಗಳು ಗೋಪಾಲದಾಸಾರ್ಯರಲಿ
ಘನ ವಿದ್ವಾಂಸರು ಬ್ಯಾಗವಟ್ಟಿ ಮನೆಯವರು
ಶ್ರೀನಿವಾಸಾಚಾರ್ಯ ಶರಣಾಗಿ ಜಗತ್ತಲ್ಲಿ
ಜಗನ್ನಾಥ ದಾಸರು ಎಂದು ಜ್ವಲಿಸಿಹರು ೧೩

ಬ್ಯಾಗವಟ್ಟಿ ಗ್ರಾಮ ಮಾನವಿ ಎಂಬುವ
ನಗರದ ಸಮೀಪವು ನವಾಬನಾಡಳಿತ
ಆಗ್ರಾಮ ಶಾನಭೋಗ ನರಸಿಂಹಾಚಾರ್ಯರು
ಭಾಗವತ ಧರ್ಮವ ಆಚರಿಸುವವರು ೧೪

ಹಣದಿಂದ ಶ್ರೀಮಂತರೋ ಬಡವರೋ ಹೇಗೋ
ಗುಣದಿಂದ ಇವರು ಶ್ರೀಮಂತರು ಖರೆಯು
ಜ್ಞಾನಿವರ್ಯರು ಇವರು ಸುರವೃಂದದವರು
ಮನುಜ ಲೋಕದಿ ಜನ್ಮ ಹರಿಯ ನಿಯಮನದಿ ೧೫

ಜ್ಞಾನ ಭಕ್ತಿ ವೈರಾಗ್ಯ ಸಂಪನ್ನರು
ಶಾನುಭೋಗಿ ಉದ್ಯೋಗವ ತ್ಯಜಿಸಿ
ಜ್ಞಾನಿ ತಿಮ್ಮಣ್ಣದಾಸಾರ್ಯರಲಿ ಉಪದೇಶ
ಅನುಗ್ರಹನಾಮಾಂಕಿತ ಹೊಂದಿದರು ಮುದದಿ ೧೬

ನರಸಿಂಹಾಚಾರ್ಯ ಲಕ್ಷ್ಮಕ್ಕ ದಂಪತಿಯ
ಪುತ್ರರತ್ನನು ಬುದ್ಧಿರ್ಮಾ ಶ್ರೀನಿವಾಸ
ಸೂರಿ ವರ ವರದೇಂದ್ರ ತೀರ್ಥರ ಮುಖದಿಂದ
ಪರಾಪರ ವಿದ್ಯೆಯ ಕಲಿತನು ತೀವ್ರ ೧೭

ವರದೇಂದ್ರರಲಿ ಓದಿ ದೊಡ್ಡ ಪಂಡಿತನಾಗಿ
ನರಸಿಂಹದಾಸರು ತಂದೆ ದಿನ ಚರಿಪ
ಹರಿದಾಸ ಪದ್ಧತಿ ಕೀರ್ತನಾರಾಧನ
ಹರುಷದಲಿ ನೋಡಿ ಮುದಪುಳಕ ನಾಗುವನು ೧೮

ಗೃಹಸ್ಥ ಆಶ್ರಮ ಧರ್ಮ ಚೆನ್ನಾಗಿ ಆಚರಿಸುತ್ತ
ಅಹರಹ ಸಚ್ಛಾಸ್ತ್ರ ಪಾಠ ಪೇಳುತ್ತ
ಬಹುಕೀರ್ತಿ ಶ್ರೀನಿವಾಸಾಚಾರ್ಯರು ಹೊಂದಿ
ಮಹಿಯಲ್ಲಿ ಪ್ರಖ್ಯಾತರಾಗಿ ಜ್ವಲಿಸಿಹರು ೧೯

ವಾರಿಜಾಸನ ಪಿತನು ಪೂರ್ಣಪ್ರಜ್ಞರ ಹೃಸ್ಥ
ಶಿರಿಪ್ರಸನ್ನ ಶ್ರೀನಿವಾಸನಿಗೆ ಪ್ರಿಯತರರು
ಪುರಂದರ ವಿಜಯಗೋಪಾಲದಾಸಾರ್ಯರ
ಚರಣರತ ಜಗನ್ನಾಥದಾಸಾರ್ಯ ಶರಣು ೨೦

– ಪ್ರಥಮೋಧ್ಯಾಯ ಸಂಪೂರ್ಣಂ –

೧೩೯–೧

ಶ್ರೀರಮಣ ಕರಕಮಲ ಪೂಜಿತ ಪದಾಂಬೋಜ
ಸರಸಿಜಾಸನ ಶಿವಾದ್ಯಮರ ಜನವಿನುತ
ಉರುಗುಣಾರ್ಣವ ಜಗಜ್ಜನ್ಮಾದಿ ಕರ್ತ ನರ–
ಹರಿಗೆ ಪ್ರಿಯ ಜಗನ್ನಾಥದಾಸಾರ್ಯ ಶರಣು ಪ.

ಶ್ರೀನಿವಾಸಾಚಾರ್ಯ ಪಂಡಿತೋತ್ತಮರು
ಅನಿಮಿಶಾಂಶರು ಹೌದು ಭುವಿಯಲ್ಲಿ ಹುಟ್ಟಿ
ಮಾನುಷಾನ್ನವನುಂಡು ಕರ್ಮವಾತಾವರಣ
ಸನ್ನಿವೇಶದ ಬಲದಿ ಗರ್ವಕೊಳಗಾದರು ೧

ಆದಿತೇಯರು ಭೂಮಿಯಲ್ಲಿ ಜನ್ಮವ ತಾಳೆ
ಜಾತಾಪರೋಕ್ಷಿಗಳು ಶಕ್ತ್ಯಾತ್ಮನಾ
ವ್ಯಕ್ತ್ಯಾತ್ಮನಾ ಅಪರೋಕ್ಷ ಪ್ರಕಾಶವು
ಒದಗಿ ಗುರುಗಳು ಅನುಗ್ರಹವು ಮಾಡಿದರೆ ೨

ದೇವತಾ ಕಕ್ಷದಲಿ ದೊಡ್ಡ ಮಟ್ಟದವರು
ವಿಶ್ವಾಮಿತ್ರರಿಗೆ ಉತ್ತಮರು ನಾರದಗೆ

ಆವರರೆನಿಸುವ ಭೃಗುಋುಷಿಯೇ ವಿಜಯಾರ್ಯರು
ತಾವೆ ಬಂದರು ಶ್ರೀನಿವಾಸರ ಬಳಿಗೆ ೩

ಪೂರ್ವದಲೆ ಕೇಳಿಹರು ಈ ವಿಜಯದಾಸರು
ದೇವಾಂಶ ಅಪರೋಕ್ಷ ಜ್ಞಾನಿಗಳು ಎಂದು
ಈ ವಿಧದಿ ಪೇಳುವುದು ಪುಸಿ ಎಂದು ನೆನೆದರು
ಗರ್ವಮೌಢ್ಯದಿ ಶ್ರೀನಿವಾಸ ಆಚಾರ್ಯ ೪

ಕನ್ನಡ ನುಡಿ ಹಾಡಿ ಕುಣಿಕುಣಿವ ಈ ದಾಸ
ಜ್ಞಾನಿಯೆ ? ಅರಿತವನೇ ಬ್ರಹ್ಮವಿದ್ಯೆ ಎಂದು
ಹೀನಮಾತ್ಸರ್ಯದಿ ಮನಸೋತು ಅವಹೇ –
ಳನ ಮಾಡಿದರು ವಿಜಯಾರ್ಯರಲ್ಲಿ ೫

ತಾಳುವ ತನ್ನಲ್ಲಿ ಮಾಡುವ ಅಪರಾಧ
ತಾಳಹರಿ ತನ್ನ ಭಕ್ತರಲ್ಲಿ ಮಾಡುವುದು
ಮಾಲೋಲ ನಿಯಮನದಿ ಸ್ವೋತ್ತಮಾಪರಾಧ
ಫಲವು ಕಂಡಿತು ಶ್ರೀನಿವಾಸರಲಿ ಬೇಗ ೬

ರಾಜಯಕ್ಷ್ಮವೋ ಗುಲ್ಮ ಮತ್ತೇನು ರೋಗವೋ
ರಾಜವೈದ್ಯರು ಸಹ ನಿರ್ಣಯಿಸಲಶಕ್ಯ
ಭೋಜನ ಅರುಚಿ ಉದರ ಶೂಲಿ ತನು ಕುಗ್ಗಿ
ಲಾಜವೂ ಸಹ ಜೀರ್ಣ ಆಗದ ಮಾಂದ್ಯ ೭

ಇಂದಿರೇಶಗೆ ಪ್ರಿಯ ಮಹಾತ್ಮ ಸ್ವೋತ್ತಮರಲ್ಲಿ
ಗೈದ ಅಪರಾಧ ಫಲವೆಂದರಿಯದೆ
ವೈದ್ಯಕ್ಕೆ ಹಣ ವೆಚ್ಚ ಮಾಡಿ ಕ್ಷೇತ್ರಗಳಿಗೆ
ಪೋದರು ದೈವಾನುಗ್ರಹ ಪಡೆಯಲಿಕ್ಕೆ ೮

ವಾದೀಂದ್ರ ಸನ್ನುತ ರಾಘವೇಂದ್ರಾರ್ಯರ
ವೃಂದಾವನದಲ್ಲಿ ಸೇವೆ ಮಾಡಿದರು
ಮುಂದು ಯಾತ್ರೆ ಗೈದು ಘಟಿಕಾದ್ರಿ ಹನುಮಗೆ
ದುಗ್ಧಾಭಿಷೇಕ ಹರಿವಾಯುಸ್ತುತಿಯಿಂದ ೯

ಮಂತ್ರಾಲಯ ವೆಂಕಟಗಿರಿ ಘಟಿಕಾದ್ರಿ
ಇಂಥಾ ಸುಪುಣ್ಯ ಕ್ಷೇತ್ರಗಳಿಗೆ ಪೋಗಿ
ಮಂತ್ರಾಲಯ ಮತ್ತೂ ಬಂದು ಶ್ರೀ ರಾಘ-
ವೇಂದ್ರ ತೀರ್ಥರ ಪಾದ ಭಜಿಸಿ ನಮಿಸಿದರು ೧೦

ಹರಿವಾಯುಸ್ತುತಿ ಪುರಶ್ಚರಣ ಆದರದಿ
ಚರಿಸೆ ಭಾರತೀಶನು ಮತ್ತು ಗುರು ರಾಘವೇಂದ್ರರು
ಅರುಹಿದರು ಸ್ವಪ್ನದಿ ವಿಜಯವಿಠಲ ದಾಸ
ಆರ್ಯರಲಿ ಶರಣಾಗು ಕ್ಷಮೆ ಬೇಡು ಎಂದು ೧೧

ಶ್ರೀನಿವಾಸ ಆಚಾರ್ಯರು ಎಚ್ಚರಿತು
ತಾನು ವಿಜಯಾರ್ಯರಲಿ ಗೈದ ಅಪರಾಧ
ನೆನೆದು ಬಹು ವ್ಯಾಕುಲ ಪಶ್ಚಾತ್ತಪ್ತರು ಆಗಿ
ಕ್ಷಣದಿ ಹೊರಟರು ವಿಜಯದಾಸರ ಬಳಿಗೆ ೧೨

ದೀನ ಕರುಣಾಕರರು ವಿಜಯ ದಾಸಾರ್ಯರು
ಘನದಯದಿ ಶ್ರೀನಿವಾಸಾಚಾರ್ಯರ ಕ್ಷಮಿಸಿ
ತನ್ನ ಶಿಷ್ಯ ಗೋಪಾಲದಾಸಾರ್ಯರು
ಅನುಗ್ರಹ ಮಾಡುವ ಗುರುಗಳು ಎಂದರು ೧೩

ಪರಮ ಗುರುವರ್ಯ ಶ್ರೀ ವಿಜಯದಾಸಾರ್ಯರ
ನಿರ್ವ್ಯಾಜ ಪ್ರೀತಿ ಅಪ್ಪಣೆಯ ತಾ ಕೊಂಡು
ಗುರುಗಳು ಗೋಪಾಲದಾಸಾರ್ಯರಲಿ ಪೋಗಿ
ಶರಣಾಗಿ ಶ್ರೀನಿವಾಸರು ನಮಿಸಿದರು ೧೪

ತನ್ನಲ್ಲಿ ಗುರುಗಳು ಕಳುಹಿಸಿದವರೆಂದು
ದೀನ ಆಚಾರ್ಯರು ನಿಜ ಶರಣರೆಂದು
ಚೆನ್ನಾಗಿ ಆತನ ಪರಿಸ್ಥಿತಿ ಅರಿತು
ಅನುಗ್ರಹಿಸಿದರು ಗೋಪಾಲವಿಠಲರು ೧೫

ಅನ್ನ ಫಲಹಾರಗಳ ಕೊಳ್ಳದ ವ್ಯಾಧಿಯಲಿ
ಸಣ್ಣ ಬಡವಾದಂಥ ಗಾತ್ರದಿಂದ

ಸನ್ನಮಿಸಿದ ಶ್ರೀನಿವಾಸಾಚಾರ್ಯನ್ನ
ಮನೆಯಲ್ಲಿ ಉಪಚರಿಸಿ ಆದರಿಸಿದರು ೧೬

ಗುರುಗ ಶಿರಿ ವಿಜಯ ವಿಠಲ ತನ್ನೊಳಿಪ್ಪ
ಶಿರಿ ಗೋಪಾಲ ವಿಠಲ ಶ್ರೀನಿವಾಸ
ಸರಸಿಜ ಭವಾಂಡ ದೊರೆ ಶ್ರೀ ಜನಗ್ನಾಥನ್ನ
ಸ್ಮರಿಸಿ ಅರ್ಚಿಸಿ ನೈವೇದ್ಯ ಮಾಡಿದರು ೧೭

ನಿವೇದಿತಾನ್ನ ಜೋಳದ ರೊಟ್ಟಿ ಕೊಟ್ಟು
ದ್ರವ ಮಾತ್ರ ಕೊಳ್ಳುವ ರೋಗಿ ಆಚಾರ್ಯಗೆ
ದೇವರ ಅನಿಲನ ಪರಮ ಗುರುಗಳ ನೆನೆದು
ಸವಿದು ಉಣ್ಣುವುದೆಂದು ಹಿತದಿ ಪೇಳಿದರು ೧೮

ಶ್ರೀನಿವಾಸಾಚಾರ್ಯ ಉಣ್ಣಲು ರೋಗವು
ದಿನದಿನದಿ ಕ್ರಮದಿಂದ ನಿವಾರಣ ಆಯ್ತೂ
ಧ್ಯಾನ ಪೂಜಾ ಅನುಸಂಧಾನ ಕ್ರಮಗಳು
ಚೆನ್ನಾಗಿ ಆಚಾಯರಾಕರ್ಷಿಸಿದವು ೧೯

ಶ್ರೀನಿವಾಸಾಚಾರ್ಯರ ರೋಗಮೋಚನಕೆ
ಧ್ಯಾನಿಸಿ ಜಪಿಸಿ ಶ್ರೀ ಧನ್ವಂತರಿ ಮಂತ್ರ
ಬಿನ್ನಪವ ಮಾಡಿದರು ಕೀರ್ತನಾ ರೂಪದಿ
ದೀನದಯಾಳು ಗೋಪಾಲದಾಸಾರ್ಯ ೨೦

ಆಹ್ನಿಕ ಜಪ ಗುರು ಪರಮಗುರು ನಮನ
ವಿಘ್ನವಿಲ್ಲದೆ ಆಚಾರ್ಯರು ಚರಿಸಿದರು
ಘನರೋಗ ಹೋಯಿತು ತ್ರಾನ ಇನ್ನೂ ಬೇಕು
ಶ್ರೀನಿಧಿ ನೋಡಿದನು ಕೃಪಾದೃಷ್ಟಿಯಿಂದ ೨೧

ಶ್ರೀ ನಿಧಿಃ ಸರ್ವಭೂತಾನಾಂ ಭಯಕೃದ್ಭಯನಾ –
ಶನನು ವಿಜಯದಾಸಾರ್ಯ ರೂಪದಲಿ
ತಾನೆ ಸ್ವಪ್ನದಿ ಪೇಳ್ದ ಗೋಪಾಲದಾಸರಿಗೆ
ದಾನ ಕೊಡು ಆಯುಷ್ಯ ಚತ್ವಾರಿವರ್ಷ ೨೨

ಶಿರಿವಿಜಯವಿಠ್ಠಲ ವಾಯು ಗುರು ಇಚ್ಛಾನು –
ಸಾರದಿ ಶ್ರೀನಿವಾಸಾಚಾರ್ಯನಲಿ ವಾತ್ಸಲ್ಯ
ಕಾರುಣ್ಯ ತೋರಿಸಿ ತಮಗಿದ್ದ ಆಯುಸ್ಸಲಿ
ಎರೆದರು ಧಾರೆಯ ನಲವತ್ತು ವರ್ಷ ೨೩

ಏನೆಂಬೆ ಈ ನಮ್ಮ ಗುರುಗಳ ಔದಾರ್ಯ
ದೀನಕರುಣಾಂಬುಧಿ ಗೋಪಾಲದಾಸರ
ದಾನಕ್ಕೆ ಎಣೆಯುಂಟೆ ಎಲ್ಲಾದರೂ ಯಾರೂ
ತನ್ ಆಯುಷ್ಯವ ಕೊಡುವರೆ ಅನ್ಯರಿಗೆ ೨೪

ರೋಗಕಳೆದು ಆಯುರ್ದಾನವ ಕೊಂಡ ಈ
ಬ್ಯಾಗವಟ್ಟ ಶ್ರೀನಿವಾಸಾಚಾರ್ಯ
ಜಗನ್ನಾಥವಿಠ್ಠಲ ದಾಸರಾಯರು ಎಂದು
ಜಗತ್ತಲ್ಲಿ ಖ್ಯಾತರಾಗುವ ಬಗೆ ಮಾಡಿದರು ೨೫

ಗುರುಹಿರಿಯರಲಿ ಮಾಳ್ಪ ಉದಾಸೀನ ಎಷ್ಟು
ಭಾರಿತರ ಆಪತ್ತು ಕೊಡುವುದು ಎಂದು
ಗುರು ಅನುಗ್ರಹದಿಂದ ಸೌಭಾಗ್ಯಲಾಭವು
ಅಪಮೃತ್ಯು ಪರಿಹಾರ ಎಂದು ತಿಳಿಯುತ್ತೆ ೨೬

ವಾರಿಜಾಸನ ಪಿತನು ಪೂರ್ಣಪ್ರಜ್ಞರ ಹೃತ್‌ಸ್ಥ
ಶಿರಿಪ್ರಸನ್ನ ಶ್ರೀನಿವಾಸನಿಗೆ ಪ್ರಿಯತರರು
ಪುರಂದರ ವಿಜಯಗೋಪಾಲ ದಾಸಾರ್ಯರ
ಚರಣರತ ಜಗನ್ನಾಥ ದಾಸಾರ್ಯ ಶರಣು ೨೭

– ದ್ವಿತೀಯ ಕೀರ್ತನೆ ಸಂಪೂರ್ಣಂ –

೧೩೯–೨

ಶ್ರೀ ರಮಣಿ ಕರಕಮಲ ಪೂಜಿತ ಪದಾಂಬೋಜ
ಸರಸಿಜಾಸನ ಶಿವಾದ್ಯಮರ ಜನವಿನುತ

ಉರುಗುಣಾರ್ಣವ ಜಗಜ್ಜನ್ಮಾದಿಕರ್ತ ನರ–
ಹರಿಗೆ ಪ್ರಿಯ ಜಗನ್ನಾಥದಾಸಾರ್ಯ ಶರಣು ಪ.

ವಿಜಯದಾಸರಲಿ ಗೋಪಾಲದಾಸರಲಿ
ನಿಜ ಗುರುಭಕ್ತಿ ವರ್ಧಿಸಿ ಹರಿದಾಸ
ನಿಜಪಂಥದಿ ತನ್ನ ಸೇರಿಸೆ ಅನುಗ್ರಹಿಸೆ
ನಿಜಭಾವದಲಿ ಆಚಾರ್ಯ ಬೇಡಿದರು ೧

ನರಸಿಂಹ ದಾಸರಾಗಿಹ ತಂದೆಮುಖದಿಂದ
ವರಗಾಯತ್ರಿ ಮಂತ್ರ ಉಪದಿಷ್ಟರಾಗಿ
ವರದೇಂದ್ರರಲಿ ಮೂಲಟೀಕಾದಿ ಗ್ರಂಥಗಳು
ಮಂತ್ರೋಪದೇಶವು ಕೊಂಡವರು ಮೊದಲೇ ೨

ಶ್ರೀನಿವಾಸಾಚಾರ್ಯರ ಕೋರಿಕೆಯ
ಮನ್ನಣೆಮಾಡಿದರು ದಾಸಾರ್ಯರು
ಘನ ಮಹಾಸಚ್ಛಾಸ್ತ್ರ ತತ್ತ್ವ ವಿಷಯಗಳ
ಕನ್ನಡಮಾತಲ್ಲಿ ಬೋಧಿಸಿದರು ೩

ಪ್ರಣವಹರಿ ಜಾಗ್ರದಾದ್ಯವಸ್ಥಾ ಪ್ರಣಯನ
ಕೃಷ್ಣರಾಮ ನಾರಸಿಂಹ ವರಾಹ
ವಿಷ್ಣು ಪರಂಜ್ಯೋತಿ ಪರಂಬ್ರಹ್ಮ ವಾಸುದೇವ
ಏನೆಂಬೆ ಶ್ರೀಶ ಗುಣಕ್ರಿಯಾ ರೂಪಮಹಿಮೆ ೪

ಗಾಯತ್ರಿ ನಾಮ ಆಮ್ನಾಯ ಗಾಯನ ಮಾಡಿ
ದಯದಿ ಜಗವೆಲ್ಲ ರಕ್ಷಿಸುವ ಸ್ವಾಮಿ
ಹಯಗ್ರೀವ ಗಾಯತ್ರಿ ಮಂತ್ರ ಪ್ರತಿಪಾದ್ಯನು
ನಾರಾಯಣ ವಾಸುದೇವ ವೈಕುಂಠ ೫

ತ್ರಾತಹಯ ಶೀರ್ಷನೆ ಗಾಯತ್ರಿ ನಾಮನು
ಭೂತಪೂರ್ಣ ವಾಗ್ವಶಿ ಶರೀರವ್ಯಾಪ್ತ
ಪೃಥ್ವಿ ಆಶ್ರಯ ಪ್ರಾಣಾಧಾರ ಹೃದಯನು
ತ್ರಿಧಾಮ ಪಾದತ್ರಯ ಜಗತ್ಪಾದ ಸದೃಶ ೬

ಜ್ಞಾನ ಸುಖಬಲಪೂರ್ಣ ಸರ್ವ ಆಧಾರನು
ದಿನಪತೇಜಃ ಪುಂಜಚೇಷ್ಟಕ ಸ್ಫೂರ್ತಿದನು
ವನಜಜಾಂಡದ ಸರ್ವಕರ್ತನೂ ದೇವ
ಭಜನೀಯ ಧ್ಯಾತವ್ಯ ಶ್ರೀ ನಾರಾಯಣನು ೭

ವರ್ಣಗಳು ನಿತ್ಯವು ವರ್ಣಾಭಿಮಾನಿಗಳೊಳ್
ವರ್ಣಪ್ರತಿಪಾದ್ಯಹರಿ ಶ್ರೀ ಸಹ ಇಹನು
ಪೂರ್ಣ ಸುಗುಣಾರ್ಣವನು ನಿರ್ದೋಷ ಸರ್ವಜಗತ್
ಜನ್ಮಾದಿ ಕರ್ತನು ನಿಗಮೈಕವೇದ್ಯ ೮

ಶಬ್ದಗಳು ಸರ್ವವೂ ಮುಖ್ಯ ವೃತ್ತಿಯಲಿ
ಮಾಧವನ್ನಲ್ಲಿಯೇ ವಾಚಕವಾಗಿವೆಯು
ವೈದಿಕ ಶಬ್ದಗಳು ಹರಿಗೇವೆ ಅನ್ವಯವು
ಸಂಸ್ತುತ್ಯ ದ್ರಷ್ಟವ್ಯ ಅನುಪಮೈಕಾತ್ಮ ೯

ಸತ್ಯಜ್ಞಾನಾನಂತ ಆನಂದಮಯ ಹರಿಯೆ
ಶ್ರೋತವ್ಯ ಮಂತವ್ಯ ನಿಧಿ ಧ್ಯಾಸಿತವ್ಯ
ವ್ಯಾಪ್ತನು ಸರ್ವತ್ರ ಸರ್ವದಾ ಸರ್ವಕ್ಕೂ
ಆಧಾರ ಅಕ್ಷರನು ಕ್ಷರಾಕ್ಷರೋತ್ತಮನು ೧೦

ರಾಜಿಸುತಿಹ ನಮ್ಮ ದೇಹಾಖ್ಯ ರಥದಲ್ಲಿ
ರಾಜರಾಜೇಶ್ವರನು ಶ್ರೀ ಹ್ರೀ ಸಮೇತ
ಯುವರಾಜ ವಾಯುದೇವನ ಸೇವೆಕೊಳ್ಳುತಿಹ
ರಾಜೀವೇಕ್ಷಣ ಹರಿ ಪ್ರಾಣನಾಮ ೧೧

ಪ್ರಸ್ಥಾನತ್ರಯ ವೈದಿಕಶಾಸ್ತ್ರ ವಿಷಯಗಳು
ಇತಿಹಾಸ ಭಾಷಾತ್ರಯ ಪುರಾಣಗಳು
ಪ್ರತಿರಹಿತ ಸರ್ವೋತ್ತಮ ಸ್ವಾಮಿ ಶ್ರೀಶನ್ನ
ಚಿಂತಿಸಿ ಕಾಣಲುಬಗೆ ತೋರಿಸುತಿವೆ ೧೨

ಆಚರಿಸಿ ಜ್ಞಾನ ಪೂರ್ವಕ ವಿಹಿತ ಕರ್ಮ
ಅಚ್ಚಭಕ್ತಿಯಿಂದ ಚಿಂತಿಸಿ ಸ್ತುತಿಸೆ

ಅಚ್ಯುತ ಸ್ವತಂತ್ರನು ಮುಖ್ಯ ಕಾರಣ ವಿಷ್ಣು
ಪ್ರೋಚ್ಯ ಸುಖವೀವನು ತೋರಿತಾ ಒಲಿದು ೧೩

ಮಧ್ವಮತ ಸಿದ್ಧಾಂತ ಪದ್ಧತಿ ಅನುಸರಿಸಿ
ಸದನು ಸಂಧಾನ ಭಕ್ತಿ ಉನ್ನಾಹದಿ
ಮಾಧವನ ಗುಣಕ್ರಿಯಾ ರೂಪಗಳ ಕೊಂಡಾಡಿ
ಪದವಾಕ್ಯ ಶ್ಲೋಕ ಪದ್ಯಗಳ ನುಡಿಯುವುದು ೧೪

ಒಂದೊಂದು ಕೀರ್ತನೆ ಪದ್ಯ ಗ್ರಂಥಗಳಲ್ಲೂ
ಇಂದಿರೇಶನು ತತ್ತತ್ ಪ್ರತಿಪಾದ್ಯ ಇಹನು
ಪದ್ಯ ಕೀರ್ತನೆ ಗ್ರಂಥ ವಿಷಯ ಶ್ರೀಹರಿಯ
ಮಂತ್ರ ಚಿಂತಿಸಿ ಅರ್ಪಿಸಬೇಕು ರಚನೆ ೧೫

ಬೃಹತೀ ಸಹಸ್ರಸ್ವರ ವ್ಯಂಜನಾಕ್ಷರ ವಾಚ್ಯ
ಶ್ರೀಹರಿ ಅಹರ್ನಿಶಿ ಕಾಯುವ ದಯಾಳು
ಅಹರಹ ಸದುಪಾಸ್ಯ ಬ್ರಹ್ಮ ಶಿವ ಈಡ್ಯನು
ದೇಹ ಒಳಹೊರಗಿಪ್ಪ ಸರ್ವಾಂತರ್ಯಾಮಿ ೧೬

ಸ್ವತಃ ಅವ್ಯಕ್ತನು ಸರ್ವದಾ ಸರ್ವತ್ರ
ಸ್ವತಂತ್ರ ಪೂರ್ಣಜ್ಞಾನ ಆನಂದರೂಪ
ಸ್ವಪ್ರಯತ್ನದಿ ಅಲ್ಲ ಮುಮುಕ್ಷುಗಳಿಗಪರೋಕ್ಷ
ಮೋದಮಯ ಶ್ರೀಹರಿಯ ಪ್ರಸಾದದಿಂದಲೇ ೧೭

ಜ್ಞಾನಿಗೆ ಪ್ರತ್ಯಕ್ಷ ಹರಿಯ ಅವ್ಯಕ್ತತ್ವ
ಅನ್ಯರಿಗೆ ವೇದ್ಯ ಸೂಕ್ಷ್ಮತ್ವಾನುಮಾನದಿ
ತನ್ಮಾತ್ರ ತೇಜಸ್ಸು ಭೌತಿಕವು ಎಂಬಂಥ
ಅಗ್ನಿಯ ಸೂಕ್ಷ್ಮತ್ವ ಸ್ಥೂಲತ್ವವೋಲ್ಲ ೧೮

ಎಲ್ಲೆಲ್ಲೂ ಎಂದೆಂದೂ ಏಕಪ್ರಕಾರದಲ್ಲಿ
ಳಾಳಕನು ಅವ್ಯಕ್ತರೂಪ ಇರುತಿಹನು
ಇಲ್ಲ ಇವಗೆ ಎಂದೂ ಎಲ್ಲೂ ಪ್ರಾಕೃತರೂಪ
ಒಲಿದು ಕಾಣುವ ತನ್ನ ಇಚ್ಛೆಯಿಂದಲೇ ೧೯

ಮೂಲರೂಪದಿ ಸೂಕ್ಷ್ಮತ್ವ ಅವತಾರಗಳಲಿ
ಸ್ಥೂಲತ್ವವೆಂಬುವ ವಿಶೇಷವು ಇಲ್ಲ
ಇಳೆಯಲ್ಲಿ ಕೃಷ್ಣಾದಿ ರೂಪಗಳ ಕಂಡದ್ದು
ಮಾಲೋಲನಿಚ್ಛೆಯೇ ಪುರುಷಯತ್ನದಿ ಅಲ್ಲ ೨೦

ಅರೂಪಮ ಕ್ಷರಂಬ್ರಹ್ಮ ಸದಾವ್ಯಕ್ತಂ
ಆತ್ಮಾವರೇ ದ್ರಷ್ಟವ್ಯ ಎಂದು
ಈ ರೀತಿ ಅವ್ಯಕ್ತತ್ವ ಅಪರೋಕ್ಷತ್ವ
ಎರಡು ಪೇಳುವ ಶ್ರುತಿ ವಿರೋಧವು ಇಲ್ಲ ೨೧

ಆರಾಧನಾದಿ ಪ್ರಯತ್ನಕ್ಕೂ ಅವ್ಯಕ್ತ
ಉರುಸುಖಮಯ ಅಪ್ರಾಕೃತ ಅವಿಕಾರಿ
ಪರಮಪುರುಷ ಹರಿಯ ಇಚ್ಛಾಪ್ರಸಾದದಿಂ
ಅಪರೋಕ್ಷ ಮೋಕ್ಷಗಳು ಲಭ್ಯಯೋಗ್ಯರಿಗೆ ೨೨

ವನಜನಾಭನ ರೂಪ ಗುಣಮಹಿಮೆ ಕೇಳಿ
ಅನುಭವಕೆ ಬರುವಂಥ ಮನನ ಸುಧ್ಯಾನ
ಅನಘ ಹರಿಯಲಿ ಭಕ್ತಿ ಸುಖಬಾಷ್ಪ ಸುರಿಸೆ
ತನ್ನಿಚ್ಛೆಯಿಂದಲೆ ಅಪರೋಕ್ಷವೀವ ೨೩

ಬ್ರಹ್ಮಪುರ ವನರುಹ ವೇಷ್ಮವ್ಯೋಮಸ್ಥ
ದೇಹ ಸರ್ವಾಂಗಸ್ಥ ಸರ್ವನಾಡಿಸ್ಥ
ಬಹಿರಂತರ ಸರ್ವಮೂರ್ತಾ ಮೂರ್ತಸ್ಥ
ಮಹಾಮಹಿಮ ಹರಿಯು ಸರ್ವತ್ರ ಪ್ರಸಿದ್ಧ ೨೪

ಸರ್ವತ್ರ ವ್ಯಾಪ್ತನು ಸತ್ತಾದಿ ದಾತನು
ಸರ್ವದೊಳು ಸದಾಪೂರ್ಣ ಅಖಿಳ ಸದ್ಭಕ್ತ
ಸರ್ವೇಶ ಸರ್ವಾಧಾರನಾಗಿಹ ಸ್ವಾಮಿ
ದೇವಿ ಲಕ್ಷ್ಮೀರಮಣ ವಿಷ್ಣು ನರಸಿಂಹ ೨೫

ಉಗ್ರವೀರನು ಮಹಾವಿಷ್ಣು ತೇಜಃಪುಂಜ
ಸುಪ್ರಕಾಶಿಪ ಸರ್ವತೋಮುಖ ನೃಸಿಂಹ

ಅರಿಗಳಿಗೆ ಭೀಷಣನು ಭಕ್ತರಿಗೆ ಇಷ್ಟಪ್ರದ
ಸಂರಕ್ಷಕ ನಮೋ ಮೃತ್ಯುಗೇ ಮೃತ್ಯು ೨೬

ಪ್ರೋದ್ಯರವಿನಿಭದೀಪ್ತ ವರ್ತುಲ ನೇತ್ರತ್ರಯ
ಹಸ್ತದ್ವಯ ಆಜಾನು ಮಹಾಲಕ್ಷ್ಮಿಯುತನು
ಸುದರ್ಶಿನಿ ಶಂಖಿಯುತ ಕೋಟ್ಯಾರ್ಕಾಮಿತತೇಜ
ಉತ್ಕೃಷ್ಟ ಅಖಿಳ ಸಚ್ಛಕ್ತ ನರಸಿಂಹ ೨೭

ಇಂಥಾ ವಿಷಯಗಳ ಜಿಜ್ಞಾಸ ಉಪದೇಶ
ಹಿತಮಾತ ಗೋಪಾಲದಾಸಾರ್ಯರಿಂದ
ಮುದದಿಂದ ಶ್ರೀನಿವಾಸ ಆಚಾರ್ಯರು ಕೊಂಡು
ಪಾದಕೆರಗಿ ಹರಿ ಅಂಕಿತ ಬೇಡಿದರು ೨೮

ವಾರಿಜಾಸನ ಪಿತನ ಪೂರ್ಣ ಪ್ರಜ್ಞರ ಹೃತ್‌ಸ್ಥ
ಶಿರಿ ಪ್ರಸನ್ನ ಶ್ರೀನಿವಾಸನಿಗೆ ಪ್ರಿಯತರರು
ಪುರಂದರ ವಿಜಯ ಗೋಪಾಲದಾಸಾರ್ಯರ
ಚರಣರತ ಜಗನ್ನಾಥ ದಾಸಾರ್ಯ ಶರಣು ೨೯

– ತೃತೀಯ ಕೀರ್ತನೆ ಸಂಪೂರ್ಣಂ –

೧೩೯–೩

ಶ್ರೀ ರಮಣಿ ಕರಕಮಲ ಪೂಜಿತ ಪದಾಂಬೋಜ
ಸರಸಿಜಾಸನ ಶಿವಾದ್ಯಮರ ಜನವಿನುತ
ಉರುಗುಣಾರ್ಣವ ಜಗಜ್ಜನ್ಮಾದಿಕರ್ತ ನರ–
ಹರಿಗೆ ಪ್ರಿಯ ಜಗನ್ನಾಥದಾಸಾರ್ಯ ಶರಣು ಪ.

ಹರಿದಾಸ ಶ್ರೇಷ್ಠವರ ಕರುಣಿ ಪುರಂದರಾರ್ಯ
ಗುರುಮಹಂತರು ಕೃಪಾನಿಧಿಯು ವಿಜಯಾರ್ಯ
ಈರ್ವರನು ಸಂಸ್ಮರಿಸಿ ಗೋಪಾಲದಾಸರು
ಪರಮ ದಯ ತೋರಿದರು ಆಚಾರ್ಯರಲ್ಲಿ ೧

ಹರಿದಾಸ ಪಂಥದಲಿ ಆಚಾರ್ಯರು ಸೇರಿ
ಹರಿವಾಯು ಸೇವೆಯು ಸಜ್ಜನೋದ್ಧಾರ
ಧರೆಯಲ್ಲಿ ಮಹತ್ಕಾರ್ಯ ಆಗುವುದು ಎಂದು
ಅರಿವರು ಗೋಪಾಲದಾಸರು ಮೊದಲೇ ೨

ಹರಿದಾಸಗೋಷ್ಠಿಯು ವೆಂಕಟಾಚಲ ಯಾತ್ರೆ
ಚರಿಸೆ ವೆಂಕಟ ರಮಣನಾಲಯದಲ್ಲಿ
ಶ್ರೀ ಶ್ರೀನಿವಾಸನು ಈ ಆಚಾರ್ಯಗೆ
ನೇರವಾಗಿ ತಾನೆ ಕೊಟ್ಟಿಹ ಪ್ರಸಾದ ೩

ನೆನೆದರು ಈಗ ಗೋಪಾಲದಾಸಾರ್ಯರು
ತನ್ನ ರೂಪದಿ ಅಂದುಬಂದು ವಾತ್ಸಲ್ಯದಿ
ಅನ್ನ ನಾಮಾವೆಂಕಟಕೃಷ್ಣ ಜಗದೀಶ
ಅನ್ನ ಕೊಟ್ಟು ಒಲಿದಿಹನು ಆಚಾರ್ಯಗೆ ೪

ಪುರಂದರ ದಾಸಾರ್ಯರು ಒಲಿದು ದಯದಿ ತಾನೆ
ಯಾರಿಗೆ ತಿಮ್ಮಣ್ಣಾರ್ಯರದ್ವಾರ ಉಪದೇಶ
ಅನುಗ್ರಹ ನಾಮಾಂಕಿತವ ಇತ್ತರೋ ಆ
ನರಸಿಂಹ ದಾಸಾರ್ಯರ ಪುತ್ರರು ಇವರು ೫

ಹರಿದಾಸರ ಪುತ್ರರಿವರು ಯೋಗ್ಯರು ಎಂದು
ಹರಿದಾಸಪದ್ಧತಿ ಆರಾಧನಾಕ್ರಮ
ಶಾಸ್ತ್ರ ಜಿಜ್ಞಾಸೆ ಅನುಸಂಧಾನ ರೀತಿಯೂ
ಅರುಪಿದರು ಆಚಾರ್ಯರಿಗೆ ದಾಸಾರ್ಯ ೬

ನೆರೆದಿದ್ದರೂ ಗೋಪಾಲದಾಸಾರ್ಯರ
ಪರಮಪ್ರೀತಿ ಪಾತ್ರ ಈಮಹಂತರು
ವರದ ಗೋಪಾಲರು ತಂದೆ ಗೋಪಾಲರು
ಗುರು ಗೋಪಾಲದಾಸಾದಿ ಸೂರಿಗಳು ೭

ಭಾರತೀಪತಿ ಅಂತರ್ಗತ ಹರಿ ಶ್ರೀಶ
ಗುರುಗಳ ಒಳಗಿದ್ದು ಜ್ಞಾನೋಪದೇಶ

ಹರಿದಾಸತ್ವದ ವರನಾಮಾಂಕಿತವ
ಕಾರುಣ್ಯದಿ ಈವ ಅಧಿಕಾರಿಗಳಿಗೆ ೮

ವನರುಹೇಕ್ಷಣ ಯಜ್ಞನಧಿಷ್ಠಾನ ಯಜ್ಞನ
ವನಜಪಾದ ದ್ವಯವು ಮನವಾಕ್ಕಿಲಿಹುದು
ಅನಿಲ ಸೋಕಿದ ತೂಲರಾಶಿಯಂದದಲಿ
ಏನು ಮೈಲಿಗೆಯಾದರು ಸುಟ್ಟು ಪೋಪುವು ೯

ತುಳಸಿದಳ ನಿರ್ಮಾಲ್ಯ ಹರಿಗೆ ಅರ್ಪಿತವಾದ್ದು
ಜಲಸ್ನಾನ ತರುವಾಯ ಧ್ಯಾನ ಸ್ನಾನ
ಜಲಜನಾಭನ ದಿವ್ಯನಾಮ ಸಂಕೀರ್ತನೆ
ಎಲ್ಲ ಮೈಲಿಗೆ ದೋಷ ಪರಿಹರಿಸುವುವು ೧೦

ಶೀಲ ತನುಮನದಿಂದ ಗುರು ಪರಮಗುರುದ್ವಾರ
ಮಾಲೋಲ ಪ್ರಿಯತಮ ಜಗದೇಕ ಗುರುವೆಂದು
ಗಾಳಿದೇವನು ಮಧ್ವ ಭಾವಿಬ್ರಹ್ಮನ ಸ್ಮರಿಸಿ
ಕಾಲಿಗೆ ಎರಗಿ ಶ್ರೀಹರಿಯ ಚಿಂತಿಪುದು ೧೧

ವಾಯುದೇವನ ಒಲಸಿಕೊಳ್ಳದ ಜನರಿಗೆ
ಭಯಬಂಧ ನಿವೃತ್ತಿಯು ಸದ್ಗತಿಯು ಇಲ್ಲ
ಮಾಯಾಜಯೇಶನ ಪರಮ ಪ್ರಸಾದವು
ವಾಯು ಒಲಿದರೆ ಉಂಟು ಅನ್ಯಥಾ ಇಲ್ಲ ೧೨

ಬಲಜ್ಞಾನಾದಿಗಳಲ್ಲಿ ಹ್ರಾಸ ಇಲ್ಲವು ಇವಗೆ
ಎಲ್ಲ ಅವತಾರಗಳು ಸಮವು ಅನ್ಯೂನ
ಶುಕ್ಲ ಶೋಣಿತ ಸಂಬಂಧವು ಇಲ್ಲವೇ ಇಲ್ಲ
ಇಳೆಯಲಿ ಜನಿಸಿಹ ಹನುಮ ಭೀಮ ಮಧ್ವ ೧೩

ಮಾತರಿಶ್ವ ಸೂತ್ರ ಪವಮಾನ ಮುಖ್ಯ ಪ್ರಾಣ
ತ್ರೇತೆಯಲಿ ಹನುಮ, ದ್ವಾಪರದಲಿ ಭೀಮ
ಈತನೇ ಕಲಿಯುಗದೆ ಮಧ್ವಾಭಿದಾನದಿ
ಬಂದಿಹನು ಸಜ್ಜನರ ಉದ್ಧಾರಕಾಗಿ ೧೪

ರಥನಾಭಿಯಲಿ ಅರವೋಲ್ ಪ್ರಾಣನಲಿ ಸರ್ವವೂ
ಪ್ರತಿಷ್ಠಿತವು ಜೀವರ ದೇಹಕಾಧಾರ
ತತ್ವದೇವಾದಿಗಳ ವರಿಷ್ಟ ಚೇಷ್ಟಕನು
ಈ ವಾಯುವೇ ಬ್ರಹ್ಮಧಾಮನಾಗಿಹನು ೧೫

ಬ್ರಹ್ಮಧಾಮನು ಜೀವೋತ್ತಮ ವಾಯು ಆದುದರಿಂದ
ಬ್ರಹ್ಮ ಸುಗುಣಾರ್ಣವ ಸರ್ವೋತ್ತಮ ವಿಷ್ಣುನ
ಅಹರ್ನಿಶಿ ಸ್ಮರಿಪುದು ಈ ಬ್ರಹ್ಮಧಾಮನಲಿ
ಬ್ರಹ್ಮಪ್ರಸಾದ ಆಕಾಂಕ್ಷಿ ಅಧಿಕಾರಿ ೧೬

ಬ್ರಹ್ಮ ಗುಣಪೂರ್ಣ ಹರಿಗೋಪಾಲ ವೆಂಕಟನೆ
ಬ್ರಹ್ಮಾಂಡ ಸರ್ವವ ಪಾಲಿಸುವ ಪ್ರಭುವು
ಅಹೋರಾತ್ರಿ ಏಳುದಿನ ಗಿರಿ ಎತ್ತಿ ಮಳೆ ತಡೆದ
ಮಹಾದ್ರಿಧೃಕ್ ಅನ್ನಾದ ಅನ್ನದ ಜಗನ್ನಾಥ ೧೭

ಗೋವರ್ಧನಗಿರಿ ಎತ್ತಿ ಜನ ಪಶು ಕಾಯ್ದ
ಶ್ರೀವರ ಗೋಪಾಲ ವಿಠ್ಠಲ ರುಕ್ಮಿಣೀಶ
ದಿವ್ಯ ಮಂದಿರದಲ್ಲಿ ಭೀಮರತಿಯ ತೀರದಲಿ
ದೇವ ನಿಂತಿಹ ಶ್ರೀನಿವಾಸ ಜಗನ್ನಾಥ ೧೮

ಶ್ರೀನಿವಾಸ ವೆಂಕಟನೆ ಗೋಪಾಲ ವಿಠ್ಠಲನು
ತನ್ನ ಭಕ್ತನಿಗೊಲಿದು ಪಂಢರೀಪುರದಿ
ತಾನೆ ಬಂದು ಅಲ್ಲೇ ನಿಂತು ಭಕ್ತರು ಮಾಳ್ಪ
ಗಾನ ಸೇವಾ ಕೇಳುತ ಪಾಲಿಸುತಿಹನು ೧೯

ಸರ್ವಾಕ್ಷರ ಉತ್ತಮನು ಸರ್ವೇಶ
ಸರ್ವ ಐಶ್ವರ್ಯಾದಿ ಸಚ್ಛಕ್ತಿ ಪೂರ್ಣ
ಶಿವ ಸುರಪುರಿಗೆ ಸುಖಜ್ಞಾನಾದಿಗಳನೀವ
ದೇವಿ ಶ್ರೀ ಲಕ್ಷ್ಮೀಶ ಠಲಕ ವಿಠ್ಠಲನು ೨೦

ಜಡಭವ ಅಂಡದ ಸೃಷ್ಟ್ಯಾದಿ ಕರ್ತನಿವ
ತಟಿತ್ಕೋಟಿ ಅಮಿತ ಸ್ವಕಾಂತಿಯಲಿ ಜ್ವಲಿಪ

ಜಡಜ ಭವಪಿತ ಡರಕ ಜಗನ್ನಾಥ ವಿಠ್ಠಲನು
ನೋಡಲಿಕೆ ಕಾಣುವ ಅವನಿಚ್ಛೆ ದಯದಿ ೨೧

ಜಲದಲ್ಲಿ ಜಲರೂಪ ಜಲಜೇಕ್ಷಣನಿಹನು
ಜಲದಲ್ಲಿ ನೀ ಮುಳುಗಿ ಮೇಲೇಳುವಾಗ
ಜ್ವಲಿಸುವ ಶಿರೋಪರಿ ಜಗನ್ನಾಥ ವಿಠ್ಠಲನು
ಒಳನಿಲುವ ಹೊರಕಾಂಬ ಎಲ್ಲರ ಸ್ವಾಮಿ ೨೨

ಇಂಥಾಸುವಾಕ್ಯ ಧಾರಾನುಗ್ರಹವ
ಹಿತದಿ ಗೋಪಾಲದಾಸಾರ್ಯರು ಎರೆಯೆ
ಮುದ ಬಾಷ್ಪ ಸುರಿಸುತ್ತ ಶ್ರೀನಿವಾಸಾಚಾರ್ಯ
ಭಕ್ತಿಯಲಿ ನಮಿಸಿದರು ಗುರುಚರಣಗಳಿಗೆ ೨೩

ವಾಸುದೇವನ ಒಲಿಸಿಕೊಂಡ ಐಜೀಯವರು
ಈಶಾನುಗ್ರಹ ಪಡೆದ ದಾಸಾರ್ಯರುಗಳು
ಆ ಸಭೆಯಲಿ ಇದ್ದ ಹರಿಭಕ್ತ ಭೂಸುರರು
ಆಶೀರ್ವದಿಸಿದರು ಆಚಾರ್ಯರನ್ನು ೨೪

ಉತ್ಕೃಷ್ಟ ನಿಗಮಘೋಷಗಳು ಮಂಗಳಧ್ವನಿ
ಹರಿನಾಮ ಕೀರ್ತನ ಸುಸ್ವರ ಸಂಗೀತ
ದಾರಿಯಲಿ ಎದುರ್ಗೊಂಡ ಶುಭಕರ ಶಕುನವು
ಹೊರಟರಾಚಾರ್ಯ ವಿಠ್ಠಲ ದರ್ಶನಕೆ ೨೫

ವಾರಿಜಾಸನ ಪಿತನು ಪೂರ್ಣಪ್ರಜ್ಞರ ಹೃತ್‌ಸ್ಥ
ಶಿರಿ ಪ್ರಸನ್ನ ಶ್ರೀನಿವಾಸನಿಗೆ ಪ್ರಿಯತರು
ಪುರಂದರ ವಿಜಯಗೋಪಾಲ ದಾಸಾರ್ಯರ
ಚರಣರತ ಜಗನ್ನಾಥ ದಾಸಾರ್ಯ ಶರಣು ೨೬

– ಚತುರ್ಥ ಕೀರ್ತನೆ ಸಂಪೂರ್ಣಂ –

೧೩೯–೪

ಶ್ರೀ ರಮಣಿ ಕರಕಮಲ ಪೂಜಿತ ಪದಾಂಬೋಜ
ಸರಸಿಜಾಸನ ಶಿವಾದ್ಯಮರ ಜನವಿನುತ
ಉರುಗುಣಾರ್ಣವ ಜಗಜ್ಜನ್ಮಾದಿಕರ್ತ ನರ–
ಹರಿಗೆ ಪ್ರಿಯ ಜಗನ್ನಾಥದಾಸಾರ್ಯ ಶರಣು ಪ.

ಗುರುಗಳು ಏಕಾಂತದಲ್ಲಿ ಇತ್ತ ಉಪದೇಶ
ಮರೆಯದೇ ಅನುಸರಿಸಿ ಭೀಮರತಿಯನ್ನು
ಸೇರಿ ವಿಹಿತದಿ ಸಂಕಲ್ಪಾದಿಗಳ ಮಾಡಿ
ನೀರಲ್ಲಿ ಇಳಿದರು ಶ್ರೀನಿವಾಸಾಚಾರ್ಯ ೧

ಸರ್ವ ಜಗತ್ಪಾಲ ಶ್ರೀ ಪಾಂಡುರಂಗವಿಠ್ಠಲನು
ಪ್ರವಾಹ ಸುಳಿಯಿಂದ ಬಡುಗಾತ್ರ ಭಕ್ತನ್ನ
ಕಾಯ್ವುದಕೆ ಗಂಡಾ ಶಿಲಾ ನಿರ್ಮಿಸಿದ ಅಲ್ಲಿ
ದೇವಗುರು ಸ್ಮರಣೆಯಿಂ ಇಳಿದರಾಚಾರ್ಯ ೨

ನರಸಿಂಹ ವಿಠ್ಠಲದಾಸರು ತಂದೆಯ
ಗುರುಗಳು ಗೋಪಾಲ ವಿಠ್ಠಲ ದಾಸರ
ಪರಮ ಗುರುಗಳು ವಿಜಯ ವಿಠ್ಠಲ ದಾಸರ
ಪುರಂದರ ದಾಸರಾಜರ ಸ್ಮರಿಸಿದರು ೩

ತೀರ್ಥಾಭಿಮಾನಿಗಳ ಭಾರತೀಪತಿಯ
ಪದುಮೆ ಪದ್ಮೇಶ ಪಂಡರಿ ನಾಥ ಹರಿಯ
ಮೋದ ಚಿನ್ಮಯ ಜಗನ್ನಾಥನ ಸ್ಮರಿಸುತ್ತ
ಉದಕ ಪ್ರವಾಹದೊಳು ತನುವ ಅದ್ದಿದರು ೪

ಸೀನಪ್ಪ ಶ್ರೀನಿವಾಸ ಶ್ರೀನಿವಾಸಪ್ಪ ಈ
ಶ್ರೀನಿವಾಸಾಚಾರ್ಯ ಒಂದು ಸಲ ಮುಳುಗೇಳೆ
ತನುಗತ ಒಳ ಹೊರಗಿನ ಕಲುಷ ಕಳೆದವು
ಪುನಃ ಮುಳಗೇಳಲು ಸುಪವಿತ್ರರಾದರು ೫

ಪುನಃ ಮುಳುಗಿ ಎದ್ದು ಅ ರ್ಘ್ಯವ ಅರ್ಪಿಸಲು
ಇನನ ಮಂಡಲದಿ ವರವಾಯು ಅಧಿಷ್ಠಾನದಲಿ
ಶ್ರೀ ನಾರಾಯಣ ಸರ್ವಜನ ಹಿತಕರನ
ಆನಂದ ಚಿನ್ಮಾತ್ರ ವಪುಷನ್ನ ಸ್ಮರಿಸಿದರು ೬

ಋಕ್ಸಾಮ ವೇದಗಳಿಂದ ವಾಣೀವಾಯು
ಸುಖಪೂರ್ಣ ನಾರಾಯಣನ ಸ್ತುತಿಸುವರು
ಅಕಳಂಕ ಉನ್ನಾಮ ಸಾಮ ನಾಮ ಹೀಂಕಾರ
ಶ್ರೀಕೃತಿಪತಿ ಪ್ರದ್ಯುಮ್ನಾದಿ ಸ್ವರೂಪ ೭

ಸಪ್ತಕಾಲದಿ ಸಪ್ತಸಾಮ ಪ್ರತಿಪಾದ್ಯನು
ಸಪ್ತಸ್ವರೂಪನು ಆದಿತ್ಯಾಂತಸ್ತ
ಪ್ರದ್ಯುಮ್ನ ವಾಸುದೇವ ವರಾಹ ನಾರಾಯಣ
ಅನಿರುದ್ಧ ನರಸಿಂಹ ಸಂಕರುಷಣ ೮

ಪರಮಗುರು ವಿಜಯ ದಾಸಾರ್ಯರ ಪ್ರೇರಣೆಯಿಂದ
ಗುರುಗಳು ಗೋಪಾಲದಾಸಾರ್ಯರು
ಅರುಹಿದ ಅನುಸಂಧಾನ ಕ್ರಮದಿಂದಲೇ
ಗುರುತಮ ಸಮೀರನಲಿ ಹರಿಯ ಸ್ಮರಿಸಿದರು ೯

ಸೂರ್ಯನೊಳಿಪ್ಪ ಸಮೀರ ಅಧಿಷ್ಠಾನಸ್ಥ
ಸೂರಿಜನ ಪ್ರಾಪ್ಯ ಋಕ್ ಸಾಮಾದಿಸ್ತುತ್ಯ
ಸೂರ್ಯತೇಜಃ ಪುಂಜ ಸ್ಫೂರ್ತಿದ ಜಗತ್ಕರ್ತ ಶ್ರೀ
ಶ್ರೀನಾರಾಯಣಗರ್ಘ್ಯ ಅರ್ಪಿಸಲು ಒಲಿದ ೧೦

ಝಗಝಗಿಪ ತೇಜಸ್ಸು ಶಿರೋಪಕಂಡರು
ಮೂಗಿನಿಂದೊಂದಡಿ ಶಿರದ ಮೇಲೆ
ಜಗನ್ನಾಥವಿಠ್ಠಲ ಎಂದು ಪ್ರಜ್ವಲಿಸಿತು
ಹೇಗೆ ವರ್ಣಿಸುವೆ ಆ ಅದ್ಭುತ ದೃಶ್ಯ ೧೧

ಸರ್ವ ಜಗದ್ರಕ್ಷಕ ವಿಠ್ಠಲನು ತತ್ಕಾಲ
ಪ್ರವಾಹವ ತಡೆಯಲು ನಿರ್ಮಿಸಿದ ಶಿಲೆಯು

ಪ್ರಜ್ವಲಿಪ ಈ ದಿವ್ಯ ಹರಿನಾಮ ಅಂಕಿತಕ್ಕೆ
ಐವತ್ತು ಅಂಗುಲ ಹಿಂದೆ ನಿಂತಿತ್ತು ೧೨

ಕ್ಷಣಮಾತ್ರದೊಳಗೆ ಈ ತಟಿತ್ಕೋಟಿ ನಿಭಜ್ಯೋತಿ
ಫಣೆಮುಂದೆ ನಿಂತಿತು ಆಗ ಆಚಾರ್ಯ
ಚೆನ್ನಾಗಿ ನೋಡಿದರು ಹರಿ ಇಚ್ಛಾಶಕ್ತಿಯಿಂ
ಶ್ರೀನಿವಾಸ ವಿಜಯ ಗೋಪಾಲ ವಿಠ್ಠಲನ ೧೩

ಶ್ರೀ ಶ್ರೀನಿವಾಸನೇ ವಿಜಯ ವಿಠ್ಠಲನಾಗಿ
ಶ್ರೀ ಶ್ರೀನಿವಾಸ ಗೋಪಾಲ ವಿಠ್ಠಲನಾಗಿ
ಶ್ರೀ ಶ್ರೀನಿವಾಸ ಶ್ರೀ ಜಗನ್ನಾಥ ವಿಠ್ಠಲನಾಗಿ
ಶಿರಿ ಜಗನ್ನಾಥ ದಾಸಾರ್ಯರು ನೋಡಿದರು ೧೪

ಶ್ರೀ ಶ್ರೀನಿವಾಸನೆ ಪ್ರಸನ್ನನು ಆಗಿ
ತೋರಿಹನು ಜಗನ್ನಾಥ ವಿಠಲನೆನಿಸಿ
ತಿರುಪತಿ ಶ್ರೀನಿಧಿಯೇ ಪಂಡರಿ ವಿಠ್ಠಲನು
ಸೂತ್ರ ನೋಡಿ ನಸ್ಥಾನ ತೋಪಿ ೧೫

ಶ್ರೀ ರುಕ್ಮಿಣೀಪತಿ ಪರಂಜ್ಯೋತಿ ಪರಂಬ್ರಹ್ಮ
ಉರು ಅಖಿಳ ಸದ್ಭಕ್ತ ಜಗನ್ನಾಥ ವಿಠ್ಠಲ
ಶಿರಿ ಜಗನ್ನಾಥದಾಸರ ಹೃದಯ ಪದ್ಮದೊಳು
ಸೇರಿದನು ಜ್ವಲಿಸುತಿಹ ಸರ್ವೋತ್ತಮ ಅಲ್ಲಿ ೧೬

ಎಂಟು ಅಕ್ಷರ ಮೂಲಮಂತ್ರದಿ ನಾರಾಯಣನ
ವಿಠ್ಠಲ ಹಯಗ್ರೀವ ವೆಂಕಟೇಶಾದಿ
ಷಡಕ್ಷರಿ ವಿಷ್ಣು ರಾಮ ಕೃಷ್ಣಾದಿಗಳ
ಕ್ರೋಡ ನರಸಿಂಹಾದಿಗಳನು ಜಪಿಸಿದರು ೧೭

ಗುರು ಪರಮ ಗುರು ಪೇಳ್ದ ರೀತಿಯಲಿ ಜಪಚರಿಸಿ
ಶ್ರೀ ರುಕ್ಮಿಣಿ ವಿಠ್ಠಲ ಮಂದಿರಕೆ ಪೋಗಿ
ಪುರಂದರಾರ್ಯರ ನಮಿಸಿ ಗುರು ಪರಮ ಗುರುಗಳ
ಸ್ಮರಿಸಿ ಒಳಪೊಕ್ಕರು ವಿಠ್ಠಲನ್ನ ನೋಡೆ ೧೮

ಶ್ರೀ ಮಧ್ವರಮಣ ನಿನ್ನ ಅದ್ವಿತೀಯ ಮಹಿಮೆ
ಈ ಮಹೋತ್ತಮ ಕೃತಿ ಪುರಂದರದಾಸರದು
ಅಮಲ ಭಕ್ತಿಯಲ್ಲಿದನ್ನ ಅರ್ಥ ಅರಿತು ಪಠಿಸಿ
ಶ್ರೀಮಂದಿರದೊಳು ಪ್ರವೇಶ ಮಾಡಿದರು ೧೯

ತ್ರಿಜಗದೀಶನ ಪಾದ ಪದ್ಮಗಳ ನೋಡುತ್ತ
ನಿಜಭಕ್ತಿ ಭಾವದಲಿ ಸಾಷ್ಟಾಂಗ ನಮಿಸಿ
ಅಜ ಭವೇಂದ್ರಾದಿ ಸುರವಂದ್ಯನ್ನ ಕೇಶಾದಿ
ರಾಜೀವ ಪಾದಾಂತ ದರುಶನ ಮಾಡಿದರು ೨೦

ಜ್ವಲಿಸುವ ಕಿರೀಟ ಸುಳಿಗುರುಗಳು ಫಣಿಯ ತಿಲಕ
ಬಿಲ್ಲುವೋಲ್ ಸುಂದರ ಭ್ರೂ ಮುಖಕಮಲ
ಜಲಜೇಕ್ಷಣ ಮುಗುಳುನಗೆಯು ತಟಿದಂದಿ
ಪೊಳೆವ ಕುಂಡಲಕರ್ಣ ಕಂಬುಗ್ರೀವ ೨೧

ವನಮಾಲೆ ಎಳೆ ತುಳಸಿದಳ ಹಾರ ಕೊರಳಲ್ಲಿ
ಘನಬಾಹು ವಿಸ್ತಾರವಕ್ಷ ಶ್ರೀವತ್ಸ
ಸ್ವರ್ಣಮಣಿ ಗ್ರೈವೇಯ ಕೌಸ್ತುಭ ರತ್ನವು
ಕಣ್ಣಾರ ಕಾಣಲಾನಂದ ಸೌಂದರ್ಯ ೨೨

ಮೂರುಗೆರೆ ಉದರದಲಿ ವನರುಹ ನಾಭಿಯು
ಕರಗಳು ಕಟಿಯಲ್ಲಿ ಶಂಖಾರವಿಂದ
ಪುರುಟಮಣಿ ಗಣಸೂತ್ರ ಪೀತಾಂಬರ ಉಡಿ
ಸ್ಫುರದ್ರತ್ನ ನೂಪುರ ಸಮಪಾದದ್ವಯವು ೨೩

ತಟಿತ್ಕೋಟಿನಿಭ ತನ್ ಕಾಂತಿಯಲಿ ಜ್ವಲಿಸುವ
ಸಾಟಿಯಿಲ್ಲದ ಸುಂದರಾಂಗ ಶ್ರೀರಮಣ
ವಿಠ್ಠಲ ಕೃಪಾನಿಧಿ ಶರಣಜನ ಪಾಲನ್ನ
ಹಾಡಿ ಸ್ತುತಿಸಿದರು ಜಗನ್ನಾಥ ದಾಸಾರ್ಯ ೨೪

ಫಣಿಪಶಾಯಿಯ ಅನಂತ ಪದ್ಮನಾಭನು ತನ್ನ
ಆನಂದಲೀಲೆಯಲಿ ಜಗವ ಪಡೆಯುವನು

ಆನಂದಲೀಲೆಯಲಿ ಅವತಾರ ರೂಪಗಳ
ತಾನೇ ಪ್ರಕಟಿಸಿ ಸಜ್ಜನರ ಪಾಲಿಸುವ ೨೫

ದೇಶಗುಣಕಾಲ ಅಪರಿಚ್ಛಿನ್ನನು ಅನಂತನು
ಶ್ರೀಶಸರ್ವೇಶ ಚಿನ್ಮಯನು ಅನಘ
ಐಶ್ವರ್ಯ ಪೂರ್ಣಜಗದೇಕ ಪಾಲಕನು
ಅಸಮ ಸರ್ವೋತ್ತಮನು ಸುಖಮಯನು ಸುಖದ ೨೬

ಮೀನ ಕೂರ್ಮ ಸ್ತ್ರೀ ಅಜಿತ ಧನ್ವಂತರಿ ಕ್ರೋಢ
ಶ್ರೀನಾರಸಿಂಹ ವಟುಭೃಗು ರಾಮರಾಮ
ಕೃಷ್ಣ ಜಿನಸುತ ಕಲ್ಕಿ ಠಲಕ ವೆಂಕಟರಮಣ
ಆನಂದಚಿತ್ತನು ಅನಂತ ಅವತಾರ ೨೭

ದಾಸೋಹಂ ತವ ದಾಸೋಹಂ ಎಂದು
ದಾಸವರ್ಯರು ಬಿನ್ನೈಸಿ ಸ್ತುತಿಸಿದರು
ನಸುನಗುತ ವಾತ್ಸಲ್ಯದಿಂದ ವಿಠ್ಠಲನು
ವಿಶೇಷಾಪರೋಕ್ಷ ಅನುಗ್ರಹಿಸಿದನುದಯದಿ ೨೮

ಸೌದಾಮಿನಿಗಮಿತ ವಿದ್ಯುತ್ ಕಾಂತಿಯಿಂದ
ದಿಕ್ಕು ವಿದಿಕ್ಕುಗಳ ರಂಜಿಸುವ ರೂಪ
ದಿಂದ ಪಾಲ್ಗಡಲಲಿ ಆವಿರ್ಭವಿಸಿದ ಶ್ರೀ
ಇಂದಿರೆಯೆ ರುಕ್ಮಿಣಿ ಸೌಂದರ್ಯಪೂರ್ಣೆ ೨೯

ಮಾಯಾ ಜಯಾ ಕೃತಿಶಾಂತಿ ಸೀತಾಲಕ್ಷ್ಮಿ
ತೋಯ ಜಾಲಯ ಚಿತ್ಪ್ರಕೃತಿ ಭೂದುರ್ಗಾ
ತೋಜಯಾಕ್ಷಿ ವೇದವತಿ ದಕ್ಷಿಣಾ ಶ್ರೀ
ಜಯಂತಿ ಸತ್ಯಾರುಕ್ಮಿಣಿ ಸುಂಧುಕನ್ಯಾ ೩೦

ಸರ್ವ ಜಗಜ್ಜನನಿಯು ಸರ್ವ ವಿಧದಲಿ ಹರಿಯ
ಸೇವಿಸುತಿಹಳು ಸದಾ ನಿತ್ಯಾವಿಯೋಗಿನಿ
ದೇವದೇವೋತ್ತಮ ರಾಜರಾಜೇಶ್ವರನು ವಿಠ್ಠಲನು
ದೇವಿ ಶ್ರೀ ರಾಜರಾಜೇಶ್ವರಿಯು ರುಕ್ಮಿಣಿಯು ೩೧

ಜ್ವಲಿಸುವ ಮುತ್ತು ನವರತ್ನದಿ ಕಿರೀಟ
ಒಳ್ಳೆ ಪರಿಮಳ ಹೂವು ಮುಡಿದಂತ ತುರುವು
ಫಾಲದಲಿ ಶ್ರೇಷ್ಠತಮ ಕಸ್ತೂರಿ ತಿಲಕವು
ಪೊಳೆವ ಪೂರ್ಣೇಂದು ನಿಭ ಮೂಗುಬೊಟ್ಟು ३.೨

ಅಂಬುಜಾಕ್ಷಿ ದಿವ್ಯ ಮುತ್ತಿನ ತೋಡುಗಳು
ಗಂಭೀರ ಸೌಭಾಗ್ಯದ ಕೃಪಾನೋಟ
ಕಂಬುಕಂಠದಿ ಮಂಗಳ ಸೂತ್ರ ಕರಯುಗದಿ
ಅಂಬುಜ ವರಕೊಡುವ ಅಭಯ ಹಸ್ತಗಳು ೩೩

ಕಂಧರದಲಿ ಪರಿಮಳ ಕಮಲ ಮಾಲಾ
ಪೀತಾಂಬರ ದಿವ್ಯ ಕುಪ್ಪಸ ಮೇಲ್ವಟ್ಟೆ
ವಸ್ತ್ರವು ಸ್ವರ್ಣಸರ್ವಾಭರಣ ಭೂಷಣವು
ಪಾದ ಉಂಗುರ ಪೆಂಡೆ ಕಂಡು ನಮಿಸಿದರು ೩೪

ಜಗನ್ನಾಥ ವಿಠ್ಠಲನೂ ಜಗನ್ಮಾತೆ ರುಕ್ಮಿಣಿಯೂ
ಜಗನ್ನಾಥದಾಸರಿಗೆ ಔತಣ ಮಾಡಿದ್ದು
ಜಗತ್ತಲ್ಲಿ ಭಕ್ತಜನರೆಲ್ಲ ಪೇಳ್ತಿಹರು
ಜಗದೀಶ ಪಂಢರೀ ವಿಠ್ಠಲನ ಮಹಿಮೆ ೩೫

ಕೇಶವ ನಾರಾಯಣ ಮಾಧವ ಗೋವಿಂದ
ಶ್ರೀಶ ವಿಷ್ಣು ಮಧುಸೂದನ ತ್ರಿವಿಕ್ರಮ
ಈಶ ವಾಮನ ಶ್ರೀಧರ ಹೃಷಿಕೇಶ
ರಮೆಯರಸ ಪದ್ಮನಾಭ ದಾಮೋದರ ೩೬

ಸಂಕರುಷಣ ವಾಸುದೆವ ಪ್ರದ್ಯುಮ್ನ ನಮೋ
ಅಕಳಂಕ ಅನಿರುದ್ಧ ಪುರುಷೋತ್ತಮ
ನಿಷ್ಕಳ ಅಧೋಕ್ಷಜ ನರಸಿಂಹ ಅಚ್ಯುತ
ಶ್ರೀಕರ ಜನಾರ್ದನ ಉಪೇಂದ್ರ ಹರಿಕೃಷ್ಣ ೩೭

ರಮಾಪತಿ ರಮಾಯುತನು ಶ್ರೀಹರಿಯ ರೂಪಗಳ
ಬ್ರಹ್ಮವಾಯು ವಾಣೀಭಾರತಿ ಉಮೇಶ

ಉಮಾ ತತ್ವದೇವದಿಕ್ಪಾಲಕರು ಗಂಗಾ
ಕರ್ಮಮಾನಿ ಪುಷ್ಕರಾದಿಗಳೊಳ್ ತಿಳಿದರು ೩೮

ಭೋಜನ ಪದಾರ್ಥದಲು ತದ್ಗತ ಶಬ್ದಂಗಳಲು
ಭೋಜ್ಯಗಳ ಬಡಿಸುವರಲ್ಲೂ ಕ್ಷೇತ್ರದಲ್ಲೂ
ಭೋಜಭಿಮಾನಿಗತ ಖಂಡಾಖಂಡಗನು
ಭಜನೀಯ ಸ್ಥೂಲಭುಕ್ ಅವ್ಯಯನ ಕಂಡರು ೩೯

ಕರುಣಾಬ್ಧಿ ಶ್ರೀ ಹರಿಯ ಔದಾರ್ಯ ಏನೆಂಬೆ
ಶ್ರೀ ಶ್ರೀನಿವಾಸನು ಅಂದು ತಿರುಪತಿಯಲ್ಲಿ
ಶಿರಿ ವಿಜಯಾರ್ಯರ ರೂಪದಿ ಪ್ರೇರಿಸಿ
ಧಾರೆಯೆರಿಸಿದ ಆಯಸ್ ಗುರುಗಳ ಕೈಯಿಂದ ೪೦

ಶ್ರೀ ಶ್ರೀನಿವಾಸನ ಮಹಾದ್ವಾರಕೆದುರಾಗಿ
ಹಾರೆ ಕಲ್ಲುಮಂಟಪ ಆಗ್ನೇಯ ದಿಕ್ಕು
ಎರಡನೆಯದೋ ಮೂರನೆಯದೋ ಅಂಕಣದ ಖೋಲಿ
ಹರಿದಾಸರು ಇದ್ದ ಮುಖಾಮಿ ಬಿಡಾರ ೪೧

ಎಳೆಕೆಂಪು ರೋಜ ಊದಾವರ್ಣದಿ ಅಂಚು
ಬಿಳಿರೇಷ್ಮೆ ವಸ್ತ್ರವ ಮೇಲ್ ಹೊದ್ದುಕೊಂಡು
ಮಲಗಿ ಚಲಿಸದೆ ನಿತ್ರಾಣನಾಗಿದ್ದವಗೆ
ಒಲಿದು ಆಯುರ್ದಾನ ಮಾಡಿಸಿದ ಕರುಣಿ ೪೨

ಗುರುಗಳು ಗೋಪಾಲದಾಸರ ರೂಪದಿಂದ ಬಂದು
ಶಿರಿವರನು ತಾನೇನೆ ಅನ್ನಪ್ರಸಾದ
ಕರದಲ್ಲಿ ಇತ್ತನು ಅವನೇವೆ ಇಂದು
ಶಿರಿಸಹ ಅಮೃತಾನ್ನ ಔತಣವನ್ನಿತ್ತ ೪೩

ಶಿರಿಯ ವಾತ್ಸಲ್ಯ ದಯೆ ಏನೆಂದು ಪೇಳಲಿ
ಚಾರು ದೇಷ್ಣಾಹ್ವಯ ತನ್ನಸುತ ಈಗ
ವರಗೋಪಾಲದಾಸರು ಅವರ ಶಿಷ್ಯ
ರಿವರೆಂದು ಪ್ರೀತಿಯಲಿ ಔತಣ ಮಾಡಿಹಳು ೪೪

ಈ ರೀತಿ ಹರಿಶಿರಿ ಇತ್ತ ಔತಣ ಮತ್ತು
ಹರಿಯ ಕೈಯಿಂದ ಹರಿಗರ್ಪಿತ ಮಾಲಾದಿ
ಹರಿ ಪ್ರಸಾದವ ಕೊಂಡು ಪಂಡರಿಪುರದಿಂದ
ಹೊರಡಲಾದರು ಜಗನ್ನಾಥದಾಸಾರ್ಯ ೪೫

ನರಸಿಂಹಾದಾಸಾರ್ಯರಾದ ತನ್ನ ತಂದೆಗೆ
ಗುರುಗಳು ಪುರಂದರ ದಾಸಾರ್ಯರೆಂದು
ಪರಮಗುರು ವಿಜಯ ದಾಸಾರ್ಯರ ಗುರುಯೆಂದು
ಚರಣ ವಂದಿಸಿ ಹೊರಡೆ ಅಪ್ಪಣೆ ಕೊಂಡರು ೪೬

ಪರಮಗುರು ವಿಜಯದಾಸಾರ್ಯರ ಸ್ಥಳಕೆ
ಸ್ಮರಣೆ ಪೂರ್ವಕ ಮನಸಾ ಪೋಗಿ ಸನ್ನಮಿಸಿ
ಗುರುಗಳ ಚರಣ ಆಕಾಂಕ್ಷಿಗಳು ತ್ವರಿತದಿ
ಹೊರಟರು ಶ್ರೀ ಜಗನ್ನಾಥನ್ನ ಸ್ಮರಿಸುತ್ತ ೪೭

ವಾರಿಜಾಸನ ಪಿತನು ಪೂರ್ಣ ಪ್ರಜ್ಞರ ಹೃತ್‌ಸ್ಥ
ಶಿರಿ ಪ್ರಸನ್ನ ಶ್ರೀನಿವಾಸನಿಗೆ ಪ್ರಿಯತರರು
ಪುರಂದರ ವಿಜಯ ಗೋಪಾಲದಾಸಾರ್ಯರ
ಚರಣರತ ಜಗನ್ನಾಥ ದಾಸಾರ್ಯ ಶರಣು ೪೮

– ಇತಿ ಪಂಚಮ ಕೀರ್ತನೆ ಸಂಪೂರ್ಣಂ –

೧೩೯–೫

ಶ್ರೀ ರಮಣಿ ಕರಕಮಲ ಪೂಜಿತ ಪದಾಂಬೋಜ
ಸರಸಿಜಾಸನ ಶಿವಾದ್ಯಮರ ಜನವಿನುತ
ಉರುಗುಣಾರ್ಣವ ಜಗಜ್ಜನ್ಮಾದಿಕರ್ತ ನರ–
ಹರಿಗೆ ಪ್ರಿಯ ಜಗನ್ನಾಥದಾಸಾರ್ಯ ಶರಣು ಪ.

ವಿಠ್ಠಲನ ಮಂದಿರದಿ ತಪ್ಪದೇ ಪ್ರತಿದಿನ
ಪಠಿಸಿ ಅರ್ಪಿಸುತ್ತಿದ್ದ ವಿಶ್ವ ವಿಷ್ಣು

ವಷಟ್ಕಾರ ಮೊದಲಾದ ಸಹಸ್ರನಾಮಗಳ
ದಿಟ ಜ್ಞಾನ ಭಕ್ತಿಯಿಂ ಮಾರ್ಗದಿ ಸ್ಮರಿಸಿದರು ೧

ತನ್ನ ಹೊರ ಒಳಗೆ ಶ್ರೀಹರಿಯ ತಿಳಿಯುತ್ತ
ಕಾಣುವುದು ಎಲ್ಲವೂ ಅನಘಹರಿ ಆವಾಸ್ಯ
ತನಗೆ ಯದೃಚ್ಛದಿ ಲಭಿಸುವುವು ಹರಿಕೊಡುವುವು
ಎನ್ನುತ ಅನಪೇಕ್ಷಿ ನಿರ್ಭಯದಿ ನಡೆದರು ೨

ಮಾರ್ಗಸ್ಥ ಅಕ್ಷೋಭ್ಯ ಜಯಮುನಿಗಳಲಿ
ಪೋಗಿ ಬಾಗಿ ಶಿರಸ್ಸಾಷ್ಟಾಂಗ ನಮಸ್ಕರಿಸಿ ಮುಂದು
ಪೋಗಿ ಕೃಷ್ಣಾ ತೀರ ಹನುಮನ್ನ ವಂದಿಸಿ
ಚೀಕಲಪರಿವಿಗೆ ನಮಿಸಿ ಕರಮುಗಿದರು ೩

ಗುರು ಗುಣಸ್ತವನಾದಿ ಗ್ರಂಥಗಳ ರಚಿಸಿರುವ
ಸೂರಿವಾದೀಂದ್ರರ ನಮಿಸಿ ಅಪ್ಪಣೆಯಿಂ
ಶ್ರೀರಾಘವೇಂದ್ರ ತೀರ್ಥರ ನಮಿಸಿ ಶರಣಾಗಿ
ಸ್ತೋತ್ರ ಅರ್ಪಿಸಿದರು ಕವಿತಾರೂಪದಲಿ ೪

ಹರಿಶಿರಿ ಹನುಮ ಶಿವಗುರು ಅನುಗ್ರಹಕೊಂಡು
ದಾರಿಯಲ್ಲಿರುವಂಥ ಕ್ಷೇತ್ರ ಮೂರ್ತಿಗಳ
ದರುಶನ ಮಾಡಿ ಗೋಪಾಲ ದಾಸಾರ್ಯರು
ಇರುವ ಸ್ಥಳ ಸೇರಿದರು ಜಗನ್ನಾಥದಾಸರು ೫

ಗುರುಗಳ ನೋಡಿ ಆನಂದ ಬಾಷ್ಪವ ಸುರಿಸಿ
ಚರಣಪದ್ಮಗಳಲ್ಲಿ ನಮಿಸಿ ಶರಣಾಗಿ
ಘೋರ ವ್ಯಾಧಿಹರಿಸಿ ಅಪಮೃತ್ಯು ತರಿದಂಥ
ಕಾರುಣ್ಯ ನಿಧಿ ಉದ್ಧಾರಕರು ಎಂದರು ೬

ರಾಜೀವಾಲಯಪತಿ ವಿಜಯ ಗೋಪಾಲನು
ಭಜತರ ರಕ್ಷಿಸುವ ಕರುಣಾಸಮುದ್ರ
ಈ ಜಗನ್ನಾಥನೇ ನಿನಗೆ ಒಲಿದಿಹನು
ಭುಜಗಾದ್ರಿವಾಸ ಪಂಡರಿ ವಿಠ್ಠಲ ೭

ನಿಜಭಕ್ತಾಗ್ರಣಿ ಗೋಪಾಲ ದಾಸಾರ್ಯರು
ನಿಜಭಾವದಲಿ ಈ ರೀತಿಯಲಿ ಹೇಳೆ
ಐಜೀ ಮಹಾತ್ಮರು ಸೂಚಿಸಿದರು ಹರಿಯ
ಭೋಜನ ಜಗನ್ನಾಥದಾಸಗೆ ಮಾಡಿಸಿದ್ದು ೮

ಜಗನ್ನಾಥದಾಸರು ನಡೆದ ವೃತ್ತಾಂತವ
ಮುಗಿದು ಕರಗದ್ಗದ ಕಂಠದಲಿ ಪೇಳೆ
ಚಕಿತರಾದರು ಅಲ್ಲಿ ನೆರೆದಿದ್ದ ಸಜ್ಜನರು
ಉದ್ಘೋಷ ಜಯ ಜಯ ಶಬ್ದ ಮಾಡಿದರು ೯

ಉತ್ತನೂರಿಗೆ ವೇಣಿ ಸೋಮಪುರದಿಂ ಪೋಗಿ
ಮತ್ತೂ ವೇಣಿ ಸೋಮಪುರವನ್ನು ಯ್ಯೈದಿ
ಸತ್ತತ್ವ ಬ್ರಹ್ಮ ಜಿಜ್ಞಾಸವೂ ಭಾಗ –
ವತ ಧರ್ಮ ಆಚರಿಸಿದರು ಮುದದಿಂದ ೧೦

ಗೋಪಾಲಕೃಷ್ಣ ಪ್ರಿಯ ಐಜೀಮಹಂತರು
ಗೋಪಾಲದಾಸಾರ್ಯ ವರದ ಗುರುತಂ
ಗೋಪಾಲ ದಾಸಾರ್ಯರುಗಳ ಸಮೇತದಿ
ಭೂಪಾಲ ಪ್ರಮುಖರು ಸಾಧುಜನಗುಂಪು ೧೧

ಶಿರಿ ವಾಸುದೇವ ಪ್ರಿಯವಾಸತತ್ವಜ್ಞರ
ಗುರುಗಳು ಗೋಪಾಲದಾಸರ ಅನುಗ್ರಹದಿ
ವರದ ಗುರುತಂದೆ ಗೋಪಾಲರು ಮತ್ತೆಲ್ಲರಿಗೂ
ಕರಮುಗಿದು ಹೊರಟರು ಅಪ್ಪಣೆಕೊಂಡು ೧೨

ಗದ್ವಾಲ ಮಾರ್ಗದಿ ಮಂತ್ರಾಲಯ ಪೋಗಿ
ಮಧ್ವಮತ ದುಗ್ಧಾಬ್ಧಿ ಚಂದ್ರ ಶ್ರೀ ರಾಘ
ವೇಂದ್ರ ವಾದೀಂದ್ರರ ನಮಿಸಿ ಅಲ್ಲಿಂದ
ಯ್ಯೈದಿಹರು ಪರಮಗುರುಗಳು ಇದ್ದ ಸ್ಥಳವ ೧೩

ಪರಮ ಗುರುಗಳು ವಿಜಯವಿಠ್ಠಲ ದಾಸಾರ್ಯರ
ಚರಣಾರವಿಂದದಿ ಶರಣಾಗಿ ಅವರ
ಕರದಿಂದ ನರಸಿಂಹ ವಿಜಯವಿಠ್ಠಲನ
ಸುಪ್ರಸಾದವ ಕೊಂಡು ಮಾನವಿಗೆ ಹೋದರು ೧೪

ಮನುತೀರ್ಥ ತಟದಲಿ ಮನೆಯಲ್ಲಿ ವಾಸಿಸುತ
ಹನುಮಂತಸ್ಥ ನರಹರಿ ಜಗನ್ನಾಥನ್ನ
ಹನುಮನ್ನ ಪೂಜಿಸುತ ಗುರುಗಳ ಸ್ಮರಿಸುತ್ತ
ಜ್ಞಾನಾರ್ಥಿ ವಿದ್ಯಾರ್ಥಿಗಳಿಗೆ ಒದಗಿಹರು ೧೫

ಇಷ್ಟರಲ್ಲೇ ಜಗನ್ನಾಥದಾಸರ ಕೀರ್ತಿ
ಅಷ್ಟದಿಕ್ಕಲ್ಲು ಪ್ರಖ್ಯಾತಿಯ ಹೊಂದಿ
ಇಷ್ಟಾರ್ಥ ಸಿದ್ಧಿಗೆ ಬರುವರಾದರು ಜನರು
ಕೃಷ್ಣನ ಒಲಿಮೆ ಈ ದಾಸರಲಿ ಪೂರ್ಣ ೧೬

ಮಾಧ್ವ ಮೂಲಗ್ರಂಥ ಟೀಕಾಟಿಪ್ಪಣಿಗಳು
ಸಾಧು ಹರಿದಾಸರ ಕೀರ್ತನೆಗಳು
ವೇದವ್ಯಾಸೋದಿತ ಪುರಾಣ ಇತಿಹಾಸ
ವಿದ್ಯಾರ್ಥಿಗಳಿಗೆಲ್ಲ ಪಾಠ ಪ್ರವಚನವು ೧೭

ಯೋಗಿವರ ಪ್ರಾಣೇಶವಿಠ್ಠಲ ದಾಸಾರ್ಯರು
ಭಾಗವತ ವರ ಶ್ರೀಶ ವಿಠ್ಠಲದಾಸಾರ್ಯ
ನಿಗಮ ವೇದ್ಯನ ಭಕ್ತಜನರು ಬಹುಮಂದಿಯು
ಬಾಗಿ ದಾಸಾರ್ಯರಿಗೆ ಶಿಷ್ಯ ಜನರಾದರು ೧೮

ಪ್ರಾಣೇಶ ದಾಸರಿಗೆ ಶರಣಾದೆ ಎಂದೆಂದು
ಪ್ರಾಣದೇವನು ಇವರೊಳ್ ಪ್ರಸನ್ನನಾಗಿಹನು
ಪ್ರಾಣದೇವಾಂತಸ್ಥ ಶ್ರೀಹರಿ ಕೇಶವನ
ಕಾಣುತ ಭಜಿಸುವ ಭಾಗವತರೆಂದು ೧೯

ಜಗನ್ನಾಥದಾಸರ ಶಿಷ್ಯ ಸಜ್ಜನರಿಗೆ
ಭಾಗವತ ವರಶ್ರೀಶ ಶ್ರೀದವಿಠ್ಠಲಾದಿ

ಭಗವದ್ದಾಸರಿಗೆ ನಮಿಪೆ ಶ್ರೀ ಹರಿವಾಯು
ಝಗಝಗಿಪ ಇವರುಗಳೊಳ್ ಸಂತತ ಎಂದು ೨೦

ನೋಡಬೇಕಾಗಿದ್ದ ಕ್ಷೇತ್ರಗಳಿಗೆ ಪೋಗಿ
ನಾಡಿನಲಿ ಭಾಗವತ ಧರ್ಮವ ಬೆಳೆಸೆ
ಬೇಡುವ ಯೋಗ್ಯರಿಗೆ ಉಪದೇಶ ಕೊಡೆ ಶಿಷ್ಯ
ರೊಡಗೂಡಿ ಹೊರಟರು ಜಗನ್ನಾಥದಾಸರು ೨೧

ಕರ್ಜಗಿ ಕ್ಷೇತ್ರದಲ್ಲಿ ಇರುವ ವರದಾ ನದಿಯು
ಸಜ್ಜನ ಸಮೂಹವು ಬಹಳ ಅಲ್ಲುಂಟು
ಶ್ರೀ ಜಗನ್ನಾಥನ್ನ ಭಜಿಸುತ್ತ ದಾಸರು
ಕರ್ಜಗಿ ಜಮೀನ್ದಾರ ಮನೆಯಲ್ಲಿ ಕುಳಿತರು ೨೨

ಸಾಧ್ವಿ ಶಿರೋಮಣಿ ಆ ಗೃಹಸ್ಥನ ಪತ್ನಿ
ಪಾದ ನಮಿಸಿ ಪತಿಗೆ ಬಿನ್ನಹ ಮಾಡಿದಳು
ಇಂದು ಲೌಕಿಕ ವಿಷಯಲಾಂಪಟ್ಯ ನಿಲ್ಲಿಸಿ
ವಂದಿಸಿ ದಾಸರಿಗೆ ಪೂಜೆ ನೋಡೆಂದು ೨೩

ಅಹರ ಆರಾಧಿಸುವ ಕ್ರಮದಿ ದಾಸಾರ್ಯರು
ಸಾಯಾಹ್ನ ಸಾಮವಾಪ್ರತಿಪಾದ್ಯ ನರಸಿಂಹನ
ವಿಹಿತದಿ ಅರ್ಚಿಸಿ ಕೀರ್ತನೆಗಳರ್ಪಿಸಿ
ಮಹಾಹರ್ವ ಭಜಿಸುವರು ಶಿಷ್ಯರ ಸಮೇತ ೨೪

ಅಂದು ಈ ಗೃಹಸ್ಥನು ಹೆಂಡತಿ ಕೋರಿಕೆಯಂತೆ
ಬಂದು ಕುಳಿತನು ದಾಸಾರ್ಯರ ಮುಂದೆ
ಅಂದೇ ಆ ವಿಪ್ರನ ಅನಿಷ್ಠ ಪ್ರಾರಬ್ಧವು
ಚಂದದಿ ಪೋಪುವದೆಂದರಿತರು ದಾಸಾರ್ಯ ೨೫

ಪೂಜಾ ಆರಂಭ ಆಗಲಿಕೆ ಇರುವಾಗ ಆ
ದ್ವಿಜನ ನೋಡಿ ಪ್ರಾಣೇಶ ದಾಸಾರ್ಯ
ಗರ್ಜಿಸಿದರು ಇನ್ನಾದರೂ ಒಳ್ಳೆ
ಋಜುಮಾರ್ಗ ಹಿಡಿ ಹರಿಯ ಒಲಿಸಿಕೊಳ್ಳೆಂದು ೨೬

ವಾಗ್ವಜ್ರಧಾರೆಯು ಪರಿಣಮಿಸಿ ವಿಪ್ರನ
ತೀವ್ರ ಆ ಕ್ಷಣದಲ್ಲೆ ಮನ ಕಲುಷ ಕಳೆದು
ಶ್ರೀವರನ ಪ್ರಿಯತರ ಜಗನ್ನಾಥದಾಸರಿಗೆ
ಸುವಿನಯದಿ ನಮಿಸಿ ಉದ್ಧರಿಸಿ ಎಂದ ೨೭

ಪ್ರಾಣೇಶ ದಾಸರಿಗು ಜಗನ್ನಾಥದಾಸರಿಗು
ತನ್ನ ಕೃತಜ್ಞತೆಯನ್ನು ಚೆನ್ನಾಗಿ ತಿಳಿಸಿ
ಮನ ಶುದ್ಧಿ ಭಕ್ತಿಯಿಂದಲಿ ಪೂಜೆ ನೋಡಲು
ಹನುಮಂತ ದೇವರು ಕುಳಿತಿದ್ದು ಕಂಡ ೨೮

ಶ್ರದ್ಧೆ ಭಕ್ತಿಯಿಂದ ಗೃಹಸ್ಥನುದಾಸರ
ಪಾದಕೆರಗಿ ತನ್ನನ್ನು ಹರಿದಾಸ
ವೃಂದದಲಿ ಸೇರಿಸಬೇಕೆಂದು ಪ್ರಾರ್ಥಿಸಿ
ಶ್ರೀದವಿಠ್ಠಲನಾಮ ಅಂಕಿತವ ಕೊಂಡ ೨೯

ಜಗನ್ನಾಥದಾಸಾರ್ಯ ಪರಮ ದಯಮಾಡಿ
ಆ ಗೃಹಸ್ಥಗೆ ಶ್ರೀದವಿಠ್ಠಲಾಂಕಿತವು
ಭಕುತ ಜನರಿಗೆ ಫಲಮಂತ್ರಾಕ್ಷತೆ ಕೊಟ್ಟು
ಶ್ರೀಕರನ ಸ್ಮರಿಸಿ ಸವಣೂರಿಗೆ ಹೊರಟರು ೩೦

ವಾರಿಜಾಸನ ಪಿತನು ಪೂರ್ಣ ಪ್ರಜ್ಞರ ಹೃತ್‌ಸ್ಥ
ಶಿರಿ ಪ್ರಸನ್ನ ಶ್ರೀನಿವಾಸನಿಗೆ ಪ್ರಿಯತರರು
ಪುರಂದರ ವಿಜಯ ಗೋಪಾಲದಾಸಾರ್ಯರ
ಚರಣರತ ಜಗನ್ನಾಥ ದಾಸಾರ್ಯ ಶರಣು ೩೧

– ಇತಿ ಷಷ್ಠ ಕೀರ್ತನೆ ಸಂಪೂರ್ಣಂ –

೧೩೯–೬

ಶ್ರೀ ರಮಣಿ ಕರಕಮಲ ಪೂಜಿತ ಪದಾಂಬೋಜ
ಸರಸಿಜಾಸನ ಶಿವಾದ್ಯಮರ ಜನವಿನುತ

ಉರುಗುಣಾರ್ಣವ ಜಗಜ್ಜನ್ಮಾದಿಕರ್ತ ನರ–
ಹರಿಗೆ ಪ್ರಿಯ ಜಗನ್ನಾಥದಾಸಾರ್ಯ ಶರಣು ಪ.

ಸ್ವರ್ಣಪುರಿಯಲಿ ಜಗತ್ ಪ್ರಖ್ಯಾತ ಸ್ವಾಮಿಗಳು
ಘನಮಹಿಮ ಸೂರಿವರ ಸತ್ಯಬೋಧಾರ್ಯರ
ಸನ್ನಮಿಸಿ ಈ ಮಹಾಮೂರ್ತಿಗಳಾಹ್ವಾನದಿ
ದಿನ ಕೆಲವು ನಿಂತರು ಜಗನ್ನಾಥ ಆರ್ಯ ೧

ಮೂರ್ಜಗವು ಅರಿವುದು ಸತ್ಯ ಬೋಧರ ಮಹಿಮೆ
ವಾಜಿ ಮುಖ ಕೋಡ ನೃಪರಿ ರಾಮಪ್ರಿಯರು
ಪ್ರಜ್ವಲಿಪ ಸೂರ್ಯನ್ನ ರಾತ್ರಿಯಲಿ ತೋರಿಹರು
ಭಜಕರ ಸುರಧೇನು ನಿರ್ವ್ಯಾಜ ಕರುಣೆ ೨

ಶಿಷ್ಯರ ಸಹ ಜಗನ್ನಾಥದಾಸರು ತಮ್ಮ
ನಿಯಮಗಳ ತಪ್ಪದೇ ಭಾಗವತಧರ್ಮ
ಕಾಯ ವಾಙ್ಮನ ಶುದ್ಧಿಯಲಿ ಜ್ಞಾನ ಭಕ್ತಿ
ಸಂಯುತದಿ ಮಾಳ್ಪುದು ಕಂಡರು ಮುನಿಗಳು ೩

ಹರಿದಾಸವರ ಜಗನ್ನಾಥದಾಸಾರ್ಯರಲಿ
ಹರಿಯ ಒಲಿಮೆ ಅಪರೋಕ್ಷದ ಮಹಿಮೆ
ನೇರಲ್ಲಿ ತಾ ಕಂಡು ಬಹುಪ್ರೀತಿ ಮಾಡಿದರು
ಹರಿಪ್ರಸಾದದ ಸವಿಯ ಅರಿತ ಆ ಗುರುಗಳು ೪

ಸ್ವರ್ಣಪುರಿಯಿಂದ ಜಗನ್ನಾಥದಾಸಾರ್ಯರು
ದಿಗ್ವಿಜಯದಿಂದಲಿ ಶಿಷ್ಯ ಜನಗುಂಪು
ಸೇವಕರ ಸಹ ಊರು ಊರಿಗೆ ಪೋದರು
ಆ ಎಲ್ಲ ಕ್ಷೇತ್ರದಲು ಧರ್ಮ ಪ್ರಚಾರ ೫

ಧರ್ಮ ಪ್ರಚಾರ ಹರಿಭಜನೆ ಪೂಜಾದಿಗಳು
ನಮಿಸಿ ಬೇಡುವವರ ಅನಿಷ್ಟ ಪರಿಹಾರ
ಕರ್ಮಜ ದಾರಿದ್ರ್ಯಾದಿಗಳ ಕಳೆದು ಸಂಪದವ
ಧರ್ಮ ಆಚರಣೆ ಬುದ್ಧಿಯ ಒದಗಿಸಿದರು ೬

ಸುರಪುರಾದಿ ಬಹು ಸ್ಥಳದಲ್ಲಿ ಪ್ರಮುಖರು
ಹರಿಭಕ್ತರು ಮಂಡಲೇಶ್ವರರು ಇವರ
ಚರಣಕೆರಗಿ ಬಹು ಅನುಕೂಲ ಕೊಂಡರು
ಹರಿವಾಯು ಒಲಿಮೆ ಎಷ್ಟೆಂಬೆ ದಾಸರಲಿ ೭

ವರಪ್ರದ ವರದಾ ತೀರದಲಿ ಸಶಿಷ್ಯ
ಧೀರೇಂದ್ರ ಯತಿವರ್ಯರ ಕಂಡು ನಮಿಸಿ
ಆ ರಿತ್ತಿ ಕ್ಷೇತ್ರದಲಿ ವಾಸಮಾಡಿಹರು
ಧೀರೇಂದ್ರ ತೀರ್ಥರ ಅನುಗ್ರಹ ಕೊಂಡು ೮

ಸೂರಿಕುಲ ತಿಲಕರು ಉದ್ದಾಮ ಪಂಡಿತರು
ಧೀರೇಂದ್ರ ಗುರುಗಳು ಕಾರುಣ್ಯ ಶರಧಿ
ಊರೊಳಗೆ ಹನುಮನ ಗುಡಿ ಇಹುದು ಪಾರ್ಶ್ವದಿ
ಇರುವ ರಸ್ತೆಯ ಮೇಲೆ ದಾಸರ ಮನೆಯು ೯

ಸೋದಾಪುರ ಪೋಗೆ ತ್ರಿವಿಕ್ರಮ ದೇವರ
ಮಂದಿರದ ಧ್ವಜಸ್ತಂಭದಲ್ಲಿ
ವಾದಿರಾಜರು ಹಂಸಾರೂಢರಾಗಿರುವವರ್ಗೆ
ವಂದಿಸಿ ತ್ರಿವಿಕ್ರಮರಾಯಗೆ ನಮಿಸಿದರು ೧೦

ಬದರಿಯಿಂದಲಿ ಈ ಸರಥ ತ್ರಿವಿಕ್ರಮನ
ಭೂತರಾಜರ ಕೈಯಿಂದೆತ್ತಿ ತರಿಸಿ
ಸೋದಾಪುರದಲ್ಲಿ ಪ್ರತಿಷ್ಠೆ ಮಾಡಿಹರು
ವಾದಿರಾಜರು ಭಾವಿಸಮೀರ ಲಾತವ್ಯ ೧೧

ಜಗನ್ನಾಥದಾಸರು ತ್ರಿವಿಕ್ರಮಗೆ ವಂದಿಸಿ
ಅಗಾಧ ಸುಪವಿತ್ರೆ ಧವಳಗಂಗಾಸ್ನಾನ
ಭಕುತಿಯಿಂ ಮಾಡಿ ಶಿವಹನುಮ ಕೃಷ್ಣರಿಗೆ
ಬಾಗಿ ಅಶ್ವತ್ಥಸ್ಥರಿಗೆ ನಮಿಸಿದರು ೧೨

ಬಯಲಲ್ಲಿ ವೃಂದಾವನಗಳಲಿ ಗುರುಗಳಿಗೆ
ವಿನಯದಿ ವಂದಿಸಿ ಭೂತನಾಥಗೆ ಬಾಗಿ

ಶ್ರೀವ್ಯಾಸ ದೇವನಿಗೆ ಸನ್ನಮಿಸಿ ವೇದ
ವೇದ್ಯರಿಗು ವಾದಿರಾಜರಿಗು ನಮಿಸಿದರು ೧೩

ಚತುರ್ದ್ವಾರ ಗೃಹದಲ್ಲಿ ಪಂಚವೃಂದಾವನವು
ಮಧ್ಯ ವೃಂದಾವನದಿ ಶ್ರೀವಾದಿರಾಜರು
ವೃಂದಾವನ ಮಹಿಮೆ ಚೆನ್ನಾಗಿ ತಿಳಿಯದಕೆ
ಭಕ್ತಿ ಶ್ರದ್ಧೆಯಲಿ ನೋಡಿ ವೃಂದಾವನಾಖ್ಯಾನ ೧೪

ಹರಿಹರ ಕ್ಷೇತ್ರವು ಮದ್ದೂರು ಅಬ್ಬೂರು
ಪುರುಷೋತ್ತಮ ಬ್ರಹ್ಮಣ್ಯರ ವಂದಿಸಿ
ಶ್ರೀರಂಗನಾಥನಿಗೆ ಎರಗಿ ಮಹಿಷೂರು
ಗರಳುಂಡ ಈಶ್ವರನ ಕ್ಷೇತ್ರಕ್ಕೆ ಪೋದರು ೧೫

ಕೇಶವನ ಪೂಜಿಸುತ ಪರ್ವತ ಗುಹೆಯಲ್ಲಿ
ವಾಸಮಾಡುವ ಮಹಾ ಕರುಣಾಂಬುನಿಧಿಯು
ದಾಸಜನಪ್ರಿಯ ಶ್ರೀ ಪುರುಷೋತ್ತಮರಂಘ್ರಿ
ಬಿಸಜಯುಗಳದಿ ನಾ ಶರಣು ಶರಣಾದೆ ೧೬

ಮಹಿಷೂರು ರಾಜ್ಯದ ಸರ್ಕಾರಿನಲ್ಲಿ
ಮಹೋನ್ನತ ಸ್ಥಾನ ವಹಿಸಿದಧಿಕಾರಿ
ಮಹಾಪಂಡಿತರುಗಳ ಸಭೆಯನ್ನು ಕೂಡಿಸಿ
ವಿಹಿತದಿ ದಾಸರ ಪೂಜೆ ಮಾಡಿದನು ೧೮

ನಿರ್ಭಯದಿ ದಾಸರು ಘನತತ್ವ ವಿಷಯಗಳ
ಸಭ್ಯರಿಗೆ ತಿಳಿಯದಿದ್ದವು ಸಹ ವಿವರಿಸಿದ
ಸೊಬಗನ್ನು ಕಂಡು ವಿಸ್ಮಿತರು ಆದರು ಆ
ಸಭೆಯಲ್ಲಿ ಕುಳಿತಿದ್ದ ದೊಡ್ಡ ಪಂಡಿತರು ೧೯

ಭಾಗವತ ಧರ್ಮದ ಪದ್ಧತಿ ಅನುಸರಿಸಿ
ಭಗವಂತನ ಭಜನೆ ಸಭ್ಯರ ಮುಂದೆ
ಆಗ ದಾಸರ ಅಪರೋಕ್ಷದ ಮಹಿಮೆ
ರಂಗನೇ ಸಭ್ಯರಿಗೆ ತೋರಿಸಿಹನು ೨೦

ದಾಸರು ಶಿಷ್ಯರೊಡೆ ಯಾತ್ರೆ ಮಾಡಿದ್ದು
ಮೈಸೂರು, ಕೊಂಗು, ಕೇರಳ, ಚೋಳ, ಪಾಂಡ್ಯ
ದೇಶಗಳು ಎಲ್ಲೆಲ್ಲೂ ಮರ್ಯಾದೆ ಸ್ವೀಕರಿಸಿ
ಈಶಾರ್ಪಣೆ ಸರ್ವ ವೈಭವವೆನ್ನುವರು ೨೧

ಶ್ರೀಪಾದರಾಜರ ನಮಿಸಿ ವೆಂಕಟಗಿರಿ
ಸುಪವಿತ್ರ ಘಟಿಕಾದ್ರಿ ಶ್ರೀಕಂಚಿ ಉಡುಪಿ
ಶ್ರೀಪನ ಇಂಥಾ ಕ್ಷೇತ್ರಗಳಿಗೆ ಪೋಗಿ
ಸ್ವಪುರಕ್ಕೆ ತಿರುಗಿದರು ಪೂಜ್ಯ ದಾಸಾರ್ಯ ೨೨

ಶ್ರೀಪಾದರಾಜರು ಪವಿತ್ರ ವೃಂದಾವನದಿ
ಶ್ರೀಪತಿ ನರಹರಿ ಶಿಂಶುಮಾರನ್ನ
ರೂಪಗುಣ ಕ್ರಿಯಾಮಹಿಮೆ ಧ್ಯಾನಿಸುತ ಇಹರು
ತಿರುಪತಿ ಮಾರ್ಗ ನರಸಿಂಹ ತೀರ್ಥದಲಿ ೨೩

ಪುರುಷೋತ್ತಮರ ಸುತ ಬ್ರಹ್ಮಣ್ಯರ ಕುವರ
ಶ್ರೀಕೃಷ್ಣ ಪ್ರಿಯತರ ವ್ಯಾಸಯತಿರಾಜ
ಸೂರಿಕುಲ ಶಿರೋರತ್ನ ಶ್ರೀಪಾದರಾಜರಲಿ
ಭಾರಿ ವಿದ್ಯೆ ಕಲಿತು ಪ್ರಖ್ಯಾತರಾದರು ೨೪

ಹರಿರೂಪ ಗುಣಕ್ರಿಯ ಮಹಿಮೆಗಳ ಚೆನ್ನಾಗಿ
ಪರಿಪರಿ ಸುಸ್ವರ ರಾಗದಲಿ ಕೀರ್ತನೆ
ಸಂರಚಿಸಿ ಪಂಡಿತರು ಪಾಮರರು ಸರ್ವರಿಗು
ವರ ಸಾಧು ತತ್ವ ಬೋಧಿಸಿಹರು ದಾಸರು ೨೫

ವಾರಿಜಾಸನ ಪಿತನು ಪೂರ್ಣ ಪ್ರಜ್ಞರ ಹೃತ್‍ಸ್ಥ
ಶಿರಿ ಪ್ರಸನ್ನ ಶ್ರೀನಿವಾಸನಿಗೆ ಪ್ರಿಯತರರು
ಪುರಂದರ ವಿಜಯ ಗೋಪಾಲದಾಸಾರ್ಯರ
ಚರಣರತ ಜಗನ್ನಾಥ ದಾಸಾರ್ಯ ಶರಣು ೨೬

– ಇತಿ ಸಪ್ತಮ ಕೀರ್ತನೆ ಸಂಪೂರ್ಣಂ –

೧೩೯–೭

ಶ್ರೀ ರಮಣಿ ಕರಕಮಲ ಪೂಜಿತ ಪದಾಂಬೋಜ
ಸರಸಿಜಾಸನ ಶಿವಾದ್ಯಮರ ಜನವಿನುತ
ಉರುಗುಣಾರ್ಣವ ಜಗಜ್ಜನ್ಮಾದಿಕರ್ತ ನರ–
ಹರಿಗೆ ಪ್ರಿಯ ಜಗನ್ನಾಥದಾಸಾರ್ಯ ಶರಣು ಪ.

ಹಂಸನಾಮಕ ಪರಂಬ್ರಹ್ಮ ವಿಧಿಸನಕಾದಿ
ವಂಶಜ ಗುರುಗಳಲಿ ಜಗದೇಕ ಗುರುವು
ದಶಪ್ರಮತಿ ಈ ಮಧ್ವ ಮುನಿಯ ಪೀಳಿಗೆ ಜಾತ
ವ್ಯಾಸಮುನಿ ಯೋಗಿವರ್ಯರಿಗೆ ಆ ನಮಿಪೆ ೧

ವ್ಯಾಸರಾಯರ ಮುಖ ಕಮಲದಿಂದುಪದೇಶ
ದಾಸತ್ವ ಹೊಂದಿದರು ಪುರಂದರದಾಸಾರ್ಯ
ದಾಸಶ್ರೇಷ್ಠರು ದಯಾನಿಧಿಯು ಈ ಪುರಂದರ
ದಾಸಾರ್ಯರೇ ನಾರದರ ಅವತಾರ ೨

ಪುರಂದರಾರ್ಯರ ಹಸ್ತ ಕಂಜ ಸಂಜಾತರು
ಧೀರ ಭೃಗು ಅವತಾರ ವಿಜಯದಾಸಾರ್ಯ
ಹರಿದಾಸವರ ವಿಜಯದಾಸರ ಶಿಷ್ಯರು
ಸೂರಿಸುರವರ್ಯ ಗೋಪಾಲ ದಾಸಾರ್ಯ ೩

ವಿಶ್ವೋಪಾಸಕರು ವರಗಣೇಶಾಂಶರು
ಈಶಾನುಗ್ರಹಿ ಗೋಪಾಲ ದಾಸಾರ್ಯ
ಬೇಸರವಿಲ್ಲದೆ ಸ್ಮರಿಪ ಸಜ್ಜನರ ಪಾಲಿಪರು
ದಾಸತ್ವ ಜಗನ್ನಾಥದಾಸರಿಗಿತ್ತವರು ೪

ಸೂರಿಕುಲತಿಲಕನು ಜಗನ್ನಾಥ ದಾಸಾರ್ಯ
ಈರೆರಡು ಮುಖ್ಯ ಜನ್ಮವ ಕೊಂಡ ಹಿಂದೆ
ಗುರುಯುಕ್ ಪುರಂದರಾರ್ಯರ ವತ್ಸ ಗುರುರಾಯ ಸಂಜಾತ
ಮದ್ರದೇಶಾಧಿಪ ಈ ರೀತಿ ಮೂರು ೫

ಮಾರೀಚ ದಿತಿ ಪೌತ್ರ ಮೊದಲನೆಯದಲ್ಲಿ
ಧೀರ ಪ್ರಹ್ಲಾದನಿಗೆ ಭ್ರಾತ ಸಂಹ್ಲಾದ
ಹರಿ ಅಧೋಕ್ಷಜನ್ನೊಲಿಸಿ ಕೊಂಬ ಮಾರ್ಗವ ಅರಿತ
ನಾರದಾನುಗ್ರಹಿಯು ಉಪದೇಶ ಕೇಳಿ ೭

ಹರಿಯ ಸೇವಿಸುವುದಕೆ ಶಿಷ್ಯರುದ್ಧಾರಕ್ಕೆ
ಪ್ರಾರಬ್ಧ ಕರ್ಮವು ತೇದು ಹೋಗಲಿಕೆ
ಧರೆಯಲ್ಲಿ ಪುನರ್ಜನ್ಮ ಕೊಂಡನು ಬ್ಯಾಗವಟ್ಟ
ನರಸಿಂಹ ದಾಸರ ಮಗನೆನಿಸಿಕೊಂಡು ೮

ಸೂರಿಕುಲ ಶಿರೋಮಣಿ ವರದೇಂದ್ರ ಯತಿವರರು
ಶ್ರೀರಾಘವೇಂದ್ರರ ಸ್ಮರಿಪುದಿವರಲ್ಲಿ
ಭಾರಿಪಂಡಿತ ಶ್ರೀನಿವಾಸ ಇವರಲ್ಲೋದಿ
ಪೌರ ವಿದ್ಯಾರ್ಥಿಗಳಿಗೆ ಪಾಠ ಪೇಳ್ದ ೯

ಗರುವಕೊಳಗಾಗಿ ಈ ಶ್ರೀನಿವಾಸಾಚಾರ್ಯ
ಕರುಣಾಶಾಲಿಗಳು ವಿಜಯದಾಸರನ್ನ
ಕ್ಷುದ್ರ ಮಾತುಗಳಾಡಿ ಸ್ತೋತ್ತಮಾಪರಾಧದಿಂ
ಘೋರವ್ಯಾಧಿ ಕೊಂಡು ಕುಗ್ಗಿದನು ತೀವ್ರ ೧೦

ಪರಿಪರಿ ಔಷಧೋಪಚಾರಗಳು ಸೋತು
ಹರಿಗುರು ಕ್ಷೇತ್ರಾಟನ ಸೇವಾದಿಗಳು
ಹರಿವಾಯುಸ್ತುತಿ ಕ್ಷೀರ ಅಭಿಷೇಕಫಲದಿಂ
ಅರಿತನು ಅಪರಾಧ ಕ್ಷಮೆ ಬೇಡೆ ಹೊರಟ ೧೧

ತ್ವರಿತದಲಿ ವಿಜಯಾರ್ಯರಲ್ಲಿ ಶರಣಾಗಿ
ಕರುಣದಿ ಕ್ಷಮಿಸಿ ಉದ್ಧರಿಸಬೇಕೆಂದ
ಕರುಣಿಸಮ ಚಿತ್ತರು ಶರಣನಿಗೆ ಹೇಳಿದರು
ಗುರುಗಳು ಗೋಪಾಲದಾಸರ ಕಾಣೆಂದು ೧೨

ತನ್ನಲ್ಲಿ ಗುರುಗಳು ಕಳುಹಿಸಿ ಬಂದಿಹನು
ದೀನನು ನಿಜ ಶರಣಾಗಿಹನು ಎಂದು
ಘನಮೂಮಂತ್ರ ಸಹ ಧನ್ವಂತರಿ ಜಪಿಸಿ
ಧನ್ವಂತರಿಗೆ ಬಿನ್ನೈಸಿದರು ದಾಸರು ೧೩

ವಿಜಯ ಗೋಪಾಲ ವೆಂಕಟ ಜಗನ್ನಾಥನ್ನ
ಪೂಜಿಸಿ ನೈವೇದ್ಯಾನ್ನ ಜೋಳದರೊಟ್ಟಿ
ಭುಜಿಪುದಕೆ ಕೊಡುತ ಹರಿಗುರುಗಳ ಸ್ಮರಿಸು
ನಿಜ ಭಕ್ತಾಯುಷ್ಪ್ರದ ಸತ್ಪತಿ ಎಂದು ೧೪

ದ್ರವ ಮಾತ್ರ ಕೊಂಬ ಆ ರೋಗಿ ತಿಂದನು ರೊಟ್ಟಿ
ದ್ರಾವಿಕ ಆಯಿತು ರೋಗ ದಿನ ದಿನದಿ
ದೈವಾನುಗ್ರಹವಾಯ್ತು ಗುರು ಅನುಗ್ರಹದಿಂದ
ಶ್ರೀ ವೆಂಕಟ ಶೈಲಾಧಿಪನು ಒಲಿದ ೧೫

ರೋಗ ನಿವೃತ್ತ ಆಚಾರ್ಯ ದಾಸರ ಸಹ
ಪೋಗಿ ವೆಂಕಟಗಿರಿಯಲ್ಲಿ ಶ್ರೀನಿಧಿಗೆ
ಭಕುತಿಯಿಂ ಸನ್ನಮಿಸಿ ಮಲಗೆ ನಿತ್ರಾಣದಲಿ
ಬೇಗ ಗಜವರದ ಹರಿ ಬಂದು ತಾ ಪೊರೆದ ೧೬

ಶ್ರೀನಿಧಿಃ ಸರ್ವ ಭೂತಾನಾಂ ಭಯಕೃದ್ಭಯನಾ
ಶನನು ವಿಜಯಾರ್ಯರ ರೂಪದಲಿ ಪೇಳೆ
ದಾನ ಎರೆದರು ಗೋಪಾಲ ದಾಸಾರ್ಯರು
ತನ್ನ ಆಯುಷ್ಯದಲಿ ನಲವತ್ತು ವರ್ಷ ೧೭

ರೊಟ್ಟಿ ಕೊಟ್ಟಾಗಲೇ ಗುರು ಪ್ರೇರಣೆಯಂತೆ
ಕೊಟ್ಟಿದ್ದರು ಆಯುಷ್ಯ ಆಚಾರ್ಯಗೆ
ದಿಟವಾಗಿ ಜಗಕೆ ತಿಳಿಸೆ ವೆಂಕಟ ಈಗ
ಕೊಡಿಸಿದನು ಆಯುರ್ದಾನದ ಧಾರೆ ೧೮

ಘನ್ನ ಹರಿಗುರು ಭಕ್ತಿ ಶಿಷ್ಯ ವಾತ್ಸಲ್ಯವ
ಏನೆಂಬೆ ನಮ್ಮ ಗುರು ಗೋಪಾಲ ದಾಸರ
ದಾನಕ್ಕೆ ಎಣೆಯುಂಟೆ ಎಲ್ಲಾದರೂ ಯಾರೂ
ತನ್ನ ಆಯುಷ್ಯವ ಕೊಡುವರೆ ಅನ್ಯರಿಗೆ ೧೯

ಏನೆಂಬೆ ಅನಿಮಿತ್ತ ಬಂಧು ವೆಂಕಟಪತಿಯ
ದೀನ ದಯಾಳತ್ವ ಆಚಾರ್ಯನಿಗೆ
ತಾನೇವೆ ಗೋಪಾಲದಾಸರ ರೂಪದಿತಂದು
ಅನ್ನ ಕೊಟ್ಟ ಆಯುಷ್ಯವ ಕೊಡಿಸಿದವ ೨೦

ಶ್ರೀನಿವಾಸಾಚಾರ್ಯ ಹರಿತನ್ನ ದಾಸರಿಗೆ
ತಾನೆ ಬಂದೊಲಿವುದು ನೇರಲ್ಲಿ ಕಂಡು
ತನ್ನನ್ನು ಹರಿದಾಸರಲಿ ಓರ್ವ ಮಾಡೆಂದು
ವಿನಯದಿಂ ಗೋಪಾಲದಾಸರ ಬೇಡಿದನು ೨೧

ವಿಜಯ ಗೋಪಾಲನ್ನ ವಿಜಯ ದಾಸರ ಸ್ಮರಿಸಿ
ನಿಜ ಶಿಷ್ಯಾಚಾರ್ಯನಿಗೆ ಉಪದೇಶಿಸಿದರು
ಅಜ ಪದಾರ್ಹನು ಮಧ್ವನಲ್ಲಿ ಜ್ವಲಿಸುವಶ್ರೀತ
ಶ್ರೀ ಜಗನ್ನಾಥ ಎಂದು ಧ್ಯಾನಿಸು ಎಂದು ೨೨

ಪೋಗಿ ಪಂಢರಪುರ ಭೀಮರತಿಯಲ್ಲಿ
ಸ್ವಗುರು ಆದಿ ಹನ್ನೆರಡು ಸ್ಮರಿಸು
ಬಾಗು ಮಧ್ವಾಂತಸ್ಥ ಹರಿಗೆ ಮಜ್ಜನ ಮಾಡು
ಜಗನ್ನಾಥ ಹರಿತೋರ್ವ ಪೊಳೆವ ಹರಿನಾಮ ೨೩

ಝುಗಿ ಝುಗಿಪ ತೇಜಸ್ಸು ಶಿರೋಪರಿ ಕಂಡನು
ಮೂಗಿನೊಂದೊಂದಡಿ ಶಿರದ ಮೇಲೆ
"ಜಗನ್ನಾಥ ವಿಠಲ" ನಾಮ ಪ್ರಜ್ವಲಿಸಿತು
ಜಗನ್ನಾಥ ತನ್ನಿಚ್ಛೆಯಿಂದಲೇ ತೋರ್ದ ೨೪

ಜಡಜ ಭವಪಿತ ಡರಕ ಜಗನ್ನಾಥ ವಿಠಲನ
ನೋಡಿದರು ಜಗನ್ನಾಥದಾಸ ಆಚಾರ್ಯ

ಪೊಡವಿಗೊಡೆಯನು ವಿಜಯ ಗೋಪಾಲ ಜಗನ್ನಾಥ
ವಿಠ್ಠಲ ಪ್ರಸನ್ನನಾದನು ಶ್ರೀನಿವಾಸ ೨೬

ವೆಂಕಟಗಿರಿನಾಥ ಪಂಢರಿ ಜಗನ್ನಾಥ
ಅಕಳಂಕ ಗುಣನಿಧಿ ವಿಠಲಪ್ರಸನ್ನ
ನಾಗಿದಾಸರು ಮೂಲ ಮಂತ್ರಾದಿಗಳಿಂದ
ಏಕಾಗ್ರ ಚಿತ್ತದಲಿ ಭಜಿಸಿ ಸ್ತುತಿಸಿದರು ೨೭

ಪುರಂದರ ದಾಸಾರ್ಯರ ವಂದಿಸಿ ಅವರಿಂದ
ವಿರಚಿತ ಶ್ರೀಮಧ್ವ ರಮಣ ನಿನ್ನ
ಭಾರಿತತ್ವವ ಕೊಂಡ ಕೀರ್ತನೆ ಹಾಡುತ್ತ
ಶ್ರೀಕರ ವಿಠಲನ ಮಂದಿರದೊಳು ಪೊಕ್ಕರು ೨೮

ವಿಶ್ವವಿಷ್ಣು ವಷಟ್ಕಾರಾದಿ ನಾಮನು
ದಾಸಪ್ರಿಯಜನ ವಿಠ್ಠಲ ರುಕ್ಮಿಣಿಯ
ಕೇಶವಾದಿಪಾದಾಂತ ಸಂಸ್ತುತಿಸಿ ನಮಿಸಿದರು
ದಾಸರು ಶರಣು ತಾನೆನ್ನುತ ಮುದದಿ ೨೯

ಏನೆಂಬೆ ವಿಠ್ಠಲನ ರುಕ್ಮಿಣಿಯ ವಾತ್ಸಲ್ಯ
ಅನುಪಮ ಔತಣ ದಾಸರಿಗೆ ಮಾಡಿ
ಅನುತ್ತಮ ಪ್ರಸಾದ ಮಾಲಾದಿಗಳ ಕೊಟ್ಟು
ಅನುಗ್ರಹಿಸಿ ಕಳಿಸಿದರು ದಾಸರ ಸ್ವಪುರಕೆ ೩೦

ಮಳಖೇಡ ಕೃಷ್ಣ ಮಂತ್ರಾಲಯಕೆ ಪೋಗಿ
ಅಲ್ಲಿರುವ ಗುರು ದೇವತಾ ನಮನ ಮಾಡಿ
ಗೋಪಾಲದಾಸ ಉದ್ಧಾರಕರ ಬಳಿಬಂದು
ಕಾಲಿಗೆರಗಿದರು ಕೃತಕೃತ್ಯ ಭಾವದಲಿ ೩೧

ವಾಸುದೇವಗೆ ಪ್ರಿಯ ಐಜಿ ಮಹಾತ್ಮರು
ವ್ಯಾಸತತ್ವಜ್ಞ ಹರಿದಾಸ ಯತಿವರರು
ಸಸೋದರ ಪರಿವಾರ ಗೋಪಾಲದಾಸಾರ್ಯರ
ಬಿಸಜಾಂಘ್ರಿ ಸನ್ನಮಿಸಿ ಹೊರಟರಲ್ಲಿಂದ ೩೨

ಚೀಕಲ ಪರಿವಿಯಲಿ ಏಕಾತ್ಮ ನರಹರಿಯ
ಅಕಳಂಕ ದೃಢಭಕ್ತಿಯಿಂದ ಪೂಜಿಸುವ
ಆ ಕರುಣಿ ವಿಜಯದಾಸರ ಕಂಡು ನಮಿಸಿ
ಚಿಕ್ಕಂದಿ ಸ್ವಪುರ ಮಾನವಿಯಯ್ದೈದಿದರು ೩೩

ಮನುತೀರ್ಥ ತಟದಲ್ಲಿ ಮೀಸಲಾಗಿವರಿಗೆ
ಅನ್ಯರಾಕ್ರಮಿಸದೇ ರಕ್ಷಿಸಲ್ಪಟ್ಟ
ಮನೆಯಲ್ಲಿ ನರಹರಿಯ ಹನುಮನ್ನ ಪೂಜಿಸುತ
ದಿನದಿನದಿ ಪ್ರವಚನ ಭಜನೆ ಮಾಡಿದರು ೩೪

ವಾರಿಜಾಸನ ಪಿತನು ಪೂರ್ಣಪ್ರಜ್ಞರ ಹೃತ್‌ಸ್ಥ
ಶಿರಿಪ್ರಸನ್ನ ಶ್ರೀನಿವಾಸನಿಗೆ ಪ್ರಿಯತರರು
ಪುರಂದರ ವಿಜಯ ಗೋಪಾಲದಾಸಾರ್ಯರ
ಚರಣರತ ಜಗನ್ನಾಥದಾಸಾರ್ಯ ಶರಣು ೩೫

– ಅಷ್ಟಮ ಕೀರ್ತನೆ ಸಂಪೂರ್ಣಂ –

೧೩೯–೮

ಶ್ರೀ ರಮಣಿ ಕರಕಮಲ ಪೂಜಿತ ಪದಾಂಬೋಜ
ಸರಸಿಜಾಸನ ಶಿವಾದ್ಯಮರ ಜನವಿನುತ
ಉರುಗುಣಾರ್ಣವ ಜಗಜ್ಜನ್ಮಾದಿಕರ್ತ ನರ–
ಹರಿಗೆ ಪ್ರಿಯ ಜಗನ್ನಾಥದಾಸಾರ್ಯ ಶರಣು ಪ.

ಪ್ರಾಣೇಶ ಶ್ರೀಶವಿಠ್ಠಲ ದಾಸರುಗಳಿಗೆ
ಇನ್ನು ಅನೇಕರಿಗೆ ಶಿಷ್ಯತ್ವ ಇತ್ತು
ಪುನಃ ಶಿಷ್ಯರ ಸಹ ಕ್ಷೇತ್ರಾಟನ ಮಾಡಿ
ಸ್ವರ್ಣಪುರಿಯ್ದೈದಿದರು ಸತ್ಯಬೋಧರಲಿ ೧

ಕರ್ಜಗೀ ದಾಸಪ್ಪಗೆ ಶ್ರೀದಾಂಕಿತ ಕೊಟ್ಟು
ಶ್ರೀಜಗನ್ನಾಥದಾಸರು ಮುಂದು ಹೊರಟು

ಕರ್ಜಗೀ ಸಮೀಪದಲಿ ವರದಾತೀರದಲಿ
ತ್ರಿಜಗಖ್ಯಾತ ಧೀರೇಂದ್ರರ ನಮಿಸಿದರು ೨

ಹರಿಹರ ಕ್ಷೇತ್ರವು ಮದ್ದೂರು ಅಬ್ಬೂರು
ಪುರುಷೋತ್ತಮ ಬ್ರಹ್ಮಣ್ಯರ ವಂದಿಸಿ
ಶ್ರೀರಂಗಪಟ್ಟಣದಿ ರಂಗನ್ನ ಸೇವಿಸಿ
ಗರಳುಂಡೇಶ್ವರನ ದರ್ಶನ ಮಾಡಿದರು ೪

ಮಂಡಲೇಶ್ವರರೇನು ರಾಜಪ್ರಮುಖರು ಏನು
ಪಂಡಿತೋತ್ತಮರೇನು ದಿವಾನುಗಳು ಏನು
ಅಂಡಕೋಟಿ ನಾಯಕ ಹರಿಯ ದಾಸರಿವರನ್ನ
ಕೊಂಡಾಡಿ ಮರ್ಯಾದೆ ಮಾಡಿದರು ಎಲ್ಲೂ ೫

ಉಡುಗೊರೆಗಳು ಕನಕರತ್ನಾಭರಣಗಳು
ನಡೆಯಬಾರದು ಎಂದು ಪಲ್ಲಕ್ಕಿ ವಾಹನವು
ಈಡುಂಟೆ ಜಗನ್ನಾಥದಾಸರಿಗೆ ಮೈಸೂರು
ಮಾಡಿದ ಮರ್ಯಾದೆ ರಂಗನ ಅನುಗ್ರಹವು ೬

ಮೈಸೂರು ಕೊಂಗು ಕೇರಳ ಚೋಳ ಪಾಂಡ್ಯ
ದೇಶಗಳಿಗೆ ಪೋಗಿ ಉಡುಪಿ ಕಂಚಿ
ಶ್ರೀ ಶ್ರೀನಿವಾಸನ ಕ್ಷೇತ್ರ ಘಟಿಕಾಚಲವು
ಈಶಾನುಗ್ರಹವು ಮರ್ಯಾದೆ ಎಲ್ಲೆಲ್ಲೂ ೭

ಜಯಜಯ ಜಗತ್ರಾಣ ಮಧ್ವ ನಾಮಾಭಿದ
ಪದ್ಯಾವಳಿಯು ಶ್ರೀಪಾದರಾಜರದು
ದಿವ್ಯ ಫಲಶ್ರುತಿ ಇದಕೆ ಜಗನ್ನಾಥದಾಸ
ಆರ್ಯರು ಬರೆದಿಹರು ಸಜ್ಜನರು ಪಠಿಸಿ ೮

ತೀರ್ಥಾಭಿಮಾನಿಗಳ ತದಂತಸ್ಥ ಹರಿರೂಪ
ಕ್ಷೇತ್ರ ವಾರ್ತೆಗಳನ್ನು ತತ್ವ ಬೋಧಿಸುವ
ಕೀರ್ತನೆಗಳ ಮಾಡಿ ಹರಿಗರ್ಪಿಸಿದರು
ಓದಿದರೆ ಕೇಳಿದರೆ ಇಹಪರದಿ ಸುಖವು ೯

ಹರಿವಾಯು ಸುರವೃಂದ ಗುರುವೃಂದ ಪ್ರೀತಿಕರ
ಭಾರಿಶುಭಫಲಪ್ರದವು ತತ್ವ ಸುವ್ವಾಲೆ
ಹರಿಕಥಾಮೃತಸಾರ ವರ್ಣಿಸಲಶಕ್ಯವು
ಉರುಮಹಾಸೌಭಾಗ್ಯಾಕಾಂಕ್ಷಿಗಳು ಓದಿ ೧೦

ಹರಿಸಮೀರರು ತಾವೇ ಶ್ರೀಪಾದರಾಜರಲು
ಶಿರಿವ್ಯಾಸರಾಜ ಶ್ರೀವಾದಿರಾಜರಲು
ಪುರುಂದರದಾಸರಲು ನಿಂತು ಸ್ವಪ್ನದಿ ಪ್ರೇರಿಸೆ
ಹರಿಕಥಾಮೃತಸಾರ ಬರೆದ ದಾಸಾರ್ಯ ೧೧

ಪ್ರಾರಂಭ ಹರಿಕಥಾಮೃತಸಾರ ಸ್ವಾದಿಯಲಿ
ಶಿರಿವ್ಯಾಸವಾದಿರಾಜ ವೇದವೇದ್ಯರ ಮುಂದೆ
ವರಚಿಪ್ಪಗಿರಿಯಲ್ಲಿ ವಿಜಯದಾಸರ ಮತ್ತು
ಶಿರಿಕೃಷ್ಣ ಸನ್ನಿಧಿಯಲಿ ಸುಶುಭಮಂಗಳವು ೧೨

ಗುರು ಶ್ರೀಶವಿಠಲ ದಾಸಾರ್ಯರು ಕುಂಟೋಜಿ
ರಾಯರೆಂಬುವ ಸೂರಿಕುಲ ತಿಲಕಾಗ್ರಣಿಯು
ಹರಿಕಥಾಮೃತಸಾರ ಮಂಗಳವ ಚಿಪ್ಪ
ಗಿರಿಯಲ್ಲಿ ಮಾಡಿಹರು ನಮೋ ನಮೋ ಇವರ್ಗೆ ೧೩

ಹರಿಕಥಾಮೃತಸಾರ ಫಲಶ್ರುತಿ ಅನೇಕವು
ಸೂರಿವರ್ಯರು ಹರಿದಾಸರು ಹಾಡಿಹರು
ಭರಿತ ರಚನೆಗಳ ಗ್ರಂಥ ಪದ್ಯಂಗಳ
ಬರೆದಿಹರು ಜಗನ್ನಾಥದಾಸಾರ್ಯಸೂರಿ ೧೪

ಶ್ರೀ ದಪ್ರಾಣೇಶಾದಿ ದಾಸಶಿಷ್ಯರ ಕೂಡಿ
ಮೋದಮಯ ನರಹರಿ ಹನುಮಗುರುವೃಂದ
ಆರಾಧಿಸಿ ಬರುವವರ ಉದ್ಧರಿಸುತ್ತ
ಮುದದಿಂ ಕುಳಿತರು ಮಾನವೀಯಲ್ಲಿ ೧೫

ವರುಷ ಎಂಭತ್ತೆರಡು ತಿಂಗಳು ಒಂದು
ಆರುದಿನ ಮೂವತ್ತೇಳು ಘಟಿಕ ಅರ್ಧ
ಧರೆಯಲ್ಲಿ ಹರಿ ಇಚ್ಛಾ ಸೇವಾರತರಾಗಿ
ತೆರಳಿದರು ಜಗನ್ನಾಥದಾಸ ಹರಿಪುರಕೆ ೧೬

ಶಾಲಿಶಕ ಹದಿನೇಳು ನೂರಮೂವತ್ತೊಂದು
ಶುಕ್ಲ ಸಂವತ್ಸರ ಭಾದ್ರಪದ ಶುದ್ಧ
ಮೂಲಾನಕ್ಷತ್ರ ರವಿವಾರ ನವಮಿಯಲ್ಲಿ
ಮಾಲೋಲ ಸಹ ಜ್ವಲಿಸುತ್ತ ತೆರಳಿದರು ೧೭

ಅಮೃತ ಸೈಷಸೇತುಃ ನರಸಿಂಹ ಸ್ತಂಭದಲಿ
ಇರುತಿಹನು ಅಲ್ಲೊಂದು ಅಂಶದಿ ಇಹರು
ಶ್ರೀ ರಾಘವೇಂದ್ರ ವೃಂದಾವನ ಶ್ರೀ ಸತ್ಯ
ಬೋಧರ ಸಾನ್ನಿಧ್ಯ ಸ್ತಂಭದ ಮುಂದೆ ೧೮

"ಜ" ಯೆನಲು ಜಯ ಸಂಸಾರ ಭಯಹರವು
"ಗ" ಯೆನಲು ಸರ್ವಪೀಡೆ ಪರಿಹಾರ
"ನ್ನಾ" ಯೆನ್ನೆ ಸರ್ವೋತ್ತಮಸ್ವಾಮಿ ಸುಖವೀವ
"ಥ" ಎನಲು ಅನ್ನಧನವಿತ್ತು ರಕ್ಷಿಸುವ ೧೯

ಜಯಜಯತು ಶ್ರೀ ಹಂಸವಿಧಿ ಮಧ್ವ ವ್ಯಾಸಮುನಿ
ಜಯಜಯತು ಪುರಂದರ ವಿಜಯದಾಸಾರ್ಯ
ಜಯಜಯತು ಗೋಪಾಲದಾಸಾರ್ಯ ಜಯಜಯತು
ಜಯಜಗನ್ನಾಥ ದಾಸಾರ್ಯ ಜಯಜಯತು ೨೦

ವಾರಿಜಾಸನ ಪಿತನು ಪೂರ್ಣಪ್ರಜ್ಞರ ಹೃತ್‌ಸ್ಥ
ಶಿರಿಪ್ರಸನ್ನ ಶ್ರೀನಿವಾಸನಿಗೆ ಪ್ರಿಯತರರು
ಪುರಂದರ ವಿಜಯ ಗೋಪಾಲದಾಸಾರ್ಯರ
ಚರಣರತ ಜಗನ್ನಾಥದಾಸಾರ್ಯ ಶರಣು ೨೧

– ನವಮ ಕೀರ್ತನೆ ಸಂಪೂರ್ಣಂ –

ಶ್ರೀ ಇಭರಾಮಪುರ ಕೃಷ್ಣಾಚಾರ್ಯರ ಸ್ತೋತ್ರ

(ಅಪ್ಪಾವರು)

೧೪೦

ಇಭರಾಮಪುರ ಅಪ್ಪ ಸೌಭಾಗ್ಯದಾಯಕರೇ ।
ಶುಭನಾಮ ಶ್ರೀ ಕೃಷ್ಣಾಚಾರ್ಯರೇ ನಮಸ್ತೇ ॥
ಇಭರಾಜ ವರದನಿಗು ದ್ರುಪದಾತ್ಮಜಾಪತಿಗು ।
ಶುಭಚರಿತ ರಾಘವೇಂದ್ರಾರ್ಯರಿಗು ಪ್ರಿಯ ಪ

ಶ್ರೀರಾಮನರಹರಿ ಶ್ರೀಕರನಾರಾಯಣ ।
ವರಾಹ ಹಯಶೀರ್ಷ ಶ್ರೀಕೃಷ್ಣನ ಪೂರ್ಣಾ ॥
ನುಗ್ರಹಕೆ ಪೂರ್ಣಪಾತ್ರರೇ ನಿಮ್ಮ ಚರಣ ।
ಅರವಿಂದದಲಿ ನಾನು ಶರಣು ಶರಣಾದೆ ೧

ಪಂಚಮುಖ ಹನುಮಂತ ನರಸಿಂಹ ಗರುಡ
ವಾಂಛಿತಪ್ರದ ವರಾಹ ಹಯವದನ ॥
ಈ ಅಂಜನಾಸುತನನ್ನು ತತ್ ಅಂತಸ್ಥ ।
ಪಂಚರೂಪ ಶ್ರೀಶನ್ನ ಪೂಜಿಪಮಹಂತ ೨

ಅಪ್ಪಾವರೆಂದು ಪ್ರೇಮದಿ ಕರೆಸಿಕೊಂಡು
ಅಪ್ಪಮಕ್ಕಳಂತೆ ಕಾಯ್ದಿರಿ ಜನರ ॥
ಅಪ್ಪಾ ಎಂದೀಗಲೂ ಸ್ಮರಿಸಿದರೂ ನಿಮ್ಮ ಸಹ
ಶ್ರೀಪ ತಿಮ್ಮಪ್ಪ ಬಂದೆಮ್ಮನು ಕಾಯ್ವ ೩

ಮೇಲಿಂದ ಬಿದ್ದವನ್ನ ದೂರ ಇದ್ದರೂ ಕಾಯ್ದು
ತಾಳಿಗೋರೂಪ ಪಾದಜ ಧಾನ್ಯ ಉಂಡು ॥
ಜಲದಿಂದ ವಿಪ್ರತಮ ಭಕ್ತವರನನ್ನ ಕಾಯ್ದು ।
ಜಲಜನಾಭನ ಗಾಯಕನೆಂದು ಆಶಿಸಿದಿರಿ ೪

ಬೊಮ್ಮನ ಪಿತ 'ಶ್ರೀ ಪ್ರಸನ್ನ ಶ್ರೀನಿವಾಸನಲಿ'
ಪ್ರೇಮ ಅಚ್ಛಿನ್ನ ಭಕ್ತಿ ನಿಮಗೆ ದ್ವಿಜವರರೆ ॥
ನಿಮ್ಮವನು ಭುವಿಯಲ್ಲಿ ತೋರಿಹ ಎನ್ನನ್ನು
ಪ್ರೇಮಾನುಗ್ರಹದಯದಿ ಪಾಲಿಪುದು ಶರಣು ೫ ಪ

॥ ಸಂಪೂರ್ಣಂ ॥

ಶ್ರೀ ಸಂತಾನ ಗೋಪಾಲಕೃಷ್ಣ

೧೪೧

ಗೋಪಿ ವಲ್ಲಭ ಬಾಲ ಗೋಪಾಲ ಕೃಷ್ಣ
ಶ್ರೀಪ ಸುಗುಣಾರ್ಣವನೇ ನಿರ್ದೋಷ ಶರಣು
ಪುಷ್ಪಭವ ಭವಸರ್ಪರಾಜ ವಿಪ ಸುರಪಾದ
ಸುಪುಣ್ಯ ಶ್ಲೋಕರಿಂ ಸದಾ ವಿನುತ ಸ್ವಾಮಿ ಪ

ವಿಪ್ರಸಹ ಪಾರ್ಥನ್ನ ಕರಕೊಂಡು ರಥವೇರಿ
ಪರ್ವತ ಲೋಕಾಲೋಕ ದಾಟ ತಮಸ್ ಕತ್ತರಿಸಿ
ಶ್ರೀಪತಿಯೇ ನಿನ್ನ ಧಾಮ ಅನಂತಾಸನ ಯೈದಿ
ವಿಪ್ರನಿಗೆ ಸುಪುತ್ರನ್ನ ತಂದಿತ್ತ ಘೃಣೀಯೇ ೧

ಅಂದು ವೈರಾಟಿಯು ಪಾಹಿ ಪಾಹಿ ಮಹಾ ಯೋಗಿನ್
ದೇವ ದೇವ ಜಗತ್ ಪತೇ ನಾನ್ಯಂ ತತ್ ಅಭಯಂ ಪಸ್ಯೆ
ಎಂದು ನಾಥನೇ ನಿನ್ನ ಮೊರೆ ಹೋಗಲು ಅವಳ
ಉದರ ಪ್ರವೇಶಿಸಿ ಶಿಶುವ ರಕ್ಷಿಸಿದ ಚಕ್ರಿ ೨

ಸುಸ್ಪಟಿಕ ಕಾಂತಿಮಾನ್ ಶಿವ ಶಿವಾ ಪೋಲು ಈ
ದಂಪತಿಗಳು ಯಥಾ ಯೋಗ್ಯ ಪ್ರೇಮ
ಪರಸ್ಪರ ಬೆಳೆಸಿ ಹರಿ ಗುರು ಭಕ್ತಿ ವರ್ಧಿಸಿ
ಸುಪುತ್ರ ಸಂತಾನ ಭಾಗ್ಯವಿತ್ತು ಸಲಹುದು ೩

ಕಲ್ಯಾಣ ತಮರೂಪ ಅಂಬುಜ ಸುದರ್ಶನ
ಬಲು ಚೆಲುವ ಶಂಖ ಕೌಮೋದಕೀಧರನೇ

ಮಾಲಕ್ಷ್ಮೀ ವಕ್ಷನೀ ವರ ಅಭಯ ಪ್ರದನಾಗಿ
ಸಲುಹುತಿಯೇ ಭಕ್ತರನ ಗುರುಗ ಶ್ರೀ ಕೃಷ್ಣ ೬

ಗುರುಗಳೋಳಿಪ್ಪ ವರ ವಾಯು ಅಂತರ್ಗತನೇ
ವಾರಿಜಾಸನಪಿತ ಶ್ರೀ ಪ್ರಸನ್ನ ಶ್ರೀನಿವಾಸ
ಶರಣು ಭಾಗೀರಥಿ ಜನಕ ಪಾವನ ನಾಮನೇ
ಪೂರ್ಣ ಕಾಮನೇ ಭಕ್ತ ವಾಂಛಿತ ಪ್ರದನೇ ೫ ಪ

ಅಂಕಿತ ಪದ (ಶ್ರೀ ಪ್ರಸನ್ನ ಭೂವರಾಹ)

೧೪೨

ಶ್ರೀಶ ಪ್ರಸನ್ನ ಭೂವರಾಹ ಚಿನ್ಮಯದೇವ –
ಬಿಸಜಜ ಸಮೀರಾದಿ ಸುರವೃಂದ ವಂದ್ಯ –
ಬಿಸಜಜಾಂಡದ ದೊರೆ ಸಹಸ್ರನಾಮನೆ ದಯ –
ದಿಂಸಲಹೋ ಜ್ಞಾನಾದಿ ಧನವಿತ್ತು ಇವನ ಪ

ಶ್ರೀಧರನೆ ಸುಖಮಯನೆ ಭೂಧರನೆ ಭೀತಿಹರ
ವೇಧ ಮನುವಿಗೆ ಒಲಿದ ಶ್ವೇತವರಾಹ ॥
ದಿತಿಜಹರ ವಸೂಮತೀಯ ಉದ್ಧರಿಸಿ ಕಾಯ್ದಿಯೋ
ನೀದಯದಿ ಸುಮತಿಯನು ಇತ್ತು ಪಾಲಿಪುದು ೧

ಕಾಲ ಗುಣ ಕರ್ಮ ನಿಮಿತ್ತ ಬಂದಿಹ ಇವನ
ಬಲವಂತ ಕಷ್ಟಗಳ ಉಪಶಮಿಸಿ ಇವನಿಂ ॥
ಒಳ್ಳೇಸಾಧನ ಮಾಡಿಸುವದು ನೀಕೃಪೆಯಿಂದ ।
ಬಾಲೇಂದುಧರ ವಿನುತ ಭಕ್ತವತ್ಸಲ ೨

ಭೂಮ ಉರುಗುಣ ಪೂರ್ಣ ನಿರ್ದೋಷ ಶ್ರೀರಮಣ
ಶ್ಯಾಮ ವರ್ಣನೆ ಚಕ್ರ ಶಂಖ ಭೂಧರನೆ ॥
ಕಾಮಪಿತ ವೇಧಪಿತ ಭೂವರಾಹ ನಮೋ ।
ನಮೋ ಶ್ರೀ ಪ್ರಸನ್ನ ಶ್ರೀನಿವಾಸ ಸಲಹೆಮ್ಮ

ಪ್ರಸನ್ನ ಶ್ರೀ ಜಯರಾಮಚಂದ್ರ ಸ್ತೋತ್ರ

೧೪೩

ಬಿಸಜನಯನನೆ ಇವಗೆ ಒಲಿಯೋ ದಯದಿಂದ ಪ

ವೇದ ತತಿಗಳಿದಿರ್‍ಯ ಉರುಗುಣಾಂಬುಧಿ ಶ್ಯಾಮ
ಸುಂದರನೆ ಸೀತಾಸಮೇತ ವಿಭು ನಿನ್ನ
ಪಾದಪದುಮಗಳಲ್ಲಿ ಹನುಮದಾದಿಗಳೆಲ್ಲ
ಆದರದಿ ಸರ್ವದಾ ಭಜಿಸುವರೋ ಸ್ವಾಮಿ ೧

ವರ ಅಭಯ ಕರಗಳಲ್ಲಿ ಶರಚಾಪ ಪಿಡಿದಿರುವಿ
ಕಾರುಣ್ಯ ಬೀರುವ ನೋಟ ಮುಗಳ್‍ಹಾಸ
ಶರಣಾದೆ ನಿನಗೆನಾ ಸುಕೃತ್ ವಿಭುವೇ ಸದಾ
ವರಜ್ಞಾನ ಭಕ್ತ್ಯಾದಿ ಐಶ್ವರ್‍ಯ ಈಯೋ ೨

ಅನಂತಾರ್ಕ ಶಶಿಅಧಿಕ ಕಾಂತಿಯಿಂ ಜ್ವಲಿಸುತಿ
ಅನಂತ ಪಾಪಗಳೆಲ್ಲ ಮನ್ನಿಸಿ ದಯದಿ
ಎನ್ನ ಇವನ ಸರ್ವವೈಷ್ಣವರ ಕಾಯಯ್ಯ
ವನರುಹಾಸನ ಪಿತ ಪ್ರಸನ್ನ ಶ್ರೀನಿವಾಸ ೩

ಪ್ರಸನ್ನ ಗೋಪೀವಲ್ಲಭ ಕೃಷ್ಣ ಅಂಕಿತಪದ

೧೪೪

ಪ್ರಸನ್ನ ಗೋಪೀವಲ್ಲಭ ಕೃಷ್ಣ ಶರಣು
ನೀ ಸಲಹೊ ಇವಳನ್ನು ಸುಹೃದ ಕರುಣಾಳೊ ।
ಬೇಸರ ವಿಲ್ಲದೆ ಪತಿ ಗುರು ಸೇವಾ ಸದ್ರತಿ
ಶ್ರೀಶ ನಿನ್ನಲಿ ಭಕ್ತಿ ಸಜ್ಞಾನ ಬೆಳೆಸೊ ಪ

ಪುಟ್ಟಿದಾರಭ್ಯ ಬಹು ಕಷ್ಟಮೋಹದಲ್ಲಿದ್ದು
ನೆಟ್ಟಗೆ ಬಂದಿಹಳಿಲ್ಲಿ ನಿನ್ನ ದಯದಿಂದ ।

ವಿಷ್ಣು ಭಕ್ತಿ, ಜ್ಞಾನ, ವೈರಾಗ್ಯ ಆರೋಗ್ಯ
ಇಷ್ಟ ಸಂಪತ್ತುಗಳ ಇತ್ತು ಪಾಲಿಪುದು ॥ ಪ್ರಸನ್ನ॥

ನೀಪಾಲು ಬೆಣ್ಣೆಯ ಕೊಂಡು ಸುಜನರ ಕಾಯ್ದಿ
ಗೋಪಿಕಾ ಸ್ತ್ರೀಯರ ಭಕ್ತಿಗೆ ವೊಲಿದಿ ।
ವಿಪ್ರಸತಿ ಪ್ರೇಮದಲಿ ಕಳುಹಿಸಿದ ಅವಲಕ್ಕಿ
ಶ್ರೀಪನೀ ಸ್ವೀಕರಿಸಿ ಸೌಭಾಗ್ಯ ವಿತ್ತಿ ೧

ಸೌಂದರ್ಯ ಸಾರ ನಮೊ ಜಗದೇಕ ವಂದ್ಯ ವಿಭು.
ಸತ್ಯಾ ರಕ್ಮಿಣಿಯುತನೆ ಷಣ್ಮಹಿಷಿ ಸೇವ್ಯ ।
ನಿರ್ದೋಷ ಗುಣಗಣಾರ್ಣವ ಸರ್ವೋತ್ತಮನಮೊ
ಪದುಮಭವ ಪಿತ ಶ್ರೀ ಪ್ರಸನ್ನ ಶ್ರೀನಿವಾಸ ೨

ಶ್ರೀ ಗೋಪೀವಲ್ಲಭ ಗೋಪಾಲವಿಠಲ

೧೪೫

ಗೋಪೀವಲ್ಲಭ ಗೋಪಾಲ ವಿಠಲದೇವ
ಕಾಪಾಡೊ ಇವಳ ಭಕ್ತ್ಯಾದಿಗಳನಿತ್ತು ಪ

ಶ್ರೀಪ ಕೃಷ್ಣ ನಿನ್ನ ಭಕ್ತಸುಜ್ಞಾನಿಗಳ
ಸತ್ಪಂಥದಲಿ ಇಟ್ಟು ದಯದಿ ಪಾಲಿಪುದು ಅಪ

ಭೀಷ್ಮಕನ ಸುತೆ ಸತ್ಯಭಾಮಾಸಮೇತ ನೀ
ವಾಮಚಿನ್ಮಯ ಹರಿಣ್ಮಣಿನಿಭ ಸುಕಾಯ
ಅಮಲ ಸುಸ್ವರ ವೇಣು ಅಭಯ ವರಹಸ್ತದಲಿ
ವಾಮದಷ್ಟದಿ ಶಂಖ ತಮ ತರಿವ ಚಕ್ರ ೧

ಇಂದಿರಾಪತಿ ಕಂಬುಗ್ರೀವದಲಿ ಕೌಸ್ತುಭವು
ಇಂದುಧರೆ ಆಶ್ರಿತನಾಗಿರುವ ವೈಜಯಂತಿ
ಸುಂದರ ಸುಪಟ್ಟೆ ಪೀತಾಂಬರವನುಟ್ಟಿಹ
ಸೌಂದರ್ಯಸಾರನೆ ಜಗದೇಕವಂದ್ಯ ೨

ವನಜನಾಭನೆ ಅಜನೆ ವನಜಾಪತಿಯೆ ನಮೋ
ವನಜಸಂಭವಪಿತ ಪ್ರಸನ್ನ ಶ್ರೀನಿವಾಸ
ವನಜಲೋಚನ ಮಧ್ವ ಸಾಧು ಸುಜನರ ಹೃದಯ
ವನಜಕೆ ದಿನಪ ನಮ್ಮೆಲ್ಲರನು ಪೊರೆಯೊ ೩

ಪ್ರಭವನಾಮ ಸಂವತ್ಸರ ಸ್ತೋತ್ರ

೧೪೬

ಪದ್ಮನಾಭ ಪದ್ಮೇಶ ಪದ್ಮಸಂಭವ ತಾತ
ಮೋದಬಲ ಜ್ಞಾನಾದ್ಯಾಮಲ ಗುಣನಿಧಿಯೇ
ಸತ್ಯಜಗತ್ ಸೃಷ್ಟಾದಿ ಕರ್ತನೀನೇ ಪ್ರಭವ
ಸಂವತ್ಸರ ನಿಯಾಮಕನು ಸ್ವಾಮೀ ನಮಸ್ತೆ ಪ

ಈ ಪ್ರಭವನಾಮ ನಿನ್ನ ನಿಯಾಮನಿಂ ಸೋಮನು
ಈ ಸಂವತ್ಸರರಾಜನು ಮಂಗಳನು ಮಂತ್ರಿಃ
ಸಸ್ಯ ಸೈನ್ಯಾಧಿಪರು ಶುಕ್ರ ವಿಧುಧಾನ್ಯಪತಿ ಬುದನು
ರಸಪ ರವಿ ನಿರಸಗುರು ಹೀಗೆ ನಾಯಕರು ನವರು ೧

ವಿಷ್ಣುನವ ಶ್ರೀನವ ನರವಾಯುನವ ಪತೀಶನವ
ಶೇಷನವ ಈ ಬಗೆ ನವ ಮೂರ್ತಿ ಅಧಿಕಾರಿಗಳಿಂ ಸ್ಮರಣೀಯ
ವರ್ಷನವನಾಯಕರೊಳೆ ವಾಯ್ವಂತರ್ಗತನಾಗಿ ಶ್ರೀಸಹ
ವಿಷ್ಣು ನೀನೆ ಇದ್ದು ಕೃತಿನಡೆಸಿ ಲೋಕವಕಾಯುತಿ ೨

ಸೋಮ ರಾಜನು ತನ್ನ ವಶದಿ ಸೈನ್ಯ ವೇಘಗಳಿಚ್ಚಿಹನು
ಅಮಾತ್ಯತ್ವ ಕುಜಗಿಹುದು ಶಿಷ್ಟಪಾಲನತಿದುಷ್ಟರ ತಿದ್ದುವುದಕ್ಕೆ
ಅಮ್ಮಮ್ಮ ಏನೆಂಬೆ ಅಮೃತಕರ ಸೋಮದಿಯಲ್ಲಿದ್ದು
ರಾಜ ರಾಜೇಶ್ವರ ನೀ ಕಮಲಾಸನಪಿತ ಪ್ರಸನ್ನ ಶ್ರೀನಿವಾಸ
ಸಂತಾನಾದಿ ಭಾಗ್ಯ ವೀವಿ ಕರುಣಾಳು ೩

ಶ್ರೀ ವಿಭವ ಸಂವತ್ಸರ ಸ್ತೋತ್ರ

೧೪೭

ರಾಜ ರಾಜೇಶ್ವರ ಉಪೇಂದ್ರನಿಗೆ ನಮೋ ಎಂಬೆ
ಭ್ರಾಜ ಲಕ್ಷ್ಮಿ ಭೂಮ ನಾರಸಿಂಹನಿಗೂ ಆನಮಿಪೆ ಪ

ರಾಜಿಸುವ ವಿಭವ ನಾಮ ಸಂವತ್ಸರ ನಿಯಾಮಿಕ ಏಕಾತ್ಮನಲ್ಲಿ
ನಿಜ ಭಕ್ತಿಯಿಂದ ಸ್ತುತಿಪರನ್ನ ಸಂರಕ್ಷಿಪ ಶ್ರೀಹರಿಯು ೧

ಭಾಸ್ಕರೋದಯದಲ್ಲಿ ಪ್ರಭವಾಸಿತ ಪಕ್ಷ ನಂತರ
ವಿಭವಸಿತ ಪ್ರತಿಸತ್
ಉಶನ ಶುಕ್ರ ಭಾರ್ಗವ ವಾಸರವು ನಮೋ ಎಂಬೆ
ಶುಕ್ರನಿಗೆ ನಮ್ಮ ಹಿತಕಾಯ್ವಿ ೨

ದಿನೋದಯದಿ ವಿಭವ ಸಂವತ್ಸರ ಸಿತಪಕ್ಷ
ದ್ವಿತಿಯೇಯು ಸೌರವಾಸರವು
ರಾಜಶನೈಶ್ಚರಗೂ ಮಂತ್ರಿ ಬುಧ ಮೊದಲಾದವರಿಗೂ
ನಮೋ ಎಂಬೆ ದಯವಾಗಲಿ ೩

ಊದ ಕೊರತೆ ಅತಿ ಉಷ್ಣ ಸಸ್ಯಸಾಂದು ರಾಜರಾಜ
ರಾಜ ಜನ ಮನಸ್ತಾಪ
ಜನಕಾಷ್ಟ ನೀದಯದಿ ಪರಿಹರಿಸಿ ಸಲಹೋ
ಕೃಪಾನಿಧಿಯೇ ನರಹರಿಯೇ ೪

ಧವಳ ಗಂಗೆಗೆ ಅಪ್ರಸಿದ್ಧ ಹೆಸರು ಕೂರ್ಮತೀರ್ಥವು
ಎಂದುಂಟು ಅದು ಪ್ರಾಮಾಣಿಕ ಎಂದು
ತಿಳಿಯುವುದು ವಿಭವದಲಿ ನೀರಿನ ಮಟ್ಟ ಸ್ವಲ್ಪಕಾಲ ತಗ್ಗುವಾಗ ೫

ಸಂವತ್ಸರ ನಿಯಾಮಕ ಹರಿ ರೂಪಗಳ ಸೋಚಿತ
ಆಚರಣೆ ಸಹ ಸಂಸ್ಮರಿಸಿ

ಕುಲ ಇಷ್ಟದೇವರ ಮತ್ತು ಗುರುಗಳ ನೆನೆದು ಭಕ್ತಿ
ಮಾಳ್ಪಜನರಿಗೆ ಸುಖಕಾಲ ೬

ಕಮಲ ಸಂಭವ ಪಿತ ಕಮಲಾಲಯ ಪತಿ ಅಮಲ
ಪೂರ್ಣಾನಂದಾದಿಗುಣ ನಿಧಿಯು
ಸುಮನಸರೊಡೆಯ ಶ್ರೀ ಪ್ರಸನ್ನ ಶ್ರೀನಿವಾಸನು
ತನ್ನ ಭಕ್ತರಿಗೆ ಈವ ಸುಕ್ಷೇಮವನು ಸರ್ವದಾ ೭

ಶ್ರೀ ಶುಕ್ಲನಾಮ ಸಂವತ್ಸರ ಸ್ತೋತ್ರ

೧೪೮

ಶುಕ್ಲ ಸಂವತ್ಸರದ ಮುಖ್ಯ ಸ್ವಾಮಿಯು ಸುಖಪೂರ್ಣ ಶೋಕಾದಿ
ದೋಷ ದೂರ ಶ್ರೀ ಉಪೇಂದ್ರನಿಗೆ ಆನಮಿಸುವೇ ಪ.

ದೇವಗುರು ಬೃಹಸ್ಪತಿ ದೇವೇಂದ್ರ ಮೊದಲಾದ ಸರ್ವ ದೇವ ವಿಧ
ಶಿವ ವಿಧ ಸೇವ್ಯ ಶ್ರೀ ಲಕ್ಷ್ಮೀಶ ಸರ್ವೇಶನು ತಾನೆ
ಈ ವರುಷರಾಜ ಶುಕ್ರನೊಳು ಮತ್ತು ವರುಷ ನಿತ್ಯ ನಾಯಕರು
ಸಚಿವ ಸೇನಾ ಸಸ್ಯ ರಸ ನಿರಸಾಧಿ ಪತಿಗಳೊಳಾಗಿರುವ ೧

ಇದ್ದು ಶೃತಿಗಳ ನಡೆಸಿ ಲೋಕ ಜನರಿಂದ ವಿಹಿತಾ ವಿಹಿತ
ಸಾಧನ ಗೈಸಿ ಸಜ್ಜನರಿಗೆ ಕಷ್ಟ ಬಾರದೇ ಕಾಯುವ
ಸಾಧು ಸಾಧನ ಮಾಳ್ಪದಕೆ ಅನುಕೂಲ ಶುಕ್ಲ ಸಂವತ್ಸರ
ಸಂತಾಪ ಸಿಡಿಲು ಗಾಳಿ ಔಷ್ಣವ ಜಯಿಸಬಹುದು ಹರಿದಯದಿ ೨

ಚೌರ್ಯ ಅಸತ್ಯ ನಿಂದಾ ನಿಷ್ಠುರ ದುಷ್ಟ ತನಾದಿಗಳು
ಸಂತ್ಯಜಿಸಿ ಪತಿ ತಾಯಿ ತಂದೆ ಗುರು ಸೇವಾ ಹರಿ ಪೂಜೆ
ಕಾಯ ವಾಙ್ಮನದಿಂದ ಮಾಳ್ಪರಿಗೆ ಮಧ್ವ ಹುದಬ್ಜಗನು
ತೋಯಜಾಸನ ಪಿತ ಪ್ರಸನ್ನ ಶ್ರೀನಿವಾಸ ಒಲಿದು ಸಂರಕ್ಷಿಸುವನು ೩

। ಶ್ರೀ ಕೃಷ್ಣಾರ್ಪಣಮಸ್ತು ।

ಪ್ರಜೋತ್ಪತ್ತಿ ಸಂವತ್ಸರ ಸ್ತೋತ್ರ

೧೪೯

ರಾಜ ರಾಜೇಶ್ವರಗೆ ರಾಜರಾಜೇಶ್ವರಿ ಪತಿಗೆ
ರಾಜೀವ ಭವಪಿತಗೆ ಶರಣು ನಮೋ ಶ್ರೀಪದ್ಮನಾಭ ಗೆ ಪ

ಪ್ರಭವಾದಿ ಷಷ್ಠಿ ಸಂವತ್ಸರದಿ ಪ್ರಾಬಲ್ಯ ಪೆಚ್ಚಿವುದು ಈ ವರುಷ
ಸುಪ್ರಜೋತ್ಪತ್ತಿ ಸಾಧು ಕ್ಷೇಮಕರ ಯೋಜನೆಗಳಿಗೆ ಸುಸಂಸ್ಕೃತರು
ಪ್ರಾರಂಭಿಸುವುದಕೆ ಅನುಕೂಲ ಅಧಿಕಾರವರ್ಗವು
ಈ ರೀತಿ ತಿಳಿವುದು ೧

ಸಂವತ್ಸರ ರಾಜ ಸೂರ್ಯ ಮಂತ್ರಿಯೂ ಸಹ ತಂದತರ್ಯಾಮಿ
ಸೂರಿ ಪ್ರಾಪ್ಯಘ್ರ್ಯಾಣಿಯು
ಸರ್ವವಿಧದಲ್ಲು ದಯೆ ಪಾಲಿಸುವ
ನವನಾಯಕರೊಳು ಸಹ ಇದ್ದು
ಸರ್ವೇಶ ಶ್ರೀಪ ಪದ್ಮನಾಭನು ಸ್ಮರಿಸುವವರ ಸುರಧೇನುವು ೨

ಸುಖಪೂರ್ಣ ಚಿನ್ಮಯನು ನಿತ್ಯತೃಪ್ತನುಪರ್ಜನ್ಯನೊಳು
ಇದ್ದು ಮಳೆಗರೆವ
ಶ್ರೀಹರಿ ಅರ್ಕವಿಧು ಗ್ರಹನಕ್ಷತ್ರಗಳೊಳ್
ಇದ್ದು ಜ್ಯೋತಿ ಹರಿ ಬೆಳಕು
ಕೊಡುವ ಮಕ್ಕಳು ಮೊಮ್ಮಕ್ಕಳು ಸುಖವೀವ ಶ್ರೀರಮೇಶನು
ವೇದನಾಯಕಿ ಎಂಬ ಉಮೆಯರಸನ ಸಂಗಮೇಶ್ವರೊಳಿದ್ದು ೩

ಸರ್ವವಾಂಛಿತವೀವ ಸರ್ವಸ್ಥ ಲಕ್ಷ್ಮೀರಮಣ ಸರ್ವೋತ್ತಮನು
ಸರ್ವಕಲ್ಯಾಣ ಸುಗುಣಾರ್ಣವನು ನಿರ್ದೋಷನು
ವಾಂಛಿಸುವವರು ಪರವಿತ್ತಸ್ತೇಯ
ಪರನಿಂದಾ ವ್ಯಭಿಚಾರರೇತಸ್ಸಂಗಮ ತ್ಯಜಿಸಲೇಬೇಕು ೪

ಬಾಲ ಮತ್ತು ಪ್ರೌಢ ವಿದ್ಯಾರ್ಥಿಗಳಿಗೆ ದೈವಭಕ್ತಿ
ಮತ್ತು ಸಾಧುನೀತಿಗಳ

ಪಾಠಗಳ ಬೋಧಿಸುವುದು ಅಧಿಕಾರವರ್ಗದವರು ಮಾಡಲೇಬೇಕು
ಇಳೆಯಲ್ಲಿ ಪ್ರಜಾಕ್ಷೇಮ ಅಭಿವೃದ್ಧಿ ಆಗಲಿಕ್ಕೆ ಇದು
ಉಪಾಯ ಹರಿದಯದಿ ೫

ವಸುಂಧರೆಯಲ್ಲಿ ಇನ್ನು ಬೆಳೆಯುವುದು ಪ್ರಜಾ ಉಪಯೋಗ
ಆಗಿ ಮಿಕ್ಕದ್ದೇ ಪರದೇಶಕೆ ಕೊಡಬಹುದು
ಆಸುರೀ ಸಂಪತ್ತು ಬೆಳಸದೆ ದೈವಿ ಸಂಪತ್ತೇ ಗುರಿಯಾಗಿ ಸರ್ವರು
ತಮ್ಮ ತಮ್ಮ ಸಮಯಗಳ ನೀತಿಗಳ ಆಚರಿಸಲು
ರಾಷ್ಟ್ರ ಲೋಕಗಳಿಗೆ ಲಾಭ ೬

ಎನ್ನ ಮಾತುಗಳಲ್ಲ ಇವು ಕ್ಷೇಮಕರ ಪ್ರಜೋತ್ಪತ್ತಿಸ್ವಾಮಿ
ಶ್ರೀಪದ್ಮನಾಭ ಶ್ರೀನಿವಾಸ ನುಡಿಸಿದವು
ಎನ್ನನ್ನು ಎನ್ನವರನ್ನು ಸರ್ವಲೋಕಜನರನ್ನು
ರಕ್ಷಿಸಲಿ ಶ್ರೀಹರಿ ಸರ್ವದಾ ೭

ಶ್ರೀ ಆಂಗೀರಸ ನಾಮ ಸಂವತ್ಸರ ಸ್ತೋತ್ರ

೧೫೦

ಶ್ರೀ ಲಕ್ಷ್ಮೀ ಭೂಮಾ ನೃಸಿಂಹನ್ನ ಆರಾಧಿಸಿ
ಶೀಲ ಉದ್ಭಕ್ತಿಯಲಿ ಸ್ತುತಿಸುವ ಶನೈಶ್ಚರ
ಇಳೆಯಲ್ಲಿ ವಿಂಧ್ಯಾಚಲ ದಕ್ಷಿಣ ದೇಶದಲಿ ಹೊಳೆಯುತಿಹ
ರಾಜನಾಗಿ ಆಂಗೀರಸ ಸಂವತ್ಸರದಿ ತಂ ನಮೋ ಪ

ಸೂರ್ಯಛಾಯಾಸೂನು ಸೂರಿ ಸಾಧುಗಳಿಗೆ
ಕಾರ್ಯಾನುಕೂಲ ಸರ್ವೇಷ್ಟ ಪೂರೈಸುವನು
ಕ್ರಿಯಾ ರೂಪದಿ ವಿಷ್ಣು ವರ ವಾಯು ದೇವನೊಳು ಇರುತ
ಸಂವತ್ಸರ ನಾಯಕರೋಳು ಕ್ರಿಯೆಗಳ ಮಾಡಿಸುವ ೧

ನರಹರಿಯ ಒಲುಮೆ ಶನಿರಾಜನಲಿ ಬಹು ಉಂಟು
ನರಕ್ಷೇಮೋಪಾಯ ಅಂದು ದಶರಥಗೆ ಪೇಳಿದ ಪಾದ್ಮದಿ

ಹರಿನಾಮೋಚ್ಚಾರಣೆ, ಶನಿಕೃತ ನೃಹರಿ ಸ್ತೋತ್ರ ಪಠಣದಿ
ಪಾರುಗಾಣುವರು ಸಾಧು ಸಜ್ಜನ ಭಕ್ತರು ೨

ಅನಂದಮಯ ಹರಿಯು ಆಂಗೀರಸ ಸಂವತ್ಸರದಿ
ಜನರಿಗೆ ಯೋಗ್ಯತಾನುಸಾರ ಸುಖವನ್ನೇ ಈವ
ಜನರಿಗೆ ಆದಿಯಲಿ ಸುಕ್ಷೇಮ ಕಾಲವು ಕಥೆಯಲ್ಲಿ ದುರ್ಭಿಕ್ಷ
ನೂತನ ವಸ್ತು ಉತ್ಪತ್ತಿ, ಧಾನ್ಯಾದಿಗಳು ಸಮೃದ್ಧಿ ಇದ್ದರೂ ಕ್ಷಾಮ ೩

ಬ್ರಹ್ಮಪಾರ ಸ್ತೋತ್ರವ ಕಂಡು ಋಷಿಗೆ ಉಪದೇಶಿಸಿದ
ಬ್ರಾಹ್ಮಣೌಷಧಿ ಪತಿಯು ಸುಧಾಮೂರ್ತಿ ಚಂದ್ರ
ಮಹಿಗೆ ಅಹ್ಲಾದವ ನೀವನು ಮಂತ್ರಿಸ್ಥಾನವ ವಹಿಸಿ
ಅಜಸ್ಪತಿ, ಬೃಹಸ್ಪತಿ, ಶನಿ ಕುಜ ಗೋಪಾಲ
ಸರ್ವರಿಗೂ ನಮೋ ನಮೋ ೪

ರಸನೆ ಲೋಲ್ಯಾಟ ವಾಹನ ಆಟೋಪ ಹೆಚ್ಚಿದರೂ
ರಸನೆ ಸಹ ಭಕ್ತಿಯೂ ಸಹ ಹೆಚ್ಚುವುದು ಮದುವೆ ಜನನ ಕಡಿಮೆ
ಶಾಸ್ತ್ರ, ವಿಜ್ಞಾನ, ವಿಷ್ಣು ಸಹಸ್ರನಾಮ ಪ್ರತಿಪಾದ್ಯ
ಸರಸಿಜಾನನ ತಾತ ಪ್ರಸನ್ನ ಶ್ರೀನಿವಾಸನಲಿ ಶರಣು ಶರಣಾದೆ ೫

ಶ್ರೀ ಲಕ್ಷ್ಮೀ ಭೂಮಾ ನೃಸಿಂಹನ್ನ ಆರಾಧಿಸಿ
ಶೀಲ ಉದ್ಭಕ್ತಿಯಲಿ ಸ್ತುತಿಸುವ ಶನ್ಯೈಶ್ಚರ
ಇಳೆಯಲ್ಲಿ ವಿಂಧ್ಯಾಚಲ ದಕ್ಷಿಣ ದೇಶದಲಿ ಹೊಳೆಯುತಿಹ
ರಾಜನಾಗಿ ಆಂಗೀರಸ ಸಂವತ್ಸರದಿ ತಂ ನಮೋ ಪ

ಶ್ರೀಮುಖ ಸಂವತ್ಸರ ಸ್ತುತಿ

೧೫೧

ಶ್ರೀಮುಖ ಸಂವತ್ಸರದಿ ಈ ಮಹೀ ಸಜ್ಜನರು ಸರ್ವರನು
ಕಷ್ಟ ಉಪಟಳ ಹಾವಳೀ ಯಾವುದೂ ಪೀಡಿಸದೆ ಸೌಖ್ಯದಲಿ
ಇರಲಿಕ್ಕೆ ದಯಮಾಡಿ ಒದಗಲಿ ನಿರ್ದೋಷ
ಸರ್ವೇಶ ರಮಾಪತಿಯು ಪ

ಪೂರ್ಣ ಕಲ್ಯಾಣತಮ ಗುಣಗಣಾರ್ಣವ ಅನಘ
ಶ್ರೀಮನ್ನಾರಾಯಣನು ಘನದಯದಿ ಅತ್ರಿ ಋಷಿಗೊಲಿದು
ತನ್ನನ್ನು ತಾನೇವೆ ದತ್ತಮಾಡಿ ತಾ ದತ್ತನೆನೆಸಿಕೊಂಡ
ಅನುಪಮ ಮಹಾಯೋಗ ಯೋಗೇಶ್ವರನು
ಶ್ರೀಮುಖದಿ ಕಾಯಲಿ ಶರಣೆಂಬೆ ೧

ಶ್ರೀಮುಖ ಸಂವತ್ಸರ ಅನುಕೂಲ ಕಾಲವು ಯೋಗ್ಯ ಸುಜನರಿಗೆ
ಶ್ರೀ ಮಹಾಮುನಿಕುವರನೆಂದು ಪ್ರಾದುರ್ಭವಿಸಿದ ದತ್ತಾತ್ರೇಯನ್ನ
ಸುಮನಸೆ ವಾಕ್‌ಕಾಯದಿಂ ಸೇವಿಸುವವರಿಗೆ
ಜ್ಞಾನಬಲ ಐಶ್ವರ್ಯವಿತ್ತು
ರೋಗನಿವಾರಣ ಮಾಳ್ಪ ಕರುಣಾಳು
ದತ್ತಘೃಣೀಬ್ರಹ್ಮವಾಯುಸೇವ್ಯ ೨

ಶ್ರೀಮುಖ ಸಂವತ್ಸರ ರಾಜಾ ಬುಧನು ಮಹಾಶ್ರೇಷ್ಠ ಬುದ್ಧಿಕುಶಲನು
ಬ್ರಹ್ಮದೇವರಿಂದ ಕೃತ ಬುಧನಾಮ ಶ್ರೀ ನಾರಾಯಣ ಪ್ರಿಯನು
ಸಂವತ್ಸರ ಸಚಿವಾದಿ ಉಪನಾಯಕ ಸಹ
ಪಾಲಿಸಲಿ ಲೋಕ ಜನರನ್ನು
ಬ್ರಹ್ಮದೇವರಪಿತ ಪ್ರಸನ್ನ ಶ್ರೀನಿವಾಸ ಶ್ರೀ
ಕೃಷ್ಣನೊಲುಮೆಯಿಂದ ೩ ಪ

ಶ್ರೀ ಭಾವ ಸಂವತ್ಸರ ಸ್ತೋತ್ರ

೧೫೨

ಭೇಶ ಸರ್ವೇಶ್ವರ ಶ್ರೀಪತಿಯೇ ಈ ಭಾವ
ಸಂವತ್ಸರ ನಿಯಾಮಕನು ನಮೋ ನಮೋ ಸ್ವಾಮಿ ಪ

ಇಲ್ಲಿ ಬರುವ ನುಡಿಗಳ ಅರ್ಥ ಅನುಸಂಧಾನಗಳ
ಎಲ್ಲ ವೇದ ಆಗಮ ಗಾಯತ್ರಿ ಮಹಾಮಂತ್ರ ಬಾಹ್ಯರಿಗೆ ಅಲ್ಲ
ಮೀರುವರಿಗೆ ಒಳ್ಳೇದು ಅಲ್ಲ ೧

ಶ್ರವಣ ಪಠನ ಫಲಮೋಕ್ಷಸಾಧನ ಜ್ಞಾನ
ಅವಾಂತರ ಫಲ ಕೀರ್ತಿ ಯಶಸ್‌ಲಾಭ ಕಷ್ಟಕಲುಷನಾಶ
ವಿವಾದ ಸಂವತ್ ಸಂಜ್ಞಾನ ಅಧೋ ಪ್ರಾಪ್ತಿ ಯಥಾಯೋಗ್ಯ ೨

ಆಂಗೀರಸ ವರುಷ ಶ್ರವಣಕ್ಕೆ ಅನುಕೂಲ ಶ್ರೀ ಭಾವವು
ಮನನಕ್ಕೆ ಅನುಕೂಲ ಸಾಧನ ಈಗ ಈ ಭಾವ
ಸಂವತ್ಸರ ಉತ್ತಮರೀತಿಯಲ್ಲಿ ಮಾಳು ಸುಧ್ಯಾನಕೆ ೩

ವೇದಪ್ರತಿಪಾದ್ಯ ಸರ್ವೋತ್ತಮ ಸರ್ವಸ್ವಾಮಿಯ ಸಾಕ್ಷಾತ್ಕಾರ
ತನ್ನಿಚ್ಛೆ ಇಂದಲೇ ಈವ ಶ್ರೀ ವಿಷ್ಣು ಪ್ರೀತಿಕರ ಸಾಧನ ೪

ಸದಾಗಮದಿಂದಲ್ಲೇ ಯಥಾಯೋಗ್ಯ ಸಂವೇದ್ಯ ವಿಷ್ಣು
ತ್ರಯೀಮಯನು ಧರ್ಮಮಯನು ತಪೋಮಯನು ಅವನೇ
ಜಗಜ್ಜನ್ಮಾದಿ ಕರ್ತುತ್ವಾದಿಗಳ ಕಲ್ಯಾಣತಮ ಮಹಿಮೆಗಳ ೫

ಶ್ರದ್ಧಾಭಕ್ತಿಯಿಂ ವಿಶೇಷ ಜಿಜ್ಞಾಸವ ಸೌಶೀಲ್ಯ ಗುಣವಂತ
ಅಜಶಂಕರಾದಿಗಳಿಂ ಮಾಡಲ್ಪಟ್ಟ ಷಡ್ಗುಣೋಪಲಕ್ಷಿತ ಅನಂತ
ಕಲ್ಯಾಣ ಗುಣರೂಪನಾದ ಭಗವಂತನ ಪ್ರಸಾದ
ಲಭಿಸೇ ಸಾಧನಸುಧ್ಯಾನ ೬

ಭಗವಾನ್ ಭೇಶ ಸರ್ವೇಶ್ವರ ಅಜನ ಪಿತ ಪ್ರಸನ್ನ ಶ್ರೀನಿವಾಸ
ತನ್ನಿಚ್ಛೆ ಇಂದಲೇ ಸಜ್ಜೀವರಗೀವ ಯೋಗ್ಯತೆ
ಅರಿತು ಅಪರೋಕ್ಷ್ಯ ಕರುಣಾಸಮುದ್ರ ಶ್ರೀಪ ೭

ಶ್ರೀ ಯುವನಾಮ ಸಂವತ್ಸರ ಸ್ತೋತ್ರ

೧೫೩

ಉಗ್ರಂ ವೀರಂ ಮಹಾ ವಿಷ್ಣು ಅನುಪಮ ಮಹಾಜಾಜ್ವಲ್ಯ
ಸರ್ವತೋಮುಖ ಭೀಷಣ ಭದ್ರ ಮೃತ್ಯು

ನರಸಿಂಹ ದೇವ ದೇವ ದೇವೋತ್ತಮನಲಿ ಶರಣಾದೆ
ಯುವನಾಮ ಸಂವತ್ಸರ ಅಸಮ ನಿಯಾಮಕನಲ್ಲಿ ಪ.

ಬಾಲಿಶತನ ಕಳಿದು ಪ್ರೌಢಿಮೆಯಲಿ ಬರುವ
ಯುವಕ ಯುವತಿಯರು ಸಾರ ಅಸಾರ ವಿವೇಕದಿ
ಇಹಪರ ಸಾರ್ಥಕ ಆಗುವ ಜೀವನ ಕ್ರಮದಿ
ಚರಿಸಲು ಯೋಗ್ಯವಾಗಿರುವದು ಈ ಯುವನಾಮ ವರ್ಷ ೧

ಹರಿರೇವ ಪರೋ ಹರಿರೇವ ಗುರುರ್ ಹರಿರೇವ ಜಗತ್ಪಿತೃ
ಮಾತೃಗತಿಃಯೆಂಬ ಪರಮೋತ್ತಮ ಬಲು ಆಪ್ತ ವಾಕ್ಯವ
ಪ್ರತಿಕ್ಷಣ ಸಂಸ್ಮರಿಸಿದರೆ ಇಷ್ಟ ಸಿದ್ಧಿ ಅನಿಷ್ಟ ನಿವಾರಣ
ದಿನ ದಿನ ವಿಹಿತ ಸಾಧು ಕರ್ಮ ಆಚರಿಪರಿಗೆ ೨

ವಿಷ್ಣು ಪುರಾಣದಿ ಪರಾಶರ ಮಹರ್ಷಿ ಉಪದೇಶಿಸಿದಂತೆ
ಪಾಷಂಡಿಗಳಲ್ಲಿ ಪಾಷಂಡ ಮತ ಪ್ರವರ್ತಕರಲಿ ಮೋಹ ಕೂಡದು
ಸಾತ್ವಿಕ ಪುರಾಣಧಿಕ್ಕರಿಸುವ ಸ್ತ್ರೀ ಪುರುಷರ ಕ್ರೌರ್ಯಕ್ಕೆ
ಬಾಗಿ ಸ್ನೇಹಿಸುವ ಜನರು ವಿಪತ್ತಿಗೆ ಗುರಿ ಜನ್ಮ ಜನ್ಮಕ್ಕೂ ೩

ಯುವ ವರ್ಷ ರಾಜನು ಸಾಧು ಸಜ್ಜನಪ್ರಿಯ ಶನಿಮಹಾರಾಜನು
ಹರಿಭಕ್ತರು ಸಜ್ಜನರುಗಳಿಗೆ ಸಹಾಯಕನು ಗೋಚಾರದಿ
ಸ್ವಕ್ಷೇತ್ರಿ ಮೂಲ ತ್ರಿಕೋಣದೆ ಚಾರ ಶ್ರೀಹರಿ ನಿಯಮನದಿ
ಮಂತ್ರಿ ಶುಕ್ರಚಾರ್ಯರು ಗೋಜನ ಪ್ರಿಯರು ಲೋಕ ಹಿತಕರರು ೪

ಶನೈಶ್ಚರ ಕೃತ ಲಕ್ಷ್ಮೀ ಭೋಮ ನರಸಿಂಹ
ಸ್ತೋತ್ರ ಅವಶ್ಯಪಠನೀಯ
ಧಶರಥ ಕೃತ ಮತ್ತು ಪ್ರಸನ್ನ ಶ್ರೀನಿವಾಸೀಯ
ಶನಿ ಸ್ತೋತ್ರ ಈ ನುಡಿಗಳು
ಸಂವತ್ಸರ ಸ್ತೋತ್ರ ಯತಿವರ್ಯರು ಪಂಡಿತರು ಮತ್ತೆಲ್ಲರಿಂಪಠನೀಯ
ಭಕ್ತಿ ಪೂರ್ವದಿ ಪಠಿಸಿ ಮನನ ಮಾಳ್ಪರಿಗೆ ವನರುಹಾಸನ
ಪಿತ ಪ್ರಸನ್ನ ಶ್ರೀನಿವಾಸ ರಕ್ಷಿಸುವ ಪ್ರತಿಕ್ಷಣದಿ ೫

ಶ್ರೀ ಪ್ರಮಾದೀ ಸಂವತ್ಸರ ಹರಿಸ್ತೋತ್ರ

೧೫೪

ಪೂರ್ಣ ಗುಣನಿಧಿ ಅನಘ ಸರ್ವೋತ್ತಮ ಜ್ಞಾನ –
ಆನಂದ ಮಯ ಕೃಷ್ಣ ವಾಮನ ಸರ್ವೇಶ
ಜನುಮಾದಿ ಕರ್ತಾ ಪ್ರಮಾದೀ ಸಂವತ್ಸರ
ಸುನಾಮನೇ ಅನಿಷ್ಟಹರ ಇಷ್ಟಪ್ರದ ಶರಣು ಪ

ತೇಜಸ್ಸಲಿಲ ಪೃಥಿವಿ ಶ್ರೀವಾಯುರುದ್ರರೊಳು
ರಾಜರಾಜೇಶ್ವರ ತ್ರಿವೃತ್ ಪ್ರಮಾದೀ
ರಾಜೀವ ಜಾಂಡ ಕಾರಣ ದೊರೆಯೆ ನೀನಿಂತು
ಪ್ರಜೆಗಳ ರಕ್ಷಿಸುವಿ ನೀ ಪೂರ್ಣಕಾಮ ೧

ರಾಜರು ರಾಜ್ಯಾಧಿಕಾರಿಗಳು ಈ ವರುಷ
ರಜಸ್ತಮೋನ್ನಾಹದಿ ಕ್ರೋಧ ಮತ್ಸರದಿಂ
ರಾಜ್ಯ ಜನರ ಪೀಡಿಸದಂತೆ ನೀಮಾಡೋ
ರಾಜೀವೇಷಣ ವೃಷ್ಟಿ ಸಸ್ಯವರ್ಧಿಸುವಿ ೨

ಉತ್ತಿಷ್ಠ ಶ್ರೀಕರ ಶ್ರೀಯಃ ಪತೆ ಜಗನ್ನಾಥ
ಪದ್ಮಭವಪಿತ ಶ್ರೀ ಪ್ರಸನ್ನ ಶ್ರೀನಿವಾಸ
ಸದಾನಮೋ ಸುಹೃತ್ ತ್ರಿವೃತ್ ಪ್ರಮಾದೀವಾಮನಕೃಷ್ಣ
ಹೇ ಧಯಾನಿಧೇ ಶರಣು ಅನಿಮಿತ್ತ ಬಂಧು ೩

ಶ್ರೀ ದುಂದುಭಿ ಸಂವತ್ಸರ ಸ್ತೋತ್ರ

೧೫೫

ವಂದೇ ದುಂದುಭಿ ಸಂವತ್ಸರ ನಿಯಾಮಕಗೆ
ಇಂದಿರಾಪತಿ ಪೂರ್ಣ ಆನಂದ ಚಿನ್ಮಯಗೆ
ಚಂದಕರದಲಿ ವಂಶ ಇಷ್ಟಿ ಕರುಣಾದೃಷ್ಟಿ ನಂದನಂದನ
ವಸುದೇವ ದೇವಕೀ ಸುತಗೆ ಪ.

ರಾಜಾ ಶುಕ್ರನು ಬುಧ ಮಂತ್ರಿ ಮೊದಲಾದವರೊಳು ರಾಜಸುತ
ಏಕಸ್ವರಾತ್ ಅಂತರ್ಯಾಮಿ ಈ ಜಗಜ್ಜನರ ಸಾಧು ಸಾಧನಕ್ಕಾಗಿ
ನಿರ್ವ್ಯಾಜ ಕರುಣದಿ ಮಳೆ ಬೆಳೆ ಸೌಖ್ಯಗಳ ಈವ ೧

ಅಲ್ಲಲ್ಲಿ ಅಗ್ನಿ ಭಯ ಚೋರ ದುಷ್ಟರ ಭಯ
ಸುಳ್ಳುವಾದಿಗಳ ಚಟುವಟಿಕೆ ಆಗಾಗ ಕಳೆದು
ಸಜ್ಜನರನ್ನು ಕಾಪಾಡಿ ಲೋಕ ಕ್ಷೇಮ ಮಾಲೋಲ
ಮಾಳ್ಪನು ಪಾರ್ಥ ಸಖ ಪಾಂಡವೇಯ ಪಾಲ ೨

ಪುತ್ರ ಸಂತಾನ ಬೇಕೆಂಬ ಸಾಧು ಭಕ್ತರಿಗೆ
ವೈರಾಡಿ ವರದನು ವಿಪ್ರನಿಗೆ ಒಲಿದವನು
ಚಂದ್ರ ಶೇಖರ ನುತನು ವನಜ ಭವ ತಾತನು
ಶ್ರೀ ಪ್ರಸನ್ನ ಶ್ರೀನಿವಾಸನ ದಯದಿ ಈವ ಸಂತಾನ ಸಂಪತ್ತು ೩

– ಶ್ರೀ ಕೃಷ್ಣಾರ್ಪಣಮಸ್ತು –

ಶ್ರೀ ರುಧಿರೋದ್ಗಾರಿ ಸಂವತ್ಸರ ಸ್ವಾಮಿ ಧನ್ವಂತರಿ ಸ್ತೋತ್ರ

೧೫೬

ಆನಂದ ಚಿನ್ಮಾತ್ರ ವಪುಷ ಸರ್ವಾಧಾರ
ಅನಘ ಕೂರ್ಮಹಯ ಶೀರ್ಷ ಸ್ತ್ರೀರೂಪ ಅಜಿತ
ಆನಮೋ ರುಧಿರೋದ್ಗಾರಿ ಸಂವತ್ಸರ ಸ್ವಾಮಿ
ಅನುತ್ತಮ ಸರ್ವೋತ್ತಮ ಧನ್ವಂತರಿ ರಮೇಶ ಪ

ರಾಜಗುರು ಮಂತ್ರಿಗುರು ಸೇನಾಧಿಪತಿ ಬುಧನು
ರಾಜಿಸುವರು ಸೂರ್ಯೇಂದು ಕವಿ ಭೂಮ ರವಿಜ
ಪ್ರಜ್ವಲಿಸಿ ನೀ ಇವರೊಳ್ ಕೃತಿಯ ನಡೆಸಿ ಲೋಕ
ಪ್ರಜೆಗಳಿಗೆ ಮಳೆ ಬೆಳೆ ಸೌಖ್ಯವಿತ್ತು ಪೋಷಿಸುವಿ ೧

ದೇಶದೇಶ ರಾಜ್ಯಾಧಿಪರ್ಗಳ ಪರಸ್ಪರ
ಸಂಶಯ ದುರ್ಮನವ ಆಗಾಗ ಶಾಂತ ಮಾಡುವುದು
ಮೋಸಗಾರ ಕುಜನರು ಚೋರ ಕ್ರೂರರು ಮಾಳ್ಪ
ಹೊಸ ಹೊಸ ಚಟುವಟಿಕೆ ಪರಿಹರಿಸಿ ಕಾಯೋ ಲೋಕವನು ೨

ವೇದವ್ಯಾಸವಿರಚಿತ ಸಾತ್ವಿಕ ಪುರಾಣಗಳ
ಯಥಾರ್ಥ ಪೇಳಿದೆ ದುಷ್ಟಾರ್ಥ ಪೇಳಿ ಜನರ ಮೋಹಿಸಿ
ಸಾಧು ಸ್ತ್ರೀಪುರುಷರ ಪ್ರೌಢಕನ್ಯೆ ಬಾಲರ ವಂಚಿಪ
ಧೂರ್ತರನು ಅಡಗಿಸಿ ಸತ್ಯಧರ್ಮ ಸಂತಾನ ಬೆಳೆಸೋ ೩

ರಾಜ ಸಚಿವನು ಬೃಹಸ್ಪತಿಯಂತರ್ಗತನಾದ
ರಾಜರಾಜೇಶ್ವರನೆ ನೀ ಅಂದು ಮಾನವಿಗೆ ಮದುವೆ
ಉಜ್ವಲ ತಪಸ್ವಿಗೆ ಪುತ್ರರ ಒದಗಿಸಿದಿ ಇಂದು
ನಿಜ ಭಕ್ತಸುತ ಕಾಮ ಪರಕಾಮ ಜನರಿಗೆ ಒಲಿಯೋ ೪

ಹಿಂದಿನ ಇಂದಿನ ಸ್ವಕರ್ಮ ಪರಕರ್ಮ ಲಬ್ಧ
ಮಾಂದ್ಯ ನರತ್ವಕೆ ಚರ್ಮ ಸೂತಕ ಗರ್ಭಿ
ವ್ಯಾಧಿಪೀಡಿತ ಸಜ್ಜನರಿಗೆ ಸುಖವೀಯೋ
ವೇಧಪ ಪ್ರಸನ್ನ ಶ್ರೀನಿವಾಸ ರುಧಿರೋಧ್ಗಾರಿ ಸ್ವಾಮಿ ೫

ರಕ್ತಾಕ್ಷಿ ಸಂವತ್ಸರ ಸ್ತೋತ್ರ

೧೫೭

ಶರಣು ಶರಣು ರಕ್ತಾಕ್ಷಿ ವರ್ಷದ ಸ್ವಾಮಿ ಶ್ರೀ ನರಸಿಂಹನೇ
ಶರಣು ದುರ್ಗಾರಮಣ ಜಗಜ್ಜನ್ಮಾದಿ ಕಾರಣ ಪಾಹಿಮಾಂ ಪ

ಸರಸಿಜಾಸನ ಶಿವ ಶಕ್ರಾದಿ ಸುರಸುವಂದಿತ ಪಾದನೇ
ಶ್ರೀ ರಮಾಯುತನಾಗಿ ನೀ ಸಂವತ್ಸರದ ನಾಯಕರೊಳು
ಇರುತ ಪ್ರಜೆಗಳ ಯೋಗ ಕ್ಷೇಮವ ವಹಿಸಿ
ಪೊರೆವಿ ದಯಾನಿದೇ ೧

ರಾಜ ಸೋಮನು ಮಂತ್ರಿ ಭೃಗು ಸೇನಾಧಿಪತಿ ಬೃಹಸ್ಪತಿ
ಪ್ರಜ್ವಲಿಪರ ವಿಸಸ್ಯ ನಾಯಕ ಶನಿಯು ಧಾನ್ಯ ಅಧಿಪನು
ರಾಜರಾಜೇಶ್ವರನೆ ನಿನ್ನ ಆಜ್ಞೆಯಿಂದ ಚರಿಪರು ೨

ಶರಣು ಭಕ್ತರ ಕಾಯ್ವ ಕರುಣಾ ವಾರಿ ವಿಧಿ ನೀ ಸರ್ವದಾ
ತರಿದು ಪಾಪವ ಪುಣ್ಯ ಒದಗಿಸಿ ಭಕ್ತಿ ಜ್ಞಾನ ಆಯುಷ್ಯ
ಆರೋಗ್ಯವಿತ್ತು ಕಾಯೋ ಅಜಪಿತ ಪ್ರಸನ್ನ ಶ್ರೀನಿವಾಸನೇ ೩

ಶ್ರೀ ಕ್ರೋಧನ ನಾಮ ಸಂವತ್ಸರ ಸ್ತೋತ್ರ

೧೫೮

ಕ್ರೋಧನ ಸಂವತ್ಸರ ನಿಯಾಮಕ ಸ್ವಾಮೀಶ್ರೀ
ಪದುಮಾಲಯಪತಿ ನಾರಸಿಂಹನ ಪಾದ
ಪದುಮದಲಿ ಶರಣಾದೆ ಸರ್ವಗ್ರಹದಲ್ಲಿ
ಇದ್ದು ತಾ ಕೃತಿ ನಡೆಸಿ ಶರಣರ ಕಾಯ್ವ ಪ

ಈ ಸಂವತ್ಸರ ರಾಜಾ ಶುಕ್ರ ಮಂತ್ರೀ ಶನಿಯು
ಶನೈಶ್ಚರನೇ ಸೈನ್ಯಾರ್ಘ ಮೇಘ ಸಸ್ಯಪತಿ
ರಸಪಗುರು ನಿರಸ ಸಸ್ಯಪ ಮಂಗಳ
ಸುಸೌಖ್ಯ ಬಹುಕ್ಷೀರ ಧಾನ್ಯ ವೃಷ್ಟಿದ ಚಂದ್ರ ೧

ಕಾಡು ಕಿಚ್ಚು ಮೊದಲಾದ ಅಗ್ನಿಭಯ ರೋಗ
ಪೀಡೆ ಜನರಲ್ಲು ರಾಜರಲು ಪರಸ್ಪರ
ಅಡಿಗಡಿಗೆ ಸ್ನೇಹಹಾನಿ ಸೈನ್ಯಕಲಹ
ದುಷ್ಟಭಯ ಕಳೆದು ಭಕ್ತರ ಕಾಯ್ವ ಹರಿ ೨

ತತ್ವದೇವರ್ಗಳು ಸಭಾರ್ಯಾ ರವಿಸೋಮರು
ಶಿವಾಶಿವ ವರ ಸಮೀರ ಇವರುಗಳಿಂ
ಸೇವ್ಯ ಶ್ರೀ ಶ್ರೀಯುಕ್ ಪ್ರಾಣಯಮ್ಮೊಳ್‌ಜ್ವಲಿಸಿಕಾಯ್ವ
ಸರ್ವಗ ವೇಧಪಿತ ಪ್ರಸನ್ನ ಶ್ರೀನಿವಾಸ ೩

ಅಮರ - ದೇವತೆಗಳು
ಅಭಿನ್ನ - ಭಿನ್ನವಿಲ್ಲದವನು
ಅಜ - ಬ್ರಹ್ಮ
ಅಮಲ - ಪವಿತ್ರ
ಅಘಕೂಟ - ಪಾಪಸಮೂಹ
ಅಪವರ್ಗ - ಮೋಕ್ಷ
ಅನಿಷ್ಟಹ - ಪಾಪಪರಿಹಾರಕ
ಅದೃಷ್ಟದೃಷ್ಟ - ಕಾಣಿಸಿ ಕೊಳ್ಳುವನು ಕಾಣಿಸಿಕೊಳ್ಳದವನು
ಅದೋಷ -ದೋಷವಿಲ್ಲದವನು
ಅಪ್ರತಿ - ಮತ್ತೊಂದಿಲ್ಲದ
ಅಜಿತ - ಅಜೇಯ
ಅನಿಮಿಷರು - ದೇವತೆಗಳು
ಅಹಿಭೂಷಣ - ಸರ್ಪಭೂಷಣ
ಅಮರತಟಿನೀಧರ- ಗಂಗಾಧರ
ಅಚಲಸುತೆ - ಪಾರ್ವತಿ
ಅಭಯಕರ - ಅನುಗ್ರಹಹಸ್ತ
ಅರ್ಕಸ್ಥ - ಸೂರ್ಯನೊಳ- ಗಿರುವವನು
ಅರ್ತಿಹಂತ - ಪಾಪಪರಿಹಾರಕ
ಅತಿರೋಹಿತ - ಯಾವಾಗಲೂ ಮರವೆಯಿಲ್ಲದ
ಅನಿರೂದ್ಧಜಾತ - ಬ್ರಹ್ಮ
ಅಹರಹ - ಹಗಲೂ ರಾತ್ರಿ
ಅದ್ರಿ - ಬೆಟ್ಟ
ಅಸಚ್ಛಾಸ್ತ್ರ ಗಿರಿಕೂಲಿಶ - ದುಃಶಾಸ್ತ್ರ ಪರ್ವತ ವಜ್ರಾಯುಧ
ಅಂಬುಶಾಯಿ - ನಾರಾಯಣ

ಅ–೨
ಅಸಿತ ಪಕ್ಷ - ಕೃಷ್ಣಪಕ್ಷ
ಅಜ್ಞಾನತಿಮಿರಾ ರಣ್ಯವೀತ ಹೋತ್ರ- ಅಜ್ಞಾನವೆಂಬ ಕತ್ತಲೆಯ ಕಾಡಿಗೆ ಬೆಂಕಿಯಂತೆ
ಅಘದಾತ - ಪಾಪವನ್ನು ಕಳೆಯುವವನು
ಅಜಾಡ್ಯ - ಹುಟ್ಟಿಲ್ಲದವನು
ಅಬ್ಜಜ - ಬ್ರಹ್ಮ
ಅಹರ್ನಿಶಿ - ಹಗಲಿರುಳು
ಅಕಾಮ್ಯ - ಅಪೇಕ್ಷೆಯಿಲ್ಲದವನು
ಅಸು - ಪ್ರಾಣ
ಅಖಂಡೈಕ - ಪರಿಪೂರ್ಣ
ಅನುಘೋತ್ತಮ - ಅತ್ಯುತ್ತಮ
ಅನ್ನ - ಅನ್ನನಾಮಕ ಪರಮಾತ್ಮ
ಅಮಲೋರು - ನಿರ್ಮಲವಾದ
ಅಮೃತಸರಿತ - ದೇವಗಂಗಾ
ಅವರಜರು - ತಮ್ಮಂದಿರು/ ಕೆಳಗಿನವರು
ಅಸುಪಾಲ - ಪ್ರಾಣದೇವರು
ಅಷ್ಟಮಾರುತಿ - ರುದ್ರದೇವರು
ಅಸಿತಕಾಲ - ಕತ್ತಲೆಯಲ್ಲಿ
ಅಜಿತಭೂಮನನ್ನೇ- ಅಜಿತಾದಿ ಅನಂತನಾಮ- ಕನಾದ ಪರಮಾತ್ಮನನ್ನು

ಆ
ಆಗತೇಷ್ಟಪ್ರದ - ನಂಬಿದವರ ಇಷ್ಟಪ್ರದ
ಆರು ಅಕ್ಷರಮಂತ್ರ - ಓಂಕ್ಲೀಂ ಕೃಷ್ಣಾಯನಮಃ

ಆಮ್ನಾಯ
ಕೂಅಮಿತ – ವೇದಶಾಸ್ತ್ರಕ್ಕೂ ಅಗೋಚರವಾಗಿರುವವನು
ಆಗಮ – ವೇದ
ಆದಿಕಾರಣ – ಸೃಷ್ಟಿಗೆ ಕಾರಣ
ಆಲಿಪುದು – ಕೇಳುವುದು
ಆರ್ಷದ – ಋಷಿಗಳಿಗೆ ಸಂಬಂಧಿಸಿದವ
ಆಧೇಯ ಆಧಾರ – ಆಧಾರವಾಗಿರುವ ವಸ್ತು ಮತ್ತು ಆಧಾರವಾಗಿರುವ ವಸ್ತುವನ್ನು ಅವಲಂಬಿಸಿರುವುದು

ಇ

ಇನ – ಸೂರ್ಯ
ಇಷ್ಟದ – ಇಷ್ಟಾರ್ಥ
ಇಷುಜಲ್ಲೆ – ಕಬ್ಬಿನಜಲ್ಲೆ
ಇನಸುತ – ಸೂರ್ಯಪುತ್ರ ಸುಗ್ರೀವ
ಇನಕುಲತಿಲಕ – ಸೂರ್ಯವಂಶಕ್ಕೆ ತಿಲಕಪ್ರಾಯನಾದ ಶ್ರೀರಾಮ
ಇಳೆ – ಭೂಮಿ
ಇಂದುಧರ – ಚಂದ್ರಶೇಖರ
ಇಲಾಪತಿ – ಯಮಧರ್ಮರಾಜ
ಇತ್ಯಪೂಜ್ಯನು – ಇಚ್ಛಿಸಲ್ಪಡುವವನು ಮತ್ತು ಪೂಜಿಸಲ್ಪಡುವವನು
ಇತರಾಸೂನು – ಇತರ ದೇವಿ ಯಮುಗಮಹಿ ದಾಸ

ಈ

ಈಡ್ಯ – ಪೂಜ್ಯ
ಈರಾರು – ಹನ್ನೆರಡು
ಈಶಸಮೇತ – ಸುಂದರರಾಜರ ಸಮೇತ
ಈರಡಿಯಲಿ – ಎರಡುಪಾದದಲ್ಲಿ
ಈಡು – ಸರಿಸಮ
ಈರ್ವಿಧ – ಎರಡುವಿಧ

ಉ

ಉದ್ದಾಮ – ಶ್ರೇಷ್ಠ
ಉರು – ಅತಿದೊಡ್ಡ
ಉರಗಪರುಗಳಿಂದ – ಶೇಷದೇವರುಗಳಿಂದ
ಉರುಕ್ರಮ – ಹೆಚ್ಚುಪರಾಕ್ರಮ
ಉಲ್ಕ – ಅಗ್ನಿಜ್ವಾಲೆ
ಉರ – ವಕ್ಷಸ್ಥಳ
ಉಡುಪೀಶ – ಉಡುಪಿಶ್ರೀಕೃಷ್ಣ
ಉಡುಪ – ಚಂದ್ರ
ಉರಗಭೂಷಣ – ಸರ್ಪಭೂಷಣ
ಉದಕಜಾಸನ – ಕಮಲಬ್ರಹ್ಮ
ಉಡು – ನಕ್ಷತ್ರ
ಉಪಟಳ – ತೊಂದರೆ
ಉಪೋಷಣ – ಉಪವಾಸ
ಉಸುವು – ಮರಳು
ಉತ್ಕೃಷ್ಟ – ಶ್ರೇಷ್ಠ
ಉಡುಪಶೇಖರ – ಚಂದ್ರಶೇಖರ
ಉದಧಿ – ಸಮುದ್ರ

ಎ

ಎರಡು ಕೋಶ – ೨ ಮೈಲಿ
ಎನ್ನುಪದ್ರವಗಳು – ಎನ್ನಕಷ್ಟಗಳು

ಏ

ಏಕಾತ್ಮ - ಸರ್ವಾಂತ
ರ್ಯಾಮಿ
ಏಕಶೃಂಗಧರ - ಒಂದೇ
ಕೊಂಬುಳ್ಳವ
ಏಳುತಗ್ಗಿನ ಗುಡ್ಡ - ಬೆಟ್ಟ

ಐ

ಐದುವ - ಸೇರುವ
ಐಹಿಕ - ಪ್ರಾಪಂಚಿಕ

ಔ

ಔದಾರ್ಯ - ಉದಾರತೆ
ಔದುಂಬರ - ಅತ್ತಿಮರ

ಅಂ

ಅಂಬುಧಿ - ಸಮುದ್ರ
ಅಂಬರ - ಆಕಾಶ
ಅಂಬು - ನೀರು
ಅಂಭ್ರಣಿ - ಲಕ್ಷ್ಮೀದೇವಿ
ಅಂಜಲಿ - ಬೊಗಸೆ
ಅಂಬುಜ - ಕಮಲ
ಅಂಡಕಬಾಹ - ಬ್ರಹ್ಮಾಂಡಕಬಾಹ
ಅಂಬುಧಿಜಾ - ಲಕ್ಷ್ಮೀದೇವಿ
ಅಂಗುಲೀಯಕ - ಉಂಗುರ
ಅಂಜನಾಸುತ - ಆಂಜನೇಯ
ಅಂಘ್ರಿಸುಯುಗ್ಮ - ಪಾದಕಮಲಗಳು
ಅಂಬೋನಿಧಿ - ಕ್ಷೀರ
ಸಮುದ್ರವಾಸಿನಿ
ಅಂಬಳ - ಜಗನ್ಮಾತೆ
ಅಂಬುಜನಾಭ - ಪದ್ಮನಾಭರೂಪಿ
ಪರಮಾತ್ಮ

ಕ-ಗ

ಕರಿ - ಆನೆ
ಕಚ್ಛಪ - ಆಮೆ
ಕಮಲಭವ - ಬ್ರಹ್ಮ
ಕಮಠ - ಕೂರ್ಮ
ಕಪೀಂದ್ರಗೊಲಿದ - ಹನುಮಂತನಿಗೆ
ಒಲಿದ ಶ್ರೀರಾಮ
ಕರಿವರದ - ಗಜೇಂದ್ರನಿಗೆ ವರದ
ಕಪ್ಪುಕಂಠ - ನೀಲಕಂಠ
ಕರ್ದಮಸುತ - ಕಪಿಲನಾಮಕ
ಪರಮಾತ್ಮ
ಕಲುಶನಾಳ - ಪಾಪನಾಳ
ಕಲಿಮಲಾಪಕಂ - ಪಾಪ ಪರಿಹಾರಕ
ಕರೋದ್ಧಿತ - ಕರದಿಂದುದಿಸಿದ
ಕಮಲಕರ್ಣಿತೆ - ಕಮಲದ
ಮಧ್ಯಭಾಗ
ಕಲುಶ - ಕಳುಕ
ಕರ್ತಜ - ಕರ್ತೃವಾಗಿರುವ
ಕಂದರದಲ್ಲಿ
ಗುಂಜಕಂಬಸರವ - ಕುತ್ತಿಗೆಯಲ್ಲಿ
ಗುಲಗಂಜಿ ಸರವ
ಕರಕಂಜೋತ್ಪನ್ನ - ಕರಕಮಲದಿಂದ
ಉತ್ಪನ್ನ
ಕಾರ್ತಿಕೇಯ - ಸುಬ್ರಹ್ಮಣ್ಯ
ಕಾಮಿತಾರ್ಥ - ಬೇಡಿದ ಇಷ್ಟಾರ್ಥ
ಕಾಷ್ಠಾಗ್ನಿ - ಕಟ್ಟಿಗೆಯೊಳಗಿನ
ಬೆಂಕಿ
ಕೀಲಾಲಭವ - ಬ್ರಹ್ಮನತಾಯಿ
ರಮಾದೇವಿ
ಕುಮುದ - ನೀಲಕಮಲ
ಕುಭಾರ - ಭೂಭಾರ
ಕುಠಾರ - ಕೊಡಲಿ
ಕುಮತಿ - ದುರ್ಬುದ್ಧಿ

ಕುವಲಯ - ಭೂಮಂಡಲ
ಕುಶಾಗ್ರ - ತೀಕ್ಷ್ಣ ವಾದ
ಕುರ್ಮತ - ದುರ್ಮತ
ಕುಲೀನ - ಉತ್ತಮವಂಶಸ್ಥ
ಕೂರು - ಗುರಾಣಿ
ಕೃತ್ತಿವಾಸ - ಜಿಂಕೆಯ ಚರ್ಮವನ್ನು ಧರಿಸಿರುವ
ಕೃತೀಪತಿ - ಪ್ರದ್ಯುಮ್ನ
ಕೃಪಾಂಬು - ಆನಂದಬಾಷ್ಪ
ಕೃತಿಜಯಾತ್ರಧ್ಲೇಶ - ಪ್ರದ್ಯುಮ್ನ
ಕೇಶವ - ಸರ್ವರ ರಕ್ಷಕ
ಕೋಲರೂಪ - ವರಾಹರೂಪ
ಕೋಡಮುಖಜಾ ತಿಲಕ - ವರಾಹ ದೇವರ ಮುಖದಿಂದ ಹುಟ್ಟಿದ ತುಂಗಭದ್ರಾ ತೀರ
ಕೋವಿ - ಪಂಡಿತ
ಕೌಶೇಯ - ರೇಷ್ಮೆಪೀತಾಂಬರ
ಕೌಮೋದಕಿ - ವಿಷ್ಣುವಿನ ಗದೆ
ಕೈಟಭಾರಿ - ಶ್ರೀಹರಿ
ಕೌಶಲ್ಯ - ಜಾಣತನ
ಕಂಧರ - ಕಂಠ
ಕಂತುಪಿತ - ಮನ್ಮಥಜನಕ
ಕಂಜನೇತ್ರ - ಕಮಲನೇತ್ರ
ಕಂದನಕಾಯ್ದ - ಪ್ರಹ್ಲಾದವರದ ನಾರಸಿಂಹ
ಕ್ಷಿಪ್ರ - ಅತಿ ಶೀಘ್ರ
ಕ್ರತು - ಯಜ್ಞ
ಕ್ಷಿತಿ - ಭೂಮಿ
ಕ್ಷುತ್ತೃಷಿ - ಹಸಿವೆ ಬಾಯಾರಿಕೆ
ಕ್ರೋಶ - ಹರದಾರಿ
ಕ್ಷೇತ್ರಜ್ಞ - ಶರೀರದಲ್ಲಿರುವ
ಕ್ಷಿಪ್ರಪ್ರಸಾದ - ಗಣೇಶ
ಕುಂದೇನಿಲ್ಲದ - ನಿರ್ದೋಷನಾದ

ಖ

ಖೇಟಕ - ಗುರಾಣಿ
ಖಗಪ - ಗರುಡ
ಖದ್ರೂಜಾದಿ - ಖದ್ರುವಿನ ಮಕ್ಕಳಾದ ಸರ್ಪಗಳು
ಖಳರು - ದುಷ್ಟರು

ಗ

ಗಜಾನನ - ಆನೆಯ ಮುಖ
ಗರವು - ವಿಷ
ಗಂಗಾಜನಕ - ಶ್ರೀಹರಿ
ಗುಣಗುರ್ಲ - ಗೋಳಾಕಾರದ ಬಿದಿರಿನ ಮಂದರಿ
ಗ್ರೀವ - ಕಿತ್ತು
ಗ್ರೀವಸ್ಥ - ಕಂಠಸ್ಥಾನದಲ್ಲಿರುವ ಲಕ್ಷ್ಮೀದೇವಿ
ಗೋಪ - ಗೋಪಾಲ
ಗೌರವರ್ಣ - ಬಿಳಿಬಣ್ಣ
ಗೋರಾಟ್ - ಎತ್ತು
ಗೋವಿಂದಸುತ - ಪ್ರದ್ಯುಮ್ನ, ಸಾಂಬ
ಗುಹ - ಕುಮಾರ (ಸ್ಕಂಧ)

ಘ

ಘೃಣಿ - ದೀಪ್ತಿಮಾನ
ಕಿರಣ ಪ್ರಕಾಶವುಳ್ಳವನು - ಸೂರ್ಯ
ಘೋಟಕ - ಕುದುರೆ
ಘೋಟಕಾಸ್ಯ - ಕುದುರೆ ಮುಖವುಳ್ಳವನು (ಹಯವದನ)

ಚ

ಚರು - ಹೋಮದ ಪ್ರಸಾದ
ಚರಣಾಂಬುರುಹ - ಪಾದಕಮಲ
ಚಾರ್ವಾಂಗ - ಚಿನ್ಮಯದೇಹ
ಚತುರ್ವಿಂಶತಿ - ೨೪
ಚಾಪ ಚಿನ್ಮುದ್ರೆ - ಬಿಲ್ಲು ಹಿಡಿದು ಕೊಂಡಿರುವಂತೆ ತೋರಿ
ಚಾಮೀಕರ - ಚಿನ್ನ
ಚಾಪ - ಬಿಲ್ಲು
ಚಿಕ್ಷಕೃತಿ - ಶ್ರೀಮಹಾಲಕ್ಷ್ಮಿ
ಚಿನ್ಮೋದ ಮಯ - ಜ್ಞಾನಾನಂದ - ಮಯ
ಚಿತ್‌ಸುಖ - ಜ್ಞಾನಾನಂದಮಯ
ಚಿರಜ್ಞಾನ - ಬಹಳವಾದ ಜ್ಞಾನ
ಚಿನ್ಮಯ - ಆನಂದಾತ್ಮಕ
ಚೂಡಾಮಣಿ - ಜಡೆಹೂ
ಚಿಂತಲವಾಡಿ - ತಮಿಳುನಾಡಿ- ನಲ್ಲಿರುವ ಗ್ರಾಮ
ಚತುರೋತ್ತರ ಶತ- ೧೦೪
ಚತುರ್ವಿಂಶಕ್ಷರ - ೨೪ ಅಕ್ಷರ
ಚಿದಚಿತ್ - ಜ್ಞಾನಾನಂದ

ಛ

ಛಾಯೇಶ - ಸೂರ್ಯ
ಛಾಯಾಗ್ರಹ - ನೆರಳು

ಜ

ಜರಾಮರಣ - ಮುಪ್ಪು, ಸಾವು
ಜನಕಜಾ - ಜನಕರಾಜನ ಮಗಳು
ಜಗಜನ್ಮಾದಿಕರ್ತ - ಸೃಷ್ಟ್ಯಾದಿ ನಿರ್ಮಿಸಿದವ
ಜಲಧರ - ರುದ್ರದೇವರು
ಜಹಿಯಲು - ಕೊಲ್ಲಲು
ಜಡಜಾಂಘ್ರಿ - ಪಾದಕಮಲ
ಜಲಜಕರಸಂಜಾತ - ಕರಕಮಲದಿಂದ ಬಂದವನು
ಜಗದೇಕಭರ್ತ - ಜಗತ್ತನ್ನೇ ಧರಿಸಿರುವವನು
ಜನ್ಮಜನಕ - ಹುಟ್ಟುವ ಹುಟ್ಟಿಸುವ
ಜಯೇ - ಜಯಾಪತಿ ಸಂಕರ್ಷಣ
ಜಾನಕೀಶ - ಶ್ರೀರಾಮ
ಜಾಂಬೂನದ - ಚಿನ್ನ
ಜಿಹ್ವಾದ್ವಯ - ಆದಿಶೇಷ
ಜಿಹ್ವ - ನಾಲಿಗೆ
ಜಿನಜ - ಜಿನನಿಂದ ಅವತರಿಸಿದ ಬುದ್ಧ (ಶ್ರೀಹರಿ)
ಜ್ಞಾನಪುಂಜ - ಜ್ಞಾನದರಾಶಿ
ಜ್ಞೇನು ಜ್ಞಾತೃ - ತಿಳಿದಿರುವ, ತಿಳಿಸುವ

ತ

ತನುಜ - ಮಗ
ತಟನಿ - ನದಿ
ತರುದರಂತೆ - ಧ್ರುವನಂತೆ
ತಮ - ಕತ್ತಲೆ, ತಮಸ್ಸು
ತತ್ರತತ್ರಸ್ಥಿತೋ ವಿಷ್ಣುರ್ ತದ್ಭಕ್ತಿ ಪ್ರಬೋದಯನ್ - ಎಲ್ಲೆಲ್ಲೂ ಇದ್ದು ಅಲ್ಲಲ್ಲೇ ಅದಕ್ಕೆ ತಕ್ಕಂತೆ ವಿಷ್ಣುಭಕ್ತಿಯನ್ನು ಪ್ರಕಟಿಸುತ್ತಾನೆ.

ತಾತ – ತಂದೆ
ತಾರಕ – ಮೋಕ್ಷದಾಯಕ
ತಾಮರಸ – ಪಾದಪದ್ಮ
ತುಷ್ಟಿ – ತೃಪ್ತಿ
ತುಚ್ಛ – ಕೀಳು
ತುಷ್ಟೋದದಾನಿ – ಸಂತೋಷಪಟ್ಟಾಗ ಕೊಡುವವನು
ತುರಗಾಸ್ಯ – ಹಯವದನ
ತೇಜಸ್ಸಲಿಲ – ಬೆಳಕು,ನೀರು
ತೋಯಾಜೆ – ಲಕ್ಷ್ಮೀದೇವಿ
ತೋಯಜಾಂಘ್ರ – ಗಂಗೆಯುದ್ಧವಿಸಿದ ಪಾದ
ತೀರ್ಥಶ್ರವ – ಶುದ್ಧವಾದ ಯಶಸ್ಸುಳ್ಳವನು
ತ್ರಾತ – ಪಾಲಿಸುವವನು
ತತ್ರಸ್ಥ – ಅಲ್ಲಲ್ಲಿರುವ
ತ್ರಿಸಪ್ತಾವರ್ತಿ – ೨೧ ಸಲ
ತ್ರಿಧಾಮ – ಅನಂತಾಸನ, ಶ್ವೇತದ್ವೀಪ, ವೈಕುಂಠದಲ್ಲಿರುವವನು
ತ್ರುಟಿ – ನಿಮಿಷ
ತ್ವರಿತ – ಬೇಗ
ತ್ರಿವೃನ್ನಾಮ – ಗುಣತ್ರಯಾತ್ಮಕವಾಚ್ಯ
ತ್ರಿವೃತ್ – ಗುಣತ್ರಯ ನಿಯಾಮಕ
ತ್ವತ್‌ಕೃತ – ನಿನ್ನಿಂದ ರಚಿಸಲ್ಪಟ್ಟ

ದ

ದಶಮುಖ – ರಾವಣ
ದಶಪ್ರಮತಿ – ಮಧ್ವಾಚಾರ್ಯರು
ದಾರ – ಹೆಂಡತಿ
ದಾವಾಗ್ನಿ – ಕಾಡ್ಗಿಚ್ಚು
ದಿವಿ – ಆಕಾಶ
ದಿವಪುರ – ವಿಷ್ಣುಲೋಕ
ದುಗ್ಧ – ಹಾಲು
ದೀಪ್ತ – ಪ್ರಕಾಶ
ದೂರ್ಜಟಿ – ಶಿವ
ದೇವರಾಜ – ಇಂದ್ರ
ದಿತಿಜ – ಅಸುರ
ದೇವಮಾತೆ – ಅದಿತೀದೇವಿ
ದೇವಕೀಯಾ – ದೇವಕಿಯ ಮಗ ಕೃಷ್ಣ
ದೇವಿಜಯಾ
ಸಂಕರ್ಷಣಾತ್ಮಜ – ವಾಯು
ದೇಹಿಮೇಭದ್ರಂ – ಶ್ರೇಯಸ್ಸನ್ನು ಕೊಡು
ದ್ವಿಷೋಡಶ – ೩೨
ದ್ವಾತ್ರಿಂಶ – ೩೨
ದ್ಯುಧರಾ – ಆಕಾಶ, ಭೂಮಿ
ದ್ವ್ಯಾಸಪ್ತತಿಸಹಸ್ರ – ೭೨೦೦೦
ದ್ರವಿಣಾದಿಧನನಿತ್ತಿ – ಧನಕನಕಾದಿಸಂಪತ್ತು
ದ್ವಿಜರೂಡ – ಗರುಡವಾಹನ
ದ್ರಾವಿಕವು – ಕರಗುವುದು
ದ್ವೈಪಾಯನ – ವೇದವ್ಯಾಸ ದೇವರು
ದಾಶಾರ್ಹ – ವಿಷ್ಣು

ಧ

ಧೃತಿಸ್ಥ – ಧೈರ್ಯವಂತ
ಧೋತ್ರ – ಪಂಚೆ
ಧ್ಯಾಂತವ್ಯ – ಧ್ಯಾನದಿಂದ ತಿಳಿಯಲ್ಪಡುವವನು
ಧರಣಿಜಾಪತಿ – ಶ್ರೀರಾಮ
ಧೃತಿಪ್ರಭಂಜನ – ವಾಯುದೇವರು

ನ

ನರಪ - ರಾಜ
ನಖ - ಉಗುರು
ನರಸಿಂಹಕ್ಷೇತ್ರ - ಟಿ.ನರಸೀಪುರ
ನಮ್ರ - ವಿನಯ
ನಭ - ಆಕಾಶ
ನಗ - ಪರ್ವತ
ನಗವರ - ಮೈನಾಕಪರ್ವತ
ನಳಗುಮ - ಕೋಮಲವಾದ
ನಾಕ - ಸ್ವರ್ಗ
ನಾಮಗಿರಿ - ನಾಮಕಲ್ (ತಮಿಳುನಾಡು)
ನಾಕೀಶ - ಇಂದ್ರ
ನಾಭಿಯಲಿ ಅರವೋಲ್-ಗಾಡಿಅಚ್ಚು
ನಿಖಿಳ - ಸಕಲ
ನಿಷ್ಕಳಂಕ - ಕಳಂಕವಿಲ್ಲದವನು
ನಿರ್ಜರರು - ದೇವತೆಗಳು
ನಿರಾಮಯ - ನಿರ್ದುಃಖ
ನಿಜಸತಿ - ನಿತ್ಯಾಅವಿಯೋಗಿನಿ
ನಿರಾಸ - ಹೋಗಲಾಡಿಸುವವ
ನಿಕಾರ - ಸಮೂಹ
ನಿಖಿಳೇಷ್ಟ - ಇಷ್ಟಾರ್ಥ
ನಿರ್ದೋಷ - ದೋಷವಿಲ್ಲದ
ನಿಯಮನ - ಆಜ್ಞಾಧಾರಕ ನಾಗಿರುವವನು
ನಿರವಧಿಕ - ಸರ್ವೋತ್ತಮ
ನಿರ್ಮಮ - ಅಹಂಕಾರವಿಲ್ಲ ದವನು
ನಿಬಿಡ - ತುಂಬಿದ
ನಿಯಂತೃ - ನಿಯಮನ ಮಾಡುವವನು
ನೀರಜಜಾಂಡ - ಇಡೀಬ್ರಹ್ಮಾಂಡ
ನುತಿಪ - ಸ್ತುತಿಸುವ
ನೌಕೆ - ಹಡಗು
ನಂದಿನೀಧರ - ರುದ್ರದೇವರು
ನಿಂಬ - ಮಂದಾರವೃಕ್ಷ

ಪ

ಪದುಮಜಾಂಡ - ಬಹ್ರಾಂಡ
ಪಹೋನಿಧಿ - ಕ್ಷೀರಸಾಗರ
ಪರಮೇಷ್ಠಿ - ಬ್ರಹ್ಮ
ಪಟು - ಬಲಿಷ್ಠವಾದ
ಪನ್ನಗಗಿರಿ - ಶೇಷಾಚಲ
ಪಣ - ಸಂಕಲ್ಪ
ಪರ್ಯಂಕ - ಮಂಚ
ಪಕ್ಷಿಪ - ಗರುಡ
ಪರ್ಜನ್ಯರೊಳು - ಪರ್ಜನ್ಯನಾಮಕ ಸೂರ್ಯನಲ್ಲಿ ವಾಸುದೇವನಿದ್ದು
ಪಕ್ಷ - ರೆಕ್ಕೆ
ಪತಿಷ್ಟ - ತೀಕ್ಷ್ಣ
ಪದ್ಮಭವತಾತ - ಬ್ರಹ್ಮನತಂದೆ ನಾರಾಯಣ
ಪರಿವಾಳ ನಿವೃತ್ತಿ - ಶ್ರೀರಾಘವೇಂದ್ರ ಸ್ವಾಮಿಗಳ ಒಂದು ಗ್ರಂಥ
ಪರೇಶ - ಪರಮಾತ್ಮನ ಒಂದು ಹೆಸರು
ಪವನದಲದಿ - ಗಾಳಿಯ ಮೇಲೆ
ಪಾಶ - ಹಗ್ಗ
ಪಾಲಾಬ್ಧಿಜಾಪತಿ - ಕ್ಷೀರಸಮುದ್ರದ ಒಡೆಯ
ಪಾರ್ಷದರು - ದ್ವಾರಪಾಲಕರು
ಪಾಪಘ್ನ - ಪಾಪವನ್ನು ಹೋಗಲಾಡಿಸುವವ
ಪಾರ್ಥಸೂತ - ಪಾರ್ಥಸಾರಥಿ

ಪಾಹಿ – ಕಾಪಾಡು
ಪಾತತ್ರಮ – ತ್ರಿವಿಕ್ರಮ
ಪಾಪಂದ್ರಾಯ – ಪಾಪವನ್ನು ಭಸ್ಮಮಾಡುವ
ಪದ್ಮಜಪದಾರ್ಗ – ಬ್ರಹ್ಮ ಪದವಿಗೆ ಬರುವ ಅರ್ಹತೆಯುಳ್ಳವನು
ಪಾಲಾಬ್ಧಿಶಾಯಿ – ಕ್ಷೀರಸಮುದ್ರದಲ್ಲಿ ಮಲಗಿರುವ
ಪಿಳಂಗವಾಸನೆ – ಕಂದುಬಣ್ಣದ ಮೈಯುಳ್ಳ
ಪಿಲ್ಲಿ – ಬೆಕ್ಕು
ಪೀತ – ಹಳದಿ
ಪೀಯೂಷ – ಅಮೃತ
ಪುಲ್ಕಸಿ – ಕೊರವಂಜಿ
ಒಯರಣದರವರದ–ಬಲೀಂದ್ರ ವರದ(ವಾಮನ)
ಪುರುಟಾಕ್ಷಹಾರಿ – ಹಿರಣ್ಯಾಕ್ಷನನ್ನು ಕೊಂದವ
ಪುಚ್ಛ – ಬಾಲ
ಪುಂಡ್ರಾ – ತಿಲಕ
ಪುರುಟ – ಬಂಗಾರ
ಪೂರ್ಣೇಂದು – ಪೂರ್ಣಚಂದ್ರ
ಪೂತ – ಪವಿತ್ರ
ಪೂವರ್ಷ – ಹೂವಿನಮಳೆ
ಪೌಕ್ರೌಯಣ – ರಾಜ
ಪೌಲಸ್ತ್ಯ – ಪುಲಸ್ತ್ಯನ ಮಗ ರಾವಣ
ಪಂಕೇರುಹ – ಕಮಲ
ಪಂಶುಪುರ – ಮಂಡಿಪಾಳ್ಯ ಗ್ರಾಮ
ಪಂಚಸುರತಿಯಲ್ಲಿ– ದೂರದಲ್ಲಿರುವ ಮುಖ್ಯ ಐದು ನಾಡಿನಲ್ಲಿ

ಪ್ರದಾಯಕ – ಕೊಡುವವನು
ಪ್ರಭಂಜನ – ವಾಯುದೇವರು
ಪ್ರಣಮಿಡು – ನಮಸ್ಕರಿಸು
ಪ್ರಸನ್ನ – ಆಶ್ರಯಿಸಿದ
ಪ್ರವೃತ್ತಿಪ್ – ಆಸಕ್ತಿ ಕೊಡುವವನು
ಪ್ರಸ್ನನ್ನ – ಚೆಲ್ಲಿದ
ಪ್ರೇಕ್ಷಿಸು – ನೋಡು
ಪ್ರಕಟಿಸು – ಕಾಣು
ಪ್ರಣವಾಕ್ಷರ – ಓಂನಮೋ ನಾರಾಯಣ
ಪ್ರವಿಷ್ಠ – ಪೂರ್ಣವ್ಯಾಪ್ತ
ಪ್ರಣತಾರ್ತಿಹರ – ನಮಸ್ಕರಿಸಿದವರ ಪಾಪ ಕಳೆವವನು
ಪ್ರಮತಿ – ಬುದ್ಧಿಶಾಲಿ
ಪ್ರಜ್ವಲಿಸು – ಹೊಳೆ
ಪೋಚ್ಯ – ಸಂತೋಷ
ಪ್ರಕ್ಷಿಪ್ತ – ಕ್ಷೋಭೆಗೊಳಗಾದ
ಪ್ರಣವ – ಓಂಕಾರ
ಪ್ರತ್ಯಗಾತ್ಮ – ಸರ್ವಜೀವರಲ್ಲಿ ಆತ್ಮ ಶಬ್ದದಿಂದ ಇರುವವನು
ಪ್ರಥಮಾಂಗ – ಜೀವೋತ್ತಮರಾದ ವಾಯು ದೇವರು
ಪ್ರವರ – ಮೊದಲಿಗ
ಪ್ರಮೋದಿ – ಮೋಕ್ಷಾನಂದ ಕೊಡುವವನು
ಪ್ರರ್ದಪಿತನಾಗಿ – ಕೋಪವುಳ್ಳವನಾಗಿ
ಪ್ರಜ್ಞಾಮೋಧಾಧೃತಿ ಸ್ಥಿತಿ–ಅರಿವು, ಬುದ್ಧಿ ಧೃಡತೆಸ್ಥಿತಿ
ಪ್ರಜ್ಞಾಶ್ರೀದನು – ವಾಯುದೇವರು
ಪ್ರಪೂಜಿಸು – ಚೆನ್ನಾಗಿಪೂಜಿಸು
ಪ್ರಶಾಸನ – ಆದೇಶ

ಪ್ರೋದ್ಯಾರ್ಕನಿಭ – ಹೊಳೆಯುವ ಸೂರ್ಯನಕಾಂತಿ

ಫ

ಫಣಿಪಗಿರಿ – ಶೇಷಗಿರಿ
ಫಣಿಶಾಯಿ – ಶೇಷಶಾಯಿ
ಪಣಿಗಳ ತಾಯಿ – ಸಾರಸೆ
ಫಲ್ಗುಣ ಸಖ – ಅರ್ಜುನನಸಖ
ಫಣಿಯಮೇಲೆ – ಹೆಡೆಯಮೇಲೆ
ಫೇಣ – ಮಿರುಗು

ಬ

ಬದರೀಶ – ಬದರೀ ನಾರಾಯಣ
ಬದರ – ಎಲಚೀಮರ
ಬಾಲಾರ್ಕನಿಭ – ಬಾಲಸೂರ್ಯನ ಪ್ರಕಾಶ
ಬದರಧರ – ಚಂದ್ರಧರ
ಬಾದರಾಯಣ – ವೇದವ್ಯಾಸದೇವರು
ಬಿಡಾಲ – ಬೆಕ್ಕು
ಬೆಸಜಾಂಡ – ಬ್ರಹ್ಮಾಂಡ
ಬಿಸಜಭವ – ಬ್ರಹ್ಮ
ಬಿನ್ನಪ – ಪ್ರಾರ್ಥನೆ
ಬೊಜ್ಜೆಯ ಭೇದಿಸಿ – ಹೊಟ್ಟೆಯನ್ನು ಬಗೆದು

ಭ

ಭಾಮೆ – ಸತ್ಯಭಾಮೆ
ಭಾಸಿಕ – ಕಾಣಿಸಿ ಕೊಳ್ಳುತ್ತಿರುವ
ಭಾಸತಿ – ಕಾಣಿಸಿ ಕೊಂಡಿದ್ದಾನೆ
ಭಾಶ್ಯದಾ – ಭಾಶ್ಯಾವನ್ನು ಕೊಡುವ
ಭಾವುಕಾಗ್ರಣಿ – ಸದಭಿರುಚಿಯುಳ್ಳ
ಭಾರಿಕರ – ಶ್ರೇಷ್ಠವಾದ
ಭಾಸೂರ – ಅಂದವಾದ
ಭಾಸ್ಕರ – ಸೂರ್ಯ
ಭಾವಜನಯ್ಯ – ಸೃಷ್ಟಿಯನ್ನು ಮಾಡುವವ(ಶ್ರೀಹರಿ)
ಭೀಷಣ – ಭಯಂಕರವಾದ
ಭೂರಾದಿ – ಭೂಮಿ ಇತ್ಯಾದಿ
ಭೂಧರ – ಭೂಮಿಯನ್ನು ಧರಿಸಿರುವವನು
ಭಾತಾಕಾಶಕಭಿಮಾನಿ – ಗಣೇಶ
ಭೂಮಾನ್ – ಅನಂತಗುಣ ವುಳ್ಳವನು
ಭುಜನ ಶಯ್ಯ – ಶೇಷಶಾಯಿ
ಭೇಷಜ – ರೋಗಪರಿಹಾರಕ
ಭೈಷ್ಮಿ – ರುಕ್ಮಿಣಿ
ಭೃತ್ಯರಘ – ಸೇವಕರ ಪಾಪ
ಭುಜನ – ಸಂಹಾರ
ಭ್ರಾತೃವಧ – ತಮ್ಮನಸಂಹಾರ
ಭ್ರಮಾಕಲುಕ ಕೀಳೊ – ಜೀವೇಶ್ವರ ಐಕ್ಯವೆಂಬ ಭ್ರಾಂತಿಯನ್ನು ಪರಿಹರಿಸು

ಮ

ಮಹೋದರ – ದೊಡ್ಡ ಹೊಟ್ಟೆ
ಮಹಾನ್ – ಮಹಾತ್ಮ
ಮಕರ – ಮೊಸಳೆ
ಮಥನ – ಕಡೆಯುವುದು
ಮಗ್ನ – ಮುಳುಗಿದ
ಮಸ್ತಕ – ತಲೆ
ಮಹತೋ
ಮಹೀಯಾನ್ – ಅತಿದೊಡ್ಡವರಲ್ಲಿ ದೊಡ್ಡವನು
ಮಸ್ಥ – ನನ್ನಅಂತರ್ಯಾಮಿ

ಮದ್ದೋಶ - ನನ್ನದೋಶ
ಮಹತೀಪಾಣಿಮ - ಮಹತೀವೀಣೇ ಹಿಡಿದಿರುವ ನಾರದರು
ಮಕ್ಕುಲದೇವ - ನನ್ನ ಕುಲದೇವ
ಮಕರವಾಹನ - ಮೊಸಳೆವಾಹನ
ಮಂಡಲಾದ್ರಿ - ಮಂದರಗಿರಿ
ಮಂದಜ - ಕಮಲ
ಮರವಟ್ಟೆ - ಎರೆಹುಳು
ಮಂಜೂಷ - ಪೆಟ್ಟಿಗೆ
ಮಹಂತ - ಪೂಜ್ಯ
ಮಂದಜಾಸನ - ಬ್ರಹ್ಮ
ಮಹಂತ - ಆದರಕ್ಕೆ ಪಾತ್ರನಾದ ವ್ಯಕ್ತಿ
ಮಂಕಾಕಿನೀಧರ - ಗಂಗಾಧರ
ಮನೋಗತ ತಿಮಿರಕ್ಕೆಪೂಷನು- ಮನಸ್ಸಿನ ಕತ್ತಲೆಗೆ ಸೂರ್ಯನಂತೆ
ಮಹೀದೇವಿ - ಧರಣೀದೇವಿ
ಮಾಲೋಲ - ಲಕ್ಷ್ಮೀಲೋಲ
ಮಾತರಶ್ವ - ವಾಯುದೇವರು
ಮಾಕಳತ್ರ - ಲಕ್ಷ್ಮೀಪತಿ
ಮಾರೂತನ ನಿಜಪತಿ- ವಾಯುದೇವನ ಪತ್ನಿ
ಮಾದ್ರೇಯ - ಮಾದ್ರಿಯಮಗ ಕುಲ
ಮಾರ್ತಾಂಡ - ಸೂರ್ಯ
ಮಾರ - ಶಿವ
ಮಾರ್ಜಾಲ - ಬೆಕ್ಕು
ಮಾಧ್ವಗೇಹನು - ಮಧ್ವಾಚಾರ್ಯರು
ಮಾಸಹ - ಲಕ್ಷ್ಮೀದೇವಿಸಹಿತ
ಮಾತಂಗವರದ - ಗಜೇಂದ್ರವರದ

ಮಾತ್ರಾಕರಣಯಂತ್ರ- ಅಕ್ಷರಗಳು ಇಂದ್ರಿಯಗಳು ಇವುಗಳಅಭಿಮಾನಿ ದೇವತೆಗಳಿಗೆ ನಿಯಾಮಕ
ಮೂರ್ಜಗಾರಿ - ಮೂರುಲೋಕಗಳ ಶತ್ರು
ಮೂರು ಸ್ಥಿತಿ - ಜಾಗೃತ, ಸ್ವಪ್ನ, ಸುಷುಪ್ತಿ
ಮೂಲೇಶ - ಹೃದಯ ಕಮಲನಾಳಸ್ಥ ನಾರಾಯಣ
ಮುಕ್ತೇಶ - ಮುಕ್ತರ ಸ್ವಾಮಿ
ಮೃತ್ಯುಮಾರಕ - ಹುಟ್ಟುಸಾವುಗಳಿಂದ ತಪ್ಪಿಸುವವನು
ಮೃಡಾದ್ಯಮರ - ರುದ್ರನೇ ಮೊದಲಾದ ದೇವತೆಗಳು
ಮೇಧಾ - ಬುದ್ಧಿ
ಮೇದಿನಿ - ಭೂಮಿ
ಮೈಥಿಲಿ - ಜಾನಕಿ
ಮೋದಸುತೀರ್ಥರು -ಆನಂದತೀರ್ಥರು
ಮಂತವ್ಯ - ಮನನಾದಿಗಳಿಂದ ತಿಳಿಯಲ್ಪಡುವವನು
ಮಮುದಮುನಿಪೂಜ್ಯ-ಆನಂದಮುನಿ ಪೂಜ್ಯ
ಮೋಕ್ಷಹೇತು - ಮೋಕ್ಷಕ್ಕೆಕಾರಣ

ಯ

ಯಜ್ಞಭುಕ್ - ಯಜ್ಞವನ್ನು ಸ್ವೀಕರಿಸುವವನು (ಶ್ರೀಹರಿ)
ಯಜ್ಞಸ್ಥ - ಯಜ್ಞಾಂತರ್ಯಾಮಿ

ಯಷ್ಟಿ - ದಂಡ/ಕೋಲು
ಯದೃಚ್ಛ - ಅನಿರೀಕ್ಷಿತ
ಯಷ್ಟಿಧರ - ಕೊಡಲಿಹಿಡಿದ ಪರಶುರಾಮ
ಯುಗಳ - ಜೋಡಿ
ಯೋಗನೃಕೇಸರಿ - ಯೋಗಾ ನರಸಿಂಹ

ರ

ರಜ್ಜು - ಹಗ್ಗ
ರಿಜ - ಸೂರ್ಯಪುತ್ರ ಸುಗ್ರೀವ
ರಕ್ತವರ್ಣ - ಕೆಂಪುಬಣ್ಣ
ರಕ್ತಸಿಕ್ತ - ರಕ್ತದಿಂದ ತೊಯ್ದ
ರಾಕೇಂದು ಪೂರ್ಣಚಂದ್ರ
ರಾಮಾನುಜ - ರಾಮನ ತಮ್ಮ ಭರತ
ರಾಗರಹಿತ - ಲೌಕಿಕ ವಿಷಯಗಳಲ್ಲಿ ಆಸಕ್ತಿಯಿಲ್ಲದವನು

ಲ

ಲಯಾಬ್ಧಿ - ಪ್ರಳಯಸಮುದ್ರ
ಲೋಹಿತಾಕ್ಷ - ಕೆಂಪಾದ ಕಣ್ಣುಳ್ಳವನು

ವ

ವಪು - ದೇಹ
ವಹ್ನಿ - ಅಗ್ನಿ
ವಲ್ಮೀಕ - ಹುತ್ತ
ವಷಟ್ಕಾರ - ಜಗತ್ಪಾಲಕ
ವನಜೆಸಹ - ಲಕ್ಷ್ಮೀಸಹ
ವಜ್ರಿ - ಇಂದ್ರ
ವರಿಷ್ಠ - ಶ್ರೇಷ್ಠ
ವರಾಹರ
ನಯಸರೆದ್ವರ - ವರಾಹದೇವರಿಂದ ಉತ್ಪನ್ನಳಾದ ತುಂಗಭದ್ರಾತೀರ
ವರದಾತಅವತಾರ - ವರವಾಯು ಅವತಾರ
ವರಕಾಂತಿಯಂ - ಅನುಗ್ರಹಪೂರ್ಣ ಬೆಳಕು
ವಕ್ತ - ಬಾಯಿ
ವಸುಧೆ - ಭೂಮಿ
ವಜಕೆ ದಿನಪ - ಕಮಲಕ್ಕೆ ಸೂರ್ಯನಂತೆ
ವನಪಿತಯೇ - ಸಮುದ್ರರಾಜ
ವನರುಹಾಸನ - ಕಮಲಾಸನ ಬ್ರಹ್ಮ
ವಪುಷ - ರಮಣೀಯವಾದ ರೂಪವಳ್ಳವನು
ವಾರುಣದಿ - ವರುಣ ಪಾಶದಿಂದ
ವಾಸವ - ಇಂದ್ರ
ವಾಮನಯನ - ಎಡಗಣ್ಣು
ವಾಂಛಿತದ - ಇಷ್ಟಾರ್ಥವನ್ನು ಕೊಡುವ
ವಾರುಣೀಪತಿ - ಶೇಷಪತಿ
ವಾರಿಧಿ - ಸಮುದ್ರ
ವಾಗ್ವಿಭವ - ಮಾತಿನಲ್ಲಿ ಚತುರ
ವಾಗೀಶ - ಬ್ರಹ್ಮ
ವಾರಿಧಿಶಯ - ಕ್ಷೀರ ಸಮುದ್ರ ಶಾಯಿ
ವಾರುಣಿ - ವರುಣನ ಹೆಂಡತಿ
ವಾಸವಾಷ್ಮಯ - ಇಂದ್ರಾಂಶ ಸಂಭೂತರಾದ ಜಯತೀರ್ಥರು
ವ್ಯಾಶದೇವ - ಶೇಷದೇವರು
ವಿಪ - ಗರುಡ

ವಿತತ - ಸರ್ವವ್ಯಾಪ್ತ

ವಿಧಿತಾತ - ಬ್ರಹ್ಮನ ತಂದೆ

ವಿಧಿಜ - ಬ್ರಹ್ಮಶಿವ

ವಿಜ್ಞೇಯ - ಅವಶ್ಯನಾಗಿ ತಿಳಿಯಬೇಕಾದ

ವಿಡಂಬ - ನಟನೆ

ವಿದ್ಯುದರ್ಶಿ - ಬೆಂಕಿಯಂತೆ ಹೊಳೆಯುವ

ವಿರಜೆ - ವಿರಜಾನದಿ

ವಿಮಲ ತೀರ್ಥ - ಪವಿತ್ರ ತೀರ್ಥ

ವಿಧಾತೃ - ಬ್ರಹ್ಮ

ವಿತ್ತಪ - ಕುಬೇರ

ವಿದುರರಾಗಲು - ಕಳೆದುಕೊಳ್ಳಲು

ವಿಕಸಿತಾಬ್ಜದ - ಅರಳಿದ ಕಮಲದಲ್ಲಿ ಹುಟ್ಟಿದ ಬ್ರಹ್ಮ

ವಿಧುಕುಲ - ಚಂದ್ರಕುಲ

ವಿನುತ - ಸ್ತುತಿಗೊಳ್ಳುವಾತ

ವಿರಿಂಚಿ - ಬ್ರಹ್ಮ

ವಿಂಶತಿ - ಇಪ್ಪತ್ತು

ವಿಷಯೀಲಕ್ಷಣಗಳ- ವಿಷಯಾಸಕ್ತ ಕ್ಷಣಗಳು

ವೀತಕಲುಷನೆ - ನಿರ್ದೋಷನೆ

ವೇಯನ್ಮಂಡಲ - ಆಕಾಶಮಂಡಲ

ವೃಷಾಂಕ - ರುದ್ರದೇವರು

ವೃಷ್ಟಿದ - ಮಳೆಕೊಡುವವನು

ವೃತತಿನಾಭ - ಕಮಲನಾಭ

ವೃಷಭಾದ್ರಿ - ವೃಷಭಾಚಲ

ವೇದ - ಬ್ರಹ್ಮ

ವೈದರ್ಭಿ - ವಿದರ್ಭರಾಜನ ಮಗಳು ದಮಯಂತಿ

ವೈಶ್ವಾನರ - ಅಗ್ನಿ

ವೈರೋಚನ - ಇಂದ್ರ

ವೃದಾರಕ - ದೇವತೆಗಳ

ವ್ಯಕ್ತ - ಪ್ರಕಟ

ವ್ಯಜನ - ಚಾಮರ

ವಿಂಶತಿಮೋಲೇಳು - ೨೧೭೦೦

ವೈಶನ್ಯುಶೂನ್ಯ - ವ್ಯತ್ಯಾಸವಿಲ್ಲ

ವ್ಯಜನ ರಥಾಂಗ

ಪೂಶಂಖು ಮಾಲಾದಿ - ಶ್ರೀಹರಿಗೆ ಚಾಮರ ರೂಪದಲ್ಲಿ

ರಥಾಂಗ - ಸುದರ್ಶನಚಕ್ರಾಯುಧ, ಪದ್ಮ ಅಪೂ, ಪಾಂಚಜನ್ಯವೆಂಬ ಶಂಖು, ವನಮಾಲೆ (ಮಾಲಾದಿ) ಹೀಗೆ ನಾನಾರೂಪಗಳಲ್ಲಿ ಶ್ರೀಹರಿಯನ್ನು ಎಡೆಬಿಡದೆ ಸೇವಿಸುವಳು.

ವಾಮ - ದುರ್ಗಾರೂಪ

ವಾತಾತ್ಮಾನಂದಮಯಿ - ಲಕ್ಷ್ಮೀ ಅಭಿಮಾನ್ಯವಾದ

ಶ

ಶಫರಿರೂಪ - ಮತ್ಸ್ಯರೂಪ

ಶತಧೃತಿ - ಬ್ರಹ್ಮ

ಶಚೀಶ - ಇಂದ್ರ

ಶತಾನಂದ - ಬ್ರಹ್ಮ

ಶಕ್ರ - ಇಂದ್ರ

ಶತಸುಖಪಿತ - ಬ್ರಹ್ಮನತಂದೆ

ಶಬಲವರ್ಣ - ಬಂಗಾರದಬಣ್ಣ

ಶತೋಪ - ಸಾಸಿವೆ

ಶಕ್ರಾದ್ಯಮರ - ಇಂದ್ರನೇ ಮೊದಲಾದ ದೇವತೆಗಳು

ಶರ್ವಾಣಿ - ರುದ್ರಪತ್ನಿ

ಶಿರೋಧೃತ್ – ಗಂಗಾಧರ
ಶಾರ್ಙ್ಗ – ವಿಷ್ಣುವಿನಬಿಲ್ಲು
ಶೂನ್ಯಾದಿ – ಮಾಟಮಂತ್ರ ಇತ್ಯಾದಿ
ಶುಷ್ಕ – ಒಣಗಿದ
ಶೃತ – ಕೇಳಿದ
ಶ್ರದ್ಧದೇವಿ – ಭಾರತೀದೇವಿ
ಶ್ರವಣ ಮಂಗಳ – ಶ್ರೀವಿಷ್ಣು
ಶ್ರದ್ಧೇಶ – ಮುಖ್ಯಪ್ರಾಣ ದೇವರು
ಶೇಷಶತಸ್ಥರು – ನೂರುಜನ ದೇವತಾ ಕಕ್ಷದಲ್ಲಿ ಉಳಿದಿರುವವರು
ಶ್ರೇಷ್ಠಸುಗಂಧಿ – ವಾಯುದೇವರು
ಶ್ರೀಶರಥಿಕ – ಪರಮಾತ್ಮನ ಸಾರಥಿ

ಸ

ಸದೆದು – ಕೊಂದು
ಸತ್ತಾಪ್ರತೀತಿ – ಉತ್ತಮ ಅನುಭವ ಕೊಡುವ
ಸರಸೀರುಹಾಸನ – ಬ್ರಹ್ಮ
ಸಪ್ತತ್ರಿಂಶತ್ – ೩೭
ಸದೋಷಿ – ದೋಷವುಳ್ಳವನು
ಸಹಸ್ರಪಾತ್ – ಸಾವಿರಪಾದವುಳ್ಳವನು
ಸಮುದ್ರಜಾಪತಿ – ಶ್ರೀಕೃಷ್ಣ
ಸತ್ತ್ರಾದಿದಾತ – ಸುಖಾನಂದ ಕೊಡುವವನು
ಸಭಾರ್ಯ – ಲಕ್ಷ್ಮೀಸಮೇತ
ಸರೀಚ್ಛ್ರೇಷ್ಠತೀರಸ್ಥ – ಪವಿತ್ರ ನದೀತೀರದಲ್ಲಿರುವ (ರಾಜಮಹೇಂದ್ರಿ)
ಸಲಿಲಕಾಂಚನಪುರ –ಬಾಳೆಹೊನ್ನೂರು
ಸಮ್ಯೋಚನೆ – ಚೆನ್ನಾಗಿಚಿಂತನೆ
ಸದ್ಮಸ್ಥ – ಪೀಠಸ್ಥ
ಸಪ್ತಮವು – ಜಮದಗ್ನಿ
ಸಪ್ತಸುಸ್ತಾನದಿ – ಏಳುಸ್ಥಾನಗಳಲ್ಲಿರುವ
ಸಪ್ತಾರ್ಚಿ – ಅಗ್ನಿ
ಸಮ್ಯಕ್ – ಒಳ್ಳೆಯ
ಸಮ್ಮೋದ – ಆನಂದ
ಸಾಮ – ಸಾಮದೇವ
ಸಾಕಲ್ಯ – ಪೂರ್ಣ
ಸಾತ್ಯವತಿ – ವೇದವ್ಯಾಸದೇವರು
ಸಾರಾತ್ಮ – ಶ್ರೀಹರಿ
ಸಂಚಿಂತೆ – ಒಳ್ಳೆಯಚಿಂತೆ
ಸ್ವಾದಭೋಜ್ಯ – ರುಚಿರುಚಿಯಾದ ಭೋಜನ ಪದಾರ್ಥ
ಸ್ವಾಹಾಪತಿ – ಅಗ್ನಿ
ಸಿಂಧುಜಾಪತಿ – ಲಕ್ಷ್ಮೀಪತಿ
ಸೀತಾಪತಿವಲ್ಲಿ – ರಾಮೂಹಳ್ಳಿ
ಸುತಲ – ಪಾತಾಳಲೋಕ
ಸುಪಬ್ಜಾ – ಜಠರಾತಿವಸ್ತು
ಸುಪ್ತಿಯಲಿ – ನಿದ್ರಾವಸ್ಥೆಯಲ್ಲಿ
ಸುಭ್ರಾಜ – ಪ್ರಕಾಶಮಾನವಾದ
ಸುಮೇಧರು – ಉತ್ತಮ ಸಂಸಿದ್ಧಿಯುಳ್ಳವರು
ಸುರಪ – ಇಂದ್ರ
ಸುರಸೇನಾಧಿಪ – ಶ್ರೀ ಕುಮಾರಸ್ವಾಮಿ
ಸೂಕರ – ವರಾಹ
ಸುಫಲದ – ಶುಭಫಲವನ್ನು ಕೊಡುವ
ಸುಗುಣಾರ್ಣವ – ಸದ್ಗುಣಭರಿತ
ಸುಖಚಿತ್ – ಮೋಕ್ಷಪ್ರದ
ಸುರಮುನಿ – ನಾರದರು
ಸುಪರ್ಣ – ಗರುಡ
ಸುರಸರಿತ – ದೇವನದಿ

ಸುನಗವಾಸ - ಬೆಟ್ಟದ ಮೇಲೆ ವಾಸಿಸುವವನು
ಸುರರಾಜಗಜ - ಐರಾವತ
ಸುಮನಸರಾಜ - ಇಂದ್ರ
ಸುಮೇಧರ - ಹರಿಯನುಗ್ರಹ
ಸುಶೀಲಶಾಸ್ತ್ರ - ಮಧ್ವಶಾಸ್ತ್ರ
ಸೂತ್ರಸಖ - ಶ್ರೀಹರಿಯ ಪ್ರೀತಿಪಾತ್ರ
ಸಿತಗ್ರಾತ - ಮುಕ್ತರಿಗೆ ಸಾಧನೆ ಮಾಡಿಸುವವನು
ಸೆಳೆದು - ಎಳೆದು
ಸೋಮ ಕವಿಭಾಸಿಕ - ಚಂದ್ರ ಸೂರ್ಯರಂತೆ ಹೊಳೆಯುವ
ಸೋಮ ಸೋದರಿ - ಚಂದ್ರ ಸೋದರಿ ಲಕ್ಷ್ಮಿ
ಸೌಮಿತ್ರಿ - ಲಕ್ಷ್ಮಣ
ಸೌಪರ್ಣ - ಗರುಡ
ಸಂಧ್ಯಾಸುಮಂತ್ರಋಷಿ -ವಿಶ್ವಾಮಿತ್ರಋಷಿ
ಸಿಂಧುಶಯನ ಪ್ರಿಯೆ- ಲಕ್ಷ್ಮಿ
ಸಂಕ್ರಂದನ - ಇಂದ್ರ
ಸ್ಕಂಧ - ಸುಬ್ರಹ್ಮಣ್ಯ
ಸ್ವಪಚ - ಅಂತ್ಯಜಾತಿಯವನು
ಸ್ಮರ - ಮನ್ಮಥ
ಸೈಂದವಾಸ್ಯ - ಸೃಷ್ಟಿಗೆ ಬಂದವರು ಮತ್ತು ಸೃಷ್ಟಿಗೆ ಬಾರದಿರುವವರು
ಸುರೂಪದಿ - ಸಮೀಚೀನವಾದ ಶುಭ್ರರೂಪಳಾಗಿ
ಸರಿಪರರಿಲ್ಲದ - ಸಮ, ಉತ್ತಮ ಇಲ್ಲದ
ಸರಿಜನಕಜೆ - ಜನಕ ರಾಜನ ಮಗಳು ಸೀತಾದೇವಿ
ಸಲಧರಾನುಜ - ಬಲರಾಮನ ತಮ್ಮ ಶ್ರೀಕೃಷ್ಣ
ಸಯಾಸ್ಯ - ಹಯಗ್ರೀವ ದೇವರು

ಹ

ಹನನಾರ್ಹ - ಕೊಲ್ಲಲು ಯೋಗ್ಯ
ಹಂಸವಾಹನ - ಬ್ರಹ್ಮ
ಹನು - ದವಡೆ
ಹಸ್ತಿ - ಆನೆ
ಹರಿಣವಾಹನ - ಜಿಂಕೆಯ ವಾಹನ ನಾದಚಂದ್ರ
ಹರಿಯಾಸನ - ಸಿಂಹಾಸನ
ಹರಿಣ್ಮಣಿನಿಭ - ನೀಲಮಣಿಯ ಹೊಳಪು
ಹಾಟಕೋಪಮ - ಚಿನ್ನದಂತೆ ಹೊಳೆಯುವ
ಹಾಟಕಾದ್ರಿ - ಶೇಷಾಚಲ
ಹೃದ್ಗು ಹಾಂತಸ್ಥ - ಜೀವರ ಹೃತ್ಕಮಲದಲ್ಲಿ ನೆಲೆಸಿರುವವನು
ಹೃದಂಬರವಾಸಿನಿ- ಶ್ರೀವತ್ಸ ರೂಪಳಾಗಿ ವಾಸಿಸುವ
ಹೇಮಾಬ್ಜ - ಚಿನ್ನದಕಮಲ
ಹೇಮಗರ್ಭ - ಹಿರಣ್ಯಗರ್ಭ
ಹೆಡೆರಾಜ - ನಾರಾಯಣ
ಹೃತ್ತಿಮಿರ - ಹೃದಯದ ಕತ್ತಲೆ
ಹೈಮವತೀವರ - ಶಿವ
ಹನನ - ನಾಶ
ಹೇಮಾಕ್ಷ - ಹಿರಣ್ಯಾಕ್ಷ
ಹೃತ್ಸದನ - ಹೃದಯದಲ್ಲಿರುವ
ಹರನಚಾಪ - ಶಿವಧನುಸ್ಸು

ಅನುಬಂಧ--೨

ಟಿಪ್ಪಣಿಗಳು

ಕೀ ೧

ಸಿದ್ಧಿ ಪ್ರದಾಯಕನೂ ಆದ ಸಿದ್ಧಿ ವಿನಾಯಕನಿಗೆ ಶರಣಾಗುತ್ತ, ದಾಸರು ಈ ಪುಟ್ಟ ಸ್ತೋತ್ರ ರಚಿಸಿದ್ದಾರೆ. ಪ್ರಸನ್ನ ಶ್ರೀನಿವಾಸನಿಗೆ ಗಜಮುಖ ಹೊಂದಿರುವ ಈ ವಿನಾಯಕ ನಿಜದಾಸನಾಗಿದ್ದಾನೆ.

ಕಠಿಣ ಪದಗಳ ಅರ್ಥ: ಸ್ಕಂಧ ಅನುಜನೆ–ಷಣ್ಮುಖನ ಸಹೋದರ, ರಕ್ತವರ್ಣ– ಕೆಂಪುವರ್ಣ, ಸುರೇಷ್ಮೆ–ಶುಭ್ರ ರೇಷ್ಮೆ ಅನುಕ್ರಮಣಿಕಾಪದಗಳು

ಶರಣು ಶರಣು ಸಿದ್ಧಿವಿನಾಯಕ–ಉದಯ ಭಾಸ್ಕರ ತೇಜ

ಸಿದ್ಧಿ ಪ್ರದಾಯಕ–ಗಜಮುಖ.

ಕೀ ೨

ಭಕ್ತಿಯಿಂದ ಬೇಡಿದ ವರಗಳನ್ನು ಕ್ಷಿಪ್ರದಲೇ ಅನುಗ್ರಹಿಸುವವನಾದ್ದರಿಂದ, "ಕ್ಷಿಪ್ರ ಪ್ರಸಾದ" ನೆಂದು ಕರೆಯಲ್ಪಡುವ ಶ್ರೀ ಗಣೇಶನ ನಮನದೊಂದಿಗೆ ಪಲ್ಲವಿಯನ್ನು ದಾಸರು ಪ್ರಾರಂಭಿಸಿದ್ದಾರೆ. ತಂತ್ರ ಸಾರದಲ್ಲಿ ಗಣೇಶನಿಗೆ ಇರುವ ಮಂತ್ರವೇ ಶ್ರೀ ಕ್ಷಿಪ್ರಪ್ರಸಾದಾಯ ನಮಃ. ಇದನ್ನೇ ಇಲ್ಲಿ ದಾಸರು ಅಳವಡಿಸಿ ಮಂತ್ರ ಶೇಷ್ಠತ್ವ ತುಂಬಿದ್ದಾರೆ. ಎಲ್ಲಾ ವಿಪ್ರ– ಪ್ರಬುದ್ಧರಿಗೆ (ಸಿದ್ಧಾ–ವಿದ್ಯಾಧರಾದಿ ಅನೇಕ ಗಣಗಳಿಂದ ಪೂಜ್ಯನೂ) ಈ ಕ್ಷಿಪ್ರ ಪ್ರಸಾದವಂತ ಪ್ರಿಯತರನು ಆಗಿದ್ದಾನೆ. ಸುಪೂರ್ಣನೂ ಸಾಟಿ ಇಲ್ಲದವನೂ, ಸಚ್ಛಕ್ತಿ ಸ್ವರೂಪನೂ ಆದ ಶ್ರೀ ಹರಿಯು ವಾಯುದೇವರ ಸಹಿತ ಗಣೇಶನಲ್ಲಿ ಸುಪ್ರಕಟನಾಗಿರುತ್ತಾನೆ.

ಬಾಲ ಸೂರ್ಯನಕಾಂತಿಯ ಬಣ್ಣವುಳ್ಳ ತನುವಿಗೆ ಹೂಮಾಲೆ ಹಾಗೂ ಗಂಧಲೇಪಿತನೂ ಹೊಳೆಯುವ ಮಹೋದರನೂ, ಸುಫಲದ ಥಳಥಳಿಪ ಪಾಶದಂತಾಂಕುಶಗಳನ್ನು ಹಿಡಿದು ಅಭಯ ಹಸ್ತನೂ ಆಗಿ ಒಲಿದು ವಿಘ್ನಗಳ ಕಳೆದು ಕಾಮಿತಾರ್ಥನ್ನು ಕೊಡುತ್ತಾನೆ. ಪಾಶ

ಹಾಗೂ ಅಂಕುಶಗಳು ಮನಸ್ಸನ್ನು ದುರ್ವಿಷಯಗಳತ್ತ ಹರಿದು ಹೋಗದಂತೆಯೂ, ಭಗವದ್ವೇಷಿಗಳನ್ನು ಬಂಧಿಸಲೂ, ದುಷ್ಟ ಶಕ್ತಿಗಳ ನಿಗ್ರಹಕ್ಕು ಸಹಾಯಕವಾಗಿವೆ. ಶ್ರೀ ಗಣೇಶನು ಒಲಿದು ವಿಘ್ನಗಳನ್ನು ಕಳೆದು ಕಾಮಿತಾರ್ಥಗಳನ್ನು ಕೊಡುತ್ತಾನೆ.

ಗಣೇಶನು ತನ್ನ ಬಿಂಬ ಮೂರ್ತಿಯಾದ ಜಾಗ್ರತಾವಸ್ಥಾಪ್ರದ ನಿಯಾಮಕನಾದ ವಿಶ್ವನಾಮಕ ಹರಿ ರೂಪವನ್ನು ಕುರಿತು ತನ್ನ ಹೃದಯಾಕಾಶದಲ್ಲಿ ಧ್ಯಾನಿಸಿದನು. ಈ ವಿಶ್ವನಾಮಕ ಹರಿರೂಪಕ್ಕೆ ೨೧ ಮುಖಗಳಿದ್ದು, ಮಧ್ಯದಲ್ಲಿ ಗಜಮುಖವಿದೆ. ಈ ರೀತಿ ಧ್ಯಾನಿಸಿದ ಗಣೇಶನಿಗೆ ಶ್ರೀ ಹರಿಯು ಪರಮಾನುಗ್ರಹ ಮಾಡಿ ಹೃದಯಾಕಾಶಕ್ಕೆ ತತ್ವಾಭಿಮಾನಿ ದೇವತೆ ಎಂದು ನೇಮಿಸಿದನು. ಏಕದಂತ ಎನ್ನವಾಗಲೂ ಈ ಏಕಾತ್ಮವಿಶ್ವನ ಚಿಂತನೆಯನ್ನು ಮಾಡುವುದು ಸರಿಯಾಗಿರುತ್ತದೆ. ಈ ವಿಶೇಷ ಅರ್ಥ ಸಂಯೋಜನೆಯನ್ನು "ಏಕಾತ್ಮ ವಿಶ್ವ" ಎನ್ನುವುದರಲ್ಲಿ ದಾಸರು ಅರ್ಥೈಸಿ ರಚಿಸಿದ್ದಾರೆ. ಈ ಏಕಾತ್ಮ ವಿಶ್ವನು ಭೂಮಿ, ಸ್ವರ್ಗ, ಪಾತಾಳ ಮೊದಲಾದ ಸರ್ವ ಲೋಕಂಗಳ ಮುಕ್ತರ, ಅಮುಕ್ತರ ಹಾಗೂ ಸರ್ವರ ಸರ್ವಾಧಾರಕನು ಆಗಿದ್ದು ಶ್ರೀ ಕರನ ತನಯನಾಗಿ ಭೂತಾಳಕ್ಕೆ ಅಭಿಮಾನಿ ಆಗಿರುವ ನಿನ್ನಲ್ಲಿ ಪ್ರಕಾಶಿಸುತ್ತಿದ್ದಾನೆ.

ಗಣೇಶನು ಕುಬೇರ (ವಿತ್ತಪ), ವಿಷಕ್ಸೇನ, ಅಶ್ವಿನಿ ದೇವತೆಗಳಿಗೆ ತಾರತಮ್ಮ ರೀತ್ಯಾ ಸಮನಾದವನು. ಪ್ರಧಾನಾಗ್ನಿ-ಪಾರ್ವತೀಭವ-ಉಪಕ್ರಮನೆಂಬ ಸೂರ್ಯ ವಿವಸ್ವಾನ್, ಮಿತ್ರ ನಋಋತಿ, ವರುಣ, ಇಂದ್ರ, ಪರ್ಜನ್ಯ, ಅಹಂಕಾರಿಕ ಪ್ರಾಣತ ಪ್ರವಹ, ಬೃಹಸ್ಪತಿ, ಭಾರತೀ, ಯಮ ಚಂದ್ರ ಈ ಹದಿನೈದು ಜನರನ್ನು ಬಿಟ್ಟು ಉಳಿದ ಎಂಭತ್ತೈದು ಶೇಷ ಶತಸ್ಥರಿಗಿಂತ ಅಧಿಕನೂ ಆಗಿದ್ದಾನೆ ಶ್ರೀ ಗಣೇಶ. ಈ ದೇವತಾ ತಾರತಮ್ಯದ ವಿವರಣೆಯನ್ನು ಚಿಕ್ಕದಾಗಿ ತಮ್ಮ ಮುದ್ರಿಕೆಯ ಕೊನೆ ಸಾಲಿನಲ್ಲಿ ಹೇಳಿ ಶ್ರೀ ಹರಿಯ ನಾಭಿ ಪ್ರದೇಶದಲ್ಲಿರುವ ಅಕಾಶಭಿಮಾನಿ ದೇವತೆಯಾದ ಶ್ರೀ ಗಣೇಶನಿಗೆ ಭಕ್ತಿಪೂರ್ವಕ ನಮನ ಸಲ್ಲಿಸಿದ್ದಾರೆ.

ಕೀ ೪

ಶ್ರೀ ಮತ್ಸ್ಯಾವತಾರ

ಪ್ರಳಯ ಕಾಲದಲ್ಲಿ ಈ ಭೂಸಹಿತವಾಗಿ ಎಲ್ಲ ಲೋಕಗಳು ಮುಳುಗಿರುವಾಗ ಹಯಗ್ರೀವ ನಾಮಕ ಅಸುರನು ವೇದಗಳ ಕದ್ದೊಯ್ದು ತನ್ನಲ್ಲಿ ಅಡಗಿಸಿದ್ದ ಅವನನ್ನು ನೀ ಸೀಳ್ದು, ವೇದೋದ್ಧರನಾಗಿ ಪ್ರಖ್ಯಾತನಾದಿಯೋ ಮತ್ಸ್ಯ ರೂಪಿಯೇ

ಗುರುಗಳಿಗೆಲ್ಲಾ ಗುರುವಾಗಿರುವ ಸುಗುಣನಿಧಿಯಾದ ಶಫರಿರೂಢನಿಗೆ (ಮತ್ಸ್ಯ) ನಾನು ಶರಣಾಗುತ್ತಿದ್ದೇನೆ' ತಮ್ಮನ್ನು ಸುರಕ್ಷಿಸು ಎಂದು ಪ್ರಾರ್ಥಿಸಿದ್ದಾರೆ.

ದ್ರವಿಡ ದೇಶಾಧಿಪನಾದ ಸತ್ಯವ್ರತ ಎಂಬ ರಾಜನು ನಾರಾಯಣನೇ ಸರ್ವೋತ್ತಮನೆಂದರಿತು ಶ್ರೀಹರಿಯ ಕುರಿತು ತಪಸ್ಸಾಚರಿಸಿದನು. ಈ ರಾಜನು ಭಾವ ಶುದ್ಧ ನು, ದೃಢವ್ರತನು, ನೀರನ್ನೇ ಆಹಾರವಾಗಿ ಸ್ವೀಕರಿಸುವವನಾಗಿದ್ದನು.

ವಿವಸ್ವಾನ್ ಮಗ ಶ್ರಾದ್ಧದೇವನು ಪ್ರಖ್ಯಾತ ವೈವಸ್ವತ ಮನುವಾಗಿದ್ದಾನೆ. ಆತನೇ ಇಂದಿನ ಮನುವಾಗಿದ್ದಾನೆ. ಪೂರ್ವದಲ್ಲಿ ಈತನೇ ಸತ್ಯವ್ರತ ಎಂಬ ಸಮ್ರಾಟನಾಗಿದ್ದನು. ಈ ಸತ್ಯವ್ರತನು ನಿನ್ನವನೆಂದು ತಿಳಿದು ಆ ಸತ್ಯವ್ರತನಿಗೆ ನಮೋ ಎನ್ನುತ್ತಿದ್ದೇನೆ.

ಜೀವರುಗಳಿಗೆ ಅನುಗ್ರಹ ಮಾಡಲಿಕ್ಕೇವೇ ಮತ್ಸ್ಯರೂಪ ಪ್ರಕಟಿಸಿದ ಜಗಜ್ಜನ್ಮಾದಿ ಕರ್ತನೇ, ನಾನು ಸರ್ವದಾ ನಮೋ ಎನ್ನುತ್ತೇನೆ.

೬೮೫

ಶ್ರೀಕೂರ್ಮ

ಮಹತ್ ಎಂಬ ಬ್ರಹ್ಮನ ಸ್ವಾಮಿ ನೀನಾದುದರಿಂದ ಮಹಾದೇಶ ಎಂಬುವ ನಾಮ ನಿನ್ನದೇವ, ಮಹಾದೇವ, ಈಶ, ಶಿವ, ರುದ್ರಾದಿ ಎಲ್ಲ ಶಬ್ದಗಳು ಮಹಾ ಮುಖ್ಯ ವೃತ್ತಿಯಲ್ಲಿ ನಿನಗೇವೇ ವಾಚಕವು, ಭಸ್ಮಧರನಾದ ದೇವನಿಗೆ ಮಹಾದೇವ ಎನ್ನ್ವ ನಾಮ ರೂಢಿಯಲ್ಲಿದೆ. ಬ್ರಹ್ಮ ನಾಮನು ನೀನೇ, ಬ್ರಹ್ಮಾಂತರ್ಯಾಮಿಯಾದ ಬ್ರಹ್ಮನಲ್ಲಿದ್ದು, ಈ ಭಾವನಂಗಳನ್ನು ಪಡೆದಿರುವೆ

ವೈರಾಗ್ಯಾಧಿಪತಿಯಾದ ಶಿವನಿಗೆ ವಿಷವು ಭೂಷಣವಾಗಿ ನೀಲಕಂಠನೆಂದು ಪ್ರಸಿದ್ಧನಾದನು. ಈ ನಂಜುಂಡೇಶ್ವರನು ಧೀರನೂ ಕರುಣಾಸಮುದ್ರನೂ ಆಗಿದ್ದಾನೆ. ಈ ಗಿರಿಜೇಶನಿಗೆ ಶರಣಾಗಿ ನಮಿಸಿದ್ದಾರೆ.

ಗುರುಗಳಿಗೆ ಗುರು, ಶ್ರೇಷ್ಠವಾದ ಗುರುಗಳ ಗುರು, ಶ್ರೀ ರಾಘವೇಂದ್ರ, ಲಾತವ್ಯರಾದಿ ಇರುವ ಎಲ್ಲ ಋಷಿಗಣ, ಶ್ರೀಮಧ್ವಾಚಾರ್ಯರ, ಬ್ರಹ್ಮದೇವರ ಅಂತಸ್ಥ ವರಾಹ ಸ್ಮರಣೆ ಮಾಡಿ, ಕೊನೆಯಲ್ಲಿ ಶ್ರೀಪ್ರಸನ್ನ ಶ್ರೀನಿವಾಸನಿಗೆ ನಮನ ಹೇಳುತ್ತಾ, ಈ ವರಾಹ ಕೀರ್ತನೆ ಪೂರ್ಣಗೊಳಿಸಿದ್ದಾರೆ.

ಕೀ. ೯

ಶರಣಂ ಶರಣಂ ಪಾಲಯಮಂ

ಪ,ಅಪ:– ಕಂಚೀಪುರವು ತಮಿಳುನಾಡಿನ ಚೆನ್ನೈಗೆ ಸಮೀಪದಲ್ಲಿದೆ. ಇಲ್ಲಿ ಶಿವಕಂಚಿ ವಿಷ್ಣುಕಂಚಿ ದೇವಸ್ಥಾನಗಳಿವೆ. ನರಸಿಂಹನ ಮೂರ್ತಿ ವಿಷ್ಣು ಕಂಚಿಯಲ್ಲಿದ್ದು, ಯೋಗಾ ನರಸಿಂಹ ರೂಪದಿಂದ ಕಂಗೊಳಿಸುತ್ತಲಿದ್ದಾನೆ.

ಕೀ. ೧೦

ಶ್ರೀ ಚಿಂತಲವಾಡಿ ನರಸಿಂಹ
(ಸುರಟಿ – ಆದಿತಾಳ)

ಚಿಂತಾಮಣಿ ಎಂಬ ಪ್ರಖ್ಯಾತಮಣಿಯನ್ನು ಪ್ರಾರ್ಥಿಸಿದರೆ ನಮ್ಮ ಈಡೇರಿಕೆಗಳು ತೀರುತ್ತವೆ. ಆದರೆ ಅನಂತ ಕಲ್ಯಾಣ ಗುಣ ಪೂರ್ಣನಾದ ಶ್ರೀಚಿಂತಲವಾಡಿ ಲಕ್ಷ್ಮೀನರಸಿಂಹನನ್ನು ಪ್ರಾರ್ಥಿಸಿದರೆ ಇಹದಲ್ಲಿ ಬೇಕಾದ ಸಕಲ ಸೌಖ್ಯ – ಮತ್ತು ಪರದಲ್ಲಿ ಮೋಕ್ಷವನ್ನು ಕೊಡುತ್ತಾನೆ.

ಸ್ಮರಣೆ ಮಾತ್ರದಿಂದ ಪಾಪಗಳನ್ನು ಪರಿಹರಿಸುವ ಕಾವೇರಿತೀರದಲ್ಲಿ (ತಮಿಳು ನಾಡಿನಲ್ಲಿ) ಈ ಕ್ಷೇತ್ರವಿದೆ. ಸಕಲ ಭಕ್ತರಿಗೆ ವರಗಳನ್ನು ಕೊಡುತ್ತಾ ನರಸಿಂಹ ಕುಳಿತಿದ್ದಾನೆ.

ಕಂತುಪಿತ: ಮನ್ಮಥನ ಪಿತ, ವಿಷ್ಣು.

[ದಾಸವರ್ಯರು ಈ ಕ್ಷೇತ್ರಕ್ಕೆ ಮೊಟ್ಟ ಮೊದಲು ತೆರಳಿದ್ದಾಗ ಅರ್ಚಕನ ಸ್ವಪ್ನ ಸೂಚಿತದಿಂದ ಪುಟ್ಟದಾದ ಚಿಂತಾಮಣಿ ಲಕ್ಷ್ಮೀನರಸಿಂಹ ದೇವರ ವಿಗ್ರಹ ಪ್ರಾಪ್ತವಾಯಿತು. ದಾಸವರ್ಯರು ಪೂಜಿಸಿದ ಈ ವಿಗ್ರಹ ಈಗಲೂ ಇದೆ. ಅವರ ಭಕ್ತರೊಬ್ಬರು ಮೊದಲ ಬಾರಿ ದರ್ಶನ ಮಾಡಿದಾಗ – ಬೆಳ್ಳಿ ವಿಗ್ರಹವಾಗಿ ಕಂಡು ಬಂತು – ವಾಸ್ತವಿಕವಾಗಿ ಈ ವಿಗ್ರಹ ತಾಮ್ರ ಪ್ರತಿಮೆ.]

ಈ ಚಿಂತಲವಾಡಿ ನರಸಿಂಹ ಸ್ವಾಮಿಯು, ತಮಿಳುನಾಡಿನ ನಾಮಕಲ್ ಜಿಲ್ಲೆಯ, ಕರೂರು ಎಂಬ ನಗರಕ್ಕೆ ಹತ್ತಿರದಲ್ಲಿದೆ.

ಚಿಂತಾಮಣಿಗಿಂತಲೂ ಅಮೂಲ್ಯವಾದ ಚಿಂತಾಮಣಿ ಈ ಚಿಂತಲವಾಡಿ ನರಸಿಂಹನಾಗಿದ್ದಾನೆ ಎಂದು ದಾಸರು ಪಲ್ಲವಿಯಲ್ಲಿ ಸ್ಪಷ್ಟವಾಗಿ ಹೇಳುತ್ತಾ ಈ ಚಿಕ್ಕಸ್ತುತಿ ರಚಿಸಿದ್ದಾರೆ.

ಕೀ. ೧೩

ಶ್ರೀ ನರಸಿಂಹ

ಈ ಪರಿಕಲ್ ನರಸಿಂಹನು ತಮಿಳುನಾಡಿನ ನಾಮಕಲ್ ಜಿಲ್ಲೆಯಲ್ಲಿ ನಾಮಕಲ್‌ಗೆ ಸನಿಹವೇ ಇದ್ದಾನೆ. ಬ್ರಹ್ಮರುದ್ರಾದಿ ಎಲ್ಲಾದೇವತೆಗಳಿಂದ ವಂದಿಸಲ್ಪಡುವ ಗುಣಗಣಾರ್ಣವನೂ, ಅಮಿತಪೌರುಷನೂ ಆಗಿರುವ ಪರಿಕಲ್ ನರಸಿಂಹನಿಗೆ ಜಯಕಾರನನ್ನು ಹೇಳಿದ್ದಾರೆ.

ಕೀ. ೧೫

ಶ್ರೀ ವರಾಹ ನರಹರಿ ಧನ್ವಂತರಿ

ಇದೊಂದು ಚಿಕ್ಕ ಕೃತಿಆಗಿದೆ. ಶ್ರೀಹರಿಯ ಅಷ್ಟ ಮಹಾಮಂತ್ರಗಳನ್ನು ಬಿಟ್ಟರೆ, ಈ ಧನ್ವಂತರಿ ನಾಮಕ ಪರಮಾತ್ಮನ ಮಂತ್ರವೇ ಶ್ರೇಷ್ಠ. ದೇವದಾನವರು ಕ್ಷೀರ ಸಮುದ್ರವನ್ನು ಮಥನ ಮಾಡುತ್ತಿದ್ದಾಗ ದೇವತೆಗಳು ಬೇಡಲು ಧನ್ವಂತರಿ ಅವತರಿಸಿ ಅಮೃತವ ತಂದನು. ನನ್ನ ಶಿರದ ಮೇಲಿನಿಂದ ಸರ್ವ ಅಂಗಗಳಿಗು ಅಮೃತವ ಸುರಿದು ರಕ್ಷಿಸು ಎಂದಿದ್ದಾರೆ. ದಾಸರು ತಮ್ಮ ೨ನೇ ನುಡಿಯಲ್ಲಿ, ಆದಿ ಕಶಿಪುವನ್ನು ಸಂಹರಿಸಿ, ಈ ಭೂಮಂಡಲವನ್ನು ಮೇಲೆತ್ತಿ ತಂದ ಶ್ರೀ ವರಾಹನೇ ಘೋರವ್ಯಾಧಿಗಳಿಂದ ಕೂಡಿರುವ ಸಂಸಾರ ಸಮುದ್ರದಿಂದ ಎನ್ನನ್ನು ಉದ್ಧರಿಸೋ ಕೃಪಾನಿದೆ, ಎಂದಿದ್ದಾರೆ.

ಕೀ. ೧೬

ದಾನಪ್ರಕರಣಸಾರ

ದ್ವಿತೀಯ ಕೀರ್ತನೆ

ದಾಸರ ಎಲ್ಲ ದೀರ್ಘಕೃತಿಗಳಲ್ಲಿ ಬರುವ ಕೀರ್ತನೆಗಳ ಪಲ್ಲವಿ, ಹಾಗೂ ಮುದ್ರಿಕಾ ನುಡಿಗಳು ಒಂದೇ ಆಗಿರುತ್ತವೆ. ಆದ್ದರಿಂದ ಅವುಗಳ ಅರ್ಥವನ್ನು ಪುನಃ ಪುನಃ ಹೇಳಿಲ್ಲ.

ದಾಸರು ರಚಿಸಿರುವ ಈ ವಾಮನ ಪ್ರಾದುರ್ಭಾವದಲ್ಲಿ ಬಲಿರಾಜನ ಬಗ್ಗೆ ಸಾಕಷ್ಟು ವಿಶೇಷಗಳನ್ನು ಹೇಳಿ, ಬಲಿರಾಜನು ಎಂತಹ ಮಹಾ ಹರಿಭಕ್ತನಾಗಿದ್ದನು ಎನ್ನುವುದನ್ನು ಪ್ರತಿಪಾದಿಸಿದ್ದಾರೆ.

ಕೀ. ೨೩

ಶ್ರೀ ಕೃಷ್ಣ

ಹಿನ್ನಲೆ: ಶ್ರೀ ಹರಿ ಪ್ರೀತ್ಯರ್ಥನಾಗಿ ಶ್ರೀ ಗೋಪಾಲ ಕೃಷ್ಣನು ನಂದಗೋಕುಲದಲ್ಲಿದ್ದಾಗ, ಒಮ್ಮೆ ಬ್ರಾಹ್ಮಣರು ಯಜ್ಞಯಾಗದಿಗಳನ್ನು ಮಾಡುತ್ತಿದ್ದರು. ಆಗ ಶ್ರೀ ಗೋಪಾಲಕೃಷ್ಣನು ಅವರಲ್ಲಿ ಹೋಗಿ ಅನ್ನವನ್ನು ಬೇಡಿದನು.

ಶ್ರೀ ಪಾದ ರಾಜರಿಗೆ ಸ್ವಪ್ನದಲ್ಲಿ ಭೀಮ ರಥಿ – ಪುಷ್ಪವತಿ ನದಿಗಳ ಸಂಗಮದ ಬಳಿಯ ಒಂದು ನಿರ್ದಿಷ್ಟ ಸ್ಥಳದಲ್ಲಿ ಅಗೆಯಲು ಸೂಚನೆ ಆಯಿತು. ಹಾಗೆ ಅಗೆದಾಗ ಒಂದು ದೊಡ್ಡ ಪೆಟ್ಟಿಗೆ ದೊರೆಯಿತು. ಅದರಲ್ಲಿ ಎರಡು ಸಂಪುಟಗಳು ಇದ್ದವು. ಒಂದರಲ್ಲಿ ರಂಗವಿಠಲ ಮೂರ್ತಿ ಇತ್ತು. ಅದನ್ನು ಶ್ರೀ ಪಾದರಾಜರು ತಮ್ಮ ಮಠದಲ್ಲಿಟ್ಟು, ಅಂದಿನಿಂದ ರಂಗ ವಿಠಲ ಎಂಬ ಅಂಕಿತದೊಂದಿಗೆ ಕೃತಿ ರಚನೆಗಳ ಪ್ರಾರಂಭಿಸಿದರು. ಇದಕ್ಕೂ, ಮುಂಚೆ ಗೋಪಿನಾಥ ಎಂಬ ಅಂಕಿತವನ್ನು ಕೃತಿಗಳಲ್ಲಿ ಬಳಸುತ್ತಿದ್ದರು. ಹೀಗೆ ಸಿಕ್ಕ ಎರಡು ಪೆಟ್ಟಿಗೆಗಳಲ್ಲಿ ಒಂದನ್ನು ತೆಗೆಯಲು ಆಗಲಿಲ್ಲ.

ಒಮ್ಮೆ ಶ್ರೀಪಾದರಾಜರು ದೈನಂದಿನ ಪೂಜಾಕಾರ್ಯಗಳ ಪ್ರಾರಂಭಿಸಬೇಕು ಎನ್ನುವಾಗ ಓರ್ವ ಶಿಷ್ಯನು ಬಂದು ಮಾತಿಗೆ ಕುಳಿತನು. ಆಗಲೇ ಬಹಳ ವೇಳೆ ಆಗಿದ್ದನ್ನು ಗಮನಿಸಿ, ಶ್ರೀಪಾದ ರಾಜರು, ಶ್ರೀ ವ್ಯಾಸರಾಯರಿಗೆ ಪೂಜೆ ಆರಂಭಿಸಲು ಹೇಳಿ ಹೋದರು. ಶ್ರೀ ವ್ಯಾಸರಾಜರು ಎಲ್ಲಾ ಮೂರ್ತಿಗಳ ತೆಗೆದಿಟ್ಟರು. ಆವರೆವಿಗೆ ತೆರೆಯಲು ಆಗದಿದ್ದ ಪಂಡರಾಪುರ ಸಂಪುಟವನ್ನು ಶ್ರೀವ್ಯಾಸ ರಾಜರು ಏನೂ ಪ್ರಯಾಸ ವಿಲ್ಲದೇ ಸಹಜವಾಗಿ ತೆಗೆದರು. ಹಾಗೆ ತೆಗೆಯುತ್ತಿದ್ದಂತೆ ಸಂಪುಟದ ಒಳಗಿದ್ದ ವೇಣು ಗೋಪಾಲ ಮೂರ್ತಿಯು ಕೊಳಲು ಬಾರಿಸುತ್ತಾ ಕುಣಿಯಲು ಆರಂಭಿಸಿದನು.

ಕೀ. ೩೬

ಶ್ರೀ ರಾಮಕಪಿಲ

ಬೆಂಗಳೂರು ಮೈಸೂರು ರಾಜ್ಯರಸ್ತೆ ಎಡಭಾಗದಲ್ಲಿ (ಚನ್ನ ಪಟ್ಟಣದಿಂದ ೧–೨ ಕಿ.ಮೀ. ದೂರ) ಶ್ರೀರಾಮಾ ಅಪ್ರಮೇಯ ಸ್ವಾಮಿಯ ದೇವಸ್ಥಾನವಿದೆ. ಶ್ರೀದಾಸರು ಅಲ್ಲಿಗೆ ಹೋಗಿ ಸಂದರ್ಶಿಸಿದ ಫಲವಾಗಿ ಈ ಸ್ತುತಿ ರಚಿತವಾಗಿದೆ. ಇಲ್ಲಿಗೆ ಸನಿಹದಲ್ಲಿಯೇ ಅಬ್ಬೂರು ಶ್ರೀ ಬ್ರಹ್ಮಣ್ಯ ತೀರ್ಥರ ವೃಂದಾವನವು ಇದೆ. ಈ ದೇವಸ್ಥಾನಕ್ಕೆ ಎಲ್ಲ ದಾಸರುಗಳು, ಯತಿವರರು ಬಂದು ಸಂದರ್ಶಿಸಿ ಅನುಗ್ರಹ ಪಡೆದಿದ್ದಾರೆ.

ಕೀ. ೩೭

ಪಂಗು ಪುರವಾಸ ಶ್ರೀವೆಂಕಟೇಶ

ಈಕ್ಷೇತ್ರ ತಮಿಳುನಾಡಿನ ಈರೋಡಿನ ಜಿಲ್ಲೆ ಮೊಂಡಿಪಾಳೆಯ ಗ್ರಾಮದಲ್ಲಿ ಲಿಂಗ ರೂಪದಲ್ಲಿ ಶ್ರೀ ಶ್ರೀನಿವಾಸ ದೇವಸ್ಥಾನವಿದೆ. ಈ ಕ್ಷೇತ್ರಕ್ಕೆ ದಾಸರು ತೆರಳಿದ್ದಾಗ ಸ್ತೋತ್ರ ಮಾಡಿದ್ದಾರೆ.

'ಲಿಂಗಾತ್ಮಕ ಶಬ್ದ' ಸರ್ವೋತ್ತಮ ಶ್ರೀವಿಷ್ಣುವಿಗೇವೆ ಅನ್ವಯ ವೆಂದು ತಿಳಿಸಿದ್ದಾರೆ. ಲಿಂಗಾಕಾರನಾಗಿ ಶ್ರೀವೇಂಕಟೇಶ ಸರ್ವ ಶಬ್ದ ವಾಚ್ಯನಾಗಿರುವ ಸರ್ವೋತ್ತಮ. ಉತ್ಸವ ಮೂರ್ತಿಗಳಲ್ಲಿ ಶ್ರೀ ಭೂಸಮೇತನಾಗಿ ಪ್ರತಿಮಾಂತಸ್ಥನಾಗಿ ಹೊಳೆಯುತ್ತಿದ್ದಾನೆ.

ಕೀ. ೩೭

ಪಂಗು ಪುರವಾಸ ಶ್ರೀವೇಂಕಟೇಶ

ಈ ಕ್ಷೇತ್ರವು ಕೊಯಂಬತ್ತೂರಿಗೆ ಸನಿಹವಿದೆ.

ಈ ಮೊಂಡಿ ಪಾಳಯ ಎನ್ನುವ ಗ್ರಾಮಕ್ಕೆ ಹೋಗುವ ರಸ್ತೆಯು ಏಳು ಕಡೆ ತಗ್ಗಿದ್ದು ಅದು ದಾಟಿದ ನಂತರ ಈ ವೆಂಕಟೇಶನ ದೇವಸ್ಥಾನವಿದೆ.

ಕೀ. ೪೦

ಶ್ರೀ ಆನಂದಮಯ ಸ್ತೋತ್ರ

ಈ ಕೀರ್ತನೆಯು, ದಾಸರು ರಚಿಸಿದ ಬ್ರಹ್ಮಸೂತ್ರಾಮೃತಸಾರ (ಸ್ತುತಿ ರೂಪ ಭಾಷ್ಯ) ದಿಂದ ಉದ್ಧೃತವಾದದ್ದಾಗಿದೆ. ಸರಳ ಕನ್ನಡ ಭಾಷೆಯಲ್ಲಿ ಬ್ರಹ್ಮಸೂತ್ರ ಮಂತ್ರಗಳ ಸಾರವನ್ನು ತಿಳಿಸಿಹೇಳಿದ್ದಾರೆ.

ಕೀ. ೪೧

ಶ್ರೀ ಸರ್ವಾಶ್ರಯ ಸ್ತೋತ್ರ

(ಬ್ರಹ್ಮಸೂತ್ರಾಮೃತಸಾರ ಉದ್ಧೃತ) ಈ ಕೀರ್ತನೆಯೂ ಸಹ ದಾಸರ ರಚಿತ ಬ್ರಹ್ಮ ಸೂತ್ರಾಮೃತ ಸ್ತುತಿ ರೂಪ ಭಾಷ್ಯದಿಂದ ಉದ್ಧೃತವಾದದ್ದಾಗಿದೆ. ದಾಸರು ಬ್ರಹ್ಮಸೂತ್ರಸಾರಕ್ಕೆ ರಚಿಸಿದ ಪೂರ್ಣಪಾಠ ಲಭ್ಯವಿಲ್ಲ. ಕೇವಲ ೧೦೧ ಮಂತ್ರಗಳ ಸಂಗ್ರಹ ದೊರಕಿದೆ. ಅದರಲ್ಲಿ ಈ ಕೀರ್ತನೆ ಇಲ್ಲ.

ಅಪರೋಕ್ಷಜ್ಞಾನಿಯಾದವನು ಅಪ್ರಯೋಜಕ ಚಿಂತೆಗಳನ್ನು ತೊಲಗಿಸಿ, ತತ್ವಾರ್ಥಗಳನ್ನು ಅರಿತು ಶ್ವೇತ ದ್ವೀಪದ ಒಡೆಯನಾದ ಶ್ರೀ ವಾಸುದೇವ ಮೂರ್ತಿಯನ್ನು ನೋಡುವ ತನಕ ಮುಕ್ತತ್ವ ಸಿಕ್ಕುವುದಿಲ್ಲ ಎಂಬ ಘೋಷಣೆಯನ್ನು ಭಕ್ತಿಭಾವದೊಂದಿಗೆ ಹೇಳುತ್ತಾರೆ.

ಕೀ. ೪೪

ಶ್ರೀವಾಮದೇವ ಅಂತರ್ಯಾಮಿ

ಇದು ಋಗ್ವೇದದಲ್ಲಿ ಬರತಕ್ಕ ವಾಮದೇವ ಋಷಿಯ ಪ್ರಕರಣವನ್ನು ಕುರಿತು ರಚಿಸಿರುವ ಕೃತಿ. ವಾಮದೇವ ಎಂಬ ಋಷಿಯು ಇದ್ದಾನೆ ಮತ್ತು ರುದ್ರದೇವರಿಗೂ ವಾಮದೇವ ಎಂಬ ಹೆಸರುಂಟು. ಇಬ್ಬರಿಗು ಈ ಕೃತಿ ಅನ್ವಯವಾಗುತ್ತದೆ.

ಋಷಿಯ ಕುದುರೆಗಳನ್ನು ಶಲನು ಅಪಹಾರಮಾಡಿದ. ಈ ಶಲ ಸೂರ್ಯವಂಶದ ಮೂರನೆಯ ಪರೀಕ್ಷಿತನ ಮಗ. ಈತನ ಸೋದರರು ಬಲ ಮತ್ತು ದಲ. ಇವರು ಬೇಟೆ ಆಡುತ್ತ ಹೋಗಿ ಕುದುರೆ ಅಪಹರಿಸಿ, ವಾಮದೇವ ಋಷಿಯಿಂದ ಪರಾಭವಗೊಂಡರು.

ಕೀ. ೪೭

ಶ್ರೀಕರ ಅಷ್ಟಾಕ್ಷರ ಮಂತ್ರ

ಶ್ರೀ ಕರ ಅಷ್ಟಾಕ್ಷರ ಮಂತ್ರದ ವಿವರಗಳನ್ನೊಂಡ ರಚನೆ. ಮಂತ್ರದ ಅರ್ಥ ಪ್ರತಿಪಾದನೆ ಇದೆ. ಶ್ರೀಕರ ಅಂದರೆ ಶ್ರೀಹರಿ. ಎಲ್ಲರಿಗೂ ಉತ್ತಮ ಲಕ್ಷ್ಮಿಗೂ ಉತ್ತಮಾತ್ತಿಷ್ಠ, ಅವನಿಗಿಂತ ಉತ್ತಮರಿಲ್ಲ ಎಂಬುದನ್ನು ತಿಳಿಸಿದ್ದಾರೆ. "ಶ್ರೀ ಕರ" ಎಂಬುವ ಪದದ ಒಂದೊಂದು ಅಕ್ಷರ ಏನು ಸೂಚಿಸುತ್ತದೆ ಎಂಬುದರ ಅರ್ಥವನ್ನು ಕೊಟ್ಟಿದ್ದಾರೆ.

ಕೀ. ೪೮

ಧನಪ್ರದ ಶ್ರೀಕರ ಕಾರುಣ್ಯಸ್ತೋತ್ರ

ದಾಸರು ಒಮ್ಮೆ ಆರ್ಥಿಕ ಮುಗ್ಗಟ್ಟಿನಲ್ಲಿದ್ದಾಗ ಅದಕ್ಕಾಗಿ ಅನೇಕ ಕಡೆ ತಿರುಗಾಡಲಾಗದೇ ಧನಪ್ರದ ಶ್ರೀಕರ ನಾರಾಯಣವನ್ನು ಪ್ರಾರ್ಥಿಸಿದ್ದಾರೆ.

ಸರ್ವಾಂತರ್ಯಾಮಿಯಾಗಿರುವ ಸ್ವಾಮಿ ಯಾವ ರೀತಿ ಮಾರ್ಜಾಲ(ಬೆಕ್ಕು) ತನ್ನ ಮರಿಯನ್ನು ತಾನೇ ಸ್ಥಾನಗಳನ್ನು ಬದಲಾಯಿಸಿ ಕಾಪಾಡುತ್ತದೆಯೋ ಅದೇ ರೀತಿ ತಮಗೂ ಐಶ್ವರ್ಯವನ್ನು ಕೊಡಲು ಪ್ರಾರ್ಥಿಸಿದ್ದಾರೆ.

ಕೀ. ೪೯

ಶ್ರೀಹರಿ ಸ್ತೋತ್ರ

ಈ ದೇವರನಾಮ ಶ್ರೀಪ್ರಸನ್ನ ಶ್ರೀನಿವಾಸ ದಾಸಾರ್ಯರು ರಚಿಸಿದ ಮೊಟ್ಟಮೊದಲ ದೇವರನಾಮ ಮತ್ತು ಇದು ದಾಸರಿಗೆ ಅಂಕಿತ ಪ್ರದಾನವಾದೊಡನೆ ಮುದ್ರಿಕೆ ನುಡಿಯೊಡನೆ ಪೂರ್ತಿ ಗೊಳಿಸಿದರು. ದಾಸವರ್ಯರು ತಿರುಪತಿಕ್ಷೇತ್ರದಲ್ಲಿ ಈ ದೇವರ ನಾಮವನ್ನು ಪ್ರಾರಂಭಿಸಿದರು.

ಮಂತ್ರಾಲಯಕ್ಷೇತ್ರದಲ್ಲಿ ಅವರಿಗೆ ಅಂಕಿತ ಪ್ರದಾನವಾಯಿತು. ಶ್ರಿರಾಘವೇಂದ್ರರು – ಶ್ರೀಗೋಪಾಲದಾಸರು ಪ್ರತ್ಯಕ್ಷವಾಗಿ ಬಂದು ಅನುಗ್ರಹಿಸಿ. ಶ್ರೀಪ್ರಸನ್ನ ಶ್ರೀನಿವಾಸ ಎಂಬ ಅಂಕಿತವನ್ನು ಪ್ರದಾನ ಮಾಡಿದರು.

ತಿರುವಳ್ಳೂರು ಶ್ರೀವೀರರಾಘವಸ್ತೋತ್ರ

ಈ ತಿರುವಳ್ಳೂರು ಕ್ಷೇತ್ರವು ತಮಿಳುನಾಡಿನ ಅರ್ಕೋಣಂಗೆ ಸಮೀಪದಲ್ಲಿದೆ.

ಕೀ. ೫೬

ಜ್ಞಾನಾನಂದ ಸ್ತುತಿ

ಇದೊಂದು ಸಪ್ತ ನುಡಿಗಳ ಸ್ತುತಿ. ಇಲ್ಲಿ ಶ್ರೀ ಹರಿಯ ಎಲ್ಲ ಪ್ರಾದುರ್ಭಾವಗಳನ್ನು ಹೇಳುತ್ತಾ ಸಜ್ಜನರಕ್ಷಕನಾದ ಶ್ರೀಹರಿಯು ಭಕ್ತಿಯನ್ನು ದಯಪಾಲಿಸಲಿ ಎಂದು ಪ್ರಾರ್ಥಿಸಿದ್ದಾರೆ.

ಕೀ. ೫೭

ರೋಗ ಪರಿಹಾರ ಸ್ತುತಿ

ಸೂಚನೆ:– ದಾಸರ ಶಿಷ್ಯಳೊಬ್ಬಳು ಉದರ ಶೂಲೆಯಿಂದ ನರಳುತ್ತಿರುವಾಗ ಅನುಗ್ರಹಿಸಿದ ಸ್ತೋತ್ರ ಇದು, ಇದನ್ನು ಸರಿಯಾದ ಅನುಸಂಧಾನದ ಮೂಲಕ ಶ್ರೀಪ್ರಸನ್ನ ಶ್ರೀನಿವಾಸನಲ್ಲಿ ಭಕ್ತಿಯಿಂದ ಬೇಡಿದರೆ ಇತರರ ಬಾಧೆಗಳೂ ದೂರಾಗುತ್ತವೆ ಎಂಬುದು ದಾಸರನಂಬಿಕೆ.

ಕೀ. ೬೦

ಶ್ರೀ ಕೂಡಲ ಮಾಣಿಕ್ಯ ಭರತ ಪ್ರದ್ಯುಮ್ನ

ಕೇರಳ ಪ್ರಾಂತ್ಯದ ತ್ರಿಚೂರು ನಗರಕ್ಕೆ ಸುಮಾರು ೩೦ ಕಿ.ಮೀ ದೂರದಲ್ಲಿ ಇರಂಜಲ ಕೂಡು ಎಂಬ ಊರಲ್ಲಿ ಶ್ರೀಭರತ ಪ್ರದ್ಯುಮ್ನನ ದೇವಸ್ಥಾನವಿದೆ. ದಾಸರು ಅಂಚೆಕಛೇರಿಯಲ್ಲಿ ಲೌಕಿಕ ಉದ್ಯೋಗದಲ್ಲಿದ್ದಾಗ ಇಲ್ಲಿ ಕೆಲಸ ಮಾಡುತ್ತಿದ್ದರು. ಆಗ ರಚಿಸಿದ ಸ್ತುತಿ ಇದಾಗಿದೆ.

೧೪ ವರ್ಷಗಳ ನಂತರ ಹಿಂದಿರುಗಿದ ಶ್ರೀರಾಮ ದೇವರ ರಾಜ್ಯಾಭಿಷೇಕವಾದನಂತರ, ಶ್ರೀ ಭರತನು ಯುವರಾಜನಾಗಿದ್ದು ಶ್ರೀರಾಮದೇವರ ಸೇವೆಯನ್ನು ಮಾಡಿದ, ಲೋಕದೆಲ್ಲೆಡೆಯಲ್ಲಿ ವಿಷ್ಣು ಭಕ್ತಿಯೂ, ಸೌಖ್ಯವೂ ಉಂಟಾಯಿತು.

ಕೀ. ೬೧

ಶ್ರೀ ಧರ್ಮಪುರಿ ಕ್ಷೇತ್ರಸ್ಥ ಪರವಾಸುದೇವ ಸ್ತೋತ್ರ

ಬೆಂಗಳೂರಿನಿಂದ ಚೆನ್ನೈಗೆ ಹೋಗುವ ರಸ್ತೆಯಲ್ಲಿ ಸುಮಾರು ೯೦ ಕಿ ಮೀ ದೂರದಲ್ಲಿ ಧರ್ಮಪುರಿ ನಗರವಿದೆ. ಇಲ್ಲಿರುವ ಪರವಾಸುದೇವನನ್ನು ಕುರಿತು ದಾಸರು ರಚಿಸಿದ್ದಾರೆ.

ಕೀ. ೬೨

ಶ್ರೀತಾಂದೋಣಿ ವೆಂಕಟರಮಣ

ತಮಿಳುನಾಡಿನಲ್ಲಿರುವ ಕರೂರು (ನಾಮಕಲ್‌ಗೆ ಹತ್ತಿರ)ಗೆ ೫-೬ ಕಿ.ಮೀ.ದೂರದಲ್ಲಿ ತಾಂದೋಣಿ ಎಂಬ ಗ್ರಾಮವಿದೆ. ಅಲ್ಲಿರುವ ಶ್ರೀವೆಂಕಟರಮಣ ಸ್ವಯಂಭು ಮೂರ್ತಿ. ಆಸ್ಥಳ ದರ್ಶನಕ್ಕಾಗಿ ದಾಸರು ಹೋದಾಗ ಈ ಕೃತಿ ರಚನೆ ಆಗಿರಬೇಕು.

ಕೀ. ೬೩-೧

ಶ್ರೀಸೇತೂ ಮಾಧವ ಸ್ತೋತ್ರ

ಶ್ರೀರಾಮೇಶ್ವರ ಕ್ಷೇತ್ರಜ್ಞನಾಗಿರುವ ಶ್ರೀಸೇತೂಮಾಧವನನ್ನು ಕುರಿತು ಈ ಸ್ತೋತ್ರವನ್ನು ದಾಸರು ರಚಿಸಿದ್ದಾರೆ.

ಮುದ್ರಿಕೆ ನುಡಿಯಿಂದ ದಾಸರ ವಂಶದವರು ಶ್ರೀ ಸೇತೂಮಾಧವನ ಅಚ್ಛಿನ್ನ ಭಕ್ತರು ಎಂದು ತಿಳಿಯುತ್ತದೆ.

ಕೀ. ೬[illegible]-೨

ಶ್ರೀಪುರುಷೋತ್ತಮ ವಿಲಾಸ

ಈ ಕೃತಿಯ ಮೂಲ ಹಸ್ತಪ್ರತಿ ದೇವನಾಗರಿಯಲಿದೆ, ದಾಸರು ಕನ್ನಡವನ್ನೇ, ಸಂಸ್ಕೃತ ಲಿಪಿಯಲ್ಲಿ ಬರೆಯುತ್ತಿದ್ದರು. ಈ ಶ್ರೀ ಪುರುಷೋತ್ರಮ ವಿಲಾಸ ಹನ್ನೊಂದು ನುಡಿಗಳಿದ್ದು, ಮುದ್ರಿಕೆ ನುಡಿ ಮಾತ್ರ ಇಲ್ಲ.ದ

ಕೀ. ೬[illegible]

ಶ್ರೀ ನಾಮಗಿರಿ ಅಮ್ಮ

ನಾಮಕ್ಕಲ್ (ಸೇಲಂ ಜಿಲ್ಲಾ) ಕ್ಷೇತ್ರದಲ್ಲಿ ನಾಮಕ್ಕಲ್ ಲಕ್ಷ್ಮೀನರಸಿಂಹ ದೇವರ ಸನ್ನಿದಾನದಲ್ಲಿ ಸಾಕ್ಷಾತ್‌ಮಹಾಲಕ್ಷ್ಮೀ "ನಾಮಗಿರಿ ಅಮ್ಮ" ನಾಮದಿಂದ ವಿರಾಜ-ಮಾನಳಾಗಿದ್ದಾಳೆ. ಪ್ರಳಯ ಕಾಲದಲ್ಲಿ ಪರಮಾತ್ಮನನ್ನು ಯೋಗನಿದ್ರೆಯಿಂದೆಬ್ಬಿಸಿ ಸೃಷ್ಟಿಗಾಗಿ ಪ್ರಾರ್ಥಿಸಿದ 'ಸಮುದ್ರ ಮಥನಕಾಲ ಪ್ರಕಟಳಾದ ಸಾಕ್ಷಾತ್ ಮಹಾಲಕ್ಷ್ಮೀ' ಪ್ರಹ್ಲಾದ ರಾಜರಿಗೆ ಒಲಿದ ಲಕ್ಷ್ಮೀನರಸಿಂಹನ ಪತ್ನಿ-ನಾಮಗಿರಿ ಅಮ್ಮ ಎಂದು ದಾಸಾರ್ಯರು ವರ್ಣಿಸಿದ್ದಾರೆ.

ಕೀ. ೬[illegible]

ಶ್ರೀ ನಾಮಕಲ್ ಹನುಮಂತ

ತಮಿಳುನಾಡಿನಲ್ಲಿ ಮೆಟ್ಟೂರಿನಿಂದ ಶ್ರೀರಂಗಕ್ಕೆ ಹೋಗುವ ಮಾರ್ಗದಲ್ಲಿ ನಾಮಕಲ್ ಎಂಬ ಪಟ್ಟಣವಿದೆ. ಅಲ್ಲಿಯೇ ನಾಮಕಲ್ ಹನುಮಂತನ ಭವ್ಯವಾದ ಮೂರ್ತಿ ಇದೆ. ನಾಮಕಲ್ ನರಸಿಂಹ ನಾಮಗಿರಿಯಮ್ಮೆ ಇವರ ಸನ್ನಿಧಾನವೂ ಇಲ್ಲಿದೆ.

ಕೀ.೬[illegible] ೬2

ಶ್ರೀ ಪ್ರಸನ್ನ ರಾಮಯಣ

ಸುಂದರ ಕಾಂಡ

ರಾಮಾಯಣದಲ್ಲಿ ಬರುವ ಅನೇಕ ಪ್ರಸಂಗಗಳನ್ನು ಹಾಗೂ ಘಟನೆಗಳನ್ನು ಅನೇಕ ಹರಿದಾಸರುಗಳು ಆಯ್ದುಕೊಂಡು ಕೃತಿಗಳನ್ನು ರಚಿಸಿದ್ದಾರೆ. ಅದರಲ್ಲೂ ಶ್ರೀರಾಮನ ಹಾಗೂ ಹನುಮಂತನ ಮೇಲೆ ತಮ್ಮ ಭಕ್ತಿಯಿಂದ ಈ ಹರಿದಾಸರುಗಳು ಕೃತಿಗಳನ್ನು ರಚಿಸಿ ಭಾಗವತ

ಧರ್ಮವನ್ನು ನಿರೂಪಿಸಿದ್ದಾರೆ. ಈ ದಾಸಾರ್ಯರ ಕೃತಿಯು ಶ್ರೀಮಧ್ವಾಚಾರ್ಯರ ಮಹಾಭಾರತ ತಾತ್ಪರ್ಯ ನಿರ್ಣಯ ಗ್ರಂಥಕ್ಕೆ ಪೂರಕವಾಗಿದೆ.

ಕೀ. ೭[illegible]

ಶ್ರೀ ಪಂಚಾಕ್ಷರ ಶಿವ

ಇದೊಂದು ಸಂಸ್ಕೃತದಲ್ಲಿರುವ ಶಿವಸ್ತುತಿಯಾಗಿದೆ. ದಾಸರು ಪೂರ್ಣವಾಗಿ ಸಂಸ್ಕೃತದಲ್ಲೂ ದೇವರನಾಮವನ್ನು ರಚಿಸಬಹುದು ಎಂದು ತೋರಿಸಿ ಕೊಟ್ಟಿದ್ದಾರೆ.

ಜನಾರ್ಧನನಿಗೆ ಪ್ರಿಯನಾದವನೂ ಪಾರ್ವತಿ ರಮಣನೂ ಆಗಿರುವ ಶಿವನು ೫ ಮುಖ ಉಳ್ಳವನು ಆಗಿದ್ದಾನೆ. ವಿದ್ಯುತ್, ಶುಭ್ರಂ, ಕೃಷ್ಣಂ, ರಕ್ತಂ, ಶ್ಯಾಮಂ ಎಂಬುವೇ ಐದು ಮುಖಗಳು.

ಕೀ. ೭[illegible]

ಶ್ರೀ ಭವಾನಿ ಕ್ಷೇತ್ರಸ್ಥ ಸಂಗಮೇಶ್ವರ ಸ್ತೋತ್ರ

ಈ ಭವಾನಿ ಕ್ಷೇತ್ರವು ಮೆಟ್ಟೂರಿನಿಂದ ಈರೋಡ್‌ಗೆ ಹತ್ತಿರ ಶ್ರಿರಂಗಕ್ಕೆ ಹೋಗುವಾಗ ನಾಮಕಲ್ ಕ್ಷೇತ್ರಕ್ಕಿಂತ ಮುಂಚಿತವಾಗಿ ಸಿಕ್ಕುತ್ತದೆ. ಇದು ತಮಿಳುನಾಡಿನಲ್ಲಿದೆ.

ಕೀ. ೭೮ 22

ಶ್ರೀ ವೃದ್ಧಾಚಲ ಈಶ್ವರ ಸ್ತುತಿ

ತಮಿಳುನಾಡಿನ ಸೇಲಂನಿಂದ ೯೦–೧೦೦ ಕಿಲೋಮೀಟರ್ ದೂರದಲ್ಲಿ ಚಿದಂಬರಂಗೆ ಹೋಗುವ ಮಾರ್ಗದಲ್ಲಿ ಈ ವೃದ್ಧಾಚಲ ಕ್ಷೇತ್ರವಿದೆ.

ಶ್ರೀಮುಷ್ಣಕ್ಷೇತ್ರಸ್ಥ ಭೂವರಾಹನನ್ನು ತಂತ್ರಸಾರೋಕ್ತವಾಗಿ ಸ್ಮರಿಸುತ್ತ ನರಹರಿಗೆ ಪ್ರಿಯನಾದ ಹಾಗೂ ಮಂಗಳಾತ್ಮಕನೂ ಆದ ಶಿವನ ಸ್ಮರಣೆಯನ್ನು ಮೊದಲ ನುಡಿಯಲ್ಲಿ ಮಾಡುತ್ತಾ ಶಿವನ ರೂಪಲಾವಣ್ಯಗಳ ಕಡೆ ತಮ್ಮ ಮುಂದಿನ ನುಡಿಗಳನ್ನು ರಚಿಸಿದ್ದಾರೆ. ಶಿವನು ಐದು ಮುಖಗಳನ್ನು ಹೊಂದಿದ್ದು, ತ್ರೀನೇತ್ರನಾಗಿ, ಮೃತ್ಯುಂಜಯ ಎಂದು ಕರೆಯಲ್ಪಡುತ್ತಾನೆ. ಶಿವನ ಐದು ರೂಪಗಳು: ಈಶಾನ (ಮಹೇಶ), ತತ್‌ಪುರುಷ, ವಾಮದೇವ, ಅಘೋರ ಹಾಗೂ ಸದ್ಯೋಜಾತ. ಪಂಚಮುಖ ಶಿವನ ವರ್ಣಗಳು, ಬಿಳಿ, ಕಪ್ಪು, ಕೆಂಪು, ಹಳದಿ ಹಾಗೂ ನೀಲ.

ಗಾಯತ್ರೀ ಮಂತ್ರ ಪ್ರತಿ ಪಾದ್ಯಳು. ನಾರಿದಾದಿಗಳಿಂದ ಪೂಜಿತಳು. ಘೋರತರವಾದ ಪಾಪಗಳನ್ನು ಪರಿಹರಿಸುವವಳು. ಆಕೆಯ ದರ್ಶನ ಮಾತ್ರದಿಂದ ಸರ್ವ ಪಾಪಗಳು ಪರಿಹಾರವಾಗುತ್ತದೆ. ಎಂದು ದಾಸರು ಭಾವಿಸುತ್ತಾರೆ.

ಕೀ. ೯೭ - ೧

ಲೋಕಪಾಲಕರು

ಅಷ್ಟದಿಕ್ಪಾಲಕರು ಮತ್ತು ಊರ್ಧ್ವ ಮತ್ತು ಅಧೋಲೋಕಪಾಲಕರನ್ನು ಕುರಿತು ೧೫ ಪದ್ಯಗಳನ್ನು ದಾಸರು ರಚಿಸಿದ್ದಾರೆ. ಇದು ಬಹಳ ಅಪರೂಪದ ಕೃತಿ. ಈ ಲೋಕ ಪಾಲಕರಲ್ಲಿ ಒಳಗಿದ್ದು ಕಾರ್ಯ ಮಾಡಿಸುವುದು ಲಕ್ಷ್ಮೀರಮಣನೆಂದು ತಿಳಿಸಿದ್ದಾರೆ. ಉಪನಿಷತ್ತು ಮತ್ತು ವೇದಗಳಲ್ಲಿ ತಿಳಿಸಿರುವಂತೆ ಎಲ್ಲ ಲೋಕಪಾಲಕರುಗಳಲ್ಲಿ ಪರಮಾತ್ಮನು ನಿಂತು ಕೆಲಸಮಾಡಿಸುತ್ತಾನೆ ಎಂಬುದನ್ನು ಆಧರಿಸಿ ಇಲ್ಲಿ ತಿಳಿಸಿದ್ದಾರೆ. ಮೊದಲನೆ ಪದ್ಯದಲ್ಲಿ ಮತ್ತು ಕೊನೆಯಲ್ಲಿ ಒಂದು ಪದ್ಯದಲ್ಲೆ ಎಲ್ಲ ಲೋಕಪಾಲಕರ ಹೆಸರನ್ನು ತಿಳಿಸಿ ತದನಂತರ ಒಬ್ಬೊಬ್ಬ ಲೋಕಪಾಲಕರನ್ನ ಒಂದೊಂದು ಪದ್ಯದಲ್ಲಿ ಕೊಂಡಾಡಿದ್ದಾರೆ. ಲೋಕಪಾಲಕರ ವಾಹನಗಳನ್ನು ನಮೂದಿಸಿದ್ದಾರೆ. ಈ ಮಾದರಿಯ ಲೋಕಪಾಲಕರ ಸ್ತೋತ್ರ ಬಹಳ ವಿರಳ ಮತ್ತು ವಿನೂತನ.

ಕೀ. ೧೦೪

ಶ್ರೀ ಪಾದರಾಜರು

ಶ್ರೀ ಪಾದರಾಜರು, ಮುಳಬಾಗಿಲು (ಕೋಲಾರ ಜಿಲ್ಲೆ) ಎಂಬ ಕ್ಷೇತ್ರಕ್ಕೆ ಬಂದು ತಾವೇ ಪಾಠ ಪ್ರವಚನಾದಿಗಳನ್ನು ಮಾಡುತ್ತ, ಮಠವನ್ನು ಸ್ಥಾಪಿಸಿದರು.

ಶ್ರೀಪಾದರಾಜರ ರಚಿತ ಶ್ರೀಮಧ್ವಾಖ್ಯನಾಮಕ್ಕೆ, ಫಲಸ್ತುತಿಯನ್ನು ಶ್ರೀಜಗನ್ನಾಥದಾಸರು ಬರೆದಿದ್ದಾರೆ. ಶ್ರೀಮಧ್ವನಾಮವು ಅತ್ಯಂತ ಉತ್ಕಷ್ಟದ್ದಾಗಿದೆ.

ಶ್ರೀಪಾದರಾಜರು ತಮ್ಮ ಶೇಷಾವಧಿಯನ್ನು, ಮುಳಬಾಗಿಲು ಕ್ಷೇತ್ರದಲ್ಲಿ ಕಳೆದು ಶಾಲಿವಾಹನ ಶಕೆ ೧೪೦೮ ರ ಜೇಷ್ಠ ಮಾಸ, ಶುಕ್ಲ ಚತುರ್ದಶಿಯಲ್ಲಿ ಶ್ರೀಹರಿಯ ಪುರವನ್ನು ಸೇರಿದರು.

ಕೀ. ೧೦೬

ಶ್ರೀ ಶೇಷ ಚಂದ್ರಿಕಾರ್ಯರ ಸ್ತೋತ್ರ

ಶ್ರೀ ವ್ಯಾಸರಾಜ ಮಠದ ಪರಂಪರೆಯಲ್ಲಿ ಬಂದ ಶ್ರೀರಘುನಾಥತೀರ್ಥರು ವ್ಯಾಸರಾಜ ರಚಿತ ತಾತ್ಪರ್ಯ ಚಂದ್ರಿಕಾದ ಉಳಿದ ಎರಡು ಅಧ್ಯಾಯಗಳನ್ನು ಪೂರ್ಣ ಮಾಡಿ ಶೇಷ ಚಂದ್ರಿಕಾ ಚಾರ್ಯರೆಂದು ಪ್ರಸಿದ್ಧರಾದರು. ಶ್ರೀಲಕ್ಷ್ಮೀ ನಾರಾಯಣ ತೀರ್ಥರು ಶ್ರೀ ವ್ಯಾಸರಾಯ ಮಠದ ಪರಂಪರೆಯಲ್ಲಿ ಬಂದ ಏಳನೆಯ ಯತಿಗಳು. ಇವರ ಶಿಷ್ಯರೇ ಶ್ರೀ ರಘುನಾಥ ತೀರ್ಥರು. ಶ್ರೀ ರಘುನಾಥ ತೀರ್ಥರ ಶಿಷ್ಯರು ಶ್ರೀ ಜಗನ್ನಾಥ ತೀರ್ಥರು .

ಶ್ರೀ ಜಗನ್ನಾಥ ತೀರ್ಥರು 'ಭಾಷ್ಯ ದೀಪಿಕಾ' ಹಾಗೂ 'ಸೂತ್ರ ದೀಪಿಕಾ' ಎಂಬ ಎರಡು ಗ್ರಂಥಗಳನ್ನು ರಚಿಸಿದ್ದಾರೆ. ಇವರು ಭಾಷ್ಯ ದೀಪಿಕಾಚಾರ್ಯರೆಂದೇ ಗುರುತಿಸಲ್ಪಟ್ಟಿದ್ದಾರೆ.

ಶ್ರೀರಾಘವೇಂದ್ರರು ಉತ್ತಮ ಪಂಡಿತಾಗ್ರಣಿ, ವೀಣಾವಾದ್ಯ ಲಲಿತ ಕಲಾನಿಧಿಯೂ ಆಗಿದ್ದರು. ಅವರು ಚತುರ್ಥಾ ಶ್ರಮವನ್ನು ಸ್ವೀಕರಿಸಿ, ಶ್ರೀ ಸುಧೀಂದ್ರರಿಂದ ಅನುಗ್ರಹೀತರಾಗಿ ಯತ್ಯಾಶ್ರಮಿಗಳಾದರು. ಪೂರ್ವಾಶ್ರಮದಲ್ಲಿ ವೆಂಕಟನಾಥರಾಗಿದ್ದ ಇವರು ಶ್ರೀ ರಾಘವೇಂದ್ರ ತೀರ್ಥ ಎಂಬ ಯತಿನಾಮವನ್ನು ಪಡೆದರು.

ಕೀ. ೧೨೦-೧೨೨

ಐಜಿ ವ್ಯಾಸತತ್ತ್ವಜ್ಞರು

ಐಜಿ ಗ್ರಾಮವು ಆಂಧ್ರ ಪ್ರದೇಶಕ್ಕೆ ಸೇರಿದ್ದು, ಮಂತ್ರಾಲಯದಿಂದ ನಾಗಲದಿನ್ನೆ ಮಾರ್ಗವಾಗಿ ಕೇವಲ ೩೦ ಕಿ.ಮೀ ದೂರದಲ್ಲಿದೆ.

ಈ ಐಜಿ ಗ್ರಾಮದಲ್ಲಿ ವಾಸಿಸುತ್ತಲಿದ್ದ ವೇಂಕಟ ನರಸಿಂಹಾಚಾರ್ಯರರಿಗೆ ವೆಂಕಟರಾಮ ಎಂಬ ಪುತ್ರನು ಶ್ರೀವೆಂಕಟೇಶನ ಅನುಗ್ರಹದಿಂದ ಜನಿಸಿದನು. ಈ ವೆಂಕಟರಾಮನು ಮುಗ್ಧಭಾವದವಾಗಿರುವುದರ ಜೊತೆಗೆ ಮಾಂದ್ಯತ್ವವೂ ಇದ್ದಿತು. ಇದನ್ನು ಅರಿತು, ಭಯದಿಂದ ಶ್ರೀಗೋಪಾಲದಾಸರ ಕಂಡು ಅವರ ಅನುಗ್ರಹ ಪಡೆದು ಬಂದರು. ಅನುಗ್ರಹೀತರಾದ ಶ್ರೀವೆಂಕಟನರಸಿಂಹಾಚಾರ್ಯ ಪಂಡಿತರ ಪಾಠ ಕೇಳಿ, ವೆಂಕಟರಾಮಾರ್ಯ ಮಹಾ ಪಂಡಿತನಾದನು.

ಸವಣೂರು ಪ್ರಾಂತ್ಯದ ಸಮೀಪದ ಸಿದ್ದಾಪುರ ಎಂಬುವ ಗ್ರಾಮದಲ್ಲಿ ಭಾಗೀರಥಿ ಬಾಳಾಚಾರ್ಯ ಎನ್ನುವ ಮಾಧ್ವದಂಪತಿಗಳು ಇದ್ದರು. ಇವರು ಮಳಖೇಡದ

ಟೀಕಾಚಾರ್ಯರನ್ನು ಭಕ್ತಿಯಿಂದ ಸೇವಿಸಿದರು. ಈ ಸಿದ್ದಾಪುರದ ದಂಪತಿಗಳಿಗೆ ಪುತ್ರ ಭಾಗ್ಯ ದೊರೆಯಿತು. ಇವರು ತಮ್ಮ ಪುತ್ರನಿಗೆ ಜಯತೀರ್ಥ ಎಂಬ ನಾಮಕರಣ ಮಾಡಿದರು. ಐಜಿ ಆಚಾರ್ಯರ ಶಿಷ್ಯನಾದ, ಈ ಬಾಲಕ ಇತರ ವಿದ್ಯಾರ್ಥಿಗಳಿಗಿಂತ ಅಧಿಕವಾಗಿ ದಿವ್ಯಪ್ರತಿಭೆಯನ್ನು ತೋರಿಸುತ್ತಲಿದ್ದ. ಹೆಚ್ಚಿನ ಶಾಸ್ತ್ರ ವಿದ್ಯೆಗಳನ್ನು ಕಲಿತು ಉತ್ತಮಜ್ಞಾನಿಯಾದನು. ಈತನೇ ಮುಂದೆ ಯತ್ಯಾಶ್ರಮ ಸ್ವೀಕರಿಸಿ ವಿಷ್ಣುತೀರ್ಥನಾದ. ಇವರಿಗೆ ಅಡವಿ ಆಚಾರ್ಯ, ಅರಣ್ಯಕಾಚಾರ್ಯ ಎಂಬ ಹೆಸರುಗಳೂ ಇವೆ.

ಕೀ. ೧೩೭–೧೩೮

ಶ್ರೀ ಗೋಪಾಲದಾಸಾರ್ಯ ವಿಜಯ

ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿಗೆ ಸೇರಿದ (ರಾಯಚೂರು ಲಿಂಗಸುಗೂರು ರಸ್ತೆ ಪಕ್ಕದಲ್ಲಿ ಇರುವ ಗ್ರಾಮ) ಮೊಸರು ಕಲ್ಲು ಎಂಬ ಗ್ರಾಮದಲ್ಲಿ ಶ್ರೀಮುರಾರಪ್ಪ ಹಾಗೂ ವೆಂಕಮ್ಮ ಇವರಿಗೆ ಜನಿಸಿದ ಪುತ್ರನೇ ಭಾಗಣ್ಣ. ಕಾಲಾಂತರದಲ್ಲಿ ಇವರು ವಿಜಯದಾಸರಿಂದ ಅನುಗ್ರಹೀತರಾಗಿ ಗೋಪಾಲದಾಸರು ಆದರು. ಶ್ರೀಗೋಪಾಲದಾಸರು ಗಣೇಶಾಂಶರು ಎಂದು ತಿಳಿಯಲಾಗಿದೆ. ಇವರು ಪರಮ ಭಾಗವತ್ತೋತ್ತಮರೂ ಆಗಿದ್ದು 'ಭಕ್ತಿಯಲ್ಲಿ ಭಾಗಣ್ಣ' ಎಂದೇ ಜ್ಞಾನಿಗಳು ತಿಳಿದಿದ್ದಾರೆ.ಕೇವಲ ೪೦ ವರ್ಷ ಜೀವಿಸಿದ ಇವರು ಬಾಲ್ಯದಲ್ಲಿಯೇ ಗಾಯತ್ರಿ ಮಂತ್ರ ಸಿದ್ಧಿ ಪಡೆದು ಪ್ರಖ್ಯಾತರಾದರು. ಶ್ರೀವಿಜಯದಾಸರ ಅನುಗ್ರಹೀತರಾಗಿ ಗೋಪಾಲವಿಠಲ ಅಂಕಿತಪಡೆದು, ತಮ್ಮ ಗುರುಗಳ ಆಜ್ಞೆ ಪ್ರಕಾರ ಇವರು ತಮ್ಮ ೪೦ ವರ್ಷ ಆಯುಷ್ಯವನ್ನು ಶ್ರೀ ಶ್ರೀನಿವಾಸದಾಸರಿಗೆ ಧಾರೆ ಎರೆದರು. ಶ್ರೀ ಶ್ರೀನಿವಾಸದಾಸರೇ ಜಗನ್ನಾಥದಾಸರು ಎಂದು ಪ್ರಖ್ಯಾತರಾದರು. ಈ ಮಹಾಮಹಿಮಾನ್ವಿತ ವ್ಯಕ್ತಿಗಳಾದ ಶ್ರೀಗೋಪಾಲದಾಸರನ್ನು ಎಲ್ಲ ದಾಸರು ತಮ್ಮ ಕೃತಿಗಳಲ್ಲಿ ಹಾಡಿ ಅನುಗ್ರಹ ಬೇಡಿದ್ದಾರೆ. ಅಂತಹ ದಾಸರುಗಳಲ್ಲಿ ಶ್ರಿಪ್ರಸನ್ನ ಶ್ರೀನಿವಾಸ ದಾಸರು ಒಬ್ಬರಾಗಿದ್ದಾರೆ. ಈ ವಿಜಯವನ್ನು ೧೨೪ ನುಡಿಗಳಲ್ಲಿ ರಚಿಸಿದ್ದಾರೆ.

ಕೀ. ~~೨೪೮~~ ೧೩೯

ಶ್ರೀ ಜಗನ್ನಾಥದಾಸರ ಚರಿತ್ರೆ

ರಾಯಚೂರು ಜಿಲ್ಲೆ ಮಾನ್ವಿ ತಾಲೂಕಿಗೆ ಸೇರಿದ ಬ್ಯಾಗವಟ್ಟಿ ಎಂಬ ಗ್ರಾಮದಲ್ಲಿ ಶ್ರೀನರಸಿಂಹಾಚಾರ್ಯ ದಂಪತಿಗಳಿಗೆ ತಿರುಪತಿಯ ಶ್ರೀನಿವಾಸನ ದಯೆಯಿಂದ ಹುಟ್ಟಿದ ಮಗುವೇ ಶ್ರೀ ಶ್ರೀನಿವಾಸ. ಆಗಿನ ಕಾಲದಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ ಶ್ರಿಮಠದಲ್ಲಿ ವಿರಾಜ ಮಾನರಾಗಿದ್ದ ಶ್ರೀ ವರದೇಂದ್ರ ತೀರ್ಥ ಶ್ರಿಪಾದಂಗಳವರಲ್ಲಿ (ಪೂರ್ವಾಶ್ರಮ ನಾಮ ಬಲರಾಮಾಚಾರ್ಯರು) ಈ ಶ್ರೀನಿವಾಸ ವಿದ್ಯಾಭ್ಯಾಸ, ಶಾಸ್ತ್ರವ್ಯಾಸಂಗ ಎಲ್ಲ ಪಡೆದು,

ಆಚಾರ್ಯರೆಂದು ಕರೆಯಿಸಲ್ಪಟ್ಟು, ಮಾನ್ವಿಗೆ ಬಂದು ನೆಲಸಿದರು. ಈ ದಾಸರು ಅನೇಕ ದೇವರ ನಾಮಗಳನ್ನು ತತ್ವಸುವಾಲಿಗಳನ್ನು ರಚಿಸಿದ್ದೇ ಅಲ್ಲದೆ ಇವರು ಭಾಮಿನಿ ಷಟ್ಪದಿಯಲ್ಲಿ ರಚಿಸಿದ ಶ್ರೀಹರಿ ಕಥಾಮೃತಸಾರವು ಉತ್ಕೃಷ್ಟವಾಗಿದೆ. ಇವರು ೪೦ ವರ್ಷಗಳ ಆಯುರ್ದಾನವನ್ನು ಶ್ರೀಗೋಪಾಲದಾಸರಿಂದ ಪಡೆದು ೮೨ ವರ್ಷಗಳವರೆಗೆ ಜೀವಿಸಿದ ಮಹಾನುಭವರು. ಇವರನ್ನಕುರಿತು ಶ್ರೀ ಪ್ರಸನ್ನ ಶ್ರೀನಿವಾಸರು ರಚಿಸಿದ ಚರಿತ್ರೆ.

ಕೀ. ೧೪೫

ಶ್ರೀಪ್ರಸನ್ನ ಗೋಪೀವಲ್ಲಭ ಕೃಷ್ಣ

ದಾಸರು ತಮ್ಮ ಶಿಷ್ಯರಿಗೆ ಅನುಗ್ರಹಿಸಿ ನಿಡಿದ ಅಂಕಿತ ಕೃತಿ ಆಗಿದೆ. ಸುಹೃದನೂ, ಕರುಣಾಳುವೂ ಆಗಿರುವ ನೀನು ಕಾಪಾಡು ಹೇ ಪ್ರಸನ್ನ ಗೋಪೀವಲ್ಲಭನಾದ ಶ್ರೀಕೃಷ್ಣನೇ ಎಂದುಹೇಳುವ ಮೂಲಕ ಈ ಪಲ್ಲವಿ ಪ್ರಾರಂಭವಾಗಿದೆ.

ಅನುಬಂಧ–೩

ಶ್ರೀ ಪ್ರಸನ್ನ ಶ್ರೀನಿವಾಸ ದಾಸರ ಅಂಕಿತದ ವಿಶೇಷಣಗಳು

೧. ಅನ್ನವಾಹನ ತಾತ ಪ್ರಸನ್ನ ಶ್ರೀನಿವಾಸ

೨. ಅಜನತಾತ ಪ್ರಸನ್ನ ಶ್ರೀನಿವಾಸ

೩. ಅಜನಪಿತ ಶ್ರೀರಮೆಯರಸ ಶ್ರೀಪ್ರಸನ್ನ ಶ್ರೀನಿವಾಸ॥

೪. ಅಜಪಿತ ಪ್ರಸನ್ನ ಶ್ರೀನಿವಾಸ

೫. ಅಬ್ಜಜಪಿತ ಶ್ರೀಪ್ರಸನ್ನ ಶ್ರೀನಿವಾಸ

೬. ಅಕಳಂಕ ಅಜಪಿತ ಪ್ರಸನ್ನ ಶ್ರೀನಿವಾಸ

೭. ಅಜನ ಜನಕನು ಶ್ರೀಪ್ರಸನ್ನ ಶ್ರೀನಿವಾಸನು

೮. ಅಜವನ ರುಹಜಪಿತ ಶ್ರೀಶಪ್ರಸನ್ನ ಶ್ರೀನಿವಾಸ

೯. ಅರವಿಂದಜ ತಾತ ಪ್ರಸನ್ನ ಶ್ರೀನಿವಾಸ॥

೧೦. ಅಜನಪಿತ ಶ್ರೀಪ್ರಸನ್ನ ಶ್ರೀನಿವಾಸ॥

೧೧. ಅಮಲಗುಣಗಣ ಸಿಂದು – ಶ್ರೀಪ್ರಸನ್ನ ಶ್ರೀನಿವಾಸ

೧೨. ಉದಕಜಾಸನ ಪಿತ ಪ್ರಸನ್ನ ಶ್ರೀನಿವಾಸ

೧೩. ಕುಸುಮ ಸಂಭವನ ತಾತನು – ರಮಾಪತಿ ಪ್ರಸನ್ನ ಶ್ರೀನಿವಾಸ

೧೪. ಕುಸುಮಭವ ಪಿತ ಪ್ರಸನ್ನ ಶ್ರೀನಿವಾಸ

೧೫. ಕಮಲಾಸನ ಪಿತ ಪ್ರಸನ್ನ ಶ್ರೀನಿವಾಸ

೧೬. ಕಾಮಪಿತ ವೇಧ ಪಿತ ಭೂವರಾಹ ನಮೋ ಶ್ರೀಪ್ರಸನ್ನ

೧೭. ಕುಸುಮಜಪಿತ ಉಕ್ತ ಅಭಯ ಪ್ರಸನ್ನ ಶ್ರೀನಿವಾಸ

೧೮. ಕಮಲಭವಪಿತ ಪ್ರಸನ್ನ ಶ್ರೀನಿವಾಸ

೧೯. ಕುಸುಮ ಸಂಭವ ಪಿತ ಶ್ರೀ ಪ್ರಸನ್ನ ಶ್ರೀನಿವಾಸ

೨೦. ಜ್ಞಾನ ಸುಖ ಪೂರ್ಣ ಪ್ರಸನ್ನ ಶ್ರೀನಿವಾಸ

೨೨. ಜಯತು ವಿಧಿತಾತ ಪ್ರಸನ್ನ ಶ್ರೀನಿವಾಸ॥
೨೩. ತೋಯಜಾಸನ ಪಿತ ಪ್ರಸನ್ನ ಶ್ರೀನಿವಾಸ
೨೪. ನೀರಜಾಸನ ತಾತ ಪ್ರಸನ್ನ ಶ್ರೀನಿವಾಸ
೨೫. ನಮೋ ಪುರಂದರಾಯಸ್ಥ ಪ್ರಸನ್ನ ಶ್ರೀನಿವಾಸ ವಿಭೋ
೨೬. ನಮೋ ನಮೋ ಪ್ರಸನ್ನ ಶ್ರೀನಿವಾಸನ ಸತಿ
೨೭. ನಾಮಗಿರೀಶ ಶ್ರೀಪ್ರಸನ್ನ ಶ್ರೀನಿವಾಸ
೨೮. ನೀರಜಪಿತ ಶ್ರೀ ಪ್ರಸನ್ನ ಶ್ರೀನಿವಾಸ
೨೯. ನಿರ್ದೋಷಗುಣ ಗಣ ಸಿಂಧು ಪ್ರಸನ್ನ ಶ್ರೀನಿವಾಸ
೩೦. ನಿರ್ದೋಷ ಗುಣ ನಿಧಿ ಪ್ರಸನ್ನ ಶ್ರೀನಿವಾಸ
೩೧. ಪದುಮಜ ಪಿತ ಶ್ರೀಪ್ರಸನ್ನ ಶ್ರೀನಿವಾಸ
೩೨. ಪ್ರಮೋದಿ ಗೋಪಾಲ ಪ್ರಸನ್ನ ಶ್ರೀನಿವಾಸ
೩೩. ಪದುಮಾಸನ ಪಿತನು ಪ್ರಸನ್ನ ಶ್ರೀನಿವಾಸ
೩೪. ಪುಷ್ಪಜನ ಪಿತ ಶ್ರೀ ಪ್ರಸನ್ನ ಶ್ರೀನಿವಾಸ
೩೫. ಪದ್ಮಜನ ಪಿತನು ಪ್ರಸನ್ನ ಶ್ರೀನಿವಾಸ
೩೬. ಬೊಮ್ಮನತಾತ ಪ್ರಸನ್ನ ಶ್ರೀನಿವಾಸ
೩೭. ಬ್ರಹ್ಮ ದೇವರ ಪಿತ ಪ್ರಸನ್ನ ಶ್ರೀನಿವಾಸ
೩೮. ಬೊಮ್ಮ ಪಿತ ಶ್ರೀಪ್ರಸನ್ನ ಶ್ರೀನಿವಾಸನು
೩೯. ಮೋದಮಯ ಶ್ರೀಯುತ್ ಪ್ರಸನ್ನ ಶ್ರೀನಿವಾಸ
೪೦. ಮಂದಜಾಸನ ಪಿತ ಶ್ರೀಪ್ರಸನ್ನ ಶ್ರೀನಿವಾಸ
೪೧. ಮಂದಜಾಸನ ತಾತ ಪ್ರಸನ್ನ ಶ್ರೀನಿವಾಸ
೪೨. ಮಂದಜಭವ ಪಿತ ಪ್ರಸನ್ನ ಶ್ರೀನಿವಾಸ
೪೩. ಮದ್ಗೇಹ ನಿಲಯ ಶ್ರೀಪ್ರಸನ್ನ ಶ್ರೀನಿವಾಸ
೪೪. ಮೂಡಲ ಸುನಗವಾಸ ಪ್ರಸನ್ನ ಶ್ರೀನಿವಾಸ
೪೫. ಮಧ್ವ ಹೃತ್ಪದ್ಮಗ ಶ್ರೀಪ್ರಸನ್ನ ಶ್ರೀನಿವಾಸ
೪೬. ಮಧ್ವ ಹೃತ್ಪದ್ಮವಾಸ ವಿಧಿಪಿತ ಶ್ರೀದಶ್ರೀ ಪ್ರಸನ್ನ ಶ್ರೀನಿವಾಸ
೪೭. ಮಹಿಶಿರಿಕಾಂತ ಶ್ರೀಪ್ರಸನ್ನ ಶ್ರೀನಿವಾಸ
೪೮. ಮಹಿಸಿರಿ ಶ್ರೀಪ್ರಸನ್ನ ಶ್ರೀನಿವಾಸ

೪೯. ರಾಜೀವಾಲಯ ಪತಿ ಪ್ರಸನ್ನ ಶ್ರೀನಿವಾಸ
೫೦. ವನಜ ಸಂಭವಪಿತ ಶ್ರೀ ಪ್ರಸನ್ನ ಶ್ರೀನಿವಾಸ
೫೧. ವನಜ ಭವಪಿತ ಶ್ರೀಪ್ರಸನ್ನ ಶ್ರೀನಿವಾಸ
೫೨. ವನರುಹಾಸನ ತಾತ ಶ್ರೀಕರ ಪ್ರಸನ್ನ ಶ್ರೀನಿವಾಸ
೫೩. ವನಜಭವ ತಾತನು ಶ್ರೀಪ್ರಸನ್ನ ಶ್ರೀನಿವಾಸ
೫೪. ವಿಧಿತಾತ ಪ್ರಸನ್ನ ಶ್ರೀನಿವಾಸ
೫೫. ವಿಧಿಪಿತ ಪ್ರಸನ್ನ ಶ್ರೀನಿವಾಸ
೫೬. ವಿಧಿಯತಾತ ಪ್ರಸನ್ನ ಶ್ರೀನಿವಾಸ
೫೭. ವಿಧಿತಾತ ವಿಶ್ವರೂಪನೇ ಶ್ರೀಪ್ರಸನ್ನ ಶ್ರೀನಿವಾಸ
೫೮. ವಿಧಿಪಿತ ಶ್ರೀನೃಹರೀ ಪ್ರಸನ್ನ ಶ್ರೀನಿವಾಸ
೫೯. ವಿಕಸಿತಾಬ್ಜಜಜತಾತ ಪ್ರಸನ್ನ ಶ್ರೀನಿವಾಸ
೬೦. ವನರುಹಾಸನ ಪಿತ ಶ್ರೀಪ್ರಸನ್ನ ಶ್ರೀನಿವಾಸ
೬೧. ವನಜಜಪಿತ ಶ್ರೀಪ್ರಸನ್ನ ಶ್ರೀನಿವಾಸ
೬೨. ವನರುಹಾಸನಪಿತ ಮಧ್ವಸ್ಥ ಶ್ರೀಪತಿ ಶ್ರೀಪ್ರಸನ್ನ ಶ್ರೀನಿವಾಸ
೬೩. ವಾರಿಜಾಸನ ಪಿತನು ಪೂರ್ಣಪ್ರಜ್ಞರ ಹೃಸ್ಥ ಶಿರಿಪ್ರಸನ್ನ ಶ್ರೀನಿವಾಸ
೬೪. ವಾಗೀಶ ಪಿತ ಪ್ರಸನ್ನ ಶ್ರೀನಿವಾಸ
೬೫. ವೇಧಪಿತ ಪ್ರಸನ್ನ ಶ್ರೀನಿವಾಸ
೬೬. ವೇಧತಾತ ಪ್ರಸನ್ನ ಶ್ರೀನಿವಾಸ
೬೭. ವೃತತಿಜಾಸನ ಪಿತ ಪ್ರಸನ್ನ ಶ್ರೀನಿವಾಸ
೬೮. ವೃತತಿಜಾಸನ ತಾತ ಪ್ರಸನ್ನ ಶ್ರೀನಿವಾಸ
೬೯. ವೃತತಿಜಾಸನ ಪಿತನು ಹನುಮ ವಂದಿತ ಶ್ರೀಪ್ರಸನ್ನ ಶ್ರೀನಿವಾಸ
೭೦. ವೃತತಿಜ ಪಿತ ವಿಷ್ಣು ಪ್ರಸನ್ನ ಶ್ರೀನಿವಾಸ
೭೧. ಶತಸುಖಪಿತ ಪ್ರಸನ್ನ ಶ್ರೀನಿವಾಸ
೭೨. ಶಿವ ಶಿವದ ಶ್ರೀಪ್ರಸನ್ನ ಶ್ರೀನಿವಾಸ
೭೩. ಶಿರಿ ಸಹ ತ್ರಿವೃನ್ನಾಮ ಪ್ರಸನ್ನ ಶ್ರೀನಿವಾಸ
೭೪. ಶಿರಿ ನಾರಸಿಂಹ ಶ್ರೀಪ್ರಸನ್ನ ಶ್ರೀನಿವಾಸ
೭೫. ಶ್ರೀಕರಾರ್ಚಿತ ಶ್ರೀಪ್ರಸನ್ನ ಶ್ರೀನಿವಾಸ

೭೬. ಶ್ರೀ ಪದ್ಮನಾಭ ಪ್ರಸನ್ನ ಶ್ರೀನಿವಾಸ
೭೭. ಸರಸಿಜಾಸನ ತಾತ ಪ್ರಸನ್ನ ಶ್ರೀನಿವಾಸ
೭೮. ಸರಸಿಜಭವತಾತ ಪ್ರಸನ್ನ ಶ್ರೀನಿವಾಸ
೭೯. ಸರಸಿಜಾಸನ ಪಿತ ಪ್ರಸನ್ನ ಶ್ರೀನಿವಾಸ
೮೦. ಸೃಷ್ಟಿಕರ್ತ ವೇದತಾತ ಪ್ರಸನ್ನ ಶ್ರೀನಿವಾಸ
೮೧. ಸುಮನಸರೊಡೆಯ ಶ್ರೀ ಪ್ರಸನ್ನ ಶ್ರೀನಿವಾಸ
೮೨. ಸರ್ವಗದ ವೇದಪಿತ ಪ್ರಸನ್ನ ಶ್ರೀನಿವಾಸ
೮೩. ಸರಸಿಜೋದ್ಭವ ತಾತ ಪ್ರಸನ್ನ ಶ್ರೀನಿವಾಸ
೮೪. ಸಿರಿ ನಾರಸಿಂಹ ಪ್ರಸನ್ನ ಶ್ರೀನಿವಾಸ
೮೫. ಸತ್ಯಲೋಕೇಶ ಪಿತ ಶ್ರೀಪ್ರಸನ್ನ ಶ್ರೀನಿವಾಸ
೮೬. ಹೇಮಗರ್ಭನ ಪಿತ ಪ್ರಸನ್ನ ಶ್ರೀನಿವಾಸ
೮೭. ಹೃಸ್ಥ ಶ್ರೀಪ್ರಸನ್ನ ಶ್ರೀನಿವಾಸ
೮೮. ಹೇಮ ಗರ್ಭನತಾತ ಪ್ರಸನ್ನ ಶ್ರೀನಿವಾಸ
೮೯. ಹನುಮಸ್ಥ ಅಜನಪಿತ ಶ್ರೀಪ್ರಸನ್ನ ಶ್ರೀನಿವಾಸ

ಅನುಬಂಧ-೪

ಶ್ರೀ ಪ್ರಸನ್ನ ಶ್ರೀನಿವಾಸದಾಸ ವಿರಚಿತ ಪ್ರಕಟಿತ ಕೃತಿಗಳು

೧. ಪ್ರಸನ್ನ ಶ್ರೀ ವಿಷ್ಣು ಸಹಸ್ರನಾಮ ಸ್ತೋತ್ರ ಭಾಷ್ಯ (ಸ್ತೋತ್ರ ರೂಪಿ) ಇಸವಿ ೧೯೯೩ (ಮೊ.ಮುದ್ರಣ) ಸಂ: ಜಿ.ತಿರುಮಲ ಪ್ರ: ಶ್ರೀಪ್ರಸನ್ನ ಶ್ರೀನಿವಾಸ ದಾಸಾರ್ಯರ ಭಕ್ತವೃಂದ, ೪೫, ಶ್ರೀರಾಘವೇಂದ್ರ ಕಾಲೋನಿ ಮುಖ್ಯರಸ್ತೆ, ಚಾನುರಾಜಪೇಟೆ, ಬೆಂಗಳೂರು-೧೮. ಪುಟಗಳು- ೨೬೦ ಬೆಲೆ-೨೫.೦೦.

೨. ಪ್ರಸನ್ನ ಶ್ರೀವಿಜಯದಾಸಾರ್ಯ ಚರಿತ್ರೆ ಹಾಗೂ ಪ್ರಸನ್ನ ಶ್ರೀಗೋಪಾಲದಾಸಾರ್ಯ ವಿಜಯ (ಕೀರ್ತನೆಗಳು) ೧೯೯೩ (ಮೊ.ಮು) ಸಂ:ಜಿ. ತಿರುಮಲ ಪ್ರ.ಶ್ರೀಪ್ರಸನ್ನ ಶ್ರೀನಿವಾಸ ದಾಸ ಭಕ್ತವೃಂದ, ೪೫, ರಾಘುವೇಂದ್ರಕಾಲೋನಿ ಚಾಮರಾಜಪೇಟೆ, ಬೆಂ-೧೮, ಬೆಲೆ-೫.೦೦, ಪುಟಗಳು-೬೦.

೩. ಶ್ರೀಮದ್ಭಾಗವತಾಮೃತಸಾರ (ಪ್ರಥಮ ಸ್ಕಂದ) ಹಾಗೂ ಬ್ರಹ್ಮ ಸೂತ್ರಾಮೃತಸಾರ (ಸ್ತುತಿ ರೂಪ ಭಾಷ್ಯ)

ಅಕ್ಟೋಬರ್ ೧೯೯೮(ಮೊ.ಮು) ಸಂ॥ಜಿ.ತಿರುಮಲ, ಪ್ರಕಾಶನ: ಶ್ರೀಪ್ರಸನ್ನ ಶ್ರೀನಿವಾಸದಾಸಾರ್ಯರ ಭಕ್ತವೃಂದ, ೪೫, ರಾಘುವೇಂದ್ರ ಕಾಲೋನಿ ಮುಖ್ಯ ರಸ್ತೆ ಚಾಮರಾಜಪೇಟೆ, ಬೆಂಗಳೂರು-೧೮, ಪುಟಗಳು ೨೦೨, ಬೆಲೆ ೭೦,೦೦.

೪. ಶ್ರಿ ಪ್ರಸನ್ನ ಶ್ರೀನಿವಾಸದಾಸರ ದೇವರ ನಾಮಗಳು

೧೯೬೬(ಮೊ.ಮು) ಸೂ॥ ಎಸ್ ವೆಂಕಟರಾಮ. ಪ್ರಕಾಶಕನ:ಎಂಬಿ.ರಂಗನಾಥ ರಾವು ೪೫, ರಾಘವೇಂದ್ರ ಕಾಲೋನಿ ಬೆಂಗಳೂರು-೧೮, ಪುಟಗಳು ೬೪, ಬೆಲೆರೂ೧.೫೦.

೫. ನಿರ್ಣಯ ರಾಮಾಯಣ (ಶ್ರೀರಾಮ ಚರಿತಾಮೃತ) ಕೀರ್ತನೆ

ಜನವರಿ ೧೯೯೨ (ಮೊ.ಮು) ಸಂ॥ಜಿ ತಿರುಮಲ, ಪ್ರಕಾಶನ:ಶ್ರೀ ಪ್ರಸನ್ನ ಶ್ರೀನಿವಾಸದಾಸಾರ್ಯರ ಭಕ್ತವೃಂದ, ೪೫, ರಾಘವೇಂದ್ರ ಕಾಲೋನಿ ಬೆಂಗಳೂರು-೧೮ ಪುಟ:೮೫, ಬೆಲೆ ರೂ೬.೦೦.

೬. ಶ್ರೀಸೌಭಾಗ್ಯ ಸಪ್ತ ತ್ರಿಂಶತಿ (ಕೀರ್ತನೆ) ಹಾಗೂ ರಾಜ ರಾಜೇಶ್ವರಿ ಸ್ತೋತ್ರ

ಮೇ ೧೯೯೧ (ಮೊ.ಮು) ಸಂ॥ ಜಿ. ತಿರುಮಲ, ಪ್ರಾಕಾಶನ: ಶ್ರೀಪ್ರಸನ್ನ ಶ್ರೀನಿವಾಸ ದಾಸಾರ್ಯರ ಭಕ್ತ ವೃಂದ, ೪೫, ರಾಘವೇಂದ್ರ ಕಾಲೋನಿ, ಚಾಮರಾಜಪೇಟೆ, ಬೆಂಗಳೂರು–೧೮, ಪುಟ: ೩೮, ಬೆಲೆ–೩.೦೦.

೭. ಶ್ರೀ ಪ್ರಸನ್ನ ಶ್ರೀಜಗನ್ನಾಥದಾಸರ ಚರಿತ್ರೆ (ಕೀರ್ತನೆ)

ನವಂಬರ್ ೧೯೭೩, (ಮೊ.ಮು) ಸಂ॥ ಎನ್.ಕೆ.ಶ್ರೀಧರಮೂರ್ತಿ ಪ್ರಕಾಶನ: ಶ್ರೀ ಪ್ರಸನ್ನ ಶ್ರೀನಿವಾಸದಾಸರ ಭಕ್ತವೃಂದ ರಾಘುವೆಂದ್ರ ಕಾಲೋನಿ ಮುಖ್ಯರಸ್ತೆ, ಬೆಂಗಳೂರು–೧೮ ಪುಟ:೪೮, ಬೆಲೆ ರೂ೧.೦೦

೮. ಶ್ರೀ ಸೌಭಾಗ್ಯ ಸಪ್ತತ್ರಿಂಶತಿ (ಕೀರ್ತನೆ)

ಅಗಸ್ಟ ೧೯೭೨, ಸಂ॥ ಎನ್.ರಾಘವೇಂದ್ರ ರಾವು, ಭಕ್ತವೃಂದ ಶ್ರೀಪ್ರಸನ್ನ ಶ್ರೀನಿವಾಸದಾಸಾರ್ಯರ ಭಕ್ತ ವೃಂದ, ೪೫, ರಾಘವೇಂದ್ರ ಕಾಲೋನಿ, ಚಾಮರಾಜಪೇಟೆ ಬೆಂಗಳೂರು–೧೮, ಪುಟಗಳು–೨೨, ಬೆಲೆ–ನಮೂದಿಸಿಲ್ಲ.

೯. ಶ್ರೀದತ್ತಾತ್ರಯ ಅವತಾರ

ಲೀಲಾವಿಲಾಸ ಚರಿತ್ರೆ (ಕೀರ್ತನೆ)

೧೯೮೪, ಸಂ॥ ಜಿ.ತಿರುಮಲ, ಪ್ರ:ಲಿಂಗಸೂಗೂರು ಶ್ರೀನಿವಾಸದಾಸರು, ವರದೇಂದ್ರ ಸಾಹಿತ್ಯ ಮಂಡಲ, ಲಿಂಗಸೂಗೂರು, ರಾಯಚೂರು ಜಿಲ್ಲೆ, ಪುಟ–೨೬, ಬೆಲೆ ರೂ–೨.೦೦

೧೦. ಶ್ರೀ ವರದೇಂದ್ರ ವಿಜಯ (ಗೀರ್ವಾಣ ಅಷ್ಟೀಛಂದಸ್ಸು) (ಕೀರ್ತನೆ)

ಸಂ॥ ಸೀಮಾಮ ಲಿಂಗಸೂಗೂರು, ಪ್ರ। ಶ್ರೀ ವರದೇಂದ್ರ ಹರಿದಾಸ ಸಾಹಿತ್ಯಮಂಡಲ, ಲಿಂಗಸೂಗೂರು ರಾಯಚೂರು ಜಿಲ್ಲೆ, ಪುಟ–೧೦, ಬೆಲೆ–೧.೫೦

೧೧. ನವಗ್ರಹ ಸ್ತೋತ್ರಮಾಲೆ (ಕೀರ್ತನೆ),

ಸೆಪ್ಟಂಬರ್ ೧೯೮೦ ಸಂ॥ ಜಿ.ತಿರುಮಲ, ಪ್ರ: ಶ್ರೀ ಪ್ರಸನ್ನ ಶ್ರೀನಿವಾಸದಾಸರ್ಯರ ಭಕ್ತವೃಂದ ೪೫, ರಾಘವೇಂದ್ರ ಕಾಲೋನಿ, ಮುಖ್ಯರಸ್ತೆ, ಚಾಮುರಾಜಪೇಟೆ, ಬೆಂಗಳೂರು–೧೮, ಪುಟ:೧೦, ಬೆಲೆ:ಉಚಿತ

೧೨. ನಿರ್ಣಯ ರಾಮಾಯಣ (ಕೀರ್ತನೆ)

ಏಪ್ರಿಲ್ ೧೯೯೪ (ಪ್ರ.ಮು) ಸಂ॥ ಜಿ.ತಿರುಮಲ, ಪ್ರ: ಶ್ರೀಪಪ್ರಸನ್ನ ಶ್ರೀನಿವಾಸದಾಸಾರ್ಯರ ಭಕ್ತವೃಂದ, ೪೫, ಚಾಮರಾಜಪೇಟೆ ರಾಘವೇಂದ್ರ ಕಾಲೋನಿ ಮುಖ್ಯ ರಸ್ತೆ, ಬೆಂಗಳೂರು-೧೮, ಪುಟ-೧೦೮, ಬೆಲೆ ರೂ-೧೨.೦೦

೧೩. ಶ್ರೀ ಹರಿ ಪ್ರಾದುರ್ಭಾವಗಳು, (ಕೀರ್ತನೆ)

ಜುಲೈ ೧೯೯೬, ಸಂ॥ ಜಿ. ತಿರುಮಲ, ಪ್ರ:ಶ್ರೀ ಪ್ರಸನ್ನ ಶ್ರೀನಿವಾಸ ದಾಸರ ಭಕ್ತ ವೃಂದ ೪೫, ರಾಘವೇಂದ್ರ ಕಾಲೋನಿ, ಮುಖ್ಯರಸ್ತೆ, ಬೆಂಗಳೂರು-೧೮, ಪುಟ:೨೮೪, ಬೆಲೆ-ರೂ೫೦.೦೦.

೧೪. ಯತಿವರೇಣ್ಯರ ಕೀರ್ತನೆಗಳು (ಕೀರ್ತನೆ)

ಸೆಪ್ಟಂಬರ್ ೨೦೦೧, ಸಂ॥ ಜಿ. ತಿರುಮಲ, ಪ್ರ:ಶ್ರೀ ಪ್ರಸನ್ನ ಶ್ರೀನಿವಾಸ ದಾಸಾರ್ಯರ ಭಕ್ತವೃಂದ, ೪೫, ರಾಘವೇಂದ್ರ ಕಾಲೋನಿ ಮುಖ್ಯ ರಸ್ತೆ, ಚಾಮರಾಜಪೇಟೆ ಬೆಂಗಳೂರು-೧೮, ಪುಟ-೩೨೨, ಬೆಲೆ: ರೂ೧೦೦.೦೦

೧೫. ಶ್ರೀ ರಾಘವೇಂದ್ರ ವಿಲಾಸ ಹಾಗೂ ಸತ್ಯ ಬೋಧಾರ್ಯರು ಕೀರ್ತನೆ

ಮೊ.ಮು ಜೂಲೈ ೧೯೯೨, ಸಂ॥ ಜಿ.ತಿರುಮಲ, ಪ್ರಕಾಶನ: ಮೇಲಿನಂತೆ. ಪುಟ:೬೬, ಬೆಲೆ-೮.೦೦

ಅನುಬಂಧ–೫

ಕೀರ್ತನೆಗಳ ಆಕಾರಾದಿ ಸೂಚಿ

ಕ್ರಮ ಸಂಖ್ಯೆ	ಕೀರ್ತನೆಯ ಮೊದಲಸಾಲು	ಕೀರ್ತನೆ ಸಂಖ್ಯೆ
೬೮.	ಪೂರ್ಣಸುಗುಣಾರ್ಣವನೆ ಅನಘ ಮಯಾರಮಣ	೨೩
೬೯.	ಪ್ರಸನ್ನ ಗೋಪೀವಲ್ಲಭಕೃಷ್ಣಶರಣು	೧೪೪
೭೦.	ಪಾಹಿಶ್ರೀನರಸಿಂಹಪ್ರಿಯ	೯೬
	ಪ–೨	
೭೧.	ಪ್ರೋಚ್ಯಸುಗುಣಾರ್ಣವ ಶ್ರೀಶನಿರ್ದೋಷ	೪೨
೭೨.	ಪೂರ್ಣ ಸುಗುಣಾರ್ಣನೆ ಅನಘಪರಮೇಶ್ವರನೆ	೪೧
೭೩.	ಪ್ರವ್ರಜ್ಯಕುಲಶಿರೋರತ್ನ ಜಯತೀರ್ಥರ	೧೦೧
೭೪.	ಪ್ರಣವಾಷ್ಟದ್ವಾದಶಾಕ್ಷರ ಮನು ಗಾಯತ್ರೀ	೬೨–೪
	ಬ	
೭೫.	ಬಲದ ಅಜಾನುಕರ ಮೊದಲು ಪ್ರದಕ್ಷಿಣದಿ	೪೬
೭೬.	ಬಾಗುವೆ ಶಿರ ಪುರಂದರ ವಿಜಯಗೋಪಾಲ	೧೩೮
೭೭.	ಬಾರೋಎನ್ನ ಮನಕೆ ಗೋಪಾಲಕೃಷ್ಣ	೨೭
೭೮.	ಬಾರೋ ಬಂದಿರೋ ಶ್ರೀಶ ಶ್ರೀಧರಸಮೇತ ಬಂದಿರೊ ಈಶ	೪೫
೭೯.	ಬ್ರಾಹ್ಮಣಸ್ತ್ರೀಯರಲಿ ಭೋಜನವ ನುಂಡೆ	೨೫
೮೦.	ಬಿಸಜನಯನೇ ಇವಗೆ ಒಲಿಯೋ	೧೪೩
	ಭ	
೮೧.	ಭಾಗಣ್ಣ ಗೋಪಾಲದಾಸಾರ್ಯರ ಪಾದಕ್ಕೆ	೧೩೭
೮೨.	ಭಾರತಿ ತವಚರಣಾಂಬುರುಹವ ನಂಬಿದೆ ಪೊರೆ ಎನ್ನ	೭೨
೮೩.	ಭೂಮಾದಿಗುಣನಿಧಿಯೇ ಅನಘ ಮಂಗಳರೂಪ	೧೬
೮೪.	ಭೇಶಸರ್ವೇಶ್ವರ ಶ್ರೀಪತಿಯೇ ಈಭಾವ	೧೫೨
೮೫.	ಭೂವರಾಹ ಭುವನವ ತಂದ ಭೂವರಾಹ	೭

ಶ–೧

ಅನುಬಂಧ-೬

ಸಹಾಯಕ ಸಾಹಿತ್ಯ

೧. ಯಮಕ ಭಾರತ, ತಂತ್ರಸಾರ

ಯತಿ ಪ್ರಣವ ಕಲ್ಪ ಮತ್ತು ಋಗ್ಭಾಷ್ಯ (ವಿವರಣಾತ್ಮಕ ಗ್ರಂಥ)

ಪ್ರಕಟಣೆ ಇಸ್ವಿ-ಇಲ್ಲ; (ಮೊ.ಮು) ಟೀಕಾ ಭಾಷಾಂತರ: ಅಗ್ರಹಾರ ನಾರಾಯಣ ತಂತ್ರಿಗಳು; ಪ್ರಕಾಶನ: ಅಗ್ರಹಾರ ಮುದ್ರಣಾಲಯ, ರಥ ಬೀದಿ, ಉಡುಪಿ, ಪುಟ:೫೭೮, ಬೆಲೆ ರೂ:೨೦೦.೦೦

೨. ಶ್ರೀ ಹರಿಕಥಾಮೃತಸಾರ ಸೌರಭ (ವಿವರಣಾತ್ಮಕ ಗ್ರಂಥ)

(ಮೊ.ಮು) ಏಪ್ರಿಲ್ ೯೪, ಸಂ॥ ದಿವಂಗತ ಡಾ.ಕೆ.ಎಂ. ಕೃಷ್ಣರಾವ್, ಪ್ರಕಾಶನ: ಸಿಂಧುಶಯನ ಪ್ರಕಾಶನ, ೨೯, ಜಯನಗರ ೩ನೇ ಬ್ಲಾಕ್, ೧೨ನೇಮುಖ್ಯ ರಸ್ತೆ, ಬೆಂಗಳೂರು-೧೧, ಪುಟ:೫೭೦, ಬೆಲೆ ರೂ ೨೫೦.೦೦

೩. ಹರಿದಾಸ ಸಾಹಿತ್ಯ ಸಮೀಕ್ಷೆ (ಗದ್ಯ)

(ಎರಡನೇ.ಮು) ೧೯೮೭, ಸಂ॥ ಜಿ. ವರದರಾಜರಾವ್, ಪ್ರಕಾಶನ: ನಿರ್ದೇಶಕರು ಕನ್ನಡ ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು-೬, ಪುಟ-೧೨೮, ಬೆಲೆ ರೂ-೧೦.೦೦

೪. ಶ್ರೀ ಮದ್ವಿಷ್ಣು ಮಹಾಪುರಾಣಂ (ಗದ್ಯ)

ಸಂಪುಟ-೧ (ಮೊ.ಮು) ಅಕ್ಟೋಬರ್ ೧೯೯೪, ಭಾಷಾಂತರ: ಕೀರ್ತಿಶೇಷ ಆಸ್ಥಾನ ವಿದ್ವಾನ್ ಎನ್.ವಿ.ಪದ್ಮನಾಭಾಚಾರ್ಯ, ಮೈಸೂರು-೯, ಪ್ರಕಾಶನ: ಭಾರತೀ ಪ್ರಕಾಶನ, ಸರಸ್ವತಿಪುರಂ ಮೈಸೂರು-೯, ಪುಟ-೩೧೨, ಬೆಲೆ-

೫. ಶ್ರೀ ಮದ್ವಿಷ್ಣು ಮಹಾಪುರಾಣಂ

ಸಂಪುಟ-೩ (ಮೊ.ಮು) ಸೆಪ್ಟಂಬರ್ ೧೯೯೫, ಭಾಷಾಂತರಕಾರರು ಪ್ರಕಾಶಕರು ಮೇಲಿನಂತೆ

೬. ಶ್ರೀ ಯದುಪತಿ ಆಚಾರ್ಯ ಪ್ರಣೀತ ಶ್ರೀ ವ್ಯಾಸಗದ್ಯ (ಮೂಲ ಶ್ಲೋಕ ಹಾಗು ಕನ್ನಡ ವಿವರಣೆ)

ಎರಡನೇ ಮುದ್ರಣ.೧೯೯೧, ಅನುವಾದ:ಪಂಡಿತ ರತ್ನಂ ದೊಡ್ಡಬಳ್ಳಾಪುರ ವಾಸುದೇವಾಚಾರ್ಯರು, ಪ್ರಕಾಶನ: ಡಿವಿಕೆ.ಮೂರ್ತಿ ಕೃಷ್ಣ ಮೂರ್ತಿ ಪುರಂ, ಮೈಸೂರು-೪, ಪುಟ: ೩೦, ಬೆಲೆ ರೂ-೪.೦೦

೭. ಈಶಾವಾಸ್ಯವ್ ಶ್ರೀ ಮದ್ರಾಘವೇಂದ್ರ ತೀರ್ಥರ ಖಂಡಾರ್ಥ ಹಾಗೂ ಕನ್ನಡಾನುವಾದ, ಅನುವಾದ ಸಂ॥ ಟಿ.ಮುರಳೀಧರಾಚಾರ್ಯ, ಪೂರ್ಣ ಪ್ರಮತಿ ಪ್ರಕಾಶನ: ರಾಘವೇಂದ್ರ ಕಾಲೋನಿ, ೫ನೇ ಮೈನ್, ಚಾಮರಾಜಪೇಟೆ, ಬೆಂಗಳೂರು-೧೮, ಪುಟ:೪೦, ಬೆಲೆ ರೂ ೨೫.೦೦.

೮. ಸರ್ವಮೂಲ ಗ್ರಂಥಗಳು- ಸಂಕೀರ್ಣ ಗ್ರಂಥಗಳು (ಕನ್ನಡ ಅನುವಾದ ವಿವರಣೆ ಸಹಿತ)

ನವಂಬರ್ ೧೯೯೮ (ಮೊ.ಮು), ಸಂಪಾದಕ ಮಂಡಳಿ ಪ್ರಕಾಶನ: ಅಖಿಲ ಭಾರತ ಮಾಧ್ವ ಮಹಾಮಂಡಲಿ ಬೆಂಗಳೂರು-೨೮, ಪುಟ ೭೨೫. ಬೆಲೆ ರೂ ೧೨೦.೦೦.

೯. ಉಪನಿಷತ್ ಪ್ರಸ್ಥಾನ - ಎಲ್ಲಾ ವಿವರಗಳೂ ಮೇಲಿನಂತೆ

ದ್ವಿತೀಯ ಮುದ್ರಣ ೧೯೯೭, ಪ್ರಕಾಶನ, ಅಖಿಲ ಭಾರತ ಮಾಧ್ವ ಮಹಾಮಂಡಲಿ, ಬೆಂಗಳೂರು-೨೮, ಪುಟ:೮೭೮, ಬೆಲೆ:ಕೊಟ್ಟಿಲ್ಲ.

೧೧. ಶ್ರೀ ಮನ್ಮಾಹಾಭಾರತ ತಾತ್ಪರ್ಯ ನಿರ್ಣಯ (ಕನ್ನಡ ಟೀಕಾ ಭಾಷಾಂತರ ಸಹಿತ)

ಮೇ ೧೯೯೦(ಮೊ.ಮು), ಅನುವಾದಕರು-ದಿ॥ ಅಗ್ರಹಾರ ನಾರಾಯಣ ತಂತ್ರಿಗಳು, ಪ್ರಕಾಶನ ಅಗ್ರಹಾರ ಮುದ್ರಣಾಲಯ ಉಡುಪಿ, ಭಾಗ-೧ ಪುಟ-೧೫೯, ಭಾಗ೨-ಪು೨೨೯, ಭಾಗ ೩- ಪು ೭೦೨. ಎಲ್ಲಾ ಭಾಗಗಳೂ ಸೇರಿ ಬೆಲೆ ರೂ ೧೫೦/-

೧೨. ಶ್ರೀ ಮದ್ಭಾಗವತ (ಸಾಪ್ತಾಹಿಕ ರೂಪ)

ಸಂಗ್ರಹ: ದಿ॥ ಟಿ.ಕೆ.ವೇಣುಗೋಪಾಲದಾಸರು, ಪ್ರಕಾಶನ ಗುರುರಾಜ ಪ್ರಕಾಶನ, ರಾಮಚಂದ್ರ ಅಗ್ರಹಾರ, ಚಾಮರಾಜಪೇಟೆ, ಬೆಂಗಳೂರು-೧೮, ೧೯೯೨ (ಮೊ.ಮು),ಬೆಲೆ ರೂ ೫೦/-

೧೩. ಶ್ರೀ ಮದ್ಭಾಗವತ (ಮೂಲ ಅನುಸಾರ ಅರ್ಥ ತತ್ವ ವಿವೇಕ ಮತ್ತು ವೈಜ್ಞಾನಿಕ ವಿವರಣೆ)

(ಮೊ.ಮು) ೧೯೯೩, ಸಂ|| ವಿ.ಬಾದರಾಯಣ ಮೂರ್ತಿ, ಪ್ರಕಾಶನ: ಪುರಾಣ ವಿಜ್ಞಾನ ಮಂದಿರ, ಶ್ರೀಪಾದರಾಜರ ಮಠ, ರಾಘವೇಂದ್ರ ಕಾಲೋನಿ ಬೆಂಗಳೂರು-೧೮, ಪು ೨೬೫, ಬೆಲೆ ರೂ ೬೫-೦೦

೧೪. ಕನ್ನಡ ಸಾಹಿತ್ಯದಲ್ಲಿ ಪುರಾಣ ಪ್ರಜ್ಞೆ (ಗದ್ಯ)

(ಮೊ.ಮು) ೧೯೮೭, ಸಂ|| ಕೆ.ಎಲ್.ಗೋಪಾಲಕೃಷ್ಣಯ್ಯ. ಪ್ರಕಾಶನ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ ಬಂಗಳೂರು-೧೮, ಪುಟ ೭೨೪, ಬೆಲೆ ರೂ ೪೦/-

೧೫. ತೀರ್ಥ ಪದಾರ್ಥ (ಮೂಲ, ಪ್ರತಿಪದಾರ್ಥ ಮತ್ತು ವಿವರಣೆ)

(ಮೊ.ಮು) ೧೯೯೧, ಅನುವಾದಕರು: ವ್ಯಾಸನಕೆರೆ ಪ್ರಭಂಜನಾಚಾರ್ಯರು ಪ್ರಕಾಶನ: ಐತರೇಯ ಪ್ರಕಾಶನ, ವ್ಯಾಸನಕೆರೆ, ಬನಶಂಕರಿ ಮೊದಲ ಹಂತ ಬೆಂಗಳೂರು-೫೦, ಪುಟ ೨೭೨, ಬೆಲೆ ರೂ೫೦/-

೧೬. ಕ್ಷೇತ್ರದರ್ಶನ, (ಗದ್ಯ), ಸಂ||ಆರ್.ಎಚ್.ಕುಲಕರ್ಣಿ ಭಾಗ೧ ಮತ್ತು ೨

ಪ|| ಸಾಹಿತ್ಯ ಸದನ, ಎಂ.ಎಸ್.ಕೆ.ಮಿಲ್ ರೋಡ್, ಗುಲ್ಬರ್ಗಾ-೨, ಪುಟ:೪೯೪, ಬೆಲೆ ರೂ ೨೫/-

೧೭. ಉಪನಿಷತ್ ಭಾವಧಾರೆ (ಗದ್ಯ)

(ನಾಲ್ಕನೆಯ ಮುದ್ರಣ ೧೯೮೯), ಸಂ||ಸೋಮನಾಥಾನಂದ, ಪ್ರಕಾಶನ: ಅಧ್ಯಕ್ಷರು ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ ಮೈಸೂರು-೨೦, ಪುಟ: ೭೫೪, ಬೆಲೆ: ನಮೂದಿಸಿಲ್ಲ.

೧೮ ಬ್ರಹ್ಮ ಸೂತ್ರಗಳು (ಶಾರೀರಕ ಮೀಮಾಂಸೆ)

(೩ನೇ ಮುದ್ರಣ ೧೯೮೫) ಸಂ|| ಸ್ವಾಮಿ ಆದಿದೇವಾನಂದ, ಪ್ರಕಾಶನ: ಮೇಲಿನಂತೆ, ಪುಟ:೮೩೪, ಬೆಲೆ ರೂ೬೦/-

೧೯ ಶ್ರೀ ಪದ್ಮ ಪುರಾಣ (ಗದ್ಯ)-ಸಂಪುಟ ೧,೫,೬

(ಮೂರನೇ ಮುದ್ರಣ ೧೯೮೫) ಅನುವಾದ: ಪಂಡರಿ ನಾಥಾಚಾರ್ಯ ಗಲಗಲಿ ಇವರು ಪ್ರಕಾಶನ: ಪಂಡರೀ ನಾಥಾಚಾರ್ಯ ಗಲಗಲಿ, ಶಾಂತಿ ಕಾಲೋನಿ, ಹುಬ್ಬಳ್ಳಿ ಸಂಪುಟ೧-೩೦೨ಪುಟ, ಸಂಪುಟ೫-೪೦೦/ ಪುಟ, ಸಂಪುಟ ೬-೪೦೮ಪುಟ, ಪ್ರತಿ ಸಂಪುಟದ ಬೆಲೆ ರೂ ೪೦/-

೨೦. ಬ್ರಹ್ಮ ಪುರಾಣ (ಗದ್ಯ)

೩ನೇ ಮುದ್ರಣ – ೧೯೯೫, ಅನುವಾದಕರು: ಪಂಡರೀ ನಾಥಾಚಾರ್ಯ ಗಲಗಲಿ ಪ್ರಕಾಶನ: ಪಂಡರೀನಾಥಾಚಾರ್ಯ ಗಲಗಲಿ ಶಾಂತಿಕಾಲನಿ, ರಾಘವೇಂದ್ರ ಸ್ವಾಮಿ ಮಠ ಹುಬ್ಬಳ್ಳಿ – ೩.೨. ಪುಟಗಳು – ೩೮೪, ಬೆಲೆ ರೂ ೪೦/–

೨೧. ಶ್ರೀ ವಾದಿರಾಜರು (ಜೀವನ ಚರಿತ್ರೆ)

ಮೊ.ಮು ೧೯೮೦, ಲೇ॥ಕೊರಟಿ ಶ್ರೀನಿವಾಸರಾವು, ಪ್ರಕಾಶನ, ಆನಂದ ನಿಲಯ ಪ್ರಕಾಶನ, ಸಮೀರಪುರ, ಚಾಮರಾಜಪೇಟೆ ಬೆಂಗಳೂರು–೧೮, ಪುಟ ೪೫೪, ಬೆಲೆ ರೂ ೧೫/–

೨೨. ಶ್ರೀವ್ಯಾಸರಾಯರು (ಜೀವನ ಚರಿತ್ರೆ)

ಮೊಮು.೧೯೭೭, ಲೇ॥ ಕೊರಟ ಶ್ರೀನಿವಾಸರಾವು, ಪ್ರಕಾಶನ ಮೇಲಿನಂತೆ, ಪುಟ ೪೫೦, ಬೆಲೆ ರೂ ೧೫/–

೨೩. ಇಭರಾಮಪುರದ ಶ್ರೀ ಅಪ್ಪಾವರು (ಜೀವನ ಚರಿತ್ರೆ)

ಮೊ.ಮು. ೧೯೯೫, ಸಂ॥ ಜಯಸಿಂಹ, ಪ್ರಕಾಶನ: ಪರಿಮಳ ಪ್ರಕಾಶನ, ಬನಶಂಕರಿ ಮೊದಲ ಹಂತ, ೨ನೇ ಬ್ಲಾಕ್ ಬೆಂಗಳೂರು–೫೦ ಪುಟ:೧೬೦, ಬೆಲೆ ೨೫/–

೨೪. ವೇಣಿ ಸೋಮಪುರದ ತಪಸ್ವಿ ಶ್ರೀ ವ್ಯಾಸತತ್ವಜ್ಞರು (ಜೀವನ ಚರಿತ್ರೆ)

(ಮೊ.ಮು) ೧೯೯೭, ಟೇ॥ ಜಯಸಿಂಹ, ಪ್ರಕಾಶನ ಮೇಲಿನಂತೆ, ಪುಟ ೨೧೨, ಬೆಲೆ ರೂ ೪೦/–

೨೫. ಸೃಷ್ಟಿ ಪ್ರಕರಣ– ಸಂಪಾದನೆ ಹಾಗೂ ಪ್ರಕಾಶನ ತಿರುಮಲೆ–ತಿರುಪತಿ ದೇವಸ್ಥಾನಗಳು ತಿರುಪತಿ, ಮೊ.ಮು ೧೯೮೪, ಪುಟ:೩೨೬, ಟಿ.ಟಿ.ಡಿ. ಕ್ರಮಸಂಖ್ಯೆ ೧೯೬, ಬೆಲೆ ರೂ ೧೨.೫೦

೨೬. ಶ್ರೀಜಯತೀರ್ಥರು (ಜೀವನ ಹಾಗೂ ಕೃತಿಗಳ ಪರಿಚಯ)

ಮೊ.ಮು ೧೯೯೨, ಸಂ॥ ನವರತ್ನ ನಾರಾಯಣ ಮೂರ್ತಿ, ಶ್ರೀಸತ್ಯಧರ್ಮ ಸೇವಾವೃಂದ ರಂಗರಾವುರಸ್ತೆ, ಶಂಕರಪುರ, ಬೆಂಗಳೂರು–೪, ಪುಟ ೩೩, ಬೆಲೆ ೫/–

೨೮. ಶ್ರೀ ವಿದ್ಯಾಧೀಶ ತೀರ್ಥರು, ವಿಷ್ಣು ತೀರ್ಥರು, ಸತ್ಯಧರ್ಮತೀರ್ಥರು ಶ್ರೀ ರಘೂತ್ತಮ ತೀರ್ಥರು, ಶ್ರೀ ಬ್ರಹ್ಮಣ್ಯ ತೀರ್ಥರು, ಶ್ರೀ ಗುರು ಚರಿತಾಮೃತ, ಶ್ರೀ ಶ್ರೀಪಾದರಾಜರು– ಈ ಎಲ್ಲಾ ಪುಸ್ತಕಗಳ ಸಂ॥ ನವರತ್ನ ನಾರಾಯಣ ಮೂರ್ತಿ: ಪ್ರಕಾಶನ: ಶ್ರೀ ಸತ್ಯಧರ್ಮ ತೀರ್ಥ ಸೇವಾವೃಂದ, ರಂಗರಾವು ರಸ್ತೆ; ಶಂಕರಪುರ ಬೆಂಗಳೂರು–೬ ಎಲ್ಲಾ ಗ್ರಂಥಗಳು ಸುಮಾರು ೨೦ ಪುಟದಷ್ಟಿದೆ. ಪ್ರತಿ ಪುಸ್ತಕದ ಬೆಲೆ ೨.೦೦ ರಿಂದ ರೂ ೬.೦೦ ರ ವರೆಗೆ.

೨೯ ಪುರಾಣ ನಾಮ ಚೂಡಾಮಣಿ, ತೀ॥ ಬೆನಗಲ್ ರಾಮರಾವು ಮತ್ತು ಪಾನ್ಯಂ ಸುಂದರಶಾಸ್ತ್ರಿ

ಮೂರನೇ ಮುದ್ರಣ ೧೯೭೭, ಪ್ರಕಾಶನ: ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆ–೧೫, ಮೈಸೂರು, ಪುಟ–೬೪೭, ಬೆಲೆ ರೂ ೨೦/– (ಈ ಗ್ರಂಥದ ಹೊಸ ಮುದ್ರಣವೂ ಈಗ ಲಭ್ಯವಿದೆ.)

೩೦. ಪುರಾಣ – ಭಾರತ ಕೋಶ

೩ನೇ ಮುದ್ರಣ ೧೯೯೭, ಸಂ॥ ಯಜ್ಞನಾರಾಯಣ ಉಡುಪ; ಪ್ರಕಾಶನ ಕನ್ನಡ ಪುಸ್ತಕ ಪ್ರಾಧಿಕಾರ, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ ಬೆಂಗಳೂರು–೧೮, ಪುಟಗಳು ೭೬೮, ಬೆಲೆ ೭೫/–

೩೧. ಮಾಧ್ವನಿಘಂಟು

(ಮೊ.ಮು ೧೯೯೫), ತಿ॥ ಟಿ.ಕೆ.ವೇಣುಗೋಪಾಲದಾಸರು, ಪ್ರಕಾಶನ: ಗುರುರಾಜ ಪ್ರಕಾಶನ, ರಾಮಚಂದ್ರ ಅಗ್ರಹಾರ, ಚಾಮರಾಜ ಪೇಟೆ – ಬೆಂಗಳೂರು–೧೮, ಪುಟ: ೪೯೬, ಬೆಲೆ ೧೨೫/–

೩೨. ಸಂಕ್ಷಿಪ್ತ ಕನ್ನಡ ನಿಘಂಟು

೩ನೇ ಪರಿಷ್ಕೃತ ಮುದ್ರಣ ೨೦೦೧, ಪ್ರಕಾಶನ, ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು–೧೮, ಪುಟಗಳು ೧೪೫೪, ಬೆಲೆ ರೂ ೧೦೦/–

೩೩. ಶಬ್ದಾರ್ಥ ಕೌಸ್ತುಭ (ಸಂಸ್ಕೃತ–ಕನ್ನಡ ಶಬ್ದಕೋಶ) ೬ ಸಂಪುಟಗಳು

೨ನೇ ಮುದ್ರಣ ೧೯೯೯, ಗ್ರಂಥ ಕರ್ತ: ಶ್ರೀ ಚಕ್ರವರ್ತಿ ಶ್ರೀನಿವಾಸ ಗೋಪಾಲದಾಸಾರ್ಯ, ಎಲ್ಲಾ ಸಂಪುಟಗಳು ಸುಮಾರು ೫೦೦ ಪುಟಗಳಷ್ಟಿವೆ. ಎಲ್ಲಾ ೬ ಸಂಪುಟಗಳ ಒಟ್ಟು ಬೆಲೆ ರೂ ೧೦೦೦/–

೩೪. ದಾಸ ತತ್ತ್ವ ಪ್ರಕಾಶಕ (ಭಜನೆ ಕುಸುಮ-೧)

ಮೊ.ಮು ಡಿಸಂಬರ್ ೧೯೯೫. ಸಂ॥ ಅಪ್ಪಣಾಚಾರ್ಯ. ಪ್ರಕಾಶನ

೩೫. ಶ್ರೀ ಮದಾನಂದತೀರ್ಥರವರ ಸಾಕ್ಷಾತ್ ಶಿಷ್ಯರಲ್ಲಿ ನಾಲ್ವರು (ಗದ್ಯ)

ಮೊ.ಮು ಅಕ್ಟೋಬರ್ ೧೯೫೯, ಸಂ॥ ಚಿಕ್ಕೆರೂರು ಗೋವಿಂದಾಚಾರ್ಯರು, ಪ್ರಕಾಶನ: ಶ್ರೀಹರಿದಾಸ ಭಾರತೀ ಗ್ರಂಥ ರತ್ನ ಮಾಲೆ - ವಿಜಯಾಂಕ ೭ ಚಾಮರಾಜಪೇಟೆ - ರಾಘವೇಂದ್ರಕಾಲೋನಿ ಬೆಂಗಳೂರು-೧೮ ಪ್ರಕಾಶಕ: ಹರಿದಾಸ ರತ್ನಂ ಗೋಪಾಲದಾಸರು ಪುಟ ೫೦, ಬೆಲೆ ೩೭ ಪೈಸೆಗಳು.

೩೬ ಶ್ರೀ ವೇದವ್ಯಾಸರು (ಗದ್ಯ)

ಮೊ.ಮು ಮಾರ್ಚ್ ೧೯೯೩, ಲೇಖಕರು: ಮೊಖಾಸಿ ಮಧ್ವಾಚಾರ್ಯರು, ಪ್ರಕಾಶಕರು: ಶ್ರೀ ಸರ್ವಜ್ಞ ಚಾರ್ಯ ಸೇವಾ ಸಂಘ, ದಾವಣಗೆರೆ ಪುಟ ೨೪, ಬೆಲೆ ರೂ ೩/-

೩೭. ಶ್ರೀ ಪಾದರಾಜರ ಚರಿತ್ರೆ (ಗದ್ಯ)

ಎರಡನೇ ಮುದ್ರಣ ೧೯೬೧, ಸಂ॥ ಶ್ರೀನಿವಾಸದಾಸ, ದಾವಣಗೇರಿ ಪ್ರಕಾಶಕರು: ಶ್ರೀನಿವಾಸದಾಸ, ದಾವಣಗೇರಿ, ಪು ೬೬, ಬೆಲೆ ರೂ ೧/-

೩೮. ಪುರುಷಸೂಕ್ತ (ಅನುವಾದ ಮತ್ತು ವಿವರಣೆ)

ಮೊ.ಮು ೧೯೮೯, ಅನುವಾದ: ಡಾ॥ ಎನ್ ಎಸ್ ಅನಂತರಂಗಾಚಾರ್ಯ; ಪ್ರಕಾಶನ: ನವಯುಗ ಪ್ರಕಾಶನ, ರಾಜಾಜಿನಗರ ೧೮ನೇಕ್ರಾಸ್, ೧ನೇ ಬ್ಲಾಕ್ ಬೆಂಗಳೂರು ಪುಟ: ೪೮, ಬೆಲೆ ೬/-

೩೯. ಪ್ರಸಾದಯೋಗ (ಶ್ರೀ ಪುರಂದರದಾಸರ ಜೀವನ ಮತ್ತು ಕೃತಿಗಳು)

ಮೊ.ಮು ೧೯೭೨, ಲೇ॥ಡಾ.ವ.ಅ. ದಿವಾಣಜಿ (ಪಿ.ಎಚ್.ಡಿ.ಪದವಿ ಪಡೆದ ಮಹಾನ್ಯಾಸ ಕೃತಿ ಇದಾಗಿದೆ) ಪ್ರಕಾಶನ: ಉಷಾಸಾಹಿತ್ಯ ಮಾಲೆ, ಮೈಸೂರು -೧

೪೦. ಶ್ರೀ ಸತ್ಯಧರ್ಮ ತೀರ್ಥರು (ಚರಿತ್ರೆ)

ಮೊ.ಮು ೧೯೮೬ ತಿ॥ ನವರತ್ನ ನಾರಾಯಣ ಮೂರ್ತಿ, ಪ್ರಕಾಶನ: ಸುಬೋಧ ಮುದ್ರಣಾಲಯ, ಚಾಮರಾಜಪೇಟೆ, ಬೆಂಗಳೂರು-೧೮. ಪುಟ: ೨೦, ಬೆಲೆ ೨/-

೪೧. ಶ್ರೀ ವತ್ಸನಿಘಂಟು.

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ
ಹರಿದಾಸ ಸಾಹಿತ್ಯ ಒಂದು ಪ್ರಮುಖ ಮಜಲು.
ಹರಿದಾಸರು ರಚಿಸಿರುವ ವಿಪುಲ ಕೀರ್ತನೆಗಳು
ಕರ್ನಾಟಕ ಸಾಂಸ್ಕೃತಿಕ ತವನಿಧಿಗಳಾಗಿವೆ.
ದಾಸ ಸಾಹಿತ್ಯದಲ್ಲಿ ಕಂಡುಬರುವ
ಭಾಷಿಕ ಹಾಗೂ ಸಾಹಿತ್ಯಕ ಸೊಬಗು,
ಆಧ್ಯಾತ್ಮಿಕ ಬೆಡಗು, ಸಂಗೀತದ ಮೆರುಗು ಅನನ್ಯ.
ದಾಸ ಸಾಹಿತ್ಯವು ಜ್ಞಾನ, ಮನೋಲ್ಲಾಸ
ಮತ್ತು ಜೀವ ಸಂಸ್ಕಾರಗಳ ತ್ರಿವೇಣಿ ಸಂಗಮ.
ಇಂಥ ದಾಸ ಸಾಹಿತ್ಯವನ್ನು
ಸಮಗ್ರವಾಗಿ ಸಂಗ್ರಹಿಸಿ, ಸಂಪಾದಿಸಿ,
ಬಹುಮಾಧ್ಯಮದಲ್ಲಿ ಹಾಗೂ ಸುಲಭ ಬೆಲೆಯಲ್ಲಿ
ಕನ್ನಡ ಜನತೆಗೆ ನೀಡುವ ಮಹತ್ವದ ಆಶಯವೇ
ಸಮಗ್ರ ದಾಸ ಸಾಹಿತ್ಯ ಯೋಜನೆ

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು